GOVERNMENT
MYSORE.
ORIENTAL LIBRARY

ವಿದ್ಯಾದಾಯಿನಿ.

ಭಾಗ ೫.] ಜನವರಿ. ೧೯೧೩. [ಸಂಚಿಕೆ ೧.

ಸ್ವವಿಷಯ.

ಈ ಸಂಚಿಕೆಯಿಂದ ಮೂರು ಅರ್ಧ ಫಾರವಿನಂತೆ ವಿದ್ಯಾದಾಯಿನಿಯು ಹೆಚ್ಚಿಸಲ್ಪಟ್ಟಿದೆ. ಇದಕ್ಕೆ ಮುಂಚೆ ಮೂರುಫಾರಮಗಳು ಇದ್ದುದರಿಂದ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ವಿಷಯಗಳನ್ನುಕುರಿತು ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ರು ಬರೆಯುತ್ತಿದ್ದ ಲೇಖನಗಳನ್ನು ಸಂಕ್ಷೇಪಮಾಡದೆ ಛಾಪಿಸಲು ಅವಕಾಶವಿರಲಿಲ್ಲ. ಇದರಿಂದ ಲೇಖಕರ ಉತ್ಸಾಹಕ್ಕೆ ಭಂಗವು ನಮ್ಮ ಮನಸ್ಸಿಗೆ ಖೇದವು ಆಗುತ್ತಿತ್ತು. ಈಗ ಪುಟಗಳನ್ನು ಹೆಚ್ಚಿಸಿದ್ದರಿಂದ ಬರುವ ಲೇಖನಗಳನ್ನು ಸೂಕ್ತವರಿತು ಪ್ರಚುರಪಡಿಸಲು ಅನುಕೂಲವಾಗಿದೆ ವಿದ್ಯಾಭ್ಯಾಸದ ಇಲಾಖೆಯ ಉಪಾಧ್ಯಾಯರು, ನಿದ್ಯಾರ್ಥಿಗಳು ಮತ್ತು ಇತರರು ಮೊದಲಿನಂತೆ ನಮಗೆ ಸಹಾಯಮಾಡುವರೆಂದು ನಂಬುತ್ತೇವೆ. ಇನ್ನುಮೇಲೆ ವಿದ್ಯಾವಿಷಯಗಳನ್ನು ಚರ್ಚಿಸುವದಕ್ಕೂ ಅವಕಾಶವುಟಾಗಿದೆ ಮತ್ತು ತಿಳಿಯಬೇಕಾದ ಅಂಶಗಳ ವಿಷಯದಲ್ಲಿ ಪ್ರಶ್ನೆಮಾಡಿದಲ್ಲಿ ಕೂಡಿದಮಟ್ಟಿಗೆ ಉತ್ತರಗಳನ್ನು ಬರೆಯುವೆವು. ವಾರ್ಷಿಕ ಚಂದಾವನ್ನು ಹೆಚ್ಚಿಸದೆ ಮೊದಲಿನಂತೆಯೇ ಇಟ್ಟಿದೆ.

ಎಡಿಟರವರ ನೋಟ್ಸ್.

ಕನ್ನಡಭಾಷೆಯನ್ನು ಬರೆಯುವುದರಲ್ಲಿರುವ ಅವ್ಯವಸ್ಥೆಯನ್ನು ನೋಡಿಕೊಂಡದಮಟ್ಟಿಗೂ ಸರ್ವಸಮ್ಮತವಾಗಿರುವ ಶಬ್ದರೂಪಗಳನ್ನು ಗೊತ್ತುಮಾಡುವುದಕ್ಕಾಗಿ ಕೆಲವುವರ್ಷಗಳಿಗೆ ಮುಂಚೆ ಸರ್ಕಾರದವರು ಒಂದು ಕಮಿಟಿಯನ್ನು ಏರ್ಪಡಿಸಿದರಷ್ಟೆ. ಸರ್ಕಾರದವರು ತಾವು ಅಚ್ಚುಹಾಕಿಸುವುದರಲ್ಲೆಲ್ಲ ಆ ಕಮಿಟಿಯವರು ಮಾಡಿದ ವ್ಯವಸ್ಥೆ

ಯನ್ನನುಸರಿಸುವರೆಂದು ನಾವು ಆಗ್ಗೆ ಯೋಚಿಸಿದ್ದೆವು. ಒಂದುವೇಳೆ ಇತರ ಇಲಾಖೆಗಳಲ್ಲಿ ಹಾಗೆಮಾಡುವುದು ಸದ್ಯದಲ್ಲಿ ಸಾಧ್ಯವೆಲ್ಲದಿದ್ದರೂ ವಿದ್ಯಾಭ್ಯಾಸದ ಇಲಾಖೆಯಲ್ಲಾದರೂ ಕಮಿಟಿಯವರ ನಿರ್ಣಯಕ್ಕನುಗುಣವಾಗಿರಬೇಕಾದುದು ಅವಶ್ಯಕ. ಕಳೆದ ಡಿಶಂಬರ್ತಿಂಗಳ ದೇಶೀಯ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳಲ್ಲಿ ಕನ್ನಡಶಬ್ದರೂಪಗಳೂ ಎಂದಿನಂತೆ ಅವ್ಯವಸ್ಥಿತನಾಗಿರುವದನ್ನು ನೋಡಿ ವಿದ್ಯಾಭ್ಯಾಸದ ಇಲಾಖೆಯಲ್ಲೂ ಇದು ಸಂಪೂರ್ಣವಾಗಿ ನಡೆಯುವಂತಿಲ್ಲವೆಂದು ಹೇಳಬೇಕಾಗಿದೆ. ಕಮಿಟಿಯವರಿಂದ ನಿಷ್ಕೃಷ್ಟವಾದ ಶಬ್ದರೂಪಗಳನ್ನೇ ಇತಃಪರಃ ಎಲ್ಲರೂ ಉಪಯೋಗಿಸುವಂತೆ ಮಾಡುವುದೇನೋ ಅಸಾಧ್ಯ. ಆದುದರಿಂದ ಬರೆಯುವುದರಲ್ಲಿ ವ್ಯವಸ್ಥೆಯು ಕ್ರಮೇಣ ಆಗುತ ಬರಬೇಕು. ಇದಕ್ಕಾಗಿ ಇನ್ನೂ ವಿದ್ಯಾಭ್ಯಾಸ ಮಾಡುತಿರುವ ಬಾಲಕರಿಗೆ ಸಾಧುವಾದ ರೂಪಗಳನ್ನೇ ವಿಶೇಷವಾಗಿ ಪರಿಚಿತಗಳನ್ನಾಗಿ ಮಾಡಿಸಬೇಕು. ಅಂಥವರು ಪ್ರಮಾಣವನ್ನಾಗಿ ಎಣಿಸುವ ಪ್ರಶ್ನಪತ್ರಿಕೆ, ಪಾಠಪುಸ್ತಕಮುಂತಾದವುಗಳಲ್ಲಿ ಒಂದೇ ಕ್ರಮವನ್ನನುಸರಿಸಿ ಪದಗಳನ್ನು ಬರೆಯುವುದರಿಂದ ಇದು ನೆರವೇರುವುದು. ಕನ್ನಡ ಭಾಷೆಯುಲ್ಲಿ ಪಕ್ಷಪಾತಿಗಳಾಗಿರುವ ಉಪಾಧ್ಯಾಯರೆಲ್ಲರೂ ಇದನ್ನು ಯೋಚಿಸಿ ನಡೆದುಕೊಂಡರೆ ಬರೆಯುವುದು ಬಹಳಮಟ್ಟಿಗೆ ಶೀಘ್ರದಲ್ಲೇ ವ್ಯವಸ್ಥಿತವಾಗುವದೆಂಬುದರಲ್ಲಿ ಸಂಶಯವಿಲ್ಲ.

***

ದಕ್ಷಿಣದೇಶದಲ್ಲಿ ಬಾಲವಿದ್ಯಾಭ್ಯಾಸವು ಸರಿಯಾಗಿ ನಡೆಯುದಿರುವುದಕ್ಕೆ ಕಾರಣಗಳನ್ನು ಗೊತ್ತುಮಾಡಿ ತಕ್ಕ ಪ್ರತೀಕಾರವನ್ನು ಯೋಚಿಸುವುದಕ್ಕಾಗಿ ಮದರಾಸ್ ಪಟ್ಟಣದಲ್ಲಿ ಕಳೆದತಿಂಗಳ ಅತ್ಯಂಭಾಗದಲ್ಲಿ ಒಂದು ಸಭೆ ಸೇರಿತ್ತು. ದಕ್ಷಿಣದೇಶದಲ್ಲಿರುವ ವಿದ್ಯಾಪಕ್ಷಪಾತಿಗಳಲ್ಲನೇಕರು ಅಲ್ಲಿಗೆ ಹೋಗಿದ್ದರು. ನಮ್ಮ ಮೈಸೂರು ದೇಶದಿಂದ ಇ| ಜ| ರಾದ ಮೆ। ಭಾಭಾಸಾ। ರು ದಯಮಾಡಿಸಿದ್ದರು. ಸಭೆಯು ನಡೆವ ದಿವಸಗಳಲ್ಲೊಂದಾವೃತ್ತಿ ಇವರು ಅಗಾ್ರಸನವನ್ನಲಂಕರಿಸಿದ್ದರು. ಚರ್ಚೆಯಾದ ಅಂಶಗಳನ್ನೆಲ್ಲ ಸಭೆಯವರು ತಮ್ಮ ಅಭಿಪಾ್ರಯದೊಡನೆ ಮದರಾಸ್ ದೇಶದ ವಿದ್ಯಾಭ್ಯಾಸದ ಇಲಾಖೆ ಡೈರೆಕ್ಟರವರಿಗೆ ತಿಳಿಸಿದಾರೆ. ದಕ್ಷಿಣದೇಶದಲ್ಲಿ ಇಂಥ ಸಭೆ ನಡೆದುದು ಇದೇಮೊದಲು. ವಿದ್ಯಾಭ್ಯಾಸಕ್ರಮವು ಶೀಘ್ರದಲ್ಲೇ ಒಳ್ಳೆಸ್ಥಿಗೆ ಬರುವುದೆಂಬುದಕ್ಕೆ ಇವೆಲ್ಲ ಸೂಚಕಗಳು.

ಆಯಾ ದೇಶಭಾಷೆಗಳನ್ನು ಸ್ವಲ್ಪಮಟ್ಟಿಗಾದರೂ ಅಭ್ಯಾಸಮಾಡಿಸದೆ ಚಿಕ್ಕಂದಿನಲ್ಲೇ ಬಾಲಕರಿಗೆ ಇಂಗ್ಲೀಷುಭಾಷೆಯನ್ನು ಪಾಠ ಹೇಳುವುದು ಸುತರಾಂ ಸರಿಯಲ್ಲವೆಂಬ ವಿಷಯವಾಗಿ ಮೈ। ಭಾಭಾಸಾ। ರು ಒಂದು ಉಪನ್ಯಾಸವನ್ನು ಆ ಸಭೆಗಾಗಿ ಬರೆದಿದ್ದರು. ಅಲ್ಲಿಗೆ ಬಂದಿದ್ದವರೆಲ್ಲರೂ ಈ ಅಭಿಪ್ರಾಯಕ್ಕೆ ಅನುಮತಿ ಕೊಟ್ಟರು. ಮೈಸೂರುದೇಶದಲ್ಲಿ ಈ ನೂತನವಾದ ಪದ್ಧತಿಯನ್ನನುಸರಿಸಿ ಕೆಲವು ವರ್ಷಗಳಿಂದ ವಿದ್ಯಾಭ್ಯಾಸವು ನಡೆಯುತಿದೆ. ಇನ್ನೂ ಕೆಲವು ವರ್ಷಗಳನಂತರ ಇದರಿಂದಾಗುವ ದೇಶಭಾಷಾಭಿವೃದ್ಧಿಯೇ ಮೊದಲಾದ ಪ್ರಯೋಜನಗಳು ಎಲ್ಲರಿಗೂ ಚೆನ್ನಾಗಿ ಗೊತ್ತಾಗುವುವು.

***

ಹಳ್ಳಿಸ್ಕೂಲುಗಳ ಉಪಾಧ್ಯಾಯರಿಗೀಗ ಕೊಡುತಿರುವ ಸಂಬಳವು ಬಹಳ ಕಡಮೆಯೆಂಬ ವಿಷಯವೂ ಆ ಸಭೆಯಲ್ಲಿ ಚರ್ಚೆಯಾಯಿತು. ಇದು ನಿಶ್ಚಯವೆಂದು ಎಲ್ಲರೂ ಹೇಳಿದರು; ಮತ್ತು ಅಂಥವರ ಸಂಬಳವನ್ನು ಕೂಡಿದಮಟ್ಟಿಗೂ ಶೀಘ್ರವಾಗಿ ಹೆಚ್ಚಿಸಬೇಕಾದುದು ಅತ್ಯಾವಶ್ಯಕವೆಂದೂ ಅಭಿಪ್ರಾಯಪಟ್ಟರು. ಬಾಲವಿದ್ಯಾಭ್ಯಾಸವು ಸರಿಯಾಗಿ ನಡೆಯುದಿರುವುದಕ್ಕೆ ಇದು ಎಷ್ಟು ದೊಡ್ಡ ಕಾರಣವೆಂಬುದನ್ನು ನಾವು ಈ ಪತ್ರಿಕೆಯಲ್ಲಿ ಎರಡುಮೂರುಸಲ ತಿಳಿಸಿದ್ದೇವೆ. ಮಕ್ಕಳಿಗೆ ಪಾಠ ಹೇಳುವರು ವಿಶೇಷವಾದ ಯೋಗ್ಯತೆಯುಳ್ಳವರಾಗಿರಬೇಕು. ಸಂಬಳವು ಇಷ್ಟು ಕಡಮೆಯಾದರೆ ಅಂಥವರು ಸಿಕ್ಕುವುದು ಹೇಗೆ?

ಪಾಠಕ್ರಮ.

ವ್ಯವಕಲನ.

ಮಕ್ಕಳಿಗೆ ಈ ವಿಷಯವನ್ನು ಸರಿಯಾಗಿ ಬೋಧಿಸುವುದಕ್ಕೆ ಯತ್ನಿಸಿರುವರೆಲ್ಲರಿಗೂ ಗಣಿತದ ಈ ಭಾಗವು ಎಷ್ಟು ಕಷ್ಟವೆಂಬುದು ತಿಳಿದಿರುವುದು. ಆದುದರಿಂದ ಇದನ್ನು ಕಾರಣಪುರಸ್ಸರವಾಗಿ ಬೋಧಿಸತಕ್ಕ ಕ್ರಮವನ್ನು ಇಲ್ಲಿ ವಿವರಿಸುವೆವು. ವ್ಯವಕಲನವನ್ನು ಬೋಧಿಸುವುದಕ್ಕೆ ಮುಂಚಿತವಾಗಿ ಹುಡುಗರಿಗೆ 9ರಲ್ಲಿ 2ಕಳೆದರೆ 7, 5ರಲ್ಲಿ 1ಕಳೆದರೆ 4, ಇಂಥ ಲೆಕ್ಕಗಳು ತಿಳಿದಿರಬೇಕು. ಸರಿಯಾದ ಕ್ರಮದಲ್ಲಿ ಅಂಕ

ಯನ್ನನುಸರಿಸುವರೆಂದು ನಾವು ಆಗ್ಗೆ ಯೋಚಿಸಿದ್ದೆವು. ಒಂದುವೇಳೆ ಇತರ ಇಲಾಖೆ
ಳಲ್ಲಿ ಹಾಗೆಮಾಡುವುದು ಸದ್ಯದಲ್ಲಿ ಸಾಧ್ಯವಲ್ಲದಿದ್ದರೂ ವಿದ್ಯಾಭ್ಯಾಸದ ಇಲಾಖೆಯಲಾ
ದರೂ ಕಮಿಟಿಯವರ ನಿರ್ಣಯಕ್ಕನುಗುಣವಾಗಿರಬೇಕಾದುದು ಅವಶ್ಯಕ. ಕಳೆದಡಿಸೆ
ಬರ್ ತಿಂಗಳ ದೇಶೀಯ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳಲ್ಲಿ ಕನ್ನಡಶಬ್ದರೂಪಗಳು
ಎಂದಿನಂತೆ ಅವ್ಯವಸ್ಥಿತವಾಗಿರುವದನ್ನು ನೋಡಿ ವಿದ್ಯಾಭ್ಯಾಸದ ಇಲಾಖೆಯಲ್ಲು
ಇದು ಸಂಪೂರ್ಣವಾಗಿ ನಡೆಯುವಂತಿಲ್ಲವೆಂದು ಹೇಳಬೇಕಾಗಿದೆ. ಕಮಿಟಿಯವರಿಂ
ನಿಷ್ಕೃಷ್ಟವಾದ ಶಬ್ದರೂಪಗಳನ್ನೇ ಇತಃಪರಃ ಎಲ್ಲರೂ ಉಪಯೋಗಿಸುವಂತೆ ಮಾಡ
ವುದೇನೋ ಅಸಾಧ್ಯ. ಆದುದರಿಂದ ಬರೆಯುವುದರಲ್ಲಿ ವ್ಯವಸ್ಥೆಯು ಕ್ರಮೇಣ ಆಗು
ಬರಬೇಕು. ಇದಕ್ಕಾಗಿ ಇನ್ನೂ ವಿದ್ಯಾಭ್ಯಾಸ ಮಾಡುತಿರುವ ಬಾಲಕರಿಗೆ ಸಾಧುವಾ
ರೂಪಗಳನ್ನೇ ವಿಶೇಷವಾಗಿ ಪರಿಚಿತಗಳನ್ನಾಗಿ ಮಾಡಿಸಬೇಕು. ಅಂಥವರು ಪ
ಮಾಣವನ್ನಾಗಿ ಎಣಿಸುವ ಪ್ರಶ್ನಪತ್ರಿಕೆ, ಪಾಠಪುಸ್ತಕಮುಂತಾದವುಗಳಲ್ಲಿ ಒಂದೆ
ಕ್ರಮವನ್ನನುಸರಿಸಿ ಪದಗಳನ್ನು ಬರೆಯುವುದರಿಂದ ಇದು ನೆರವೇರುವುದು. ಕನ್ನಡ
ಶಾಸೆಯಲ್ಲಿ ಪಕ್ಷಪಾತಿಗಳಾಗಿರುವ ಉಪಾಧ್ಯಾಯರೆಲ್ಲರೂ ಇದನ್ನು ಯೋಚಿಸಿ ನಡೆದ
ುಂಡರೆ ಬರೆಯುವುದು ಬಹಳಮಟ್ಟಿಗೆ ಶೀಘ್ರದಲ್ಲೇ ವ್ಯವಸ್ಥಿತವಾಗುವದೆಂಬುದರ
ಂಶಯವಿಲ್ಲ.

***

ದಕ್ಷಿಣದೇಶದಲ್ಲಿ ಬಾಲವಿದ್ಯಾಭ್ಯಾಸವು ಸರಿಯಾಗಿ ನಡೆಯುದಿರುವುದಕ್ಕೆ ಕಾ
ಣಗಳನ್ನು ಗೊತ್ತುಮಾಡಿ ತಕ್ಕ ಪ್ರತೀಕಾರವನ್ನು ಯೋಚಿಸುವುದಕ್ಕಾಗಿ ಮದರಾಸ
ಪಟ್ಟಣದಲ್ಲಿ ಕಳೆದತಿಂಗಳ ಅತ್ಯಂಭಾಗದಲ್ಲಿ ಒಂದು ಸಭೆ ಸೇರಿತ್ತು. ದಕ್ಷಿಣದೇಶದಲ್ಲಿ
ರುವ ವಿದ್ಯಾಪಕ್ಷಪಾತಿಗಳಲ್ಲನೇಕರು ಅಲ್ಲಿಗೆ ಹೋಗಿದ್ದರು. ನಮ್ಮ ಮೈಸೂರು ದೇಶ
ದಿಂದ ಇ| ಜ| ರಾದ ಮೆ | ಭಾಭಾಸಾ| ರು ದಯಮಾಡಿಸಿದ್ದರು. ಸಭೆಯು ನಡೆ
ವಿವಕ್ಷಗಳಲ್ಲೊಂದಾವೃತ್ತಿ ಇವರು ಅಗ್ರಾಸನವನ್ನಲಂಕರಿಸಿದ್ದರು. ಚರ್ಚೆಯಾ
ಂಶಗಳನ್ನೆಲ್ಲ ಸಭೆಯವರು ತಮ್ಮ ಅಭಿಪ್ರಾಯದೊಡನೆ ಮದರಾಸ್ ದೇಶದ ವಿದ್ಯಾ
ಭ್ಯಾಸದ ಇಲಾಖೆ ಡೈರೆಕ್ಟರವರಿಗೆ ತಿಳಿಸಿದಾರೆ. ದಕ್ಷಿಣದೇಶದಲ್ಲಿ ಇಂಥ ಸಭೆ ನಡೆದುದ
ಇದೇಮೊದಲು. ವಿದ್ಯಾಭ್ಯಾಸಕ್ರಮವು ಶೀಘ್ರದಲ್ಲೇ ಒಳ್ಳೆಸ್ಥಿಗೆ ಬರುವುದೆಂಬುದಕ್ಕೆ
ಇವೆಲ್ಲ ಸೂಚಕಗಳು.

ಆಯಾ ದೇಶಭಾಷೆಗಳನ್ನು ಸ್ವಲ್ಪಮಟ್ಟಿಗಾದರೂ ಅಭ್ಯಾಸಮಾಡಿಸದೆ ಚಿಕ್ಕಂದಿನಲ್ಲೇ ಬಾಲಕರಿಗೆ ಇಂಗ್ಲೀಷುಭಾಷೆಯನ್ನು ಪಾಠ ಹೇಳುವುದು ಸುತರಾಂ ಸರಿಯಲ್ಲವೆಂಬ ವಿಷಯವಾಗಿ ಮೈ। ಭಾಭಾಸಾ। ರು ಒಂದು ಉಪನ್ಯಾಸವನ್ನು ಆ ಸಭೆಗಾಗಿ ಬರೆದಿದ್ದರು. ಅಲ್ಲಿಗೆ ಬಂದಿದ್ದವರಲ್ಲನೇಕರು ಈ ಅಭಿಪ್ರಾಯಕ್ಕೆ ಅನುಮತಿ ಕೊಟ್ಟರು. ಮೈಸೂರುದೇಶದಲ್ಲಿ ಈ ನೂತನವಾದ ಪದ್ಧತಿಯನ್ನನುಸರಿಸಿ ಕೆಲವು ವರ್ಷಗಳಿಂದ ವಿದ್ಯಾಭ್ಯಾಸವು ನಡೆಯುತಿದೆ. ಇನ್ನೂ ಕೆಲವು ವರ್ಷಗಳನಂತರ ಇದರಿಂದಾಗುವ ದೇಶಭಾಷಾಭಿವೃದ್ಧಿಯೇ ಮೊದಲಾದ ಪ್ರಯೋಜನಗಳು ಎಲ್ಲರಿಗೂ ಚೆನ್ನಾಗಿ ಗೊತ್ತಾಗುವುವು.

***

ಹಳ್ಳಿಸ್ಕೂಲುಗಳ ಉಪಾಧ್ಯಾಯರಿಗೀಗ ಕೊಡುತಿರುವ ಸಂಬಳವು ಬಹಳ ಕಡಮೆಯೆಂಬ ವಿಷಯವೂ ಆ ಸಭೆಯಲ್ಲಿ ಚರ್ಚೆಯಾಯಿತು. ಇದು ನಿಶ್ಚಯವೆಂದು ಎಲ್ಲರೂ ಹೇಳಿದರು; ಮತ್ತು ಅಂಥವರ ಸಂಬಳವನ್ನು ಕೂಡಿದಮಟ್ಟಿಗೂ ಶೀಘ್ರವಾಗಿ ಹೆಚ್ಚಿಸಬೇಕಾದುದು ಅತ್ಯಾವಶ್ಯಕವೆಂದೂ ಅಭಿಪ್ರಾಯಪಟ್ಟರು. ಬಾಲವಿದ್ಯಾಭ್ಯಾಸವು ಸರಿಯಾಗಿ ನಡೆಯುದಿರುವುದಕ್ಕೆ ಇದು ಎಷ್ಟು ದೊಡ್ಡ ಕಾರಣವೆಂಬುದನ್ನು ನಾವು ಈ ಪತ್ರಿಕೆಯಲ್ಲಿ ಎರಡುಮೂರುಸಲ ತಿಳಿಸಿದ್ದೇವೆ. ಮಕ್ಕಳಿಗೆ ಪಾಠ ಹೇಳುವರು ವಿಶೇಷವಾದ ಯೋಗ್ಯತೆಯುಳ್ಳವರಾಗಿರಬೇಕು. ಸಂಬಳವು ಇಷ್ಟು ಕಡಮೆಯಾದರೆ ಅಂಥವರು ಶಿಕ್ಕುವುದು ಹೇಗೆ?

ಪಾಠಕ್ರಮ.

ವ್ಯವಕಲನ.

ಮಕ್ಕಳಿಗೆ ಈ ವಿಷಯವನ್ನು ಸರಿಯಾಗಿ ಬೋಧಿಸುವುದಕ್ಕೆ ಯತ್ನಿಸಿರುವರೆಲ್ಲರಿಗೂ ಗಣಿತದ ಈ ಭಾಗವು ಎಷ್ಟು ಕಷ್ಟವೆಂಬುದು ತಿಳಿದಿರುವುದು. ಆದುದರಿಂದ ಇದನ್ನು ಕಾರಣಪುರಸ್ಸರವಾಗಿ ಬೋಧಿಸತಕ್ಕ ಕ್ರಮವನ್ನು ಇಲ್ಲಿ ವಿವರಿಸುವೆವು. ವ್ಯವಕಲನವನ್ನು ಬೋಧಿಸುವುದಕ್ಕೆ ಮುಂಚಿತವಾಗಿ ಹುಡುಗರಿಗೆ 9ರಲ್ಲಿ 2ಕಳೆದರೆ 7, 5ರಲ್ಲಿ 1ಕಳೆದರೆ 4, ಇಂಥ ಲೆಕ್ಕಗಳು ತಿಳಿದಿರಬೇಕು. ಸರಿಯಾದ ಕ್ರಮದಲ್ಲಿ ಅಂಕ

ಗಣಿತವನ್ನು ಬೋಧಿಸುವ ಉಪಾಧ್ಯಾಯನು ಇಂಥ ಲೆಕ್ಕಗಳನ್ನು ಅಂಕನಸಂಖ್ಯಾನ ಗಳನ್ನು ತಿಳಿಸುವಾಗ್ಗೆ ಹೇಳಿರುವನು ಆದುದರಿಂದ ಎರಡುಮೂರು ಅಂಕಿಗಳುಳ್ಳ ಸಂಖ್ಯೆಗಳಲ್ಲಿ ಒಂದರಿಂದ ಇನ್ನೊಂದನ್ನು ಕಳೆಯುವುದನ್ನು ಮಾತ್ರ ಇಲ್ಲಿ ತಿಳಿಸುವೆವು.

ಇಂಥ ಲೆಕ್ಕಗಳನ್ನು ಎರಡುಭಾಗವಾಡಿಕೊಳ್ಳಬೇಕು. ವ್ಯವಕಲನಕ್ಕಾಗಿ ಎರಡು ಸಂಖ್ಯೆಗಳನ್ನು ಕೊಟ್ಟರೆ ಅವುಗಳಲ್ಲಿ ಒಂದು ಇನ್ನೊಂದಕ್ಕಿಂತಲು ದೊಡ್ಡದಾ ಗಿರಬೇಕು. ಈ ದೊಡ್ಡದಾವ ಸಂಖ್ಯೆಯಲ್ಲಿರುವ ಪ್ರತಿಯೊಂದು ಅಂಕಿ ಚಿಕ್ಕಸಂಖ್ಯೆ ಯಲ್ಲಿ ಆಯಾಸ್ಥಾನಗಳಲ್ಲಿರುವ ಅಂಕಿಗಳಿಗಿಂತ ದೊಡ್ಡದಾಗಿರುವಂತ ಲೆಕ್ಕಗಳನ್ನು ಮೊದಲನೇ ವಿಧಕ್ಕೆ ಸೇರಿಸಬೇಕು; ಇತರ ಲೆಕ್ಕಗಳನ್ನು ಎರಡನೇವಿಧಕ್ಕೆ ಸೇರಿಸಬೇಕು. ಮೊದಲನೇವಿಧದ ಲೆಕ್ಕಗಳನ್ನು ಹೇಳಿಕೊಡುವುದು ಸುಲಭ.

ಉದಾ :—

(1)

		ದಶ	ಎಕ
29	=	2	9
13	=	1	3
16		1	6

(2)

		ಶತ	ದಶ	ಎಕ
449	=	4	4	9
324	=	3	2	4
125		1	2	5

ಎರಡನೇ ವಿಧಕ್ಕೆ ಸೇರಿದ ಲೆಕ್ಕಗಳನ್ನು ಮಾಡುವುದನ್ನು ತಿಳಿಸುವುದೇ ಕಷ್ಟವಾದು ದು. ಉದಾಹರಣೆಗಾಗಿ 853 ರಲ್ಲಿ 479 ನ್ನು ಕಳೆಯಬೇಕೆಂದು ಇರಲಿ, ಈ ಲೆಕ್ಕವನ್ನು ಈಗ ಸಾಮಾನ್ಯವಾಗಿ ಉಪಾಧ್ಯಾಯರು ಹೇಳಿಕೊಡುವ ಕ್ರಮವೇನೆಂದರೆ-

"3ರಲ್ಲಿ 9ಹೋಗುವುದಿಲ್ಲ ; ಆದುದರಿಂದ 853
5ರಿಂದ 1ನ್ನು ತೆಗೆದುಕೊಂಡರೆ 13 ಆಯಿತು ; 479
13ರಲ್ಲಿ 9ಹೋದರೆ 4. 4ರಲ್ಲಿ 7ಹೋಗುವು 374
ದಿಲ್ಲ, ಆದುದರಿಂದ 8ರಿಂದ 1 ತೆಗೆದುಕೊಂಡರೆ 14 ಆಯಿತು ; 14ರಲ್ಲಿ 7 ಹೋದರೆ 7. 7ರಲ್ಲಿ 4ಹೋದರೆ 3 "

ಉಪಾಧ್ಯಾಯರೆಲ್ಲರೂ ಸ್ವಲ್ಪ ಹೆಚ್ಚು ಕಡಮೆಯಾಗಿ ಈ ರೀತಿಯಲ್ಲೇ ಹೇಳಿಕೊಡುವರು. ಏತಕ್ಕೆ 1 ತೆಗೆದುಕೊಳ್ಳಬೇಕು, ಸೊನ್ನೆಗಳಿದ್ದರೆ ಹೇಗೆ ಇಂಥಾ ವಿಷಯಗಳಿಗೆ ಕಾರಣವನ್ನೇತಿಳಿಸುವುದಿಲ್ಲ. ಇದು ಕುರುಡುಪಾಠವಾದೀತೆ ಹೊರತು ಮತ್ತೆಬೇರೆ ಇಲ್ಲ. ಇದರಿಂದ ಹುಡುಗರಿಗೆ ಲೆಕ್ಕವಾಡುವುದು ಬಂದರೂ ತಾವು ಮಾಡುವುದಕ್ಕೆ ಉಪಾಧ್ಯಾಯರು ಹೇಳಿಕೊಟ್ಟರೆಂಬುದು ವಿನಾ ಮತ್ತಾವ ಕಾರಣವೂ ತಿಳಿದಿರುವುದಿಲ್ಲ.

ಅಂಕಗಣಿತವನ್ನು ಬೋಧಿಸುವಾಗ್ಗೆ ಮುಖ್ಯವಾಗಿ ಪ್ರತಿಯೊಂದು ಅಂಶಕ್ಕೂ ಕಾರಣವನ್ನು ತಿಳಿಸಬೇಕು. ಹಾಗೆ ಮಾಡದಿದ್ದರೆ ಬಾಲಕರು ಹೆಚ್ಚಾಗಿ ಯೋಚಿಸುವಂತಾಗುವುದಿಲ್ಲ. ಅದರಿಂದ ಅಂಕಗಣಿತದಿಂದಾಗಬೇಕಾದ ಮುಖ್ಯ ಪ್ರಯೋಜನವೇ ಆಗದೇಹೋಗುವುದು.

ವ್ಯವಕಲನವನ್ನು ಸಕಾರಣವಾಗಿ ಬೋಧಿಸುವುದಕ್ಕೆ ಎರಡು ಕ್ರಮಗಳಿವೆ. ಒಂದು ಕ್ರಮವನ್ನು ಇಂಗ್ಲೀಷು ಕ್ರಮವೆಂದು ಹೇಳಬಹುದು ; ಇನ್ನೊಂದು ಕ್ರಮವನ್ನು ನಮ್ಮ ದೇಶದ ಕ್ರಮವೆಂದು ಹೇಳಬಹುದು.

1. ನಮ್ಮ ದೇಶದ ಕ್ರಮ.

ಇದರಂತೆ ಬೋಧಿಸುವಾಗ್ಗೆ ಮೊದಲು ಅಂಕಬಂಧನೆಯ ವಿಷಯವಾಗಿ ಪ್ರಶ್ನೆಮಾಡಬೇಕು. ಅನಂತರದಲ್ಲಿ ಅಧರ್ಾಣೆ ಎರಡು ಬಿಡಕಾಸುಗಳು ಇದ್ದು 5 ಕಾಸು ಕೊಡಬೇಕಾದರೆ ಆ ಅಧರ್ಾಣೆಯನ್ನು ಮುರಿಸಬೇಕಾಗುವುದೆಂಬಂಧ ದೃಷ್ಟಾಂತಗಳಿಂದ ಬೇಕಾದಾಗ ಸಂಖ್ಯೆಗಳನ್ನು ಮುರಿಯಬೇಕಾಗುತ್ತೆಂಬುದನ್ನು ತಿಳಿಸಬೇಕು. ಅನಂತರದಲ್ಲಿ ಈ ಕ್ರಮವಾಗಿ ಹೇಳಬೇಕು.

ಉದಾ : 56ರಲ್ಲಿ 29ನ್ನು ಕಳೆಯಬೇಕು.

56 = 5ಹತ್ತು ಮೇಲೆ 6 = 4ಹತ್ತು ಮೇಲೆ 16

29 = 2ಹತ್ತು ಮೇಲೆ 9

ಅಂದರೆ	56 = 4ಹತ್ತು	16	4	16
	29 = 2ಹತ್ತು	9	2	9
	2ಹತ್ತು	7	2	7

ಬೇರೊಂದು ಉದಾಹರಣೆ.

853ರಲ್ಲಿ 479ನ್ನು ಕಳೆಯಬೇಕು

853= 7ನೂರು 14ಹತ್ತು 13 7 14 13

479= 4ನೂರು 7ಹತ್ತು 9 4 7 9

1ನೂರು 7ಹತ್ತು 4 3 7 4

ಹೀಗೆ ಲೆಕ್ಕಗಳನ್ನು ಹಲಗೆಯಮೇಲೆ ಮಾಡುವಾಗ್ಗೆ ಬಾಲಕರನ್ನು ಪ್ರಶ್ನೆಮಾಡುತಿರಬೇಕು. ಅವರಿಗೆ ಸಂಶಯವು ಬಾರದಂತೆ ತಿಳಿದುಕೊಂಡರೆಂದು ನಿಶ್ಚಯಿಸಿಕೊಳ್ಳಬೇಕು. ಅಭ್ಯಾಸವಾಗುವುದಕ್ಕಾಗಿ ಅವರಿಂದ ಕೆಲವು ಲೆಕ್ಕಗಳನ್ನು ಈ ಕ್ರಮವಾಗಿ ಮಾಡಿಸಬೇಕು.

(2) ಇಂಗ್ಲೀಷ್ ಕ್ರಮ.

ಇದನ್ನು ತಿಳಿಸುವುದಕ್ಕೆ ಮುಂಚೆ ಬಾಲಕರಿಗೆ ಈ ಒಂದು ಅಂಶವನ್ನು ತಿಳಿಸಬೇಕಾದುದು ಅವಶ್ಯಕ. ಯಾವುದಾದರೂ ಎರಡು ಸಂಖ್ಯೆಗಳಿಗಿರುವ ವ್ಯತ್ಯಾಸವು ಅವೆರಡಕ್ಕು ಒಂದೇ ಸಂಖ್ಯೆಯನ್ನು ಸೇರಿಸುವುದರಿಂದ ಹೆಚ್ಚೂ ಕಡಮೆಯಾಗುವುದಿಲ್ಲ. ಉದಾಹರಣೆಗಾಗಿ 4ಕ್ಕೂ 2ಕ್ಕೂ ಇರುವ ವ್ಯತ್ಯಾಸವನ್ನು ತೆಗೆದುಕೊಳ್ಳೋಣ. 4ಕ್ಕೂ 2ಕ್ಕೂ ಒಂದೇ ಅಂಕಿಯನ್ನು ಸೇರಿಸಿದರೆ ಆಗ್ಗೂ ವ್ಯತ್ಯಾಸವು ಎರಡೆ ಆಗಿರುವುದು. ಹೇಗೆಂದರೆ—

$4-2=2$; $(4+2)-(2+2)=2$; $(4+5)-(2+5)=2$

ಅನಂತರದಲ್ಲಿ ವ್ಯವಕಲನ ಮಾಡುವಾಗ್ಗೆ ಕೊಟ್ಟಿರುವ ಎರಡು ಸಂಖ್ಯೆಗಳಿಗೂ ಒಂದೇ ಅಂಕಿಯನ್ನು ಸೇರಿಸುವುದು ಅನುಕೂಲವೆಂದು ತೋರಿದರೆ ಹಾಗೆ ಮಾಡಬಹುದು ; ಅದರಿಂದ ಬರಬೇಕಾದ ಉತ್ತರದಲ್ಲಿ ವ್ಯತ್ಯಾಸವಾಗುವುದಿಲ್ಲವೆಂದು ತಿಳಿಸಬೇಕು. ಆಮೇಲೆ ಹೀಗೆ ಹಲಗೆಯಮೇಲೆ ಮಾಡಬೇಕು.

ಉದಾ : 42ರಲ್ಲಿ 29ನ್ನು ಕಳೆಯಬೇಕು

2ರಲ್ಲಿ 9ನ್ನು ಕಳೆಯುವುದಕ್ಕಾಗುವುದಿಲ್ಲ ; ಆದುದರಿಂದ ಎರಡು ಸಂಖ್ಯೆಗಳಿಗೂ 10ನ್ನು ಸೇರಿಸೋಣ.

4 12 12ರಲ್ಲಿ 9ಹೋದರೆ 3 ; 4ರಲ್ಲಿ 3ಹೋದರೆ 1 ಆದುದರಿಂದ 13 ವ್ಯತ್ಯಾಸ

3 9 ವಾಯಿತು.

1 3

ಬೇರೊಂದು ಉದಾಹರಣೆ :—

853ರಲ್ಲಿ 479ನ್ನು ಕಳೆಯಬೇಕು.

853	8	15	13
479	5	8	9
	3	7	4

ಅಂದರೆ 853 ಕ್ಕೂ 479ಕ್ಕೂ ಇರುವ ವ್ಯತ್ಯಾಸವು 374.

ಈ ಲೆಕ್ಕಗಳನ್ನು ಹಲಗೆಯಮೇಲೆ ಮಾಡುವಾಗ್ಗೆ ಬಾಲಕರನ್ನು ಪ್ರಶ್ನೆಮಾಡುತಿರಬೇಕು ಪ್ರತಿಯೊಂದು ಅಂಶವು ಸಂಶಯವಿಲ್ಲದ ಹಾಗೆ ತಿಳಿಯಿತೆಂದು ನಿಶ್ಚಯಿಸಿಕೊಳ್ಳಬೇಕು. ಹುಡುಗರಿಗೆ ಕೆಲವು ಲೆಕ್ಕಗಳನ್ನು ಕೊಟ್ಟು ಮೇಲೆ ಹೇಳಿರುವಂತೆ ವಿಶದವಾಗಿ ಅವರಿಂದ ಮಾಡಿಸಬೇಕು. ಅನಂತರದಲ್ಲಿ ಅಂದರೆ ಸಾಕಾದಷ್ಟು ಅಭ್ಯಾಸವಾದಮೇಲೆ ವ್ಯವಕಲನ ಲೆಕ್ಕಗಳನ್ನು ತಟ್ಟನೆ ಮಾಡುವುದು ಅದಾಗಿಯೇ ಬರುವುದು.

ಇವೆರಡುಕ್ರಮಗಳ ಗುಣದೋಷಗಳನ್ನು ಕುರಿತು ಸ್ವಲ್ಪಮಟ್ಟಿಗೆ ಇಲ್ಲಿ ಹೇಳಬೇಕಾದುದು ಆವಶ್ಯಕ. ನಮ್ಮದೇಶದ ಕ್ರಮವನ್ನನುಸರಿಸಿ ಲೆಕ್ಕಮಾಡುವುದನ್ನು ಬೋಧಿಸುವುದೇನೂ ಸುಲಭ; ಆದರೆ ಮೇಲಿನ ಸಂಖ್ಯೆಯಲ್ಲಿ ಸೊನ್ನೆಗಳಿದ್ದರೆ ಆಗ್ಗೆ ಈ ಕ್ರಮವನ್ನನುಸರಿಸಿ ಹುಡುಗರಿಗೆ ತಿಳಿಯುವಂತೆ ಹೇಳುವುದು ದುಸ್ತರವಾಗುವುದು. ಇಂಗ್ಲೀಷ್‌ಪದ್ಧತಿಯಲ್ಲಿ ಈ ಕಷ್ಟವು ತಪ್ಪುವುದು. ಆದರೆ 10 ನ್ನು ಎರಡು ಸಂಖ್ಯೆಗಳಿಗೂ ಏಕೆ ಸೇರಿಸಬೇಕೆಂಬುದಕ್ಕೆ ಬಾಲಕರಿಗೆ ಸರಿಯಾಗಿ ತಿಳಿಸುವುದಕ್ಕಾಗುವುದಿಲ್ಲ. ಸೊನ್ನೆಗಳಿದ್ದಾಗ ಇಂಗ್ಲೀಷ್‌ಪದ್ಧತಿಯು ಸುಲಭವೆಂಬುದಕ್ಕೆ ಒಂದು ಉದಾಹರಣೆಯನ್ನು ಕೊಡುವೆವು.

4003	4	10	10	13
2147	3	2	5	7
1856	1	8	5	6

ನಮ್ಮ ದೇಶದ ಪದ್ಧತಿಯ ಪ್ರಕಾರ ಇದನ್ನು ತಿಳಿಸುವುದು ಕಷ್ಟವೆಂಬುದು ಎಲ್ಲ ಉಪಾಧ್ಯಾಯರಿಗೂ ತಿಳಿದೇ ಇರುವುದು

ವ್ಯವಕಲನವನ್ನು ನಾವು ಮೇಲೆ ಹೇಳಿರುವಂತೆ ತೃಪ್ತಿಕರವಾಗಿ ಬಾಲಕರಿಗೆ ತಿಳಿಸಬೇಕಾದರೆ ಅಂಕನಸಂಖ್ಯಾನಸಂಕಲನಗಳನ್ನೂ ಸರಿಯಾದ ಕ್ರಮದಲ್ಲಿ ತಿಳಿಸಿರಬೇಕು; ಇಲ್ಲದಿದ್ದರೆ ಬಾಲಕರಿಗೆ ಕಷ್ಟವಾಗಿ ತೋರಬಹುದು. M. H.

853 = 7ನೂರು 14ಹತ್ತು 13 7 14 13

479 = 4ನೂರು 7ಹತ್ತು 9 4 7 9

3ನೂರು 7ಹತ್ತು 4 3 7 4

ಹೀಗೆ ಲೆಕ್ಕಗಳನ್ನು ಹಲಗೆಯಮೇಲೆ ಮಾಡುವಾಗ್ಗೆ ಬಾಲಕರನ್ನು ಪ್ರಶ್ನೆಮಾಡುತಿರಬೇಕು. ಅವರಿಗೆ ಸಂಶಯವು ಬಾರದಂತೆ ತಿಳಿದುಕೊಂಡರೆಂದು ನಿಶ್ಚಯಿಸಿಕೊಳ್ಳಬೇಕು. ಅಭ್ಯಾಸವಾಗುವುದಕ್ಕಾಗಿ ಅವರಿಂದ ಕೆಲವು ಲೆಕ್ಕಗಳನ್ನು ಈ ಕ್ರಮವಾಗಿ ಮಾಡಿಸಬೇಕು.

(2) ಇಂಗ್ಲೀಷ್ ಕ್ರಮ.

ಇದನ್ನು ತಿಳಿಸುವುದಕ್ಕೆ ಮುಂಚೆ ಬಾಲಕರಿಗೆ ಈ ಒಂದು ಅಂಶವನ್ನು ತಿಳಿಸಬೇಕಾದುದು ಅವಶ್ಯಕ. ಯಾವುದಾದರೂ ಎರಡು ಸಂಖ್ಯೆಗಳಿಗಿರುವ ವ್ಯತ್ಯಾಸವು ಅವೆರಡಕ್ಕು ಒಂದೇ ಸಂಖ್ಯೆಯನ್ನು ಸೇರಿಸುವುದರಿಂದ ಹೆಚ್ಚೂ ಕಡಮೆಯಾಗುವುದಿಲ್ಲ. ಉದಾಹರಣೆಗಾಗಿ 4ಕ್ಕೂ 2ಕ್ಕೂ ಇರುವ ವ್ಯತ್ಯಾಸವನ್ನು ತೆಗೆದುಕೊಳ್ಳೋಣ. 4ಕ್ಕೂ 2ಕ್ಕೂ ಒಂದೇ ಅಂಕಿಯನ್ನು ಸೇರಿಸಿದರೆ ಆಗ್ಗೂ ವ್ಯತ್ಯಾಸವು ಎರಡೆ ಆಗಿರುವುದು. ಹೇಗೆಂದರೆ—

$4 - 2 = 2$; $(4+2) - (2+2) = 2$; $(4+5) - (2+5) = 2$

ಅನಂತರದಲ್ಲಿ ವ್ಯವಕಲನ ಮಾಡುವಾಗ್ಗೆ ಕೊಟ್ಟಿರುವ ಎರಡು ಸಂಖ್ಯೆಗಳಿಗೂ ಒಂದೇ ಅಂಕಿಯನ್ನು ಸೇರಿಸುವುದು ಅನುಕೂಲವೆಂದು ತೋರಿದರೆ ಹಾಗೆ ಮಾಡಬಹುದು; ಅದರಿಂದ ಬರಬೇಕಾದ ಉತ್ತರದಲ್ಲಿ ವ್ಯತ್ಯಾಸವಾಗುವುದಿಲ್ಲವೆಂದು ತಿಳಿಸಬೇಕು. ಆಮೇಲೆ ಹೀಗೆ ಹಲಗೆಯಮೇಲೆ ಮಾಡಬೇಕು.

ಉದಾ : 42ರಲ್ಲಿ 29ನ್ನು ಕಳೆಯಬೇಕು

2ರಲ್ಲಿ 9ನ್ನು ಕಳೆಯುವುದಕ್ಕಾಗುವುದಿಲ್ಲ ; ಆದುದರಿಂದ ಎರಡು ಸಂಖ್ಯೆಗಳಿಗೂ 10ನ್ನು ಸೇರಿಸೋಣ.

4 12 12ರಲ್ಲಿ 9ಹೋದರೆ 3 ; 4ರಲ್ಲಿ 3ಹೋದರೆ 1 ಆದುದರಿಂದ 13 ವ್ಯತ್ಯಾಸ

3 9 ವಾಯಿತು.

1 3

ಬೇರೊಂದು ಉದಾಹರಣೆ :—

853ರಲ್ಲಿ 479ನ್ನು ಕಳೆಯಬೇಕು.

853	8	15	13
479	5	8	9
	3	7	4

ಅಂದರೆ 853 ಕ್ಕೂ 479ಕ್ಕೂ ಇರುವ ವ್ಯತ್ಯಾಸವು 374.

ಈ ಲೆಕ್ಕಗಳನ್ನು ಹಲಗೆಯಮೇಲೆ ಮಾಡುವಾಗ್ಗೆ ಬಾಲಕರನ್ನು ಪ್ರಶ್ನೆಮಾಡುತಿರಬೇಕು ಪ್ರತಿಯೊಂದು ಅಂಶವು ಸಂಶಯವಿಲ್ಲದ ಹಾಗೆ ತಿಳಿಯಿತೆಂದು ನಿಶ್ಚಯಿಸಿಕೊಳ್ಳಬೇಕು. ಹುಡುಗರಿಗೆ ಕೆಲವು ಲೆಕ್ಕಗಳನ್ನು ಕೊಟ್ಟು ಮೇಲೆ ಹೇಳಿರುವಂತೆ ವಿಶದವಾಗಿ ಅವರಿಂದ ಮಾಡಿಸಬೇಕು. ಅನಂತರದಲ್ಲಿ ಅಂದರೆ ಸಾಕಾದಷ್ಟು ಅಭ್ಯಾಸವಾದಮೇಲೆ ವ್ಯವಕಲನ ಲೆಕ್ಕಗಳನ್ನು ತಟ್ಟನೆ ಮಾಡುವುದು ಅದಾಗಿಯೇ ಬರುವುದು.

ಇವೆರಡುಕ್ರಮಗಳ ಗುಣದೋಷಗಳನ್ನು ಕುರಿತು ಸ್ವಲ್ಪಮಟ್ಟಿಗೆ ಇಲ್ಲಿ ಹೇಳಬೇಕಾದುದು ಅವಶ್ಯಕ. ನಮ್ಮದೇಶದ ಕ್ರಮವನ್ನನುಸರಿಸಿ ಲೆಕ್ಕಮಾಡುವುದನ್ನು ಬೋಧಿಸುವುದೇನೂ ಸುಲಭ; ಆದರೆ ವೇಲಿನ ಸಂಖ್ಯೆಯಲ್ಲಿ ಸೊನ್ನೆಗಳಿದ್ದರೆ ಆಗ್ಗೆ ಈ ಕ್ರಮವನ್ನನುಸರಿಸಿ ಹುಡುಗರಿಗೆ ತಿಳಿಯುವಂತೆ ಹೇಳುವುದು ದುಸ್ತರವಾಗುವುದು. ಇಂಗ್ಲೀಷ್‌ಪದ್ಧತಿಯಲ್ಲಿ ಈ ಕಷ್ಟವು ತಪ್ಪುವುದು. ಆದರೆ 10 ನ್ನು ಎರಡು ಸಂಖ್ಯೆಗಳಿಗೂ ಏಕೆ ಸೇರಿಸಬೇಕೆಂಬುದಕ್ಕೆ ಬಾಲಕರಿಗೆ ಸರಿಯಾಗಿ ತಿಳಿಸುವುದಕ್ಕಾಗುವುದಿಲ್ಲ. ಸೊನ್ನೆಗಳಿದ್ದಾಗ ಇಂಗ್ಲೀಷ್‌ಪದ್ಧತಿಯು ಸುಲಭವೆಂಬುದಕ್ಕೆ ಒಂದು ಉದಾಹರಣೆಯನ್ನು ಕೊಡುವೆವು.

4003	4	10	10	13
2147	3	2	5	7
1856	1	8	5	6

ನಮ್ಮ ದೇಶದ ಪದ್ಧತಿಯ ಪ್ರಕಾರ ಇದನ್ನು ತಿಳಿಸುವುದು ಕಷ್ಟವೆಂಬುದು ಎಲ್ಲ ಉಪಾಧ್ಯಾಯರಿಗೂ ತಿಳಿದೇ ಇರುವುದು.

ವ್ಯವಕಲನವನ್ನು ನಾವು ಮೇಲೆ ಹೇಳಿರುವಂತೆ ಶೈಪ್ತಿಕರವಾಗಿ ಬಾಲಕರಿಗೆ ತಿಳಿಸಬೇಕಾದರೆ ಅಂಕನಸಂಖ್ಯಾನಸಂಕಲನಗಳನ್ನೂ ಸರಿಯಾದ ಕ್ರಮದಲ್ಲಿ ತಿಳಿಸಿರಬೇಕು; ಇಲ್ಲದಿದ್ದರೆ ಬಾಲಕರಿಗೆ ಕಷ್ಟವಾಗಿ ತೋರಬಹುದು. M. H.

ಸ್ನೇಹಿಂತರ ಸಂಭಾಷಣೆ.

ರಾಮ—ನಿನ್ನೆದಿವಸಕ್ಕೆ ಪರಿಕ್ಷೆಯು ಪೂರೈಸಿತು. ಇವತ್ತಿನಿಂದ ಏನುಮಾಡೋಣ? ಈ ರಜಾಕಾಲವನ್ನು ನೀನು ಹ್ಯಾಗೆ ಕಳೆಯಬೇಕೆಂದು ಇದ್ದೀಯೆ?

ಕೃಷ್ಣ—ನನಗೇನೋ ಬಹು ಬೇಜಾರಾಗಿದೆ. ನಿನ್ನೆದಿವಸ ಪರಿಕ್ಷೆ ಕಳೆದದ್ದು, ಒಂದು ದೊಡ್ಡ ಹೊರೆ ತಪ್ಪಿಸಿಕೊಂಡಹಾಗೆ ಆಯಿತು. ನಾನು ಅ—

ರಾಮ—ಹೊರೆ ತಪ್ಪಿಸಿಕೊಂಡಹಾಗೆ ಆಯಿತೆಂದು ಈಗಲೆಹ್ಯಾಗೆ ಹೇಳುತ್ತಿಯೆ? ಇನ್ನೂ ನಮ್ಮ ಉತ್ತರದ ಕಟ್ಟುಗಳು ರವಾನೆಸಹ ಆಗಿಲ್ಲ. ಇನ್ನೂ ಏಳ್ಮೆ ದಿವಸ ಬೇಕು. ಇದು ಹಾಗಿರಲಿ ಮುಖ್ಯವಾಗಿ ತೇರ್ಗಡೆಯಾಯಿತೆಂದು ಸರಟಫೀ ಕಿಟ್ ಬರುವವರೆಗೂ ನಾನು ತಪ್ಪಿಸಿಕೊಂಡೆನೆಂದು ಹೇಳಲಾರೆ

ಕೃಷ್ಣ—ಮುಂದೆ ಏನಾದರೂ ಆಗಲಿ. ಸಧ್ಯಃ ಭಾರ ತಪ್ಪಿತೋ ಇಲ್ಲವೊ? ನಾನು ಅಷ್ಟು ದಿವಸದಿಂದಲೂ ನಿದ್ದೆಗೆಟ್ಟು ರಾತ್ರೆಯೆಲ್ಲಾ ಓದಿದೆ ಆದುದರಿಂದ ಕಣ್ಣುಗಳು ಉರಿಯುತ್ತಲಿವೆ ನಾನಂತೂ ಮೂರುನಾಲ್ಕುದಿವಸ ಮೊದಲು ಪಟ್ಟಾಗಿ ನಿದ್ರೆ ಮಾಡಬೇಕೆಂದು ಇಧೇನೆ ಆಮೇಲೆ ಹ್ಯಾಗಾದರೂ ಆಗಲಿ. ನಿನ್ನೆ ಪರಿಕ್ಷೆ ಯಾದೊಡನೆಯೆ ನೆಟ್ಟಗೆ ವಸತಿಗೆಹೋಗಿ, ಊಟಮಾಡಿಕೊಂಡು ಮಲಗಿಕೊಂಡವನು ಇದೇತಾನೆ ಎದು ನಿನ್ನಲ್ಲಿಗೆ ಬಂದೆ

ರಾಮ—ನಿದ್ದೆ ಯಾತಕ್ಕೆ ಕೆಡಬೇಕು, ಈಗ ಯಾತಕ್ಕೆ ಒದ್ದಾಡಬೇಕು. ನಾನು ಮೊದಲಿನಿಂದಲೂ ಹೇಳುತ ಇರಲಿಲ್ಲವೆ. ಅವತ್ತವತ್ತಿನ ಪಾಠ ಅವತ್ತವತ್ತೇ ಚೆನ್ನಾಗಿ ಓದಿಬಿಡೋಣ; ಪ್ರತಿ ಭಾನುವಾರವಲ್ಲಿಯೂ, ಇತರ ರಜಾದಿವಸಗಳಲ್ಲಿಯೂ ಹಿಂದಿಂದೆಲ್ಲಾ ಓದಿಬಿಟ್ಟರೆ ಪರಿಕ್ಷೆಹೊತ್ತಿಗೆ ಸುಲಭವಾಗಿರುತ್ತೆ ಎಂದು. ಅಷ್ಟು ಕಷ್ಟಪಡತಕ್ಕ ಅವಶ್ಯಕವೇ ಇಲ್ಲವೆಂದು ನಾನು ಆಗಾಗ್ಗೆ ಹೇಳುತಿದ್ದೆ. ಆಗ ನಿನಗೆ ತೋಚಲಿಲ್ಲ, ಈಗ ಅನುಭವಿಸುತ್ತೀ. ಇದಕ್ಕೆ ಯಾರು ಏನುಮಾಡುವರು.

ಕೃಷ್ಣ—ಹೌದು, ಹೌದು, ನೀನು ಒಳ್ಳೆಬುದ್ಧಿವಂತ ನಿನ್ನಹಾಗೆಯೆ ಎಲ್ಲರೂ ಇರುತ್ತಾರೆಂದು ತಿಳಿದು ಇದ್ದೀಯೊ? ಪ್ರಪಂಚದಲ್ಲಿ ಎಲ್ಲರೂ ಬುದ್ಧಿವಂತರಾದರೆ ಇನ್ನೇನುಕಮ್ಮಿ. ನಾನಂತೂ ವಾರ ನಾಲ್ಕುದಿವಸ ಪಟ್ಟಾಗಿ ನಿದ್ದೆ ಮಾಡಬೇಕೆಂದು ಇದ್ದೇನೆ. ನೀನು ಏನು ಮಾಡಬೇಕೆಂದು ಇದ್ದೀಯೆ? ಒಂದುವಿಷಯ ಕಂಡ

ಹಾಗೆ ಇದೆ. ನಿಮ್ಮ ಭಾವಂದರು ಅಮಲ್‌ದಾರರು—ನಿಮ್ಮ ಅಕ್ಕ ಬರಹೇಳಿರುವರ. ನೀನು ಹೊರಡುವುದೂ ನಿಶ್ಚಯ. ಇನ್ನು ನಾನು ಏನು ಮಾಡಬೇಕೆಂದು ಇದ್ದರೇನು ನಾನು ಹ್ಯಾಗೆ ಕಾಲ ಕಳೆದರೇನು ? ನಿನ್ನ ವಿಷಯ ಇದೇತಾನೆ ?

ರಾಮು—ನಾನು ಬುದ್ಧಿವಂತನೆಂದು ಎನ್ನಿಸಿಕೊಳ್ಳುವುದಕ್ಕೆ ಹೇಳಿದನೆ ? ನಾನು ಭಾವಂದರ ಮನೆಗೆ ಹೋಗುತ್ತೇನೆಂದು ನಿಶ್ಚೈಸಿ, ನೀನು ಹ್ಯಾಗೆ ರಜಾಕಾಲವನ್ನು ಕಳೆಯಬೇಕೆಂದು ಇದ್ದಿಯೆ, ಎಂದು ಕೇಳಿದನೆ ? ನಾನು ಭಾವಂದರ ಮನೆಗೆ ಹೋಗಬೇಕೆಂದು ನಿಶ್ಚೈಸಿದ್ದರೆ ಇವತ್ತಿನಿಂದ ಏನುಮಾಡೋಣವೆಂದು ಯಾತಕ್ಕೆ ಕೇಳುತಿದ್ದೆ ಒಳ್ಳೇದು ' ನಾನಂತೂ ಮೂರುನಾಲ್ಕುದಿವಸ ಮಲಗಿಕೊಂಡು ನಿದ್ದೆ ಮಾಡುತ್ತೇನೆ ಎಂದು ಹೇಳುತ್ತಿಯಲ್ಲಾ, ಹಾಗೆ ಮೂರುನಾಲ್ಕುದಿವಸ, ಮೂರು ಮೂರುಹೊತ್ತೂ ನಿದ್ರೆ ಬರುತ್ತದೆಯೆ ? ಒಂದುಮೇಳೆ ನೀನು ' ಕಣ್ಣು ಮುಚ್ಚಿಕೊಂಡಾದರೂ ಮಲಗಿಕೊಂಡಿರುತ್ತೇನೆ ' ಎಂದೀಯೆ. ಹಾಗೆ ಮಾಡಿದರೆ ಈಗ ಕಣ್ಣು ಉರಿಯುತ್ತಲಿದೆ—ಆಗು ಕಣ್ಣೂ ಹುಬ್ಬೂ ಇವುಗಳೆಲ್ಲಾ ನೋಯುವುದಲ್ಲದೆ ಬುದ್ಧಿಯೂ ಮಂಕಾಗಿರುವುದು. ನಿದ್ರೆ ಬಂದರೆ ಮಲಗಿಕೊಳ್ಳುವುದು ಸಹಜ. ಅದು ಒಳ್ಳೇದು. ದೇಹ ಆರೋಗ್ಯಕರ. ನಿದ್ದೆ ಬರದೆಹೋದರೆ ಏನುಮಾಡಬೇಕೆಂದು ಇದ್ದಿಯೆ ಅದಾದರೂ ಹೇಳಪ್ಪ—(ಇಷ್ಟರಲ್ಲಿಯೆ ಇನ್ನೂ ಮೂರುನಾಲ್ಕುಮಂದಿ ಸ್ನೇಹಿತರು ಬರುವರು.

ಗೋವಿಂದ—ರಾಮು ! ಏನು ಫಸ್ಟ್‌ಕ್ಲಾಸೋ ? ಕೃಷ್ಣನಂತೂ ಪ್ಯಾಸಾಗೊದು ಖಂಡಿತ.

ಕಿಟ್ಟು—ಸರಿ-ಎಲ್ಲಿಹೋದರೂ ಇದು ಇದ್ದೇ ಇದೆ. ನೀನು ಫಸ್ಟ್‌ಕ್ಲಾಸೋ ನೀನು ಸೆಕೆಂಡ್‌ಕ್ಲಾಸೋ ? ರಿಜಲ್ಟ್ ತಿಳಿಯುವುದಕ್ಕೆ ಮುಂಚಿತವಾಗಿ ಇಂಥಾದ್ದೆಂದು ಹೇಳುವುದಕ್ಕೆ ಯಾರಿಂದಲೂ ಆಗುವುದಿಲ್ಲ. ಅದು ಬರುವವರೆಗೂ ಉತ್ತರ ಹೇಳಿಹೇಳಿ ಸಾಕಾಗುತ್ತೆ. ನಮ್ಮ ಯೋಚನೆಬೇರೆ—ಎಲ್ಲರಿಗೂ ಉತ್ತರ ಹೇಳುವುದು ಬೇಕೆ ಈ ಮಾತು ಇರಲಿ. ಹ್ಯಾಗಿದ್ದರೂ ಕೆಲವುದಿವಸವಾದರೂ ಪುರಸತ್ತು ಇದೆಯಲ್ಲಾ—ಆಮೇಲೆ ಹ್ಯಾಗಾದರೂ ಹಾಗೆ ಆಗಲಿ—ಸ್ವಲ್ಪದಿವಸವಾದರೂ ನಿರಾತಂಕವಾಗಿರೋಣ ಇದಕ್ಕಾಗಿ ಈ ರಜಾಕಾಲದಲ್ಲಿ ಏನುಮಾಡೋಣ. ಯಾರಾದರೂ ಹೇಳಿಯಂದರೆ—ಎನು, ಆಚಾರ್ರೆ ನೀವು ಏನು ಹೇಳುತ್ತೀರಿ ಹೇಳಿ.

ಆಚಾರ್ರು—ನೀವುಗಳೆಲ್ಲರೂ ಮಾಡಿದರೂ ಏನು ಮಾಡಬಹುದು. ಒಬ್ಬರ

ಫಸ್ಟಕ್ಲಾಸಿನಲ್ಲಿ ಪ್ಯಾಸ್ ಮಾಡುವುರು. ಇನ್ನೊಬ್ಬರು ಸೆಕೆಂಡಕ್ಲಾಸಿನಲ್ಲಿ ಪ್ಯಾಸ್ ಮಾಡುವುರು. ಇನ್ನೊಬ್ಬರು ಖಂಡಿತವಾಗಿ ಪ್ಯಾಸ್ ಮಾಡತಕ್ಕವರು. ಹೀಗಿರುವಾಗ ನಮ್ಮ ಯೋಚನೆ ಕಟ್ಟಿಕೊಂಡು ನಿಮಗೇನರಪ್ಪ. ನನಗೆ ಭಾಷೆಯಲ್ಲಿ ಸ್ವಲ್ಪ ಅನುಮಾನ. ಲೆಖ್ಖದಲ್ಲಿ ಆಶೆಯೇ ಇಲ್ಲ. ನಾನು ಫೈಲ್ ಆಗುವುದು ನಿಶ್ಚಯ. ಅದುದರಿಂದ ಈಗಲ್ಲಿಂದಲೆ ಇಷ್ಟು ಲೆಖ್ಖಪಕ್ಕ ಮಾಡೋಣವೆಂದು ಇದೇನ್ಲೆ. ನೀವ್ಯಾರಾದರೂ ಸ್ವಲ್ಪ ಸಹಾಯಮಾಡಿದರೆ ತುಂಬಾ ಸಂತೋಷ.

ಕೃಷ್ಣ—ಇನ್ನೂ ನೆಟ್ಟಗೆ ಒಂದುದಿವಸಸಹಿತವಾಗಿ ಪೂರೈಸಿಲ್ಲ. ತಿರುಗಿ ಪುಸ್ತಕ, ಸ್ಲೇಟು ಇವತ್ತೇ ಕೈಲಿ ಹಿಡಿಯಂದರೆ ಯಾರಿಂದಾದೀತು. ನಮ್ಮಿಂದಬೀರೆ ಆಗಲಾರದು. ಓದೋರೆಲಾ ಓದಿ ಏನುಮಾಡುತೀರೊ ನೋಡೋಣ.

ರಾಮ—ನೀನು ಯಾವಾಗಲೂ ಒಂದೆ ಕೃಷ್ಣ. ಆಚಾರ್ರ, ನೀವು ಹೇಳುವ ಮಾತು ನಿಶ್ಚಯ. ಪರಿಕ್ಷೆಯಲ್ಲಿ ತೇರ್ಗಡೆಯಾಗುವುದು ಸ್ವಲ್ಪ ಅನುಮಾನವಾಗಿದ್ದರೆ ಈಗಲಿಂದಲೂ ಕಷ್ಟಪಟ್ಟು ಓದತಕ್ಕದ್ದೇ ಸಹಜ. ಅದೇ ಒಳ್ಳೇದು. ಆದರೆ ಇದುವರೆಗೂ ಶ್ರಮಪಟ್ಟಿರುವುದರಿಂದ ಕೆಲವುದಿವಸ ವಿರಾಮವನ್ನು ತೆಗೆದುಕೊಳ್ಳುವುದು ಉತ್ತಮ. ಸ್ವಲ್ಪಕಾಲ ವಿರಾಮ ತೆಗೆದುಕೊಂಡು ತರುವಾಯ ಚೆನ್ನಾಗಿ ಒಂದೇಸಮನಾಗಿ ಓದಲಿಕ್ಕೆ ಆರಂಭಿಸುವುದು ಒಳ್ಳೇದಲ್ಲವೆ!

ಕಿಟ್ಟ—ಏನು ಈ ಬುದ್ಧಿವಾದದಲ್ಲಯೆ ಅಯಿತಲ್ಲಾ. ಮುಂದೆ ಏನುಮಾಡುವುದೋ ಅದುಬೀರೆ ಗೊತ್ತಾಗಲಿಲ್ಲ. ಯಾವುದಾದರೂ ಒಂದು ಜಾಗ್ರತೆಯಾಗಿ ಗೊತ್ತುಮಾಡಿ.

ಗೋವಿಂದ—ರಜಾ ಕೊಡುವುದಕ್ಕೆ ಮುನ್ನಾದಿವಸ, ಭಾಷಾಪರಿಚಯಕ್ಕಾಗಿಯೂ, ವಿದೇಶೀಯರ ಶೀಲಸ್ವಭಾವ ನಡೆನುಡಿಯೇಮೊದಲಾದ ವಿಶೇಷ ಸಂಗತಿಗಳನ್ನು ತಿಳಿಯುವುದಕ್ಕಾಗಿಯೂ ಒಂದೆರಡು ಘಂಟೆಗಳಕಾಲ ಗ್ರಂಥಗಳನ್ನೂ, ಕಥೆ ಪುಸ್ತುಕಗಳನ್ನೂ ಓದಬೇಕೆಂತಲೂ, ಸಾಯಂಕಾಲದಲ್ಲಾಗಲಿ ಬೆಳಗಿನಹೊತ್ತಾಗಲಿ ಸಾಧನೆಯನ್ನು ಮಾಡಬೇಕೆಂತಲೂ ನಮ್ಮ ಹೆಡ್ಮೇಷ್ಟರವರು ಹೇಳಲಿಲ್ಲವೆ. ನಾವು ಹಾಗೆ ಯಾತಕ್ಕೆ ಮಾಡಬಾರದು?

ಆಚಾರ್ರ—ಹೌದು, ಹೌದು. ಒಳ್ಳೆಹೊತ್ತಿನಲ್ಲಿ ಜ್ಞಾಪಿಸಿದೆ. ನನಗೆ ಅನುಕೂಲವಾಗಿ ಹೇಳಿದೆ—ಆದರೆ ಇದು ಎಲ್ಲರಿಗೂ ಸಮ್ಮತವಾಗಬೇಕಲ್ಲ.

ರಾಮು—(ಗೋವಿಂದನಕಡೆಗೆ ತಿರುಗಿ) ಅವರು ಹೇಳಿದ್ದರಲ್ಲಿ ಮುಖ್ಯವಾದ ಅಂಶಗಳನ್ನೆ ಹುರಿತುಬಿಟ್ಟರಿ. ಪಾಠಶಾಲೆಯಲ್ಲಿ ಹೇಳಿದ ಕೆಲವು ವಿಶೇಷಸಂಗತಿಗಳ ವಿಷಯವಾಗಿ ಈ ರಜಾದಿವಸಗಳಲ್ಲಿ ಚೆನ್ನಾಗಿ ನಾವೇ ಯೋಚನೆ ಮಾಡಬೇಕು, ಹೀಗೆ ಯೋಚನೆಮಾಡೋಣವರಲ್ಲಿ ಆಲೋಚನಾಶಕ್ತಿಯು ವೃದ್ಧಿಯಾಗುವುದು ಎಂತಲೂ, ಅನುಕೂಲವುಳ್ಳವರು ರಜಾದಿವಸಗಳಲ್ಲಿ ದೇಶಸಂಚಾರಮಾಡುವುದು ಅವಶ್ಯಕವೆಂತಲೂ ಹೇಳಲಿಲ್ಲವೆ.

ಕಿಟ್ಟು—ಈ ಸಂಗತಿ ನನಗೆ ಚೆನ್ನಾಗಿ ಜ್ಞಾಪಕವಿದೆ. ಇದಲ್ಲದೆ ಒಂದುದಿವಸ ಕ್ಲಾಸಿನಲ್ಲಿಕೂಡ ಈ ವಿಷಯವಾಗಿ ಹೇಳಿದರು. ಇಂಗ್ಲೆಂಡಿನಲ್ಲಿ ಇರುವ ಕೇಂಬ್ರಿಡ್ಜ್, ಆಕ್ಸ್‌ಫರ್ಡ್ ಈ ಯೂನಿವರ್ಸಿಟಿಗಳಿಗೆ ಸೇರಿದ ವಿದ್ಯಾರ್ಥಿಗಳು ರಜಾದಿವಸಗಳಲ್ಲಿ ದೇಶ ಸಂಚಾರ ಹೊರಡುವರೆಂತಲೂ, ದೇಶಸಂಚಾರಮಾಡದೆ ಇದ್ದವನು ಎಷ್ಟು ವಿದ್ಯಾವಂತನಾದಾಗ್ಯೂ, ವಿದ್ಯಾಪೂರ್ಣನಾಗಲಿಲ್ಲವೆಂದು ಭಾವಿಸುವರೆಂತಲೂ ಹೇಳಿದಹಾಗೆ ಜ್ಞಾಪಕವಿದೆ—ನಾವು ಈಗ———

ಕೃಷ್ಣ—ನಾವು ಈಗ ನಿಲ್ಲಲಿಕ್ಕೆ ನೆರಳಿಲ್ಲದೆ, ಕೆಡಿಯುವುದಕ್ಕೆ ನೀರಿಲ್ಲದೆ, ತಿನ್ನುವುದಕ್ಕೆ ಅನ್ನವಿಲ್ಲದೆ ಊರು ಊರು ಕಾಡು ಕಾಡು ಅಲೆಯಬೇಕೆಂಬುವುದೇ ನಿನ್ನ ಅಭಿಪ್ರಾಯವೆನ್ನುವಹಾಗೆ ತೋರುತ್ತೆ. ಅಗತ್ಯ ಆಗಬಹುದು. ಇದರಿಂದ ಯಾವ ಪ್ರಯೋಜನವೂ ನಾನು ಕಾಣೆ.

ರಾಮು—ಸಾರ್ಥಕವಾಯಿತು. ಕೃಷ್ಣ, ಬಹಳ ಚೆನ್ನಾಯಿತು. ದೇಶಸಂಚಾರದಲ್ಲಿ ಯಾವಪ್ರಯೋಜನವೂ ಇಲ್ಲವೆ. ಮೈಸೂರಲ್ಲಿ ವಿಶಾಲವಾದ ರಸ್ತೆಗಳೂ, ದೊಡ್ಡದಾದ ಮೂರ್ಕಟ್ಟು, ಇನ್ನೂ ದೊಡ್ಡ ದೊಡ್ಡ ಕಟ್ಟಡಗಳು ಇವುಗಳಿಗೆಲ್ಲಾ ದೇಶಸಂಚಾರನೇ ಕಾರಣವೆ—ದೇಶಸಂಚಾರ ಮಾಡೋಣದರಿಂದ ನಾನಾದೇಶಭಾಷೆ ಜನಗಳ ನಡೆನುಡಿ, ನಾಗರಿಕತೆ, ಇವೇ ಮೊದಲಾದ ವಿಶೇಷಸಂಗತಿಗಳನ್ನು ತಿಳಿದುಕೊಳ್ಳಬಹುದು. ರಾಜ್ಯಾಧಿಕಾರಿಗಳಿಗೂ ರಾಜ್ಯಾಧಿಕಾರಿಗಳಾಗತಕ್ಕವರಿಗೂ ದೇಶಸಂಚಾರವು ಅತ್ಯವಶ್ಯಕವು ಇದಲ್ಲದೆ, ದೇಶಸಂಚಾರ ಮಾಡಲಿಕ್ಕೆ ಹೊರಟಮೇಲೆ ದಾರಿಯಲ್ಲಿ ಆಗಾಗ್ಗೆ ಉಂಟಾಗಲಿಕ್ಕೆ ಅನಾನುಕೂಲಗಳನ್ನು ಸಹಿಸುವುದೂ, ಜಾಗರೂಕತೆಯೂ ಮನಸ್ಸಿನಲ್ಲಿ ಒಂದುವಿಧವಾದ ಧೈರ್ಯವೂ ಹೆಚ್ಚುವುದು. ದೇಶಸಂಚಾರಗಳು ಬಹು ದೂರದೇಶಗಳಿಂದ ಅಪರೂಪವಾದ ಸಸ್ಯಾದಿಗಳನ್ನೂ ಸ್ವದೇಶಕ್ಕೆ ತಂದು, ಬೆಳಸಿ ಅಭಿ

ವೃದ್ಧಿಪಡಿಸಿರುವುದನ್ನು ಕೇಳಿಲ್ಲವೆ. ಅಪರೂಪವಾದ ಮತ್ತು ಶ್ರೇಷ್ಠವಾದ ಗ್ರಂಥಗಳನ್ನು ಪರದೇಶದಿಂದ ತಂದು ಭಾಷಾಂತರಾದ್ಯುಪಾಯಗಳಿಂದ ಪ್ರಚುರಪಡಿಸಿರುವುದು ನಾವು ಕೇಳಿಲ್ಲವೆ. ದೇಶಕ್ಕೆ ಪರಸ್ಪರ ಸ್ನೇಹವೂ ವ್ಯಾಪಾರವೂ, ಅಭಿವೃದ್ಧಿಯೂ ಹ್ಯಾಗೆ ಉಂಟಾಗುತ್ತಿತ್ತು. ದೇಶಸಂಚಾರ ಮಾಡುವಾಗ ಇತರರನ್ನು ನೋಡೋಣದರಿಂದ ನಮ್ಮಗಳ ಮೌಢ್ಯವನ್ನು ತಕ್ಕಮಟ್ಟಿಗೆ ಹೋಗಲಾಡಿಸಿಕೊಳ್ಳುವೆವು ಅಲ್ಲದೆ ನಮಗೆ ಅನುಕೂಲವಾದ ವಿಶೇಷ ಅಂಶಗಳನ್ನು ಸ್ವೀಕರಿಸಿ ಆಚರಣೆಗೆ ತರುವೆವು. ದೇಶಸಂಚಾರದಿಂದ ನಮಗೆ ಆರೋಗ್ಯವುಂಟು.

ರಾಮ—ಈಗ ನಮಗೆ ಅಮ್ಮ ಅನುಕೂಲವೆಲ್ಲಿ ಇದೆ.

ರಾಮೆ—ಅದಕ್ಕಾಗಿಯೆ ನಾವು ನಮ್ಮ ದೇಶದಲ್ಲಿ ಅಥವಾ ನಮ್ಮ ಡಿಸ್ಟ್ರಿಕ್ಟ್ ನಮ್ಮ ತಾಲೂಕ್, ನಮ್ಮ ಹಳ್ಳಿಯ ಸುತ್ತುಮುತ್ತಲೂ ಇರುವ ಸಂಗತಿಗಳನ್ನಾದರೂ ಚೆನ್ನಾಗಿ ತಿಳಿದುಕೊಳ್ಳುವುದಕ್ಕೆ ಪ್ರಯತ್ನಪಡೋಣ. ದೂರದೇಶಕ್ಕೆ ಹೋಗಬೇಕೆಂಬವುದೇನೂ ಇಲ್ಲ. ಕೆಲವು ವಿದ್ಯಾರ್ಥಿಗಳು ನಡೆದುಕೊಂಡು ಪ್ರಯಾಣ ಹೊರಟು ತಮ್ಮ ತಮ್ಮ ದೇಶದ ಒಂದೊಂದು ಭಾಗವನ್ನು ಒಂದೊಂದಾವರ್ತಿ ನೋಡಿಕೊಂಡು ಬರುವೆವೆಂದು ಕೇಳಿದೇನೆ—ರೈಲಿನಲ್ಲಿಯೂ ಛಂಡಿಯಲ್ಲಿಯೂ ಪ್ರಯಾಣ ಮಾಡೋಣದರಿಂದ ಸೃಷ್ಟಿಯ ಚಮತ್ಕಾರವನ್ನು ನೋಡುವುದಕ್ಕೆ ವಿಶೇಷ ಅವಕಾಶವಿಲ್ಲವೆಂದು ಹೀಗೆ ನಡೆದುಕೊಂಡು ಹೊರಡುವರೆಂದು ನಾನು ಕೇಳಿದೇನೆ—ನಿಮ್ಮಗಳೆಲ್ಲರಿಗೂ ಇಷ್ಟವಾದರೆ ಹೀಗೆಮಾಡಬಹುದು. ಈಗ ಸುಮಾರು ಹನ್ನೆರಡುಘಂಟೆ ಸಮಯವಾಗಿರುವುದರಿಂದ ಬಹಳ ಹೊತ್ತಾಯಿತು ಈ ವಿಷಯವಾಗಿ ಪುನಃ ಚೆನ್ನಾಗಿ ಯೋಚಿಸಿ ಅನುಕೂಲ ಅನನುಕೂಲವನ್ನು ಚರ್ಚಿಸಿ ಯಾವದೂ ನಿಶ್ಚರ್ಷೆ ಮಾಡೋಣವೆಂಬುವುದು ನನ್ನ ಅಭಿಪ್ರಾಯ—ಇದಕ್ಕೆ ಸಮ್ಮತಿಸಿ ಹೊರಟುಹೋಗುವರು.

ಕಾಲ್ನಡಿಗೆಗಳ ಮೇವು ಮತ್ತು ನೀರು.

ನಮ್ಮ ದೇಶದ ಕಾಲ್ನಡಿಗೆಗಳು ಬದುಕಿರುವುದು ಹುಲ್ಲಿನಿಂದಲೇ ಹೊರತು

ತ್ತುಬ್ಯಾರೆ ಅಲ್ಲ. ಚೆನ್ನಾಗಿ ತಿನ್ನುವದಕ್ಕೆ ದನಗಳಿಗೆ ಅನುಕೂಲವಾಗುವಹಾಗೆ
ೀವನ್ನು ಸಣ್ಣಗೆ ಕತ್ತರಿಸಿ ಹಾಕಬೇಕು. ಕತ್ತರಿಸದೆ ಹಾಕಿದರೆ ಮೇವು ಹೆಚ್ಚಾಗಿ
ೀಕಾಗುವದಲ್ಲದೆ ನಷ್ಟವೂ ಆಗುವುದು. ಸಾಧ್ಯವಾದಮಟ್ಟಿಗೂ ದನಗಳಿಗೆ ಹಸೀ
ೀವು ಒಣಗಿದ ಮೇವು ಸೇರಿಸಿಕೊಟ್ಟರೆ ಬಹಳ ಉತ್ತಮ. ಕರೆಯುವ ದನಗಳಿಗೆ
ಸೀಮೇವೆ ಹಾಕಬೇಕು. ನಮ್ಮ ಸೀಮೆಯಲ್ಲಿ ದನಗಳನ್ನು ಎಚ್ಚರಿಕೆಯಿಂದ ನೋಡಿ
ಳ್ಳುವುದಿಲ್ಲ. ಅವುಗಳಕ್ಕೆ ಅವೇ ಹೋಗಿ ಹೊರಗೆ ಬೆಳೆದಿರತಕ್ಕ ಹುಲ್ಲನ್ನು
ರಿಸಿಕೊಂಡು ತಿನ್ನುತ್ತವೆ. ಬಿಸಿಲುಕಾಲದಲ್ಲಿ ಹೊಟ್ಟೆಗಿಲ್ಲದೆ ಸಾಯುತ್ತವೆ. ಹೀಗೆ
ಮಾಡುವುದು ಬಹಳ ಕ್ರೂರಕೆಲಸವಾಗಿದೆ. ಸುಗ್ಗೀಕಾಲದಲ್ಲಿ ಹುಲ್ಲನ್ನು ಕೂಡಿಸಿಟ್ಟು
ಕೊಳ್ಳಬೇಕು. ಹಸೀಹುಲ್ಲುಕಾಲದಲ್ಲಿ ದನಗಳಿಗೆ ಬಹಳ ಹಸೀಹುಲ್ಲು ಹಾಕಕೂಡದು.
ಹೆಚ್ಚಾಗಿ ಹಾಕಿದರೆ ಹೊಟ್ಟೆ ಊದಿಕೊಂಡು ತ್ರೊಂದರೆಯಾಗುವುದು. ಸಾಧಾರಣ
ವಾದ ಹುಲ್ಲು ಮೇವುಗಳಲ್ಲದೆ ಜೊಳ, ಹುರುಳಿ, ಕಡಲೆ, ಅವರೆ, ಹೆಸರು, ತೊಗರಿ
ಇವುಗಳ ಹೊಟ್ಟಾಗಲೀ, ಕಾಳೇ ಆಗಲೀ ಹಾಕಬೇಕು. ಕಾಳು ಹಾಕುವುದಕ್ಕೆ
ಮುಂಚಿತವಾಗಿ, ನೀರಲ್ಲಿ ನನೆಹಾಕಿಟ್ಟು, ಒರಳಿನಲ್ಲಿ ತಿರಿವಿ ಹಾಕಬೇಕು. ಹಿಂಡಿ
ಯನ್ನು ಹಾಕಬೇಕಾದರೆ ಅಕ್ಕಿತವುಡು ಜೊತೆಯಲ್ಲಿ ಸಣ್ಣ ಸಣ್ಣಗೆ ಚೂರುಮಾಡಿ ಸೇರಿ
ಸಬೇಕು. ಹಿಂಡಿಗಳಲ್ಲಿ ನೆಲಗಡಲೆಯ ಹಿಂಡಿಯು ಬಹಳ ಒಳ್ಳೇದು. ನೆಲಗಡಲೆಯ
ಹಿಂಡಿ ಒಂದನ್ನೇ ತಿನ್ನಿಸಿದರೆ ನರಡಿ (Splenic Apoplexy) ಎಂಬ ರೋಗ
ಬರುವುದೆಂದು ಹೇಳುತ್ತಾರೆ. ಆದ್ದರಿಂದ ಯಾವುದಾದರೂ ಒಂದುವಿಧವಾದ ಹೊಟ್ಟನ್ನು
ಸಂಗಡ ಬೆರಸಿ ತಿನ್ನಿಸಬೇಕು. ಈ ಹಿಂಡಿಗೆ ಎರಡನೆಯದು ಎಳ್ಳು ಹಿಂಡಿ. ಕೊಪ್ಪ
ರಿಹಿಂಡಿ ಇವೆರಡಕ್ಕಿಂತಲೂ ಕಡಮೆಯಾದ ಮೇವು. ಹಿಂಡಿಯನ್ನು ನೀರಲ್ಲಿ ನನೆಸಿ
ಕೊಡುವುದೂ ಉಂಟು. ಮೇವಿನ ಜೊತೆಯಲ್ಲಿ ನಿತ್ಯವೂ ೨—೩ ತೊಲ ಉಪ್ಪನ್ನು
ಸೇರಿಸಿ ಕೊಡಬೇಕು. ಉಪ್ಪು ಹಸಿವೆ ಉಂಟುಮಾಡುವುದಲ್ಲದೆ ಹೊಟ್ಟೆಯಲ್ಲಿರುವ
ಕ್ರಿಮಿಗಳನ್ನು ನಾಶಮಾಡುತ್ತೆ. ಮತ್ತು ರಕ್ತಶುದ್ಧಿಯಾಗುವುದು ಆಹಾರ ಹಾಕಬೆ
ಕಾದರೆ ಕ್ರಮವಾಗಿ ಹಾಕಬೇಕು. ಆಹಾರವನ್ನು ಮೂರುಭಾಗ ಮಾಡಿ ದಿವಸಕೆ
ಮೂರುಹೊತ್ತು ಹಾಕಬೇಕು ಹೊಸ ಆಹಾರ ಕೊಡಬೇಕಾದರೆ ಒಡನೆ ಕೊಡಬ
ರದು ಕ್ರಮೇಣ ಕೊಡಬೇಕು. ಈ ಕೆಳಗೆ ಪಟ್ಟಿಯಲ್ಲಿ ತೋರಿಸುವ ಮೇರೆಗೆ ಆಯಾಯ
ಕಾಲ್ನಡೆಗೆ ಆಹಾರಗಳನ್ನು ಕೊಡುವುದು.

ಆಹಾರಗಳು	ಕೆಲಸ ಮಾಡತಕ್ಕ ಕಾಲ್ನಡೆ	ಹಸುಗಳು	ಹೋರಿಗಳು	ಕರುಗಳು	ಎಳೇ ಕರುಗಳು
ಒಂದು ದಿವಸಕ್ಕೆ ೧ ಕಾಲ್ನಡೆಗೆ					
ಹಿಂಡಿ	6 ಸೇರು	6 ಸೇರು	5 ಸೇರು	1 ಸೇರು	$\frac{1}{2}$ ಸೇರು
ಅಕ್ಕಿ ತವುಡು	ಇಲ್ಲ	1 ಸೇರು	ಇಲ್ಲ	1 ಪಾವು	$\frac{1}{2}$ ಪಾವು
ಹೊಟ್ಟು	3 ಸೇರು	3 ಸೇರು	3 ಸೇರು	$\frac{1}{2}$ ಸೇರು	ಇಲ್ಲ
ಹಸಿ ಹುಲ್ಲು	$\frac{1}{2}$ ಮಣ	$1\frac{1}{2}$ ಮಣ	1 ಮಣ	$\frac{3}{4}$ ಮಣ	$\frac{1}{4}$ ಮಣ
ಒಣ ಹುಲ್ಲು	$1\frac{1}{2}$ ಮಣ	ಇಲ್ಲ	ಇಲ್ಲ	ಇಲ್ಲ	ಇಲ್ಲ
ಉಪ್ಪು	5 ತೊಲ	8 ತೊಲ	3 ತೊಲ	3 ತೊಲ	1 ತೊಲ

ಇನ್ನು ಇದಕ್ಕಿಂತಲೂ ಒಳ್ಳೇ ಆಹಾರವನ್ನು ಕೊಡಬೇಕಾದರೆ ಈ ಕೆಳಗೆ ವಿವರಿಸುವ ರೀತಿ ಕೊಡಬಹುದು.

ಕೆಲಸ ಮಾಡತಕ್ಕ ದನಗಳಿಗೆ ದಿವಸ ಒಂದಕ್ಕೆ ಬಿಗಿದಹುಲ್ಲು $1\frac{1}{4}$ ಮಣ, ಕಡಲೆ $1\frac{1}{2}$ ಸೇರು, ಹಿಂಡಿ 6 ಸೇರು, ಹಸೀಹುಲ್ಲು $\frac{3}{4}$ ಮಣ.

ಕರೆಯುವ ದನಗಳಿಗೆ ದಿವಸ ಒಂದಕ್ಕೆ (1) ಹುಚ್ಚೆಳ್ಳುಹಿಂಡಿ 8 ಸೇರು, ಹಸಿಹುಲ್ಲು $1\frac{1}{4}$ ಮಣ, ತವುಡು 1 ಸೇರು, ಒಣಹುಲ್ಲು $\frac{1}{4}$ ಮಣ, (2) ಹತ್ತಿಯಬೀಜ 6 ಸೇರು, ಹಿಂಡಿ $1\frac{1}{3}$ ಸೇರು, ಹಸಿಹುಲ್ಲು 2 ಮಣ.

ಕರೆಯದ ದನಗಳಿಗೆ ದಿವಸ ಒಂದಕ್ಕೆ ಅವರೆ 1 ಸೇರು, ಹಿಂಡಿ 1 ಸೇರು, ತವುಡು 2 ಸೇರು, ಒಣಗಿದಹುಲ್ಲು 1 ಮಣ, ಹಸಿಹುಲ್ಲು $\frac{1}{4}$ ಮಣ.

ಬೆಳೆಯತಕ್ಕ ದನಗಳಿಗೆ 1 ಭಾಗ ಸಾರಜನಕವು 5 ಭಾಗ ಸಕ್ಕರೆ ಪಿಷ್ಟಾದಿಗಳಿರಬೇಕು.

ಸಾಧಾರಣ ಎತ್ತಿಗೆ	1 ಸಾರಜನಕ	14 ಭಾಗ ಡಿಟೊ
ಡಿಟೊ ಕುರಿಗೆ	1 ಡಿಟೊ	12 ಡಿಟೊ
ಕೊಬ್ಬಿಸುವ ಕುರಿಗೆ	1 ಡಿಟೊ	9 ಡಿಟೊ
ಡಿಟೊ ಎತ್ತಿಗೆ	1 ಡಿಟೊ	10 ಡಿಟೊ
ಕರೆಯುವ ಹಸುವಿಗೆ	1 ಡಿಟೊ	6 ಡಿಟೊ
ಡಿಟೊ ಎಮ್ಮೆಗೆ	1 ಡಿಟೊ	5 ಡಿಟೊ

ಕಾಲ್ನಡೆಗಳ ನೀರಿನ ವಿಷಯದಲ್ಲಿ ಬಹಳ ಯೋಚನೆ ವಹಿಸಬೇಕು. ಇಲ್ಲದಿದ್ದರೆ ಅನೇಕ ರೋಗಾದಿಗಳು ನೀರಿನಿಂದಲೇ ಉಂಟಾಗುತ್ತವೆ. ದನಗಳು ನೀರು

ಕುಡಿಯಲಿಕ್ಕೆ ಕೆರೆಯಾಗಲೀ, ನದಿಯಾಗಲೀ ಇದ್ದರೆ ಒಳ್ಳೇದು. ಯಾಕಂದರೆ ತಮ್ಮ ಮನಸ್ಸು ಬಂದಂತೆ ಹೋಗಿ ತಮ್ಮ ಇಷ್ಟಪ್ರಕಾರ ತೃಪ್ತಿ ಆಗುವಷ್ಟು ಕುಡಿಯುತ್ತವೆ. ಆದರೆ ನೀರನ್ನು ರಾಡಿ ಮಾಡದಹಾಗೆ ನೋಡಿಕೊಳ್ಳಬೇಕು. ಕುಡಿಯುವ ನೀರಲ್ಲಿ ಸ್ನಾನ ಮಾಡಬಾರದು; ಬಟ್ಟೆ ಒಗೆಯಬಾರದು; ಆಡಿಗೆ ಮಾಡಿದ ಪಾತ್ರೆಗಳನ್ನು ತೊಳೆಯಕೂಡದು. ನೀರುಭಾವಿಗಳಲ್ಲಿದಿದ್ದರೆ ಪಕ್ಕದಲ್ಲಿ ಗಾರೇತೊಟ್ಟಿಗಳನ್ನು ಮಾಡಿ ಸೇದಿಹಾಕಿಬಿಟ್ಟರೆ ಅವುಗಳಿಗೆ ಇಷ್ಟಬಂದಾಗ ಕುಡಿಯುತ್ತವೆ. ಈ ತೊಟ್ಟಿಗಳನ್ನು ಎರಡು ದಿವಸಗಳಿಗೊಂದಾವರ್ತಿ ತೊಳೆದು ನೀರು ತುಂಬಿಸಬೇಕು. ನಿಂತ ನೀರಿಗಿಂತ ಭಾವಿಯ ನೀರು ಬಹಳ ಆರೋಗ್ಯವಾದದ್ದು. ಜಾಡ್ಯಗಳಿಗೆ ಪೂರಾ ಕೊಡುವುದಿಲ್ಲ. ಉಪ್ಪುನೀರನ್ನು ಕುಡಿಸಬಾರದು. ಸಾಧ್ಯವಾದಮಟ್ಟಿಗೂ ಸೀನೀರನ್ನೇ ಕುಡಿಸಬೇಕು.

ಕರೆಯುವ ದನಗಳ ಆಹಾರ ಉಪಚಾರಗಳು;—ಒಂದು ಆಕಳಿನಿಂದ ದಿವಸಕ್ಕೆರಡಾವರ್ತಿ ಹಾಲು ಕರೆಯಬೇಕು. ಯಾಕಂದರೆ ಕೆಚ್ಚಲಲ್ಲಿ ಬಹಳ ಹಾಲು ತುಂಬಿಕೊಂಡು ಬಾಧೆಗಳುಂಟಾಗುವವು. ಮತ್ತು ಹಾಲನ್ನು ಚೆನ್ನಾಗಿ ಕರೆಯದೆ ನಿಲ್ಲಿಸಬಿಟ್ಟರೆ ದಿನದಿನಕ್ಕೆ ಹಾಲು ಕಡಮೆಯಾಗಿ ಕೊಡುವುದು. ಕರೆಯುವ ದನಗಳನ್ನು ನಿತ್ಯವೂ ತೊಳೆಯಬೇಕು. ಕೆಚ್ಚಲಿಗೆ ಉಣ್ಣೆ ಮುಂತಾದ ಕ್ರಿಮಿಗಳು ಹತ್ತದಹಾಗೆ ನೋಡಿಕೊಳ್ಳಬೇಕು. ಆಹಾರವಿಷಯಗಳಲ್ಲಿ ಬಹಳ ಜಾಗರೂಕರಾಗಿರಬೇಕು. ಹೊರಗೆ ಬಿಟ್ಟು ಮೇಯಿಸುವದರಿಂದ ಮನಸ್ಸಿಗೆ ಬಂದಂತೆ ಕೆಟ್ಟ ಸೊಪ್ಪುಗಳನ್ನು ಮೇದು ರೋಗಾದಿಗಳುಂಟಾಗಿ ಹಾಲು ಕೆಡುವುದಲ್ಲದೆ ಬತ್ತಿಹೋಗುವುದು. ಹೀಗೆ ಕೆಟ್ಟ ಹಾಲನ್ನು ಮನುಷ್ಯರು ಕುಡಿಯುವುದರಿಂದ ಅನೇಕ ರೋಗಗಳು ಬಂದು ಸತ್ತಿದಾರೆ. ಕರಾವಿನ ದನಗಳಿಗೆ ಆಹಾರವೇ ಮುಖ್ಯವಾಗಿರುವುದರಿಂದ ಅವುಗಳನ್ನು ಸ್ವಲ್ಪ ವಿವರಿಸುವುದು ಅವಶ್ಯವೆಂದು ತೋರುವುದು. ಕರಾವಿನ ದನಗಳಿಗೆ ಕೊಡತಕ್ಕ ಮುಖ್ಯವಾದ ಆಹಾರಗಳ್ಯಾವವೆಂದರೆ:—ಹತ್ತಿಯ ಬೀಜ, ಹಿಂಡಿಗಳು, ತೊಗರಿ ಅವರೆ ಮುಂತಾದ ದ್ವಿದಳಗಳ ಹೊಟ್ಟು, ಅಕ್ಕೀತವುಡು, ಅವರೇಕಾಳು, ಹುರುಳೀಕಾಳು ಮತ್ತು ಅಕ್ಕೀತೊಳೆದ ನೀರು ಗಂಜಿ ಸಹ.

ಹತ್ತಿಯ ಬೀಜ ಕೊಡಬೇಕಾದರೆ ನಗೆಸು, ತಿರಿವಿ ಹೊಟ್ಟಿನ ಸಂಗಡ ಸೇರಿಸಿ ಕೊಡಬೇಕು. ಬರೀ ಬೀಜವನ್ನೇ ಕೊಡುವುದಾದರೆ ದಿವಸ ಒಂದಕ್ಕೆ ೫ ಸೇರು ಸಾಕು.

ಹಿಂಡಿ, ಹೊಟ್ಟಿನ ಜೊತೆಯಲ್ಲಿ ಕೊಟ್ಟರೆ ೩ ಸೇರು ಸಾಕಾಗಿರುವುದು. ಹತ್ತಿಯ ಬೀಜದಲ್ಲಿ ರಂಜಕ, ಮೇದಸ್ಸು, ಹೆಚ್ಚಾಗಿರುವುದರಿಂದ ಬಹಳ ಬಲವಾದ ಆಹಾರವಾಗಿರುತ್ತೆ. ಹತ್ತಿಯ ಬೀಜದಿಂದ ಹಾಲು ಹೆಚ್ಚುವುದು.

ಹಿಂಡಿಗಳಲ್ಲಿ ಎಳ್ಳುಹಿಂಡಿ, ನೆಲಗಡಲೆಹಿಂಡಿ, ಕೊಬರಿಹಿಂಡಿ ಇವುಗಳನ್ನೇ ಕರಾವಿನ ದನಗಳಿಗೆ ಹಾಕುವುದು. ಎಳ್ಳುಹಿಂಡಿ ಸಿಕ್ಕಿದರೂ ಬಹಳ ಜಿಲೆಯಾದದ್ದು. ನೆಲಗಡಲೆಹಿಂಡಿ ಬಹಳ ಒಳ್ಳೇದು; ಸಿಕ್ಕುವುದು ಸ್ವಲ್ಪ ಕಷ್ಟ. ಹಿಂಡಿಗಳೆಲ್ಲಾ ದೇಹರಚನೆಗಳನ್ನು ಬಲಮಾಡುವುದಕ್ಕೂ, ವೃದ್ಧಿಪಡಿಸುವುದಕ್ಕೂ, ರಕ್ತನನ್ನು ಶುದ್ಧಿಮಾಡಿ ಹೆಚ್ಚಾದ ಮತ್ತು ಉತ್ತಮವಾದ ಪದಾರ್ಥಗಳಿಂದ ಹಾಲು ಮಾಡುವುದಕ್ಕೂ, ಬಹಳ ಒಳ್ಳೇವುಗಳಾಗಿವೆ. ಕೊಬರಿಹಿಂಡಿ ಹಾಲನ್ನು ಹೆಚ್ಚಿಸುವುದು. ಆದರೆ ಹಾಲಿನ ಗುಣ ನೀರಾಗಿಯೂ ಸತ್ವವಿಲ್ಲದ್ದಾಗಿಯೂ ಇರುವುದು. ಹಿಂಡಿ ಬಹಳವಾಗಿ ಕೊಡುವುದರಿಂದ ಬೆಣ್ಣೆ ಗಡಸಾಗುವುದಿಲ್ಲ. ಮತ್ತು ಹಾಲು ೧೨ ಗಂಟೆಗಳಮೇಲೆ ನಿಲ್ಲುವುದಿಲ್ಲ ಕೆಟ್ಟುಹೋಗುವುದು. ಬೆಣ್ಣೆ ಹೆಚ್ಚಾಗುವುದಕ್ಕೆ ಕೊಬರಿಹಿಂಡಿ, ನೆಲಗಡಲೆಹಿಂಡಿ ಹತ್ತಿಯಬೀಜ, ಮೂರನ್ನು ಸಮಭಾಗವಾಗಿ ಸೇರಿಸಿಕೊಡಬೇಕು. ಎಳ್ಳುಹಿಂಡಿ ಹಾಕುವುದರಿಂದ ಹಾಲು ಹೆಚ್ಚುವುದು. ಆದರೆ ಬೆಣ್ಣೆ ಕಡಮೆಯಾಗುವುದು.

ತೊಗರಿ ಮುಂತಾದ ದ್ವಿದಳಗಳ ಹೊಟ್ಟುಗಳಲ್ಲಿ ಅನೇಕ ರಂಜಿಕ ಸಾರಜನಕ ಧಾತುಗಳು (Phosphates Nitrates) ಇರುವುದರಿಂದ ಮಾಂಸವೃದ್ಧಿಗೆ ಬಹಳ ಅನುಕೂಲವಾದವುಗಳು. ಹೊಟ್ಟನ್ನು ನೆನೆಯಿಸಿ ಕೊಟ್ಟರೆ ಬಹಳ ಉತ್ತಮ. ತವುಡಿನಲ್ಲಿಯೂ ಇದೇ ಗುಣಗಳಿರುತ್ತವೆ. ಎಲಚಿ ಎಲೆಗಳನ್ನು ಒಣಗಿಸಿ ಹುರಿದು ಕೊಟ್ಟರೆ ಬೆಣ್ಣೆಯಲ್ಲಿ ಗಮ್ಮು ಇಲ್ಲದೆ ತುಪ್ಪ ಹೆಚ್ಚುವುದು. ಹಸೀಗೋಧಿ, ಸಾಸುವೇಗಿಡ, ಮುಸುಗಿನ ಜೋಳ, ಸಾಧಾರಣ ಜೋಳ ತೆನೆ ಬಿಡುವುದಕ್ಕೆ ಮುಂಚೆ ಕುಯಿದುಕೊಟ್ಟರೆ ಹಾಲು ಹೆಚ್ಚಾಗುವುದು. ಕರುಹಾಕಿದ ಹಸುಗಳಲ್ಲಿ ಹಾಲು ಕಡಮೆಯಾಗಿದ್ದರೆ, ಬೇಕಾಕಿ ಗೋಧಿ ಗಂಜಿಮಾಡಿ ಕೊಡುವುದರಿಂದ ಹಾಲು ಹೆಚ್ಚುವುದು.

ಕೆ. ಶೇಷಾದ್ರಿಯ್ಯಂಗಾರ್,
ನಾರ್ಮಲ್‌ಸ್ಕೂಲ್, ಮೈಸೂರು



ನೀರ್ಗುದುರೆ.

ಇಂಗ್ಲಿಷ್ ಭಾಷೆಯಲ್ಲಿ ಈ ಮೃಗಕ್ಕೆ "ಹಿಪ್ಪೊಪಾಟಮಸ್" ಎಂದು ಹಸರು. ಹಿಪ್ಪೊಪಾಟಮಸ್ ಎಂದರೆ ನೀರುಕುದುರೆ ಎಂದರ್ಥವು. ನಮ್ಮಲ್ಲಿ ಕೆಲವರು ಇದನ್ನು ನೀರಾನೆ ಎಂದು ಕರೆಯುವರು. ಆದರೆ ನೀರ್ಗುದುರೆ ಎನ್ನುವದು ಸರಿಯೂಗಿ ನಮಗೆ ತೋರುವದಾದುದರಿಂದ ಈಹೆಸರನ್ನೇ ಇಲ್ಲಿ ಉಪಯೋಗಿಸಿರುವೆವು.

ಅದ್ಭುತಾಕಾರವುಳ್ಳ ಈ ಪ್ರಾಣಿಯು ಆಫ್ರಿಕಾಖಂಡದ ನಿವಾಸಿಯು. ಮತ್ತೆಲ್ಲಿಯೂ ಈಗ ಸಿಕ್ಕುವದಿಲ್ಲ. ಯುರೋಪ್‌ಖಂಡದಲ್ಲಿ ಭೂಮಿಯೊಳಗೆ ಇದರ ಮೂಳೆಗಳು ಸಿಕ್ಕುವದರಿಂದ ಒಂದಾನೊಂದು ಕಾಲದಲ್ಲಿ ಅದು ಅಲ್ಲಿನ ನದಿಗಳಲ್ಲಿತ್ತೆಂದು ತಿಳಿಯಬಹುದು.

ಇದು ಯಾವಾಗಲೂ ನೀರಿನಲ್ಲಾಗಲೀ ಅದರ ಸಮೀಪದಲ್ಲಾಗಲೀ ವಾಸವಾಗಿರುವದು. ಕಾಲುಗಳು ಬಹುಗಿಡ್ಡಗಿರುವದರಿಂದ ಎತ್ತರವು ಕಡಮೆ. ಚೆನ್ನಾಗಿ ಬೆಳೆದ ನೀರ್ಗುದುರೆಯ ಎತ್ತರವು ಐದುಅಡಿ. ಇದರ ಬಣ್ಣವು ಕಂದು. ಮೇಲೆಲ್ಲ ಗೀರುಗಳಿರುವವು. ಹತ್ತಿರ ನೋಡಿದರೆ ಇಲ್ಲಣದಬಣ್ಣದ ಚುಕ್ಕಿಗಳಿರುವವು. ಚರ್ಮದ ಮೇಲೆಲ್ಲ ಅತ್ಯಂತಸೂಕ್ಷ್ಮವಾದ ರಂಧ್ರಗಳಿವೆ. ಇವುಗಳಿಂದ ಎಣ್ಣೆಯಂತಿರುವ ಒಂದುಬಗೆ

ದ್ರವವು ಹೊರಟು ಚರ್ಮದಮೇಲೆಲ್ಲ ಹರಡಿಕೊಳ್ಳುವದು. ಈ ಪ್ರಾಣಿಯು ಯಾವಾಗಲೂ ನೀರಿನಲ್ಲಿರುವದರಿಂದ ನೀರಿನಿಂದುಂಟಾಗುವ ಅಪಾಯವನ್ನು ತಪ್ಪಿಸಿಕೊಳ್ಳುವದಕ್ಕೆ ಇದು ಬಹು ಸಹಕಾರಿಯಾಗಿದೆ ಬಾಯಿ ಬಹುದೊಡ್ಡದು. ದವಡೆಯ ರಚನೆಯು ವಿಚಿತ್ರವಾಗಿರುವದರಿಂದ ಇದರ ಬಾಯಿಯು ಮತ್ತಿಷ್ಟು ದೊಡ್ಡದಾಗಿ ಕಾಣುವದು.

ಬಾಯೊಳಗೆ ಬಿಳಿಗೆ ಹೊಳೆಯುತ್ತಿರುವ ಕೋರೆಹಲ್ಲುಗಳ ಸಮುದಾಯವಿರುವದು. ನೋಡುವದಕ್ಕೆ ಇದು ಭಯಂಕರವಾಗಿ ಕಾಣುವದು. ಆದರೆ ಹುಲ್ಲು ಸೊಪ್ಪು ವೊದಲಾದವನ್ನು ಕೀಳುವದಕ್ಕಲ್ಲದೆ ಮತ್ತೊಬ್ಬರನ್ನು ಬಾಧಿಸುವದಕ್ಕೆ ಅವನ್ನು ಉಪಯೋಗಿಸುವದಿಲ್ಲ ಇದರ ಒಂದೊಂದುಹಲ್ಲು ಹತ್ತುಸೇರುವೊದಲೊಂಡು ಹದಿನಾಲ್ಕು ಸೇರುಗಳ ವರೆಗೆ ತೂಗುವದು. ಬೆಲೆಯು ನೂರರಿಂದ ನೂರೈವತ್ತು ರೂಪಾಯಿಗಳಾಗುವುದು. ಇಂತಾ ಹಲ್ಲುಗಳಿಂದ ಹುಲ್ಲನ್ನು ಕುಡುಗೋಲಿನಿಂದ ಕತ್ತರಿಸುವಂತೆ ಕತ್ತರಿಸಬಲ್ಲದು ; ದೊಡ್ಡಕೊಂಬೆಗಳನ್ನೂ ಕಡಿಯಬಲ್ಲದು.

ಇದರ ಹೊಟ್ಟೆಯು ಬಹುದೊಡ್ಡದು ಎಷ್ಟುತಿಂದರೂ ಇದಕ್ಕೆ ತೃಪ್ತಿಯೂಗವದಿಲ್ಲ. ಇವು ವಾಸಮಾಡುವ ನದಿಗಳಸವಿಪದಲ್ಲಿರುವ ಗದ್ದೆಗಳ ಮಾಲೀಕರಿಗೆ ಇವುಗಳಿಂದಾಗುವ ನಷ್ಟವು ಅಷ್ಟಿಷ್ಟೆಂದು ಹೇಳಲಸಾಧ್ಯವು ಇದರ ಅಂಗವು ಅಗಾಧವಾಗಿಯೂ ತೂಕವಾಗಿಯೂ ಇರುವೆದಲ್ಲದೆ ಕಾಲುಗಳು ಗಿಡ್ಡಾಗಿರುವದರಿಂದ ವಕ್ರವಕ್ರವಾಗಿ ನಡೆದು ಪೈರುಗಳನ್ನು ತುಳಿದು ಧ್ವಂಸಮಾಡುವದು.

ನೀರ್ನಾಯಿಯು ನೀರಿನಲ್ಲಿಯೇ ಯಾವಾಗಲೂ ವಾಸಿಸುವದು. ಆಹಾರವನ್ನು ಹುಡುಕುವದಕ್ಕೆ ಮಾತ್ರ ಹೊರಗೆಬರುವದು. ಸೀನೀರನ್ನು ಕಂಡರೆ ಪ್ರೀತಿ ಹೆಚ್ಚು, ಆದರೆ ಉಪ್ಪುನೀರಿಗೆ ಅಸಹ್ಯವಿಲ್ಲ. ಚೆನ್ನಾಗಿ ಈಜಬಲ್ಲದು. ನೀರಿನೊಳಗೆ ಬಹಳಹೊತ್ತಿನವರೆಗೆ ಇರುವದು. ಅನೆಯಂತೆ ಬೇಕಾದಾಗ ನೀರೊಳಗೆ ಮುಳುಗುವ ಶಕ್ತಿಯು ಇದಕ್ಕಿರುವದು. ಸುಳಿ, ಮೆತ್ತು ಹೆಚ್ಚುಪ್ರವಾಹವಿಲ್ಲದ ಸ್ಥಳಗಳನ್ನೇ ಹುಡುಕುವದು. ಇವು ಯಾವಾಗಲೂ ಹಿಂಡುಹಿಂಡುನಲ್ಲಿರುವವು. ಸಾಮಾನ್ಯವಾಗಿ ಒಂದುಗುಂಪಿನಲ್ಲಿ ಇಪ್ಪತ್ತರಿಂದ ಮೂವತ್ತರವರೆಗಿರುವವು. ಇದರ ಕೂಗು ಭೀತ್ಯೋತ್ಪಾದಕವಾಗಿಯೂ ವಿಚಿತ್ರವಾಗಿಯೂ ಇರುವದು. ಯಾವಾಗಲೂ ಕೇಳದ ಇದ್ದವರಿಗೆ ಭಯಂಕರವಾಗಿರುವದು.

ಇದು ಸಾಮಾನ್ಯವಾಗಿ ಒಬ್ಬರಗೋಜಿಗೆ ಹೋಗತಕ್ಕದ್ದಲ್ಲ ನೀರಿನಲ್ಲಿರು

ವಾಗ ಯಾರಾದರೂ ಕೆಣಕಿದರೆ ಕೋಪದಿಂದ ತಿವಿಯುವದಕ್ಕೆ ಹೋಗುವದು.

ಈ ಮೃಗವನ್ನು ಹಿಡಿಯುವದಕ್ಕೆ ಅನೇಕ ಉಪಾಯಗಳುಂಟು. ಗದ್ದೆಗಳ ಎಜಮಾನರು ಇವು ಸಂಚರಿಸುವ ಮಾರ್ಗಗಳಲ್ಲಿ ದೊಡ್ಡಹಳ್ಳಗಳನ್ನು ತೋಡಿ ಹರಿತವಾದ ಗೂಟಗಳನ್ನು ಸಿಕ್ಕಿಸುವರು. ಇವು ಹಳ್ಳದೊಳಕ್ಕೆ ಮುಗ್ಗರಿಸಿಕೊಂಡು ಬಿದ್ದು ಹರಿತವಾದ ಗೂಟಗಳಿಂದ ಗಾಯವನ್ನು ಹೊಂದುವವು. ದೊಡ್ಡದಾದ ತೊಲೆಯು ಒಂದುಕಡೆಯಲ್ಲಿ ಭಾರವಾದ ತೂಕವನ್ನಿಟ್ಟು, ವಿಷವನ್ನುಳ್ಳ ಒಂದು ಭರ್ಜಿಯನ್ನು ಅದಕ್ಕೆ ಸಡಿಲವಾಗಿ ಸಿಕ್ಕಿಸುವರು. ಇಂಥಾ ತೊಲೆಯನ್ನು ಈ ಮೃಗವು ಸಂಚರಿಸುವಮಾರ್ಗದಲ್ಲಿ ತೂಗಹಾಕುವರು. ಒಂದು ದಾರವು ಇದನ್ನು ಸಮನಾಗಿಟ್ಟಿರುವದು. ಇದು ಒಂದು ಕೊಕ್ಕಿಗೆ ಸೇರಿಸಲ್ಪಟ್ಟಿರುತ್ತೆ. ದಾರದ ಒಂದು ಕೊನೆಯು ಭೂಮಿಯಲ್ಲಿರುತ್ತೆ. ಮೃಗವು ದಾರವನ್ನು ತುಳಿಯುತ್ತಲೆ ಕೊಕ್ಕೆಯು ಬಿಡುಗಡೆಯಾಗಿ, ತೊಲೆಯು ರಭಸದಿಂದ ಪ್ರಾಣಿಯಮೇಲೆ ಬೀಳುವದು. ವಿಷಭರಿತವಾದ ಭರ್ಜಿಯು ಮೃಗದ ಬೆನ್ನಿನಲ್ಲಿ ಚುಚ್ಚಿಕೊಳ್ಳುವದು. ವಿಷ ಮತ್ತು ಗಾಯಗಳಿಂದ ಮೃಗವು ಬೇಗನೆ ಸಾಯುವದು. ಯೂರೋಪಿಯರ್ ಜನರು ಬಂದೂಕಿನಿಂದ ಶಿಕಾರಿಮಾಡುವರು. ಆದರೆ ಇದರ ಚರ್ಮವು ಅತ್ಯಂತ ಒರಟಾಗಿರುವದರಿಂದ ಇದು ಸುಲಭವಾಗಿ ಸಾಯುವದಿಲ್ಲ. ಏಟುಬೀಳುತ್ತಲೇ ನೀರೊಳಗೆ ಮುಳುಗಿಕೊಳ್ಳುವದು. ಒಂದಾವೃತ್ತಿ ಏಟು ತಿನ್ನುತ್ತಲೇ ಹುಚ್ಚಾರಾಗುವದು. ಸಾಮಾನ್ಯವಾಗಿ ಮೂಗಿನಮೇಲೆ ಹೊಡೆದರೆ ಶ್ವಾಸಬಿಡುವದಕ್ಕಾಗದೆ ನೀರಿಂದೀಚೆಗೆ ತಲೆ ಹಾಕುವದು. ಆಗ ಅದನ್ನು ಹೊಡೆದು ಕೊಲ್ಲಬಹುದು. ತಿಮಿಂಗಿಲವನ್ನು ಶಿಕಾರಿ ಮಾಡುವಂತೆ ದೋಣಿಗಳಲ್ಲಿ ಹೋಗಿ ಉದ್ದವಾದ ಹಾರ್ಪೂನ್ ಎಂಬ ಭರ್ಜಿಗಳಿಂದ ಇದನ್ನು ಕೊಲ್ಲುವದುಂಟು.

ಇದರ ಮಾಂಸವು ಅಲ್ಲಿನ ಕಾಡುಜನರಿಗೆ ರುಚಿಕರವಾಗಿರುವದು. ಕಮ್ಮಿಗಳನ್ನೂ ಇತರ ಆಯುಧಗಳನ್ನೂ ಮಾಡುವದರಲ್ಲಿ ಇದರ ಚರ್ಮವು ಪ್ರಯೋಜನಕರವು. ಇದರ ಕೊಬ್ಬು, ನಾಲಗೆ ಮೊದಲಾದವನ್ನು ಆಹಾರವಾಗಿ ಉಪಯೋಗಿಸುವರು. ಕಾಲನ್ನು ಬೇಯಿಸಿ ಜೆಲ್ಲಿ ಎಂಬ ಮುರಬ್ಬವನ್ನು ಮಾಡುವರು. ಇದರ ಹಲ್ಲುಗಳನ್ನು ಅನೆಯುದಂತದಂತೆ ಉಪಯೋಗಿಸುವರು. ಅದರಿಂದ ಶಾಸ್ತ್ರಸಂಬಂಧವಾದ ಅನೇಕ ಉಪಕರಣಗಳನ್ನು ಮಾಡುವರು.

ಉಪಾಧ್ಯಾಯಸಂಘ.

ಈ ಸಂಘವು ಕಳೆದ ೧೬ನೆ ಇಸವಿ ಜನವರಿ ತಿಂಗಳ ಆದಿಯಲ್ಲಿ ಪ್ರಾರಂಭನಾಯಿತೆಂಬುದು ತಮ್ಮಗಳ ಕಿವಿಯವರೆಗೂ ಮುಟ್ಟಿರಬಹುದು ಆದರೆ ಅಗಲೇ ಪ್ರಾರಂಭವಾದ್ದರಿಂದಲೂ, ಈ ಸಂಘದ ಉದ್ದೇಶವೇ ಕೆಲವು ಜನ ಉಪಾಧ್ಯಾಯರಿಗೆ ಗೊತ್ತಿಲ್ಲದಿರುವದರಿಂದಲೂ ಈ ಡಿಸ್ಟ್ರಿಕ್ಟ್ ಉಪಾಧ್ಯಾಯರುಗಳಲ್ಲಿಕೆ ೪೦ ಜನಗಳು ಮಾತ್ರ ಬಂದಿದ್ದರು, ಈಚಿಗೆ ಉಪಾಧ್ಯಾಯಸಂಘದಿಂದ ಪ್ರಯೋಜನವಿರುವದೆಂದು ಅಯೂತಾಲ್ಲೋಕು ಹೆಡ್ಮಾಸ್ಟರಿಂದ ಬೋಧಿಸಲ್ಪಟ್ಟ ಇತರ ಉಪಾಧ್ಯಾಯರು ಕಳೆದವರ್ಷಕ್ಕಿಂತಲೂ ಈ ವರ್ಷದಲ್ಲಿ ಸುಮಾರು ೬೦ ಜನದ ಮಟ್ಟಿಗೆ ಹೆಚ್ಚಾಗಿ ಬಂದಿದ್ದರು ಅಲ್ಲದೆ ಕೆಲವರು ಬರಲು ತಮ್ಮ ತೊಂದರೆಯನ್ನು ಕುರಿತು ಕಮಿಟ್ಟಿಯ ಸೆಕ್ರಟೆರಿಗಳಿಗೆ ಕಾಗದ ಬರೆದಿದ್ದರು. ಮತ್ತು ಇತರ ಡಿಸ್ಟ್ರಿಕ್ಟ್ ಮೂಸ್ಟರುಗಳು ವಿದ್ಯಾಭಿಮಾನಿಗಳು ಇತರ ದೊಡ್ಡಮನುಷ್ಯರು ಸಹಾ ದಯಮಾಡಿ ಸಭೆಯನ್ನು ಅಲಂಕರಿಸಿದ್ದರು.

ಈ ಸಭೆಗೆ ವಿದ್ಯಾಭಿಮಾನಿಗಳಾದ ಕೆಲವು ದೊಡ್ಡಮನುಷ್ಯರುಗಳಲ್ಲಿ

೧ ಮಾ॥ ಶಿರಶಿ ಆನಂದರಾವ್, ಅಡ್ವೊಕೆಟ್ ಬಿ. ಎ ಯಲ್ ಯಲ್. ಬಿ.

೨ ಮಾ॥ ಯಂ, ಶ್ರೀನಿವಾಸರಾವ್ ಬಿ. ಎ ಡೆಪ್ಟಿಇನ್ಸ್ಪೆಕ್ಟರ್ ಶಿವಮೊಗ್ಗಾ ಡಿಸ್ಟ್ರಿಕ್ಟ್

೩ ಮಾ॥ ಡಿ ವೆಂಗಬೆರಾಮೈಯ್ಯನವರು, ಅಡ್ವೊಕೆಟ್ ಬಿ. ಎ. ಪ್ರೊಪ್ರೈಟರ್ ವೃತ್ತಾಂತಚಿಂತಾಮಣಿ

೪ ಮಾ॥ ನರಸಿಂಗರಾವ್, ಅಡ್ವೊಕೆಟ್, ಪ್ರೊಪ್ರೈಟರ್ ಮೈಸೂರು ಹೆರಲ್ಡ್

೫ ಮಾ॥ ಅಚ್ಚುತರಾವ್ ಸಿವಿಲ್ ಸರ್ಜನ್ ಶಿವಮೊಗ್ಗಾ

೬ ಮಾ॥ ನಾರಾಯಣರಾವ್, ಹೆಡ್‌ಕ್ವಾರ್ಟರ್ ಇನ್ಸ್ಪೆಕ್ಟರ್ ಶಿವಮೊಗ್ಗಾ

೭ ಮಾ॥ ವೆಂಕಣ್ಣಯ್ಯನವರು. ಬಿ. ಎ. ಎಲ್. ಟಿ ಅಸಿಸ್ಟೆಂಟ್ ಮೂಸ್ಟರ್ ಶಿವಮೊಗ್ಗಾ ಕಾಲೇಜು.

೮ ಮಾ॥ ಕೃಷ್ಣಮೂರ್ತಿರಾವ್, ಬಿ. ಎ ಅಸಿಸ್ಟ್ಯಂಟ್ ಮ್ಯೂಸ್ಟರ್ ಶಿವಮೊಗ್ಗಾ ಕಾಲೇಜು.

೯ ಮೆ॥ ಕೆ ಸುಬ್ರಹ್ಮಣ್ಯಶಾಸ್ತ್ರಿಗಳು ಸಂಸ್ಕೃತ ಪಂಡಿತ ಶಿವಮೊಗ್ಗಾ ಕಾಲೇಜು.

೧೦ ಮೆ॥ ಕೆ ನಾರಾಯಣರಾವ್ ಬಿ. ಎ.

೧೧ ಮೆ॥ ರಾಮಚಂದ್ರರಾವ್ ಸರ್ವೇಯಿ ಲಾಖಾ ಆಫೀಸರ್

ಇತರ ಡಿಸ್ಟ್ರಿಕ್ಟ ಮೊಷ್ಟರ ಗಳು.

ಚಿಕ್ಕನಾಯನಹಳ್ಳಿ ಸ್ಕೂಲ್ ಅಸಿಸ್ಟಾಂಟ್ ಮೊಷ್ಟರ್ ಕಡೂರ್ ಡಿ॥ ಹಿಂದೂ ಸ್ಥಾನಿಸೂಲ್ ಮೊಷ್ಟರ್.

ತರೀಕೆರಿಸ್ಕೂಲ್‌ನಿಂದಾ ಮೆ॥ ನರಸಿಂಹಯ್ಯನವರು ತಮ್ಮ ಸ್ಕೂಲ್ ಇತರ ಇಬ್ಬರು ಮೊಷ್ಟರೊಡನೆ ದಯಮೊಡಿದ್ದರು. ಅಲ್ಲದೆ ಈ ಶಿವಮೊಗ್ಗಾ ಡಿಸ್ಟ್ರಿಕ್ಟ ತಾಲ್ಲೂಕುಮೊಸ್ಟರ್ ಪ್ರತಿಯೊಬ್ಬರೂ ತಮ್ಮ ಅಸಿಸ್ಟೆಂಟ್ ಮೊಸ್ಟರು ಮತ್ತು ಹೋಬಳಿಮೊಷ್ಟರೊಡನೆ ದಯಮೊಡಿದರು.

ಮೆ॥ ಟಿ, ಶ್ರೀನಿವಾಸರಾವ್. ಹೆಡ್ಮಾಸ್ಟರ್ ಎ ವಿ. ಸ್ಕೂಲ್ ಶಿವಮೊಗ್ಗಾ

ಮೆ॥ ನಾಗೇಶರಾವ್, ಹೆಡ್। ಮಾ। ಎ. ವಿ. ಸ್ಕೂಲ್ ಸಾಗರ.

ಮೆ॥ ಶಂಕರರಾವ್, ಹೆಡ್। ಮಾ। ಗೌ ಕೆಡ್ಡಾ ಸ್ಕೂಲ್ ಶಿಕಾರಿಪುರ.

ಮೆ॥ ರಾಮಸ್ವಾಮೈಂಗಾರ್, ಹೆಡ್। ಮಾ। ಎ. ವಿ. ಸ್ಕೂಲ್ ಹೊನ್ನಳ್ಳಿ.

ಮೆ॥ ರಾಮರಾವ್, ಹೆಡ್। ಮಾ। ಎ. ವಿ ಸ್ಕೂಲ್ ಚನ್ನಗಿರಿ.

ಮೆ॥ ವೆಂಗಪವದೈಯ್ಯಂಗಾರ್ I ಅ। ಮೊ। ಎ. ವಿ. ಸ್ಕೂಲ್ ತೀರ್ಥಳ್ಳಿ.

ಮೆ॥ ಸಬ್ಬರಾವ್, ಹೆ। ಮಾ। ಗೌ। ಕ। ಸ್ಕೂಲ್ ಹೊಳೆ ಹೊನ್ನೂರ್.

ಮೆ॥ ಶ್ರೀನಿವಾಸರಾವ್ ಹೆ। ಮಾ। ಗೌ। ಕ। ಸೂಲ್ ಕಳೂರು ಕಟ್ಟೆ,

ಮೆ॥ ಭಾಸ್ಕರ ಜೋಯಿಸರು ಹೆ। ಮಾ। ಗೌ।ಕ।ಸ್ಕೂಲ್ ಕೂಶಿಸಲ್ ತಾಲ್ಲೂಕು

ಮೆ॥ ಶೇಷಗಿರಿರಾವ್ ಹೆಡ್ಮಾಸ್ಟರ್ ಶಿರಾಳಕೊಪ್ಪ.

ಮೆ॥ ಜಿ ಬಾಳಾಜಿರಾವ್ ಅ। ಗೌ। ಗರ್ಲ್ಸ್ ಸ್ಕೂಲ್ ಶಿವಮೊಗ್ಗಾ ಈರೀತಿಯೂಗಿ ಈ ಡಿಸ್ಟ್ರಿಕ್ಟ v ತಾಲ್ಲೂಕಿನಿಂದಲೂ ಉಪಾಧ್ಯಾಯರು ಇತರ ದೊಡ್ಡಮನುಷ್ಯರು ಸೋಡಿ ೧೬೦ ರವರಿಗೂ ನೆರೆದಿದ್ದರು. ಇಂಥಾ ಸಭೆಯು ೧೮೯೬ನೇ ಡಿಶಂಬರ್ ತಾರೀಖು ೨೪—೧೯—೩೦ ಈ ಮೂರುದಿನಗಳಲ್ಲಿ ಶಿವಮೊಗ್ಗಾ ಎ ವಿ. ಸ್ಕೂಲ್ ಕಟ್ಟಡದಲ್ಲಿ ನಡೆಸಲ್ಪಟ್ಟಿತು. ಮೂರುದಿನಗಳಪೈಕಿ ಪ್ರತಿಯೊಂದು ದಿನದಲ್ಲಿಯೂ

ಪ್ರಾತಃಕಾಲ ೪ ಘಂಟೆಯಿಂದ ೧೦ ಘಂಟೆ ವರೆಗೂ, ಮಧ್ಯಾಹ್ನ ೩ ಘಂಟೆಯಿಂದ ೫ ಘಂಟೆವರಿಗೂ ಸಭೆಯ ಕೆಲಸವನ್ನು ನಿರ್ವಹಿಸುತ್ತಾ ೬ ಮೊಟಂಗಿನಲ್ಲಿ ಈ ಸಭೆಯ ಕಾರ್ಯವು ಮುಗಿಸಲ್ಪಟ್ಟತು. ಈ ಸಭೆಯಲ್ಲಿ ಚರ್ಚಿಸಲ್ಪಟ್ಟ ವಿಷಯಗಳಾವವೆಂದರೆ—

೧ ನೇ ದಿನ ಪ್ರಾತಃಕಾಲದ ಸಭೆಯಲ್ಲಿರುವ ಉಪಾಧ್ಯಾಯರ ಕೋರಿಕೆಮೇರೆ ಮೆ॥ ಶಿರಶಿ ಆನಂದರಾವ್ ಬಿ. ಎ ಎಲ್, ಎಲ್. ಬಿ. ಅಡ್ವೊಕೇಟ್ ಇವರು ಅಗ್ರಾ ಸನಾಧಿಪತ್ಯವನ್ನು ವಹಿಸಿ ಜನರ ಮನಃಸಂತೋಷಪಡಿಸಿದರು. ಅನಂತರದಲ್ಲಿ ಸಭೆಯ ಕಾರ್ಯದರ್ಶಿಗಳಾದ ಮೆ॥ ನಾಗೇಶರಾಯರು ಸಭಾಪ್ರಾರ್ಥನೆಪೂರ್ವಕವಾಗಿ ಪ್ರಕೃತವಿಷಯವನ್ನು ಚರ್ಚಿಸಿದರು. ಮೊದಲು ನಮ್ಮ ಮೈಸೂರು ಶೀಮೆಯಲ್ಲಿ ವಿದ್ಯಾಭ್ಯಾಸಕ್ರಮವನ್ನು ಗೌರ್ನಮೆಂಟಿನವರು ಪ್ರಜೆಗಳ ಹಿತಕ್ಕೆ ಏರ್ಪಡಿಸಿರುವದು ಸರಿಯಷ್ಟೆ. ಈ ಏರ್ಪಾಟು ಸರ್ವತ್ರ ವ್ಯಾಪಿಸಿಕೊಂಡಾಗಲ್ಯೂ ಕೆಲವು ಡಿಸ್ತ್ರಿಕ್ಟುಗಳಲ್ಲಿ ಅರ್ಧವೂ ಮತ್ತೆಕೆಲವು ಡಿಸ್ತ್ರಿಕ್ಟಗಳಲ್ಲಿ ಕಾಲುಭಾಗವೂ ವ್ಯಾಪಿಸಿರುವದೆಂದು ದೃಢವಾಗಿ ಹೇಳಲು ಆಗುವದಿಲ್ಲ ಹೀಗೆ ಆಗಲು ಉಪಾಧ್ಯಾಯರ ಉದಾಸೀನತೆಯೊ ಅಥವಾ ನಿರಂತರದಲ್ಲಿಯೂ ಬಾಲಕರನ್ನು ಪಾಠಶಾಲೆಗೆ ಕಳುಹಿಸಿಕೊಡದ ಗ್ರಾಮಸ್ಥರ ತಪ್ಪೊ ನಿಜವಾಗಿ ಊಹಿಸಲೂ ಆಗುವದಿಲ್ಲ. ಆದರೆ ಉಪಾಧ್ಯಾಯನ ಉದಾಸೀನತೆಗೆ ಸ್ವಲ್ಪ ಕಾರಣವಿರುವದು ಏನಂದರೆ—ಇವನು ತನ್ನ ಜೀವನಕ್ಕೋಸ್ಕರ ಒಂದು ಕುಗ್ರಾಮ ಸೇರಿ ಅಲ್ಲಿ ತನಗೆ ಬರುವ ೫-೭ ಅಲ್ಪ ತಲಬಿನಿಂದ ಜೀವನಕ್ಕೆ ಸಾಲದೆ, ಇತರ ಕೆಲಸಗಳನ್ನು ನೋಡುವುದಕ್ಕೆ ಪ್ರಾರಂಭಿಸುತ್ತಾನೆ. ಇವೇಮೊದಲಾದಕಾರಣದಿಂದ ಸ್ಕೂಲ್ ಹೀನಸ್ಥಿತಿಗೆಬರಲು ಆಕರವಾಗುತ್ತೆ. ಆದ್ದರಿಂದ ಈ ಸಂಘದವರು ಕೇಳಿಕೊಳ್ಳುವದು ಏನಂದರೆ—ಪ್ರತಿವಾಸ್ತರಿಗೂ ೧೦ ರೂಪಾಯಿಗೆ ಕಮ್ಮಿಯಿಲ್ಲದಂತೆ ಸಂಬಳ ಮಾಡಿಸಿಕೊಡಬೇಕೆಂತಲೂ, ಮತ್ತು ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ತಾಲ್ಲೂಕುಸ್ಕೂಲ್ ಮಾಸ್ತರುಗಳಿಗೆ ಅವರವರ ಯೋಗ್ಯತಾನುಸಾರವಾಗಿ ಗ್ರೇಡು ಕೊಡಿಸಿಕೊಡಬೇಕೆಂದೂ, ಮಲ್ನಾಡು ಸರ್ವಿಸ್ ಮಾಡುವವರಿಗೆ ಶೇಕಡ ೨೦—೨೫ ಅಲೊವೆನ್ಸ್ ಕೊಡಿಸಿಕೊಡಬೇಕೆಂದು ಮಲ್ನಾಡು ಸರ್ವಿಸ್ ಮಾಡುತಲಿರುವ ಯಾವ ಉಪಾಧ್ಯಾಯನು ೨--೩ ವರುಷದಮೇಲೆ ಇಲ್ಲಿ ಇರುವಂತೆ ಬಲಾತ್ಕರಿಸಕೊಡದೆಂದೂ ಅಪ್ಪಣೆ ಆಗುವಂತೆ ಬರೆದುಕೊಳ್ಳುವದೇ ಮೊದಲ ಉದ್ದೇಶವೆಂದು ತಿಳಿಸಿದರು.

ಈ ಸಭೆಯಲ್ಲಿದ್ದ ಕೆಲವರುಮಾತ್ರ ಕೊನೆಗೆ ೪ ರೂಪಾಯಿ ಆದರೂ ಕೊಡಿಸಿ ಕೊಡಬೇಕೆಂದು ಕೇಳಿದರು. ಅದಕ್ಕೆ ಮಾ॥ ಡಿಪ್ಯೂಟಿ ಇನಸ್ಪೆಕ್ಟರ್ ಎಂ. ಶ್ರೀನಿವಾಸ ರಾವ್ ಬಿ. ಎ. ಯವರು ಪೂರ್ವದಲ್ಲಿ ೫—೭ ದರ ಮಾಡಿದ್ದರು. ಆ ಕಾಲದಲ್ಲಿ ಧಾನ್ಯ ಮುಂತಾದ್ದು ಅಗ್ಗವಾಗಿತ್ತು. ಆಗ ಆ ತಲಬು ಸಾಕಾಗುತ್ತಿತ್ತು. ಈಗಿನ ಕಾಲ ಸ್ಥಿತಿಗೆ ಈ ತಲಬು ಸಾಲುವದಿಲ್ಲ ಆದ್ದರಿಂದ ೧೦ ರುಪಾಯಿ ಇರುವದೆ ನನ್ನೆ ತಾತ್ಪರ್ಯ ; ಅಲ್ಲದೆ ಕಳೆದ ವರುಷ ರೆಪ್ರೆಜೆಂಟೆಟಿವ್ ಅಸೆಂಬ್ಲಿಯಲ್ಲಿ ಕೆಲವುಜನ ಮೆಂಬರು ಗಳು ಬಹಳ ಅಲ್ಪ ತಲಬಿನಲ್ಲಿರುವ ಮಾಸ್ಟರುಗಳಿಗೆ ತಲಬು ಜಾಸ್ತಿ ಮಾಡಬೇಕೆಂದು ಚರ್ಚಿಸಿದರು ಇದಕ್ಕೆ ಕೌನಸಿಲ್‌ರವರು ಒಪ್ಪಿರುತ್ತಾರೆಂದು ಅಪ್ಪಣೆಕೊಡಿಸಿದರು. ಈ ವಿಷಯವನ್ನೆ ಪುಷ್ಟಿಕರಿಸಲು ಅಗ್ರಾಸನಾಧಿಪತಿಗಳಾದ ಮಾ॥ ಆನಂದರಾಯರ ತಲಬಿನ ವಿಷಯದಲ್ಲಿ ವ್ಯವಸ್ಥೆಯಿಲ್ಲದಂತೆ ತೋರುತ್ತೆ. ಕೆಲವು ಸ್ಕೂಲುಗಳಲ್ಲಿ ಜವಾನನಿಗೆ ಇರುವ ತಲಬು ಮಾಸ್ಟರಿಗಿರುವದಿಲ್ಲ. ಕೆಲವು ಸ್ಕೂಲುಗಳಲ್ಲಿ ಹೆಡ್‌ಮಾಸ್ಟರಿಗಿಂತ ಇತರ ಮಾಸ್ಟರುಗಳ ತಲಬು ಹೆಚ್ಚಾಗಿರುವದು. ಇದರಿಂದ ಅವರ ಅಧಿಕಾರಕ್ಕೆ ಸ್ವಲ್ಪ ಕುಂದಕವಾಗುವದು. ಅದು ಇರಲಿ. ಮಾಸ್ಟರುಗಳಿಗೆ ೧೦ ರುಪಾಯಿ ಕಮ್ಮಿ ಯಿಲ್ಲದೆ ಸಂಬಳ ಮಾಡಿಕೊಟ್ಟರೆ ಉತ್ತಮವೆಂದು ಅಪ್ಪಣೆಕೊಟ್ಟರು. ಕೆಲವು ಗ್ರಾಮದಲ್ಲಿರುವವರಿಗೆ ಲೌಕಿಕವ್ಯಾಪಾರ ತಿಳಿಯದಂತೆ ಇದೆ.

ವ್ಯವಹಾರಜ್ಞಾನವಾಗಬೇಕಾದರೆ ಸಭೆಯು ಸಹಕಾರಿ ಆದ್ದರಿಂದ ದಯವಿಟ್ಟು ಪ್ರತಿತಾಲ್ಲೂಕು ಸ್ಕೂಲ್‌ಗಳಿಗೆ ಒಂದೊಂದು ಮೈಸೂರು ಗೆಜಿಟು ಕಳುಹಿಸಿಕೊಟ್ಟಲ್ಲಿ ಆ ಮಾಸ್ಟರು ತಮ್ಮ ತಾಲ್ಲೂಕು ಹೋಬಳೀ ಮಾಸ್ಟರುಗಳಿಗೆ ಸರ್ಕ್ಯುಲೆಟ್ ಮಾಡುವರು ಎಂದು ಹೇಳಿದ್ದಕ್ಕೆ ಎಲ್ಲರೂ ಒಪ್ಪಿದರು. ಪ್ರಾತಃಕಾಲದ ಸಭೆಯು ಪೂರೈಸಿತು. ತಾ॥ ೨೪ ನೆ ಮಧ್ಯಾನ್ಹ ಮೂರುಘಂಟೆಗೆ ಸರಿಯಾಗಿ ಪುನಃ ಸಭೆ ಶೇರಿತು. ಮಾ॥ ಆನಂದರಾಯರವರೇ ಅಗ್ರಾಸನಾಧಿಪತಿಗಳಾಗಿದ್ದರು. ಮಾ॥ ಡೆಪ್ಯೂಟಿ ಇನ್‌ಸ್ಪೆಕ್ಟರವರು ಹೋಬಳಿಮಾಸ್ಟರುಗಳಲ್ಲಿ ಒಬ್ಬೊಬ್ಬರನ್ನೆ ಸ್ಕೂಲ್‌ಕಟ್ಟಡದ ವಿಷಯವಾಗಿ ಕೇಳುತ್ತಾ ಬಂದರು. ಅವರಲ್ಲಿ ಒಬ್ಬರು ಸ್ವಾಮಿ ಹೊರಗಿನ ದೇವಸ್ಥಾನದಲ್ಲಿ ಸ್ಕೂಲ್ ಮಾಡುತ್ತಾ ಇದ್ದೇನೆ. ಸರಿಯಾದ ಕಟ್ಟಡ ಇಲ್ಲವೆಂತ ಹೇಳಿದರು. ಮತ್ತೊಬ್ಬರು ಮಾರಿಗುಡಿಯಲ್ಲಿ ಸ್ಕೂಲ್ ಮಾಡುತ್ತಾ ಇದ್ದೇವೆಂದು ಇನ್ನೊಬ್ಬರು ಪಟೇಲರ ಜಗಲಿ ಮೇಲೆ ಸ್ಕೂಲ್‌ಮಾಡುತ್ತೇವೆಂದು ಮಗದೊಬ್ಬರು ಗ್ರಾಮಸ್ಥರು ಒಂದು ಕೊಟ್ಟಗೆಯು

ನ್ನು ಕೊಟ್ಟಿದ್ದರು. ಮೊನ್ನಿನ ಮಳೆಯಲ್ಲಿ ಕಿಡಕಿಗಳು ಬಿದ್ದು ಕೊಟ್ಟಗೆಯೊಳಗೆಲ್ಲಾ ಸೂರ್ಯಚಂದ್ರರ ಬೆಳಕು ಫಾಳಿ ಮಳೆಯ ಸಂಚಾರವೇ ಆಗಿರುವದು ಸ್ಕೂಲ ಮಾಡಲು ಜಾಗವಿಲ್ಲ ಎಂದು ಹೇಳಿದರು. ಹೀಗೆ ಈ ಸಭೆಗೆ ಪ್ರತಿನಿಧಿಗಳಾಗಿ ಬಂದ ರುವ ೬೦—೭೦ ಜನ ಹೋಬಳಿ ಮಾಸ್ತರು ತಮ್ಮತಮ್ಮ ಸ್ಕೂಲಗಳ ಅನಿವಾಯ್ಯ ಗಳನ್ನು ಹೇಳಿಕೊಳ್ಳುತ್ತಿರುವದನ್ನು ಕೇಳುತ್ತಿರುವವರಿಗೆ ಈ ಅನನುಕೂಲತೆಯ ವಿಷಯದಲ್ಲಿ ನಿಶ್ಚಯಜ್ಞಾನವೂ ಇತರ ಡಿಸ್ತ್ರಿಕ್ಟುಗಳ ಹೋಬಳಿಸ್ಕೂಲಗಳಲ್ಲಿಯೂ ಹೀಗೆಯೇ ಇರಬಹುದೆಂಬ ಊಹೆಯೂ ಉಂಟಾಗದಿರದು.

ನಮ್ಮ ಡೆಪ್ಯುಟಿ ಇನ್ಸ್ಪೆಕ್ಟರವರು ಈ ವಾಕ್ಯಗಳನ್ನು ಅಮೂಲಾಗ್ರವಾಗಿ ಕೇಳಿ ಹಾಸ್ಯಗರ್ಭಿತವಾದ ಮುಖದಿಂದ ಸದರಿ ಉಪಾಧ್ಯಾಯರನ್ನು ಕರಿತು ಉಪಾಧ್ಯಾಯರುಗಳಿರಾ ಈ ಕಟ್ಟಡದವಿಷಯನಾದ ಅನನುಕೂಲತೆಯ ಗ್ರಾಮಸ್ಥರಿಂದ ತಪ್ಪಬೇಕು. ಈ ವಿಷಯದಲ್ಲಿ ಗೌರ್ನಮೆಂಟಿನವರು ಪ್ರಯತ್ನಪಡಲು ಆಗುವದಿಲ್ಲ. ಯಾಕೆಂದರೆ ಆ ಗ್ರಾಮಸ್ಥರು ನಮ್ಮ ಊರಿನ್ಲಿ ಸ್ಕೂಲ್ ಇಡಿಸಿಕೊಡಬೇಕಾಗಿ ಅರ್ಜಿ ಕೊಡುವರು. ನಾವು ಸದರಿ ಅರ್ಜಿಮೇಲೆ ನೀವುಗಳು ಸ್ಕೂಲಿಗೆ ಕಟ್ಟಡ ಕಟ್ಟಿಸಿಕ್ಕೊಡುವದಕ್ಕೆ ಒಂದು ರುಪಾಯಿನ ೧೫ ಆಣೆ ಭಾಗವನ್ನು ಗೌರ್ನಮೆಂಟಿನವರು ಆರು ಆಣೆ ಭಾಗವೆನ್ನು ಹಾಕಿ ಸ್ಕೂಲನ್ನು ಕಟ್ಟಿಸುವದು. ನೀವು ಮೂವತ್ತು ಹುಡುಗರಿಗೆ ಕಮ್ಮಿಯಿಲ್ಲದೆ ಶೇರಿಸಿಕೊಟ್ಟು ಪ್ರೈಕೃತ ಒಂದು ಕಟ್ಟಡವನ್ನು ಕೊಟ್ಟಲ್ಲಿ ಸ್ಕೂಲ್ ಮಾಡಿಸಲ್ಪಡುತ್ತೆಂದು ಅಪ್ಪಣೆ ಕೊಡುತ್ತೇವೆ. ಸದರಿ ಗ್ರಾಮಸ್ಥರು ಅದರಂತೆ ಒಪ್ಪಿ ಒಂದು ಗುಡಿಯನ್ನು ತೋರಿಸಿ ಸ್ಕೂಲು ಮಂಜೂರಾದಮೇಲೆ ಗ್ರಾಮಸ್ಥರು ಕಟ್ಟಡವಿಷಯವಾಗಿ ಆಲೋಚನೆ ಇರುವದರಿಂದ ಹೀಗೆ ಆಗುವದು ಎಂದು ಅಪ್ಪಣೆಕೊಟ್ಟರು. ಈ ಸಂಘಕ್ಕೆ ತೀರ್ಥಹಳ್ಳಿ ತಾಲ್ಲೂಕು ಮುಳಬಾಗಲು ಹೋಬಳಿ ಸ್ಕೂಲ್ ಮೆಂಬರುಗಳಾದ ಮೆ ಕೃಷ್ಣಾಚಾರ್ ಇತರರು ಇಬ್ಬರು, ಅಂತು ಮೂರುಜನರು ಬಂದಿದ್ದರು. ಈ ಮೆಂಬರುಗಳು ಗ್ರಾಮಗಳಲ್ಲಿ ಸ್ಕೂಲ್ ಕಟ್ಟಡಗಳನ್ನು ಮಾಸ್ತರುಗಳಿಗೆ ವಾಸಕ್ಕೆ ಮನೆಯನ್ನು ಸಹಾ ಗೌರ್ನಮೆಂಟಿನವರು ಕಟ್ಟಿಸಿಕೊಡಬೇಕೆಂದು ಹೇಳಿಕೊಂಡರು. ಇದನ್ನು ಅವರು ಅನುಮೋದಿಸಿದರು.

(ಸಶೇಷ.)

ವಿದ್ಯಾದಾಯಿನಿ.

ಭಾಗ ೫೫.] ಫಿಬ್ರವರಿ. ೧೯೬೩. [ಸುಚೆಕ್ ೫.

ಎಡಿಟರವರ ನೋಟ್ಸ್.

ಈಗ ಮೈಸೂರಿನಲ್ಲಿ ಒಂದು ನಾರ್ಮಲ್ ಸ್ಕೂಲ್ ಇರುವುದು ಸರಿಯಷ್ಟೆ. ಇನ್ನೆರಡು ನಾರ್ಮಲ್ ಸ್ಕೂಲುಗಳನ್ನು ಸರ್ಕಾರದವರು ಶೀಘ್ರದಲ್ಲಿ ಇಡುವೆಂದು ಕೇಳಿ ಸಂತೋಷಪಡುತ್ತೇವೆ ಈ ಹೊಸಸ್ಕೂಲುಗಳಲ್ಲಿ ಟೋವರ್ ಸಕೆಂಡರಿ ಗ್ರೇಡಿನ ಉಪಾಧ್ಯಾಯರನ್ನು ಮಾತ್ರ 'ಟ್ರೇಯರ್' ಮಾಡುವರು. ಇವೆರಡರಲ್ಲೊಂದನ್ನು ಶಿವಮಗ್ಗೆಯಲ್ಲು ಇನ್ನೊಂದನ್ನು ಕೋಲಾರದಲ್ಲಿ ಅಥವಾ ಬೆಂಗಳೂರಲ್ಲಿ ಸ್ಥಾಪಿಸುವರೆಂದು ಕೇಳುತ್ತೇವೆ. ನಾರ್ಮಲ್ ಸ್ಕೂಲುಗಳ ಸಂಖ್ಯೆಯು ಹೆಚ್ಚಾಗುವುದರಿಂದ 'ಟ್ರೇಯರ್' ಆಗುವ ಉಪಾಧ್ಯಾಯರ ಸಂಖ್ಯೆಯೂ ಹೆಚ್ಚುವುದು. ಇಷ್ಟುಮಾತ್ರವಲ್ಲದೆ ಬಹಳ ದೂರದೇಶದಿಂದ ಮೈಸೂರಿಗೆ ಬರುವುದಕ್ಕೆ ಬದಲಾಗಿ ಮುಂದೆ ಹತ್ತಿರದಲ್ಲೇ 'ಟ್ರೇಯರ್' ಆಗುವುದಕ್ಕೆ ಉಪಾಧ್ಯಾಯರಿಗೆ ಇದರಿಂದ ಅನುಕೂಲವಾಗುತ್ತೆ.

***

ಉಪಾಧ್ಯಾಯರೆಲ್ಲರೂ 'ಟ್ರೇಯರ್' ಆದವರಾಗಿರಬೇಕಾದುದು ಎಷ್ಟು ಅವಶ್ಯಕವೆಂಬುದು ನಮ್ಮ ಜನಗಳಿಗೆ ಇನ್ನೂ ಚೆನ್ನಾಗಿ ತಿಳಿದಿರುವಂತಿಲ್ಲ. ವಿದ್ಯಾಭ್ಯಾಸವು ಸರಿಯಾದ ಕ್ರಮದಲ್ಲಿ ನಡೆಯಬೇಕಾದರೆ ಮುಖ್ಯವಾಗಿ ಉಪಾಧ್ಯಾಯರು ಯೋಗ್ಯರಾಗಿರಬೇಕು; ಮತ್ತು ಉಪಕರಣಗಳು ಸರಿಯಾಗಿರಬೇಕು. ಉಪಾಧ್ಯಾಯರು ಯೋಗ್ಯರಾಗಿರಬೇಕಾದರೆ ಅವರಿಗೆ ಪಾಠಹೇಳುವ ವಿಷಯಗಳ ಜ್ಞಾನವು ಸರಿಯಾಗಿರಬೇಕು; ಮತ್ತು ಅವುಗಳನ್ನು ಬೋಧಿಸುವ ಕ್ರಮವೂ ತಿಳಿಯಬೇಕು. ಇವುಗಳನ್ನು ತಿಳಿಸಿ ಪಾಠಹೇಳುವುದರಲ್ಲಿ ಸ್ವಲ್ಪಮಟ್ಟಿಗೆ ಅನುಭವವನ್ನುಂಟುಮಾಡಿ ಕೊಡುವುದೇ ಬಡೇ

'ಟ್ರೈಯಲ್' ಎಂಬುದರಅರ್ಥ. ಈ ಅಂಶಗಳಲ್ಲಿ ಜ್ಞಾನವಿಲ್ಲದೆ ಪಾಠಹೇಳುವೆ ಎಂದಾ ರಂಭಿಸುವುದು ಅಭಾಸವಾಗಿತ್ತೋರುತ್ತೆ. ಈಗ ಪ್ರಸ್ತಾವ್ಯದೇಶದಲ್ಲಿ ಪಾಠಹೇಳುವುದಕೆ ಬೇಕಾದ ಯೋಗ್ಯತೆಯನ್ನು ಗೊತ್ತುಮಾಡುವ ಪರೀಕ್ಷೆಯಲ್ಲಿ ತೇರ್ಗಡೆಯಾಗದವರ ಸ್ಕೂಲುಗಳನ್ನು ಸ್ವಂತವಾಗಿ ಸಹ ಇಡಕೂಡದೆಂದಿದೆ. ಈದೇಶದಲ್ಲಿ ಹಾಗೆ ಆಗುವ ದಕ್ಕೆ ಇನ್ನೂ ಬಹಳಕಾಲ ಬೇಕಾದರೂ ಸಧ್ಯದಲ್ಲಿ ಸಾಧ್ಯವಾಗುವ ಮೆಟ್ಟಿಗೂ ಉಪಾಧ್ಯಾಯರನ್ನು 'ಟ್ರೈಯಲ್' ಮಾಡಬೇಕಾದುದು ಬಹಳ ಆವಶ್ಯಕ.

***

ಡಿಶಂಬರು ತಿಂಗಳಲ್ಲಿ ಮದರಾಸಿನಲ್ಲಿ ವಿದ್ಯಾವಿಷಯವಾಗಿ ಚರ್ಚೆಮಾಡುವು ಕ್ಕಾಗಿ ಒಂದು ಸಭೆ ಸೇರಿತ್ತೆಂದು ತಿಳಿಸಿದೆವಷ್ಟೆ. ಅಂಥ ಅಭಿಪ್ರಾಯದಿಂ ಲೇ ಶಿ ಮಗ್ಗಿಯಲ್ಲೂ ಉಪಾಧ್ಯಾಯರು ಕೆಲವರು ಸೇರಿದ್ದರು. ವಿದ್ಯಾಭ್ಯಾಸದ ವಿಷಯ ವಾ ಜನಗಳಿಗೆ ಈ ಆದರವುಂಟಾಗುತಿದೆ ಯೆಂಬುದಕ್ಕೆ ಇದೆಲ್ಲ ಸೂಚಕಗಳು ಇತರ ವಿಷ ಯಗಳನ್ನು ಚರ್ಚಿಸುವುದಕ್ಕಿಂತ ಇವರು ವಿದ್ಯಾಭ್ಯಾಸಕ್ರಮದಲ್ಲಿ ಅಂದರೆ ಮುಖ್ಯ ವಾಗಿ ಬೋಧಿಸುವ ವಿಧಾನದಲ್ಲಿ ಈಗಿರುವ ಗುಣದೋಷಗಳನ್ನು ವಿಚಾರಿಸುವುದಕೆ ಹೆಚ್ಚಾಗಿ ಪ್ರಯತ್ನಪಟ್ಟರೆ ಬಹಳ ಒಳ್ಳೆದು.

ವಸ್ತುಪಾಠ—ಟಿಪ್ಪಣಿ.

ಸೀಸ.

ಉಪಕರಣಗಳು—ಸೀಸದ ಚೂರುಗಳು, ಸೀಸದತಂತಿ, ಸೀಸದಕೊಳವೆಗಳು ಸೀಸದ ಗುಂಡುಗಳು, ಕಬ್ಬಿಣದತಂತಿ, ಸತ್ತುವ ಲೋಹದ ಚೂರುಗಳು.

ವಿಷಯ.	ಬೋಧನಕ್ರಮ.
ವಿಶೇಷವಾಗಿ ಭಾರವಾಗಿರುವುದನ್ನು ನೋಡಿ ಸೀಸವನ್ನು ಸಾಮಾನ್ಯವಾಗಿ ಗೊತ್ತುಮಾಡಬಹುದು.	ಒಂದು ಸೀಸದ ಚೂರನ್ನು, ಒಂದು ಸತ್ತುವ ಲೋಹದ ಚೂರನ್ನು ಹುಡುಗರಿಗೆ ಕೊಟ್ಟು ಸೀಸವನ್ನು ಗೊತ್ತುಮಾಡಿಸುವುದು.

ಸೀಸದಉಪಯೋಗ:—	
೧ ಪಾತ್ರೆಗಳನ್ನು ಮಾಡುವುದಕ್ಕೆ.	ಪ್ರಶ್ನೆಮಾಡುವುದರಿಂದ ಇವುಗಳ
೨ ಗುಂಡುಗಳನ್ನು ಮಾಡುವುದಕ್ಕೆ.	ನ್ನೆಲ್ಲ ಹುಡುಗರಿಂದ ಹೇಳಿಸಬೇಕು; ಸೀಸ
೩ ನೀರಿನ ನಲ್ಲಿಗಳನ್ನು ಮಾಡುವು-	ವಗುಂಡು, ನಲ್ಲಿ ಇವುಗಳನ್ನು ಹುಡುಗರಿಗೆ
ದಕ್ಕೆ.	ತೋರಿಸಬೇಕು.
೪ ಹೆಂಚಿಗೆ ಬದಲಾಗಿ ಛಾವಣಿಗೆ ಉ	ಇವುಗಳನ್ನೆಲ್ಲ ಹಲಗೆಯಮೇಲೆ ಬರೆ
ಪಯೋಗಿಸುವುದಕ್ಕೆ.	ಯಬೇಕು.
ಸೀಸದ ಸ್ವಭಾವ—	
೧ ಇದರಬಣ್ಣ ನೀಲಿ ಮಿಶ್ರವಾದ	ಸೀಸದ ಚೂರೊಂದನ್ನು ಚಾಕಿನಿಂದ
ಬೆಳಪು.	ಒರೆದು ಬಿಳೀಕಾಗದದ ಮೇಲಿಡುವುದರಿಂದ
	ಇದನ್ನು ಹೇಳಿಸಬೇಕು.
೨ ಇದು ಬಹಳಮೃದು.	ಉಗರಿನಿಂದ ಗೀಚುವುದರಿಂದ ಮಾ
	ತ್ರವೇ ಸೀಸದಮೇಲೆ ಗುರುತನ್ನು ಮಾಡ
	ಬಹುದೆಂಬುದನ್ನು ತೋರಿಸಿ ಇದನ್ನು ತಿಳಿ
	ಸಬೇಕು; ಕಬ್ಬಿಣವನ್ನು ಹೇಗೆಮಾಡುವು
	ದು ಅಸಾಧ್ಯವೆಂಬುದನ್ನು ತಿಳಿಸಬೇಕು.
ಮೃದುವಾಗಿರುವುದರಿಂದ ಸೀಸದ	
ಪಾತ್ರೆಗಳನ್ನು ಮಾಡುವಾಗ ಕಾಯಿಸದೆ	ಇದನ್ನು ತಿಳಿಸುವುದು; ಕಬ್ಬಿಣವ
ಸುಲಭವಾಗಿ ಮಾಡಬಹುದು.	ನ್ನು ಬಗ್ಗಿಸಬೇಕಾದರೆ ಮೊದಲು ಕಾಯಿ
	ಸುವರೆಂಬುದನ್ನು ಜ್ಞಾಪಿಸಬೇಕು; ಮ
	ರದ ಸುತ್ತಿಗೆಯನ್ನುಪಯೋಗಿಸುವುದನ್ನೂ
	ತಿಳಿಸಬೇಕು
೩ ಇದು ಬಿಂಕಿಯುಶಖೆಗೆ ಬಳಸುವಾಗ	ಅನುಕೂಲವಿದ್ದರೆ ಸೀಸದ ತಂತಿ
ಕರಗುವುದು.	ಯನ್ನೂ, ಕಬ್ಬಿಣದ ತಂತಿಯನ್ನೂ ದೀಪದ
	ಶಿಖೆಗೆ ಹಿಡಿದು ಇದನ್ನು ವ್ಯಕ್ತಪಡಿಸಬೇಕು.
	ಕರಗಿಸುವುದು ಸುಲಭವಾದುದರಿಂದ ಸೀಸ
	ದಲ್ಲಿ ಗುಂಡುಗಳನ್ನುಮಾಡುವುದೂ ಸುಲಭ.
ಸೀಸವನ್ನು ಕಾಸಿ ವಂದರಿಯಂತೆ	ಲಾಡುಕರಿಯ ನುದನ್ನು ಜ್ಞಾಪಿಸಿ
ರುವ ಪಾತ್ರೆಗೆ ಹುಯ್ದು ಗುಂಡುಗಳಾಗು	ಇದನ್ನು ತಿಳಿಸಬೇಕು.
ವಂತೆ ಮಾಡುವರು.	

೪ ಇದು ಬಹಳ ಭಾರವಾದುದು.	ಕಬ್ಬಿಣದ ಚೂರನ್ನು ಇದರ ಚೂರನ್ನು ಹೋಲಿಸಿ ಇದನ್ನು ಹೇಳುವುದು. ಕನ್ನವು ಸೀಸಕ್ಕಿಂತ ಭಾರವೆಂಬುದನ್ನು ತೀರ್ಮಾನಿಸಬೇಕು.
೫ ಇದು ತುಕ್ಕು ಹಿಡಿಯುವುದಿಲ್ಲ.	ಹಳೇ ಸೀಸದಚೂರನ್ನು ಹಳೇಕಬ್ಬಿಣದ ಚೂರನ್ನೂ ತೋರಿಸಬೇಕು. ತುಕ್ಕು ಹಿಡಿಯದಿರುವುದರಿಂದ ಇದನ್ನು ನೀರುನಳಿಗಳಾಗಿ ಮಾಡುವರು.
೬ ಇದು ಕಿಲುಬುವುದಿಲ್ಲ. [ಇವುಗಳನ್ನೆಲ್ಲ ಹಲಗೆಯಮೇಲೆ ಬರೆಯಬೇಕು]	ಆದುದರಿಂದ ಇದರ ಪಾತ್ರೆಗಳನ್ನು ಜನಗಳುಪಯೋಗಿಸುವರು. ಆದರೆ ಸೀಸದ ಪಾತ್ರೆಗಳನ್ನುಪಯೋಗಿಸುವುದು ಅಷ್ಟು ಆರೋಗ್ಯಕರವಲ್ಲೆಂದು ತಿಳಿಸಬಹುದು.
ಇದು ಸಿಕ್ಕುವಕ್ರಮ- ಮಣ್ಣಿನೊಡನೆ ಸೇರಿರುವುದು; ಸೀಸವನ್ನು ಬೇರೆತೆಗೆಯಬೇಕು.	ಕಬ್ಬಿಣದ ಕಿಟ್ಟ ಮುಂತಾದುದನ್ನು ತೋರಿಸಿ ಇದನ್ನು ತಿಳಿಸಬೇಕು. ಪುನರಾವರ್ತನೆ ಮಾಡಬೇಕು.

ವಿದ್ಯಾಭ್ಯಾಸದ ಉದ್ದೇಶ.

ಯಾವದೇಶವಾಗಲಿ ಮುಂದಕ್ಕೆ ಒಳ್ಳೆಸ್ಥಿತಿಯಲ್ಲರಬೇಕಾದರೆ ಈಗ ಚಿಕ್ಕವಯಸ್ಸಿನವರಾಗಿರುವರನ್ನು ಸರಿಯಾಗಿ ಶಿಕ್ಷಿಸಬೇಕಾದ-ದು ಅವಶ್ಯಕ. ಈಗ ಚಿಕ್ಕವರಾಗಿರುವರಲ್ಲಿ ಎಷ್ಟುಮಂದಿಯನ್ನು ಎಷ್ಟುಮಟ್ಟಿಗೆ ಜೆನ್ನಾಗಿ ಶಿಕ್ಷಿಸಿದರೆ ರಾಜ್ಯವು ಮುಂದಕ್ಕೆ ಅಷ್ಟು ಒಳ್ಳೇಸ್ಥಿತಿಯಲ್ಲರುವುದು. ಆದುದರಿಂದ ದೇಶವು ಮುಂದಕ್ಕೆ ಒಳ್ಳೇಸ್ಥಿತಿಯಲ್ಲರಬೇಕೆಂಬ ಆಶಯುವಿರುವರೆಲ್ಲರು ಚಿಕ್ಕವಯಸ್ಸಿನವರನ್ನು ಶಿಕ್ಷಿಸುವ ವಿಷಯಕ್ಕೆ ಹೆಚ್ಚಾಗಿ ಗಮನಕೊಡಬೇಕು. ಸಾಧ್ಯವಾದರೆ ಅಂಧರೆಲ್ಲರನ್ನೂ ಸರಿಯಾಗಿ ಶಿಕ್ಷಿಸುವುದು ಒಳ್ಳೇದು.

ಯಾವ ದೇಶದಲ್ಲಿ ಜನಗಳಿಗೆ ಸುಖಹೆಚ್ಚೊ ಆ ದೇಶವು ಒಳ್ಳೇಸ್ಥಿತಿಯುಳ್ಳದೆ ಯೆಂದೆನ್ನವೆವು. ಮನುಷ್ಯನು ತಾನುಮಾಡುವ ಕೆಲಸಗಳಿಗೆಲ್ಲ ಸುಖವನ್ನೆ ಮುಖ್ಯೋದ್ದೇಶವನ್ನಾಗಿಟ್ಟುಕೊಳ್ಳುವುದರಿಂದ ಜನಗಳಿಗಿರುವ ಸುಖದಿಂದಲೇ ದೇಶದ ಸುಸ್ಥಿತಿಯನ್ನು ಗೊತ್ತುಮಾಡುವುದು ಸರಿ. ಆದುದರಿಂದ ಬಾಲಕರನ್ನು ಶಿಕ್ಷಿಸುವುದರಲ್ಲಿ ಅವರಿಗೆ ಸುಖಸಂಪಾದನೋಪಾಯವನ್ನು ತಿಳಿಸುವುದೇ ಮುಖ್ಯಉದ್ದೇಶವನ್ನಾಗಿಟ್ಟುಕೊಂಡಿರಬೇಕು. ಆದರೆ ಸುಖಸಂಪಾದನೆಗೆ ಮಾರ್ಗಗಳನೇಕವಾಗಿವೆ. ಇವುಗಳೆಲ್ಲ ಇತರರಿಗೆ ಕೆಡಕನ್ನುಂಟುಮಾಡದೇ ತನ್ನ ಸುಖವನ್ನು ಸಂಪಾದಿಸಿಕೊಳ್ಳುವುದೇ ಸರಿಯಾದುದು. ಆ ಸುಖಕ್ಕೆ ಸುಖವೆಂಬ ಹೆಸರು ಸಲ್ಲುವುದು. ಮಿಕ್ಕವುಗಳೆಲ್ಲ ಸದ್ಯದಲ್ಲಿ ಸುಖವಾದರೂ ಕೊನೆಗೆ ದುಃಖರೂಪವಾಗಿ ಪರಿಣಮಿಸುವವು. ಅಂದರೆ ಚಿಕ್ಕವಯಸ್ಸಿನವರನ್ನು ಶಿಕ್ಷಿಸುವುದರಲ್ಲಿ ಅವರು ಇತರರಿಗೆ ಕೇಡನ್ನುಂಟುಮಾಡದೆ ಅಂದಚೆ ಸನ್ಮಾರ್ಗದಿಂದ ತಮ್ಮತಮ್ಮ ಸುಖವನ್ನು ಸಂಪಾದಿಸಿಕೊಳ್ಳುವಂತೆ ಮಾಡಬೇಕು.

ಪ್ರತಿಯೊಬ್ಬನೂ ತನ್ನ ಸುಖವನ್ನು ಮಾತ್ರ ಸಂಪಾದಿಸಿಕೊಂಡರೆಸಾಲದು. ಆದಿಯಿಂದಲೂ ಎಲ್ಲರೂ ಇಷ್ಟುಮಾತ್ರವೇ ಅಭಿಪ್ರಾಯಪಟ್ಟಿದ್ದರೆ ಪ್ರಪಂಚವು ಇಷ್ಟುಮಟ್ಟಿಗೆ ಅಭಿವೃದ್ಧಿಯೇ ಆಗುತಿರಲಿಲ್ಲ. ಅವರಲ್ಲಿ ಶಕ್ತರಾದ ಕೆಲವರು ಲೋಕೋಪಕಾರ ಬುದ್ಧಿಯಿಂದ ಹೆಚ್ಚಾಗಿ ಕೆಲಸಮಾಡುವುದಕ್ಕೆ ಪ್ರಯತ್ನಪಟ್ಟದ್ದು ಈ ಅಭಿವೃದ್ಧಿಗೆ ಕಾರಣವಾಯಿತು.

ದೇಶವು ಒಳ್ಳೇಸ್ಥಿತಿಯಲ್ಲಿರುವುದು ಮಾತ್ರವಲ್ಲದೆ ಬರುತಬರುತ ಅಭಿವೃದ್ಧಿಯೂ ಆಗಬೇಕೆಂಬುದೇ ನಮ್ಮ ಉದ್ದೇಶವಾಗಿರಬೇಕಾದುದರಿಂದ ಬಾಲಕರನ್ನು ಶಿಕ್ಷಿಸುವಾಗಿರಬೇಕಾದುದರಿಂದ ಬಾಲಕರನ್ನು ಶಿಕ್ಷಿಸುವಾಗ ಅವರಿಗೆ ಲೋಕೋಪಕಾರ ಬುದ್ಧಿ ಬರುವಂತೆ ಮಾಡುವುದಕ್ಕೂ ಯತ್ನಿಸಬೇಕು. ಆದುದರಿಂದ ಸನ್ಮಾರ್ಗದಲ್ಲಿ ತಮ್ಮತಮ್ಮ ಸುಖವನ್ನು ಸಂಪಾದಿಸಿಕೊಂಡು ಅವರವರ ಶಕ್ತ್ಯನುಸಾರ ಲೋಕೋಪಕಾರ ಮಾಡುವಂತೆ ಬಾಲಕರನ್ನು ಮಾಡುವುದೇ ವಿದ್ಯಾಭ್ಯಾಸದ ಉದ್ದೇಶವಾಯಿತು.

ಬಾಲಕರನ್ನು ಹೀಗೆ ಶಿಕ್ಷಿಸಿ ಲೋಕಯಾತ್ರೆಗೆ ಸಿದ್ಧರನ್ನಾಗಿ ಮಾಡುವುದು ಮುಖ್ಯವಾಗಿ ಬಾಲಕರ ತಂದೆತಾಯಿಗಳ ಮತ್ತು ಉಪಾಧ್ಯಾಯರ ಕೆಲಸ ಈ ಭಾಗದಲ್ಲಿ ಉಪಾಧ್ಯಾಯನು ಮಾಡಬೇಕಾದುದನ್ನು ಮಾತ್ರ ಇಲ್ಲಿ ತಿಳಿಸುವೆವು. ಇದಕ್ಕೆ ವಿದ್ಯಾಭ್ಯಾಸವೆಂದು ಹೆಸರು. ಉಪಾಧ್ಯಾಯನ ವಶದಲ್ಲಿ ಬಾಲಕರು ಸ್ವಲ್ಪಕಾಲ

ವಾತ್ರವಿರುವುದರಿಂದ ಅವನಿಂದಲೇ ಶಿಕ್ಷೆಯು ಉದ್ದೇಶವು ಸಂಪೂರ್ಣವಾಗಿ ನೆರವೇರು ವುದೆಂಬುದು ಅಸಂಭವ ಆದಾಗ್ಯೂ ಆ ವಿಷಯದಲ್ಲಿ ಉಪಾಧ್ಯಾಯನು ಮಾಡಬೇಕಾದುದು ಅನೇಕವಾಗಿವೆ ಅವನು ಅದನ್ನು ಮನಃಪೂರ್ವಕವಾಗಿ ಮಾಡಬೇಕು ; ಇಲ್ಲದಿದ್ದರೆ ಅವನಿಂದ ರಾಜ್ಯಕ್ಕೆ ಎಂಥ ದ್ರೋಹವಾಗುತ್ತೆಂಬುದು ಮೇಲೆ ಹೇಳಿರುವುದರಿಂದ ಗೊತ್ತಾಗುವುದು.

ತನ್ನ ಕೆಲಸವನ್ನು ಸರಿಯಾಗಿ ಮಾಡಬೇಕಾದರೆ ಉದಾಸ್ಯಾಯನು ಬಾಲಕರ ವಿಷಯದಲ್ಲಿ ಮೂರು ವಿಧವಾಗಿ ಲಕ್ಷವಿಡಬೇಕು-ಮೊದಲನೆಯದು ಅವರ ದೇಹದಾರ್ಢ್ಯ ಎರಡನೆಯದು ಬೋಧನೆ ; ಮೂರನೆಯದು ನೀತ್ಯನುಶಾಸನ ಇವ್ಟನ್ನು ಸರಿಯಾಗಿ; ಮಾಡಿದಹೊರತು ಉಪಾಧ್ಯಾಯನು ತನ್ನ ಕರ್ತವ್ಯವನ್ನು ನಡೆಸಿದನೆಂದು ಹೇಳಲಾಗುವುದಿಲ್ಲ.

ನಮ್ಮ ದೇಶದ ಜನರಿಗೀಗಿರುವ ಅಭಿಪ್ರಾಯಾನುಸಾರವಾಗಿ ಯೋಚಿಸುವವರು ಉಪಾಧ್ಯಾಯನಿಗೂ ಬಾಲಕರ ದೇಹದಾರ್ಢ್ಯಕ್ಕೂ ಸಂಬಂಧ ಹೇಗೆ ? ಉಪಾಧ್ಯಾಯನು ಅವರ ಆರೋಗ್ಯವಿಷಯದಲ್ಲಿ ಗಮನಕೊಡಬೇಕಾದುದು ಹೇಗೆ ಅವಶ್ಯಕ ? ಎಂದು ಕೇಳಬಹುದು ಆರೋಗ್ಯವಿಲ್ಲದವನಿಗೆ ಪತ್ತಾವ ಸೌಕರ್ಯಗಳಿದ್ದರೂ ಸುಖವಿಲ್ಲವೆಂಬುದು ನಿಸ್ಸಂಶಯವಾಗಿದೆ ವಿದ್ಯಾಭ್ಯಾಸದ ಉದ್ದೇಶವು ಮುಖ್ಯವಾಗಿ ಬಾಲಕರಿಗೆ ಮುಂದಕ್ಕೆ ಸುಖವೆನ್ನುಂಟುಮಾಡಿಕೊಳ್ಳುವಂತೆ ಮಾಡುವುದಾದುದರಿಂದ ಈ ವಿಷಯಕ್ಕೆ ಉಪಾಧ್ಯಾಯನು ಗಮನಕೊಡಬೇಕಾದುದು ಸಹಜವೆ ಇಷ್ಟೇ ಅಲ್ಲ. ದೇಹದಾರ್ಢ್ಯವು ಕಡಮೆಯಾದರೆ ಬೋಧನನಾಗಲಿ ನೀತ್ಯನುಶಾಸನವಾಗಲಿ ಸರಿಯಾಗಿ ನಡೆಯುವಾರದು. ದೇಹದಲ್ಲಿ ಆಲಸ್ಯವಿದ್ದಾಗ ಬುದ್ಧಿಯು ಸರಿಯಾಗಿ ಕೆಲಸಮಾಡುವುದಿಲ್ಲವೆಂಬುದು ಎಲ್ಲರಿಗೂ ಅನುಭವಸಿದ್ಧವಾಗಿರುವುದು. ಆರೋಗ್ಯವಿಲ್ಲದವನಿಗೆ ಚಿತ್ತಸ್ಥೈರ್ಯ, ಧೈರ್ಯ, ಸಹನೆ ಮುಂತಾದ ಸುಗುಣಗಳು ಇರುವುದಿಲ್ಲವೆಂಬುದೂ ನಮ್ಮೆಲ್ಲರಿಗೂ ಅನುಭವಕ್ಕೆ ಬಂದಿರಬೇಕು. ಆದುದರಿಂದ ಉಪಾಧ್ಯಾಯನ ಕೆಲಸವು ಕ್ರಮವಾಗಿ ಸಾಗಬೇಕಾದರೆ ಬಾಲಕರ ದೇಹದಾರ್ಢ್ಯವು ಸರಿಯಾಗಿರಬೇಕೆಂಬುದು ಸರಿ. ಇದಕ್ಕಾಗಿ ಉಪಾಧ್ಯಾಯನು ಕಟ್ಟಡವು ಮುಂತಾದವುಗಳಲ್ಲಿನ ಕೊರತೆಗಳನ್ನು ಸರಿಮಾಡಿ ಬಾಲಕರ ಅನಾರೋಗ್ಯಕ್ಕೆ ಅವಕಾಶಕೊಡದಿರಬೇಕು ; ಬುದ್ಧಿಗೆ ಹೆಚ್ಚಾಗಿ ಕೆಲಸ ಕೊಟ್ಟು ದೇಹಕ್ಕೆ ಕೆಡಕನ್ನುಂಟುಮಾಡದಿರಬೇಕು. ಇವೆರಡರಿಂದ ಹುಡುಗರ ಅನಾ

ರೋಗ್ಯಕ್ಕೆ ಕಾರಣವನ್ನು ತಪ್ಪಿಸಿದಂತಾಗುವುದು. ದೇಹದಾರ್ಢ್ಯವನ್ನು ವೃದ್ಧಿಪಡಿಸುವುದಕ್ಕಾಗಿ ಸ್ವಲ್ಪಮೆಟ್ಟಿಗೆ ಬಾಲಕರಿಂದ ವ್ಯಾಯಾಮವನ್ನು ಮಾಡಿಸಬೇಕು.

ಬೋಧನೆ, ನೀತ್ಯನುಶಾಸನ ಇವುಗಳು ಅವಶ್ಯಕವೆಂದು ಎಲ್ಲರೂ ಒಪ್ಪುವರಾದುದರಿಂದ ಅವುಗಳ ವಿಷಯವಾಗಿ ಇಲ್ಲಿ ಸವ್ಯದಲ್ಲಿ ವಿಶೇಷವಾಗಿ ಬರೆಯಬೇಕಾದುದಿಲ್ಲ.

ಮಿಸೆಸ್ ಆನಿಬಸಾಂಟರವರು ಬೆಂಗಳೂರು ಹಿಂದೂ ಬಾಲೆಯರಿಗೆ ಹೇಳಿದ ಬುದ್ಧಿವಾದವು.

ನನ್ನ ಪ್ರಿಯಪಾತ್ರರಾದ ಚಿಕ್ಕಸಹೋದರಿಯರಾ ! ಮನೆಗಳಲ್ಲಿ ಹಿರಿಯಕ್ಕನು ಕಿರಿಯವರಿಗೆಲ್ಲಾ ಬುದ್ಧಿಯನ್ನು ಹೇಳತಕ್ಕದ್ದು ಸಹಜವೆಂಬದನ್ನು ನೀವು ಬಲ್ಲರಷ್ಟೆ. ಆದ್ದರಿಂದ ಮುಖಮಾತ್ರ ಬಿಳೀದಾದ, ಹೃದಯವನ್ನು ಹಿಂದಕ್ಕೆಳದಾಗಿಯುಳ್ಳ, ನಿಮ್ಮಗಳ ಹಿರಿಯಕ್ಕನಾದ ನಾನು, ನಿಮ್ಮಗಳ ಓದು ಮತ್ತು ನಡತೆಗಳ ವಿಷಯದಲ್ಲಿ ಸಣ್ಣದಾದ ಒಂದು ಬುದ್ಧಿವಾದವನ್ನು ಹೇಳುತ್ತೇನೆ.

ನೀವು ಈಗ ಬಾಲೆಯರು, ಮುಂದೆ ಪಾತಿವ್ರತ್ಯವು, ದೈವಭಕ್ತಿಯು, ಹರಿಶುದ್ಧತೆಯೂ, ಶ್ರದ್ಧೆಯೂ, ಗಾಂಭೀರ್ಯವೂ, ಪ್ರೀತಿಯೂ, ಮತ್ತು ಭೂತದಯಪಶ್ಚಾತ್ತಾಪ ಇವುಗಳೇ ಮೊದಲಾದ ಅನೇಕ ಸದ್ಗುಣಗಳು ನಿಮ್ಮಲ್ಲಿ ಮೂರ್ತೀಭವಿಸಿವೆ ಎಂದು ಭಾವಿಸಲ್ಪಡುವಂಥಾ ಕುಲವಧುಗಳಾಗಿಯೂ, ಮಾತೃಗಳಾಗಿಯೂ, ಮತ್ತು ಗುಣವತಿಯರಾಗಿಯೂ ಆಗುವಿರಿ. ಈ ಭರತಖಂಡದಲ್ಲಿ ಸ್ತ್ರೀಯರು ಈ ಸದ್ಗುಣಗಳಿಗೆ ಅನಾದಿಯಾಗಿ ಪ್ರಸಿದ್ಧರಾಗಿದಾರೆ. ನೀವುಗಳೂ ಹಾಗೆಯೇ ಗುಣವತಿಯರಾಗತಕ್ಕದ್ದು ನಿಮ್ಮಗಳ ಕರ್ತವ್ಯವಾಗಿದೆ. ಸ್ತ್ರೀಯು ಹ್ಯಾಗಿರಬೇಕು ಮತ್ತು ಆಕೆಯ ಕರ್ತವ್ಯಗಳೇನು ಎಂಬ ಅಂಶಗಳನ್ನು ತಿಳಿದುಕೊಳ್ಳಬೇಕಾದರೆ ಶ್ರೀರಾಮನ ವಲ್ಲಭೆಯಾದ ಸೀತಾದೇವಿಯ ಚರಿತ್ರೆಯನ್ನು ಓದಿದರೆ ತಿಳಿಯುವುದು. ಅದನ್ನೆಲ್ಲಾ ಓದಿ ತಿಳಿದುಕೊಂಡು ಹಾಗೆ ನಡೆದುಕೊಳ್ಳುವುದು ನಿಮಗೆ ಅತ್ಯಂತ ಗೌರವವನ್ನೂ ಶ್ರೇಯಸ್ಸನ್ನೂ ಉಂಟುಮಾಡುವುದು. ತೇಜೋವತಿಯಾದ, ಸುಂದರಿಯಾದ,

ಸುಕುಮಾರಶರೀರವುಳ್ಳ, ಮತ್ತು ರಾಜಪುತ್ರಿಯಾದ, ಆ ಮಹಾಪತಿವ್ರತೆಯಾದ ಸೀತಾದೇವಿಯು, ತನ್ನ ಪತಿಯಾದ ಶ್ರೀರಾಮನು ವನವಾಸಕ್ಕೆ ಹೊರಟಾಗ ಸಮಸ್ತವಾದ ರಾಜಭೋಗಗಳನ್ನೂ ತೃಣೀಕರಿಸಿ ಬಿಟ್ಟು, ತನ್ನ ಪತಿಯು ಸಂಗಡ ಘೋರಾರಣ್ಯಗಳಲ್ಲಿ ವಾಸಮಾಡುವುದನ್ನೇ ಸುಖವಾಗಿ ತಿಳಿದು ಶ್ರೀರಾಮನ ಜೊತೆಯಲ್ಲಿ ಅರಣ್ಯಕ್ಕೆ ಹೊರಟಳು. ನವರತ್ನಖಚಿತವಾದ ಆಭರಣಗಳನ್ನೂ ದಿವ್ಯದುಕೂಲಗಳನ್ನೂ ನಿರಾಕರಿಸಿ, ವರಟಾದ ನಾರುಬಟ್ಟೆಗಳನ್ನು ಧರಿಸಿದಳು; ರಾಜಯೋಗ್ಯವಾದ ಷಡ್ರಸೋಪೇತವಾದ ಆಹಾರವನ್ನು ಲಕ್ಷಿಸದೆ, ಪತಿಯಿಂದ ಯುಕ್ತಳಾಗಿ ಅರಣ್ಯದಲ್ಲಿ ದೊರೆಯುವ ಕಂದಮೂಲ ಫಲಾಹಾರವೇ ರುಚಿಯೆಂದು ಭಾವಿಸಿದಳು. ಮೃದುವಾದ ಪಾದುಕೆಗಳನ್ನು ಧರಿಸಿ ರಥಗಳಲ್ಲಿ ಕುಳಿತು ಸಂಚಾರಮಾಡುವುದಕ್ಕಿಂತ, ಪತಿಯಿಂದ ಯುಕ್ತಳಾಗಿ ಕಲ್ಲುಮುಳ್ಳುಗಳಿಂದೂ ಭಯಂಕರವಾದ ದುಷ್ಟಮೃಗಗಳಿಂದಲೂ ಭರಿತವಾದ ಘೋರಾರಣ್ಯದಲ್ಲಿ ಸಂಚರಿಸುವುದೇ ಸುಖಕರವಾದದ್ದೆಂದು ತಿಳಿದಿದ್ದಳು. ಇದಕ್ಕೆಲ್ಲಾ ಮಹಾಪತಿವ್ರತೆಯಾದ ಸೀತಾದೇವಿಯು ತನ್ನ ಪತಿಯಾದ ಶ್ರೀರಾಮನನ್ನು ಪರಮೇಶ್ವರನೆಂದು ಭಾವಿಸಿ, ಆತನಲ್ಲಿ ಅನ್ಯಾದೃಶವಾದ ಪ್ರೀತಿಯನ್ನೂ ಭಕ್ತಿಯನ್ನೂ ಇಟ್ಟು, ಆತನನ್ನು ಅಗಲಿರುವುದಕ್ಕೆ ಅಪೇಕ್ಷಿಸದೆ, ಸರ್ವದಾ ಆತನ ಸವಿಾಪದಲ್ಲಿರಬೇಕೆಂಬ ಅಭಿಲಾಷೆಯೇ ಮುಖ್ಯಕಾರಣವು. ಆಕೆಯು ತನ್ನ ಪತಿಗೆ ಕಷ್ಟವು ಉಂಟಾದ ಕಾಲದಲ್ಲಿ ಅಸದೃಶವಾದ ಅಂತಃಕರಣದಿಂದಲೂ ಮೃದುಮಧುರವಾದ ವಾಕ್ಯಗಳಿಂದಲೂ ಶ್ರೀರಾಮನ ಮನಸ್ಸನ್ನು ಸಂತೋಷಪಡಿಸುತ್ತಿದ್ದಳು ಇಂಥಾ ಸೀತಾದೇವಿಯು ಶ್ರೀರಾಮನ ಸವಿಾಪದದೆಸೆಯಿಂದ ಅಪಹರಿಸಲ್ಪಟ್ಟು, ದ್ವೀಪಾಂತರದಲ್ಲಿಡಲ್ಪಟ್ಟು, ಅಸಹಾಯಳಾಗಿ, ಪ್ರಾಣಭೀತಿಯುಂಟಾಗಿದ್ದಾಗ್ಯೂ, ಶ್ರೀರಾಮನಲ್ಲಿದ್ದ ಭಕ್ತಿಯನ್ನೂ ಪ್ರೀತಿಯನ್ನೂ ಸ್ವಲ್ಪವಾದರೂ ಕಡಮೆಮಾಡದೆ, ಏಕರೀತಿಯಾಗಿ ತನ್ನ ಪತಿಯನ್ನೇ ಕಾಯಾವಾಚಾ ಮನಸಾ ನಂಬಿದ್ದಳು. ಹೀಗೆ ಮಹಾಪತಿವ್ರತೆಯಾದ ಸೀತಾದೇವಿಯ ಚರಿತ್ರೆಯನ್ನು ಜೆನ್ನಾಗಿ ತಿಳಿದುಕೊಂಡು, ಆಕೆಯ ಗುಣಗಳನ್ನೇ ಅನುವರ್ತಿಸುವುದಕ್ಕೆ ಪ್ರಯತ್ನಪಡಬೇಕು. ಇದೇ ರೀತಿಯಲ್ಲಿ ಭಾರತೇಯರಲ್ಲಿ ಪ್ರಸಿದ್ಧರಾದ ಸಾವಿತ್ರಿ, ಶಕುಂತಳೆ ಮುಂತಾದ ಮಹಾಪತಿವ್ರತೆಯರುಗಳ ಚರಿತ್ರೆಯನ್ನೂ ತಿಳಿದುಕೊಳ್ಳಬೇಕು.

ನೀವು ಪಾಂಡಿತ್ಯವುಳ್ಳವರಾಗಬೇಕಾದರೆ ಬ್ರಹ್ಮವೇತ್ತಳಾದ ಗಾರ್ಗಿ ಮತ್ತು

ನಿತ್ಯನಾದ ಆತ್ಮಜ್ಞಾನದ ರಹಸ್ಯವನ್ನು ತನ್ನ ಪತಿಯಿಂದ ಉಪದೇಶಿಸಲ್ಪಟ್ಟ ಮೈತ್ರೇಯಿ, ಇವರುಗಳ ಚರಿತ್ರೆಯನ್ನು ತಿಳಿಯಬೇಕು. ಭಕ್ತರಹೃದಯದಲ್ಲಿ ಜ್ಞಾನವು ತಾನಾಗಿಯೇ ಉತ್ಪತ್ತಿಯಾಗುವುದೆಂದು ಶ್ರೀಕೃಷ್ಣನು ಹೇಳಿರುವಂತೆ ಇಂಥಾ ಜ್ಞಾನವು ಭಕ್ತಿಯಿಂದಲೂ, ಸೇವೆಯಿಂದಲೂ, ಶ್ರದ್ಧೆಯಿಂದಲೂ ಲಭಿಸತಕ್ಕದ್ದಾಗಿದೆ.

ನಿಮ್ಮ ಪಾಠಶಾಲೆಗಳಲ್ಲಿ ಹೇಳುವ ಪಾಠಗಳನ್ನು ಚೆನ್ನಾಗಿ ಕಲಿತುಕೊಳ್ಳಬೇಕು. ನಿಮ್ಮ ಉಪಾಧ್ಯಾಯರುಗಳ ವಿಷಯದಲ್ಲಿ ವಿಧೇಯರಾಗಿಯೂ, ಭಕ್ತಿಯುಳ್ಳವರಾಗಿಯೂ ನಡೆದುಕೊಳ್ಳಬೇಕು ಆದರೆ ಪಾತಿವ್ರತ್ಯವೂ ಪರಿಶುದ್ಧತೆಯೂ, ಪಾಂಡಿತ್ಯಕ್ಕಿಂತ ಅತಿಶಯವಾದವುಗಳೆಂಬದನ್ನೂ, ಘನವಾದ ನಡತೆಯು ಪುಸ್ತಕಗಳಿಂದುಂಟಾಗತಕ್ಕ ವಿಜಯಕ್ಕಿಂತ ದೊಡ್ಡದೆಂಬದನ್ನೂ ಮಾತ್ರ ಯಾವಾಗಲೂ ನೆನಪಿನಲ್ಲಿಡಿರಿ. ಕರುಣಾವುಳ್ಳವರಾಗಿಯೂ, ಸಭ್ಯರಾಗಿಯೂ, ಉದಾರಬುದ್ಧಿಯುಳ್ಳವರಾಗಿಯೂ ಇರಿ. ಅನ್ಯರ ಪದ್ಧತಿಯನ್ನು ಅನುಸರಿಸಬೇಡಿರಿ. ಡಂಭವಿಲ್ಲದ ಘನವಾದ ಮತ್ತು ಹಿಂದುಗಳಿಗೆ ಸಹಜಗಳಾದ ಪದ್ಧತಿಗಳನ್ನು ಬಿಡಬೇಡಿರಿ. ದೈವಭಕ್ತಿ ಭೂತದಯೆ ಪಶ್ಚಾತ್ತಾಪವೇ ಮೊದಲಾದ ಸದ್ಗುಣಭರಿತಳಾದ ಒಬ್ಬ ಭಾರತೇಯಳಾವ ಕುಲವಧುವಾಗಿರುವುದಕ್ಕಿಂತ ಹೆಚ್ಚಾದ ಘನತೆಯು ಭೂಲೋಕದಲ್ಲಿ ದೊರೆಯಲಾರದು. ನೀವುಗಳು ಇಂಥಾ ಗುಣವುಳ್ಳವರಾಗಿ ದೇವರನ್ನು ಪೂಜಿಸುತ್ತಲೂ, ಮಾತಾಪಿತೃಗಳಿಗೂ ಪತಿಗೂ ವಿಧೇಯರಾಗಿಯೂ, ಇಹಪರಗಳಲ್ಲಿ ನಿಮ್ಮ ಸತ್ಕೀರ್ತಿಯು ಪ್ರಸರಿಸುವಂತೆ ಮಾಡುವವರಾಗಿಯೂ, ಆಗಬೇಕೆಂದು ದೇವರನ್ನು ಪ್ರಾರ್ಥಿಸುವೆನು.—ವೈತ್ತಾಂತಚಿಂತಾಮಣಿ.

ಬೆಳೆಗಳ ಬದಲಾವಣೆ (ಪರಿವರ್ತನೆ.)

ಬೆಳೆಗಳ ಬದಲಾವಣೆಯೆಂದರೆ ಸಾಗುವಳಿಮಾಡುವ ಭೂಮಿಯಲ್ಲಿ ಭೂಸಾರವು ಕುಂದದೆ ವಿಶೇಷ ಆದಾಯದ ಪೈರುಗಳನ್ನು ಒಂದು ಕ್ರಮವರಿತು ವರ್ಷಂಪ್ರತಿಯಲ್ಲೂ ಬದಲಾಯಿಸಿ ಸಾಗುವಳಿ ಮಾಡುವದು. ಬೆಳೆಗಳ ಬದಲಾವಣೆಕ್ರಮವು ನಮ್ಮ ದೇಶೀಯರಲ್ಲಿ ರೂಢಿಯಿಲ್ಲ. ರೈತನು ತಾನು ಬೆಳೆಯುವ ಪೈರುಗಳನ್ನು ಕ್ರಮವರಿತು ಬದಲಾಯಿಸುತ್ತಾ ಇದ್ದರೆ ಬಹಳ ಲಾಭ ಹೊಂದಬಹುದು. ಆದರೆ ನಮ್ಮ

ರೈತನು ಹೀಗೆ ಮಾಡದೆ ಪೂರ್ವದಿಂದ ನಡೆದುಬಂದಂತೆಯೆ ಮಾಡುವದು ಮುಖ್ಯವೆಂದ
ಭಾವಿಸಿ ಇಂಥಾ ಹೊಸ ಏರ್ಪಾಟುಗಳನ್ನು ಯೋಚಿಸದೆ ತಟಸ್ಥರಾಗಿರುತ್ತಾರೆ, ಅ
ದೆ ಈ ಕ್ರಮವನ್ನು ಅನ ಸರಿಸುವದಕ್ಕೆ ತಕ್ಕಷ್ಟು ಹಿಡುವಳಿ ಜವಿಾನು ಇಲ್ಲವೆಂದೂ
ಖಚೆಬಗೆ ಪೈರುಗಳನ್ನು ಬೆಳೆಯುವರೀತಿ ತಿಳಿಯದೆಂದೂ, ಕಾರಣಗಳನ್ನು ಕಲ್ಪಿಸ
ತಕ್ಕರೆ. ಹೀಗೆ ಧೋರಣೆಯಾಗಿರುವದು ಸರಿಯೂಗಿ ಕಾಣಬರುವದಿಲ್ಲ. ಎಷ್ಟು ಕೊಂಚ
ಭೂಮಿಯಿದ್ದರೂ ಅದರಲ್ಲಯೇ ಈ ಕೆಳಗೆ ತಿಳಿಯಪಡಿಸುವ ಕೆಲವಂಶಗಳನ್ನು ಮನಸ್ಸಿ
ಗೆ ತಂದು ಸ್ವಲ್ಪ ಸ್ವಲ್ಪವಾಗಿ ರೂಢಿಯಲ್ಲಿತಂದು, ಅದರಿಂದುಂಟಾಗುವ ಅನುಭವಗ
ನ್ನು ನೋಡಿದರೆ ಈ ಕ್ರಮವನ್ನನುಸರಿಸುವದು ಅನುಕೂಲವೋ ಅಥವಾ ಪ್ರತಿಕೂ
ಲವೋ ಎಂಬುದು ತಿಳಿಯಬರುವದು.

ಬೆಳೆಗಳನ್ನು ಬದಲಾಯಿಸುವದೇ ಮುಖ್ಯವೆಂದು ಮನಸ್ಸಿಗೆಬಂದಂತೆ ಸಿಕ್ಕಿ
ದ ಪೈರುಗಳನ್ನೆಲ್ಲಾ ಬೆಳೆಯುವದಕ್ಕಾಗುವದಿಲ್ಲ. ತಮ್ಮ ಜವಿಾನಿನಲ್ಲಿ ಬೆಳೆಯುತಕ
ಕುತ್ತು ಆ ಪ್ರದೇಶದ ಋತುಕಾಲ ಭೇದಗಳಿಗೆ ಯೋಗ್ಯವಾದ ಮತ್ತು ಸರಿಯಾ
ಬೆಲೆಗೆ ಕ್ರಯವಾಗತಕ್ಕ ಪೈರುಗಳನ್ನು ಬೆಳಸಬೇಕು. ವ್ಯಾಪಾರಕ್ಕಾಗಿ ಬೆಳೆಯು
ಪೈರುಗಳಿಗೆ ಮುಂಚಿತವಾಗಿ ರೈತನ ದನಗಳಿಗೂ, ತನ್ನ ಸ್ವಂತ ಉಪಯೋಗಕೂ
ಬೇಕಾದ ಪದಾರ್ಥಗಳನ್ನು ಬೆಳೆಯಬೇಕು. ಇದಲ್ಲದೆ ಇಂಥಾ ಪೈರುಗಳನ್ನು ಬದಲ
ಯಿಸಿ ಬೆಳೆಯುವದರಲ್ಲಯೂ ಒಂದು ಕ್ರಮ (Principle) ವಿರಬೇಕು. ಈ ಕ್ರ
ಮಗಳು (Princples) ನಾನಾಬಗೆಯಾಗಿವೆ.

೧ ಒಂದೊಂದು ಜಾತಿ ಪೈರಿಗೆ ಒಂದೊಂದುಬಗೆ ಆಹಾರ ಬೇಕಾಗಿರುವದು
ಹಾಲ್ಯಗೆಂದರೆ ರಾಗಿ, ಜೋಳ, ಸಾಮೆ, ಸಜ್ಜೆ ಮುಂತಾದ ಧಾನ್ಯ ಪೈರುಗಳು ನೈಟ್ರೊ
ಜನ್, ಸಿಲಿಕಾ, ಫಾಸ್ಫರಸ್‌ಗಳನ್ನು ತೆಗೆದುಕೊಳ್ಳುತ್ತವೆ. ತೊಗರಿ, ಅವರೆ ಮು
ತಾದ ದ್ವಿದಳಗಳು ಸುಣ್ಣ ನೈಟ್ರೊಜನ್ನುಗಳನ್ನು ಆಹಾರವಾಗಿ ತೆಗೆದುಕೊಳ್ಳುತ್ತ
ವೆ. ಹೀಗೆಯೆ ಎಣ್ಣೆಕಾಳುಗಳು, ಸಂಬಾರಪದಾರ್ಥಗಳು ವಿಧವಿಧವಾದ ಆಹಾರಗ
ನ್ನು ತೆಗೆದುಕೊಳ್ಳುತ್ತವೆ. ಆದ್ದರಿಂದ ಪ್ರತಿವರ್ಷವು ಒಂದೇವಿಧವಾದ ಆಹಾರವನ್ನು
ತಿನ್ನುವ ಪೈರುಗಳನ್ನು ಬೆಳೆಯಿಸುತ್ತಾ ಬಂದರೆ ಆ ಆಹಾರವು ಕಡಮೆಯಾಗುವದಲ್ಲದೆ
ಬೆಳೆಯು ಗುಣಗಳು ಕಮ್ಮಿಯಾಗುತ್ತಾ ಬರುತ್ತವೆ. ಆದಕಾರಣ ಪೈರು ಜೆನ್ನಾಗಿ
ಡಕೆ, ಪ್ರತಿವರ್ಷವು ಗೊಬ್ಬರ ಹಾಕುತ್ತಲೇ ಇರಬೇಕು. ಪರಿವರ್ತನೆಯು ಕ್ರಮ

ಪ್ರಕಾರ ಈ ವರ್ಷ ಇಟ್ಟ ಪೈರನ್ನು ಮುಂದಿನ ವರ್ಷದಲ್ಲಿ ಬೆಳೆಯದಿದ್ದರೆ, ಅನುಪಯೋಗಸ್ಥಿತಿಯಲ್ಲಿರುವ ಆ ಪೈರಿನ ಆಹಾರವು ಇನ್ನೊಂದಾವೃತ್ತಿ ಬಿತ್ತುವಷ್ಟರೊಳಗೆ ವಿಲೀನತೆಹೊಂದಿ ಆಹಾರಕ್ಕೆ ಯೋಗ್ಯವಾಗುತ್ತದೆ. ಆದುದರಿಂದ ಒಂದುಬಗೆ ಆಹಾರ ತೆಗೆದುಕೊಳ್ಳುವ ಬೆಳೆಯನ್ನಿಟ್ಟು ಕೊಯ್ದನಂತರ ಮತ್ತೊಂದುಬಗೆ ಆಹಾರವನ್ನು ಪೋಷಿಸುವ ಪೈರನ್ನು ಬೆಳೆಯಿಸಬೇಕು.

೨ ಕೆಲವು ಪೈರುಗಳು (ಹತ್ತಿ, ಜೋಳ) ಉದ್ದವಾಗಿ ಬೆಳೆದು ಕಳೆಗಳು ಬೆಳೆಯುವುದಕ್ಕೆ ಮಾರ್ಗ ಕೊಡುತ್ತವೆ. ಪ್ರತಿವರ್ಷವೂ ಈ ಬೆಳೆಗಳನ್ನು ಬೆಳೆಯುತ್ತಿದ್ದರೆ ಕಳೆಗಳು ವಿಶೇಷವಾಗಿ ಬೆಳೆದು ಮುಂದೆ ಉಳುವದಕ್ಕೂ ಮತ್ತು ಇತರ ಕೆಲಸಗಳಿಗೂ ಅನನುಕೂಲವಾಗುವದಲ್ಲದೆ, ಭೂಮಿಯು ಹೊಲಸಾಗುವದು. ಆದುದರಿಂದ ಕಳೆಗಳು ಬೆಳೆಯುವದಕ್ಕೆ ಮಾರ್ಗಕೊಡದೆ ಹರಡಿಕೊಂಡು ಬೆಳೆಯುವ ಕಡಲೆ, ಹುರಳಿ, ನೆಲಗಡಲೆ ಮುಂತಾದ ಪೈರುಗಳನ್ನು ಮುಂದಿನ ವರ್ಷದಲ್ಲಿ ಬೆಳೆಯಬೇಕು.

೩ ಉದ್ದವಾದ ಬೇರುಳ್ಳ ನೀಲಿ, ಹತ್ತಿ, ತೊಗರಿ ಮುಂತಾದ ಪೈರುಗಳನ್ನು ಪ್ರತಿವರ್ಷವೂ ಬೆಳೆಯುತ್ತಿದ್ದರೆ ಕೆಳಮಣ್ಣಿನಲ್ಲಿರುವ ಸಸ್ಯಾಹಾರವೆಲ್ಲಾ ಖರ್ಚಾಗಿ ಮುಂದೆ ಅಂಥಾ ಪೈರುಗಳನ್ನು ಬೆಳೆಯಲು ಪ್ರಯೋಜನವಿರುವದಿಲ್ಲ. ಆದುದರಿಂದ ಮೇಲೆ ಮೇಲೆ ಬೇರುಗಳುಳ್ಳ ರಾಗಿ, ಈರುಳ್ಳಿ ಮುಂತಾದ ಪೈರುಗಳನ್ನು ಎರಡನೇ ವರ್ಷ ಬೆಳೆಯುತ್ತಿದ್ದರೆ ಮೇಲುಮಣ್ಣಿನಲ್ಲಿರುವ ಆಹಾರವು ವ್ಯಯವಾದರೂ ಕೆಳಮಣ್ಣಿನಲ್ಲಿ ಅನುಪಯೋಗಸ್ಥಿತಿಯಲ್ಲಿರುವದು ವಿಲೀನತೆಹೊಂದಿ ಉಪಯೋಗಕ್ಕೆ ಬರುವದು.

೪ ಈವರ್ಷ ಯಾವದಾದರೂ ಒಂದು ಪೈರಿಗೆ ಒಂದಾನೊಂದು ರೋಗ ತಗಲಿ ಮುಂದಿನವರ್ಷ ಅದೇ ಪೈರನ್ನು ಬೆಳೆದರೆ ಆ ರೋಗವು ಪುನಃ ತಲೆದೋರುತ್ತೆ. ಅಲ್ಲದೆ ಹುಳುಗಳು, ಮೃಗಗಳು ಹೋದವರ್ಷದ ರುಚಿಯಿಂದ ತಿರಿಗಿಬಂದು ಅಭಿವೃದ್ಧಿಯಾಗಿ ಆ ಹೊಲದ ಪೈರನ್ನು ಕೆಡಿಸುವವಲ್ಲದೆ ಪಕ್ಕದಲ್ಲಿರುವ ಇತರ ಪೈರುಗಳಿಗೂ ತಗುಲಿ ನಷ್ಟಪಡಿಸುತ್ತವೆ. ಆದುದರಿಂದ ಅಂಥಾ ರೋಗ, ಹುಳುಗಳು ಹತ್ತಿದ ಪೈರುಗಳನ್ನು ಮುಂದಿನವರ್ಷ ಬೆಳೆಯದೆ ಬೇರೆವಿಧವಾದ ಪೈರನ್ನಿಡಬೇಕು

೫ ಭೂಮಿಯನ್ನು ಕೇವಲ ನಿಸ್ಸಾರಮಾಡಿಬಿಡತಕ್ಕ ಹೊಗೇಸೊಪ್ಪು, ಕಬ್ಬು ಇವುಗಳನ್ನು ಪ್ರತಿವರ್ಷವೂ ಬೆಳೆಯುವದರಿಂದ ಭೂಮಿಯು ಅತಿ ನಿಸ್ಸಾರವಾಗಿ ಬಂಜರಾಗುತ್ತೆ. ಆದುದರಿಂದ ಒಂದುವರ್ಷ ಇಂಥಾ ಪೈರನ್ನು ಬೆಳೆದು, ಮುಂದಕ್ಕೆ

ಸಾರವನ್ನು ವಿಶೇಷವಾಗಿ ತೆಗೆಯದ ಪೈರನ್ನು ಬೆಳೆದರೆ ಈ ನಷ್ಟವು ಕೂಡಿಬರುವದು.

೬ ಬಹಳದಿವಸ ಭೂಮಿಯುನ್ನಾಕ್ರಮಿಸುವ (ಕಬ್ಬು, ಅರಸಿನ) ಪೈರುಗಳನ್ನು ಎಡಬಿಡದೆ ಬೆಳೆಯುವದರಿಂದ ರೈತನಿಗೆ ಕಾಲವು ನಷ್ಟವಾಗುವದು. ಆದಕಾರಣ ಒಂದು ವರ್ಷದಲ್ಲಿ ಬಹಳದಿವಸ ಭೂಮಿಯಲ್ಲಿರತಕ್ಕ ಪೈರನ್ನು ಬೆಳೆದರೆ ಮುಂದಿನವರ್ಷದಲ್ಲಿ ಬಹಳ ಕೊಂಚದಿವಸವೇ ಆಕ್ರಮಿಸತಕ್ಕ (ಕೊತ್ತುಮುರಿ, ಕಡಲೆ, ಮೂಲಂಗಿ) ಪೈ ುಗಳನ್ನು ಬೆಳೆಯುತಕ್ಕದ್ದು.

ಈ ಆರು ಕ್ರಮಗಳಿಂದ (Principle) ಆರುವಿಧವಾದ ಪ್ರಯೋಜನಗಳು ಕಂಡುಬರುತ್ತವೆ :—

೧ ನೇದರಿಂದ—ಗೊಬ್ಬರದ ಉಪಯೋಗವು ಮಿತವಾಗುವದು ;

೨ ನೇದರಿಂದ-ಕಳೆಗಳಿಲ್ಲದೆ ಭೂಮಿಯುನ್ನು ಶುಚಿಯಾಗಿಟ್ಟುಕೊಳ್ಳಬಹುದು;

೩ ನೇದರಿಂದ—ಕೆಳಮಣ್ಣು, ಮೇಲುಮಣ್ಣುಗಳಿಗೆ ವಿಶ್ರಾಂತಿದೊರೆಯು ವದು ;

೪ ನೇದರಿಂದ—ಪೈರಿಗೆ ತಗಲುವ ರೋಗಾದಿಗಳನ್ನು ಹೋಗಲಾಡಿಸ ಬಹುದು ;

೫ ನೇದರಿಂದ-ಭೂಸಾರವನ್ನು ಒಂದೇಸಮನಾಗಿ ಕಾಪಾಡಿಕೊಳ್ಳಬಹುದು ;

೬ ನೇದರಿಂದ—ರೈತನಿಗೆ ಕಾಲವು ಕೂಡಿಬರುವದು.

೫ ಕ್ರಮಗಳಪ್ರಕಾರ ಪೈರುಗಳನ್ನು ಬದಲಾಯಿಸುವರೀತಿ ಹ್ಯಾಗೆಂದರೆ:-

ಒಂದು ಜವಿಾನನ್ನು ೫ ಭಾಗಗಳನ್ನಾಗಿಮಾಡಿ ಅವುಗಳಿಗೆ ಕ, ಚ, ಟ, ತ, ಪ ಎಂದು ಕರೆಯುವ. ಐದುಭಾಗಗಳಲ್ಲಿಯೂ ಬೇರೆಬೇರೆ ಪೈರುಗಳಿಟ್ಟಿವೆ ಎಂದು ಊಹಿಸೋಣ. ಈ ಕ, ಚ, ಟ, ತ, ಪ ಭಾಗಗಳಲ್ಲಿ ಒಂದುವರ್ಷದಲ್ಲಿ ಬೆಳೆದ ಪೈರುಗ ಳನ್ನು ಮುಂದಿನವರ್ಷ ಅದೇಭಾಗಗಳಲ್ಲಿ ಬೆಳೆಯದೆ, ಆ ಪೈರುಗಳನ್ನು ಚ, ಟ, ತ, ಪ, ಕ ಭಾಗಗಳಲ್ಲಿಯೂ ; ಮೂರನೇವರ್ಷ ಟ, ತ, ಪ, ಕ, ಚ ಭಾಗಗಳಲ್ಲಿಯೂ ; ನಾಲ್ಕನೆಯವರ್ಷ ತ, ಪ, ಕ, ಚ, ಟ ಭಾಗಗಳಲ್ಲಿಯೂ ; ಐದನೆಯುವರ್ಷ ಪ, ಕ, ಚ, ಟ, ತ ಭಾಗಗಳಲ್ಲಿಯೂ ಕ್ರಮವಾಗಿ ಬೆಳೆದು, ಆರನೇವರ್ಷದಲ್ಲಿ ಪುನಃ ಮೊದ ಲನೇವರ್ಷದಂತೆಯೆ ಆಯಾಯು ತುಂಡಿನಲ್ಲಿ ಅದೇ ಪೈರುಗಳನ್ನು ಬೆಳೆಯುವದು.

ಈ ಕೆಳಗಿನ ಪಟ್ಟಿಯಿಂದ ಮೇಲೆ ಹೇಳಿದ ಸಂಗತಿಯು ವಿಶದವಾಗುವದು.

ವರ್ಷ	ಭೂಮಿ.				
	'ಕ' ಭಾಗ	'ಚ' ಭಾಗ	'ಟ' ಭಾಗ	'ತ' ಭಾಗ	'ಪ' ಭಾಗ
ಒಂದನೇ	ನವಣೆ	ತೊಗರಿ	ಸಾವೆ	ಹರಳು	ಹುರಳಿ
ಎರಡನೇ	ತೊಗರಿ	ಸಾವೆ	ಹರಳು	ಹುರಳಿ	ನವಣೆ
ಮೂರನೇ	ಸಾವೆ	ಹರಳು	ಹುರಳಿ	ನವಣೆ	ತೊಗರಿ
ನಾಲ್ಕನೇ	ಹರಳು	ಹುರಳಿ	ನವಣೆ	ತೊಗರಿ	ಸಾವೆ
ಐದನೇ	ಹುರಳಿ	ನವಣೆ	ತೊಗರಿ	ಸಾವೆ	ಹರಳು

ಇದು ಐದು ವರ್ಷದ ಪರಿವರ್ತನೆಯಾಗಿದೆ. ಇದೇರೀತಿ ಎರಡು, ಮೂರು, ನಾಲ್ಕು, ಆರು ವರ್ಷದ ಪರಿವರ್ತನೆಗಳನ್ನು ಮಾಡಬೇಕು. ಆದರೆ ಬೆಳೆಗಳು ಬೇರೆ ಬೇರೆ ಯಾದರೂ ಹಿಂದೆ ಸೂಚಿಸಿದಂತೆ ಒಂದೇವಿಧವಾದ ಆಹಾರವನ್ನು ತಿನ್ನುವ, ಕಳೆ ಗಳಿಗೆ ಆಸ್ಪದ ಕೊಡದ, ಭೂಮಿಯನ್ನು ನಿಸ್ಸಾರಮಾಡದ, ಇತ್ಯಾದಿ ಪೈರುಗಳನ್ನು ಬೆಳೆಯುದಂತೆ ನೋಡಿಕೊಳ್ಳುವದು ಮುಖ್ಯವಾಗಿದೆ. ಆದರೆ ಹೊಗೇಸೊಪ್ಪು, ಎಳ್ಳು ಬೇರೆಬೇರೆ ಪೈರುಗಳಾದರೂ, ಈ ಎರಡೂ ಭೂಮಿಯನ್ನು ನಿಸ್ಸಾರಮಾಡತಕ್ಕವುಗಳಾ ಗಿವೆ. ಆದುದರಿಂದ ಹೊಗೇಸೊಪ್ಪು ಬೆಳೆದ ಮುಂದಿನ ವರ್ಷ ಎಳ್ಳು ಬೆಳೆಯದೆ ಭೂಮಿ ಯನ್ನು ನಿಸ್ಸಾರ ಮಾಡದ ಯಾವ ಪೈರನ್ನಾದರೂ ಇಡಬಹುದು.

ಕೆ. ಶೇಷಾದ್ರಿ ಅಯ್ಯಂಗಾರ್,
ನಾರ್ಮಲ್‌ಸ್ಕೂಲ್, ಮೈಸೂರು.

ಸಾರವನ್ನು ವಿಶೇಷವಾಗಿ ತೆಗೆಯದ ಪೈರನ್ನು ಬೆಳೆದರೆ ಈ ನಷ್ಟವು ಕೂಡಿಬರುವದು.

೬ ಬಹಳದಿವಸ ಭೂಮಿಯುನ್ನಾಕ್ರಮಿಸುವ (ಕಬ್ಬು, ಅರಸಿನ) ಪೈರುಗಳನ್ನು ಎತಬಿಡದೆ ಬೆಳೆಯುವದರಿಂದ ರೈತನಿಗೆ ಕಾಲವು ನಷ್ಟವಾಗುವದು. ಆದಕಾರಣ ಒಂದು ವರ್ಷದಲ್ಲಿ ಬಹಳದಿವಸ ಭೂಮಿಯಲ್ಲಿರತಕ್ಕ ಪೈರನ್ನು ಬೆಳೆದರೆ ಮುಂದಿನವರ್ಷದಲ್ಲಿ ಬಹಳ ಕೊಂಚದಿವಸವೇ ಆಕ್ರಮಿಸತಕ್ಕ (ಕೊತ್ತುಮರಿ, ಕಡಲೆ, ಮೂಲಂಗಿ) ಪೈರುಗಳನ್ನು ಬೆಳೆಯುತಕ್ಕದ್ದು.

ಈ ಆರು ಕ್ರಮಗಳಿಂದ (Principle) ಅರುವಿಧವಾದ ಪ್ರಯೋಜನಗಳು ಕಂಡುಬರುತ್ತವೆ :—

೧ ನೇದರಿಂದ—ಗೊಬ್ಬರದ ಉಪಯೋಗವು ಮಿತವಾಗುವದು ;

೨ ನೇದರಿಂದ-ಕಳೆಗಳಿಲ್ಲದೆ ಭೂಮಿಯನ್ನು ಶುಚಿಯಾಗಿಟ್ಟುಕೊಳ್ಳಬಹುದು;

೩ ನೇದರಿಂದ—ಕೆಳಮಣ್ಣು, ಮೇಲುಮಣ್ಣುಗಳಿಗೆ ವಿಶ್ರಾಂತಿದೊರೆಯುವದು ;

೪ ನೇದರಿಂದ—ಸೈರಿಗೆ ತಗಲುವ ರೋಗಾದಿಗಳನ್ನು ಹೋಗಲಾಡಿಸಬಹುದು ;

೫ ನೇದರಿಂದ-ಭೂಸಾರವನ್ನು ಒಂದೇಸಮನಾಗಿ ಕಾಪಾಡಿಕೊಳ್ಳಬಹುದು ;

೬ ನೇದರಿಂದ—ರೈತನಿಗೆ ಕಾಲವು ಕೂಡಿಬರುವದು.

ಈ ಕ್ರಮಗಳಪ್ರಕಾರ ಪೈರುಗಳನ್ನು ಬದಲಾಯಿಸುವರೀತಿ ಹ್ಯಾಗೆಂದರೆ:-

ಒಂದು ಜವಿನಾನನ್ನು ೫ ಭಾಗಗಳನ್ನಾಗಿಮಾಡಿ ಅವುಗಳಿಗೆ ಕ, ಚ, ಟ, ತ, ಪ ಎಂದು ಕರೆಯುವ. ಐದುಭಾಗಗಳಲ್ಲಿಯೂ ಬೇರೆಬೇರೆ ಪೈರುಗಳಿಟ್ಟವೆ ಎಂದು ಊಹಿಸೋಣ. ಈ ಕ, ಚ, ಟ, ತ, ಪ ಭಾಗಗಳಲ್ಲಿ ಒಂದುವರ್ಷದಲ್ಲಿ ಬೆಳೆದ ಪೈರುಗಳನ್ನು ಮುಂದಿನವರ್ಷ ಅದೇಭಾಗಗಳಲ್ಲಿ ಬೆಳೆಯದೆ, ಆ ಪೈರುಗಳನ್ನು ಚ, ಟ, ತ, ಪ, ಕ ಭಾಗಗಳಲ್ಲಿಯೂ ; ಮೂರನೇವರ್ಷ ಟ, ತ, ಪ, ಕ, ಚ ಭಾಗಗಳಲ್ಲಿಯೂ ; ನಾಲ್ಕನೆಯವರ್ಷ ತ, ಪ, ಕ, ಚ, ಟ ಭಾಗಗಳಲ್ಲಿಯೂ ; ಐದನೆಯವರ್ಷ ಪ, ಕ, ಚ, ಟ, ತ ಭಾಗಗಳಲ್ಲಿಯೂ ಕ್ರಮವಾಗಿ ಬೆಳೆದು, ಆರನೇವರ್ಷದಲ್ಲಿ ಪುನಃ ಮೊದಲನೇವರ್ಷದಂತೆಯೆ ಆಯಾಯ ತುಂಡಿನಲ್ಲಿ ಅದೇ ಪೈರುಗಳನ್ನು ಬೆಳೆಯುವದು.

ಈ ಕೆಳಗಿನ ಪಟ್ಟಿಯಿಂದ ಮೇಲೆ ಹೇಳಿದ ಸಂಗತಿಯು ವಿಶದವಾಗುವದು.

ವರ್ಷ	ಭೂಮಿ.				
	'ಕ' ಭಾಗ	'ಚ' ಭಾಗ	'ಟ' ಭಾಗ	'ತ' ಭಾಗ	'ಪ' ಭಾಗ
ಒಂದನೇ	ನವಣೆ	ತೊಗರಿ	ಸಾವೆ	ಹರಳು	ಹುರಳಿ
ಎರಡನೇ	ತೊಗರಿ	ಸಾವೆ	ಹರಳು	ಹುರಳಿ	ನವಣೆ
ಮೂರನೇ	ಸಾವೆ	ಹರಳು	ಹುರಳಿ	ನವಣೆ	ತೊಗರಿ
ನಾಲ್ಕನೇ	ಹರಳು	ಹುರಳಿ	ನವಣೆ	ತೊಗರಿ	ಸಾವೆ
ಐದನೇ	ಹುರಳಿ	ನವಣೆ	ತೊಗರಿ	ಸಾವೆ	ಹರಳು

ಇದು ಐದು ವರ್ಷದ ಪರಿವರ್ತನೆಯಾಗಿದೆ. ಇದೇರೀತಿ ಎರಡು, ಮೂರು, ನಾಲ್ಕು, ಆರು ವರ್ಷದ ಪರಿವರ್ತನೆಗಳನ್ನು ಮಾಡಬೇಕು. ಆದರೆ ಬೆಳೆಗಳು ಬೇರೆ ಬೇರೆ ಯಾದರೂ ಹಿಂದೆ ಸೂಚಿಸಿದಂತೆ ಒಂದೇವಿಧವಾದ ಆಹಾರವನ್ನು ತಿನ್ನುವ, ಕಳೆ ಗಳಿಗೆ ಅಸ್ಪದ ಕೊಡದ, ಭೂಮಿಯನ್ನು ನಿಸ್ಸಾರಮಾಡದ, ಇತ್ಯಾದಿ ಪೈರುಗಳನ್ನು ಬೆಳೆಯುದಂತೆ ನೋಡಿಕೊಳ್ಳುವದು ಮುಖ್ಯವಾಗಿದೆ. ಆದರೆ ಹೊಗೇಸೊಪ್ಪು, ಎಳ್ಳು ಬೇರೆಬೇರೆ ಪೈರುಗಳಾದರೂ, ಈ ಎರಡೂ ಭೂಮಿಯನ್ನು ನಿಸ್ಸಾರಮಾಡತಕ್ಕವುಗಳಾ ಗಿವೆ. ಆದುದರಿಂದ ಹೊಗೇಸೊಪ್ಪು ಬೆಳೆದ ಮುಂದಿನ ವರ್ಷ ಎಳ್ಳು ಬೆಳೆಯದೆ ಭೂಮಿ ಯನ್ನು ನಿಸ್ಸಾರ ಮಾಡದ ಯಾವ ಪೈರನ್ನಾದರೂ ಇಡಬಹುದು.

ಕೆ. ಶೇಷಾದ್ರಿ ಅಯ್ಯಂಗಾರ್,
ನಾರ್ಮಲ್‌ಸ್ಕೂಲ್, ಮೈಸೂರು.

ರೇಶಿಮೆಹುಳಗಳ ವಿಚಾರ.

ಪ್ರಪಂಚದ ಉತ್ಪತ್ತಿಯಲ್ಲಿ ವಸ್ತುಗಳು ಲೋಹಗಳೂ ಅಥವಾ ಧಾತು
ಳೆಂತಲೂ, ಜೀವಜಂತುಗಳೆಂತಲೂ, ಸಸ್ಯಾದಿಗಳೆಂತಲೂ ಮೂರುಭಾಗಗಳಾ
ವಿಂಗಡಿಸಲ್ಪಟ್ಟಿವೆ ಜೀವರಾಶಿಯಲ್ಲಿ ಬೆನ್ನೆಲವುಳ್ಳವುಗಳೆಂತಲೂ, ಬೆನ್ನೆಲವು ರ
ತವಾವವುಗಳೆಂತಲೂ ಭಾಗಿಸಲ್ಪಟ್ಟು ಇವೆ. ಈರೀತಿ ವಿಂಗಡಿಸಲ್ಪಡುವ ಭಾಗಗಳ
ಕ್ರಿಮಿಗಳು ಎರಡನೇಭಾಗಕ್ಕೆ ಸೇರುತ್ತವೆ. ಈ ಎರಡನೇಭಾಗವು ಅವಯವ ಅತ್ಯಂ
ಹೀನತ್ವದಿಂದ ಸಂಪೂರ್ಣವಾಗಿ ಅಭಿವೃದ್ಧಿಗೆ ಬಂದಂತೆ ಏಳುತರಗತಿಗಳಾಗಿ ವಿಂಗ
ಸಲ್ಪಟ್ಟು ಇರುತ್ತವೆ. ಇವುಗಳಲ್ಲಿ ಏಳನೇ ತರಗತಿಯು ನಾಲ್ಕುಭಾಗಗಳಾಗಿ ವಿಂಗ
ಸಲ್ಪಟ್ಟು ಅದರಲ್ಲಿ ಕಡೆಯ ಭಾಗವು ಕ್ರಿಮಿವರ್ಗವಾಗಿ ಇರುತ್ತದೆ. ಈರೀತಿಯಾಗಿ ವಿ
ಗಡಿಸಲ್ಪಟ್ಟ ಕ್ರಿಮಿವರ್ಗವು ಬೆನ್ನೆಲವುರಹಿತವಾದ ದೊಡ್ಡಭಾಗದಲ್ಲಿ ಮಾತ್ರವಲ್ಲದೆ
ಬೆನ್ನೆಲವುಳ್ಳ ಪ್ರಾಣಿವರ್ಗದಲ್ಲಿ ಇರುವದಕ್ಕಿಂತ ಅತ್ಯಧಿಕವಾದ ಜಾತಿಭೇದದೊಡನೆ
ರುತ್ತೆ, ಹ್ಯಾಗೆಂದರೆ — ಬೆನ್ನೆಲವುಳ್ಳ ಪ್ರಾಣಿ ಖಂಡವೂ ೩೦ ಸಾವಿರಜಾತಿಗೆ ಜಾ
ಯವಾಗಿ ಇಲ್ಲವಾದಾಗ್ಯೂ ಈ ಮೇಲೆ ಹೇಳಿದ ತರಗತಿಯಪೈಕಿ (ಕೊಲಿಯಪ್ಟಿರಾ) ಎ
ಬ ಒಂದು ತರಗತಿಯಲ್ಲಿಮೊತ್ರವೆ ೪೦ ಸಾವಿರಕ್ಕಿಂತ ಅಧಿಕವಾಗಿ ಜಾತಿಭೇದಗಳನ
ಕಂಡುಹಿಡಿಯಲ್ಪಟ್ಟು ಇರುತ್ತವೆ.

ಈರೀತಿಯಾದ ಒಂದು ಕ್ರಿಮಿಯನ್ನು ತೆಗೆದು ನೋಡುವಲ್ಲಿ ಅದರ ಶರೀರದ
ಮೂರುಭಾಗಗಳನ್ನು ನೋಡಬಹುದು. ಅವುಗಳು ಯಾವವಂದರೆ, ತಲೆ, ಎದೆ, ಮತ್ತು
ಕೆಳಹೊಟ್ಟೆ ಎಂಬುವುಗಳು. ಇವುಗಳಲ್ಲದೆ ಸ್ಪರ್ಶಾವಯಗಳನ್ನು (Antennae
ಮೂರುಜೊತೆ ಕಾಲುಗಳನ್ನು ಮತ್ತು ಒಂದು ಅಥವಾ ಎರಡುಜೊತೆ ರೆಕ್ಕೆಗಳನ್ನೂ
ನೆ ೀಡಬಹುದು.

ರೇಶಿಮೇಹುಳವು (ಲೆಪಿಡಪ್ಟಿರಾ) ಎಂಬ ತರಗತಿಯಕ್ರಮಕ್ಕೆ ಸೇರಿ ಇರುತ್
ದೆ. ಎಲ್ಲಾಹುಳಗಳಂತೆ ಈ ರೇಶಿಮೇಹುಳಗಳಿಗೂ ಅಂಥಾವಸ್ಥೆ ವಿನಾ ಮೂರು ಅ
ವಸ್ಥೆಗಳುಂಟು, ಇವುಗಳು ಯಾವವಂದರೆ — ಲಾರ್ವಲ್ (Larval) ಪೇಪಲ
(Papal) ಇಮ್ಯಾಗೊ (Imago) ಮೊದಲನೇ ಅವಸ್ಥೆಯೂದ ಲಾರ್ವಲ್ ಅವಸ್
ಯು ಅಂಡಾವಸ್ಥೆಯನಂತರ ಉಂಟಾಗುವದು ಈ ಅವಸ್ಥೆಯಲ್ಲಿರುನಾಗ ಕ್ರಿಮಿಗಳ

ಮೃದುವಾಗಿಯೂ ರೆಕ್ಕೆಇಲ್ಲದೇಯೂ, ನೋಟಕ್ಕೆ ಹುಳಗಳಂತೆ ಇರುವವು. ಈ ಅವಸ್ಥೆಯಲ್ಲಿರುವೆ ಹುಳುಗಳು ಅನೇಕವಿಧವಾದ ಹೆಸರುಗಳನ್ನು ಹೊಂದಿವೆ ಇದಕ್ಕೆ ಉದಾಹರಣೆಯೂಗಿ ನಾವು ಚಿಟ್ಟೆಯೆಂಬದಾಗಿ ಕರೆಯುವ ಹುಳವು ಅದರ ಮೊದಲನೇ ಅವಸ್ಥೆಯಲ್ಲಿ ಕಂಬಳೀಹುಳವೆಂದು ಕರೆಯಲ್ಪಡುತ್ತದೆ— ಈಅವಸ್ಥೆಯಲ್ಲಿರುವಾಗ ಕಾಳುಗಳು ಬಹಳ ಜಾಗ್ರತೆಯಲ್ಲಿ ತಿಂದು ಬೆಳೆಯುವವು ಈರೀತಿ ಬೆಳೆಯುವಾಗ ತಮ್ಮ ಪರೆಯನ್ನು ಅನೇಕಸಾರಿಂಕಳಕೊಳ್ಳುವವು.

ಎರಡನೇ ಅವಸ್ಥೆಯಲ್ಲಿ ಹುಳಗಳು ಆಹಾರ ತಿನ್ನುವದನ್ನ ಬಿಟ್ಟು ತಮ್ಮ ಚಾದಾರಿಯಂತೆ ಯಾವದಾದರೂ ಒಂದು ಸ್ಥಳಕ್ಕೆ ಹತ್ತಿಕೊಂಡು ಚಲಿಸದೆ ಸೋವೂರಿಯಂತೆ ಇರುತ್ತವೆ. ಈರೀತಿ ಇರುವಾಗ ತಮಗೆ ಮರೆಗೋಸ್ಕರ ಒಂದು ಪೊಟ್ಟೆಯಂತೆ ಇರುವಹಾಗೆ ತಮ್ಮ ಜಲ್ಲು ಗ್ರಂಥಿಯಿಂದ ಉಂಟಾಗುವ ಪದಾರ್ಥಗಳಿಂದ ಅವರಣವನ್ನು ಮಾಡಿಕೊಂಡು ಅದರಲ್ಲಿ ತಾವು ವಾಸಿಸುತ್ತವೆ. ಈ ಸ್ಥಿತಿಯಲ್ಲಿರುವಾಗ ಅವುಗಳಿಗೆ ಮುಂದಲಸ್ಥಿತಿಯಲ್ಲಿ ಅವಶ್ಯವಾಗುವ ಎಲ್ಲಾ ಅವಯವಗಳೂ ಚೆನ್ನಾಗಿ ಅಭಿವೃದ್ಧಿಗೆ ಬರುತ್ತವೆ ಈ ಅವಸ್ಥೆಯಕಾಲವು ವಿಧವಿಧವಾಗಿರುತ್ತದೆ. ಕಾಲಪೂರ್ತಿಯಾದನಂತರ ರೆಕ್ಕೆಯೊಡನೆಕೂಡಿದ ಕ್ರಿಮಿಯು ತನ್ನ ಮುಸುಕಾಗಿ ಇದ್ದ ವಸ್ತುವನ್ನು ರಂಧ್ರಮಾಡಿಕೊಂಡು ಹೊರಗೆ ಹೊರಟು ಸಂಪೂರ್ಣವಾದ ಮೂರನೇ ಅವಸ್ಥೆಯನ್ನು ಹೊಂದುತ್ತದೆ.

ಆದರೆ ನಮಗೆ ಅಗತ್ಯವಾಗಿರುವ ರೇಶಿಮೆಹುಳವು ಈರೀತಿಯಾದ ಮೂರು ಅವಸ್ಥೆಗಳನ್ನು ಅನುಭವಿಸುವದನ್ನ ವಿಶದವಾಗಿ ಯೋಚಿಸಿನೋಡೋಣ.

ಮಹತೊತು ಹಿಪ್ಪಲನೇರಳೆ.

ಇದರ ಅವಸ್ಥೆಗಳು — ಸಪ್ಪಿನವೆ ಲೆ ಆಧಾರವಾಗಿರುವ ರೇಶಿಮೆಹುಳುವಿನ ಪೊಟ್ಟೆಯನ್ನು ಸುಮಾರು ೬೦ ಡಿಗ್ರಿ ಶಾಖವುಳ್ಳ ಸ್ಥಳದಲ್ಲಿ ಇಟ್ಟಿ ಇದ್ದರೆ ಎಂಟು ಅಥವಾ ಹತ್ತುದಿವಸಗಳಲ್ಲಿ ಅದು ಬಿಳಿಯುವರ್ಣವನ್ನು ಹೊಂದಿ ನಂತರ ಪೊಟ್ಟೆಯಲ್ಲಿದ್ದ ಹುಳುವು ಹೊರಕ್ಕೆ ಬರುತ್ತದೆ. ಅದು ಪೊಟ್ಟೆಯಿಂದ ಬಂದಕೂಡ್ಲೆ ಸುಮಾರು $\frac{1}{20}$ ಅಂಗುಲ ಉದ್ದವಾಗಿ ಇರುತ್ತದೆ. ಅದರ ದೇಹ ಉದ್ದವಾಗಿ ಕೊಳವಿಯೋಪಾದಿಯಲ್ಲಿ ಸ್ವಲ್ಪ ಗುಂಡಾಗಿಯೂ ಇರುತ್ತದೆ. ಈರೀತಿಯಲ್ಲಿ ಇರುವ ಹುಳುವಿನ ಮುಂಭಾಗದಲ್ಲಿ ಕಣ್ಣು, ತಲೆ, ಬಾಯಿ ಮುಂತಾದ ವ್ಯತ್ಯಾಸಗಳು ಕಾಣಬರುತ್ತವೆ. ಇದೂ

ಅಲ್ಲದೆ ಅದರ ದೇಹವೆಲ್ಲಾ ಬಳೆಯನ್ನು ಜೋಡಿಸಿದಂತೆ (ಮರಸುತ್ತಿನಂತೆ) ಆಕಾ
ಕಾಣಬರುವದು. ಈರೀತಿ ಕಾಣಬರುವ ಪ್ರತಿಯೊಂದುಸುತ್ತಿನಲ್ಲಯೂ ಹೊಟ್ಟೆ
ನಂತೆ ಇರುವ ಒಂದುಜೊತೆ ಕಾಲುಗಳೂ ಇರುವವು. ಹೊಟ್ಟೆಯಭಾಗವು ಬ
ಹಳವಾಗಿ ಅಭಿವೃದ್ಧಿಯಾಗಿರುವದು. ಈರೀತಿಯಲ್ಲಿ ಅಭಿವೃದ್ಧಿಗೆ ಬಂದ ಹೊ
ಟ್ಟೆಯಭಾಗದ ಕೊನೆಯಲ್ಲಿ ಮೂಂಸದಗಡ್ಡೆಯಂತೆ ಕಾಣಬರುವ ೪ ಜೊತೆ ಕಾ
ಲುಗಳು ಇರುವವು.

ಉಪಾಧ್ಯಾಯಸಂಘ.

(ಕಳೆದ ತಿಂಗಳ ಶೇಷ)

ಮಾ॥ಡೆಪ್ಯುಟಿ ಇನ್‌ಸ್ಪೆಕ್ಟರವರು ಹೋಬಳೀ ಸ್ಕೂಲುಗಳು ತೇಲುವ ಮನೆಯಂ
ಚಂಚಲವಾದವುಗಳು; ಒಮ್ಮೆ ಸ್ಕೂಲೇ ವರ್ಗಾಯಿಸಲ್ಪಡುವದು; ಆವಾಗ ಗೌರ
ಮೆಂಟಿಗೆ ಸ್ಕೂಲ್‌ಮನೆಯನ್ನು ಕಟ್ಟಿಸುವುದರಿಂದ ಆದ ಲುಕ್ಸಾನಿಗೆ ಯಾರು ಗುರಿಯಾ
ಗುವರೆಂದು ಅಪ್ಪಣೆ ಕೊಟ್ಟರು. ಅದಕ್ಕೆ ಸನರೀ ಮೆಂಬರುಗಳು ಯಾರು ತಮ್ಮ
ಮಕ್ಕಳುಗಳನ್ನು ೪ ವರುಷದ ಲಾಗಾಯಿತು ೧೪ ವರುಷಗಳ ವರೆಗೆ ಸ್ಕೂಲಿಗೆ ಕಳ
ಹಿಸುವದಿಲ್ಲವೋ ಅವರಿಗೆ ಶಿಕ್ಷೆ ವಿಧಿಸುವದಾಗಿ ಅಪ್ಪಣೆಯೂಗಬೆ-ಕೆಂದು ಕೇಳಿಕೊಂ
ಡರು. ಇಲ್ಲಿ ಸೇರಿರುವವರೆಲ್ಲರೂ ಉಪಾಧ್ಯಾಯರಾದುದರಿಂದ ಒಪ್ಪಿಕೊಂಡರು. ಈ
ಪಾಪ್ರಪೋಸಿಷ್ಯನ್ ನಿಲ್ಲಲಿಲ್ಲ.

'ಬಹಳ ಹೊತ್ತಾದುದರಿಂದ ಮೆ ॥ ಆನಂದರಾಯರವರು ಮೇಲಿನ ವಿಷಯ
ಗಳ ಸಾಧಕಬಾಧಕಗಳನ್ನು ಯೋಚಿಸಿ ಅಲ್ಲಿನ ಜನರ ಮನಸ್ಸನ್ನು ಸಂತೋಷಪಡಿ
ಸುತ್ತಾ ಉಪಾಧ್ಯಾಯರಾದ ನೀವುಗಳು ಏಕತ್ರ ಸೇರಿರುವುದರಿಂದ ಐಕಮತ್ಯವೂ
ವಿದ್ಯಾಭಿವೃದ್ಧಿಯೂ, ಅನೇಕ ವಿಷಯಕವಾದ ಜ್ಞಾನವೂ ಉಂಟಾಗುವುದು. ಆದ
ದರಿಂದ ನೀವು ಈ ಸಂಘವನ್ನು ಅಭಿವೃದ್ಧಿಪಡಿಸುವುದರಿಂದ ಮಹತ್ಪ್ರಯೋಜನವಾ
ಗದೆ ಇರದು. ನೀವುಗಳು ಈ ದಿನ ಚರ್ಚಿಸಿದ ವಿಷಯಗಳನ್ನು ಡಿಸ್ಟ್ರಿಕ್ಟ್
ಡೆಪ್ಯುಟಿ ಇನ್‌ಸ್ಪೆಕ್ಟರವರ ಮುಖಾಂತರ ಹ ॥ ಇನ್‌ಸ್ಪೆಕ್ಟರ್ ಜನರಲ್‌ರವರನ್ನು ಪ್ರತ್ಯ
ಕ್ಷಾಮುಖದಿಂದ ಕೇಳಿಕೊಂಡಲ್ಲಿ ಸಫಲನಾಗುವದೆಂದು ಹೇಳಿ ಸಭೆಯನ್ನು ಪೂರೈಸಿದರು

ಎನೇ ದಿವಸವಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಇನ್‌ಸ್ಪೆಕ್ಟರವರು ಅಗ್ರಾಸನವನ್ನು ಸ್ವೀಕರಿಸಿದ್ದರು. ಶಿಕಾರೀಪುರದ ಗೌ॥ ಕನ್ನಡ ಸ್ಕೂಲ್ ಹೆಡ್ಮಾಸ್ಟರಾದ ಮೆ॥ಶಂಕರ ರಾಯರು ಬೋಧನಕ್ರಮದ ವಿಷಯವಾಗಿ ಉಪನ್ಯಾಸಕೊಟ್ಟರು. ಈ ಉಪನ್ಯಾಸದಲ್ಲಿ ಮಕ್ಕಳಿಗೆ ವಿದ್ಯೆಯನ್ನು ಮೂರು ರೀತಿಯಾಗಿ ಬೋಧಿಸಬೇಕು. ಮೊದಲು ನಿದರ್ಶನದಿಂದ, ಅನಂತರ ಶಾಸ್ತ್ರದಿಂದ, ಆಮೇಲೆ ತರ್ಕದಿಂದ, ಈ ಮೂರು ರೀತಿಯಲ್ಲಿ ಬಾಲಕರಿಗೆ ಜ್ಞಾನವನ್ನುಂಟುಮಾಡುವದೇ ಉಪಾಧ್ಯಾಯನ ಕರ್ತವ್ಯವೆಂದೂ, ಉಪಾಧ್ಯಾಯನಲ್ಲಿ ವಿದ್ವತ್ವ, ಬೋಧನಶಕ್ತಿ, ಉತ್ಸಾಹಮುಂತಾದ ಗುಣಗಳಿರುವದು ಅವಶ್ಯಕವೆಂದೂ ಉಪನ್ಯಾಸ ಮಾಡಿದರು. ಮು॥ ಡಿ। ಡಿ। ಇನಸ್ಪೆಕ್ಟರವರು ಅನುಮೋದಿಸಿದರು. ಶಿವಮೊಗ್ಗಾ ಕಾಲೇಜು ಸಂಸ್ಕೃತಪಂಡಿತರು ಕೆ. ಸುಬ್ರಹ್ಮಣ್ಯಶಾಸ್ತ್ರಿಗಳು ಈ ವಿಷಯವಾಗಿ ಸ್ವಲ್ಪ ಉಪನ್ಯಾಸಕೊಟ್ಟರು ಮಧ್ಯಾಹ್ನದಲ್ಲಿ ಮು॥ ಅಚ್ಯುತರಾಯರು ಶಿನಿಲ್‌ಸರ್ಜ್ ಇವರು ಅಗ್ರಾಸನವನ್ನು ವಹಿಸಿದ್ದರು. ಎ. ವಿ. ಸ್ಕೂಲ್ ಹೆಡ್ಮಾಸ್ಟರು ಮು॥ ರಾಮಸ್ವಾಮ್ಯೈಂಗಾರ್ಯರು ಆರೋಗ್ಯವಿಷಯವಾಗಿ ಉಪನ್ಯಾಸ ಮಾಡಿದರು ಮು॥ ಅಚ್ಯುತರಾಯರವರು ಆಹಾರ, ನೀರು, ಗಾಳಿ, ಬೆಳಕು, ಉಡುಪು ಇವುಗಳ ವಿಷಯವಾಗಿ ಸಂಕಾಡಮ್ಟ ಗುಣದೋಷಗಳನ್ನು ಹೇಳಿ ಇಂಥಾ ಆರೋಗ್ಯಸೂತ್ರಾಚರಣೆಯು ನಮ್ಮ ಆರ್ಯರಲ್ಲಿ ಬಳಿಕೆಯಾಗಿತ್ತು. ಇಂಥಾ ಆರೋಗ್ಯಕಾರ್ಯವನ್ನು ಪ್ರತ್ಯವಾಯಪ್ರದರ್ಶನದಿಂದ ಸ್ಥಾಪಿಸಿರುವರು. ಹ್ಯಾಗಂದರೆ ಜನನಗೃಹವನ್ನು ಯಾರೂ ಪ್ರವೇಶಿಸಕೂಡದು. ಮತ್ತು ಅಲ್ಲಿ ಹೋದವರು ಸ್ನಾನ ಮಾಡಬೇಕೆಂದು ವಿಧಿಸಿದ್ದರಿಂದ ಯಾರಾದರೂ ಆ ಸೂತಿಕಾಗೃಹಕ್ಕೆ ಹೋಗುವರೊ ? ಅಲ್ಲಿನ ಕೊಳೆ ಇವರಹತ್ತರ ಬರುವದೊ ? ಬರಲು ದಾರಿಯಿಲ್ಲ. ಹೀಗೆ ಅನೇಕ ಉದಾಹರಣೆಯಿಂದ ನಮ್ಮವರಿಗೆ ಆರೋಗ್ಯವಿಷಯವು ಗೊತ್ತಿತ್ತೆಂದು ಬೋಧಿಸಿದರು. ಮು॥ ಕೆ. ಸುಬ್ರಹ್ಮಣ್ಯಶಾಸ್ತ್ರಿಗಳು ಆಧಿ, ವ್ಯಾಧಿ ಎಂದು ಹೇಳುವರು. ಆಧಿ ಎಂದರೆ ಮನೋವ್ಯಥೆ, ಮು॥ ಅಚ್ಯುತರಾಯರವರ ಉಪನ್ಯಾಸದಿಂದ ವ್ಯಾಧಿ ತಟ್ಟದಂತೆ ಇರಲು ಬಾಹ್ಯನೈರ್ಮಲ್ಯವು ಅತ್ಯವಶ್ಯಕವೆಂದು ತೋರುವದು, ಆಧಿಪರಿಹಾರಕ್ಕೆ ಮನೋನೈರ್ಮಲ್ಯವು ಅವಶ್ಯಕವೆಂದು ಉಪನ್ಯಾಸಕೊಟ್ಟದ್ದರಲ್ಲಿ ದೇಹಕ್ಕೂ ಮನಸ್ಸಿಗೂ ಇರುವ ಸಂಬಂಧವೂ, ಜೀವಾತ್ಮದ ಸಂಬಂಧವೂ ಹೀಗಿರುವದು. ಪ್ರತಿಮನುಷ್ಯನೂ ತನ್ನ ಮನಸ್ಸಿನಲ್ಲಿ ಆಧ್ಯಾತ್ಮಕಾದಿ ತಾಪತ್ರಯವು, ಕಾಮಾದಿಷಡರಿವರ್ಗವು ಹೋಗದಂತೆ

ಜಾಗರೂಕನಾಗಿರಬೇಕು. ನಮ್ಮ ಆರ್ಯರು ಈ ಮನೋನೈರ್ಮಲ್ಯಕ್ಕೆ ಹೆಚ್ಚಾ
ಗಮನಕೊಟ್ಟಿದ್ದರೆಂಬುವದಕ್ಕೆ ಸಾಂಖ್ಯಾದಿಶಾಸ್ತ್ರಗಳೇ ಪ್ರಮಾಣವಾಗಿವೆ ಎಂ
ಅಂಶಗಳು ತಿಳಿಸಲ್ಪಟ್ಟವು. ಸಂಧ್ಯಾಕಾಲವಾದ್ದರಿಂದ ಸಭೆಯನ್ನು ಪೂರೈಸಿದರ

ಯಥಾಪ್ರಕಾರ ಮೂರನೇದಿವಸವೂ ಸಭೆಸೇರಿತು. ಈ ಸಭೆಗೆ ಮ॥ ಡಿ
ವೆಂಕಟರಾಮಯ್ಯ ಅಡ್ವೋಕೇಟ್ ಬಿ ಎ ಯವರು ಅಗ್ರಾಸನಾಧಿಪತ್ಯವನ್ನು ವಹಿ
ದ್ದರು. ಆಕಾಲದಲ್ಲಿ ಶಿಕಾರಿಪುರದ ಗೌ। ಕನ್ನಡಾಸ್ಕೂಲ್ ಹೆಡ್ಮಾಸ್ಟರು ಎಸ್. ಶ
ಕರರಾಯರು, ಕರಿಕ್ಯಲಂ (ಪಾಠವಪಟ್ಟಿ) ಎಂಬುದು ತಾಲ್ಲೂಕು ಸ್ಕೂಲಿಗೂ ಹೋಬ
ಳಿಸ್ಕೂಲಿಗೂ ಒಂದೇವಿಧವಾಗಿದೆ. ಇದನ್ನು ಬದಲಾಯಿಸಬೇಕೆಂದು ತಿಳಿಸಿದರು
ತೀರ್ಥಹಳ್ಳಿ ಎ ವಿ ಆಂಗ್ಲೋವರ್ನಾಕ್ಯುಲರ್ ಫಸ್ಟ್ ಅಸಿಸ್ಟೆಂಟ್ ಮ್ಯಾಸ್ಟರಾ
ವೆಂಕಟವರದ್ಯೆಂಗಾರ್ಯರು ಇದನ್ನು ಒಪ್ಪಿದರು. ಅಗ್ರಾಸನಾಧಿಪತಿಗಳು ಯಾವ ವಿಷ
ಯವನ್ನು ಬದಲಾಯಿಸಬೇಕೆಂದು ಕೇಳಿದ್ದಕ್ಕೆ ಮ॥ ಶಂಕರರಾಯರು ಹೋಬಳಿಸ್ಕೂ
ಲಿಗೆ ಮೈಸೂರು ಚರಿತ್ರೆಯನ್ನು ಇಟ್ಟಿರುವರು. ಅದು ಬಹಳ ಕಠಿಣವಾದ್ದರಿಂದ ಚ
ಹುಡುಗರ ಯೋಗ್ಯತೆಯನ್ನು ವಿಚಾರಿಸುವದು. ಅದನ್ನು ಚರಿತ್ರೆಯಾಗಿಡದೆ ವಾಚ
ನವಾಗಿಡಬೇಕೆಂದು ತಿಳಿಸಿದರು. ಈ ಮೈಸೂರುಚರಿತ್ರೆವಿಷಯವಾಗಿ ಅನೇಕ ಸಾಧ
ಬಾಧಕಗಳು ಚರ್ಚಿಸಲ್ಪಟ್ಟು ಕೊನೆಗೆ ಈ ಚರಿತ್ರೆಯನ್ನು ಸುಲಭಶೈಲಿಯಿಂದ ರಚಿ
ಇಡಬೇಕೆಂದು ನಿರ್ಧರಿಸಲ್ಪಟ್ಟಿತು.

ಒಬ್ಬ ಹುಡುಗನು ಒಂದು ಸ್ಕೂಲಿಂದ ಇನ್ನೊಂದು ಸ್ಕೂಲಿಗೆ ಲೀವಿಂ
ಸರ್ಟಿಫಿಕೇಟ್ ತಂದರೂ ಅಡ್ಮಿಷನ್ ಫೀ ವಸೂಲ್ಮಾಡುವರು. ಇದು ಅಕ್ರಮವೆಂ
ದ್ದಕ್ಕೆ ರೂಲ್ಸ್ ನೋಡಬೇಕೆಂದು ಇತ್ಯರ್ಥವಾಯಿತು. ಈ ಡಿಸ್ಟ್ರಿಕ್ಟ್ ಉಪಾಧ್ಯಾಯ
ಜ್ಞಾನಾಭಿವೃದ್ಧಿಗೆ ಒಂದು ನಾರ್ಮಲ್ಸ್ಕೂಲನ್ನು ಅಂದರೆ ಮೈಸೂರಲ್ಲಿ ನಡೆಯುವ
೪ ಕ್ಲಾಸು ಅಪ್ಪರ್ಪ್ರೈಮರಿ ಪರೀಕ್ಷೆಗೆ ತಯಾರುಮಾಡಲು ಒಂದು ಸ್ಕೂಲು ಇಡಬೇ
ಕೆಂದದ್ದಕ್ಕೆ ಅಗ್ರಾಸನಾಧಿಪತಿಗಳು ಒಪ್ಪಿದರು.

ಮ॥ ನಾಗೇಶರಾಯರು, ಶಿವಮೊಗ್ಗ, ತುಮಕೂರು, ಚಿತ್ರದುರ್ಗ ಡಿ
ಸ್ಟ್ರಿಕ್ಟುಗಳ ಡೆಪ್ಯುಟಿ ಇನ್ಸ್ಪೆಕ್ಟರುಗಳು ಸೇರಿ ಪ್ರತಿ ಡಿಸೆಂಬರಲ್ಲಿ ೪ ನೇ ಕ್ಲಾಸಿ
ಕಾಂಪಿಟೆಟಿವ್ ಪರೀಕ್ಷೆಯನ್ನು ಮಾಡುತ್ತಿರುವರಷ್ಟೆ. ಸದರಿ ಪರೀಕ್ಷೆಯಲ್ಲಿ ತೇರ್ಗಡೆ
ಯಾದ ಬಾಲಕರಿಗೆ ಪ್ರಿಂಟ್ ಸರಟಿಫಿಕೇಟ್ ಕೊಡಬೇಕೆಂದು ತಿಳಿಸಿದರು. ಅದಕ್ಕೆ

ಟ್ಠೀರ್‌ಮೆನ್ನರು ಈಗ ಪರೀಕ್ಷೆಗಳು ಬಹಳವಾಗಿ ಹೆಚ್ಚಿದವು. ಚಿಕ್ಕ ಹುಡುಗರಿಗೆ ವಿರಾಮಕೊಡದೆ ಈರೀತಿ ಬಾಲಕರಿಗೆ ಪ್ರೋತ್ಸಾಹಕೊಡುವದು ಅವರ ಆರೋಗ್ಯಕ್ಕೆ ಹಾನಿಯು ಇಲ್ಲವೆ ಎಂದು ಅಪ್ಪಣೆಕೊಟ್ಟರು. ಈ ಸಂಘವು ಪ್ರಾರಂಭವಾದಲಾಗಾಯಿತು ಕಳೆದವರ್ಷ ಏರ್ಪಟ್ಟಂತೆ ಈ ಸಂಘದ ಖರ್ಚಿಗೆ ಪ್ರತಿಮಾಸ್ಟರು ತನ್ನ ತಲಬಿನಲ್ಲಿ ಮಾಹೇಯಾನ ರೂಪಾಯಿ ೧ ಕ್ಕೆ ೧ ಕಾಸಿನಪ್ರಕಾರ ಚಂದಾವೊಬಲಗನ್ನು ಪಾವತಿ ಮಾಡುತ್ತಾ ಬಂದದ್ದರಲ್ಲಿ ಸ.ಮಾರು ೨೦ ರೂಪಾಯಿಮಟ್ಟಿಗೆ ವಸೂಲಾಗಿರುವದು. ಇನ್ನು ಅನೇಕರು ತಮ್ಮ ಸ್ಥಳದಿಂದ ಕಳುಹಿಸುತ್ತೇವೆಂದು ಹೇಳಿರುವರು. ಈ ಚಂದಾ ಹಣದಿಂದ ನಮ್ಮ ಸ್ಕೂಲಗಳ ವಿದ್ಯಾಭಿವೃದ್ಧಿಗೆ ಸಂಬಂಧಪಟ್ಟ ಉಪನ್ಯಾಸ ಪುಸ್ತಕ ಇವುಗಳು ದೊರೆತರೆ ಕಾರ್ಯನಿರ್ವಾಹಕ ಸಂಘದವರು ಪ್ರಿಂಟ್‌ಮಾಡಿಸಿ ಪ್ರತಿ ಸ್ಕೂಲಗಳಿಗೂ ಕಳುಹಿಸುವರು. ಮತ್ತು ಕಮಿಟಿಯು ಖರ್ಚಿಗೂ ಉಪಯೋಗಿಸಲ್ಪಡುವದೆಂದು ಇತ್ಯರ್ಥವಾಗಿದೆ. ಅನಂತರ ಟ್ಠೀರ್‌ಮೆರವರು ಪ್ರಕೃತವಿಷಯಗಳಿಗೆ ಸಮರ್ಪಕವಾಗಿ ಉತ್ತರಕೊಟ್ಟು ತಾವು ವೈತ್ಕಾಂತಚಿಂತಾಮಣಿಯನ್ನು ಪ್ರಕಟಿಸುವದಾಗಿಯೂ, ಸ್ಕೂಲಮಾಸ್ಟರಿಗೆಮಾತ್ರ ಬೆಲೆ ೩ ರೂಪಾಯಿ ತಪ್ಪಿಸಿ ೨ ರೂಪಾಯಿಗೆ ಕೊಡುತ್ತೇವೆಂದು ಅಪ್ಪಣೆಕೊಡಿಸಿದರು. ವಿದ್ಯಾಭಿಮಾನಿಗಳಿಗೆ ಯಾರಿಗೆತಾನೆ ಉಪಾಧ್ಯಾಯರಲ್ಲಿ ದಯಹುಟ್ಟುವದಿಲ್ಲ. ಹೀಗೆ ಆ ಪ್ರಾತಃಕಾಲವನ್ನು ಹಿಂದಕ್ಕೆ ಹಾತಿ ಮಧ್ಯಾಹ್ನವನ್ನು ಪುನಃ ಸಭೆ ಸೇರಿತು. ಡಿ। ಡೆಪ್ಯುಟಿ ಇನ್‌ಸ್ಪೆಕ್ಟರವರು ಪುನಃ ಆಗ್ರಾಸನವನ್ನು ವಹಿಸಿ ಈ ದೊಡ್ಡ ಸಂಘಕ್ಕೆ ಒಂದು ಉಪಸಂಘವು ಇರಬೇಕು. ಇದಕ್ಕೆ ಕಾರ್ಯನಿರ್ವಾಹಕ (ಯಗ್ಜಿಕ್ಯುಟಿವ್ ಕವಿ ಟಿ) ಸಂಘವೆಂದು ಹೆಸರಿಡಬೇಕು. ಈ ಸಂಘಕ್ಕೆ ೧ ಪ್ರೆಸಿಡೆಂಟ್, ೧ ವೈಸ್‌ಪ್ರೆಸಿಡೆಂಟ್ ಇಬ್ಬರು ಸೆಕ್ರಿಟೆರಿಗಳು ಒಬ್ಬ ಟ್ರೆಸರರ್ ಒಬ್ಬ ಆಡಿಟರ್ ೩೮ ಜನ ಮೆಂಬರು ಅಂತು ೪೦ ಜನ ಮೆಂಬರುಗಳು ಇರಬೇಕು. ಈ ಕಮಿಟಿಯು ೩ ತಿಂಗಳಿಗೆ ಒಂದಾವರ್ತಿ ಆಗಬೇಕು ಕಮಿಟಿ ಆಗುವಾಗ (ಕೋರಂ) ಹತ್ತುಜನಗಳಿಗೆ ಕಮ್ಮಿಯಿಲ್ಲದೆ ಇರಬೇಕು. ಕಮಿಟಿಯಲ್ಲಿ ನಡೆದ ವಿಷಯವನ್ನು ಕೂಡಲೆ ಪ್ರಿಂಟ್‌ಮಾಡಿಸಿ ಪ್ರತಿ ಸ್ಕೂಲಿಗೂ ರವಾನಿಸಬೇಕು ಮತ್ತು ಪ್ರತಿತಾಲ್ಲೂಕು ಮಾಸ್ಟರುಗಳು ತಮ್ಮ ಹೆಡ್‌ಕ್ವಾರ್ಟರ್ಸಲ್ಲಿ ತಮ್ಮ ತಾಲ್ಲೂಕು ಎಲ್ಲಾ ಮಾಸ್ಟರುಗಳನ್ನು ಕರಿಸಿ ಮೀಟಿಂಗುಮಾಡುತ್ತಾ ಇರಬೇಕು ತಮ್ಮಲ್ಲಿ ನಡೆದ ಪ್ರೊಸಿಡಿಂಗ್ಸನ್ನು ಜನರಲ್ ಕಮಿಟಿಯಲ್ಲಿ ಓದಬೇಕೆಂದನ್ನು ಮಾ। ಡೆಪ್ಯುಟಿ ಇನ್‌ಸ್ಪೆಕ್ಟರವರು

ಬೋಧಿಸಿದರು. ಈ ಉಪಾಧ್ಯಾಯರ ಸಂಘದ ಕಾರ್ಯನಿರ್ವಾಹಕಸಭೆಗೆ—

೧ ಪ್ರೆಸಿಡೆಂಟರಾಗಿರುವದಕ್ಕೆ ಮಾ|| ಎಂ. ಶ್ರೀನಿವಾಸರಾವ್ ಡೆಪ್ಯುಟಿ ಇಕ್ಸ್ಪೆಕ್ಟರ್ಸ್ ಶಿವಮೊಗ್ಗ ಡಿಸ್ಟ್ರಿಕ್ಟ್ ಸ್ಕೂಲ್ ಇವರು ಒಪ್ಪಿದರು.

೨ ವೈಸ್‌ಪ್ರೆಸಿಡೆಂಟ್ ಮತ್ತು ಟ್ರೆಜರಿ ಆಫೀಸರು ಮಾ|| ಟಿ ಶ್ರೀನಿವಾಸರವ್ ಹೆಡ್ಮಾಸ್ಟರು ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಶಿವಮೊಗ್ಗ.

೩ ಟ್ರಸರರ್ ರಾಮಚಂದ್ರರಾವ್ ಅಸಿಸ್ಟೆಂಟ್‌ಮಾಸ್ಟರ್ ಆಂಗ್ಲೋವರ್ನಾಕ್ಯುಲರ್‌ಸ್ಕೂಲ್ ಶಿವಮೊಗ್ಗ.

೪ ಸೆಕ್ರಟೆರಿ ಮಾ|| ಸಿ. ನಾಗೇಶರಾವ್ ಹೆಡ್ಮಾಸ್ಟರ್ ಆಂಗ್ಲೋವರ್ನಾಕ್ಯುಲರ್ ಸಾಗರ.

೫ ಸೆಕ್ರಟೆರಿ ಮಾ|| ಕೆ. ಸುಬ್ರಹ್ಮಣ್ಯಶಾಸ್ತ್ರಿ ಅಸಿಸ್ಟೆಂಟ್ ಮಾಸ್ಟರ್ ಗೌ| ಗರ್ಲ್ ಸ್ಕೂಲ್ ಶಿವಮೊಗ್ಗ.

೬ ಆಡಿಟರ್ ಮಾ|| ಎಂ. ಎಸ್. ಶಂಕರರಾವ್ ಹೆಡ್ಮಾಸ್ಟರ್ ಗೌ| ಕನ್ನಡಸಾಲ್ ಶಿಕಾರಿಪುರ. ಇವರಲ್ಲದೆ ೩೪ ಜನ ಮೆಂಬರುಗಳು ಇರಬೇಕೆಂದು ನಿರ್ಧರಿಸಲ್ಪಟ್ಟಿರುವದು. ವಿದ್ಯಾಭಿಮಾನಿಗಳಾದ ಅನೇಕ ದೊಡ್ಡಮನುಷ್ಯರು ಇತರ ಡಿಸ್ಟ್ರಿಕ್ಟ್ ವಸ್ಟರುಗಳುಸಹ ಮೆಂಬರುಗಳಾಗಿ ಸೇರಬಹುದು ಹಾಗೆ ಸೇರಲು ಅಪೇಕ್ಷೆವುಳ್ಳವರು ೧ ರೂಪಾಯಿ ಚಂದಾ ಕೊಟ್ಟು ಸೇರಬಹುದೆಂದು ಇತ್ಯರ್ಥಪಡಿಸಿರುವರು. ಈ ಕಟಿಗೆ ಮಾ|| ಶಿವಮೊಗ್ಗ ಡಿ| ಡಿ| ಇಕ್ಸ್ಪೆಕ್ಟರರಾದ ಎಂ. ಶ್ರೀನಿವಾಸರಾವ್ ಎಂಬವರು ವರ್ಷ ಒಂದಕ್ಕೆ ೧೦ ರೂಪಾಯಿ ಚಂದಾ ಹಾಕಿರುವರು. ಈ ವಿಷಯಗಳನ್ನು ಪರಿಶೀಲಿಸುತ್ತಿರುವ ವಿದ್ಯಾಭಿಮಾನಿಗಳು ಈ ಸಂಘವನ್ನು ಪ್ರೋತ್ಸಾಹಪಡಿಸುವದು ನಂಬಿದ್ದೇವೆ.

ಹೀಗೆ ೩ ದಿವಸವು ಕಳೆದನಂತರದಲ್ಲಿ ಮೂರನೇದಿನ ರಾತ್ರೆ ಹರಿಕಥೆಮುತಾದ ವಿನೋದಗಳಿಂದ ಕಾಲವನ್ನು ಕಳೆದು ಪ್ರಾತಃಕಾಲ ಉಪಾಧ್ಯಾಯರುಗಳು ತಮ್ಮ ತಮ್ಮ ಗ್ರಾಮಗಳನ್ನುಕುರಿತು ದಯಮಾಡಿದರು.

ಕಾರ್ಯದರ್ಶಿ. ಕೆ ಸುಬ್ರಹ್ಮಣ್ಯಶಾಸ್ತ್ರಿ
ಅಸಿಸ್ಟೆಂಟ್‌ಮಾಸ್ಟರ್ ಗೌರ್ನಮೆಂಟ್ ಗರ್ಲ್‌ಸ್ಕೂಲ್ ಶಿವಮೊಗ್ಗ

ಹಾಡು.

ರಾಗ—ಬೇಹಾಗ್ ॥ ಆದಿತಾಳ.

ನೋಡಿರಿನೋಡಿರಿ । ರೂಢಿಯೊಳೀಚಲ । ಕಾಡನೆಬೇಗನೆ । ಓಡುತೆಬನ್ನಿ ॥ಪ॥ ಹಚ್ಚಗೆಕಾಣ್ಬದು । ಚುಚ್ಚುವುದೀಗರಿ । ಬಿಚ್ಚಿದೆಜೆಲ್ವೆನೆ । ನಿಚ್ಚಳವಾಗಿ ॥ ೧ ॥ ಕೊಯ್ವುರುಗರಿಗಳ । ನೊಯ್ವುರುಕೊರಮರು । ನೆಯ್ವುರುಚಾಪೆಯು । ನಾಯ್ವುರುದುಡ್ಡಂ ॥ ೨ ॥ ಹಾಲನೆಕುಡಿವರು । ಮಾಲುವರಂತ್ಯಜರು । ಲೋಲದೊಳೀಡಿಗರು । ಬಾಲರನೋಡಿ ॥ ೩ ॥ ಹೆಣೆವರುಗೂಡೆಯ । ನೊಣಗಿಸಿಕಡ್ಡಿಗಳ । ತುಣುಕಿಸಿನೀರನು । ಗಣನೆಗೆತಂದು ॥ ೪ ॥ ಮುಂಡಿಗೆಬೋದುಗಳು । ಧಂಡಿಯತೊಲೆಗಳು । ಕಾಂಡದೊಳಾದುವು । ತುಂಡುಗಳೆಲ್ಲಾ ॥ ೫ ॥ ತಿಳಿಯದರೀಚಲ । ಪಳಿವರುನೀಚತೆ । ದಳಿವುದೆನುತ್ತಲೆ । ತಿಳಿಪೊಡದುಂಟೆ ॥ ೬ ॥ ಎನಿತುಪಯೋಗವು । ದೆನಸಲಗೋಡಿನ । ಘನಗುರುಶಂಭುವ । ನೆನಹಿರಿನೀವೆ ॥ ೭ ॥

ಮೈಸೂರು ಗೌರ್ನಮೆಂಟ್ ನಾರ್ಮಲ್ ಸ್ಕೂಲ್

ಪಾಠಕ್ರಮ (ಸಂವಿಧಾನ ಮತ್ತು ಶಿಕ್ಷಣೆ.)

೨೪—೧೧—೯೬] [ಕಾಲ ೩ ಘಂಟೆ.

1. (1) ಪಾಠಶಾಲೆಗೆ ಕಟ್ಟಡವನ್ನು ಕಟ್ಟುವುದಕ್ಕೆ ಯೋಗ್ಯವಾದ ಸ್ಥಳವು ಹೇಗಿರಬೇಕು? (2) ಡ್ರಿಲ್ಲಿನ ಉಪಯೋಗವೇನು? (3) ಬೋಧಿಸುವಾಗ ತಕ್ಕ ಉಪಕರಣಗಳನ್ನುಪಯೋಗಿಸುವುದರಿಂದ ಆಗುವ ಸಹಾಯವೇನು? (4) ಕರೆಹಲಗೆಯ ಪ್ರಯೋಜನವೇನು? ಇವುಗಳನ್ನು ತಿಳಿಸಿ

2. 320 ಹುಡುಗರುಳ್ಳ ತಾಲ್ಲೂಕು ಸ್ಕೂಲಿಗೆ ಸರಿಯಾದ ಕಟ್ಟಡ ನಕ್ಷೆಯನ್ನು ಬರೆಯಿರಿ. (ಸ್ಕೂಲಿನಲ್ಲಿ ಮಕ್ಕಳ ತರಗತಿಯಿಂದ ೫ ನೇ ತರಗತಿಯವರೆಗೆ ಉಂಟು.)

3. (a) ಈಗ ಇಂಗ್ಲೆಂಡಿನಲ್ಲಿ ಬಾಲವಿದ್ಯಾಭ್ಯಾಸವು ಯಾವ ಪದ್ಧತಿಯಪ್ರಕಾರ ನಡೆಯುತಿದೆ? ಆ ಪದ್ಧತಿಯವಿಷಯವಾಗಿ ನಿಮಗೆ ತಿಳಿದಿರುವುದನ್ನು ಬರೆಯಿರಿ.

(*b*) ತರಗತಿಗಳ ಸಂಖ್ಯೆಗಿಂತಲೂ ಉಪಾಧ್ಯಾಯರ ಸಂಖ್ಯೆಯು ಕಡಮೆಯಾಗಿರುವ ಹೋಬಳಿಸ್ಕೂಲುಗಳಲ್ಲಿ ಪಾಠಗಳನ್ನು ಕೂಡಿದಮಟ್ಟಿಗೂ ಕ್ರಮವಾಗಿ ನಡೆಸಬೇಕಾದರೆ ಮಾಡಬೇಕಾದ ಉಪಾಯವೇನು ?

4. (*a*) ವರ್ಗೀಕರಣಕ್ಕೆ ಅವಶ್ಯಕತೆ ಏನು ? ತರಗತಿಗಳನ್ನು ವಿಂಗಡಿಸುವಾಗ ಹುಡುಗರ ಯೋಗ್ಯತೆಯನ್ನು ಯಾತರಿಂದ ಗೊತ್ತುಮಾಡಬೇಕು ?

(*b*) ಒಂದೊಂದು ತರಗತಿಗೆ ಒಬ್ಬೊಬ್ಬ ಉಪಾಧ್ಯಾಯನನ್ನು ನಿಯಮಿಸುವುದು, ಪ್ರತಿ ತರಗತಿಗೂ ಎಲ್ಲರೂ ಸ್ವಲ್ಪಸ್ವಲ್ಪಕಾಲ ಪಾಠ ಹೇಳುವುದು ಇವೆರಡುಕ್ರಮಗಳ ಗುಣದೋಷಗಳನ್ನು ವಿವರಿಸಿ

5. (*a*) ಪೇಳಾಪತ್ರಿಕೆಯನ್ನು ಮಾಡುವಾಗ್ಗೆ ಜ್ಞಾಪಕದಲ್ಲಿಡಬೇಕಾದ ಅಂಶಗಳಾವವು ?

(*b*) 4 ನೇ ತರಗತಿಗೆ ಉಪಯೋಗಿಸುವಂತೆ ಪೇಳಾಪತ್ರಿಕೆಯನ್ನು ಮಾಡಿ ಅದನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.

6. (*a*) ರಿಜಿಸ್ಟರುಗಳ ಪ್ರಯೋಜನವೇನು ?

(*b*) ದಾಖಲೆರಿಜಿಸ್ಟರಿನ ನಕಲನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.

7. (1) ಮೊದಲು ತರಗತಿಯನ್ನು ಒಟ್ಟಾಗಿ ಪ್ರಶ್ನೆಮಾಡಿ ಅನಂತರದಲ್ಲಿ ಉತ್ತರ ಹೇಳುವುದಕ್ಕೆ ಒಬ್ಬನನ್ನು ಸಂಜ್ಞೆಯಿಂದ ತೋರಿಸಬೇಕು ? (2) ಆ ಜ್ಞೆಯೊಂದನ್ನೇ ಎರಡುಮೂರುಸಲ ಹೇಳಬಾರದು. (3) ವಿದ್ಯಾರ್ಥಿಗಳ ವಯಸ್ಸು ಹೆಚ್ಚಿದಂತೆ ಶಿಕ್ಷೆಯು ಕಡಮೆಯಾಗಬೇಕು. (4) ಉಪಾಧ್ಯಾಯನಿಗೆ ಕಣ್ಣಿನಪಾಪವು ಚೆನ್ನಾಗಿರಬೇಕು. ಇವುಗಳಿಗೆ ಕಾರಣಗಳನ್ನು ತಿಳಿಸಿ.

8. (*a*) ವಿದ್ಯಾಭ್ಯಾಸಮಾಡಿಸುವುದರಲ್ಲಿ ಬಹುಮಾನದಿಂದ ಎಷ್ಟುಮಟ್ಟಿಗೆ ಸಹಾಯ್ಯವಾಗುತ್ತದೆಂಬುದನ್ನು ಚರ್ಚಿಸಿ.

(*b*) ಮಕ್ಕಳ ಸ್ವಭಾವವನ್ನರಿಯದ ಶಿಕ್ಷಕನಿಂದ ಕೆಡಕು ಹೇಗೆ? ಉದಾಹರಿಸಿ.

9. ಸಂವಿಧಾನಕ್ಕೂ ಶಿಕ್ಷಣೆಗೂ ಪರಸ್ಪರವಿರುವ ಸಂಬಂಧವನ್ನು ಸ್ಪಷ್ಟಪಡಿಸಿ.

ಕಥೆ.

ಒಬ್ಬ ಅಧಿಕಾರಿಯು ತನ್ನ ಕಟೇರಿಯಲ್ಲಿ ತನಗೆ ಸಹಾಯಮಾಡುವುದಕ್ಕಾಗಿ ಒಬ್ಬ ಹುಡುಗನು ಬೇಕೆಂದು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿದನು. ಆ ಕೆಲಸಕ್ಕೆ ಇಬ್ಬರು ನೂರಾರು ಅರ್ಜಿಗಳವರೆಗೆ ಅವನಿಗೆ ಬಂದವು. ಕೆಲವುಮಂದಿ ಅವನನ್ನು ಎಂದು ಕಂಡರು. ಬಂದವರ ಒಟ್ಟು ಸಂಖ್ಯೆಯಲ್ಲಿ ಅವನು ಸ್ವಲ್ಪಕಾಲದಲ್ಲಿಯೇ ಒಬ್ಬನನ್ನು ಚುನಾಯಿಸಿ, ಉಳಿದವರನ್ನೆಲ್ಲಾ ಕಳುಹಿಸಿಬಿಟ್ಟನು. 'ಎಲ್ಲರನ್ನೂ ಬಿಟ್ಟು ಆ ಹುಡುಗನನ್ನು ಒಪ್ಪುವುದಕ್ಕೆ ನಿನ್ನ ಕಾರಣಗಳೇನು? ಅವನಿಗೆ ಒಂದು ಸಹಾಯಪತ್ರವೂ (ಸಿಪಾರಸ್ ಕಾಗದ) ಇರಲಿಲ್ಲವೆಂದು ತೋರುತ್ತೆ' ಎಂದು ಹತ್ತಿರದಲ್ಲಿದ್ದ ಒಬ್ಬ ಸ್ನೇಹಿತನು ಅವನನ್ನು ಕೇಳಿದನು. 'ನೀನು ತಪ್ಪು ತಿಳಿದುಕೊಂಡಿದ್ದೀಯೆ; ಅವನಿಗೆ ಅನೇಕ ಸಹಾಯಕಗಳಿದ್ದವು. ಅವನು ಒಳಗೆ ಬಂದಾಗ ತನ್ನ ಕಾಲನ್ನು ಒರೆಸಿಕೊಂಡನು; ತನ್ನ ಹಿಂದುಗಡೆಯೇ ಬಾಗಿಲನ್ನು ಹಾಕಿದನು. ಇದರಿಂದ ಅವನು ಮರ್ಯಾದೆಯನ್ನು ಅರಿತವನೆಂದು ಗೊತ್ತಾಗುವುದು. ತಾವೆಲ್ಲರೂ ಇದ್ದಹಾಗೆಯೆ ಒಬ್ಬ ವೃದ್ಧನು ಬಂದನು. ಆಗ ಒಡನೆಯೇ ಆ ಬಾಲಕನು ತನ್ನ ಪೀಠವನ್ನು ಆ ವೃದ್ಧನಿಗೆ ಕೊಟ್ಟನು. ಇದರಿಂದ ಅವನು ದಯಾಳುವೆಂದು ಗೊತ್ತಾಗುವುದು. ಅರ್ಜಿದಾರರು ಒಳಕ್ಕೆ ಬರುವುದಕ್ಕಿಂತ ಮುಂಚೆಯೇ ಅದೇ ಉದ್ದೇಶವಾಗಿ ಒಂದು ಪುಸ್ತಕವನ್ನು ನಾನು ನೆಲದಮೇಲೆ ಎಸೆದಿದ್ದೆನು. ಕೆಲವರು ಅದನ್ನು ತುಳಿದುಕೊಂಡು ಬಂದರು. ಕೆಲವರು ಒಂದು ಪಕ್ಕಕ್ಕೆ ತಳ್ಳಿಬಂದರು ಆದರೆ ಅವನು ಅದನ್ನು ಮೇಜಿನಮೇಲೆ ತೆಗೆದು ಇಟ್ಟನು. ಇದು ಅವನು ಬಹಳ ಜಾಗರೂಕನೆಂದು ತೋರಿಸಿತು. ಎಂದು ಪ್ರಶ್ನೆಯನ್ನು ಕೇಳಿದಾಗ ಮುಂದರಿದು, ಇತರರನ್ನು ತಳ್ಳದೆ, ತನ್ನವರೆಗೂ ಬರುವುದನ್ನು ಕಾದು ತನ್ನನ್ನು ಕೇಳಿದೊಡನೆಯೇ ಸಿದ್ಧನಾಗಿ ಉತ್ತರವನ್ನು ಕೊಟ್ಟ ನು. ಇದು ಅವನು ವಿನೀತನೆಂದು ತೋರಿಸಿತು. ಅವನು, ತನ್ನ ಹೆಸರನ್ನು ಬರೆ ಯುವಾಗ, ಬೆರಳತುದಿಯನ್ನೆಲ್ಲಾ ಕಪ್ಪುಮಾಡಿಕೊಳ್ಳದೆ, ಕೆಲವರಂತೆ ಕಪ್ಪನ್ನು ನೆಲದ ಮೇಲೆ ಚಲ್ಲದೆ, ಬರೆದನು' ಎಂದು ಆ ಅಧಿಕಾರಿಯು ಹೇಳಿ, ಇದೇ ಅವನಿಗೆ ಯೋ ಗ್ಯತಾಪತ್ರಗಳೆಂದನು.

ಪ್ರಶ್ನೆಗಳು :—

(೧) ಅಧಿಕಾರಿಯು ಏನು ಬೇಕೆಂದು ವರ್ತಮಾನಪತ್ರಿಕೆಗಳಲ್ಲಿ ಪ್ರಕಟಿಸಿದನು?

(೨) ಎಷ್ಟು ಅರ್ಜಿಗಳು ಬಂದವು ?

(೩) ಅಧಿಕಾರಿಯನ್ನು ನೋಡಲಿಕ್ಕೆ ಬಂದವರಲ್ಲಿ ಯಾರನ್ನು ಚುನಾಯಿಸಿಕೊಂಡನು?

(೪) ಆ ಹುಡುಗನನ್ನು ಚುನಾಯಿಸಲಿಕ್ಕೆ ಅವನು ಯಾವ ಕಾರಣಗಳನ್ನು ಹೇಳಿದನು.

(೫) ಇದರಿಂದ ಬಾಲಕರಿಗೆ ಅವಶ್ಯವಾಗಿ ತಿಳಿಯತಕ್ಕ ಭಾಗಗಳು ಯಾವವು ?

ಮೈಸೂರುದೇಶದ ಕಾಡುಜನರು.

ಇವರಲ್ಲಿ ಬೆಟ್ಟದ ಕುರುಬರು ಮತ್ತು ಜೇನು ಕುರಬರೆಂಬ ಎರಡು ಪಂಗಡಗಳು ಇರುವುವು. ಬೆಟ್ಟದ ಕುರುಬರು ನೂರಲಿ, ಮಾಸ್ತಮ್ಮ ಎಂಬ ಕಾಡು ದೇವತೆಗಳನ್ನು ಪೂಜಿಸುವರು. ಈ ಜನರು ಮಾಂಸವನ್ನು ಭಕ್ಷಿಸುವರು. ರಾಗಿಹಿಟ್ಟಿನಿಂದ ಮಾಡಿದ ಒಂಮವಿಧವಾದ ಮದ್ಯವನ್ನು ವಿಶೇಷವಾಗಿ ಪಾನಮಾಡುವರು. ಈವಿಧ ಪಾನದಲ್ಲಿ ಈ ಜನರಿಗೆ ಹೆಚ್ಚಾದ ಅಭಿರುಚಿ. ಇವರ ಪದ್ಧತಿ ನಡವಳಿಕೆಗಳು ಕೆಲವು ಅಪೂರ್ವವಾಗಿರುವುವು. ಇವುಗಳಿಂದ ಇವರು ಇಷ್ಟರಮಟ್ಟಿಗೆ ನಾಗರಿಕರೆಂದು ತಿಳಿಯಬಹುದು.

ಇವರಲ್ಲಿ ಎರಡುವಿಧವಾದ ವಿವಾಹಪದ್ಧತಿಗಳುಂಟು. ಸಾಧಾರಣವಾಗಿ ವಕ್ಕಲಿಗರಲ್ಲಿ ನಡೆಯುವ ವಿವಾಹಪದ್ಧತಿಯ ರೀತಿಯಾಗಿ ನಡೆಯುವುದು ಒಂದು. ಇನ್ನೊಂದು ಬಹು ಸುಲಭವಾದದು. ವಧೂವರರು ವಿಳ್ಳೆದೆಲೆ ಅಡಿಕೆಯನ್ನು ಪರಸ್ಪರ ಕೊಡೋಣವು. ಇವರಿಂದಲೇ ವಿವಾಹ ನೆರವೇರದಂತಾಗುವುದು. ಆದರೆ ಇವರ ಪತಿವ್ರತಾಧರ್ಮಗಳನ್ನು ಉಲ್ಲಂಘಿಸೋಣವು ಅಷ್ಟು ನಿಂದ್ಯವಲ್ಲ. ಹೆಂಗಸರು ರಜಸ್ವಲೆಗಳಾದರೆ ಮೂರುದಿವಸಗಳವರೆಗೂ ತಮ್ಮ ಗುಡುಸಲುಗಳಿಂದ ಹೊರಗೆ ಇರುವ ಪದ್ಧತಿಯುಂಟು. ಪ್ರಸವಿಸಿದ ಹತ್ತುದಿವಸಗಳವರೆಗೂ ಸೂಲಗಿತ್ತಿಯುಹೊರತು ಇತರರು ಯಾರೂ ಆ ಹೆರಗೆಯ ಮನೆಯೊಳಕ್ಕೆ ಪ್ರವೇಶಿಸಕೂಡದು. ಕಾಯಿಲೆ ಏನಾದರೂ ಸಂಭವಿಸಿದರೆ ಆ ಕಾಲದಲ್ಲಿ ಔಷಧಗಳುಯಾವವನ್ನೂ ಕೊಡದೆ ಯಂತ್ರ, ಮಂತ್ರ, ಬಲಿ, ಕೈಕರಣ ಮೊದಲಾದವುಗಳನ್ನು ರೋಗಕ್ಕೆ ಚಿಕಿತ್ಸೆಯನ್ನಾಗಿ ಮಾಡುವರು.

ಕಾಡುಕುರಬರು ಉತ್ತವ.ಜಾತಿಯವರಲ್ಲಿವೂತ್ರ ಆಹಾರವನ್ನು ತೆಗೆದುಕೊಳ್ಳುವರು. ತಮ್ಮ ಹಳ್ಳಿಗಾಗಲಿ, ಹಿಂಡಿಗಾಗಲಿ, ಹೊಸಜನಗಳು ಜೋಡು ಅಥವಾ ವೋಜವನ್ನು ವೆಟ್ಟಿಕೊಂಡು ಪ್ರವೇಶಿಸಲು ತಡೆವೂಡುವರು.

ಗಂಡಸರ ಉಡುಪು ಬಹಳ ಸುಲಭವಾದುದು ಸಾಧಾರಣವಾಗಿ ಅನೇಕರು ಲಂಗೋಟಿಯನ್ನು ಹಾಕಿಕೊಂಡಿರುವರು. ಕೆಲವರುಮಾತ್ರ ಮೂರುಮಳದ ತುಂಡನ್ನು ಟೊಂಕಕ್ಕೆ ಸುತ್ತಿಕೊಳ್ಳುವರು. ಆದರೆ ಭಂಗಾರ, ಬೆಳ್ಳಿ, ಹಿತ್ತಾಳೆಯ ಒಡವೆಗಳನ್ನು ವಿಶೇಷವಾಗಿಟ್ಟುಕೊಳ್ಳುವರು. ಇವರಲ್ಲಿ ಕ್ಷೌರಕರು ಬೆರೆಯಿಲ್ಲ. ತಾವು ತಾವೇ ಕ್ಷೌರವನ್ನು ವೂಡಿಕೊಳ್ಳಬಲ್ಲರು. ಕ್ಷೌರಕರಂತೆ ಕತ್ತಿಯನ್ನು ಉಪಯೋಗಿಸರು. ಗಾಜಿನ ಚೂರುಗಳೇ ಇವರಿಗೆ ಕತ್ತಿಯು.

ಹೆಂಗಸರ ಉಡುಪು ಗಂಡಸರ ಉಡುಪಿಗಿಂತ ಮೇಲು. ಎಂಟು-ವೊಳದ ಪಾವಡೆಯನ್ನುಡುವರು. ಹಣೆಯಮೇಲೆ ಹಚ್ಚೆಹೊಯಿಸಿಕೊಳ್ಳುವರು. ಸಣ್ಣ ಸಣ್ಣ ಚುಕ್ಕೆಗಳನ್ನು ಮೂರುಸಾಲಾಗಿ ಚಿಕ್ಕದಾಗಿ ಹೊಯಿಸಿಕೊಳ್ಳುವರು ಕಿವಿಗೆ ಆಭರಣಗಳನ್ನೂ, ಕೈಗೆ ಗಾಜಿನ ಬಳೆಗಳನ್ನೂ, ಕುತ್ತಿಗೆಗೆ ಕರಿಮಣಿಗಳ ಸರಗಳನ್ನೂ ಹಾಕಿಕೊಳ್ಳುವರು.

ಇವರಲ್ಲಿ ಮಕ್ಕಳು ಸತ್ತರೆ ಹೂಳುವರು. ದೊಡ್ಡವರು ಸತ್ತರೆ ಸುಡುವರು. ಅಕಸ್ಮಿಕಗಳೇನಾದರೂ ಇವರ ಹಳ್ಳಿಯಲ್ಲಿ ನಡೆದರೆ ಆ ಸ್ಥಳವನ್ನೇ ಬಿಟ್ಟು ಬೇರೆಸ್ಥಳಕ್ಕೆ ಹೋಗಿ ನಿಲ್ಲುವರು. ಈ ಕಾಡುಕುರಬರು ಬಹು ಚಟುವಟಿಕೆಯಾಗಿಯೂ, ಕಷ್ಟವನ್ನು ಸಹಿಸತಕ್ಕವರಾಗಿಯೂ ಇರುವರು. ಇವರಲ್ಲಿ ಹಗೆಯನ್ನು ತೀರಿಸಿಕೊಳ್ಳುವ ಅಪೇಕ್ಷೆಯು ಹೆಚ್ಚು, ಆದರೆ ವಿಶ್ವಾಸವಾಗಿ ಇವರನ್ನುಕಂಡರೆ ಯಾವ ಕೆಲಸವನ್ನಾಗಲಿ ವೂಡಲು ಸಿದ್ಧರಾಗುವರು.

ಜೇನುಕುರಬರು :—ಇವರು ಪಟ್ಟಣಗಳಿಗೆ ದೂರವಾದ ನಿಬಿಡವಾದ ಕಾಡುಪ್ರದೇಶಗಳಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಗುಡಿಸಲುಗಳನ್ನು ಹಾಕಿಕೊಂಡು ವಾಸವಾಡುವರು ಇವುಗಳಿಗೆ 'ಹಾಡಿ' ಎಂದು ಹೆಸರು. ಇವರ ನಡತೆಯು ಕಾಡುಕುರುಬರಂತೆಯೆ. ಇವರ ಉಡುಪು ಒಂದು ಕಂಬಳಿ ಅಥವಾ ಒಂದು ಹೊಲೆಮಗ್ಗದ ಹಚ್ಚಡದಂಥ ಬಟ್ಟೆ, ಒಂದು ಕುಲಾವಿ. ಹೆಂಗಸರ ಉಡುಪು ಎಂಟು ಆಣೆ ಅಥವಾ ಒಂದು ರುಪಾಯಿ ಬೆಲೆಬಾಳತಕ್ಕ ಒಂದು ಬಿಳೀಸೀರೆ. ಅವರು ಸಾಧಾರಣವಾಗಿ ಕಿವಿಗೆ ಹಿತ್ತಾ

ಳೆಗುಂಗುರ (ನಾಲೆ) ಕೊರಳಿಗೆ ಕರಿಮಣಿ ಸರಗಳು ಕೈಗೆ ಗಾಜಿನಬಳೆ ಹಾಕಿಕೊಂಡು ಇರುವರು. ಇವರುಗಳೂ ಕಾಡುಕುರಬರಂತೆ ಎಡಗೈ ಬಲಗೈ ಜಾತಿಯವರನ್ನಾಗಲಿ, ಮುಸಲ್ಮಾನರನ್ನಾಗಲಿ, ಜೋಡು ಹಾಕಿಕೊಂಡಿರುವವರನ್ನಾಗಲಿ ಹಾಡಿಯೊಳಕ್ಕೆ ಬಿಡರು. ಇವರು ಮಾಂಸಾಹಾರಿಗಳು ಆದರೆ ವಕ್ಕಲಿಗರು ಲಿಂಗಾಯಿತರಲ್ಲಿ ಊಟವೂಡುವರು ಇವರು ಸಾಧಾರಣವಾಗಿ ಕಾಡಿನಲ್ಲಿ ದೊರೆಯುವ ಬಿದರಕ್ಕಿ, ಗೆಡ್ಡೆಗೆಣಸುಗಳನ್ನು ತಿಂದು ಜೀವಿಸುವರು. ಜೇನುತುಪ್ಪವನ್ನುಂಬೆರಸಿ, (ತುಪ್ಪ ಹಾಕಿ ಕಲಿಸುವಂತೆ) ಗೆಡ್ಡೆಗೆಣಸು ಮುಂತಾದವುಗಳನ್ನು ತಿನ್ನುವರು.

ತುಪ್ಪ, ಹಾಲು, ಇವುಗಳಿಗೆಬದುಲಾಗಿ ಜೇನುತುಪ್ಪವನ್ನು ಹೇರಳವಾಗಿ ಉಪಯೋಗಿಸುವರು. ಇವರು ಕಾಡಿನಲ್ಲಿ ದೊಡ್ಡ ದೊಡ್ಡ ತೊಲೆಗಳನ್ನು ತಯಾರು ಮಾಡುವುದರಲ್ಲಿ ಕಾಲವನ್ನು ಕಳೆಯುವರು. ಆದರೆ ಇವರು ಜವಿೂನನ್ನು ಒಲ್ಲರು. ಕೃಷಿಯನ್ನು ಮಾಡರು. ದನ ಕುರಿಗಳನ್ನು ಸಾಕರು. ಕಾಡುಮೃಗಗಳನ್ನು ಬೆನ್ನಟ್ಟಿ ಕೊಂಡು ಹೋಗುವದರಲ್ಲಿ ಇವರು ಬಹು ಸಮರ್ಥರು. ಕಾಡು ಮೃಗಗಳು ಇವರನ್ನು ಬೆನ್ನಟ್ಟಿಬಂದಾಗ ತಪ್ಪಿಸಿಕೊಳ್ಳುವುದರಲ್ಲಿಯೂ ಅತಿ ಜಾಣರು. ಎರಡುವರ್ಷ ವಯಸ್ಸಿನ ಮಕ್ಕಳುಸಹಿತ ಕಾಡಿನಲ್ಲಿ ಸ್ವೇಚ್ಛೆಯಾಗಿ ಸಂಚರಿಸುವುವು. ಅಕಾಲದಲ್ಲಿ ಅತಿಥಿಗಳಾಗಿ ಬಂದ ಪ್ರಯಾಣಿಕರನ್ನು ಬಹಳ ಆದರದಿಂದ ಉಪಚರಿಸುವರು. ಇವರು ಶೈವರು. ಜಂಗಮರೇ ಇವರಿಗೆ ಗುರುಗಳು. ತಮ್ಮ ತಮ್ಮ ಪಂಗಡದವರಲ್ಲಿ ಹೆಣ್ಣು ತರುವುದೂ, ಕೊಡುವುದೂ ಉಂಟು. ಮದುವೆಯ ಖರ್ಚು ಮೂವತ್ತು ರೂಪಾಯಿಗೆ ಹೆಚ್ಚಿದು. ಆದರೆ ಈ ಖರ್ಚನ್ನು ವರನೇ ಕೊಡತಕ್ಕ ನಾಡಿಕೆ.

ಗ್ರಂಥವಿಮರ್ಶೆ.

ಆರ್ಯಕೀರ್ತಿ.

'ಸ್ವದೇಶಪ್ರೀತಿಯನ್ನು ಗುರುತರ ಧರ್ಮವೆಂದೆಣಿಸಿ ಸ್ವದೇಶದ ಹಿತಸಾಧನೆಗಾಗಿ ಸ್ವಾರ್ಥವನ್ನು ಬಿಟ್ಟು ಜೀವನಪಥವನ್ನು ನಡೆಯಿಸಿದ ಮಹಾತ್ಮರ ವೃತ್ತಾಂತವು ಎಲ್ಲರಿಂದಲೂ ಆದರಿಸತಕ್ಕದ್ದಾಗಿರುವುದು' ಸರಿಯಷ್ಟೆ. ಇಂತಹ ಮಹಾತ್ಮರ ವೃತ್ತಾಂತವನ್ನು ಹೇಳುವ 'ಆರ್ಯಕೀರ್ತಿ' ಎಂಬೀ ಗ್ರಂಥವನ್ನು ಆದರದಿಂದ ಓದಿದೆವು. ಈ ಗ್ರಂಥವು ಸ್ವದೇಶಾಭಿಮಾನಿಗಳಾದ ಸಮರಸಿಂಹ-ಸಂಯುಕ್ತೆ, ಕರ್ಮದೇವಿ, ಪದ್ಮಿನೀ-ಬಾದಳ, ಕುಂಭ, ರಾಯಮಲ್ಲ, ವೀರಧಾತ್ರಿಪನ್ನೆ, ಪ್ರತಾಪಸಿಂಹ, ಅಮರಸಿಂಹ, ರಾಜಸಿಂಹ, ಕೃಷ್ಣಕುಮಾರಿ-ಎಂಬ ಯಶೋವಂತರಾದ ಆರ್ಯರಕೀರ್ತಿಯನ್ನು ಕೊಂಡಾಡುವುದು. ಈ ಆರ್ಯಕುಲೋತ್ತಮರಲ್ಲಿ ಒಬ್ಬೊಬ್ಬ ಮಹಾನುಭಾವರ ಚರಿತ್ರೆಯೇ ಅಸದೃಶವಾಗಿರುವುದು. ಈ ಆರ್ಯಕುಲ ಶಿಖಾಮಣಿಗಳು ತೋರ್ಪಡಿಸಿದ ಸ್ವದೇಶಪ್ರೇಮ, ಸ್ವಧರ್ಮಾನುರಾಗ, ಸ್ವಾರ್ಥತ್ಯಾಗ ಅತ್ಯಾಶ್ಚರ್ಯಕರವಾಗಿಯೂ ಚಿರಸ್ಮರಣೀಯವಾಗಿಯೂ ಇರುವುದು. ಆರ್ಯಾವರ್ತದಲ್ಲಿ ಪ್ರಸಿದ್ಧರಾದ ವೀರಪತ್ನಿಯರು, ವೀರಮಾತೆಯರು, ಇವರುಗಳಿಗೆ ಹೋಲುವ ಸ್ತ್ರೀರತ್ನಗಳನ್ನು ಇತರ ಭೂಭಾಗಗಳಲ್ಲಿ ಅರಿಸಿ ತೆಗೆಯಬೇಕಾಗಿದೆ. ಪಾಶ್ಚಾತ್ಯರಲ್ಲಿ ಹಿಂದೆ ಅತ್ಯಂತ ಪ್ರಸಿದ್ಧರಾದ ಗ್ರೀಕರಿಗೆ ಸೇರಿದ ಸ್ಪಾರ್ಟರಲ್ಲಿ ಸೊತ್ತಾರ್ಹರಾದ ವೀರಮಾತೆಯರೂ ವೀರಪತ್ನಿಯರೂ ಇದ್ದರೆಂದು ನಾವು ಅನ್ಯದೇಶಚರಿತ್ರೆಯಿಂದ ತಿಳಿದಿದ್ದೆವು; ಆದರೆ ರಾಜಪುತ್ರಕುಲರಮಣಿಯರ ವೀರಪ್ರತಿಜ್ಞೆಯು ಸ್ಪಾರ್ಟಸ್ತ್ರೀಯರ ವೀರಶಾಸನಕ್ಕಿಂತ ಇಮ್ಮಡಿಯಾದುದೆಂದು ಈ ಗ್ರಂಥದಿಂದ ತಿಳಿದುಬರುವುದು. 'ರಾಜಪುತ್ರಕುಲರಮಣಿಯರಿಗೆ ಕೈಹಿಡಿದ ಗಂಡನ ಮೇಲೆ ಪ್ರೇಮವು ಅಧಿಕವೋ, ತಾವು ಹೊತ್ತು ಹೆತ್ತ ಮಕ್ಕಳಮೇಲೆ ಪ್ರೇಮವು ಅಧಿಕವೋ, ತಮ್ಮ ಮಾತೃಭೂಮಿಯಮೇಲೆ ಪ್ರೇಮವು ಅಧಿಕವೋ ಹೇಳುವುದು ಕಷ್ಟವು. ಸಂಯುಕ್ತೆಯು ಸ್ಥೈರ್ಯವೂ ಕರ್ಮದೇವಿಯ ಧೈರ್ಯ

---

* ಈ ಪುಸ್ತಕವು ಗ್ರಾಜುಯೆಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್‌ನಲ್ಲಿ ಮುದ್ರಿತವಾಗಿ ಕ್ರಯಕ್ಕೆ ಸಿದ್ಧವಾಗಿರುವುದು. ಇದರ ಕ್ರಯ ೯ ಆಣೆ.

ವೂ, ಪದ್ಮಿನಿಯು ಸತ್ವವೂ, ವೀರಧಾತ್ರಿಪನ್ನೆಯ ಪ್ರಭುಭಕ್ತಿಯೂ, ಕೃಷ್ಣಕು ಮಾರಿಯ ಪಿತೃಭಕ್ತಿಯೂ ಸ್ಮರಣೀಯವಾಗಿರುವುದು. ಈ ವಿಶಾಲ ಭಾರತಭೂವಿ ಯಲ್ಲಿದ್ದ ಯಥಾರ್ಥವೀರರ ಔದಾರ್ಯವನ್ನೂ, ತೇಜಸ್ವಿತೆಯನ್ನೂ ಈ ಇತಿಹಾಸದಲ್ಲಿ ಯಥೋಚಿತವಾಗಿ ವಿವರಿಸಿರುವದು.

ವೆಂಗಭಾಷೆಯಲ್ಲಿ ಪ್ರಸಿದ್ಧ ಪಂಡಿತರಾದ ಶ್ರೀಯುಕ್ತರ ಜಿನೀಕಾಂತಗುಪ್ತ ರಿಂದ ರಚಿತವಾದ ಈ ಇತಿಹಾಸವನ್ನು ಮು॥ ರಾ॥ ಚ. ವಾಸುದೇವಯ್ಯನವರು, ವಾಚಕರಲ್ಲಿ ಧೈರ್ಯವನ್ನೂ, ರೋಷವನ್ನೂ, ಉತ್ಸಾಹವನ್ನೂ, ಪಶ್ಚಾತ್ತಾಪವನ್ನೂ ಉಂಟುಮಾಡತಕ್ಕ ಅಪೂರ್ವವಾದ ರಸಭರಿತವಾದ ಶೈಲಿಯಲ್ಲಿ ಕನ್ನಡಿಸಿರುವರು. ಆರ್ಯಕೀರ್ತಿಯನ್ನು ಪ್ರಚುರಗೊಳಿಸುವುದರಲ್ಲಿ ಆರ್ಯಭಾಷಾಪ್ರಯೋಗವು ಅಲ್ಲಲ್ಲಿ ಅವಶ್ಯಕವೆಂದು ತೋರಿಬಂದುದರಿಂದ, ಆರ್ಯಭಾಷೆಯೂದ ಸಂಸ್ಕೃತವನ್ನ ಯಥೋ ಚಿತನಾಗಿ ಉಪಯೋಗಿಸಿರುವರು. ಇದರಿಂದ ವಾಚಕರಿಗೆ ತೊಂದರೆಯೂಗದಂತೆ ಪುಸ್ತಕದ ಕಡೆಯಲ್ಲಿ ಅರ್ಥವನ್ನು ಕೊಟ್ಟಿರುವರು. ಈ ಗ್ರಂಥದಲ್ಲಿ ಉಪಯೋಗಿಸಿರುವ ಕನ್ನಡಪದಗಳು ಮೈಸೂರು ವಿದ್ಯಾಭ್ಯಾಸದ ಇಲಾಖೆಯಲ್ಲಿ ನಿಷ್ಕರ್ಷಿತವಾದ ರೂಪಗ ಳನ್ನೇ ಹೊಂದಿರುವುವು. ಈ ಗ್ರಂಥವು ಸರ್ವರಿಂದಲೂ ಪುರಸ್ಕರಿಸಿಲ್ಪಡಲು ಅರ್ಹವಾ ದುದು.

ಈ ಪುಸ್ತಕವನ್ನು ಗಾ್ರಜುಯೇಟ್ಸ್ ಟ್ರೇಡಿಂಗ್ ಅಸೋಸಿಯೆಷ್ಟ್ ಪ್ರಿಸ್ಸ ನವರು ಬಹಳ ಚೆನ್ನಾಗಿ ಮುದ್ರಿಸಿರುವರು.

ವಿದ್ಯಾದಾಯಿನಿ.

ಭಾಗ ೫.] ಮಾರ್ಚಿ. ೧೯೨೩. [ಸಂಚಿಕೆ ೩.

ಎಡಿಟರವರ ನೋಟ್ಸ್.

ಕಳೆದ ಡಿಶಂಬರ್ ತಿಂಗಳಲ್ಲಿ ನಡೆದ ಮದರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಮಹಾರಾಣಿಯವರ ಬಾಲಿಕಾಪಾಠಶಾಲೆಯಲ್ಲಿ ಮೂರುಜನ ವಿದ್ಯಾರ್ಥಿನೀಯರು ತೇರ್ಗಡೆಯಾದರೆಂದು ಕೇಳಿ ಬಹಳ ಸಂತೋಷಪಡುತ್ತೇವೆ. ಮೈಸೂರುದೇಶದ ಬ್ರಾಹ್ಮಣಸ್ತ್ರೀಯರು ಈ ಪರೀಕ್ಷೆಯಲ್ಲಿ ತೇರ್ಗಡೆಯಾದುದು ಇದೇ ಮೊದಲು. ಮದರಾಸಿನಲ್ಲಿ ಸಹ ಇದುವರೆಗೆ ಬ್ರಾಹ್ಮಣಸ್ತ್ರೀಯರು ಯಾರೂ ಈ ಪರೀಕ್ಷೆಯನ್ನು ಕೊಟ್ಟಂತಿಲ್ಲ. ಸುತ್ತುಮುತ್ತು ಇರುವ ದೇಶಗಳಿಗಿಂತ ಮೈಸೂರಲ್ಲಿ ಸ್ತ್ರೀವಿದ್ಯಾಭ್ಯಾಸವು ಹೆಚ್ಚಾಗಿ ನಡೆಯುತಿದೆಯೆಂಬುದಕ್ಕೆ ಇದು ಒಂದು ದೊಡ್ಡ ದೃಷ್ಟಾಂತವು. ಮಹಾರಾಣಿಯವರ ಬಾಲಿಕಾಪಾಠಶಾಲೆಯನ್ನು ಇಷ್ಟುಮಟ್ಟಿಗೆ ವೃದ್ಧಿಗೆ ತಂದವರಿಗೆ ಎಲ್ಲರೂ ಕೃತಜ್ಞರಾಗಿರಬೇಕು.

***

ಹೊಸದಾಗಿ ಎರಡು ನಾರ್ಮಲ್ ಸ್ಕೂಲುಗಳನ್ನು ಸರ್ಕಾರದವರು ಸ್ಥಾಪಿಸುವಂತಿದೆಯೆಂದು ನಾವು ತಿಳಿಸಿದ್ದೆವಷ್ಟೆ. ಇದು ಈಗ ನಿಷ್ಕರ್ಷೆಯಾಗಿದೆ. ಅವುಗಳಲ್ಲೊಂದನ್ನು ಶಿವಮಗ್ಗಿಯಲ್ಲು ಇನ್ನೊಂದನ್ನು ಕೋಲಾರದಲ್ಲು ಮೊರ್ಚಿತಿಂಗಳು ಮೊದಲನೇ ದಿನ ಸ್ಥಾಪಿಸುವರು. ಆ ಸ್ಕೂಲುಗಳಲ್ಲಿ ಲೋವರ್‌ಸೆಕೆಂಡರೀಗ್ರೇಡಿನ ಉಪಾಧ್ಯಾಯರನ್ನು ಮಾತ್ರ 'ಟ್ರೈಯ್' ಮಾಡುವರು. ಒಂದೊಂದು ಸ್ಕೂಲಿನಲ್ಲಿ ಸುಮಾರು ನಲವತ್ತುಜನ ಉಪಾಧ್ಯಾಯರು ಓದುವುದರಿಂದ ಮುಂದಕ್ಕೆ ಪ್ರತಿವರ್ಷವೂ ೪೦ ಜನ ಉಪಾಧ್ಯಾಯರು ಈಗ್ಗಿಂತಲು ಹೆಚ್ಚಾಗಿ 'ಟ್ರೈಯ್' ಆಗುವರು. ಇದರಿಂದ

ಯೋಗ್ಯರಾದ ಉಪಾಧ್ಯಾಯರ ಸಂಖ್ಯೆಯು ಹೆಚ್ಚುವುದರಲ್ಲಿ ಸಂಶಯವಿಲ್ಲ.

***

ಈ ಸಮಯದಲ್ಲಿ ಇನ್ನೊಂದಂಶವನ್ನು ಇಲ್ಲಿ ತಿಳಿಸಬಹುದು. ಈಗ ಮೈಸೂರ ಲ್ಲಿರುವ ನಾರ್ಮಲ್‌ಸ್ಕೂಲಿನಲ್ಲು ಮುಂದೆ ಆಗುವ ನಾರ್ಮಲ್‌ಸ್ಕೂಲ್‌ಗಳಲ್ಲೂ ಹಿಂದೂ ಸ್ಥಾನಿ ಮೊಸ್ಟರುಗಳು ಓದುವುದಕ್ಕೆ ಸರ್ಕಾರದವರು ಏರ್ಪಾಡುಮಾಡಿದಾರೆ. ಆದರೆ ಹಿಂದುಸ್ಥಾನಿಮೊಸ್ಟರುಗಳಲ್ಲನೇಕರಿಗೆ ಕನ್ನಡವು ಚೆನ್ನಾಗಿ ಬಾರದಿರುವುದರಿಂದ ಅವರಿಗೆ ಅಲ್ಲಿನ ಬೋಧನೆಯು ಹೆಚ್ಚಾಗಿ ಉಪಯುಕ್ತವಾಗಲಾರದು. ಆದುದರಿಂದ ಹಿಂದುಸ್ಥಾನಿ ಮೊಸ್ಟರುಗಳಿಗೆ ಬೇರೆಯಾಗಿ ಒಂದು ನಾರ್ಮಲ್‌ಸ್ಕೂಲನ್ನು ಸರ್ಕಾರದವರು ಸ್ಥಾಪಿಸಬೇಕಾದುದು ಅವಶ್ಯಕ. ಇದನ್ನು ಅವರು ಎಷ್ಟು ಶೀಘ್ರವಾಗಿ ಮಾಡಿದರೆ ಅಷ್ಟು ಒಳ್ಳೆಯದು.

ಜಿಜ್ಞಾಸುವಿನ ಅಭಿವೃದ್ಧಿ.

ಬಾಲ್ಯದಲ್ಲಿ ಜ್ಞಾನವೆಲ್ಲ ಇಂದ್ರಿಯಗಳ ಮೂಲಕವಾಗಿಯೇ ಉಂಟಾಗುವುದು. ಆದಿಯಲ್ಲಿ ಸ್ಥೂಲವಸ್ತುಗಳ ಜ್ಞಾನವೇ ವಿಶೇಷವಾಗಿ ಉಂಟಾಗುವುದು. ಅನಂತರದಲ್ಲಿ ಅಂದರೆ ಬುದ್ಧಿಯು ಬೆಳೆಯುತ ಬಾಲಕರಿಗೆ ಸೂಕ್ಷ್ಮವಸ್ತುಗಳನ್ನೇ ಬೇರೆಯಾಗಿ ಗ್ರಹಿಸುವುದು ಕ್ರಮವಾಗಿ ಸಾಧ್ಯವಾಗುವುದು. ಬಾಲ್ಯದಲ್ಲಿ ಬುದ್ಧಿಯು ಅಭಿವೃದ್ಧಿಯಾಗಿಲ್ಲದಿರುವುದರಿಂದ ಸ್ಥೂಲವಸ್ತುಗಳನ್ನು ಮಾತ್ರ ತಿಳಿದುಕೊಳ್ಳುವುದರಲ್ಲಿ ಶಕ್ತಿಯಿರುವದು. ಆಗ್ಗೆ ಇಂದ್ರಿಯ ಶಕ್ತಿಯೇ ಹೆಚ್ಚಾಗಿರುವುದರಿಂದ ಉಪಾಧ್ಯಾಯನು ಅದನ್ನು ಸರಿಯಾಗಿ ಉಪಯೋಗಿಸುವಂತೆ ಮಾಡಿ ಅಭಿವೃದ್ಧಿಪಡಿಸಬೇಕು.

ಇಂದ್ರಿಯಗಳು ಐದು-ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಕ್ (ಚರ್ಮ) ಇವುಗಳಲ್ಲಿ ರುಚಿ ಮತ್ತು ವಾಸನೆಯನ್ನು ಬುದ್ಧಿಗೆ ತಿಳಿಸುವ ಇಂದ್ರಿಯಗಳು ಅಷ್ಟು ಮುಖ್ಯವಾದವುಗಳಲ್ಲ. ದೇಹಕ್ಕೆ ಅನಾರೋಗ್ಯಪದಾರ್ಥಗಳು ಸೇರದಿರಲೆಂದು ಮಾತ್ರ ಇವುಗಳು ಇದ್ದಂತಿವೆ. ಶ್ರೋತ್ರೇಂದ್ರಿಯವೇನೊ ಮುಖ್ಯವಾದುದೇಸರಿ. ಆದರೆ ಅದನ್ನು ಅಭಿವೃದ್ಧಿಪಡಿಸುವುದಕ್ಕೆ ನಮ್ಮ ದೇಶದಲ್ಲಿ ಸದ್ಯದಲ್ಲಿ ಅನುಕೂಲತೆಗಳು

ಸಾಲದಿರುವುದರಿಂದ ಅದನ್ನು ಅಷ್ಟು ಮುಖ್ಯವಾಗಿ ಎಣಿಸಬೇಕಾದುದಿಲ್ಲ. ಮುಖ್ಯವಾಗಿ ಕಣ್ಣನ್ನು ಅಭಿವೃದ್ಧಿಪಡಿಸುವುದು ಬೇಕಾಗಿದೆ. ಇದರ ಜತೆಗೆ ಸ್ವಲ್ಪಮಟ್ಟಿಗೆ ಶ್ರೋತ್ರೇಂದ್ರಿಯವನ್ನು ಮತ್ತು ತ್ವಗಿಂದ್ರಿಯವನ್ನು ಅಭಿವೃದ್ಧಿಪಡಿಸಿದರೆ ಸಾಕು. ಇಂದ್ರಿಯಗಳ ಪಾಟವವನ್ನು ಅಭಿವೃದ್ಧಿಪಡಿಸುವುದೆಂದರೆ ಅವುಗಳಿಂದ ಸರಿಯಾಗಿ ಕೆಲಸಮಾಡಿಸಿ ಕ್ರಮೇಣ ವಸ್ತುಭೇದವನ್ನು ಪರೀಕ್ಷಿಸಿ ಕಂಡುಹಿಡಿಯುವಂತೆ ಮಾಡುವುದು.

ಭಾಷೆಯೆಂಬುದು ಸಂಜ್ಞಾಮಾತ್ರವೆಂಬುದು ಎಲ್ಲರಿಗೂ ತಿಳಿದಿದೆ. ಬಾಲ್ಯದ ಸ್ವಭಾವವು ವಸ್ತುಗಳನ್ನು ತಿಳಿದುಕೊಳ್ಳುವುದಾದುದರಿಂದ ಆಗ ಮಕ್ಕಳಿಗೆ ವಸ್ತುಗಳನ್ನೇ ತಿಳಿಸತಕ್ಕದ್ದು ಸರಿ. ಹಾಗೆ ವಸ್ತುಗಳನ್ನು ತಿಳಿಸುತ್ತ ಜತೆಯಲ್ಲಿ ಆಯಾ ವಸ್ತುಗಳ ಹೆಸರುಗಳನ್ನು ತಿಳಿಸುವುದರಿಂದ ಭಾಷೆಯನ್ನು ಹೇಳಿಕೊಡುತ್ತ ಬರಬೇಕು. ಇದಕ್ಕೆ ಬದಲಾಗಿ ಅಂದರೆ ಮಕ್ಕಳಿಗೆ ವಸ್ತುಜ್ಞಾನವನ್ನುಂಟುಮಾಡದೆ ಶಬ್ದಗಳನ್ನು ಮಾತ್ರ ಹೇಳಿಕೊಡುವುದು ತಪ್ಪು. ಅದರಿಂದ ಅವರಿಗೆ ಹೆಚ್ಚಾಗಿ ಪ್ರಯೋಜನವಾಗಲಾರದು. ಆದುದರಿಂದಲೇ ಬಾಲ್ಯಕ್ಕೆ ಕಿಂಡರ್‌ಗಾರ್ಟ್ನ್, ಮತ್ತು ವಸ್ತುಪಾಠಗಳು ಸರಿಯಾದವುಗಳೆಂದು ಹೇಳುವುದು. ಇವುಗಳಿಂದ ವಸ್ತುಗಳ ಜ್ಞಾನದ ಜತೆಯಲ್ಲಿ ಭಾಷಾಜ್ಞಾನವುಂಟಾಗುವುದು. ಆದುದರಿಂದ ಅದಿಯಲ್ಲಿ ಇಂದ್ರಿಯಗಳ ಪಾಟವವನ್ನು ಅಭಿವೃದ್ಧಿಪಡಿಸುವುದಕ್ಕೆ ಕಿಂಡರ್‌ಗಾರ್ಟ್ನ್, ಮತ್ತು ವಸ್ತುಪಾಠಗಳು ಮುಖ್ಯವಾದ ಸಾಧಕಗಳು

ಚಿಕ್ಕತನದಲ್ಲಿ ಇಂದ್ರಿಯಗಳನ್ನು ವಿಶೇಷವಾಗಿ ಉಪಯೋಗಿಸುವುದು ಸ್ವಾಭಾವಿಕವಾಗಿರುವುದರಿಂದ ಇಂದ್ರಿಯಗಳಿಂದ ಕೆಲಸಮಾಡಿಸುವುದಕ್ಕೆ ಉಪಾಧ್ಯಾಯನು ಬೇರೆಯಾಗಿ ಪ್ರಯತ್ನಪಡಬೇಕಾದುದಿಲ್ಲ. ಮಗುವು ಆರೋಗ್ಯವಾಗಿದ್ದರೆ ತಾನಾಗಿ ಸಿಕ್ಕಿದುದನ್ನು ನೋಡುವುದಕ್ಕಾಗಲಿ, ಕೇಳುವುದಕ್ಕಾಗಲಿ ಅಥವಾ ಮುಟ್ಟುವುದಕ್ಕಾಗಲಿ ಪ್ರಯತ್ನಪಡುವುದು. ಆದುದರಿಂದ ತಾಯಾಗಲಿ ಅಥವಾ ಮಗುವನ್ನು ನೋಡಿಕೊಳ್ಳುವ ಇತರರಾಗಲಿ ಮಾಡಬೇಕಾದುದೇನೆಂದರೆ—ಉಚಿತವಾದ ಪದಾರ್ಥಗಳನ್ನು ಮಗುವಿನ ಇಂದ್ರಿಯಗಳಿಗೆ ಗೋಚರವಾಗುವಂತೆ ಮಾಡುವುದು. ಇದರ ಜತೆಗೆ ಒಂದೇವಸ್ತುವು ಪದೇಪದೇ ಮಗುವಿಗೆ ಗೋಚರವಾಗುವಂತೆ ಮಾಡಬೇಕು. ಇಲ್ಲದಿದ್ದರೆ ವಸ್ತುವಿನ ಸ್ವರೂಪವು ಚೆನ್ನಾಗಿ ಜ್ಞಾಪಕನಿಲ್ಲಲಾರದು ; ಅದರಿಂದ ವಸ್ತುಗಳಿಗೆ ಪರಸ್ಪರವಿರುವ ಭೇದಗಳು ಸ್ಪಷ್ಟಪಡದೇ ಹೋಗಬಹುದು. ಉಚಿತವಾದ

ಯೋಗ್ಯರಾದ ಉಪಾಧ್ಯಾಯರ ಸಂಖ್ಯೆಯು ಹೆಚ್ಚುವುದರಲ್ಲಿ ಸಂಶಯವಿಲ್ಲ.

***

ಈ ಸಮಯದಲ್ಲಿ ಇನ್ನೊಂದಂಶವನ್ನು ಇಲ್ಲಿ ತಿಳಿಸಬಹುದು. ಈಗ ಮೈಸೂರಿನಲ್ಲಿರುವ ನಾರ್ಮಲ್‌ಸ್ಕೂಲಿನಲ್ಲು ಮುಂದೆ ಆಗುವ ನಾರ್ಮಲ್‌ಸ್ಕೂಲ್‌ಗಳಲ್ಲೂ ಹಿಂದೂ ಸ್ಥಾನಿ ಮೊಸ್ಟರುಗಳು ಓದುವುದಕ್ಕೆ ಸರ್ಕಾರದವರು ಏರ್ಪಾಡುಮಾಡಿದಾರೆ. ಆದರೆ ಹಿಂದುಸ್ಥಾನಿಮೊಸ್ಟರುಗಳಲ್ಲನೇಕರಿಗೆ ಕನ್ನಡವು ಚೆನ್ನಾಗಿ ಬಾರದಿರುವುದರಿಂದ ಅವರಿಗೆ ಅಲ್ಲಿನ ಬೋಧನೆಯು ಹೆಚ್ಚಾಗಿ ಉಪಯುಕ್ತವಾಗಲಾರದು. ಆದುದರಿಂದ ಹಿಂದುಸ್ಥಾನಿ ಮೊಸ್ಟರುಗಳಿಗೆ ಬೇರೆಯಾಗಿ ಒಂದು ನಾರ್ಮಲ್‌ಸ್ಕೂಲನ್ನು ಸರ್ಕಾರದವರು ಸ್ಥಾಪಿಸಬೇಕಾದುದು ಅವಶ್ಯಕ. ಇದನ್ನು ಅವರು ಎಷ್ಟು ಶೀಘ್ರವಾಗಿ ಮಾಡಿದರೆ ಅಷ್ಟು ಒಳ್ಳೇದು.

ಇಂದ್ರಿಯಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವ ಕ್ರಮ.

ಬಾಲ್ಯದಲ್ಲಿ ಜ್ಞಾನವೆಲ್ಲ ಇಂದ್ರಿಯಗಳ ಮೂಲಕವಾಗಿಯೇ ಉಂಟಾಗುವುದು. ಆದಿಯಲ್ಲಿ ಸ್ಥೂಲವಸ್ತುಗಳ ಜ್ಞಾನವೇ ವಿಶೇಷವಾಗಿ ಉಂಟಾಗುವುದು. ಅನಂತರದಲ್ಲಿ ಅಂದರೆ ಬುದ್ಧಿಯು ಬೆಳೆಯುತ ಬಾಲಕರಿಗೆ ಸೂಕ್ಷ್ಮವಸ್ತುಗಳನ್ನೆಲ್ಲ ಬೇರೆಯಾಗಿ ಗ್ರಹಿಸುವುದು ಕ್ರಮವಾಗಿ ಸಾಧ್ಯವಾಗುವುದು. ಬಾಲ್ಯದಲ್ಲಿ ಬುದ್ಧಿಯು ಅಭಿವೃದ್ಧಿಯಾಗಿಲ್ಲದಿರುವುದರಿಂದ ಸ್ಥೂಲವಸ್ತುಗಳನ್ನು ಮಾತ್ರ ತಿಳಿದುಕೊಳ್ಳುವುದರಲ್ಲಿ ಶಕ್ತಿಯಿರುವದು. ಆಗ್ಗೆ ಇಂದ್ರಿಯ ಶಕ್ತಿಯೇ ಹೆಚ್ಚಾಗಿರುವುದರಿಂದ ಉಪಾಧ್ಯಾಯನು ಅದನ್ನು ಸರಿಯಾಗಿ ಉಪಯೋಗಿಸುವಂತೆ ಮಾಡಿ ಅಭಿವೃದ್ಧಿಪಡಿಸಿಕೊಳ್ಳಬೇಕು.

ಇಂದ್ರಿಯಗಳು ಐದು-ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಕ್ (ಚರ್ಮ) ಇವುಗಳಲ್ಲಿ ರುಚಿ ಮತ್ತು ವಾಸನೆಯನ್ನು ಬುದ್ಧಿಗೆ ತಿಳಿಸುವ ಇಂದ್ರಿಯಗಳು ಅಷ್ಟು ಮುಖ್ಯವಾದವುಗಳಲ್ಲ. ದೇಹಕ್ಕೆ ಅನಾರೋಗ್ಯಪದಾರ್ಥಗಳು ಸೇರದಿರಲೆಂದು ಮಾತ್ರ ಇವುಗಳು ಇದ್ದಂತಿವೆ. ಶ್ರೋತ್ರೇಂದ್ರಿಯವೇನೊ ಮುಖ್ಯವಾದುದೇಸರಿ : ಆದರೆ ಅದನ್ನು ಅಭಿವೃದ್ಧಿಪಡಿಸುವುದಕ್ಕೆ ನಮ್ಮ ದೇಶದಲ್ಲಿ ಸದ್ಯದಲ್ಲಿ ಅನುಕೂಲತೆಗಳ

ಸಾಲದಿರುವುದರಿಂದ ಅದನ್ನು ಅಷ್ಟು ಮುಖ್ಯವಾಗಿ ಎಣಿಸಬೇಕಾದುದಿಲ್ಲ. ಮುಖ್ಯವಾಗಿ ಕಣ್ಣನ್ನು ಅಭಿವೃದ್ಧಿಪಡಿಸುವುದು ಬೇಕಾಗಿದೆ. ಇದರ ಜತೆಗೆ ಸ್ವಲ್ಪಮಟ್ಟಿಗೆ ಶ್ರೋತ್ರೇಂದ್ರಿಯವನ್ನು ಮತ್ತು ತ್ವಗಿಂದ್ರಿಯವನ್ನು ಅಭಿವೃದ್ಧಿಪಡಿಸಿದರೆ ಸಾಕು. ಇಂದ್ರಿಯಗಳ ಪಾಟವವನ್ನು ಅಭಿವೃದ್ಧಿಪಡಿಸುವುದೆಂದರೆ ಅವುಗಳಿಂದ ಸರಿಯಾಗಿ ಕೆಲಸಮಾಡಿಸಿ ಕ್ರಮೇಣ ವಸ್ತುಭೇದನವನ್ನು ಪರೀಕ್ಷಿಸಿ ಕಂಡುಹಿಡಿಯುವಂತೆ ಮಾಡುವುದು.

ಭಾಷೆಯೆಂಬುದು ಸಂಜ್ಞಾಮಾತ್ರವೆಂಬುದು ಎಲ್ಲರಿಗೂ ತಿಳಿದಿದೆ. ಬಾಲ್ಯದ ಸ್ವಭಾವವು ವಸ್ತುಗಳನ್ನು ತಿಳಿದುಕೊಳ್ಳುವುದಾದುದರಿಂದ ಆಗ ಮಕ್ಕಳಿಗೆ ವಸ್ತುಗಳನ್ನೇ ತಿಳಿಸತಕ್ಕದ್ದು ಸರಿ. ಹಾಗೆ ವಸ್ತುಗಳನ್ನು ತಿಳಿಸುತ್ತ ಜತೆಯಲ್ಲಿ ಆಯಾ ವಸ್ತುಗಳ ಹೆಸರುಗಳನ್ನು ತಿಳಿಸುವುದರಿಂದ ಭಾಷೆಯನ್ನು ಹೇಳಿಕೊಡುತ್ತ ಬರಬೇಕು. ಇದಕ್ಕೆ ಬದಲಾಗಿ ಅಂದರೆ ಮಕ್ಕಳಿಗೆ ವಸ್ತುಜ್ಞಾನವನ್ನುಂಟುಮಾಡದೆ ಶಬ್ದಗಳನ್ನು ಮಾತ್ರ ಹೇಳಿಕೊಡುವುದು ತಪ್ಪು. ಅದರಿಂದ ಅವರಿಗೆ ಹೆಚ್ಚಾಗಿ ಪ್ರಯೋಜನವಾಗಲಾರದು. ಆದುದರಿಂದಲೇ ಬಾಲ್ಯಕ್ಕೆ ಕಿಂಡರ್‌ಗಾರ್ಟ್ನ್, ಮತ್ತು ವಸ್ತುಪಾಠಗಳು ಸರಿಯಾದವುಗಳೆಂದು ಹೇಳುವುದು. ಇವುಗಳಿಂದ ವಸ್ತುಗಳ ಜ್ಞಾನದ ಜತೆಯಲ್ಲಿ ಭಾಷಾಜ್ಞಾನವುಂಟಾಗುವುದು. ಆದುದರಿಂದ ಅದಿಯಲ್ಲಿ ಇಂದ್ರಿಯಗಳ ಪಾಟವವನ್ನು ಅಭಿವೃದ್ಧಿಪಡಿಸುವುದಕ್ಕೆ ಕಿಂಡರ್‌ಗಾರ್ಟ್ನ್, ಮತ್ತು ವಸ್ತುಪಾಠಗಳು ಮುಖ್ಯವಾದ ಸಾಧಕಗಳು

ಚಿಕ್ಕತನದಲ್ಲಿ ಇಂದ್ರಿಯಗಳನ್ನು ವಿಶೇಷವಾಗಿ ಉಪಯೋಗಿಸುವುದು ಸ್ವಾಭಾವಿಕವಾಗಿರುವುದರಿಂದ ಇಂದ್ರಿಯಗಳಿಂದ ಕೆಲಸಮಾಡಿಸುವುದಕ್ಕೆ ಉಪಾಧ್ಯಾಯನು ಬೇರೆಯಾಗಿ ಪ್ರಯತ್ನಪಡಬೇಕಾದುದಿಲ್ಲ. ಮಗುವು ಆರೋಗ್ಯವಾಗಿದ್ದರೆ ತಾನಾಗಿ ಸಿಕ್ಕಿದುದನ್ನು ನೋಡುವುದಕ್ಕಾಗಲಿ, ಕೇಳುವುದಕ್ಕಾಗಲಿ ಅಥವಾ ಮುಟ್ಟುವುದಕ್ಕಾಗಲಿ ಪ್ರಯತ್ನಪಡುವುದು. ಆದುದರಿಂದ ತಾಯಾಗಲಿ ಅಥವಾ ಮಗುವನ್ನು ನೋಡಿಕೊಳ್ಳುವ ಇತರರಾಗಲಿ ಮಾಡಬೇಕಾದುದೇನೆಂದರೆ—ಉಚಿತವಾದ ಪದಾರ್ಥಗಳನ್ನು ಮಗುವಿನ ಇಂದ್ರಿಯಗಳಿಗೆ ಗೋಚರವಾಗುವಂತೆ ಮಾಡುವುದು. ಇದರ ಜತೆಗೆ ಒಂದೇವಸ್ತುವು ಪದೇಪದೇ ಮಗುವಿಗೆ ಗೋಚರವಾಗುವಂತೆ ಮಾಡಬೇಕು. ಇಲ್ಲದಿದ್ದರೆ ವಸ್ತುವಿನ ಸ್ವರೂಪವು ಚೆನ್ನಾಗಿ ಜ್ಞಾಪಕನಿಲ್ಲಲಾರದು ; ಅದರಿಂದ ವಸ್ತುಗಳಿಗೆ ಪರಸ್ಪರವಿರುವ ಭೇದಗಳು ಸ್ಪಷ್ಟಪಡದೇ ಹೋಗಬಹುದು. ಉಚಿತವಾದ

ಯೋಗ್ಯರಾದ ಉಪಾಧ್ಯಾಯರ ಸಂಖ್ಯೆಯು ಹೆಚ್ಚುವುದರಲ್ಲಿ ಸಂಶಯವಿಲ್ಲ.

***

ಈ ಸಮಯದಲ್ಲಿ ಇನ್ನೊಂದಂಶವನ್ನು ಇಲ್ಲಿ ತಿಳಿಸಬಹುದು. ಈಗ ಮೈಸೂರ ಲ್ಲಿರುವ ನಾರ್ಮಲ್‌ಸ್ಕೂಲಿನಲ್ಲು ಮುಂದೆ ಆಗುವ ನಾರ್ಮಲ್‌ಸ್ಕೂಲ್‌ಗಳಲ್ಲೂ ಹಿಂದೂ ಸ್ಥಾನಿ ಮೊಸ್ತರುಗಳು ಓದುವುದಕ್ಕೆ ಸರ್ಕಾರದವರು ಏರ್ಪಾಡುಮಾಡಿದಾರೆ. ಆದರೆ ಹಿಂದುಸ್ಥಾನಿಮೊಸ್ತರುಗಳಲ್ಲನೇಕರಿಗೆ ಕನ್ನಡವು ಚೆನ್ನಾಗಿ ಬಾರದಿರುವುದರಿಂದ ಅವ ರಿಗೆ ಅಲ್ಲಿನ ಬೋಧನೆಯು ಹೆಚ್ಚಾಗಿ ಉಪಯುಕ್ತವಾಗಲಾರದು. ಆದುದರಿಂದ ಹಿಂದುಸ್ಥಾನಿ ಮೊಸ್ತರುಗಳಿಗೆ ಬೇರೆಯೂಗಿ ಒಂದು ನಾರ್ಮಲ್‌ಸ್ಕೂಲನ್ನು ಸರ್ಕಾರದ ವರು ಸ್ಥಾಪಿಸಬೇಕಾದುದು ಅವಶ್ಯಕ. ಇದನ್ನು ಅವರು ಎಷ್ಟು ಶೀಘ್ರವಾಗಿ ಮಾಡಿದರೆ ಅಷ್ಟು ಒಳ್ಳೇದು.

ಇಂದ್ರಿಯಸಾಧನವನ್ನು ಅಭಿವೃದ್ಧಿಪಡಿಸುವ ಕ್ರಮ.

ಬಾಲ್ಯದಲ್ಲಿ ಜ್ಞಾನವೆಲ್ಲ ಇಂದ್ರಿಯಗಳ ಮೂಲಕವಾಗಿಯೇ ಉಂಟಾಗು ವುದು. ಆದಿಯಲ್ಲಿ ಸ್ಥೂಲವಸ್ತುಗಳ ಜ್ಞಾನವೇ ವಿಶೇಷವಾಗಿ ಉಂಟಾಗುವುದು. ಅನಂತರದಲ್ಲಿ ಅಂದರೆ ಬುದ್ಧಿಯು ಬೆಳೆಯುತ ಬಾಲಕರಿಗೆ ಸೂಕ್ಷ್ಮವಸ್ತುಗಳನ್ನೇ ಷೇರೆಯಾಗಿ ಗ್ರಹಿಸುವುದು ಕ್ರಮವಾಗಿ ಸಾಧ್ಯವಾಗುವುದು. ಬಾಲ್ಯದಲ್ಲಿ ಬುದ್ಧಿಯು ಅಭಿವೃದ್ಧಿಯಾಗಿಲ್ಲದಿರುವುದರಿಂದ ಸ್ಥೂಲವಸ್ತುಗಳನ್ನು ಮಾತ್ರ ತಿಳಿದುಕೊಳ್ಳುವು ದರಲ್ಲಿ ಶಕ್ತಿಯಿರುವದು. ಆಗ್ಗೆ ಇಂದ್ರಿಯ ಶಕ್ತಿಯೇ ಹೆಚ್ಚಾಗಿರುವುದರಿಂದ ಉಪಾ ಧ್ಯಾಯನು ಅದನ್ನು ಸರಿಯಾಗಿ ಉಪಯೋಗಿಸುವಂತೆ ಮಾಡಿ ಅಭಿವೃದ್ಧಿಪಡಿಸ ಬೇಕು.

ಇಂದ್ರಿಯಗಳು ಐದು-ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಕ್ (ಚರ್ಮ) ಇವುಗಳಲ್ಲಿ ರುಚಿ ಮತ್ತು ವಾಸನೆಯನ್ನು ಬುದ್ಧಿಗೆ ತಿಳಿಸುವ ಇಂದ್ರಿಯಗಳು ಅಷ್ಟು ಮುಖ್ಯವಾದವುಗಳಲ್ಲ. ದೇಹಕ್ಕೆ ಅನಾರೋಗ್ಯಪದಾರ್ಥಗಳು ಸೇರದಿರಲೆಂದು ಮಾತ್ರ ಇವುಗಳು ಇದ್ದಂತಿವೆ. ಶ್ರೋತ್ರೇಂದ್ರಿಯವೇನೊ ಮುಖ್ಯವಾದುದೇಸರಿ : ಆದರೆ ಅದನ್ನು ಅಭಿವೃದ್ಧಿಪಡಿಸುವುದಕ್ಕೆ ನಮ್ಮ ದೇಶದಲ್ಲಿ ಸದ್ಯದಲ್ಲಿ ಅನುಕೂಲತೆಗಳು

ಸಾಲದಿರುವುದರಿಂದ ಅದನ್ನು ಅಷ್ಟು ಮುಖ್ಯವಾಗಿ ಎಣಿಸಬೇಕಾದುದಿಲ್ಲ. ಮುಖ್ಯವಾಗಿ ಕಣ್ಣನ್ನ ಅಭಿವೃದ್ಧಿಪಡಿಸುವುದು ಬೇಕಾಗಿದೆ. ಇದರ ಜತೆಗೆ ಸ್ವಲ್ಪಮಟ್ಟಿಗೆ ಶ್ರೋತ್ರೇಂದ್ರಿಯವನ್ನು ಮತ್ತು ತ್ವಗಿಂದ್ರಿಯವನ್ನು ಅಭಿವೃದ್ಧಿಪಡಿಸಿದರೆ ಸಾಕು. ಇಂದ್ರಿಯಗಳ ಪಾಟವವನ್ನು ಅಭಿವೃದ್ಧಿಪಡಿಸುವುದೆಂದರೆ ಅವುಗಳಿಂದ ಸರಿಯಾಗಿ ಕೆಲಸಮಾಡಿಸಿ ಕ್ರಮೇಣ ಸೂಕ್ಷ್ಮಭೇದವನ್ನು ಪರೀಕ್ಷಿಸಿ ಕಂಡುಹಿಡಿಯುವಂತೆ ಮಾಡುವುದು.

ಭಾಷೆಯೆಂಬುದು ಸಂಜ್ಞಾಮಾತ್ರವೆಂಬುದು ಎಲ್ಲರಿಗೂ ತಿಳಿದಿದೆ. ಬಾಲ್ಯದ ಸ್ವಭಾವವು ವಸ್ತುಗಳನ್ನು ತಿಳಿದುಕೊಳ್ಳುವುದಾದುದರಿಂದ ಆಗ ಮಕ್ಕಳಿಗೆ ವಸ್ತುಗಳನ್ನೇ ತಿಳಿಸತಕ್ಕದ್ದು ಸರಿ. ಹಾಗೆ ವಸ್ತುಗಳನ್ನು ತಿಳಿಸುತ್ತ ಜತೆಯಲ್ಲಿ ಆಯಾ ವಸ್ತುಗಳ ಹೆಸರುಗಳನ್ನು ತಿಳಿಸುವುದರಿಂದ ಭಾಷೆಯನ್ನು ಹೇಳಿಕೊಡುತ್ತ ಬರಬೇಕು. ಇದಕ್ಕೆ ಬದಲಾಗಿ ಅಂದರೆ ಮಕ್ಕಳಿಗೆ ವಸ್ತುಜ್ಞಾನವನ್ನುಂಟುಮಾಡದೆ ಶಬ್ದಗಳನ್ನು ಮಾತ್ರ ಹೇಳಿಕೊಡುವುದು ತಪ್ಪು. ಅದರಿಂದ ಅವರಿಗೆ ಹೆಚ್ಚಾಗಿ ಪ್ರಯೋಜನವಾಗಲಾರದು. ಆದುದರಿಂದಲೇ ಬಾಲ್ಯಕ್ಕೆ ಕಿಂಡರ್‌ಗಾರ್ಟನ್, ಮತ್ತು ವಸ್ತುಪಾಠಗಳು ಸರಿಯಾದವುಗಳೆಂದು ಹೇಳುವುದು. ಇವುಗಳಿಂದ ವಸ್ತುಗಳ ಜ್ಞಾನದ ಜತೆಯಲ್ಲಿ ಭಾಷಾಜ್ಞಾನವುಂಟಾಗುವುದು. ಆದುದರಿಂದ ಆದಿಯಲ್ಲಿ ಇಂದ್ರಿಯಗಳ ಪಾಟವವನ್ನು ಅಭಿವೃದ್ಧಿಪಡಿಸುವುದಕ್ಕೆ ಕಿಂಡರ್‌ಗಾರ್ಟನ್, ಮತ್ತು ವಸ್ತುಪಾಠಗಳು ಮುಖ್ಯವಾದ ಸಾಧಕಗಳು

ಚಿಕ್ಕತನದಲ್ಲಿ ಇಂದ್ರಿಯಗಳನ್ನು ವಿಶೇಷವಾಗಿ ಉಪಯೋಗಿಸುವುದು ಸ್ವಾಭಾವಿಕವಾಗಿರುವುದರಿಂದ ಇಂದ್ರಿಯಗಳಿಂದ ಕೆಲಸಮಾಡಿಸುವುದಕ್ಕೆ ಉಪಾಧ್ಯಾಯನು ಬೇರೆಯಾಗಿ ಪ್ರಯತ್ನಪಡಬೇಕಾದುದಿಲ್ಲ. ಮಗುವು ಆರೋಗ್ಯವಾಗಿದ್ದರೆ ತಾನಾಗಿ ಸಿಕ್ಕಿದುದನ್ನು ನೋಡುವುದಕ್ಕಾಗಲಿ, ಕೇಳುವುದಕ್ಕಾಗಲಿ ಅಥವಾ ಮುಟ್ಟುವುದಕ್ಕಾಗಲಿ ಪ್ರಯತ್ನಪಡುವುದು. ಆದುದರಿಂದ ತಾಯಾಗಲಿ ಅಥವಾ ಮಗುವನ್ನು ನೋಡಿಕೊಳ್ಳುವ ಇತರರಾಗಲಿ ಮಾಡಬೇಕಾದುದೇನೆಂದರೆ—ಉಚಿತವಾದ ಪದಾರ್ಥಗಳನ್ನು ಮಗುವಿನ ಇಂದ್ರಿಯಗಳಿಗೆ ಗೋಚರವಾಗುವಂತೆ ಮಾಡುವುದು. ಇದರ ಜತೆಗೆ ಒಂದೇವಸ್ತುವು ಪದೇಪದೇ ಮಗುವಿಗೆ ಗೋಚರವಾಗುವಂತೆ ಮಾಡಬೇಕು. ಇಲ್ಲದಿದ್ದರೆ ವಸ್ತುವಿನ ಸ್ವರೂಪವು ಚೆನ್ನಾಗಿ ಜ್ಞಾಪಕನಿಲ್ಲಲಾರದು ; ಅದರಿಂದ ವಸ್ತುಗಳಿಗೆ ಪರಸ್ಪರವಿರುವ ಭೇದಗಳು ಸ್ಪಷ್ಟಪಡದೇ ಹೋಗಬಹುದು. ಉಚಿತವಾದ

ವಸ್ತುಗಳನ್ನು ಮಗುವಿನ ಇಂದ್ರಿಯಗಳಿಗೆ ಗೋಚರವಾಗುವಂತೆ ಮಾಡದಿದ್ದರೆ ಅದು ಸಿಕ್ಕಿದುದನ್ನೆಲ್ಲ ನೋಡುವುದರಿಂದ ಅವರ ಮನಸ್ಸಿನಲ್ಲಿ ದುರಭಿಪ್ರಾಯಗಳು ಅಂಕುರಿಸುವುದಕ್ಕೆ ಅವಕಾಶವಾಗುವುದು. ಆದುದರಿಂದ ಶೈಶವದಲ್ಲಿ ಮಗುವಿನ ಸುತ್ತಲು ಉಚಿತವಾದ ವಸ್ತುಗಳನ್ನಿಡಬೇಕು.

ಮೇಲೆ ಹೇಳಿದ್ದು ತಂದೆತಾಯಿಗಳು ಮಾಡಬೇಕಾದುದು. ಹೀಗೆ ಸ್ವಲ್ಪ ದಿನಗಳು ಕಳೆದನಂತರ ಅವರು ಉಚಿತವಾದ ವಸ್ತುಗಳ ಕಡೆಗೆ ಮಗುವಿನ ದೃಷ್ಟಿಯನ್ನು ತಿರುಗಿಸುವುದಕ್ಕೆ ಯತ್ನಿಸಬೇಕು. ಅನಂತರದಲ್ಲಿ ಪಾಠಶಾಲೆಗೆ ಬಂದಾಗ ಮಗುವಿನ ಇಂದ್ರಿಯಶಕ್ತಿಯನ್ನು ವೃದ್ಧಿಪಡಿಸಲು ಕ್ರಮವಾಗಿ ಪ್ರಯತ್ನಪಡಬೇಕು. ಇದಕ್ಕೆ ಸಹಾಯಕಗಳಾಗುವುವು ಕಿಂಡರ್‌ಗಾರ್ಟ್ನ್, ವಸ್ತುಪಾಠ, ಓದುವುದು, ಬರೆಯುವುದು, ಚಿತ್ರಬರೆಯುವುದು (Drawing) ಈ ಪಾಠಗಳಲ್ಲಿ ಉಪಾಧ್ಯಾಯನು ಎರಡು ವಿಷಯಗಳನ್ನು ಜ್ಞಾಪಕದಲ್ಲಿಡಬೇಕು.

೧ ವಸ್ತುಗಳಿಗೆ ಪರಸ್ಪರವಿರುವ ಭೇದವು ಬಹಳ ಸೂಕ್ಷ್ಮವಾದಾಗ್ಯೂ ಅದನ್ನು ಕಂಡುಹಿಡಿಯುವಂತೆ ಮಾಡುವುದು. ಅಂದರೆ ಕೆಂಪಗಿರುವ ಎರಡುವಸ್ತುಗಳಿಗೆ ಪರಸ್ಪರ ತಾರತಮ್ಯವು ಅಲ್ಪವಾಗಿದ್ದರೂ ಅಂಥ ತಾರತಮ್ಯವನ್ನು ತಟ್ಟನೆ ಕಂಡುಹಿಡಿಯುವ ಶಕ್ತಿಯನ್ನುಂಟುಮಾಡಿಕೊಡುವುದು. ಇದಕ್ಕಾಗಿ ಉಪಾಧ್ಯಾಯನು ಆದಿಯಲ್ಲಿ ವಿಶೇಷವಾಗಿ ಅಂತರವುಳ್ಳ ಎರಡು ವಸ್ತುಗಳನ್ನು ತೋರಿಸಬೇಕು- ಅನಂತರದಲ್ಲಿ ಈ ಅಂತರವನ್ನು ಕಡಮೆಮಾಡುತ್ತ ಹೋಗಬೇಕು. ಇದರಿಂದ ವಿಶೇಷಾಂಶಗಳು ಮಕ್ಕಳಿಗೆ ಕ್ರಮವಾಗಿ ತಿಳಿಯಬರುವುವು.

೨ ಸ್ವತಃ ಪರೀಕ್ಷಿಸುವ ಶಕ್ತಿಯನ್ನುಂಟುಮಾಡುವುದು. ಇದರಲ್ಲಿ ವಸ್ತುಪಾಠವು ಮುಖ್ಯವಾಗಿ ಉಪಾಧ್ಯಾಯನಿಗೆ ಸಹಾಯಕವಾಗುವುದು. ವಸ್ತುವೊಂದನ್ನು ಮಕ್ಕಳ ಮುಂದಿಟ್ಟು ಅವರು ತಮ್ಮ ತಮ್ಮ ಕಣ್ಣನ್ನು ಕೈಯ್ಯನ್ನು ಉಪಯೋಗಿಸಿ ತಿಳಿದುಕೊಳ್ಳಬಹುದಾದುದನ್ನೆಲ್ಲ ಅವರಿಂದಲೇ ಹೇಳಿಸಬೇಕು. ಹೀಗೆ ಮಾಡಿದರೆ ವಸ್ತುಗಳನ್ನು ಸ್ವತಃ ಪರೀಕ್ಷಿಸುವ ಶಕ್ತಿಯು ಮಕ್ಕಳಿಗುಂಟಾಗುವುದು. ಆದುದರಿಂದ ಮಕ್ಕಳು ತಾವೇ ಪರೀಕ್ಷಿಸಿ ಹೇಳಬಹುದಾದ ಯಾವ ಅಂಶವನ್ನೂ ಉಪಾಧ್ಯಾಯನು ಅವರಿಗೆ ತಾನು ತಿಳಿಸಬಾರದು.

ವಸ್ತುಪಾಠದ ಬೇರೊಂದು ಪ್ರಯೋಜನವೆನ್ನು ಇಲ್ಲಿ ತಿಳಿಸಬಹುದು ಅಂಶ

ಗಳನ್ನು ಬೇರೆಬೇರೆಯಾಗಿ ಗೊತ್ತುಹಿಡಿಯುವುದರಿಂದ ಬಾಲಕರಿಗೆ ಪರೀಕ್ಷಣಶಕ್ತಿಯುಂಟಾಗುವುದು. ಹೀಗೆ ಅಂಶಗಳನ್ನು ಕಂಡುಹಿಡಿದನಂತರ ಅವುಗಳನ್ನೆಲ್ಲ ಕ್ರಮವಾಗಿ ಒಂದೊಂದಕ್ಕಿರುವ ಸಂಬಂಧದೊಡನೆ ಪುನರಾವರ್ತನೆ ಮಾಡಿಸುವುದರಿಂದ ವಿಷಯಗಳನ್ನು ವಿಭಾಗಿಸಿ ಒಟ್ಟಾಗಿ ಜ್ಞಾಪಕವಿಟ್ಟುಕೊಳ್ಳುವ ಸ್ವಭಾವಬರುವುದು. ಇದು ಮನುಷ್ಯನಿಗೆ ಬಹಳಮಟ್ಟಿಗೆ ಬೇಕಾದುದು. ವಯಸ್ಸಾದವರಿಗೆ ಸಹ ಈ ಶಕ್ತಿಯು ಸರಿಯಾಗಿರುವದಿಲ್ಲ.

ಇಂದ್ರಿಯಗಳನ್ನಭಿವೃದ್ಧಿಪಡಿಸುವದರಲ್ಲಿ ಕಿಂಡರ್‌ಗಾರ್ಟ್ನ್ ಮುಂತಾದವುಗಳಿಂದಲೂ ಬಹಳಮಟ್ಟಿಗೆ ಸಾಹಾಯ್ಯವಾಗುವುದು ಕಡ್ಡಿ ಮುಂತಾದವುಗಳಿಂದ ಆಕೃತಿಗಳನ್ನು ಮಾಡುವಾಗ್ಗೆ ಬಾಲಕರ ತ್ವಗಿಂದ್ರಿಯವು ಕೆಲಸಮಾಡಬೇಕಾಗುತ್ತೆ. ಚಿತ್ರವನ್ನು ಬರೆಯುವಾಗ ಕಣ್ಣಿಗೆ ಕೈಗೆ ಸಹ ಸೂಕ್ಷ್ಮತೆಯುಂಟಾಗುವುದು. ಅಕ್ಷರಾಭ್ಯಾಸಮಾಡಿಸುವಾಗ ಶ್ರೋತ್ರೇಂದ್ರಿಯವು ಉಚ್ಚಾರಣೆಯ ಭೇದಗಳನ್ನು ತಿಳಿದುಕೊಳ್ಳಬೇಕಾಗುವುದು. ಬರೆಯುವಾಗ್ಗೆ ಕಣ್ಣಿಗೆ ಕೈಗೆ ಸಹ ಸರಿಯಾಗಿ ಕೆಲಸಮಾಡುವ ಸ್ವಭಾವ ಬರುವುದು. ಬಾಲವಿದ್ಯಾಭ್ಯಾಸದಲ್ಲಿ ಮಾಡಿಸಬೇಕಾದುದರಲ್ಲೆಲ್ಲ ಇಂದ್ರಿಯಗಳು ಹೆಚ್ಚಾಗಿ ಕೆಲಸಮಾಡಬೇಕಾಗುವುದು. ಇದನ್ನು ಉಪಾಧ್ಯಾಯನು ಕ್ರಮವರಿತು ನಡಿಸಬೇಕು. ಆದರೆ ಇಂದ್ರಿಯಪಾಟವದ ಅಭಿವೃದ್ಧಿಯೆಲ್ಲ ಉಪಾಧ್ಯಾಯನಿಂದಲೇ ಆಗತಕ್ಕದ್ದಲ್ಲ. ತಂದೆತಾಯಿಗಳು ಸಹ ಇದಕ್ಕಾಗಿ ಬಹಳಮಟ್ಟಿಗೆ ಪ್ರಯತ್ನಪಡಬೇಕಾಗುವುದು.

$ ನಾಗಾನಂದ ನಾಟಕ ಕಥಾಪ್ರಸಂಗ.

ಜೀಮೂತವಾಹನನೆಂಬ ವಿದ್ಯಾಧರ ಚಕ್ರವರ್ತಿ ಇದ್ದನು ತನ್ನ ತಂದೆ ಜೀಮೂತಕೇತುವು ವಾನಪ್ರಸ್ಥಾಶ್ರಮವನ್ನು ನಿರವಿಸಲು ವನಕ್ಕೆ ಹೋಗಲು; ತಾನೂ ರಾಜ್ಯದಲ್ಲಿ ಆಸಕ್ತಿಯನ್ನು ತೊರೆದು, ಪಿತೃಶುಶ್ರೂಷೆಯಲ್ಲಿಯೇ ಆಸಕ್ತನಾಗಿ

$ ಧಾವಕನೆಂಬ ಕವಿಯು ಪ್ರಸಿದ್ಧವಾದ ರತ್ನಾವಳಿ, ನಾಗಾನಂದ, ಪ್ರಿಯದರ್ಶಿಕೆ ಎಂಬ ಮೂರು ನಾಟಕಗಳನ್ನು ಮಾಡಿ ಶ್ರೀಹರ್ಷನೆಂಬ ಕಾಶ್ಮೀರ ದೇಶಾಧಿಪನಿಗೆ ಮೂರಿದನೆಂದೂ, ಆ ರಾಯನು ಅವುಗಳನ್ನು ಕೊಂಡು ತನ್ನ ಹೆಸರಲ್ಲಿ ಪ್ರಚಾರಗೊಳಿಸಿದನೆಂದೂ ಕಾವ್ಯಪ್ರಕಾಶವೆಂಬ ಸಂಸ್ಕೃತದ ಅಲಂಕಾರ ಗ್ರಂಥವು ತಿಳಿಸುವದು.

ಅತ್ಯಾಕ್ಕೆ ಹೋಗಿ, ತಂದೆಯು ಬಳಿಯಲ್ಲಿ ಕಾಲವನ್ನು ಕಳೆಯುತ್ತಿದ್ದನು.

ಹೀಗಿರಲೊಂದುದಿನ ಅತ್ರೇಯನೆಂಬ ಮಿತ್ರನು " ಎಲೈ ಮಿತ್ರನೇ, ಈ ವನವಾಸ ದುಃಖವು ನಿನಗೆ ಯೋಗ್ಯವಲ್ಲ ಇದು ವೃದ್ಧರಿಗೇನೇ ಸರಿ. ಇಷ್ಟುದಿವಸ ಹೀಗೆ ಕಳೆದದ್ದು ಸಾಕು ಇನ್ನುಮೇಲಾದರೂ ಇಚ್ಛಾಭೋಗರಮಣೀಯವಾದ ರಾಜ್ಯಸುಖವನ್ನು ಅನುಭವಿಸು ನಡಿ. ಹೋಗೋಣ." ಎಂದು ಎಷ್ಟೆಷ್ಟು ಹೇಳಿದಾಗ್ಯೂ ಕೇಳದೆ, ದೃಢನಿಶ್ಚಯನಾದ ಜೀಮೂತವಾಹನನು " ಅಯ್ಯಾ ಮಿತ್ರನೇ, ಇದೇನು ಹೀಗೆ ಹೇಳುತ್ತೀಯೆ? ತಂದೆಯ ಮುಂದೆ ನಿಂತು ಶೋಭಿಸುವ ಹಾಗೆ, ಸಿಂಹಾಸನದಲ್ಲಿ ಕುಳಿತರೆ ಶೋಭಿಸುತ್ತೇನೆಯೆ? ತಂದೆಯ ಪಾದಗಳನ್ನು ಒತ್ತುವದರಿಂದ ಬರುವ ಸುಖವು ಸಿಂಹಾಸನದಲ್ಲಿ ಕುಳಿತು, ಸೇವಕರಿಂದ ಒತ್ತಿಸಿಕೊಳ್ಳುವವರಲ್ಲಿ ಬರುತ್ತದೆಯೆ? ತಂದೆಯನ್ನಗಲಿದ ನನಗೆ ರಾಜ್ಯವು ಎಂದಿಗೂ ದುಃಖವೇ ಹೊರತು ಸುಖವಲ್ಲ." ಎಂದು ಹೇಳಿದನು. ಹಾಗೆಯೇ ಶತ್ರುವಾದ ಮತಂಗಜನು ತನ್ನ ರಾಜ್ಯವನ್ನು ಮುತ್ತಿ ವಶಮಾಡಿಕೊಂಡನೆಂದು ಕೇಳಿಯೂ, ಇವನ ಮನಸ್ಸು ಪಿತೃಶುಶ್ರೂಷೆಯಿಂದ ಚಲಿಸಲಿಲ್ಲ.

ಒಂದು ದಿನ ಜೀಮೂತಕೇತುವು ಮಗನಾದ ಜೀಮೂತವಾಹನನ್ನು ಕರೆದು " ಅಪ್ಪಾ, ಆಶ್ರಮದಲ್ಲಿ ಸವಿತ್ತುಗಳು ಮುಗಿದವು. ದರ್ಭೆಯು ತೀರಿತು. ಗೆಡ್ಡೆಗೆಣಸು ಬಣಗಿಹೋದವು ಮಲಯಪರ್ವತಕ್ಕೆ ಹೋಗಿ, ವಾಸಕ್ಕೆ ಪ್ರಶಸ್ತವಾದ ಒಂದು ಪ್ರದೇಶವನ್ನು ಗೊತ್ತುಮಾಡು." ಎಂದು ಹೇಳಿದನು.

ತಂದೆಯ ಅಪ್ಪಣೆಯ ಮೇರೆ ಅತ್ರೇಯನೊಡನೆ ಜೀಮೂತವಾಹನನು ಹೊರಟು ಬರುತ್ತಾ, ಮಾರ್ಗದಲ್ಲಿ ಒಂದು ಆಶ್ರಮವನ್ನು ಕಂಡು, " ಅಯ್ಯಾ ಅತ್ರೇಯನೇ, ಇತ್ತ ನೋಡು. ವಿದ್ಯಾರ್ಥಿಗಳು ಸವಿತ್ತುಗಳನ್ನೂ, ದರ್ಭೆಗಳನ್ನೂ ಕತ್ತರಿಸುತ್ತಿರುವರು; ತಾಪಸ ಕನ್ಯಕೆಯರು ವೃಕ್ಷಗಳ ಪಾತಿಗಳಿಗೆ ನೀರೆರೆಯುತ್ತಿರುವರು. ಕೇಳು, ಈಕಡೆ ವೇದಘೋಷವಾಗುತ್ತಿರುವದು ಇದು ಒಂದು ಆಶ್ರಮವಾಗಿರಬಹುದು. ನಮ್ಮ ವಾಸಕ್ಕೆ ಪ್ರಶಸ್ತವಾಗಿರುವಂತೆ ತೋರುತ್ತದೆ." ಎಂದು ತೋರಿಸುತ್ತಾ, ನೋಡುತ್ತಾ, " ಅಯ್ಯಾ, ಇತ್ತ ತಿರುಗು. ಹುಲ್ಲೆಗಳು ಕಿವಿಯನ್ನು ಎತ್ತಿಕೊಂಡು ಹುಲ್ಲು ಮೇಯುವದನ್ನೂ ಬಿಟ್ಟು ನಿಂತಿರುವವು; ಕಣ್ಣುಗಳನ್ನು ಅರ್ಧಮುಚ್ಚಿಕೊಂಡಿರವವು. ಇದನ್ನು ನೋಡಿದರೆ, ಎಲ್ಲೋ ಸಂಗೀತವಾಗುತ್ತಿರ

ಬೇಕು. '' ಎಂದು ಹೇಳುತ್ತಿರುವಷ್ಟರಲ್ಲಿ ಸಂಗೀತಧ್ವನಿ ಕೇಳಿಸಿತು.

'' ಅತ್ರೇಯನೇ, ಇತ್ತ ತಿರುಗು. ವೀಣಾನಾದವು ಕೇಳುತ್ತಿರುವದು. ಧ್ವನಿಯು ಸೂಕ್ಷ್ಮವಾಗಿರುವದು. ರಾಗವು ಕೋಮಲವಾಗಿರುವದು ಯಾವಳೋ ಒಬ್ಬ ಸ್ತ್ರೀಯು ವೀಣೆಯನ್ನು ಬಾಜಿಸುವಂತೆ ತೋರುವದು '' ಎಂದು ಹೇಳುತ್ತಾ ಸ್ವಲ್ಪ ದೂರ ನಡೆಯಲು; ಒಂದು ದೇವಾಲಯವು ಕಾಣಿಸಿತು.

ಕಂಡು, ದೇವತಾನಮಸ್ಕಾರವ್ಯಾಜದಿಂದ ದೇವಾಲಯವನ್ನು ಪ್ರವೇಶಿಸಿ, ಅಲ್ಲಿ ಒಬ್ಬ ಸುಂದರಿಯು ಗಾನಮಾಡುತ್ತಿರುವದನ್ನು ಕಂಡು, ಈ ಸ್ತ್ರೀಯು ನೋಡತಕ್ಕವಳೋ ಅಲ್ಲವೋ ಎಂಬ ಸಂದೇಹದಿಂದ ಹಿಂದಿರುಗಿ, ಅಲ್ಲಿದ್ದ ತಮಾಲವೃಕ್ಷದ ಹಿಂದೆ ಮರಸಿಕೊಂಡು, ದರ್ಶನಕ್ಕೆ ಸಮಯವನ್ನು ನೋಡುತ್ತಿದ್ದನು.

ಆ ಸ್ತ್ರೀಯು ಸಿದ್ಧರಿಗೆಲ್ಲಾ ರಾಜನಾದ ವಿಶ್ವಾವಸುವಿನ ಮಗಳು; ವಿಶ್ವಾವಸುವಿನ ತಂಗಿ; ಇವಳ ಹೆಸರು ಮಲಯವತಿ; ಇವಳು ತನಗೆ ಅನುರೂಪನಾದ ವರನನ್ನು ಪಡೆಯುಬೇಕೆಂದು, ನಿತ್ಯದಲ್ಲಿಯೂ ಅಲ್ಲಿ ಗೌರಿಯನ್ನು ಪೂಜಿಸಿ, ಸ್ತುತಿಯನ್ನು ಗಾನಮಾಡುತ್ತಿದ್ದಳು.

ಇವರು ನೋಡುತ್ತಿದ್ದಹಾಗೆಯೇ ಸಖಿಯೊಬ್ಬಳು ಮಲಯವತಿಯ ಕೈಯಲ್ಲಿದ್ದ ವೀಣೆಯನ್ನು ಸೆಳಕೊಂಡು, '' ಭರ್ತೃದಾರಿಕೆ, ಎಳ್ಳಷ್ಟೂ ಕರುಣೆಯಿಲ್ಲದ ಈ ಗೌರಿಯನ್ನು ಸ್ತುತಿಸಿ ಪ್ರಯೋಜನವೇನು ? '' ಎಂದಳು.

ಮಲಯವತಿಯು, '' ಅಕ್ಕ, ಪೂಜ್ಯಳಾದ ಗೌರಿಯನ್ನು ಸುಮ್ಮಗೆ ಯಾಕೆ ನಿಂದಿಸುತ್ತೀಯೆ ? ದೇವಿಯು ಕರುಣಿಸಿದಳು. ನಿನ್ನೆ ರಾತ್ರಿಯಲ್ಲಿ ಗೌರಿಯಮುಂದೆ ಹೀಗೆ ವೀಣಾವಾದನ ಮಾಡುತ್ತಿದ್ದಂತೆಯೂ, ಆಗ ದೇವಿಯು ಪ್ರತ್ಯಕ್ಷಳಾಗಿ, '' ಎಲಾ ವತ್ಸೆ, ನಿನ್ನ ಭಕ್ತಿಗೂ, ನಿನ್ನ ವೀಣಾವಾದನಕ್ಕೂ ಮೆಚ್ಚಿದೆನು. ಶೀಘ್ರದಲ್ಲಿಯೇ ವಿದ್ಯಾಧರಚಕ್ರವರ್ತಿಯು ತಾನೇ ಬಂದು ನಿನ್ನ ಪಾಣಿಗ್ರಹಣವನ್ನು ಮಾಡುವನು. ' ಎಂದು ಹೇಳಿದಂತೆಯೂ ನನಗೆ ಸ್ವಪ್ನವಾಯಿತು. '' ಎಂದು ಹೇಳುತ್ತಿರಲು; '' ಇದೇ ಸರಿಯಾದ ಸಮಯವು. '' ಎಂದು ಜೀಮೂತವಾಹನನು ಅತ್ರೇಯನೊಡನೆ ದೇವಾಲಯವನ್ನು ಪ್ರವೇಶಿಸಿದನು.

ಒಡನೆ ಮಲಯವತಿಯು ಅವನನ್ನು ನೋಡಿ ನಾಚಿಕೆಯಿಂದ ಒಂದುಕಡೆಗೆ ಹೋಗಲು; ಅತ್ರೇಯನು '' ಪೂಜ್ಯಳೇ, ನಿಮ್ಮ ಆಶ್ರಮದ ಆಚರಣೆಯೋ ಇದು ?

ಅತಿಥಿಗಳು ಮೊತಿನಿಂದಲೂ ಆದರಿಸಲ್ಪಡುವದಿಲ್ಲ!'' ಎಂದನು.

ಸಖಿಯು ಅತಿಥಿಸತ್ಕಾರವು ಅತ್ಯಾವಶ್ಯಕವೆಂದು ಜೀಮೂತವಾಹನನ ಸವಿೂಪಕ್ಕೆ ಬಂದು, '' ಸ್ವಾವಿೂ ! ನಿಮಗೆ ಕುಶಲವೆ ? ಇಲ್ಲಿ ವಿಶ್ರಮಿಸಿಕೊಳ್ಳಬೇಕು. '' ಎಂದು ಹೇಳಿಲು, ಜೀಮೂತವಾಹನನೂ ಅತ್ರೇಯನೂ ಕುಳಿತುಕೊಂಡರು.

ಆಗ ಒಬ್ಬ ತಾಪಸನು ಮಲಯವತಿಯನ್ನು ಕರೆದುಕೊಂಡು ಹೋಗುವುದಕ್ಕೆ ಬಂದು, ಜೀಮೂತವಾಹನನ ಬಳಿಯಲ್ಲಿ ಮಲಯವತಿಯನ್ನು ನೋಡಿ, ವಿಸ್ಮಿತನಾಗಿ, ''ಆಹಾ ! ಎಂಥಾ ಅನುರೂಪಘಟನೆಯಾಯಿತು ? ವಿಧಿಯು ಯುಕ್ತಕಾರಿಯೇ ಸರಿ.'' ಎಂದು ತನಗೆ ತಾನೇ ಹೇಳಿಕೊಳ್ಳುತ್ತಾ, ಮಲಯವತಿಯನ್ನು ನೋಡಿ, '' ಮಲಯವತಿ, ಏಳು, ಮಧ್ಯಾಹ್ನವಾಯಿತು; ಗುರುಗಳ ಅಪ್ಪಣೆಯಾಗಿದೆ, ಹೊರಡು'' ಎಂದನು.

ಮಲಯವತಿಯು ತನ್ನ ಮನಸ್ಸಿನಲ್ಲಿ ''ಒಂದುಕಡೆ ಗುರುಗಳ ಆಜ್ಞೆ ; ಮತ್ತೊಂದು ಕಡೆ ಈ ದರ್ಶನಸುಖವು. ಏನು ಮಾಡಲಿ ? ಹೋಗುವದಕ್ಕೂ ಮನಸ್ಸಿಲ್ಲ, ನಿಲ್ಲುವದಕ್ಕೂ ಯತ್ನವಿಲ್ಲ.'' ಎಂದು ಮೆಲ್ಲಮೆಲ್ಲನೆ ಅಡಿಗಳನ್ನಿಡುತ್ತಾ, ಹಿಂದಿರುಗಿ, ನಾಯಕನನ್ನು ಬಾರಿಬಾರಿಗೂ ನೋಡುತ್ತಾ, ಹೊರಟುಹೋದಳು.

ಇತ್ತ ಜೀಮೂತವಾಹನನು ಮಧ್ಯಾಹ್ನನಾದದ್ದನ್ನು ನೋಡಿ, ಅತ್ರೇಯನೊಡನೆ ಆಶ್ರಮಕ್ಕೆ ಹೊರಟುಹೋದನು.

ಮಲಯವತಿಯ ಮನಸ್ಸು ಜೀಮೂತವಾಹನನನ್ನು ನೋಡಿದ ಕ್ಷಣದಿಂದ, ಅವನಲ್ಲೇ ನೆಟ್ಟುಹೋಯಿತು. ಕದಳೀಗೃಹದಲ್ಲಿ ಸಖಿಯರು ಮಾಡಿದ ಉಪಚಾರವೆಲ್ಲವೂ ಮಲಯವತಿಗೆ ಸಂತಾಪವನ್ನು ಹೆಚ್ಚಿಸುತಿದ್ದವು. '' ಆ ಮಹಾನುಭಾವನು ಮಾತಿನಿಂದಲೂ ಉಪಚರಿಸಲ್ಪಡಲಿಲ್ಲ. ನನ್ನ ಮನಸ್ಸು ಕಠಿನವೆಂದು ಭಾವಿಸುವನೋ ಏನೋ!'' ಎಂದು ಬಗೆಬಗೆಯಾಗಿ ಚಿಂತಿಸುತ್ತಾ, ಸಖಿಗಳು ಬಾಳೆಯ ಎಲೆಯಿಂದ ಬೀಸಿದರೆ, ಅವರ ಸೋಂಕಿಗೆ ನಡುಗುತ್ತಾ, ''ಈ ಸಂತಾಪಕ್ಕೆ ಏನಾದರೂ ಉಪಶಮನವುಂಟೇ ? ಎಂದು ಬಾರಿಬಾರಿಗೆ ಕೇಳುತಿದ್ದಳು.

'' ಅದಕ್ಕೆ ಉಪಶಮನವು ಇಲ್ಲೇ ಬರುವದು.'' ಎಂದು ವಿನೋದದಲ್ಲಿ ಒಬ್ಬ ಸಖಿಯು ಹೇಳಿದಳು.

ಆ ಕಾಲಕ್ಕೆ ಸರಿಯಾಗಿ ಜೀಮೂತವಾಹನನು ಅತ್ರೇಯನೊಡನೆ ಅಲ್ಲೇ ಬರುತಿದ್ದನು.

II.
ರೇಶಿಮೆಹುಳು.

ಈ ಹುಳಗಳ ಆಹಾರವು ಉಪ್ಪುನೀರಲೇಸಪ್ಪಾಗಿರುವದು. ಈ ಸಪ್ಪನ್ನು ತಿಂದು ಇವುಗಳು ಬಹು ಜಾಗ್ರತೆಯಾಗಿ ಬೆಳೆಯುವವು. ಈ ಹುಳುಗಳು ಆಹಾರ ತಿಂದು ದಿನೇದಿನೇ ಬೆಳೆದು ೨೮ ದಿವಸಗಳಲ್ಲಿ ತಮ್ಮ ಮೊದಲನೇ ಅವಸ್ಥೆಯಾದ ಲಾರ್ವಲ್ ಅವಸ್ಥೆಯನ್ನು ಪೂರೈಸುವವು. ಈ ಮೇಲೆಹೇಳಿದ ೩೪ ದಿವಸಗಳಲ್ಲಿ ನಾಲ್ಕುಸಾರಿ ಪೊರೆಗಳನ್ನು ಬಿಡುತ್ತವೆ. ಈ ಪೊರೆಬಿಡುವದಕ್ಕೆ ಮುಂಚೆ ಅವುಗಳು ಸ್ವಲ್ಪ ಸೋಮಾರಿಯಾಗಿರುವವು. ಅಲ್ಲದೆ ಆಹಾರವನ್ನು ಸಹ ಬಿಟ್ಟು ಇರುವವು. ಹೀಗೆ ಇರುತ್ತಾ ಮೂವತ್ತುಮೂರನೆ ದಿವಸ ಪ್ರಾಪ್ತವಾಗಲು ಮುಂದೆ ಬರುವ ತಮ್ಮ ಎರಡನೇ ಅವಸ್ಥೆಗೆ ಸಿದ್ಧವಾಗುವವು. ಅನಂತರದಲ್ಲಿ ಇವುಗಳ ದೇಹವು ಮೃದುವಾಗಿ ಅವುಗಳ ಬಾಯಿಯಿಂದ ರೇಶಿಮೆ ನಾರವು ಉಂಟಾಗಿ ಅದನ್ನು ತನ್ನ ಸುತ್ತಲೂ ಸುತ್ತಿಕೊಳ್ಳುತ್ತಾ ಕಡೆಗೆ ರೇಶಿಮೆ ಪೊಟ್ಟಣವನ್ನು ಮಾಡಿಕೊಳ್ಳುತ್ತವೆ. (Silk Cocoon) ಈ ರೀತಿಯಾದ ಪೊಟ್ಟಣವನ್ನು ಇಡುವದಕ್ಕೆ ಮೂರು ಅಥವಾ ನಾಲ್ಕು ದಿವಸಗಳು ಸಾಕಾಗಿರುತ್ತವೆ. ಈ ಸ್ಥಿತಿಗೆ ಬಂದಾಗ ಒಂದು ಪೊಟ್ಟಣವನ್ನು ಬಿಚ್ಚಿನೋಡಿದಲ್ಲಿ ಅದು ಈ ರೀತಿಯಲ್ಲಿ ಆಗುವದಕ್ಕೆ ಮುಂಚೆ ಅವರ ಮೊದಲನೆ ಅವಸ್ಥೆಯಲ್ಲಿ ಇದ್ದ ಆಕಾರವು ಸ್ವಲ್ಪವು ಇಲ್ಲದೆ ಅತ್ಯಂತ ವ್ಯತ್ಯಾಸವನ್ನು ಹೊಂದಿ ಇರುವದು. ಈ ಸ್ಥಿತಿಯಲ್ಲಿರುವಾಗ ಅದು ಸ್ವಲ್ಪ ಕಪಿಲವರ್ಣವಾಗಿಯೂ, ಅಂಡಾಕಾರವಾಗಿಯೂ ಅದರ ಚರ್ಮವು ಹಳೇ ಚಕ್ಕಳದಂತೆ ಹೊಲಿಕೆಯುಳ್ಳದ್ದಾಗಿಯೂ ಇರುತ್ತದೆ. ಈ ಅವಸ್ಥೆಯಲ್ಲಿ ಮೊದಲಿನಂತೆ ತಲೆಯಾಗಲಿ, ಅಥವ ದವಡೆಗಳಾಗಲಿ ವ್ಯತ್ಯಾಸ ಕಾಣಬರುವದಿಲ್ಲ. ಇದರ ಮುಂಭಾಗದ ಅಂದರೆ ರಕ್ಕೆವುಂಟಾಗುವ ಸ್ಥಳದಲ್ಲಿ ಒಂದು ಕೊಂಕಾದ ನಡು ಕಟ್ಟನೋಪಾದಿಯಲ್ಲಿರುವ ಗುರ್ತು ಕಾಣಬಹುದು.

ಮೇಲೆ ಹೇಳಿದ ಎರಡನೇ ಸ್ಥಿತಿಗೆ ಬಂದನಂತರದಲ್ಲಿ ೫೦–೬೫ ದಿಗ್ರಿ ಫ್ಯಾಹ್ಟ್ ಇದ್ದಲ್ಲಿ ಪೊಟ್ಟಣಂತೆ ಕಟ್ಟಿದ್ದ ತನ್ನ ಗೂಡಿನಿಂದ ರೇಶಿಮೆಹುಳವು ಹೊರಕ್ಕೆ ಹೊರಟು ರೆಕ್ಕೆಗಳೊಡನೆ ಚಿಟ್ಟೆ ಹುಳದಂತೆ ಇರುವ ಆಕಾರವನ್ನು ಹೊಂದಿ ಹೊರಕ್ಕೆ ಹೊರಡುತ್ತದೆ. ಈ ಸ್ಥಿತಿಯುಲ್ಲಿರುವಾಗ ಅದರ ಬಾಯಿಯು ಮೊದಲು ಇದ್ದಂತೆ ಹಲ್ಲುಕೂಡು

ಗಳಲ್ಲದೆ (Jaw) ರಸಾಹಾರವಾದ ಕೊಳವಿಯೋಪಾದಿಯಲ್ಲಿ ಇರುವ ಬಾಯಿಯನ್ನು ಉಂಟಾಗಿರುತ್ತದೆ. (ಈ ಬಾಯಿಯು ಚಿಟ್ಟೆಹುಳ ಮುಂತಾದವುಗಳಲ್ಲಿ ಆಹಾರಕಾಲದಲ್ಲಿ ಮಾತ್ರ ನೀಳವಾದ ಒಂದು ಟೊಳ್ಳು ಮುಳ್ಳಿನಂತೆ ಕಾಣಬರುವದಲ್ಲದೆ ಉಳಿದಕಾಲದಲ್ಲಿ ಒಂದು ಗಡಿಯಾರದ ಎರ್‌ಸ್ಪ್ರಿಂಗ್‌ನಂತೆ ಸುತ್ತಲ್ಪಟ್ಟು ಇರುತ್ತದೆ.) ಇದರ ರೆಕ್ಕೆಯು ಸ್ವಲ್ಪ ಮಾಸಲು ಬಿಳುಪಿನೊಡನೆ ಇರುತ್ತದೆ. ಕಾಲುಗಳು ಉದ್ದವಾಗಿಯೂ ಮತ್ತು ನೀಳವಾಗಿಯೂ ಕೀಲುಗಳುಳ್ಳವುಗಳಾಗಿಯೂ ಇರುತ್ತವೆ.

ಈ ರೀತಿಯಲ್ಲಿ ಹುಳವು ತನ್ನ ಪೂರನೆ ಅವಸ್ಥೆಯನ್ನು ಹೊಂದಿದನಂತರ ಗಂಡು ಹೆಣ್ಣು ಸಂಯೋಗಕ್ಕೆ ಹುಡಕಿಕೊಂಡು ಹೋಗುತ್ತದೆ. ಗಂಡು ಹೆಣ್ಣು ಸಂಯೋಗವು ಒಂದು ದಿವಸಕ್ಕೆ ಹೆಚ್ಚಾಗಿ ಇರುವದಿಲ್ಲ. ಈ ರೀತಿಯ ಸಂಯೋಗದಿಂದ ಗಂಡು ಹುಳವು ಬಹಳ ನಿರ್ಬಲವುಳ್ಳದ್ದಾಗಿ ಕೆಲವು ಕಾಲದಲ್ಲಿ ಹೆಣ್ಣು ಹುಳದ ಜೊತೆಯಲ್ಲಿ ಸೇರಿ ಇದ್ದ ಹಾಗೆ ಸತ್ತುಹೋಗುತ್ತದೆ. ಅಥವಾ ಒಂದೆರಡು ದಿವಸದಲ್ಲಿ ಸಾಯುತ್ತದೆ. ಹೆಣ್ಣು ಹುಳವು ಗಂಡುಹುಳಕ್ಕಿಂತ ದೀರ್ಘಕಾಲ ಬದುಕಿದ್ದು ಮೊಟ್ಟೆಗಳನ್ನು ಇಟ್ಟನಂತರ ವಿಯೋಗವಾಗುತ್ತವೆ. ಕೆಲವು ಸಮಯಗಳಲ್ಲಿ ೧೦ದಿವಸಗಳಿಂದ ೨೦ ದಿವಸಗಳ ವರಿಗೂ ಹೆಣ್ಣು ಹುಳಗಳು ಬದುಕಿ ಇರುತ್ತವೆ.

ರೇಶಿಮೆ ಹುಳಗಳ ಜೀವವಾನಕಾಲವು ಸುಮಾರು ೭೦ ದಿವಸಗಳೆಂದು ಗೊತ್ತಾಗಿ ಇರುತ್ತದೆ.

ಹುಳುವಿನಅವಸ್ಥೆ	...	೩೪ ದಿವಸಗಳು
ಮೊಟ್ಟೆಕಟ್ಟುವದು	...	೪ ದಿವಸಗಳು
ಮೊಟ್ಟೆಯಲ್ಲಿ ಇರುವ ಕಾಲ	...	೧೯ ದಿವಸಗಳು
ಪೂರ್ಣಹುಳೆವಿನ ಅವಸ್ಥೆ	...	೧೫ ದಿವಸಗಳು
		ಒಟ್ಟು ೭೨ ದಿವಸಗಳು

ಲೆಪಿಡಪ್ಟೆರಾ (Lepedeptera) ತರಗತಿಗೆ ಸೇರಿದ ಹುಳುಗಳನ್ನು ಮೂರುವಿಧವಾಗಿ ವಿಂಗಡಿಸಿ ಇವೆ. ಅವು ಯಾವವಂದರೆ—ಹಗಲುಹೊತ್ತು ಸಂಚರಿಸುವವುಗಳಿಂತಲೂ, ಮುತ್ಸಂಜೆಹೊತ್ತು ಸಂಚರಿಸುವವುಗಳಿಂತಲೂ ಮತ್ತು ಕತ್ತಲುಹೊತ್ತು ಸಂಚರಿಸುವವುಗಳಿಂತೆಲೂ ಮೂರು ವಿಧವಾಗಿ ಇವೆ. ಪಾಡಿಕೆಯಾಗಿಯೂ ಹಗಲು ಸಂಚಾರಿಗಳಾದವುಗಳಲ್ಲಿ ಮಾತ್ರವೇ ನಾನಾವಿಧವಾಗಿಯೂ ಚಿತ್ರವಿಚಿತ್ರವಾಗಿರುವ

ವರ್ಣಗಳನ್ನು ನೋಡಬಹುದು. ಬಾಕಿ ಎರಡರಲ್ಲಿ ರಾತ್ರಿ ಸಂಚಾರಿಗಳಿಗಿಂತ ಮುತ್ಸಂಜೆ ಹೊತ್ತಿನಲ್ಲಿ ಸಂಚರಿಸುವವುಗಳಿಗೆ ಸ್ವಲ್ಪಮಟ್ಟಿನ ರಂಗುವುಂಟು.

ಪೋಲಿನ ತರಗತಿಯಲ್ಲಿ ರೇಶಿಮೆ ಹುಳವು ಮೂರನೇಜಾತಿ ಹುಳವಾಗಿ ಇರುತ್ತದೆ. ಆದಕಾರಣ ಈ ಜಾತಿಗೆ ಸೇರಬಹುದಾದವುಗಳ ಸ್ವಭಾವವನ್ನು ಸ್ವಲ್ಪಮಟ್ಟಿಗೆ ತಿಳಿಯಬೇಕಾಗಿ ಇರುತ್ತೆ.

ಲೆಪಿಡಪ್ಟೆರಾತರಗತಿಗೆ ಸೇರಿದ ಹುಳುಗಳಲ್ಲಿ ಈ ಭಾಗದವುಗಳೂ ಬಹಳ ದೊಡ್ಡದಾಗಿರುತ್ತದೆ. ಹೆಣ್ಣುಹುಳುಗಳು ತಮ್ಮ ದೇಹದ ಭಾರದಿಂದ ಹಾರಲು ಶಕ್ತಿ ಇಲ್ಲದವುಗಳಾಗಿರತ್ತವೆ. ಇದೂ ಅಲ್ಲದೆ ಇನ್ನೂ ಕೆಲವುಗಳಲ್ಲಿ ಅವುಗಳ ರೆಕ್ಕೆಗಳೂ ಚೆನ್ನಾಗಿ ಬೆಳೆಯದೆ ಇರುವೆದೂ ಉಂಟು. ಇವುಗಳು ರಾತ್ರಿಸಂಚಾರಿಗಳಾದ್ದರಿಂದಲೆ ಇವುಗಳ ರೆಕ್ಕೆ ಮುಂತಾದವುಗಳು ನೋಡಲು ಅನಂದವುಂಟಾಗುವ ವರ್ಣರಹಿತವಾದ ವುಗಳಾಗಿ ಇರುತ್ತವೆ. ಹಿಪ್ಪುನೇರಲೆಸಪ್ಪು ಆಹಾರಿಗಳಾದ ರೇಶಿಮೆಹುಳುಗಳ ರೆಕ್ಕೆಯಲ್ಲಿ ಮಾತ್ರ ಗುಂಡಾಗಿ ಕಣ್ಣಿನಂತೆ ಹೊಳೆಯುವ ಗುರ್ತುಗಳನ್ನು ನೋಡಬಹುದು. ಇವುಗಳ ಆಕಾರದಿಂದ ಇವುಗಳಿಗೆ ಕಿಟಿಕೆಗಳೆಂದು ವಾಡಿಕೆಯಾಗಿ ಹೇಳುತ್ತಾರೆ. ಇವುಗಳಿಂದ ವುಂಟಾಗುವ ಗೂಡುಗಳಿಂದಲೆ ರೇಶಿಮೇ ಉತ್ಪತ್ತಿಯಾಗುವೆದು. ಇದು ಅತ್ಯಂತ ಉಪಯುಕ್ತವಾದ ಅವಲು ರೇಶಿಮೆನುನ್ನು ಉಂಟುಮಾಡುವ ಭಾಗಕ್ಕೆ ಸೇರಿದ (ಬಾಂಬಿಸಿಡಿ) ಎಂಬ ವಂಶವಾಗಿರುತ್ತದೆ.

ರೇಶಿಮೆಯನ್ನು ಮೊವಲು ಅಸಿಯಾಖಂಡದಲ್ಲಿರುವ ಚೀನಾದೇಶದಲ್ಲಿ ವಾಡಿದಂತೆ ತಿಳಿಯಬರುತ್ತೆ. ವಾಡಿಕೆಯಾಗಿ ಯೂರೋಪುದೇಶದಲ್ಲಿನ ರೇಶಿಮೆಯು ಚೈನಾ ಮತ್ತು ಹಿಂದೂದೇಶದಲ್ಲಿನ ರೇಶಿಮೆಯು ಹಿಪ್ಪುನೇರಲೆಯ ಆಹಾರಿಗಳಾದ ಹುಳಗಳಿಂದತೆ ಮುಖ್ಯವಾಗಿ ಉತ್ಪತ್ತಿಯಾಗುವದು. ಅದರೆ ಹಿಂದೂದೇಶದಲ್ಲಿ ಮಾತ್ರ ರೇಶಿಮೆ ಉತ್ಪತ್ತಿಯು ಹುಳಗಳು ಇನ್ನೂ ಅನೇಕವಾಗಿ ಉಂಟು. ಅವುಗಳಲ್ಲಿ ಅತ್ಯಂತ ಮುಖ್ಯವಾದವುಗಳು ಟಸಾ ಮತ್ತು ಏರಂಡೀ ಈ ಜಾತೀಹುಳಿಗಳಾಗಿ ಇರುತ್ತವೆ ಈ ಎರಡು ಜಾತೀಹುಳಿಗಳೂ ಉತ್ತರ ಹಿಂದುಸ್ಥಾನದಲ್ಲಿರುವ ಬಂಗಾಳಾವಾಸಿಗಳಾಗಿ ಇರುವವು.

ಟಸಾಸಿಲ್ಕ್ ಉಂಟಾಗುವ ಹುಳುಗಳು ಅನೇಕ ಗಿಡಗಳ ಎಲೆಗಳನ್ನು ಆಹಾರಮಾಡುವವು. ಇವುಗಳಲ್ಲಿ ಮುಖ್ಯವಾದ ಗಿಡಗಳು ಯ್ಯಾವವೆಂದರೆ—ಕ್ಯಾಸರೀನ

ಯಲಚ್ಚಿ ಸೀತಾಫಲ ಮುಂತಾದ ಗಿಡಗಳ ಯಲೆಗಳು. ಈ ರೀತಿಯಲ್ಲಿ ಉಂಟಾಗುವ ರೇಶಿವೆಯು ಸ್ವಲ್ಪ ಕಪ್ಪುವರ್ಣವುಳ್ಳದ್ದಾಗಿ ಇದ್ದಾಗ್ಯೂ ಬಹಳ ಬಲವಾಗಿಯೂ ಬಹು ಕಾಲ ಬಾಳಿಕೆ ಬರುವದಾಗಿಯೂ ಇರುವದು.

ಏರಂಡಿ ರೇಶಿವೆ ಹುಳಿಗಳು, ಇವುಗಳು ವಾಡಿಕೆಯಾಗಿ ಹರಳು ಎಲೆಗಳ ಆಹಾರಿಗಳು. ಇವುಗಳ ರೇಶಿವೆಬಟ್ಟೆಯು ಬಹಳ ಅಶ್ಲಕವಾಗಿಯೂ ಮತ್ತು ಮೃದು ವಾಗಿಯೂ ಇರುವವು ಈ ತರಹವಾದ ರೇಶಿವೆಯು ಬಹಳ ಬಾಳಿಕೆ ಬರುತ್ತದೆ. ಇದು ಪೊಟಕಾದಕಾರಣ ಮೂಡಲು ಬಹಳ ತೊಂದರೆಯಾಗಿ ಇರುತ್ತದೆ. ಈ ಕಾರಣ ದಿಂದ ಈ ಬಗೆಯಾದ ರೇಶಿವೆಯನ್ನು ಹತ್ತಿಯಲ್ಲಿ ಧಾರವಾಡುವಂತೆ ರಾಟೆಯಿಂದ ಧಾರವಾಡಿ ಇದರಿಂದ ಸುನೂರು ವರಟಾಗಿಯೂ ಮತ್ತು ದೂರದೂರವಾಗಿಯೂ ದ್ವಾರವಿರುವಂತೆ ಬಟ್ಟೆಗಳನ್ನು ನೇಯ್ಯಬಹುದು. ಈ ಬಗೆಯಾದ ರೇಶಿವೆಯು ಬಹಳ ಬಾಳಿಕೆ ವುಂಟಾದ್ದಾಗಿ ಇರುತ್ತದೆ. ಇದರ ಬಣ್ಣವು ಸ್ವಲ್ಪ ಹಳದಿ ವಿಶ್ರವಾದ ಬಿಳುಪುವರ್ಣವಾಗಿ ಇರುತ್ತದೆ. ಇಂಥಾ ರೇಶಿವೆಯಿಂದ ಮಾಡಿದ ಬಟ್ಟೆಯು ಬಹಳ ದಿನಪರ್ಯಂತವಾದಾಗ್ಯೂ ಜೀರ್ಣಸ್ಥಿತಿಗೆ ಬರುವದಿಲ್ಲವೆಂದು ತಿಳಿಯಬರುತ್ತೆ.

ಕಾಪಿಬರೆಯುವ ಕ್ರಮ.

ಉಪಾಧ್ಯಾಯನು ಬಾಲಕರ ಸ್ವಸೋತ್ಪೇಕ್ಷೆಗೆ ಹೇಗೆ ಗಮನಕೊಡುತ್ತಾನೊ ಹಾಗೆಯೇ ಅಕ್ಷರಗಳಿಗೂ ಗಮನಕೊಡಬೇಕು. ಯಾಕಂದರೆ-ಹೇಳಿದವಿಷಯವನ್ನು ತಿಳಿಕೊಳ್ಳಬೇಕಾದರೆ ನಮ್ಮ ಎರಡು ಇಂದ್ರಿಯಗಳು ಕೆಲಸಮಾಡಬೇಕು. (೧) ಕಣ್ಣು (೨) ಕಿವಿ... ಆದರೆ ಕಿವಿಯಿಂದ ಪ್ರತ್ಯಕ್ಷವಿಷಯದ ಜ್ಞಾನವಾಗುವದೆ ಹೊರತು ಪುರಾತನ ವಿಷಯ ಜ್ಞಾನವಾಗುವದಿಲ್ಲ ಅಂಥಾ ಜ್ಞಾನವನ್ನು ಸಂಪಾದಿಸ ಬೇಕಾದರೆ ಪೂರ್ವೀಕರು ಬರೆದಿಟ್ಟ ಗ್ರಂಥಗಳಿಂದ ತುಂಬಾ ಸಹಾಯವಾಗುತ್ತೆಂಬುದು ಜನವಿದಿತವಾಗಿದೆ ನಾವುಗಳು ಹೀಗೆ ಪೂರ್ವೀಕರ ಚರಿತ್ರೆಯನ್ನು ಮತ್ತು ಇತರ ಅಪೂರ್ವವಿಷಯಗಳನ್ನು ಲಿಪಿಯಸಹಾಯದಿಂದ ತಿಳಿದುಕೊಳ್ಳುತ್ತೇವೊ ಹಾಗೆಯೆ ಮುಂದೆ ಹುಟ್ಟುವವರಿಗೂ ನಮ್ಮಗಳ ಕಾತ್ಪರ್ಯವೂ, ಈಗಿನ ವಸ್ತುಸ್ಥಿತಿಗಳೂ

ತಿಳಿಯಬೇಕಾದದ್ದು ಯುಕ್ತವಾಗಿರುವದು. ಇಂತಹ ಜ್ಞಾನಸಂಪಾದನೆಗೆ ಲಿಪಿ ಜ್ಞಾನವೇ ಮುಖ್ಯವು ಆದುದರಿಂದ ಉಪಾಧ್ಯಾಯನು ಬರವಣಿಗೆ ವಿಷಯದಲ್ಲಿ ಅಲಸವೆ ಗಮನಕೊಡಬೇಕು ಬಾಲಕರ ಅಕ್ಷರಗಳನ್ನು ಗಮನದಿಂದ ತಿದ್ದುವದಕ್ಕೆ ಪಾಠಶಾಲೆಯೇ ಜನ್ಮಸ್ಥಾನವು. ಆದರೆ ಕೆಲವು ಉಪಾಧ್ಯಾಯರು ಹಲಿಗೆಯಲ್ಲಿ ಕೆಲವು ವಾಕ್ಯಗಳನ್ನು ಬರೆದು ಅವುಗಳನ್ನು ಕಾಪೀಮಾಡುವಂತೆ ಹೇಳಿ, ಬಾಲಕರು ಬರೆದ ನಂತರ ಕಲ್ಲು ಹಲಿಗೆಯನ್ನು ನೋಡುತ್ತಾ ಪೂರ್ತಿಯಾಗಿ ಬರೆದಿರುವೆಯೊ ನಿನಗೆ ೯ ನೆಂಬರ್, ನಿನಗೆ ೫ ನಂಬರ್ ಎಂದು ಹೇಳುತ್ತಾ ಕೂತಲ್ಲಿಯೇ ಕೂತು ಹೇಳುವರೇ ಹೊರ್ತು ಅಕ್ಷರಗಳಿಗೆ ಗಮನಕೊಡುವದಿಲ್ಲ ಅಲ್ಲದೆ ಉಕ್ತಲೇಖನ ಕಾಲದಲ್ಲಿಯೂ ಕೆಲವು ವಾಕ್ಯಗಳನ್ನು ಬರಸಿ, ಬರದಿದ್ದರಲ್ಲಿ ಇಷ್ಟು ತಪ್ಪು, ಇಷ್ಟುನಂ ಎರ್ ಎಂದು ಹೇಳುವರೆ ಹೊರ್ತು ಅಕ್ಷರಗಳನ್ನು ನೋಡುವದಿಲ್ಲ, ಮತ್ತು ಕಾಗದದಲ್ಲಿ ಬರಸಬೇಕಾದರೂ ಮನೆಯಿಂದ ಬರೆದು ತನ್ನಿ ಎಂದು ಹೇಳುವರು. ಈ ರೀತಿ ಬಾಲಕರ ಬರವಣಿಗೆಯಲ್ಲಿ ಉದಾಸೀನತೆಯನ್ನು ತೋರಿಸಿದರೆ ಬಾಲಕರಿಗೆ ಲಿಪಿಜ್ಞಾನವಾಗುವದು ಹೇಗೆ? ತಮ್ಮ ತಾತ್ಪರ್ಯವನ್ನು ಬರವಣಿಗೆಯ ಮೂಲಕ ಇತರರಿಗೆ ತೋರ್ಪಡಿಸುವದು ಹೇಗೆ, ಆದರೆ ಸರಕಾರದವರ ಉದ್ದೇಶವಾದರೊ ಬಾಲಕರು ಬರವಣಿಗೆಯಲ್ಲಿ ಕುಶಲರಾಗಬೇಕೆಂಬುದೇ ಆಗಿರುವದು. ಇದಕ್ಕೋಸ್ಕರವೇ ಪಾಠಕ್ರಮದಪಟ್ಟಿಯಲ್ಲಿ ಬರವಣಿಗೆ, ಉಕ್ತಲೇಖನ, ಕಾಗದ ಕಾಪಿ ಇವೇ ಮೊದಲಾದ ಪಾಠಗಳನ್ನಿಟ್ಟಿರುವರು. ಈ ಪಾಠಗಳಲ್ಲಿಯೂ ಉಪಾಧ್ಯಾಯನು ಜೆನ್ನಾಗಿ ಗಮನಕೊಡಬೇಕಾದ್ದು ಯುಕ್ತವು. ಆದ್ದರಿಂದ ಬಾಲಕರು ಬರೆಯುವ ಕಾಲದಲ್ಲಿ ಗೋಡೆಕಡೆಯು ಮುಖವಾಡಿ ಕೂತಿರಬೇಕೆಂದು ಲಂಕಾಸ್ಟರ್ ಎಂಬ ಶಿಕ್ಷಕನು ಹೇಳುವನು. ಈತನ ತಾತ್ಪರ್ಯವಾದರೊ, ಉಪಾಧ್ಯಾಯನು ಬಾಲಕರ ಹಿಂಭಾಗದಲ್ಲಿ ನಿಂತರೆ ಬರವಣಿಗೆ ಕ್ರಮವನ್ನು ಶೋಧಿಸುವದಕ್ಕೆ ಅನುಕೂಲವಾಗುವದು ಎಂದು ಇರಬಹುದಲ್ಲವೆ? ಉಪಾಧ್ಯಾಯನು ಬಾಲಕರ ಬರವಣಿಗೆಯನ್ನು ತಿದ್ದುವ ಉದ್ದೇಶ್ಯವು ಅಕ್ಷರಗಳು ತಪ್ಪಿಲ್ಲದಿರಬೇಕು ಸ್ಪಷ್ಟವಾಗಿರಬೇಕು. ಸುಂದರವಾಗಿರಬೇಕು ಎಂಬುವುದೇ ಆಗಿರುವದು, ಅದ್ದರಿಂದಲೇ ಎಲ್ಲಾ ಅಕ್ಷರಗಳನ್ನು ಒಂದೇತವರ್ತಿ ತಿದ್ದುವದು ಅಸಾಧ್ಯವೆಂದರಿತು ಕಲ್ಲುಹಲಿಗೆಯಲ್ಲಿಯಾಗಲಿ ಮೇಲೆ ಒಂದು ಪಂಗ್ತಿಯನ್ನು ಜೆನ್ನಾಗಿ ಬರದು ಅದನ್ನು ನೋಡಿಕೊಂಡು ಬರೆಯುವಂತೆ ಹೇಳುವದು ವಾಡಿಕೆಯಾಗಿದೆ ಹೀಗೆ ಹೇಳುವದು ಮೇಲುಪದ್ಧತಿಯಲ್ಲ ಇದಂ

ಅಕ್ಷರಗಳಿರುವವು. ಆ ಅಕ್ಷರಗಳನ್ನೆ ಪದೇಪದೆ ಬರಿಯುವದರಿಂದ ಅಕ್ಷರವು ತಿದ್ದಿ ಸುಂದರವಾಗುವದು ಎಂಬುದೇ. ಆದರೆ ಕೆಲವು ಅಕ್ಷರ ದೋಷಗಳಿವೆ ಆದೋಷಗಳು ಬರವಣಿಗೆಯಲ್ಲಿ ಬಾರದಂತೆ ಜಾಗರೂಕನಾಗಿರಬೇಕು. ಆ ದೋಷಗಳಾವವೆಂದರೆ— ಅಕ್ಷರಗಳ ಪರಳರೇಖೆಗಳು ಅಸಮಾನಾಂತರವಾಗಿರುವದು. ಉ Y

ಅಂಚುಗಳು ಛಿದ್ರವಾಗಿರುವದು. ಉ. ದ ಅಸಮಾನಗಾತ್ರವು, ಉ ರಾವು ಅಕ್ಷರಗಳನ್ನು ತಿರುಗಿಸುವಾಗ ಬಹಳ ಕವ್ಮಿಯಾಗಿಯೂ ಹೆಚ್ಚಾಗಿಯೂ ತಿರುಗಿಸುವದು ಉ. ರ ಅಕ್ಷರಗಳು ದಪ್ಪನಾಗಿಯೂ ಕೃಶವಾಗಿಯೂ ಇರುವದು ಉ. ಹರಿ ಇವೇ ಮುಂತಾದ ದೋಷಗಳಿಗೆ ಉಪಾಧ್ಯಾಯನು ಗಮನಕೊಡಬೇಕು. ಅಲ್ಲದೆ ಬಾಲಕರು ಬರಿಯುವಾಗ ಅಕ್ಷರಗಳನ್ನು ವಿರಳವಾಗಿಯೂ ಸಮಾನಾಂತರವಾಗಿಯೂ ಉಕಾರ ಸೇರಿಸುವಾಗ ಅಕ್ಷರದ ಮಧ್ಯಡಲ್ಲಿ ಸೇರಿಸುವರಾಗಿಯೂ ಬರೆಯುತ್ತಾರೊ ಇಲ್ಲವೊ ಎಂಬುದನ್ನು ಸಹ ನೋಡುತ್ತಿರಬೇಕು. ಮತ್ತು ಉಪಾಧ್ಯಾಯನು ಬಾಲಕರು ಕೂತಿರುವದನ್ನೂ ಪೇನವನ್ನು ಹಿಡಿದಿರುವದನ್ನೂ ಕಾಗದದಲ್ಲಿ ಬರೆಯುವ ಕ್ರಮವನ್ನು ತಿಳಿಸಿಕೊಡುವದಲ್ಲದೆ ಬಾಲಕರು ಬರಿಯುತ್ತಿರುವಾಗ ಅವರ ಹತ್ತರಕ್ಕೆ ಹೋಗಿ ಕ್ಷರಗಳ ತಪ್ಪನ್ನು ತಿದ್ದುವದು. ಒಂದೇವಿಧ ತಪ್ಪನ್ನು ಅನೇಕರು ಮಾಡಿದ್ದಲ್ಲಿ ಆ ಪ್ಪನ್ನು ಹಲಿಗೆಯಲ್ಲಿ ಬರೆದು ಅದರ ಪಕ್ಕದಲ್ಲಿ ಶುದ್ಧವಾದ ಅಕ್ಷರವನ್ನು ಬರೆದು ತೋಸಬೇಕು. ಹೀಂಗೆ ಉಪಾಧ್ಯಾಯನು ಬಾಲಕರು ಬರೆದ ಯಾವತ್ತು ಅಕ್ಷರಗಳಿಗೂ ಮನಕೊಡುವದು ಉತ್ತಮವಾಂಗಿದೆ. ಅಲ್ಲದೆ ಬಾಲಕರಲ್ಲಿ ಬರವಣಿಗೆ ಕಾಲದಲ್ಲಿ ಉತ್ಸಾಹವು ಬರೆಯುವಾಗ ಜಾಗರೂಕತೆಯೂ ಇತರರಿಗಿಂತ ಚೆನ್ನಾಗಿ ಬರಿಯಬೇಕೆಂಬ ಲವಲವಿಕೆಯು, ಚೆನ್ನಾಗಿರುವ ಅಕ್ಷರಗಳಲ್ಲಿ ಸಂತೋಷವು, ಹೀಗೆ ಬರೆಯುವದರಿಂದ ಅನೇಕ ಪ್ರಯೋಜನ ಉಂಟೆಂಬ ಮನೋಭಾವನ್ನು, ಅಕ್ಷರಬರಿಯುವದರಲ್ಲಿ ಚಟವಟಿಕೆಯು, ಅಕ್ಷರಗಳನ್ನು ಜಾಗ್ರತೆಯೂಗಿ ಬರೆಯುವ ಗುಣವೂ ಈ ಫಲಗಳು ನೆಲೆಗೊಳ್ಳುವಂತೆ ಉಪಾಧ್ಯಾಯನು ಪ್ರಯತ್ನಪಡಬೇಕು. ಈ ಗುಣಗಳೆಲ್ಲವೂ ಬಾಲಕರಲ್ಲಿ ನೆಲೆಗೊಂಡವೆಂದರೆ ಬರವಣಿಗೆ ವಿಷಯದಲ್ಲಿ ಬಾಲಕರಿಗೆ ಕೌಶಲ್ಯವುಂಟಾಯಿತೆಂದು ಹೇಳಲು ಸಂಶಯವಿಲ್ಲ. ಆದರೆ ಬಾಲಕರ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಕಿಂಡರ್‌ಗಾರ್ಟ್ನ್ ವಸ್ತುಪಾಠ ಇವುಗಳ ಸಹಾಯದಿಂದ ಅನೇಕ ಆಕೃತಿಜ್ಞಾನವು ರೇಖಾದಿಗಳ ಜ್ಞಾನವೂ ಉಂಟಾಗಿರುವದರಿಂದ ಅಕ್ಷರಗಳ ಆಕೃತಿಜ್ಞಾನವುಂಟಾಗುವದು ಸುಲಭವಾಗು

ವದು. ಆವರೆ ಉಪಾಧ್ಯಾಯನು, ಮಕ್ಕಳು ಪ ಠಶಾಲೆಗೆ ಬಂದೊಡನೆ ಅ ಎಂಬ ಅಕ್ಷರವನ್ನು ಹಾಕಿ ತಿದ್ದುತಿದ್ದು ಎನ್ನದೆ ಸರಿಯಾದ ದಾರಿಯನ್ನು ತೋರಿಸಿ ಬೋಧಿಸಿದಲ್ಲಿ ಮುಂದಿನ ಬರವಣಿಗೆಗೆ ಅನುಕೂಲವಾಗುವದು. ಅಂದರೆ ಮೊದಲು ಅಕ್ಷರವನ್ನು ಭಾಗಿಸಿ, ಬೋಧಿಸಿ ರೇಖಾಜ್ಞಾನವನ್ನುಂಟುಮಾಡಿ, ಅಕ್ಷರಯೋಜನವನ್ನು ಅಕ್ಷರದ ಹೆಸರನ್ನು ಹೇಳಿಕೊಡುವದು ಉತ್ತಮವಾಗಿದೆ. ಈ ಅಕ್ಷರವಿಭಾಗವನ್ನು ಕುರಿತು ಮುಲ್ಹಾಸರ್ ಎಂಬ ಶಿಕ್ಷಕನು ಅಭಿಪ್ರಾಯಪಟ್ಟಿರುವದೇನಂದರೆ—ಅಕ್ಷರಗಳು ಸಾಮಾನ್ಯವಾಗಿ ನಾಲ್ಕುವಿಧ ರೇಖೆಗಳಿಂದ ಉಂಟಾಗಿರುವವು. ಆ ರೇಖೆಗಳು ಯಾವವೆಂದರೆ—ಸರಳ, ಉ, — , ವಕ್ರ, ಉ, (, ಕುಣಿಕೆ, ಉ, ೪. ಕೊಂಡಿ, ಉ, ೩. ಈರೀತಿಯಾದ ರೇಖೆಗಳಿಂದ ಅಕ್ಷರಗಳು ಹುಟ್ಟಿರುವವು. ಈ ಕ್ರಮವನ್ನು ಅನುಸರಿಸುವದು ಉತ್ತಮವೆಂದು ವಾದಿಸುವನು. ಈ ವಿಧವಾದ ರೇಖಾಜ್ಞಾನಪುರಸ್ಸರವಾಗಿ ಮಕ್ಕಳಿಗೆ ಅಕ್ಷರಗಳನ್ನು ಬೋಧಿಸಿದಲ್ಲಿ ಸರಿಯಾದ ಜ್ಞಾನವುಂಟಾಗಿ ಮುಂದೆ ಬರವಣಿಗೆಯಲ್ಲಿ ವಿಶ್ವಾಸವೂ ಅಕ್ಷರಗಳು ಸಲಕ್ಷಣವಾಗಿರಬೇಕೆಂಬ ಆಸೆಯು ಉಂಟಾಗದೆ ಇರದು, ಆದ್ದರಿಂದ ಶಿಕ್ಕಶಿಕ್ಕಿದ ಕಾಗದದಲ್ಲಿ ಅಕ್ಷರಗಳನ್ನು ಬರೆಸದೆ ದಪ್ಪನಾಗಿಯೂ ಸ್ವಲ್ಪವರಟಾಗಿಯೂ ಇರುವ ಕಾಗದದಲ್ಲಿ ಬರೆಯಿಸಿ ಅಂಥಾ ಪುಸ್ತಕವನ್ನು ಜೋಪಾನವಾಗಿಟ್ಟಲ್ಲಿ ಕೆಲವು ಕಾಲದಮೇಲೆ ಬರೆದ ವಿದ್ಯಾರ್ಥಿಯು ನೋಡಿದರೆ ಆಗಿನ ಬರವಣಿಗೆಗೂ ಈಗಿನಬರವಣಿಗೆಗೂ ತಾರತಮ್ಯವನ್ನು ಯೋಚಿಸದೆ ಇರನು. ಮತ್ತು ಅಂಥಾ ವಿದ್ಯಾರ್ಥಿಗೆ ಬರವಣಿಗೆಯುಲ್ಲಿ ನನಗೆ ಎಷ್ಟೊ ಜ್ಞಾನವುಂಟಾಯಿತೆಂಬ ಸಂತೋಷವೂ ಹುಟ್ಟದೆ ಇರದು !

ಕೆ. ಸುಬ್ರಹ್ಮಣ್ಯಶಾಸ್ತ್ರಿ,
ಅಸಿಸ್ಟೆಂಟ್‌ಮಾಸ್ಟರ್,
ಗೌರ್ನಮೆಂಟ್ ಗರ್ಲ್ಸ್‌ಸ್ಕೂಲ್.
ಶಿವಮೊಗ್ಗ.



ಮೊಸಳೆ.

ನಿವಾಸಸ್ಥಾನ.

ಮೊಸಳೆಯು ಏಷ್ಯಾಖಂಡವ ದಕ್ಷಿಣಸಾಮ್ಯಗಳ, ಆಸ್ಟ್ರೇಲಿಯಾದ್ವೀಪದ ಉತ್ತರಪ್ರದೇಶಗಳ, ಆಫ್ರಿಕಾ ಮತ್ತು ಅಮೆರಿಕಾಖಂಡಗಳ ನದಿಗಳಲ್ಲಿ ಹೇರಳವಾಗಿರುವದು. ಇದು ಈ ಪ್ರದೇಶಗಳ ಉಷ್ಣಭಾಗಗಳಲ್ಲಿನ ನದಿಗಳಲ್ಲಿಮಾತ್ರ ಸಿಕ್ಕುವದು. ಯೂರೋಪ್ ಖಂಡದಲ್ಲಿ ಇದು ಇರುವದೇ ಇಲ್ಲ. ಇಂಡಿಯಾದೇಶದ ನದಿಗಳಲ್ಲಿ ಮೂರುಬಗೆಯವು ಇರುವವು. ಇದು ಮೈಸೂರು ನದಿಗಳಲ್ಲಿಯೂ ಸಿಕ್ಕುವುಂಟು.

ವರ್ಣನೆ.

ಮೊಸಳೆಗಳಲ್ಲಿ ನೈಲ್, ಅಮೆಜಾನ್, ಮಿಸಿಸಿಪಿ, ಮತ್ತು ಗಂಗಾನದಿಗಳಲ್ಲಿರುವವು ಬಹಳ ಪ್ರಸಿದ್ಧವಾದವು. ಮೊಸಳೆಯ ದೇಹವು, ಮುಸುಡು ಮತ್ತು ಬಾಲವು ಉದ್ದವಾಗಿದೆ. ದೇಹದಮೇಲೆಲ್ಲಾ ಪೊರೆಗಳಂತಿರುವ ಮೂಳೆಯ ಫಲಕಗಳಿರುವವು. ಇವು ಕೆಲವಕ್ಕೆ ಒರಟಾಗಿಯೂ ಮತ್ತೆ ಕೆಲವಕ್ಕೆ ಗಂಟು ಗಂಟಾಗಿಯೂ ಇವೆ. ಗಾತ್ರವೂ, ಬಲವೂ ಬಹಳ ಹೆಚ್ಚು. ಬಲವಾಗಿರುವ ನಾಲ್ಕು ಕಾಲುಗಳಿರುವವು. ಮುಂಗಾಲಿನಲ್ಲಿ ನಾಲ್ಕು ಮತ್ತು ಹಿಂಗಾಲಿನಲ್ಲಿ ಸ್ಪಷ್ಟವಾಗಿಕಾಣುವ ಐದು ಬೆರಳು

ಗಳಿವೆ ಬೆರಳುಗಳ ಮಧ್ಯೆ ಪರೆಇರುವದು. ಪ್ರತಿಕಾಲಿನಲ್ಲಿಯೂ ಮಧ್ಯದ ಮೂರು ಬೆರಳುಗಳಲ್ಲಿ ಮಾತ್ರ ಉಗುರುಗಳಿವೆ ಬಲವಾದ ದವಡೆಯು ಉದ್ದನಾಗಿಯೂ, ದುಂಡಾಗಿಯೂ ಕೃಶವಾಗಿಯೂ ಇವೆ. ಒಂದೇಪ್ರಮಾಣದ ಮೊನೆಯೂದ ಶಂಕುವಿನ ಆಕೃತಿವುಳ್ಳ ಅನೇಕ ಹಲ್ಲುಗಳಿರುವವು ಕೆಲವರದರ ಕೆಳಗಣ ಕೋರೆಹಲ್ಲುಗಳು ಉದು ರಿದ ಹಾಗೆಲ್ಲ ಹೊಸವು ಒಳಗಡೆಯಿಂದ ಬೆಳೆದುಕೊಂಡು ಬರುವವು. ನಾಲಿಗೆಯು ದೊಡ್ಡದಾಗಿಯೂ ಮೂಕಿಸುಯುಕ್ತವಾದುದಾಗಿಯೂ ಇದೆ. ಬಾಯಿಯನ್ನು ಬಹಳ ವಾಗಿ ಹಿಗ್ಗಲಿಸಿ ತೆರೆಯಬಲ್ಲದು. ಮೂಗಿನಹೊಳ್ಳೆಗಳು ತಲೆಯಬುರುಡೆಯ ಕೊನೆ ಯಲ್ಲಿವೆ. ಗಂಟಲಿನ ಹಿಂಭಾಗದಲ್ಲಿ ಹೊರಮುಖನಾಗಿ ಮೂತ್ರ ತೆರೆಯುವದಕ್ಕಾಗುವ ಮುಚ್ಚಳಗಳಿರುವವು ಕಿವಿಯಲ್ಲಿಯೂ ಇದೇರೀತಿಯೂದ ಮುಚ್ಚಳವಿದೆ. ದೊಡ್ಡ ವಾದ ಕಣ್ಣುಗಳು ತಲೆಯ ಹಿಂಭಾಗದಲ್ಲಿರುವವು. ಗಂಟಲಿನ ಕೆಳಭಾಗದಲ್ಲಿ ಅತ್ಯಂತ ವಾಸನೆಯುಳ್ಳ ದ್ರವದಿಂದ ತುಂಬಿರುವ ಎರಡು ಗ್ರಂಥಿಗಳುಂಟು. ಕುತ್ತಿಗೆಯ ಮೂಳೆಗಳಿಗೆ ಅಡ್ಡನಮೂಳೆಗಳಿರುವದರಿಂದ ತಲೆಯನ್ನು ಪಾರ್ಶ್ವಕ್ಕೆ ತಿರುಗಿಸಲಾರವು. ಗಂಡಿನಮೂಗು ಹೆಣ್ಣಿನಮೂಕ್ಕಿಂತ ದಪ್ಪ. ಇದರ ಬಣ್ಣ ಕರೇಚುಕ್ಕೆಗಳಿಂದ ಕೂಡಿದ ಹಸಿರು ವಿಶ್ರವಾದ ಕಂದು. ಬಾಲವನ್ನು ಚೆನ್ನಾಗಿ ಅಲ್ಲಾಡಿಸಬಲ್ಲವು. ಮೊಸಳೆ ಗಳು ಇಪ್ಪತ್ತೈದಡಿಗಳ ಉದ್ದವಿರುತವೆ. ಗಂಗಾನದಿಯಲ್ಲಿರುವ ಮೊಸಳೆಗೆ ನೂರು ಹಲ್ಲುಗಳಿರುವವು. ಇವುಗಳಿಗೆ ಮುಸುಡಿನ ಮುಂಭಾಗದಲ್ಲಿನ ಗಂಟಿನಲ್ಲಿ ಮೂಗಿನ ಹೊಳ್ಳೆಗಳಿವೆ.

ಗುಣ, ಸ್ವಭಾವ, ಆಹಾರ.

ಮೊಸಳೆಯು ಅತಿಕ್ರೂರಸ್ವಭಾವವುಳ್ಳದ್ದು. ಪಳಗಿಸುವದಕ್ಕೆ ಸಾಧ್ಯವೆಲ್ಲ. ಮಾಂಸಾಹಾರಿ; ಇವರ ಹೊಟ್ಟೆಬಾಕತನವು ಅಸಾಧ್ಯವಾದದ್ದು. ನಾಲಿಗೆಯನ್ನು ಚಾಚಲಾರದು. ನೆಲದಮೇಲೆ ನಡೆಯುವದು ವಿಕಾರವಾಗಿಯೂ ನೀರಿನಲ್ಲಿ ಬಹಳ ಅಂದವಾಗಿಯೂ ಜಾಗ್ರತೆಯಾಗಿಯೂ ಈಜಬಲ್ಲದು ಇದು ನೀರಿನಲ್ಲಿರುವ ವಿಷನು ಗಳನ್ನು ತಿನ್ನುವದಲ್ಲದೆ ದಾಹಶಾಂತಿಗಾಗಿ ಬರುವ ಮನುಷ್ಯ, ದನಕರ ಮುಂತಾದ ಪ್ರಾಣಿಗಳಿಗೆ ಕಾದಿದ್ದು, ಅವು ನೀರಿನೊಳಕ್ಕೆ ಕಾಲಿಡುತಲೆ, ಬಲವಾದ ತನ್ನ ದವಡೆ ಯಿಂದ ಹಿಡಿದು ನೀರಿನೊಳಗೆ ಸೆಳೆದು ಸಾಯುವವರೆಗೂ ತಲೆಯನ್ನು ಮೇಲಕ್ಕೆತ್ತ ದಂತೆ ಅವಚಿಕೊಂಡು ಅವಕೆ, ಪ್ರಾಣಹೋಗುತಲೆ ಅವನ್ನು ತಿಂದುಬಿಡುವವು ಮೂ

ಗಿನ ಹೊಳ್ಳೆಗಳನ್ನು ಮಾತ್ರ ಮೇಲೆಬಿಟ್ಟುಕೊಂಡು ಮರದ ಕೊರಡುಗಳಂತೆ ನೀರಿನಲ್ಲಿ ಈಜುತಿರುವವು. ಪ್ರಾಣಿಗಳನ್ನು ಬಾಲದಿಂದ ಹೊಡೆದು ನೀರಿನೊಳಕ್ಕೆ ಕೆಡಹಿ ತಿನ್ನುವದೂ ಉಂಟು. ನೀರಿಲ್ಲದಿದ್ದರೆ ಬದಿಯಲ್ಲಿರುವದಕ್ಕಪೇಕ್ಷಿಸುವದು. ಮೊಸಳೆಯು ಮೊಟ್ಟೆಗಳು ಅದರ ಗಾತ್ರಕ್ಕೆ ಬಹಳ ಚಿಕ್ಕವು ದೊಡ್ಡದಕ್ಕಿಂತ ಮರಿಗೆರೋಷ ಹೆಚ್ಚು. ಮೊಸಳೆಯನ್ನು ಜಾಗ್ರತೆಯೂಗಿ ಕೊಲ್ಲುವದಕ್ಕಾಗುವದಿಲ್ಲ ಇದರ ಮೊಟ್ಟೆಗಳನ್ನು ಅನೇಕ ಪ್ರಾಣಿಗಳು ತಿಂದುಬಿಡುವದರಿಂದ ಈ ದುಷ್ಟಮೃಗಗಳ ಸಂಖ್ಯೆಯು ಹೆಚ್ಚಾಗದಂತಿರುವದು.

ಸ್ವಭಾವಕ್ಕೆ ತಕ್ಕ ಶರೀರರಚನೆ.

ಅಗಲವಾದ ಬಾಯಿಯೂ ಕ್ರೂರವಾದ ಹಲ್ಲುಗಳೂ ಬಲವಾದ ಬಾಲವೂ ಎಷ್ಟು ಬಲವುಳ್ಳ ಪ್ರಾಣಿಯನ್ನಾದರೂ ಕೊಲ್ಲುವದಕ್ಕೆ ತಕ್ಕಂತಿವೆ. ಪರೆಗಳಿಂದ ಕೂಡಿದ ಬಲವಾದ ಬೆರಳುಗಳುಳ್ಳ ಕಾಲುಗಳು ಈಜುವದಕ್ಕೆ ಅನುಕೂಲವಾಗಿವೆ. ಇದರ ಬಾಲವೂ ಈಜುವದಕ್ಕೆ ಸಹಕಾರಿಯಾಗಿದೆ ಮೂಗಿನ ಹೊಳ್ಳೆಗಳು ಎತ್ತರವಾದ ಸ್ಥಳದಲ್ಲಿರುವದರಿಂದ ಆ ಭಾಗವನ್ನು ಮಾತ್ರ ಹೊರಗೆ ಬಿಟ್ಟುಕೊಂಡು ನೀರಿನಲ್ಲಿ ಹೊಂಚುಹಾಕುತಿರುವದಕ್ಕೆ ಕೇವಲ ಅನುಕೂಲವಾಗಿವೆ ಕಿವಿಗಳಲ್ಲಿರುವ ಮುಚ್ಚಳಗಳು ನೀರು ಕಿವಿಯೊಳಗೆ ಪ್ರವೇಶಿಸದಂತೆ ಕಾಪಾಡುವವು. ನೀರೊಳಗೆ ಪ್ರಾಣಿಗಳನ್ನು ಹಲ್ಲುಗಳಿಂದ ಕಚ್ಚಿಕೊಂಡು ಅಪ್ಪುಕುತಿರುವಾಗ ಬಾಯೊಳಗಿಂದ ಜಠರಕ್ಕೆ ನೀರು ನುಗ್ಗದಂತೆ ಗಂಟಲಿನ ಮುಚ್ಚಳವು ತಡೆಯುವದು. ಗಂಟಲಿನ ಗ್ರಂಥಿಗಳಲ್ಲಿರುವ ದುರ್ಗಂಧವು ಇದರ ಮಾಂಸವನ್ನು ವಿತ್ಯಾವ ಪ್ರಾಣಿಯೂ ಮುಟ್ಟದಂತೆಮಾಡುವದು.

ಹಿಡಿಯುವಕ್ರಮ.

ಅತ್ಯಂತ ಬಲಶಾಲಿಯೂದ ಈ ಕ್ರೂರಮೃಗವನ್ನು ಹಿಡಿಯುವದು ಬಹಳ ಶ್ರಮವಾದರೂ ಇದರ ಹಾವಳಿಯನ್ನು ತಡೆಯುಲಾರದೆ ಬಲವಾದ ಬಲೆಗಳಲ್ಲಿ ಮಾಂಸದ ಗಾಣವನ್ನಿಟ್ಟು ಇದನ್ನು ಹಿಡಿಯುವರು. ಇದಲ್ಲದೆ ಗುಂಡಿನಿಂದಲೂ ಭರ್ಜಿಯಿಂದಲೂ ಕೊಲ್ಲುವದುಂಟು ಮರಿಗಳಿರುವ ಸ್ಥಳದಲ್ಲಿ ಒಂದು ಉದ್ದವಾದ ಕೋಲನ್ನಿಟ್ಟು ಚುಚ್ಚಿದರೆ ರೋಷದಿಳ್ಳ ಇವು ಅದನ್ನು ಭದ್ರವಾಗಿ ತಮ್ಮ ಹಲ್ಲುಗಳಿಂದ ಕಚ್ಚಿಕೊಳ್ಳುವವು. ಆಗ ಕೋಲನ್ನು ಹೊರಕ್ಕೆಳದುಕೊಂಡು ಹಿಡಿಯುವರು ಅಫ್ರಿಕಾಖಂಡದ ಕಾಡುಜನರು ನೀರಿನಲ್ಲಿ ನುಗ್ಗಿ ಹರಿತವಾಗಿಯೂ ಉದ್ದವಾಗಿಯೂ ಇರು

ವ ಚೂರಿಗಳಿಂದ ಇದರ ಹೊಟ್ಟೆಯನ್ನು ಬಗಿದು ಇದನ್ನು ಕೊಲ್ಲುವರು. ಹೀಗೆ ಮಾಡುವದಕ್ಕೆ ಬಹಳ ಧೈರ್ಯವೂ ಚಟುವಟಿಕೆಯೂ ಇರಬೇಕು.

ಉಪಯೋಗ.

ಮೊಸಳೆಯನ್ನು ಸಾಕುವದಕ್ಕೆ ಯಾರೂ ಅಪೇಕ್ಷಿಸುವದಿಲ್ಲ. ಕತ್ತಿಗಳಿಂ ಭೇದಿಸುಶಕ್ಯವಾದ ಕವಚಗಳನ್ನು ಇದರ ಚರ್ಮದ ಫಲಕಗಳಿಂದ ಮಾಡುವರು ಕಾಡುಜನರು ಇದರ ಹಲ್ಲುಗಳನ್ನು ರಕ್ಷೆಗಳಂತೆ ಉಪಯೋಗಿಸುತ್ತಾರೆ.

ಪಿಪ್ಪಣಿ.

V ತರಗತಿ] ಅಂಕಗಣಿತ—ಮೊದರಿಲೆಕ್ಕ [50 ನಿಮಿಷಕಾಲ

ವಿಷಯ	ಬೋಧನಕ್ರಮ
I ಮುಖ್ಯವಿಷಯಕ್ಕೆ ಸಹಾಯಭೂತವಾದ ಕೆಲವು ಅಂಶಗಳು—	ಮೊದಲು ಸುಲಭವಾದ ಕೆಲವು ಬಾಯಿಲೆಕ್ಕಗಳನ್ನು ಕೇಳಿ ಅನಂತರದಲ್ಲಿ ಈ ಅಂಶವು ತಿಳಿಯದಿದ್ದರೆ ಹಲಗೆಯ ಸಹಾಯದಿಂದ ತಿಳಿಸುವುದು.
1. ಒಂದು ರೈಲು ಒಂದು ತಂತಿಕಂಭವನ್ನು ತಟಾಯಿಸುವುದೆಂದರೆ ಎಂಜಿನಿನ ಮುಂಭಾಗವು ಕಂಭಕ್ಕೆ ಸರಿಯಾಗಿ ಒಂದು ಹಿಂದಿನ ಗಾಡಿಯ ಹಿಂಭಾಗವು ಕಂಭಕ್ಕೆ ಸರಿಯಾಗಿ ಬರುವವರೆಗೆ	
∴ ರೈಲು ಒಂದು ತಂತಿಕಂಭವನ್ನು ತಟಾಯಿಸುವುದಕ್ಕೆ ಬೇಕಾದ ಕಾಲ = ಆ ರೈಲಿನ ಉದ್ದದಷ್ಟು ದೂರ ರೈಲು ಹೋಗುವುದಕ್ಕೆ ಬೇಕಾದ ಕಾಲ	ಇದನ್ನು ಪ್ರಶ್ನೆಮಾಡಿ ಹುಡುಗರಿಂದ ಹೇಳಿಸಬೇಕು. ಅನುಭವ ಬರುವುದಕ್ಕಾಗಿ ಕೆಲವು ಬಾಯಿ ಲೆಕ್ಕಗಳನ್ನು ಕೊಡಬೇಕು
2 ಕಂಭಕ್ಕೆ ಬದಲಾಗಿ ಒಂದು ಸ್ಟೇಷನ್ನನು ತಟಾಯಿಸಬೇಕಾದರೆ ಎಂಜಿನ್ನಿನಮುಂಭಾಗವು ಸ್ಟೇಷನ್ನಿನ ಮೊದಲು ಭಾಗಕ್ಕೆ ಸರಿಯಾಗಿ ಒಂದು ಹಿಂದಿನ ಗಾಡಿಯ ಹಿಂಭಾಗವು ಸ್ಟೇಷನ್ನಿನ ಮುಂದಿನ ಭಾಗಕ್ಕೆ ಸರಿಯಾಗಿ ಬರುವವರೆಗೆ	ಇದನ್ನು ಹಲಗೆಯಮೇಲೆ ಆಕೃತಿಗಳನ್ನು ಬರೆದು ಹುಡುಗರಿಂದಲೆ ಹೇಳಿಸಬೇಕು.

∴ ಇದಕ್ಕೆ ಬೇಕಾದ ಕಾಲ =
$\frac{\text{ರೈಲಿನ ಉದ್ದ} + \text{ಸ್ಟೇಷನ್ನಿನ ಉದ್ದ}}{\text{ರೈಲಿನವೇಗ}}$

ಇದನ್ನು ಪ್ರಶ್ನೆಮಾಡಿ ಹುಡುಗರಿಂದಲೇ ಹೇಳಿಸಿ ಅನುಭವ ಬರುವುದಕ್ಕೆ ಬಾಯಿಲೆಕ್ಕ ಗಳನ್ನು ಕೊಡಬೇಕು.

೨. ಸ್ಟೇಷನ್ನಿಗೆ ಬದಲಾಗಿ ಅದೇ ದಿಕ್ಕಿಗೆ ುಗ್ಗಲಕ್ಕಿರುವ ಕಂಬಿಯಮೇಲೆ ಹೋಗು ುರುವ ಮತ್ತೊಂದು ರೈಲನ್ನು ತಟಾಯ ೀಕಾದರೆ ಆಗುವಕಾಲ.

ಪ್ರಶ್ನೆಮಾಡಿ ಇದನ್ನೂ ಹುಡುಗರಿಂದಲೆ ಹೇಳಿಸಬೇಕು ಹಲಗೆಯ ಮೇಲೆ ಬರೆಯ ಬೇಕು.

= $\frac{\text{ಎರಡು ರೈಲುಗಳ ಉದ್ದ}}{\text{ರಡುರೈಲುಗಳವೇಗಕ್ಕೂ ಇರುವವ್ಯತ್ಯಾಸ}}$

ಪುನರಾವರ್ತನೆಮಾಡಬೇಕು.

II ಮಾದರಿಲೆಕ್ಕ

ಂದೇದಿಕ್ಕಿಗೆ ಹೋಗುತ್ತಿರುವ ರೈಲುಗಳ ಡರಲ್ಲಿ ಒಂದರ ಉದ್ದವು 224 ಅಡಿ, ಇ ನ್ನೊಂದರದು 183 ಅಡಿ, ಒಂದರವೇಗ ಘಂ ೆಗೆ 16ಮೈಲಿ, ಇನ್ನೊಂದರದು ಘಂಟೆಗೆ 1ಮೈಲಿ. ಅವುಗಳಲ್ಲೊಂದು ಇನ್ನೊಂ ನ್ನು ತಟಾಯುಬೇಕಾದರೆ ಕಾಲವೆಷ್ಟಾಗು ುದು ?

ಇದನ್ನು ಬರೆಸಿ ಒಬ್ಬಬ್ಬರಿಂದ ಓದಿಸು ವುದು. ಲೆಕ್ಕದಲ್ಲಿರುವ ಅಂಶಗಳ ವಿಷ ಯವಾಗಿ ಪ್ರಶ್ನೆಮಾಡುವುದು.

ರಡು ರೈಲುಗಳ ಉದ್ದ = 224 + 183
= 407 ಅಡಿ.

ರಡು ರೈಲುಗಳ ವೇಗದವ್ಯತ್ಯಾಸ 5ಮೈಲಿ

ಈ ಅಂಶಗಳನ್ನು ಪ್ರಶ್ನೆಮಾಡಿ ಹೇಳಿಸು ತ್ತ ಹಲಗೆಯ-ಮೇಲೆ ಬರೆಯ-ಬೇಕು.

ತಟಾಯುವುದಕ್ಕೆ ಬೇಕಾದ ಕಾಲ

$\frac{407 \text{ ಅಡಿ}}{5 \text{ ಮೈಲಿ}}$ ಘಂಟೆ $= \frac{407 \text{ಅಡಿ}}{5 \times 5280 \text{ ಅಡಿ}}$

$\frac{407}{5 \times 5280} \times 60 \times 60$ ಸೆಕೆಂಡುಗಳು

$\frac{111}{2} = 55\frac{1}{2}$ ಸೆಕೆಂಡಗಳು.

ಪುನರಾವರ್ತನೆಮಾಡಿ ಹುಡುಗರು ಹಲ ಗೆಯ ಮೇಲಿರುವುದನ್ನು ಬರೆದುಕೊಳ್ಳುವಂತೆ ಹೇಳುವುದು ಇನ್ನೊಂದು ಇಂಥ ಲೆಕ್ಕ ವನ್ನು ಕೊಟ್ಟು ಅವರಿಂದಲೆ ಮಾಡಿಸುವುದು.

ಮೈಸೂರು ಗೌ॥ ನಾರ್ಮಲ್‌ಸ್ಕೂಲ್.

ಕನ್ನಡಭಾಷೆ—ಕಾಲ ೩ ಘಂಟೆ.

೧ ಮತ್ತು ೨ನೇ ಭಾಗಗಳನ್ನು ಪ್ರತ್ಯೇಕವಾಗಿ ಬರೆಯಬೇಕು.

೧ನೇ ಭಾಗ.

1 a ಈ ಕೆಳಗಿನ ಪದ್ಯಗಳ ಅರ್ಥವನ್ನು ವಾಕ್ಯರೂಪದಲ್ಲಿ ಬರೆಯಿರಿ.

ಅಗಣಿತಮಹಿಮೊಡಾರನೆ । ಜಗದುದ್ಧಾರನೆಸಕಲವಿದನೆಯೆನುತ್ತಂ ॥ ಬಗೆಬಗೆಯೊಳ್ಭ
ಗವಂತನ । ಸುಗುಣವನೊಲವಿಂದೆನೆನೆದುಪ್ಪೊಗಳೆಲಿಕುವರಾ ॥

b ಕಾಪುರುಷೊಚಿತಮೆನಿಸುವ । ಕೊಪವನುಳಿಯಲ್ಕೆವೇಳ್ಕುಮದನಾಂತಿರೆದು॥
ವ್ಯಾಪಾರದೊಳುಜ್ಜುಗಿಸುತೆ । ಪಾಪಕ್ಕೀಡಾಗಿಕೆಟ್ಟುಪೋಪರ್‌ಜಗದೊಳ್ ॥

c ಈ ಪದ್ಯಕ್ಕೆ ಅನ್ವಯಕ್ರಮವನ್ನಾಗಿ ಪದಶಃ ಅರ್ಥವನ್ನು ಬರೆಯಿರಿ.

ನಡೆತಂದುಪಾಠಶಾಲೆಗೆ । ಪೊತವಮಡುಗುರುವಿಂಗೆಭಕ್ತಿಯುತನಾಗುತ್ತಂ ॥ ಪಡೆದವ
ವಾಣಿತಿಯುಂನಿನ್ನಡೆಯೊಳಿಕುಳ್ಳಿರ್ದುತೊಡಗುಪಾಠಮನೋದಲ್ ॥

2 a .....ನಿಜ । ಭವನಕೆ..... ॥
ತವಕದೆ.....ಭಕ್ತಿಯೆಂ । ಳವನತ..... ॥

b ಸೂರ್ಯಾಸ್ತಮಯಕ್ಕೆ ಮನೆಗೆಬಂದು ಮಡಿಯುಟ್ಟು ದೇವರಧ್ಯಾನವನ್ನು
ಮಾಡು ಎಂಬ ಅರ್ಥವನ್ನು ಹೇಳುವ ಪದ್ಯವನ್ನು ಬರೆಯಿರಿ.

3 a ಈ ಪದಗಳ ಅನ್ವಯವಾರ್ಥವನ್ನು ಬರೆಯಿರಿ. ನತವರದೆ, ದಿನಮಣಿ, ಅವಿರಳಭಕ್ತಿಯಂ, ಶರಣಾಗತಪರಿಪಾಲನೆ, ತಚ್ಚರಣಾಬ್ಜಕ್ಕೆ, ಪರಿಪೂತವಸ್ತ್ರದಿಂ, ನಿತ್ಯಕರ್ಮವಂ

b ಈ ಪದಗಳ ಅರ್ಥವನ್ನು ಬರೆಯಿರಿ ಮತ್ತು ಅವುಗಳಲ್ಲಿರುವ ತದ್ಭವಗಳಿಗೆ ತತ್ಸಮ ಪದಗಳನ್ನು ಬರೆಯಿರಿ ಸಾಲೆ, ಭಾಸಿಪ್ಪ, ಬಮವಿಗೆ, ತಣುವಂ, ಕುವರಂ, ಬೆದಕುತೆ, ಹೆಚ್ಚದಿಂ, ಬೇಹ.

4 a ಈ ಸಮಾಸ ಪದಗಳಿಗೆ ವಿಗ್ರಹ ವಾಕ್ಯಗಳನ್ನು ಬರೆದು ಸಮಾಸದ ಹೆಸರನ್ನು ಹೇಳಿ. ಶಾಪಪ್ರಯುಕ್ತಾನ್ವಿತೆ ಮಹಿಶೂರಪುರಂ, ವಿಭುದೊದ್ಧಾಮರ, ಕೋಮಲ ಸಾಹಿತ್ಯಂ, ಕೈವಟ್ಟೆ, ಕೈಕಾಲ್, ನೇಹಂಬಳೆಯಿಸು, ಮಯೋರಸುಂ.

b ಈ ಪದಗಳಲ್ಲಿರುವ ಸಂಧಿಯ ಹೆಸರನ್ನು ಮತ್ತು ಕಾರ್ಯಗಳನ್ನು ಹೇಳಿ.

ದಯಾನ್ವಿತೆ, ಪುರೇಂದ್ರ, ಮನೀಷೀಂದ್ರ, ಶ್ರೀಮಚ್ಚಾಮೇಂದ್ರ, ಮೂಡಣದೆ ಸೆಯೊಳ್, ಪಾಸಿನತ್ತಣಿಂ, ನಿನೇಳ್ವೆ.

4 a ಬಿಳ್ಳಿ, ಕಬ್ಬಿಣ, ಚಿನ್ನ ಈ ಲೋಹಗಳಲ್ಲಿ ಯಾವದಾರೂ ಒಂದನ್ನುಕುರಿತು 10 ಪಂಜ್ತಿಗಳಿಗೆ ಕಡಮೆಯಿಲ್ಲದೆ ಬರೆಯಿರಿ.

b ತೆಂಗು, ಮಾವು, ಅಡಿಕೆ, ಇವುಗಳಲ್ಲಿ ಯಾವದಾದರೂ ಒಂದನ್ನು ಕುರಿತು ೧೦ ಪಜ್ತಿಗಳಿಗೆ ಕಡಮೆಯಿಲ್ಲದೆ ಬರೆಯಿರಿ.

೨ನೇ ಭಾಗ.

6 a ಸಂಸ್ಕೃತದವರ್ಣಮಾಲೆಗೂ, ಅಚ್ಚಗನ್ನಡದವರ್ಣಮಾಲೆಗೂ ವ್ಯತ್ಯಾಸವೇನು?

b ಸಂಧಿಯುಂಟೇನು? ಕನ್ನಡದಲ್ಲಿ ಸಂಧಿ ಎಷ್ಟೆಷ್ಟು ವಿಧವೋ ಬರೆದು ಉದಾಹರಿಸಿ.

c ವಿದ್ಯಾಭ್ಯಾಸ, ಪ್ರಾಣೇಶ, ಹುರಾಜ್ಞೆ, ಸಜ್ಜನ, ಭಗವನ್ನಾಮ, ಇಲ್ಲಿ ಯಾವ ಸಂಧಿ, ಬಿಡಿಸಿ ಬರೆಯಿರಿ.

7 a ನಾಮಪ್ರಕೃತಿ, ಲಿಂಗ, ಇವುಗಳ ಭೇದಗಳೆಲ್ಲವನ್ನು ಬರೆದು ಒಂದೊಂದನ್ನು ಉದಾಹರಿಸಿ.

b ಕಿರಿದು (ನಪುಂಸಕಬಹುವಚನಂ), ಹೊಸದು (ಪುಲ್ಲಿಂಗವಿಕವಚನಂ), ಹಳೆದು, (ಸ್ತ್ರೀಲಿಂಗೈಕವಚನ)

c ನಿತ್ಯಬಹುವಚನಾಂತಕ್ಕೂ, ಮೂರುಲಿಂಗದಲ್ಲಿ ಒಂದೇರೂಪಕ್ಕೂ, ಸ್ತ್ರೀಲಿಂಗವಾದರೂ ಪುಲ್ಲಿಂಗದಂತಿರುವ ಪದಕ್ಕೂ ಒಂದೊಂದನ್ನು ಉದಾಹರಿಸಿರಿ.

8 a ಚತುರ್ಥಿವಿಭಕ್ತಿಯಾವದು? ಅದಕ್ಕೆ ಎಲ್ಲೆಲ್ಲಿ ಯಾವಯಾವಕಾರ್ಯ ಬರುವದು? ಉದಾಹರಿಸಿ.

b ಅವನಕೈಯಿಂದ ಮರಕ್ಕೆಹಾನಿ, ಈ ವಚನಗಳಿಗೆ ವ್ಯಾಕರಣವಿಷಯವನ್ನು ಬರೆಯುವದು.

ವ್ಯಾಸಂಗವಿಧಾನ.

೧. ಕ್ರಮವಾಗಿ ಅಭ್ಯಾಸಮಾಡು.

ಅನೇಕ ವಿದ್ಯಾರ್ಥಿಗಳು ತಮ್ಮ ಪರೀಕ್ಷೆಯ ವ್ಯಾಸಂಗಕ್ಕೆ ಕ್ಲುಪ್ತವಾ
ಕಾಲದ ಆದಿಭಾಗದಲ್ಲಿ ಅಲಸರಾಗಿದ್ದು ಅಂತ್ಯಭಾಗದಲ್ಲಿ ತಮ್ಮ ವ್ಯಾಸಂಗವನ್ನು ಸ
ಪಡಿಸಿಕೊಳ್ಳಲು ವಿಶೇಷಂಕ್ಲೇಶಪಡುತ್ತಾರೆ. ಇದು ಬಹಳ ಅನುಚಿತವಾದುದು. ಮ
ಲ, ೫ ದಿನಗಳಲ್ಲಿ ೧೦೦ ಮೈಲುಗಳ ದೂರದಲ್ಲಿರುವ ಒಂದು ಸ್ಥಳಕ್ಕೆ ಹೋಗಬೇಕ
ದವನು ದಿನಂಪ್ರತಿ ೨೦ ಮೈಲುಗಳು ನಡೆದರೆ ಕ್ಲುಪ್ತಕಾಲದಲ್ಲಿ ವಿಶೇಷಾಯಾಸವಿಲ್ಲ
ಪ್ರಯಾಣವನ್ನು ಮುಗಿಸುವನು ಹೀಗೆಮಾಡದೆ, ೩ ದಿನಗಳವರೆಗೂ ವ್ಯರ್ಥಕಾ
ಕ್ಷೇಪವಂಮಾಡಿ ಕೊನೆಯ ಎರಡು ದಿನಗಳಲ್ಲಿ, ೫೦—೫೦ ಮೈಲುಗಳನ್ನು ನಡೆಯುಲ
ಯತ್ನಿಸಿದರೆ ಸಾಧ್ಯವಿಲ್ಲ ಅವನ ಪ್ರಯತ್ನವು ಸಫಲವಾಗದು ; ಆದರೂ ಅನಾರೋ
ಗ್ಯಹೇತುವಾಗುವುದು. ಬಲಾತ್ಕಾರವಿಲ್ಲದೆ ವ್ಯಾಸಂಗಮಾಡದವನು ತನ್ನ ಕಾರ್ಯ
ಸಿದ್ಧಿಗೆ ಪ್ರತಿಕೂಲವಾದ ದಾರಿಯನ್ನು ಹಿಡಿದಿರುವನೆಂದು ತಿಳಿಯಬೇಕು. ಪರೀ
ಯು ಅತ್ಯಂತ ಸವಿಾಪಿಸಿದಾಗ ವಿ ತಿವಿಾರಿದ ವ್ಯಾಸಂಗದಿಂದ ಅಭ್ಯಾಸದ ನ್ಯೂನ
ಯನ್ನು ಪರಿಹರಿಸುವದು ಅಸಾಧ್ಯ. ಇದಲ್ಲದೆ, ಯಾವನ ಮನಸ್ಸಿಗೂ ಶರೀರಕ್ಕೂ
ಅತಿ ಕ್ಲೇಶದಿಂದ ಬೇಜಾರುಂಟಾಗಿರುತ್ತದೋ ಅವನು ಪರೀಕ್ಷೆಯಲ್ಲಿ ಸದುತ್ತರಗ
ನ್ನುಕೊಡಲು ಸಮರ್ಥನಾಗಿರುವದಿಲ್ಲ.

ಈ ಪ್ರಕರಣದಲ್ಲಿ ಒಂದೆರಡು ಉಪನಿಬಂಧನೆಗಳನ್ನು ಹೇಳುವೆ, ಅದೆಂತೆನಿ

(ಅ) ವ್ಯಾಸಂಗದ ಗಂಟೆಗಳನ್ನು ಗೊತ್ತುಮಾಡಿಕೊ.

ದೊಡ್ಡದೊಡ್ಡ ಶಾಲೆಗಳಲ್ಲಿ ಕ್ರಮವಾಗಿ ಅನುಸರಿಸಲ್ಪಡುವ ಕಾಲನಿಬ
ಧನ ಪತ್ರಿಕೆಗಳಿರುತ್ತವೆ ಕಾಲ ಕ್ಲುಪ್ತಿಯಿಲ್ಲದ ಅಭ್ಯಾಸವು ಗಲಿಬಿಲಿಗೂ ವ್ಯರ್ಥ
ಕಾಲಯಾಪನೆಗೂ ಕಾರಣವಾಗುವದು. ವಿದ್ಯಾರ್ಥಿಗಳು ಮನೆಯಲ್ಲಿ ಮಾಡತಕ
ವ್ಯಾಸಂಗಕ್ಕೂ ಇದೇಮಾರ್ಗವನ್ನನುಸರಿಸಬೇಕು. ಮೊದಲು ಭಾಷಾಗ್ರಂಥವನ್ನೊ
ದಲು ಉಪಕ್ರಮಿಸಿ ಈಗ ಇಷ್ಟೇಡ ; ಗಣಿತವನ್ನು ನೋಡೋಣವೆಂದು ಅಂದುಕೊ
ಡು ಅನಿಲೆ ಯಾವದನ್ನು ಓದಬೇಕೆಂದು ಯೋಚಿಸುವವನು ಬಹುಕಾಲವನ್ನು
ವ್ಯರ್ಥಾ ಕಳೆದು, ಕ್ರಮನಿಲ್ಲದ ಪದ್ಧತಿಯನ್ನನುಸರಿಸುವನು. ನಾವು ಗೊತ್ತಾ

ಕೆಲವುಕಾಲಗಳಲ್ಲಿ ಭೋಜನ ಮಾಡಿದರೆ ಆಹಾರವು ಚೆನ್ನಾಗಿ ಜೀರ್ಣಿಸುತ್ತದೆ; ಹೀಗೆಯೇ ಮನಸ್ಸಿನ ವ್ಯಾಪಾರವು ಒಂದೊಂದು ವಿಷಯವನ್ನು ಗೊತ್ತಾದ ಒಂದೊಂದು ಕಾಲದಲ್ಲಿ ನೋಡುವದರಿಂದ ಸರಿಯಾಗಿ ನಡೆಯುತ್ತದೆ ಶ್ಲೋ "ಜಲಬಿಂದುನಿಪಾತೇನ ಕ್ರಮಶಃಪೂರ್ಯತೇಘಟಃ। ಹೇತುಃಕಣಶಶ್ಚೈವ ವಿದ್ಯಾಮರ್ಥಂಚಸಾಧಯೇತ್"॥ ಎಂಬೀ ಶ್ಲೋಕಾರ್ಥವನ್ನು ವಿದ್ಯಾರ್ಥಿಗಳು ಚೆನ್ನಾಗಿ ತಿಳಿದಿರಬೇಕು.

(೨) ಉತ್ತಮವಾದ ಕಾಲದಲ್ಲಿ ಕಠಿಣವಾದ ವಿಷಯವನ್ನು ಓದು.

ಮನಸ್ಸು ಸಾಮಾನ್ಯವಾಗಿ ನಿದ್ರೆಯಿಂದ ವಿಶ್ರಾಂತಿಯನ್ನು ಹೊಂದಿದನಂತರ ಪ್ರಾತಃಕಾಲದಲ್ಲಿ ವಿಷಯಗ್ರಹಣಸಾಮರ್ಥ್ಯವುಳ್ಳದ್ದಾಗಿರುತ್ತದೆ. ಆದುದರಿಂದ ವಿಶೇಷ ಬುದ್ಧಿಕ್ಲೇಶವನ್ನುಂಟುಮಾಡುವ ವಿಷಯಗಳನ್ನು ಆಕಾಲದಲ್ಲಿ ಅಭ್ಯಾಸ ಮಾಡಬೇಕು. ಭೋಜನವಾದಕೂಡಲೆ ಅಥವಾ ಮಲಗಿಕೊಳ್ಳುವದಕ್ಕೆ ಸ್ವಲ್ಪಮುಂಚೆ ಕ್ಲೇಶಾವಹವಾದ ವ್ಯಾಸಂಗವು ಹಿತಕರವಲ್ಲ. ಇದಕ್ಕನುಸಾರವಾಗಿ ವಿಷಯಗಳಿಗೆ ಕಾಲವನ್ನು ಗೊತ್ತುಮಾಡಬೇಕು.

(೩) ಸಂಪೂರ್ಣವಾದ ವಿಶ್ರಾಂತಿಗೆ ಬದಲಾಗಿ ವಿಷಯಭೇದದಿಂದ ಮನಸ್ಸಿನ ಬೇಜಾರನ್ನು ಪರಿಹರಿಸಿಕೊ.

ಸಾಮಾನ್ಯವಾಗಿ ಕೆಲವು ಯಾವನಸ್ಥರಾದ ವಿದ್ಯಾರ್ಥಿಗಳು ಒಂದೇವಿಷಯವನ್ನು ೩—೪ ಗಂಟೆಗಳವರೆಗೂ, ಓದುತ್ತಿದ್ದು ಬೇಜಾರಾಗಿ, ತರುವಾಯ ತಾವು ಓದಿದಷ್ಟು ಕಾಲವನ್ನು ಸುಮ್ಮನೆ ಕಳೆಯುತ್ತಾರೆ ಹೀಗೆ ಬಹುಕಾಲ ವ್ಯರ್ಥವಾಗಿ ಹೋಗುತ್ತದೆ. ಯಾವದಾದರೂ ಒಂದು ವಿಷಯವನ್ನು ಪಟ್ಟಾಗಿ ಒಂದೆರಡು ಗಂಟೆಗಳವರೆವಿಗೂ ನೋಡಿ, ಬೇರೇಸ್ವಭಾವವುಳ್ಳ ಮತ್ತೊಂದು ವಿಷಯವನ್ನು ನೋಡಬೇಕು. ಮೊದಲು, ಭಾಷಾಗ್ರಂಥಗಳನ್ನು ನೋಡಿದನಂತರ ಗಣಿತವನ್ನು ಹಿಡಿಯಬಹುದು. ಹೀಗೆಮಾಡುವದರ ಪ್ರಯೋಜನವು ಮನಸ್ಸಿಗೆ ಆಗಲೇ ತೋರುವದು. ಆದರೆ ಅತಿ ಸ್ವಲ್ಪಕಾಲದಲ್ಲಿ ಅನೇಕ ವಿಷಯಗಳನ್ನು ಬದಲಾಯಿಸುವದು ಸರಿಯಲ್ಲ.

೨ ಜ್ಞಾನಪೂರ್ವಕವಾಗಿ ಅಭ್ಯಾಸಮಾಡಬೇಕು :—

ಅರ್ಥವನ್ನು ತಿಳಿದುಕೊಳ್ಳದೆ ಸುಮ್ಮನೆ ಕಂಠಪಾಠಮಾಡುವದು ವಿದ್ಯಾದೇಶೀಯರಲ್ಲಿ ಕೆಲವರ ವ್ಯಾಸಂಗಕ್ರಮದ ದೊಡ್ಡದೋಷಗಳಲ್ಲೊಂದಾಗಿದೆ. ಆಂಗ್ಲೇಯ ಸಾಲೆಗಳಲ್ಲಿಯೂ, ಕೆಲವು ವಿದ್ಯಾರ್ಥಿಗಳಲ್ಲಿ ಈ ದೋಷವುಂಟು.

ಅರ್ಥಕ್ಕೆ ಲಕ್ಷ್ಯಕೊಡದೆ ಶಬ್ದಗಳನ್ನು ಮನಸ್ಸಿನಲ್ಲಿ ಸ್ಥಿರಗೊಳಿಸಲು, ಪುನಃಪುನಃ ಉಚ್ಚರಿಸುತ್ತಾರೆ ಕೆಲವರು ದೀರ್ಘಾಗಣಿತವನ್ನೂ, ಈ ರೀತಿಯಲ್ಲಿ ಕಲಿಯಲು ಯತ್ನಿಸುತ್ತಾರೆ. ಇಂತಹ ಪ್ರಯತ್ನಗಳೆಲ್ಲಾ ನಿಷ್ಫಲವಾದವುಗಳೇ ಒಂದು ವಿಷಯವನ್ನು ಓದುವಾಗ ಪ್ರತಿಯೊಂದು ವಾಕ್ಯದ ತಾತ್ಪರ್ಯವನ್ನು ಸಂಗತಿಗಳ ಪರಂಪರೆಯನ್ನೂ ಸ್ಪಷ್ಟವಾಗಿ ತಿಳಿದುಕೊಳ್ಳುತ್ತಾ ಹೋಗಬೇಕು. ಹೀಗೆ ಮಾಡುವದರಿಂದ ಶಬ್ದಗಳನ್ನು ಸುಲಭತರವಾಗಿ ಜ್ಞಾಪಕದಲ್ಲಿಟ್ಟುಕೊಳ್ಳಬಹುದು. ವಿದ್ಯಾರ್ಥಿಯು ಓದಿದ ಸಂಗತಿಯನ್ನು ತನ್ನ ಸ್ವಂತಮಾತುಗಳಿಂದ ತಿಳಿಸಬಲ್ಲರೆ ಮತ್ತೂ ಉತ್ತಮ. ಈ ರೀತಿಯಲ್ಲಿ ವಿಷಯಗಳು ಕ್ಷಿಪ್ರವಾಗಿ ಹೃದ್ಗತವಾಗುವವಲ್ಲದೆ ಚಿರಕಾಲ ಮನಸ್ಸಿನಲ್ಲಿ ನಿಲ್ಲುವವು.

೩. ಅವಧಾನವನ್ನು ಕಲಿಯಬೇಕು.

ನೋಣಗಳ ಗೊಮ್ಮೆಂಬ ಶಬ್ದದಂಥಾ ಅಲ್ಪಶಬ್ದ ಮುಂತಾದುದರಿಂದ ಕೆಲವು ವಿದ್ಯಾರ್ಥಿಗಳ ಮನಸ್ಸು ವಿಷಯಾಂತರಕ್ಕೆ ಹೋಗುವುದು. ಕೆಲವುವೇಳೆ ಯಾವ ಬಾಹ್ಯಪ್ರೇರಣೆ ಇಲ್ಲದಿದ್ದರೂ ಯಾವನಿಷ್ಠರಾದ ವಿದ್ಯಾರ್ಥಿಗಳ ಆಲೋಚನೆಗಳು ಬೇರೆ ಸ್ಥಳಗಳಿಗೆ ಓಡುವವು. ಹೀಗೆ ಬಹಳಕಾಲ ಕೆಲಸಜರಗದೇನೇ ಹೋಗುವುದು ಮನಸ್ಸನ್ನು ಸ್ವಾಧೀನಪಡಿಸಿಕೊಂಡು ಅಭ್ಯಸನೀಯವಾದ ವಿಷಯದಲ್ಲಿಯೇ ಲಗ್ನವಾಗುವಂತೆ ಮಾಡಬೇಕು. ಆಲೋಚನೆಗಳು ವಿಷಯವನ್ನು ಬಿಟ್ಟು ಹೋದಾಗೆಲ್ಲ ಅವುಗಳನ್ನು ಹಿಂದೆಳೆಯಬೇಕು. [ಸಶೇಷ.]

ವ್ಯಾಕರಣವಿಚಾರ.

ಆಗಾಗ್ಯೆ ಹೊಸಗನ್ನಡ ಹಳೆಗನ್ನಡ ವ್ಯಾಕರಣಗಳು ಅನೇಕ ವಿದ್ವಾಂಸರುಗಳಿಂದ ನಿರ್ಮಿತಗಳಾಗುತ್ತಿರುವದೂ ಆ ವ್ಯಾಕರಣಗಳಲ್ಲಿ ಕೆಲವುಮಂದಿ ಪಂಡಿತರು ತಪ್ಪುಗಳನ್ನಾರೋಪಿಸುತ್ತಿರುವದೂ ಸಹ ಸಮಸ್ತರಿಗೂ ತಿಳಿಯುವದಷ್ಟೆ; ಅವದೇಶದಲ್ಲಿ ಬಳಸಲ್ಪಡುತ್ತಿರುವ ಕನ್ನಡವು ಹೊಸಗನ್ನಡವೋ, ಅವಕಾಲದಿಂದೀಚೆಗೆ ಮತ್ತು ಆಚೆಗೆ ಆಡುವ ಭಾಷೆಗೆ ಹೊಸಗನ್ನಡ ಹಳೆಗನ್ನಡವೆಂಬ ಹೆಸರುಂಟಾಗಿದೆಯೊ ತಿಳಿಯದೆ ಈ ಭಾಷೆಗೆ ದೇಶಕಾಲ ಪರಿಮಾಣಗಳು ಅನ್ವೇಷಣೀಯವಾಗಿದೆ. ಹೀಗೆಂದು ತಮ್ಮಿಂದ ಆಕ್ಷೇಪಿಸಲ್ಪಟ್ಟಿದೆಯಷ್ಟೆ; ವ್ಯಾಕರಣಗಳು ಪ್ರಾಯಶಃ ಪ್ರತಿಯೊಂದು ಭಾಷೆಯಲ್ಲಿಯೂ ಅನೇಕಗಳಿವೆ ಅವುಗಳಲ್ಲಿ ಕೆಲವು ವಿದ್ವಾಂಸರು

ಗಳು ತಪ್ಪುಗಳನ್ನಾರೋಪಿಸುವದೂ ಸಹಾ ಎಲ್ಲದರಲ್ಲಿಯೂ ಉಂಟು. ಎಲ್ಲಾ ಅಕ್ಷರಗಳ ಸ್ಫುಟೋಚ್ಚಾರಣೆಗಳು, ಮತ್ತು ಪ್ರಯೋಗಗಳು, ಸಂಸ್ಕೃತಭಾಷೆಯಲ್ಲಿ ಮಾತ್ರ ಇರುವದ್ದರಿಂದ, ಎಲ್ಲಾ ಭಾಷೆಗಳಿಗೂ ಸಂಸ್ಕೃತವೇ ಮಾತೃಭಾಷೆಯೆಂದು ತಾನೆ ಹೇಳಬೇಕಾಯಿತು. ಅಂಥಾ ಸಂಸ್ಕೃತಭಾಷೆಯಲ್ಲಿಯೂ ನವವ್ಯಾಕರಣಗಳೆಂಬ ಪ್ರತೀತಿಯನ್ನು ಕೇಳಿದ್ದೀರಷ್ಟೆ. ಅವುಗಳಲ್ಲಿಯೂ ಕೆಲಕೆಲವು ಶಬ್ದಗಳ ಸಾಧುತೆಯು ಒಂದೊಂದರಲ್ಲಿ ಒಂದೊಂದು ವಿಧವಾಗಿ ಹೇಳಿರುವರು. ಅವುಗಳಲ್ಲಿ ಕೆಲವುಗಳನ್ನು ಇಲ್ಲಿ ದೃಷ್ಟಾಂತವಾಗಿ ಹೇಳುತ್ತೇನೆ. ಪಾಣಿನಿಮತರೀತ್ಯಾ ತುಲ್ಯಾಸ್ಯಪ್ರಯತ್ನಂಸವರ್ಣಂ । ಎಂಬ ಸವರ್ಣವಿಧಾಯಕಸೂತ್ರದಿಂದ ಋ,ಲೃ ವರ್ಣಗಳಿಗೆ ಪರಸ್ಪರ ಸಾವರ್ಣ್ಯವಿಲ್ಲವು. ವರರುಚಿರೀತ್ಯಾ (ಋಲೃವರ್ಣಯೋರ್ಮಿಥಸ್ಸಾವರ್ಣ್ಯಂವಾಚ್ಯಂ) ಎಂಬದರಿಂದ ಅನ್ಯೋನ್ಯಸಾವರ್ಣ್ಯವುಂಟು. ಇಂದ್ರಃ ಇಲ್ಲಿ (ತ್ರಿಸ್ರಭೃತಿಮಃಶಾಕಟಾಯನಸ್ಯ) ಇದರಿಂದ ಶಾಕಟಾಯನಮತರೀತ್ಯಾ ನ್ ಕ್ಕೆ ದ್ವಿತ್ವವಾಗುತ್ತದೆ. ಇತರ ವೈಯಾಕರಣರ ಮತದಲ್ಲಿ ದ್ವಿತ್ವವಿಲ್ಲವು. ಹರೆ + ಏಹಿ ಇಲ್ಲಿ ಸಂಧಿಮಾಡಿದರೆ ಪಾಣಿನಿಮತದಲ್ಲಿ ಹರಯೇಹಿಯೆಂತಲೂ, ಶಾಕಲ್ಯಮತದಲ್ಲಿ ಲೋಪಶಾಕಲ್ಯಸ್ಯ ಎಂಬದರಿಂದ ಹರಏಹಿ ಎಂತಲೂ ರೂಪವಾಗುವದು. ಹೀಗೆ ಅನೇಕಗಳಿರುವದರಿಂದ ಇವುಗಳಲ್ಲಿ ಯಾವಮತವನ್ನವಲಂಬಿಸಬೇಕು? ಆದ್ದರಿಂದ ದೇಶಕಾಲಭೇದಗಳಿಂದ ಭಾಷಾಭೇದಗಳೂ ಉಂಟಾಗುವುವೆಂದು ಊಹಿಸಬೇಕಾಗುತ್ತದೆಯಲ್ಲವೆ? ಹಾಗೆಯೆ ದೇಶಕಾಲಭೇದದಿಂದ ಕನ್ನಡದಲ್ಲಿಯೂ ಭಾಷಾಭೇದವುಂಟಾಗಿದೆಯುಂದು ಊಹಿಸೋಣ, ಆದ್ದರಿಂದಲೆ ಆಯಾಕಾಲದ ಭಾಷೆಗನುಸಾರವಾಗಿ ಅನೇಕ ವ್ಯಾಕರಣಗಳು ನಿರ್ಮಿತವಾಗಿರುವದೂ, ಆಯಾ ವ್ಯಾಕರಣಗಳಲ್ಲಿ ಕೆಲವು ಪಂಡಿತರು ತಪ್ಪುಗಳನ್ನಾರೋಪಿಸುತ್ತಿರುವದೂ ಸಹಜವೆ. ಸಂಸ್ಕೃತದಲ್ಲಿ ಉಭಯಶಬ್ದಕ್ಕೆ ದ್ವಿವಚನವಿಲ್ಲವೆಂದು ಕೈಯಟನು ಇದೆಯೆಂದು ಹರದತ್ತನು. ಕನ್ನಡದಲ್ಲಿರುವದು ಆಶ್ಚರ್ಯವಲ್ಲವು. ಅವರವರ ಬುದ್ಧಿ ಇದ್ದಂತೆ ಬೆಳಿಸುವರು. ಕರ್ಣಾಟಕದೇಶದಲ್ಲಿ ಬಳಸುವ ಭಾಷೆಯೆ ಕನ್ನಡವು. ಅದರಲ್ಲಿಯೂ ಈಗ ಸುಮಾರು ಸಾವಿರಾರುವರ್ಷಗಳ ಕೆಳಗೆ ಬಳಸುತ್ತಿದ್ದದ್ದು ಹಳೆಗನ್ನಡವು ಈಗ ಸುಮಾರು ೨೦೦—೩೦೦ ವರ್ಷಗಳಿಂದೀಚಿಗೆ ಬಳಸುವ ಭಾಷೆಗೆ ಹೊಸಗನ್ನಡವೆಂದು ಹೇಳಬಹುದು. ಯಾಕಂದರೆ—ಈಚಿಗೆ ಅನೇಕದೇಶದವರು ಬಂದು ಈ ಕರ್ಣಾಟಕದೇಶದಲ್ಲಿ ನೆಲೆಗೊಂಡಿದ್ದರಿಂದ ಅನೇಕ ಭಾಷೆಗಳು ಈ ಕನ್ನಡಭಾಷೆಗೆ ವಿಶೇಷ

ದವು. ಮತ್ತು ಕೆಲವು ಪರದೇಶೀಯುರಿಗೆ ಸ್ಪಷ್ಟವಾಗಿ ಉಚ್ಚರಿಸುವದಕ್ಕೆ ಬಾರದೆ ಅನೇಕ ವಿಕಾರಗಳನ್ನು ಹೊಂದಿದವು. ಸಾವಿರಾರುವರ್ಷಗಳ ಕೆಳಗೆ ಶುದ್ಧಕನ್ನಡವನ್ನೆ ಆಡುತ್ತಿದ್ದರೆಂಬುವದು ಶಾಸನಮುಂತಾದವುಗಳಲ್ಲಿರುವ ಒಕ್ಕಣಿಕೆಯಿಂದಲೆ ತಿಳಿಯುವದು. ಪ್ರಾಯಶಃ ಆ ಮಾತುಗಳರ್ಥವು ಕೆಲವರಿಗೆ ಆಗುವದಿಲ್ಲವು. ಈಗ ನಾವುಗಳು ಬಳಸುವದೂ ಕನ್ನಡವೆ, ಅದೂ ಕನ್ನಡವೆ, ಎಕೆ ಅರ್ಥವಾಗುವದಿಲ್ಲವೆಂದರೆ ನಾವುಗಳು ಬಳಸುವ ಮಾತುಗಳು ಪ್ರಾಯಶಃ ಮಿಶ್ರವಳ್ಳವುಗಳಾಗಿಯೂ ವಿಕಾರವುಳ್ಳವುಗಳಾಗಿಯೂ ಇರುವದ್ದರಿಂದ ಆ ಭಾಷೆಯನ್ನು ನೋಡುತ್ತಲೆ ನಮಗೆ ಅರ್ಥವು ಬುದ್ಧಿಸ್ಥವಾಗುವದಿಲ್ಲವು. ಅಂಥಾ ಹಳೆಗನ್ನಡವು ಬೌದ್ಧಮತಾದ್ಯುತ್ಪತ್ತಿಕಾಲದ್ದಾಗಿಯೂ ಹೊಸಗನ್ನಡವು ವರ್ತಮಾನಕಾಲಿಕದ್ದಾಗಿಯೂ ಎಂದು ಹೀಗೆ ಕಾರಣಾಂತರಗಳಿಂದ ಊಹಿಸಬಹುದಾಗಿ ತೋರುತ್ತೆ.

ಪಂಡಿತವಿಧೇಯ

ಕೆ. ಸುಬ್ರಹ್ಮಣ್ಯಶಾಸ್ತ್ರಿ,

ಸೂಕ್ಲಾಸ್ತರ್

ತಾವ್ಹಣಿಗಿ.

ರಾಗ ॥ ॥ ಬೇಡಿರೊ ಬಾಲರೆದುರ್ನಡತೆಗಳೀನುಡಿಯನುಕೇಳ್ದೊಡಾಯ್ದಾಡುವದು ॥ ಇದರ ಹಾಗೆ

ಬಾಲರಕೆಲಸವನೆಲಿದೀಗಕೇಳಿರೊ । ಹಲವನುಯೆಣಿಸದೆನಲವಿಂದಂ ॥ ಪ ॥ ಮಾತಾಪಿತರಿಗೆ ವಂದಿಸಿಬೇಗದಿ । ಖ್ಯಾತರೆಂದೆನಿಪ್ಪದು ನಲವಿಂದಂ ॥ ಮತಿಯುತ ಗುರುಗಳಿಗೊಂದಿಸುತಾರ್ಯರ । ಪ್ರೀತಿಯೊಳಭಿವಂದಿಪ್ಪದೂ ॥೧॥ ಗುರುವಿನ ಮನವನುಮೆಚ್ಚಿಸಿ ಕಲಿವ್ವದು । ಪರಿಪರಿವಿದ್ಯೆಯುತೀವ್ರದಲಿ ॥ ಪರಿಚರ್ಯದಿಸಂಭಾವನೆಗೈವುದು । ಸೈರಣೆಗೂಡಿದಮಾತಿನಲೀ ॥೨॥ ಗುರುವೇದೈವವ್ರಬಾಲಗೆ ನಿಜಗುರುವೇ ಪರಗತಿಸಾಧಕನೂ ॥ ಗುರುತಾಕಮಲಜನರಹರಿಮಿತ್ರವ । ಗುರುವೇತಂದೆಯು ಮತ್ತೇನೂ ॥೩॥ ವಿದ್ಯೆಯೆಕರಣವು ವಿದ್ಯೆಯೆಗೌರವ । ವಿದ್ಯೆಯೆಸಕಲಾಧಾರವದೂ ॥ ವಿದ್ಯೆಯೆಹಿತಕರ ವಿದ್ಯೆಯೆಶುಭಕರ । ವದರಿಂ ವಿದ್ಯೆಯನೀವ್ವೋದು ॥೪॥ ವಿದ್ಯೆಯೆ ಮೂಲಾನಾರತಾದ್ರವ್ವಕೆ । ವಿದ್ವದಿಂದಿಹಪರಸುಖವಹುದೂ ॥ ವಿದ್ವದಿಂದಧಿಕವೃದ್ಧರೆ

ಯೊಳಗಿಲ್ಲವು । ಠೀವಿಯಿಂಕಲಿವುದು ತೀವ್ರದೊಳೂ ॥೫॥ ವಿದ್ಯವೆಬಂಧುನಾ ವಿದ್ಯವೆ ಸಕಿಸುತ ವಿದ್ಯವೆವಃನ-ಜಗೆ ತಾಯಿ ನ್ನೂ ॥ ವಿದ್ಯವನೋದದನರನಃತಾಸಾವುತ । ವಿದ್ಯಾಹೀನನೆಪಶುಸಮನೂ ॥೬॥ ವರಪೀದಾನ್ತ್ರದ ವ್ರರುತರದರ್ಥವೆಂದರುಹುನೀನೆಂದೆ ನ್ನುತಲೀ ॥ ಕರುಣಾಜಲಧಿತಾಶರಣನಿಗೊರದನೂ । ಗುರುವರನರಹರಿಕರುಣದಲಿ ॥೭।

ಸೂಚನೆಗಳು ಮತ್ತು ಸಮಾಚಾರಗಳು.

ಮೈಸೂರು ಗೌರನ್ಮೆಂಟ್ ನಾರ್ಮಲ್‌ಸ್ಕೂಲಿನಲ್ಲಿ Iಅಸಿಸ್ಟೆಂಟ್‌ಮಾಸ್ಟರಾಗಿದ್ದ ಮ॥ರಾ॥ಟಿ ರಾಮಯ್ಯ, ಬಿ. ಎ. ಯಲ್. ಟಿ. ಯವರನ್ನುಶಿವಮೊಗ್ಗಾ ಇಂಗ್ಲೀಷ್‌ಕಾಲೇಜ್ ಅಸಿಸ್ಟೆಂಟ್‌ಮಾಸ್ಟರನ್ನಾಗಿಯೂ, ತುಮಕೂರು ಹೈಸ್ಕೂಲಿನಲ್ಲಿ ಅಸಿಸ್ಟೆಂಟ್‌ಮಾಸ್ಟರಾಗಿದ್ದು, ಮದ್ರಾಸ್‌ಟ್ರೈನಿಂಗ್‌ಕಾಲೇಜಿನಲ್ಲಿ ಓದಿ ಈ ಫಿಬ್ರವರಿ ತಿಂಗಳಲ್ಲಿ ನಡೆದ ಯಲ್. ಟಿ. ಡಿಗ್ರಿಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದ ಮ।ರಾ। ವೆಂಕಟಸುಬ್ಬಯ್ಯ, ಬಿ. ಎ. ಯವರನ್ನು ನಾರ್ಮಲ್‌ಸ್ಕೂಲ್ ಅಸಿಸ್ಟೆಂಟ್‌ಮಾಸ್ಟರನ್ನಾಗಿಯೂ ವಿದ್ಯಾಭ್ಯಾಸದಇಲಾಖೆ ಇಕ್ಸ್‌ಪೆಕ್ಟರ್‌ಜನರಲ್‌ರವರು ಮೊಕರೂರು ಮಾಡಿರುತ್ತಾರೆ.

ಮ।। ರಾ॥ ಕೆ. ಶೇಷಾದ್ರಯ್ಯಂಗಾರ್ಯರು ಪೂನಾ ಅಗ್ರಿಕಲ್‌ಚರಲ್ ಕಾಲೇಜಿನಲ್ಲಿ ಓದಿ ಸ್ಯಾಸ್‌ಮಾಡಿದರು. ಇವರು ನಾರ್ಮಲ್ ಸ್ಕೂಲಿನಲ್ಲಿ ವ್ಯವಸಾಯಬೋಧಕರಾಗಿ ನಿಯಮಿಸಲ್ಪಟ್ಟ ಎರಡುವರುಷಗಳಾದವು. ಇವರು ವಿದ್ಯಾರ್ಥಿಗಳಿಗೆ ಬೋಧನೆಮಾಡುವ ವಿಷಯದಲ್ಲಿ ಬಹಳ ಸಮರ್ಥರಾಗಿದ್ದರು ಮತ್ತು ಹೊಸಹೊಸವಿಷಯಗಳನ್ನು ಚೆನ್ನಾಗಿ ಶೋಧಿಸಿ ಪ್ರಸಿದ್ಧಿಪಡಿಸುವದರಲ್ಲಿಯೂ, ವ್ಯವಸಾಯಬೋಧಕಶಾಸ್ತ್ರವನ್ನು ದೇಶಭಾಷೆಯಲ್ಲಿ ಪ್ರಚುರಪಡಿಸುವದರಲ್ಲಿಯೂ ಬಹಳ ಆದರವ್ಯಕ್ತವಾಗಿದ್ದರು. ಇವರು ಈ ಮಾರ್ಚಿ ತಾ॥ ೭ರಲ್ಲು ಸ್ವರ್ಗಸ್ಥರಾದರು. ಇವರಿಗೆ ಸಾಯುವಾಗ್ಗೆ ೩೬ವರುಷ ಅಕಾಲದಲ್ಲಿ ಉಂಟಾದ ಇವರ ಮರಣವನ್ನು ತಿಳಿಸಲು ಬಹಳ ವಿಷಾದಿಸುತ್ತೇವೆ.

ವಿದ್ಯಾದಾಯಿನಿ.

ಭಾಗ ೫.] ಏಪ್ರೀಲ್. ೧೯೨೩. [ಸಂಚಿಕೆ ೪.

ಎಡಿಟರವರ ನೋಟ್ಸ್.

ತಮಿಳು, ತೆಲಗು, ಕನ್ನಡಮುಂತಾದ ದ್ರವಿಡಭಾಷೆಗಳಲ್ಲು, ಸಂಸ್ಕೃತ ಭಾಷೆಯಲ್ಲೂ ಇರುವ ಪಾಂಡಿತ್ಯವನ್ನು ನಿರ್ಣಯಿಸುವುದಕ್ಕಾಗಿ ತಕ್ಕ ಪರೀಕ್ಷೆಗಳನ್ನು ಏರ್ಪಡಿಸಬೇಕೆಂದು ಮದರಾಸ್ ಸರಕಾರದವರು ಪರ್ಯಾಲೋಚಿಸುತ್ತಿರುವರೆಂದು ತಿಳಿಸಿದ್ದವಷ್ಟೆ. ಈಚೆಗೆ ಅಲ್ಲಿನ ವಿದ್ಯಾಭ್ಯಾಸವ ಇಲಾಖೆ ಡೈರೆಕ್ಟರ್ ಸಾಹೇಬರು ಆ ಪರೀಕ್ಷೆಗಳನ್ನು ಮದರಾಸ್ ಯೂನಿವರ್ಸಿಟಿಯವರು ನಡೆಸಿದರೆ ಒಳ್ಳೇದೆಂದು ಅಭಿಪ್ರಾಯ ಪಟ್ಟರುತ್ತಾರೆ ಇದನ್ನು ಪರ್ಯಾಲೋಚಿಸುವುದಕ್ಕಾಗಿ ಆ ವಿದ್ಯಾಸಂಘದವರು ಮೂರ್ಬತಿಂಗಳು ೧೯ ನೇ ತಾರೀಖಿನದಿನ ಒಂದು ಕಮಿಟಿಯನ್ನು ನಿಯಮಿಸಿದರು. ಹಾಗೆ ಪರೀಕ್ಷೆಗಳನ್ನು ಮಾಡುವುದು ಒಳ್ಳೇದೆಂದು ಯೂನಿವರ್ಸಿಟಿಯವರೂ ಅಭಿಪ್ರಾಯ ಪಟ್ಟರೆ ಮುಂದಕ್ಕೆ ಸಂಸ್ಕೃತಮುಂತಾದ ಭಾಷೆಗಳಲ್ಲೂ ಈಗ ಇಂಗ್ಲೀಷಿನಲ್ಲಿರುವಂತೆ ಬಿ. ಎ., ಎಂ. ಎ. ಮುಂತಾದ ಪರೀಕ್ಷೆಗಳಿಗೆ ಸಮಾನವಾದ ಪರೀಕ್ಷೆಗಳಾಗುವುದು. ಈ ಪರೀಕ್ಷೆಗಳಿಗೆ ಹೋಗುವವರಿಗೆ ಇಂಗ್ಲೀಷುಭಾಷೆಯ ಜ್ಞಾನವು ಅವಶ್ಯಕವೆಂದು ಮಾಡುವಂತಿಲ್ಲ.

***

ಇದರಿಂದ ನಮ್ಮ ಪಂಡಿತರಿಗೆ ಈಗ ಗಣನೆಯಿಲ್ಲದಿರುವ ಸ್ಥಳಗಳಲ್ಲಿ ಕೆಲವು ಕಡೆ ಗಣನೆಯು ಹೆಚ್ಚಬಹುದು. ಆದರೆ ಪರೀಕ್ಷೆಗಳನ್ನು ಮಾತ್ರ ಮಾಡುವುದರಿಂದ ವಿಶೇಷವಾಗಿ ಪ್ರಯೋಜನವಾಗುವಂತೆ ಕಾಣುವುದಿಲ್ಲ. ಇದಕ್ಕೆ ಬದಲಾಗಿ ಮದರಾಸಿನಲ್ಲಾಗಲಿ ಅಥವಾ ಇನ್ನಾವದಾದರೂ ಯುಕ್ತವಾದ ಪಟ್ಟಣದಲ್ಲಾಗಲಿ ಒಂದುವಿದ್ಯಾ

ಶಾಲೆಯನ್ನು ಸ್ಥಾಪಿಸಿ ಅಲ್ಲಿ ಸಂಸ್ಕೃತ ಮತ್ತು ದ್ರವಿಡಭಾಷೆಗಳನ್ನು ಬೋಧಿಸಲು ಯೋಗ್ಯರಾದ ಉಪಾಧ್ಯಾಯರನ್ನು ನಿಯಮಿಸಿ ಕ್ರಮೇಣ ಪರೀಕ್ಷೆಗಳನ್ನಿಡುತಬಂದರೆ ಒಳ್ಳೇದೆಂದು ತೋರುತ್ತೆ.

ನೀತ್ಯನುಶಾಸನ.

ವಿದ್ಯಾಭ್ಯಾಸಮಾಡಿಸುವಾಗ ಬಾಲಕರ ವಿಷಯದಲ್ಲಿ ಮೂರು-ವಿಧವಾಗಿ ಗಮನ ಕೊಡಬೇಕೆಂದು ಈ ಪತ್ರಿಕೆಯ ಹಿಂದಿನ ಸಂಚಿಕೆಗಳೊಂದರಲ್ಲಿ ತಿಳಿಸಿದೆವು. ಅವುಗಳಲ್ಲಿ ನೀತ್ಯನುಶಾಸನವೊಂದು. ನೀತ್ಯನುಶಾಸನವೆಂದರೆ ಒಳ್ಳೇಕೆಲಸಗಳನ್ನು ಮಾಡುವಹಾಗೆ ತಮ್ಮನ್ನು ತಾವೇ ಪ್ರೋತ್ಸಾಹಪಡಿಸಿಕೊಳ್ಳುವಂತೆಯೂ, ಕೆಟ್ಟ ಕೆಲಸಗಳನ್ನು ಮಾಡದಹಾಗೆ ತಮ್ಮನ್ನು ತಾವೇ ನಿರ್ಬಂಧಪಡಿಸಿಕೊಳ್ಳುವಂತೆಯೂ ಬಾಲಕರನ್ನು ಮಾಡುವುದು. ಕೆಟ್ಟಕೆಲಸ ಮಾಡುವುದು ತಪ್ಪೆಂತಲೂ, ಒಳ್ಳೇಕೆಲಸವನ್ನು ಮಾಡುವುದು ಸರಿಯೆಂತಲೂ ಇರುವ ಬುದ್ಧಿಯು ಮನುಷ್ಯನಿಗೆ ಸಹಜವೆಂದೇ ಹೇಳಬಹುದು. ಆದರೆ ಚಿಕ್ಕವಯಸ್ಸಿನಲ್ಲಿ ಈವಿಧವಾದ ಜ್ಞಾನವು ಬೀಜರೂಪದಲ್ಲಿಮಾತ್ರವಿರುವುದರಿಂದ ಉಪಾಧ್ಯಾಯನು ಇದನ್ನು ವೃದ್ಧಿಪಡಿಸಬೇಕು. ಬುದ್ಧಿಗೆ ಸಂಸ್ಕಾರವಾಗುವಂತೆ ಬೋಧಿಸುವುದಕ್ಕಿಂತಲೂ ಇದನ್ನು ಅಭಿವೃದ್ಧಿಪಡಿಸಬೇಕಾದುದು ಮುಖ್ಯ. ಬುದ್ಧಿಯು ಎಷ್ಟುಮೆಟ್ಟಿಗೆ ಅಭಿವೃದ್ಧಿಯಾಗಿದ್ದರೂ ನಡತೆಯು ಸರಿಯಾಗಿಲ್ಲದಿದ್ದರೆ ಆ ಮನುಷ್ಯನಿಗೆ ಸುಖ ಕಡಮೆ. ಬುದ್ಧಿ ಕಡಮೆಯಾಗಿದ್ದರೂ ನೀತಿವಂತನಾಗಿರುವವನಿಗೆ ಸುಖ ಉಂಟು. ಇದು ಲೋಕಾನುಭವದಿಂದ ಎಲ್ಲರಿಗೂ ತಿಳಿದಿರುವುದು.

ನೀತ್ಯನುಶಾಸನಕ್ಕಾಗಿ ಉಪಾಧ್ಯಾಯನು ಮುಖ್ಯವಾಗಿ ಮಾಡಬೇಕಾದುದೇನೆಂದರೆ—ಪ್ರತಿಯೊಬ್ಬನೂ ತನ್ನ ಧರ್ಮವನ್ನು ಮಾಡಬೇಕೆಂತಲೂ ಹಾಗೆ ಮಾಡದಿರುವುದು ಸುತರಾಂ ತಪ್ಪೆಂತಲೂ ಸ್ಪಷ್ಟವಾಗಿ ತಿಳಿಸುವುದು. ಇದಕ್ಕಾಗಿ ಧರ್ಮದ ಸ್ವರೂಪವನ್ನು ತಿಳಿಸಬೇಕಾಗುವುದು. ಅಂದರೆ ಉಪಾಧ್ಯಾಯನು ಇದು ಸರಿ, ಇದು ತಪ್ಪು, ಎಂದು ನಿಶ್ಚಯಿಸುವುದಕ್ಕೆ ಸಹಾಯಕವಾಗಿ ಕೆಲವು ನಿಯಮಗಳನ್ನು ಬಾಲಕರಿಗೆ ತಿಳಿಸಬೇಕು. ಇದರಜತೆಗೆ ಫಲಾಪೇಕ್ಷೆಯಿಲದೆ ತನ್ನ ಧರ್ಮವನ್ನು ಮಾಡಬೇಕೆಂತಲೂ

ಕೆಂಬ ಕುತೂಹಲವನ್ನು ಹುಡುಗರಲ್ಲುಂಟುಮಾಡಿದರೆ ನೀತ್ಯನುಶಾಸನದ ಕೆಲಸವು ಪೂರೈಸಿದಂತೆ.

ಈ ಉದ್ದೇಶವು ನೆರವೇರುವುದಕ್ಕಾಗಿ ಸ್ಕೂಲಿನಲ್ಲಿ ಮಾಡಬೇಕಾದುದು ನಾಲ್ಕು:-

೧ ಸದ್ಗುಣಗಳ ಸ್ವರೂಪವನ್ನು ತಿಳಿಸಿ ಗುಣವಂತನಾಗಿರಬೇಕೆಂದು ಬುದ್ಧಿವಾದ ಹೇಳುವುದು.

ಒಳ್ಳೆಯವರಾಗಿರಬೇಕೆಂದು ಬುದ್ಧಿವಾದ ಹೇಳುವುದರಿಂದಮಾತ್ರವೇ ಒಳ್ಳೇತನ ಬರುವುದಿಲ್ಲವಾದರೂ ಉಪಾಧ್ಯಾಯನು ನೀತ್ಯನುಶಾಸನದಲ್ಲಿ ಹೀಗೆ ಹೇಳುವುದನ್ನು ಸ್ವಲ್ಪವಷ್ಟಿಗೆ ಉಪಯೋಗಿಸಿಕೊಳ್ಳಬೇಕು. ಪಾಠಪುಸ್ತಕಗಳಲ್ಲಿ ನೀತಿಬೋಧಕಗಳಾದ ಕಥೆಗಳನ್ನು ಸೇರಿಸಿ ಅವುಗಳಿಂದ ಒಂದೊಂದು ನೀತಿಯನ್ನು ಬಾಲಕರಿಗೆ ಆಗಾಗ್ಗೆ ತಿಳಿಸುತ್ತಿರಬೇಕು. ಇತರವಿಧವಾಗಿ ಸಮಯ ದೊರೆತಾಗೆಲ್ಲ ಬಾಲಕರಿಗೆ ನೀತಿ ಹೇಳುವುದನ್ನೂ ಇಟ್ಟುಕೊಳ್ಳಬೇಕು.

೨ ಸದ್ಗುಣಗಳಿಗೆ ನಿದರ್ಶನಗಳನ್ನು ತೋರಿಸುವುದು.

ರಾಮಾಯಣಾದಿ ಕಥೆಗಳನ್ನು ತಿಳಿಸುವುದರಿಂದ ಇದು ಸಾಧ್ಯವಾಗುವುದು. ರಾಮಾದಿಗಳು ಸದ್ಗುಣಗಳಿಗೆ ನಿದರ್ಶನಗಳೆಂದು ಹೇಳಬಹುದು. ಇವುಗಳನ್ನು ತಿಳಿಸುವುದರಿಂದ ಬಾಲಕರಿಗೆ ರಾಮನಂತೆ ಇರಬೇಕು, ರಾವಣನಂತೆ ಇರಬಾರದೆಂಬ ತಿಳುವಳಿಕೆಯುಂಟಾಗುವುದು. ಈ ಮಾದರಿಗಿಂತಲೂ ಉಪಾಧ್ಯಾಯನು ತನ್ನ ನೀತಿಗಳಲ್ಲಿ ಬಾಲಕರಿಗೆ ನಿದರ್ಶನವಾಗಬೇಕಾದುದು ಮುಖ್ಯ. ಇದರಿಂದ ಅವರಿಗೆ ಇವನು ಮಾಡುವ ಕಾರ್ಯಗಳೆಲ್ಲ ಸರಿಯೆಂಬ ಭಾವನೆಯುಂಟಾಗಿ ತಾವೂ ಅವನಂತಿರಬೇಕೆಂಬ ಬುದ್ಧಿಯು ತಾನಾಗಿ ಹುಟ್ಟುವುದು. ಮುಂದಕ್ಕೆ ಸ್ವತಂತ್ರರಾಗಿ ಕೆಲಸ ಮಾಡುವಾಗ್ಗೆಸಹ ತಮ್ಮ ಉಪಾಧ್ಯಾಯರು ಹೀಗೆ ಮಾಡುತಿದ್ದರೆಂದು ಜ್ಞಾಪಿಸಿಕೊಂಡು ಸತ್ಕಾರ್ಯಗಳನ್ನು ಮಾಡುವಂತೆಯೂ, ಅವರು ಹಾಗೆ ಮಾಡುತಿರಲಿಲ್ಲವೆಂದು ಜ್ಞಾಪಿಸಿಕೊಂಡು ಅಸತ್ಕಾರ್ಯಗಳನ್ನು ಬಿಡುವಂತೆಯೂ ಆಗುವುದು.

೩. ಬಾಲಕರಲ್ಲಿ ಒಳ್ಳೇ ಶೀಲಗಳನ್ನುಂಟುಮಾಡುವುದು.

ವಿಶೇಷವಾಗಿ ಅಭ್ಯಸಿಸಿರುವುದರಿಂದ ಯಾವ ಕೆಲಸವನ್ನಾಗಲಿ ಕ್ಲುಪ್ತ ಕಾಲದಲ್ಲಿ ಮಾಡುವುದಕ್ಕೆ ಶೀಲ ಅಥವಾ ಅನುಸ್ಮೃತಿಯೆಂದು ಹೆಸರು. ಯಾವ ಕೆಲಸವನ್ನಾಗಲಿ ಮಾಡುವುದರಲ್ಲಿ ಹೆಚ್ಚಾಗಿ ಅಭ್ಯಾಸವಾದರೆ ಮುಂದಕ್ಕೆ ಆ ಕೆಲಸವನ್ನು

ವಿಶೇಷ ಪ್ರಯತ್ನವಿಲ್ಲದೆ ಮಾಡುವಂತಾಗುವುದು. ಇಷ್ಟೇಅಲ್ಲ. ಅಂಥ ಕೆಲಸಗಳನ್ನು ಮಾಡದಿರುವುದು ಕಷ್ಟವೂ ಆಗುವುದು. ಅಂದರೆ ಅಭ್ಯಸಿಸಿದ ಕೆಲಸವು ಕೆಟ್ಟದಾಗಲಿ ಒಳ್ಳೇದಾಗಲಿ ಅದನ್ನು ಮಾಡಲೇಬೇಕಾಗುವುದು. ಇದು ಮನುಷ್ಯನ ಸ್ವಭಾವ. ಈ ಸ್ವಭಾವವನ್ನರಿತು ಉಪಾಧ್ಯಾಯನು ನಿತ್ಯನುಶಾಸನದಲ್ಲಿ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಚಿಕ್ಕವಯಸ್ಸಿನಿಂದಲೂ ಬಂದ ಅನುಸೃತಿಯ ಪ್ರಭಾವವು ಬಹಳ ಹೆಚ್ಚಾದುದೆಂದು ಎಲ್ಲರಿಗೂ ತಿಳಿದಿದೆ. ಆದುದರಿಂದ ಈ ವಯಸ್ಸಿನಲ್ಲಿ ಉಪಾಧ್ಯಾಯನು ಹುಡುಗರಲ್ಲಿ ಒಳ್ಳೇಶೀಲಗಳನ್ನುಂಟುಮಾಡಬೇಕು. ಶೀಲಗಳನ್ನುಂಟುಮಾಡುವುದಕ್ಕೆ ಆವೃತ್ತಿಯೇ ಮುಖ್ಯವಾದುದರಿಂದ ನಾವು ಹುಡುಗರಲ್ಲಿ ಹೇಗೆ ಕೆಲಸವನ್ನುಂಟುಮಾಡುವುದನ್ನುಂಟುಮಾಡಬೇಕೆಂಬುವೆವೋ ಹಾಗೆ ಅವರು ಕ್ಲಪ್ತಕಾಲಗಳಲ್ಲಿ ವಿಚ್ಛಿತ್ತಿ ಇಲ್ಲದೆ ಮಾಡುವಂತೆ ಮಾಡಬೇಕು. ಬಾಲಕರಲ್ಲಿ ಕೆಟ್ಟ ಶೀಲಗಳು ನೆಲಗೊಂಡಿದ್ದರೆ ಅಯಾ ಕೆಟ್ಟತನಕ್ಕೆ ವಿರೋಧವಾದ ಸುಗುಣಗಳನ್ನು ಅವರಿಗುಂಟು ಮಾಡಬೇಕು. ಇದರಿಂದ ಹುಡುಗರಲ್ಲಿ ಆ ಕೆಟ್ಟ ಗುಣಗಳು ಕ್ರಮೇಣ ಹೋಗುವವು.

೪. ಸದ್ಗುಣಗಳನ್ನು ಕಾರ್ಯತಃ ಉಪಯೋಗಿಸುವಂತೆ ಮಾಡುವುದು.

ಇದನ್ನು ಮಾಡದಿದ್ದರೆ ಬಾಲಕರಿಗೆ ಒಳ್ಳೇ ಗುಣಗಳ ಸ್ವರೂಪವು ತಿಳಿದಿದ್ದರೂ ಅವುಗಳಿಗನುಗುಣವಾಗಿ ನಡೆದುಕೊಳ್ಳುವುದು ಬರುವುದಿಲ್ಲ. ಒಳ್ಳೇ ನಡತೆವಂತರಾಗಿರುವುದನ್ನು ಗೊತ್ತುಮಾಡುವುದಕ್ಕೆ ಉಪಾಧ್ಯಾಯನಿಗೆ ಸ್ಕೂಲುಕೆಲಸ ನಡೆಯುವಾಗಲೂ ವ್ಯಾಯಾಮಭೂಮಿಯಲ್ಲೂ ಅವಕಾಶ ಬಹಳವಾಗಿದೆ.

ಪೆಪ್ಪಣಿ.

ವಚನಕಾವ್ಯ.

III‌ನೇ ತರಗತಿ] [ಕಾಲ 45ನಿಮಿಷ

ವಿಷಯ	ಬೋಧನಕ್ರಮ
ಚಿತ್ತೂರುಹೋದುದು.	ಚಿತ್ತೂರನ್ನು ಭೂಪಠದಲ್ಲಿ ತೋರಿಸಿ ಈ ವಿಷಯವನ್ನು ಬಾಲಕರಿಗೆ ತಿಳಿಸಬೇಕು.
ಪ್ರೀತಿಕೆ	
ಮೊಗಲ್‌ಚಕ್ರವರ್ತಿಯಾದ ಅಕ್ಬರನು ರಾಜಪುತ್ರರ ರಾಜಧಾನಿಯಾದ ಚಿತ್ತೂರಿನ	

ಮೇಲೆ ಕ್ರಿ. ಶ. ೧೪೬೫ರಲ್ಲಿ ದಂಡೆತ್ತಿ ಬಂದನು. ಆಗ ನಡೆದುದನ್ನು ಮುಂದಿನ ವಾಕ್ಯಗಳು ತಿಳಿಸುವುವು

"ಉಭಯಪಕ್ಷದಲ್ಲೂ ಬಹುಸಂಖ್ಯೆಯ ಸೈನ್ಯ ಸೇರಿತು. ಆದರೂ ಚಿತ್ತೂರಿಗೆ ಉಳಿಗಾಲವಿಲ್ಲದೆ ಹೋಯಿತು. ಮೊಗಲ್ ಸೇನೆಯು ಅಪರಿಮಿತವಾಗಿದ್ದುದರಿಂದ ದುರ್ಗರಕ್ಷಣೆ ಅಶಕ್ಯವಾಯಿತು ಹತಾಶರಾದ ರಾಜಪುತ್ರರು ಪ್ರಾಣದಮೇಲಿನ ಮಮತೆಯನ್ನು ತೊರೆದು, ಸಕಲವಿಧವಾದ ಸಂಸಾರಬಂಧಗಳನ್ನೂ ಹರಿದು, ಒಬ್ಬರಿಗೊಬ್ಬರು ಕಡೆಯ ತಾಂಬೂಲವನ್ನು ಕೊಟ್ಟು ದುರ್ಗದ್ವಾರವನ್ನು ತೆರೆದರು."

ಉಭಯಪಕ್ಷಗಳಲ್ಲೂ = ಎರಡುಕಡೆಯಲ್ಲು

ಉಳಿಗಾಲ = ಚಿತ್ತೂರು ಉಳಿಯುವಕಾಲ

ಅಪರಿಮಿತ = ಕೊನೆಮೊದಲಿಲ್ಲದ, ಬಹಳ, ಹೆಚ್ಚಾದ

ದುರ್ಗ = ಕೋಟೆ

ಹತಾಶರಾದ = ಆಶೆಯನ್ನು ತೊರೆದ

ಮಮತೆ = ನನ್ನದೆಂಬ ಪ್ರೀತಿ

ಸಂಸಾರಬಂಧ = ತಾಯಿತಂದೆ ಹೆಂಡತಿ ಮಕ್ಕಳು ಮುಂತಾದವರ ಸಂಬಂಧ

ಹರಿದು = ಬಿಟ್ಟು

ಕಡೆಯತಾಂಬೂಲವನ್ನು ಕೊಟ್ಟು = ಪುನಃ ಕಾಣುವುದಿಲ್ಲವೆಂಬ ಅಭಿಸಾಯದಿಂದ ಬಿಟ್ಟು

ಉಪಾಧ್ಯಾಯನು ಈವಾಕ್ಯಗಳನ್ನು ನಿಧಾನವಾಗಿ ಓದಿ ಇಬ್ಬರು ಮುವ್ವರು ಬಾಲಕರಿಂದ ಓದಿಸಬೇಕು.

ಇದನ್ನು ಹುಡುಗರಿಂದ ಹೇಳಿಸಬೇಕು. 'ಪಕ್ಷ' ವೆಂಬುದರ ಸರಿಯಾದ ಅರ್ಥವನ್ನು ತಿಳಿಸುವುದು. 'ಪಕ್ಷಿ' ಎಂಬ ಮಾತನ್ನು ಜ್ಞಾಪಿಸಬೇಕು. ಹಲಗೆಯಮೇಲೆ ಬರೆಯಬೇಕು.

ಈ ಅರ್ಥಗಳನ್ನು ಹುಡುಗರಿಂದ ಹೇಳಿಸುವುದು. ಅವರಿಗೆ ತಿಳಿಯದಿದ್ದರೆ ಉಪಾಧ್ಯಾಯನೇ ತಿಳಿಸಿ ಹಲಗೆಯಮೇಲೆ ಬರೆಯಬೇಕು

ಈ ಅರ್ಥವನ್ನು ಪ್ರಶ್ನೆಮಾಡಿ ಹುಡುಗರಿಂದಲೇ ಹೇಳಿಸಬೇಕು.

ಓದಿಸಿದ ವಾಕ್ಯಗಳ ಅರ್ಥವನ್ನು ಪ್ರತ್ಯೇಕವಾಗಿ ಒಬ್ಬರಿಂದ ಹೇಳಿಸಬೇಕು. ಅಭಿಸಾಯವು ಅವರಿಗೆ ಮಂಡಿಟ್ಟಾಯಿತೆಂಬುದನ್ನು ಪ್ರಶ್ನೆಮಾಡಿ ತಿಳಿಯಬೇಕು.

ಉಳಿಗಾಲ = ಉಳಿಯುವಕಾಲ
ದುರ್ಗರಕ್ಷಣೆ = ಪ್ರಥಮಾವಿಭಕ್ತಿ
'ತಿರಿದರು' ಎಂಬುದಕ್ಕೆ 'ರಾಜಪುತ್ರರು' ಎಂಬುದು ಕರ್ತೃ

"ತಡೆದಿದ್ದ ಪ್ರವಾಹವನ್ನು ಬಿಟ್ಟಂತಾಯಿತು ಮೂವತ್ತುಸಾವಿರಮಂದಿ ರಾಜಪುತ್ರ ಭಟರು ಸತ್ತುಬಿದ್ದರು. ಇಂದು ವೀರ ಭೂಮಿ ವೀರಶೂನ್ಯವಾಯಿತು ಅಮರಾವತಿಯಂತಿದ್ದ ಚಿತೂರು ಶ್ಮಶಾನವಾಯಿತು."

ಈ ವ್ಯಾಕರಣ ವಿಷಯಗಳನ್ನು ಪ್ರಶ್ನೆ ಮಾಡಿ ಹುಡುಗರಿಂದ ಹೇಳಿಸಬೇಕು 'ಉಳಿಗಾಲ' ಇಲ್ಲಿನ ಸಂಧಿಕಾರ್ಯವನ್ನು ಹಲಗೆಯ ಮೇಲೆ ಬರೆಯಬೇಕು ಮೇಲೆ ಹೇಳಿರುವ ಅಂಶಗಳ ವಿಷಯಗಳನ್ನೆಲ್ಲ ಪುನರಾವರ್ತನೆ ಮಾಡಬೇಕು.

ಈ ವಾಕ್ಯಗಳನ್ನೂ ಉಪಾಧ್ಯಾಯನು ಓದಿ ಹುಡುಗರಿಂದ ಓದಿಸಬೇಕು. ಅನಂತರದಲ್ಲಿ ಅವುಗಳ ವಿವರಣೆಗಾಗಿ ಮೇಲಿನಂತೆಯೇ ಬೋಧಿಸಲು ಪ್ರಯತ್ನಪಡಬೇಕು. ಒಟ್ಟು ಪಾಠದ ವಿಷಯವಾಗಿ ಪುನರಾವರ್ತನೆ ಮಾಡಬೇಕು.

ಸತ್ಯವಾಕ್ಯ.

ಉಪಕರಣ = ಚಿಕ್ಕ ಪಾತ್ರೆಗಳು. ಸತ್ಯ = ನಿಜ.
ನುಡಿ = ಹೇಳು ಅಸತ್ಯ = ಸುಳ್ಳು.

ಸತ್ಯವೇವಜಯತೇನಾನೃತಂ ॥ ಸತ್ಯಂವದ ॥

ಅರ್ಥವು:—ಸತ್ಯವೇ ಜಯಿಸುತ್ತದೆ; ಅಸತ್ಯವಲ್ಲ. ಸತ್ಯವನ್ನು ನುಡಿ.

ಒಂದು ಊರಿನಲ್ಲಿ ಸುಶೀಲೆ ಎಂಬಾಕೆಗೆ ಸತ್ಯವತಿ ಎಂಬ ಮಗಳಿದ್ದಳು. ಈ ಹುಡುಗಿಯು ಒಂದುದಿವಸ ಮನೆಯಲ್ಲಿನ ಉಪಕರಣಗಳನ್ನೆಲ್ಲಾ ತೆಗೆದುಕೊಂಡು ಹೋಗಿ ಕೊಳೆಯ ದಡದಲ್ಲಿ ತೊಳೆಯುತ್ತಿದ್ದಳು. ಅವುಗಳಲ್ಲಿ ತಾಮ್ರದ ಒಂದು ಗಿಂಡಿಯು ಅಲ್ಲಿಯೇ ನೀರಿನಲ್ಲಿ ಮುಳುಗಿ ಮರಳಲ್ಲಿ ಹೂತುಕೊಂಡಿತು. ಹುಡುಗಿಯು ಅದನ್ನು ಹುಡುಕಿ ಕಾಣದೆ ಗಾಬರಿಪಟ್ಟು ಮನೆಯಲ್ಲಿ ತಾಯಿ ಏನೆನ್ನುವಳೋ ಎಂದು ಅಳುತ್ತಾ ಕೂತಳು. ಆಗ ಗೌರಿಯು ಈ ಹುಡುಗಿಯನ್ನು ಪರೀಕ್ಷಿಸಬೇಕೆಂದೆಣಿಸಿ ಮುತ್ತೈದೆಯಾಗಿ ಬಂದು—ಏನಮ್ಮಾ ಅಳುತ್ತೀ, ಎಂದಳು. ಹುಡುಗಿಯು-ಅಮ್ಮಾ ನಾನು ತಂದಿದ್ದ ಗಿಂಡಿ ಇಲ್ಲಿ ಎಲ್ಲಿಯೋ ಹೂತುಕೊಂಡು ಹೋಯಿತು; ಅಮ್ಮ ಏನೆ

ನ್ನುವಳೋ ಅಂದಳು. ಅದಕ್ಕೆ ದೇವಿಯು-ಅಳಬೇಡ ಹುಡುಕಿಕೊಡುತ್ತೇನೆ—ಅಂದು ಹುಡುಕುವಳಂತೆ ಮಾಡಿ ಮರಳಿನಿಂದ ಒಂದು ಭಂಗಾರದ ಗಿಂಡಿಯನ್ನು ತೆಗೆದು—ಇಕೋ ಕೋ ನಿನ್ನ ಗಿಂಡಿ ಎಂದಳು. ಹುಡುಗಿಯು ಗಿಂಡಿಯನ್ನು ನೋಡಿ ಅಮ್ಮಾ ಇದು ನಮ್ಮದಲ್ಲವೆಂದಳು. ತಿರಿಗಿ ದೇವಿಯು ಸ್ವಲ್ಪಹೊತ್ತು ಹುಡುಕಿ ಬೆಳ್ಳಿಯ ಗಿಂಡಿಯನ್ನು ತೆಗೆದು ತೋರಿಸಿದಳು. ಸತ್ಯವತಿಯು ಅದೂ ನಮ್ಮದಲ್ಲವೆಂದಳು. ಮೂರನೆಸಲ ಈ ಹುಡುಗಿಯು ಕಳಕೊಂಡಿದ್ದ ತಾಮ್ರದ ಗಿಂಡಿಯನ್ನೇತೋರಲು—ಅಮ್ಮಾ ಇದು ನಮ್ಮದೆಂದು ನಗೆಮೂಡಿದಳು—ದೇವಿಯು ಹುಡುಗಿಯ ಸತ್ಯಕ್ಕೆ ಮೆಚ್ಚಿ ಮೂರು ಗಿಂಡಿಗಳನ್ನೂ ಹುಡುಗಿಗೆ ಕೊಟ್ಟು ಮನೆಗೆ ಕಳುಹಿಸಿದಳು. ತಾಯಿ ಇದೆಲ್ಲವನ್ನೂ ಕೇಳಿ ಸತ್ಯವನ್ನೇ ನುಡಿಯುತ್ತಿರು ಎಂದು ಮಗಳಿಗೆ ಬುದ್ಧಿ ಹೇಳಿದಳು. ಆದ್ದರಿಂದ ಹಾಗೆ ನೀವುಗಳು ನಿಜವನ್ನೇ ಆಡಿರಿ. ವಿಶೇಷ ಲಾಭ ಉಂಟು.

ಪ್ರಶ್ನೆಗಳು:—(೧) ಉಪಕರಣಗಳನ್ನು ತೊಳೆಯುತ್ತಿದ್ದ ಹುಡುಗಿ ಯಾರು? (೨) ಅವಳು ಏಕೆ ಅಳುತ್ತಾ ಕೂತಳು? (೩) ಗೌರಿಯು ಬೆಳ್ಳಿ ಭಂಗಾರದ ಗಿಂಡಿಗಳು ಯಾಕೆ ತೋರಿಸಿದಳು? ಹುಡುಗಿಯು ಅದನ್ನು ಯಾಕೆ ಒಪ್ಪಲಿಲ್ಲ? (೪) ಸತ್ಯವತಿಯು ಗುಣವೆಂಥಾದ್ದೆಂದು ತಿಳಿಯುವಿರಿ?

ಪಾಠಶೋಧನೆ.

ಮುಂದೆ ಹೇಳುವ ಕೆಲವು ಅಂಶಗಳಿಗೆ ವಿರೋಧಭಾರದಂತೆ ಬೋಧಿಸುವ ಉಪಾಧ್ಯಾಯನು ಸರಿಯಾಗಿ ಬೋಧಿಸುವನೆಂದು ಸಾಮಾನ್ಯವಾಗಿ ನಿಶ್ಚಯಿಸಬಹುದು:-

ಧ್ವನಿ—ಬಹಳ ಗಟ್ಟಿಗಾಗಲಿ ಅಥವಾ ಬಹಳ ಮೆಲ್ಲಗಾಗಲಿ ಮಾತಾಡದಂತೆ ತರಗತಿಯುಲ್ಲಿರುವರಿಗೆಲ್ಲ ಕೇಳುವಂತೆ ಬೋಧಿಸಬೇಕು.

ಲಕ್ಷಣ—ಚಟುವಟಿಕೆಯುಳ್ಳವನಾಗಿರಬೇಕು; ಬಾಲಕರು ಹೇಳುವ ವಾಕ್ಯಗಳ ಕೊನೇಭಾಗಗಳನ್ನು ಅನುಸರಿಸಿ ಹೇಳುವುದು, 'ಗೊತ್ತಾಯಿತೆ' 'ಏನು' ಇಂಥ ಶಬ್ದಗಳನ್ನು ಪದೇಪದೇ ಹೇಳುವುದು ಇಂಥ ದುಸ್ವಭಾವಗಳಿರಬಾರದು'

ಅಳಿಕೆಯಸಾಮರ್ಥ್ಯ—ಉಪಾಧ್ಯಾಯನು ಕೊಟ್ಟ ಆಜ್ಞೆಗೆ ಅನುಸಾರವಾಗಿ ಬಾಲಕರು ತಟ್ಟನೆ ನಡೆಯುವಂತಿರಬೇಕು; ಬಾಲಕರನ್ನು ಅವಹಂತರನ್ನಾಗಿ ಮಾಡುವು

ದಕ್ಕಾಗಿ ಪ್ರಶ್ನೆಗಳನ್ನು ಅವರು ತರಗತಿಯಲ್ಲಿ ಕೂತಿರುವ ಕ್ರಮಗಳನ್ನನುಸರಿಸಿ ಕೇಳದೆ ಅಲೊಂದನ್ನು ಇಲೊಂದನ್ನು ಕೇಳುತಿರಬೇಕು ; ಯಾವ ಬಾಲಕನನ್ನಾಗಲಿ ಮಾಡುವುದಕ್ಕೆ ಕೆಲಸವಿಲ್ಲದಂತೆ ಬಹಳಕಾಲ ಬಿಡಬಾರದು ; ಕಪ್ಪುಹಲಗೆಯು ಬಲಗಡೆ ನಿಲ್ಲಬೇಕು ; ಸದಾ ತನ್ನ ಸ್ಥಾನವನ್ನು ಬದಲಾಯಿಸುತಿರಬಾರದು ; ದೃಷ್ಟಿಸಿ ನೋಡುವುದರಿಂದಮಾತ್ರವೇ ಬಾಲಕರನ್ನು ಕ್ರಮದಲ್ಲಿಟ್ಟಿರಬೇಕು.

ವಿಷಯ—ತರಗತಿಯ ಯೋಗ್ಯತೆಗೆ ತಕ್ಕಂತಿರಬೇಕು; ಪಾಠಕ್ಕಿರುವಕಾಲದಲ್ಲಿ [illegible]ವಂತಿರಬೇಕು; ಉಪಾಧ್ಯಾಯನು ಮೊದಲು ವಿಷಯವನ್ನು ಕುರಿತು ಯೋಚಿಸಿ ಕ್ರಮಪಡಿಸಿಕೊಂಡಿರಬೇಕು ; ಪಾಠದ ಮುಖ್ಯೋದ್ದೇಶವು ಸ್ಪಷ್ಟವಾಗಿ ಗೊತ್ತಾಗುವಂತಿರಬೇಕು ; ಪ್ರಕೃತಕ್ಕೆ ಬೇಡದ ವಿಷಯಗಳನ್ನು ಹೇಳುತ್ತ ಕಾಲಕಳೆಯಬಾರದು ; ಸಮಯೋಚಿತವಾಗಿ ದೃಷ್ಟಾಂತಗಳನ್ನು ಕೊಡಬೇಕು ; ಬಾಲಕರನ್ನು ಮಧ್ಯದಲ್ಲಿ ಪ್ರಶ್ನೆಮಾಡದೆ ಉಪಾಧ್ಯಾಯನು ತಾನೇ ಬಹಳಹೊತ್ತು ವಿಷಯಗಳನ್ನು ಹೇಳಕೂಡದು ; ಅಂಶಗಳನ್ನು ಕೂಡಿದ್ದಮೆಟ್ಟಿಗೂ ಬಾಲಕರಿಂದಲೇ ಹೇಳಿಸಬೇಕು; ಭಾಷೆಯು ಸುಲಭವಾಗಿಯೂ ಶುದ್ಧವಾಗಿಯೂ ಇರಬೇಕು.

ಪ್ರಶ್ನೆಗಳು—ತರಗತಿಯನ್ನೆಲ್ಲ ಒಟ್ಟಾಗಿ ಪ್ರಶ್ನೆಮಾಡಿ ಅನಂತರದಲ್ಲಿ ಒಬ್ಬನನ್ನು ಉತ್ತರ ಹೇಳುವಂತೆ ಸಂಜ್ಞೆಮಾಡಬೇಕು; ಪ್ರಶ್ನೆಗಳಿಗೆ ಮಧ್ಯದಲ್ಲಿ ಹೆಚ್ಚಾಗಿ ವಿರಾಮವಿರಬಾರದು ; ಬುದ್ಧಿಶಕ್ತಿಯಲ್ಲಿ ಸ್ವಲ್ಪಮೆಟ್ಟಿಗೆ ಕಡಮೆಯಾಗಿರುವರನ್ನು ಹೆಚ್ಚಾಗಿ ಪ್ರಶ್ನೆಮಾಡಬೇಕು.

ಉತ್ತರಗಳು-ಬಾಲಕರು ತಪ್ಪಾದ ಅಥವಾ ಅಸಂಪೂರ್ಣವಾದ ಉತ್ತರಗಳನ್ನು ಹೇಳಿದರೆ ಪ್ರಶ್ನೆಮಾಡಿ ಅವರೇ ಉತ್ತರವನ್ನು ತಿದ್ದಿ ಸರಿಯಾಗಿ ಹೇಳುವಂತೆ ಮಾಡಬೇಕು; ಇಬ್ಬರು ಮುವ್ವರಿಂದ ಹೇಳಿಸುವುದರಿಂದ ಸರಿಯಾದ ಉತ್ತರಗಳನ್ನು ಎಲ್ಲರಿಗೂ ಮಂದಟ್ಟಾಗುವಂತೆ ಮಾಡಬೇಕು; ಡೌಲಿನಿಂದ ಉತ್ತರ ಹೇಳುವುದನ್ನು ತಪ್ಪಿಸಬೇಕು.

ಕಪ್ಪುಹಲಗೆ—ಪ್ರತಿಪಾಠದಲ್ಲಿಯೂ ವಿಶೇಷವಾಗಿ ಉಪಯೋಗಿಸಬೇಕು ; ಬರೆಯುವುದನ್ನು ಸ್ಪಷ್ಟವಾಗಿಯೂ, ಚೆನ್ನಾಗಿಯೂ, ತಕ್ಕಮಟ್ಟಿಗೆ ಬೇಗಲೂ ಬರೆಯಬೇಕು

ಪಲಿತಾಂಶ—ಬಾಲಕರು ಯೋಚಿಸುವಂತೆ ಮಾಡಿರಬೇಕು; ಏನಾದರೂ ಹೊಸವಿಷಯವನ್ನು [illegible]ಬೇಕು.

''ಅಯ್ಯಾ ಮಿತ್ರನೇ, ಈ ಕದಳೀಗೃಹದ ಶಿಲಾಫಲಕದಲ್ಲಿ ಕುಳಿತು ನನ್ನನ್ನು ನಿಂದಿಸುತ್ತಾ ಆ ಪ್ರಿಯೆಯು ಅಳುತ್ತಿದ್ದಂತೆ ಈಗತಾನೆ ಬೆಳಗಿನಜಾವದಲ್ಲಿ ಸ್ವಪ್ನಕಂಡೆನು. ಆದ್ದರಿಂದ ಈ ದಿನವನ್ನೆಲ್ಲಾ ಇಲ್ಲೇನೂಕಬೇಕೆಂದಿರುವೆನು.'' ಎಂದು ಕದಳೀಗೃಹವನ್ನು ಪ್ರವೇಶಿಸಿ, ಶಿಲಾಫಲಕದಲ್ಲಿ ಕುಳಿತು ಅದರಮೇಲೆ ಕಾವಿಯಿಂದ ಮಲಯವತಿಯನ್ನು ಬರೆದನು. ಈತನ ಮನೋಭಾವವನ್ನರಿಯುವದಕ್ಕಾಗಿ ಮಲಯವತಿಯು ಅಲ್ಲಿಯೇ ಲೇಖರಸಿಕೊಂಡು ನಿಂತಳು.

ಆಗ ಯುವರಾಜನಾದ ಮಿತ್ರಾವಸುವು ಜೀಮೂತವಾಹನನನ್ನು ಕಾಣಿಸಿಕೊಂಡು, ''ಅಯ್ಯಾ, ನಿನಗೆ ಕ್ಷೇಮವೆ? ನಮ್ಮ ತಂದೆಯು ತನ್ನ ಮಗಳಾದ ಮಲಯವತಿಯನ್ನು ನಿನಗೆ ಕೊಡಬೇಕೆಂದಿರುವನು. ನೀನು ಅವಳನ್ನು ಪರಿಗ್ರಹಿಸಬೇಕು'' ಎಂದನು.

''ಅಯ್ಯಾ ಮಿತ್ರಾವಸೂ, ಈ ಸಂಬಂಧವು ಶ್ಲಾಘ್ಯವಾದದ್ದೇಸರಿ. ಇಂಥಾ ಸಂಬಂಧವನ್ನು ಯಾರುತಾನೆ ಅಪೇಕ್ಷಿಸುವದಿಲ್ಲ ಆದರೆ ನನ್ನ ಮನಸ್ಸು ಮತ್ತೊಂದು ಕಡೆ ಇರುವದರಿಂದ, ನನಗೆ ಇದು ಸಮ್ಮತಿಯಿಲ್ಲ.'' ಎಂದನು.

ಇದನ್ನು ಕೇಳುತ್ತಲೆ, ಇತ್ತ ಮಲಯವತಿಯು ಮೂರ್ಛಿಹೋದಳು. ಅತ್ತ ಅತ್ರೇಯನು ''ಅಯ್ಯಾ ಮಿತ್ರಾವಸುವೆ, ಈ ನಮ್ಮ ಮಿತ್ರನು ಪರಾಧೀನನು. ಇವನನ್ನು ಕೇಳಿ ಏನೂ ಉಪಯೋಗವಿಲ್ಲ. ಇವನ ತಂದೆಯನ್ನು ಕೇಳು'' ಎಂದನು

''ನೀನು ಹೇಳಿದ್ದು ಯುಕ್ತ; ಹಾಗೆಯೇ ಮಾಡುವೆನು'' ಎಂದು ಹೇಳಿ ಜೀಮೂತಕೇತುವಿನ ಬಳಿಗೆ ಹೋದನು.

ಇತ್ತ ಮಲಯವತಿಯು ''ಹೃದಯೇಪ್ಸಿತನಾದ ವರನು ದುರ್ಲಭನಾದನು. ಇನ್ನು ಬದುಕಿ ಪ್ರಯೋಜನವೇನು? ಪ್ರಾಣವನ್ನು ತೊರೆದುಬಿಡುವದೇ ಮೇಲು.'' ಎಂದು ಬಳಿಯಲ್ಲಿದ್ದ ಸಖಿಯನ್ನು, ''ನಮ್ಮಣ್ಣ ಮಿತ್ರಾವಸು ದೂರಕ್ಕೆ ಹೋದನೋ ನೋಡಿಕೊಂಡು ಬಾ'' ಎಂದು ದೂರಕ್ಕೆ ಕಳುಹಿ, ಕೈಯಲ್ಲಿ ಒಂದು ಪಾಶವನ್ನು ತೆಗೆದುಕೊಂಡು, ''ಎಲೌ ಗೌರಿ, ಈ ಜನ್ಮದಲ್ಲಿ ನನಗಂತೂ ಅನುಗ್ರಹವೂಡಲಿಲ್ಲ. ಮುಂದಣಜನ್ಮದಲ್ಲಾದರೂ ಇಂಥಾ ದುರವಸ್ಥೆಗೆ ಗುರಿಮಾಡಬೇಡ.'' ಎಂದು ಪ್ರಾರ್ಥನೆಮಾಡಿ, ಕೊರಳನ್ನು ಬಿಗಿದುಕೊಂಡಳು.

ಅಷ್ಟರೊಳಗೆ ಇವಳೇನುಮಾಡುವಳೋ ಎಂದು ಶೀಘ್ರವಾಗಿ ಹಿಂದಿರುಗಿ

ಬಂದ ಸಖಿಯು ಗಾಬರಿಯಿಂದ, "ಕಾಪಾಡುವರಿಲ್ಲವೇ, ಕಾಪಾಡುವರಿಲ್ಲವೇ?" ಎಂದು ಕೂಗಿಕೊಳ್ಳಲು; ಜೀಮೂತವಾಹನನು ಕೇಳಿ, ಜಗ್ಗನೆದ್ದುಬಂದು, ಬಂಧನದಿಂದ ಬಿಡಿಸಿ ಮಲಯವತಿಯನ್ನು ಕದಳೀಗೃಹಕ್ಕೆ ಕರೆದುಕೊಂಡು ಹೋದನು ಮಲಯವತಿಯು ಶಿಲೆಯಲ್ಲಿ ತನ್ನ ಚಿತ್ರವನ್ನು ಕಂಡು ತನ್ನನ್ನು ತಾನೆ ನಿಂದಿಸಿಕೊಂಡಳು.

ಆಗ ಒಬ್ಬ ಜೇಟಿಯು "ಮಲಯವತೀ, ನಿನಗೂ ಜೀಮೂತವಾಹನನಿಗೂ ಮದುವೆಯು ಶೀಘ್ರದಲ್ಲಿಯೆ ಬಳೆಯುವಹಾಗೆ ಹಿರಿಯರು ನಿಶ್ಚಯಿಸಿರುವರಂತೆ ಈಗಲೆ ನಿನ್ನೆನ್ನು ಕರಕೊಂಡು ಬರುವಂತೆ ನಿಮ್ಮಣ್ಣ ನನ್ನನ್ನು ಕಳುಹಿಸಿದನು. ಏಳು" ಎಂದು ಹೇಳಿ, ಮಲಯವತಿಯನ್ನು ಕರೆದುಕೊಂಡು ಹೊರಟುಹೋದಳು.

ಸ್ನಾನವೇಳೆಯಾದ್ದರಿಂದ ಕೂಡಲೆ ಅತ್ರೇಯನೂ ಮಿತ್ರಾವಸುವೂ ಹೊರಟುಹೋದರು. ಬಳಿಕ ಇವರಿಬ್ಬರಿಗೂ ವಿವಾಹಮಂಗಳವು ಬಹುವಿಜೃಂಭಣೆಯಿಂದ ಬಳೆಯಿತು.

ಒಂದು ದಿನ ಜೀಮೂತವಾಹನನು ಮೈದುನನಾದ ಮಿತ್ರಾವಸುವಿನೊಡನೆ ವಿನೋದದಿಂದ ಸಮುದ್ರತೀರದಲ್ಲಿ ಸಂಚರಿಸುತ್ತಿದ್ದನು. ಮಲಯಪರ್ವತಕ್ಕೆ ಸಮವಾಗಿ ಬಿದ್ದಿರುವ ಮೂಳೆಯರಾಶಿಯನ್ನು ನೋಡಿ "ಇದೇನು ವಜ್ರಳೆಗಳರಾಶಿ! ನಿಮಿತ್ತವಿಲ್ಲದೆ ಸಂಘಾತಮೃತ್ಯುವುಂಟಾಪಂತೆ ತೋರುವದು" ಎಂದನು.

"ಅಯ್ಯಾ, ಇದು ಸಂಘಾತಮೃತ್ಯುವಲ್ಲ. ಇಲ್ಲಿ ನಿತ್ಯದಲ್ಲಿಯೂ ಗರುಡನು ನಾಗಗಳನ್ನು ಭಕ್ಷಿಸುತ್ತಿರುವನು, ಕೇಳು. ಹಿಂದೆ ಗರುಡನು ರಭಸದಿಂದ ನಿತ್ಯವೂ ಪಾತಾಳಕ್ಕೆ ಇಳಿದು ನಾಗಗಳನ್ನು ತಿನ್ನುವದಕ್ಕೆ ಎತ್ತಿಕೊಂಡು ಹೋಗುತ್ತಿದ್ದನು. ಹೀಗಿರಲು ಒಂದು ದಿನ ವಾಸುಕಿಯು 'ಎಲೈ ಗರುತ್ಮಂತನೇ, ನಿನ್ನ ರಭಸಕ್ಕೆ ಅನೇಕ ಸರ್ಪಶಿಶುಗಳು ಪ್ರಾಣಬಿಡುವವು; ಅನೇಕ ಗರ್ಭಪಾತವಾಗುವವು. ಇದರಿಂದ ಇಬ್ಬರಿಗೂ ನಷ್ಟ. ನಮಗೂ ಸಂತತಿವಿಚ್ಛೇದ, ನಿನಗೂ ಶೀಘ್ರದಲ್ಲೇ ಆಹಾರನಾಶ. ನೀನು ಇಲ್ಲಿಗೆ ಬರದೆ ಸಮುದ್ರತೀರದಲ್ಲಿರು. ಅಲ್ಲಿಗೆ ನಿತ್ಯವೂ ಒಂದೊಂದು ನಾಗಗಳನ್ನು ಕಳುಹಿಸುವೆನು. ಇಷ್ಟುಮಾತ್ರ ದಯೆಯನ್ನು ತೋರಿಸು' ಎಂದು ಬೇಡಿಕೊಳ್ಳಲು, ಗರುಡನು ಒಪ್ಪಿಕೊಂಡನು. ಅದರಂತೆ ವಾಸುಕಿಯು ನಿತ್ಯವೂ ನಾಗಗಳನ್ನು ಕಳುಹಿಸುತ್ತಿರುವನು." ಎಂದನು.

"ಆಹಾ! ವಾಸುಕಿಯ ಎಡುಸಾವಿರ ನಾಲಗೆಗಳಲ್ಲಿ ಒಂದಾದರೂ—ಇವು

ಗಳನ್ನು ತಿನ್ನುವದಕ್ಕೆ ಮುಂಚೆ ನನ್ನ ತಿನ್ನು ಎಂದು ಹೇಳುವದಕ್ಕೆ ಇಲ್ಲದೇ ಹೋಯಿತಲ್ಲಾ ! ಎಂದು ಚಿಂತಿಸುತ್ತಿದ್ದನು.

ಆಗ ಒಬ್ಬ ದೂತನು ಬಂದು " ತಂದೆಯು ಅಪ್ಪಣೆಯಾಗಿದೆ " ಎಂದು ವಿತಾವಸುವನ್ನು ಕರೆದುಕೊಂಡು ಹೋದನು.

ಹೋಗುವಾಗ ವಿತಾವಸುವು ಭಾವನನ್ನು ನೋಡಿ " ಇದು ಅಪಾಯ ಬಹುಳವಾದ ಪ್ರದೇಶ. ಇಲ್ಲಿ ಬಹಳ ಹೊತ್ತು ನಿಲ್ಲಬೇಡ" ಎಂದು ಹೇಳಿದನು.

ಇತ್ತ ಜೀಮೂತವಾಹನನು ಮಲಯಪರ್ವತದ ಸೌಂದರ್ಯವನ್ನು ನೋಡುತ್ತಾ ಇರುವಲ್ಲಿ,

" ಅಯ್ಯೋ ! ಪುತ್ರ ಶಂಖಚೂಡ, ನೀನು ಕೊಲ್ಲಲ್ಪಡುವದನ್ನು ನೋಡಿ ಹ್ಯಾಗೆ ಸಹಿಸಲಿ ! " ಎಂಬ ರೋದನಧ್ವನಿಯು ಕೇಳಿಸಿತು. ಹಾಗೆಯೇ ನೋಡುತ್ತಿರುವಲ್ಲಿ ಇಬ್ಬರ ಹಿಂದೆ ಒಬ್ಬ ಮುದುಕಿಯು ಅಳುತ್ತಾ ಬರುವದನ್ನು ಕಂಡನು. ಕಂಡು " ಇವರಲ್ಲಿ ಒಬ್ಬನು ಆ ಮುದುಕಿಯ ಮಗನಾಗಿರಬೇಕು. ಅವನಿಗೇನೋ ಅಪಾಯ ಸಂಭವಿಸಿರಬೇಕು. ಆದ್ದರಿಂದ ಅಳುತ್ತಿರುವಳು " ಎಂದು ಊಹಿಸಿ, ನಾಲ್ಕುಕಡೆಯಲ್ಲಿಯೂ ನೋಡಿ, ಯಾವ ಅಪಾಯವನ್ನೂ ಕಾಣದೆ, ಇವಳು ಅಳುವದಕ್ಕೆ ಕಾರಣವನ್ನು ತಿಳಿಯುವೆನೆಂದು ಸ್ವಲ್ಪದೂರ ಹೋಗಿ, ಹಾಗೆಯೇ. " ಇವರು ಮಾತಾಡುತ್ತಿರುವರು. ಇವರ ಮಾತಿನಿಂದಲೇ ಸಕಲವೂ ವ್ಯಕ್ತವಾಗುವದು " ಎಂದು ಒಂದು ಮರದ ಹಿಂದೆ ನಿಂತು, ಕಿವಿಗೊಟ್ಟು ಕೇಳುತ್ತಿದ್ದನು.

ಅವರಲ್ಲಿ ಒಬ್ಬನು ಮತ್ತೊಬ್ಬನನ್ನು ನೋಡಿ, " ಎಲೋ ಶಂಖಚೂಡ, ಇದೇ ನಮ್ಮ ಸ್ವಾಮಿಯಾದ ವಾಸುಕಿಯ ಅಪ್ಪಣೆ. ಈ ರಕ್ತಾಂಶುಕವನ್ನು ಹೊದ್ದುಕೊಂಡು ಇಗೊ ! ಕಾಣುವ ವಧ್ಯಶಿಲೆಯನ್ನು ಹತ್ತು. ಈ ಕುರುಪಿಂದ ನೀನೆ ಆದೇ ಶಪುರುಷನೆಂದು ಗರುಡನು ತಿಳಿಯುವನು" ಎಂದು ಹೇಳಿ, ವಸ್ತ್ರದಿಂದ ಹೊದ್ದಿಸಲು; ನೋಡಿ ಮುದುಕಿಯು ಮೂರ್ಛೆಹೋದಳು. ಗರುಡನು ಬರುವ ಸಮಯವಾಯಿತೆಂದು ಅಳು ಹೊರಟುಹೋದನು.

ಇತ್ತ, ಜೀಮೂತವಾಹನನು " ಅಹಾ ! ಗರುತ್ಮಂತನು ಎಷ್ಟು ನಿಷ್ಕರುಣಿಸೋ ! ನನ್ನ ಶರೀರವನ್ನಾದರೂ ಕೊಟ್ಟು ಈತನನ್ನು ಬದುಕಿಸುವದಕ್ಕಾದೀತೇ! " ಎಂದು ಯೋಚಿಸುತ್ತಿದ್ದು, ಪುತ್ರನ ಉಪಚಾರದಿಂದ ಮೂರ್ಛೆತಳಿದ ಮುದುಕಿಯು

"ಹಾ! ಪುತ್ರಕಾ! ಶಂಖಚೂಡ! ನಾಗಲೋಕರಾಜನೇ ನಿನ್ನನ್ನು ಹೀಗೆ ಕೊಲ್ಲಿಸುವಾಗ್ಯೆ, ಯಾವನುತಾನೆ ನಿನ್ನನ್ನು ರಕ್ಷಿಸಿ, ನನ್ನ ದುಃಖವನ್ನು ಹೋಗಲಾಡಿಸಬಲ್ಲನು" ಎಂದು ಹೇಳಿ ಹೇಳಿ ಮೂರ್ಚ್ಛೆಹೋಗುತ್ತಿರುವದನ್ನು ಕಂಡು, "ಇದೇ ಒಳ್ಳೇಸಮಯವು" ಎಂದು ಅವಳ ಹತ್ತರ ಓಡಿ "ಅಮ್ಮಾ, ನಾನು, ನಾನು" ಎಂದು ಇದಿರುನಿಂತನು.

ಮುದುಕಿಯು—ಇತನೇ ಗರುಡನೆಂಬ ಭ್ರಾಂತಿಯಿಂದ ತನ್ನ ಬಟ್ಟೆಯನ್ನು ಮಗನಮೇಲೆ ಹೊದ್ದಿಸಿ, "ವಿನತಾಪುತ್ರನೇ, ಮುಂದೆ ನನ್ನನ್ನು ಭಕ್ಷಿಸು. ನಾಸುಕಿಯು ನನ್ನನ್ನು ಕಳುಹಿಸಿದನು. ಇವನನ್ನಲ್ಲ" ಎಂದು ಬೇಡಿಕೊಂಡಳು.

ಶಂಖಚೂಡನು "ಅಮ್ಮಾ, ಇವನು ಗರುತ್ಮಂತನಲ್ಲ. ಇವನು ಯಾವನೋ ಬಬ್ಬ ಮಹಾನುಭಾವನಂತೆ ತೋರುವದು. ಕನಿಕರಕುಟ್ಟಿ ನನ್ನನ್ನು ರಕ್ಷಿಸಲು ಬಂದಿರುವನು. ಈತನ ಸೌಮ್ಯವಾದ ಆಕಾರವನ್ನು ನೋಡು" ಎಂದು ತಾಯಿಗೆ ತೋರಿಸಿದನು.

ಜೀಮೂತವಾಹನನನ್ನು ನೋಡಿ "ಅಪ್ಪಾ? ನೀನು ಬಹಳಕಾಲ ಜೀವ್ಮಾಗಿ ಬಾಳು. ನೀನೆ ನಮ್ಮ ಶಂಖಚೂಡ ಅಲ್ಲವೆ ಅವನಿಗಿಂತಲೂ ಹೆಚ್ಚು. ಬಂಧುಜನಗಳೂ ಬಿಟ್ಟುಬಿಟ್ಟಿರುವಾಗ್ಯೆ, ನನ್ನ ಶಂಖಚೂಡನನ್ನು ರಕ್ಷಿಸಬಂದೆಯಲ್ಲಾ!" ಎಂದಳು.

ಶಂಖಚೂಡನು ಜಗದ್ವಿಪರೀತವಾದ ಇವನ ಕೆಲಸಕ್ಕೆ ಆಶ್ಚರ್ಯಪಟ್ಟು, "ಎಲೈ ಸಾಹಸಿಕಾಗ್ರಣೀ, ನೀನು ನನ್ನಲ್ಲಿ ಅಪರಿಮಿತವಾದ ದಯೆಯನ್ನು ತೋರಿಸಿದೆ. ಇಷ್ಟಕ್ಕೆಸಾಕು. ಇನ್ನು ಹೆಚ್ಚಾಗಿ ನನ್ನನ್ನು ನಿರ್ಬಂಧಿಸಬೇಡ" ಎಂದು ಕೇಳಿಕೊಂಡನು.

ಜೀಮೂತವಾಹನನು ಅವನ ಕೈಯನ್ನು ಹಿಡಿದುಕೊಂಡು, "ಅಯ್ಯಾ ಶಂಖಚೂಡ, ಬಹುಕಾಲದಿಂದ ಇಂಥಾ ಉಪಕಾರ ಮಾಡಬೇಕೆಂದಿದ್ದೆನು. ಈಗ ಅವಕಾಶವೊರಕಿತು. ಇದಕ್ಕೆ ವಿಘ್ನ ಮಾಡಬೇಡ. ವಧ್ಯಚಿಹ್ನವನ್ನು ಕರುಣಿಸು. ತಾಯಿಯೊಡನೆ ಸುಖದಿಂದ ಬಾಳು" ಎಂದು ಕಾಲಿನಮೇಲೆ ಬಿದ್ದು ವಧ್ಯಚಿಹ್ನವನ್ನು ಎಷ್ಟೆಷ್ಟು ಬೇಡುತ್ತಿದ್ದಾಗ್ಯೂ ಕೊಡದೆ, "ಗರುಡನು ಬರುವ ಸಮಯವಾಯಿತು. ಅಷ್ಟರೊಳಗೆ ಈ ಗೋಕರ್ಣೇಶ್ವರನನ್ನು ನಮಸ್ಕರಿಸಿ ಬರುವೆನು" ಎಂದು ತಾಯಿ

ವ್ಯಾಸಂಗವಿಧಾನ.

೨೭ನೇ ಪುಟದ ಶೇಷ.

೪. ಕಾರ್ಯಸಾಧನದಲ್ಲಿ ದಾಕ್ಷ್ಯವಿರಬೇಕು.

ಹಿಮಾಲಯಪರ್ವತದಮೇಲೆ ಗಂಗಾಮೂಲದ ಸಮೀಪದಲ್ಲಿ ಬದರಿಕಾಶ್ರಮವೆಂಬ ಪುಣ್ಯಕ್ಷೇತ್ರದಲ್ಲಿ ಒಂದು ಪ್ರಸಿದ್ಧವಾದ ದೇವಾಲಯವಿರುವುದು. ಅಲ್ಲಿಗೆ ಹೋಗಬೇಕಾದರೆ ಅಯಾಸಕರವಾದ ದೀರ್ಘಪ್ರಯಾಣಮಾಡಬೇಕು. ಅನೇಕ ಯಾತ್ರಾರ್ಥಿಗಳು ಮಾರ್ಗವೈಷಮ್ಯದಿಂದ ಧೈರ್ಯಗೆಟ್ಟು ಭಗ್ನೋದ್ಯಮರಾಗುತ್ತಾರೆ. ವಿದ್ಯಾಮ್ಯ ದೇವತಾಲಯವು ಅದಕ್ಕಿಂತಲೂ ದುರ್ಗಮವಾದ ಉನ್ನತದೇಶದಲ್ಲಿರುವದೆಂದು ತಿಳಿಯಬೇಕು. ವಿದ್ಯಾರ್ಥಿಗಳಿಗೆ ಕಷ್ಟಗಳೊದಗೇ ಒದಗುತ್ತವೆ; ಆದರೂ ಎದೆಗುಂದದೆ ಅವುಗಳನ್ನು ಪರಿಹರಿಸಿಕೊಳ್ಳಬೇಕು. "ಅವಿರತಪ್ರಯತ್ನವು ಫಲಾಂತವಾದುದು" ಎಂದು ದೃಢವಾಗಿ ನಂಬಿರಬೇಕು

೫. ಪ್ರತಿಯೊಂದು ಅಭ್ಯಾಸವೂ ಪೂರ್ಣವಾಗಿರಬೇಕು.

(ಅ) ಒಂದು ಕಾವ್ಯಭಾಗವನ್ನು ಕಂಠಸಾಠಮಾಡುವ ಒಬ್ಬ ಬಾಲಕನು ಅದನ್ನು ತಪ್ಪುತಪ್ಪಾಗಿ ಹೇಳುವನೆಂದು ಅಭ್ಯಾಸಮಾಡಿದರೆ ಅವನು ಅದನ್ನು ಸ್ವಲ್ಪಕಾಲದಲ್ಲಿಯೇ ಮರೆತುಬಿಡುವನು.

(ಆ) ರೇಖಾಗಣಿತದ ಯಾವದಾದರೊಂದು ಪ್ರತಿಜ್ಞೆಯನ್ನು ಪೂರ್ವಾಪರ ಸಂದರ್ಭಗಳ ಸಮ್ಬನ್ಧವನ್ನು ತಿಳಿದುಕೊಳ್ಳದೆ ಅಭ್ಯಾಸಮಾಡಿದರೆ ಆ ಸಂಗತಿಯು ಸ್ಥಿರವಾಗಿ ಮನಸ್ಸಿನಲ್ಲಿ ನಿಲ್ಲಲಾರದು. ನಿಸ್ಸಂಶಯವಾಗಿಯೂ, ಸ್ಪಷ್ಟವಾಗಿಯೂ, ಕೂಲಂಕಷವಿಚಾರಮಾಡಿ ಅಭ್ಯಸ್ತವಾದ ಒಂದು ಪುಟವು ಅತುರದಿನ್ದ ಅಸ್ಪಷ್ಟವಾಗಿ ಅಭ್ಯಾಸಮಾಡಿದ ೧೦ ಪುಟಗಳಿಗಿಂತಲೂ ಹೆಚ್ಚು ಪ್ರಯೋಜನಕಾರಿಯಾಗುವುದು.

೬. ಕಾರ್ಯಸಿದ್ಧಿಗೆ ಸ್ವಪ್ರಯತ್ನವೇ ಮುಖ್ಯವಾದುದೆಂದು ತಿಳಿಯಬೇಕು.

ಭಾಷಾಗ್ರನ್ಥಗಳಲ್ಲಿನ ಕಠಿನ ವಾಕ್ಯಗಳ ಅರ್ಥವಿವರಣೆಯನ್ನೂ ಗಣಿತಪ್ರಶ್ನೆಗಳ ಉತ್ತರಗಳನ್ನೂ ಸಾಹಸಿಗಳಾದ ಸಹಪಾಠಿಗಳಿನ್ದ ಸ್ವಪ್ರಯತ್ನವಿಲ್ಲದೆ ತಿಳಿದುಕೊಳ್ಳಬೇಕೆಂಬುದು ಅಲಸರಾದ ವಿದ್ಯಾರ್ಥಿಗಳ ಸಾಮಾನ್ಯವಾದ ಪದ್ಧತಿಯಾಗಿದೆ. ಪರೀಕ್ಷಾಕಾಲದಲ್ಲಿ ಇಂತಹ ವಿದ್ಯಾರ್ಥಿಗಳು ಕೆಲವು ವೇಳೆ ಉತ್ತರವನ್ನು ಕೊಟ್ಟಾಗ್ಯೂ

"ಹಾ! ಪುತ್ರಕಾ! ಶಂಖಚೂಡ! ನಾಗಲೋಕರಾಜನೇ ನಿನ್ನನ್ನು ಹೀಗೆ ಕೊಲ್ಲಿಸುವಾಗ್ಗೆ, ಯಾವನುತಾನೆ ನಿನ್ನನ್ನು ರಕ್ಷಿಸಿ, ನನ್ನ ದುಃಖವನ್ನು ಹೋಗಲಾಡಿಸಬಲ್ಲನು" ಎಂದು ಹೇಳಿ ಹೇಳಿ ಮೂರ್ಛೆಹೋಗುತ್ತಿರುವದನ್ನು ಕಂಡು, "ಇದೇ ಒಳ್ಳೇಸಮಯವು" ಎಂದು ಅವಳ ಹತ್ತರ ಓಡಿ "ಅಮ್ಮಾ, ನಾನು, ನಾನು" ಎಂದು ಇದಿರುನಿಂತನು.

ಮುದುಕಿಯು—ಇತನೇ ಗರುಡನೆಂಬ ಭ್ರಾಂತಿಯಿಂದ ತನ್ನ ಬಟ್ಟೆಯನ್ನು ಮಗನಮೇಲೆ ಹೊದ್ದಿಸಿ, "ವಿನತಾಪುತ್ರನೇ, ಮುಂದೆ ನನ್ನನ್ನು ಭಕ್ಷಿಸು. ನಾಸುಕಿಯು ನನ್ನನ್ನು ಕಳುಹಿಸಿದನು. ಇವನನ್ನಲ್ಲ" ಎಂದು ಬೇಡಿಕೊಂಡಳು.

ಶಂಖಚೂಡನು "ಅಮ್ಮಾ, ಇವನು ಗರುತ್ಮಂತನಲ್ಲ. ಇವನು ಯಾವನೋ ಬಬ್ಬ ಮಹಾನುಭಾವನಂತೆ ತೋರುವದು. ಕನಿಕರಹುಟ್ಟಿ, ನನ್ನನ್ನು ರಕ್ಷಿಸಲು ಬಂದಿರುವನು. ಈತನ ಸೌಮ್ಯವಾದ ಆಕಾರವನ್ನು ನೋಡು" ಎಂದು ತಾಯಿಗೆ ತೋರಿಸಿದನು.

ಜೀಮೂತವಾಹನನನ್ನು ನೋಡಿ "ಅಪ್ಪಾ? ನೀನು ಬಹಳಕಾಲ ಜೀವಿಸಿ ಬಾಳು. ನೀನೆ ನಮ್ಮ ಶಂಖಚೂಡ ಅಲ್ಲವೆ ಅವನಿಗಿಂತಲೂ ಹೆಚ್ಚು. ಬಂಧುಜನಗಳೂ ಬಿಟ್ಟುಬಿಟ್ಟಿರುವಾಗ್ಗೆ, ನನ್ನ ಶಂಖಚೂಡನನ್ನು ರಕ್ಷಿಸಬಂದೆಯಲ್ಲಾ!" ಎಂದಳು.

ಶಂಖಚೂಡನು ಜಗದ್ವಿಪರೀತವಾದ ಇವನ ಕೆಲಸಕ್ಕೆ ಆಶ್ಚರ್ಯಪಟ್ಟು, "ಎಲೈ ಸಾಹಸಿಕಾಗ್ರಣೀ, ನೀನು ನನ್ನಲ್ಲಿ ಅಪರಿಮಿತವಾದ ದಯೆಯನ್ನು ತೋರಿಸಿದೆ. ಇಷ್ಟಕ್ಕೆಸಾಕು. ಇನ್ನು ಹೆಚ್ಚಾಗಿ ನನ್ನನ್ನು ನಿರ್ಬಂಧಿಸಬೇಡ" ಎಂದು ಕೇಳಿಕೊಂಡನು.

ಜೀಮೂತವಾಹನನು ಅವನ ಕೈಯನ್ನು ಹಿಡಿದುಕೊಂಡು, "ಅಯ್ಯಾ ಶಂಖಚೂಡ, ಬಹುಕಾಲದಿಂದ ಇಂಥಾ ಉಪಕಾರ ಮಾಡಬೇಕೆಂದಿದ್ದೆನು. ಈಗ ಅವಕಾಶವೊರಕಿತು. ಇದಕ್ಕೆ ವಿಘ್ನ ಮಾಡಬೇಡ. ವಧ್ಯಚಿಹ್ನವನ್ನು ಕರುಣಿಸು. ತಾಯಿಯೊಡನೆ ಸುಖದಿಂದ ಬಾಳು" ಎಂದು ಕಾಲಿನಮೇಲೆ ಬಿದ್ದು ವಧ್ಯಚಿಹ್ನವನ್ನು ಎಷ್ಟೆಷ್ಟು ಬೇಡುತ್ತಿದ್ದಾಗ್ಗೆ ಕೊಡದೆ, "ಗರುಡನು ಬರುವ ಸಮಯವಾಯಿತು. ಅಷ್ಟರೊಳಗೆ ಈ ಗೋಕರ್ಣೇಶ್ವರನನ್ನು ನಮಸ್ಕರಿಸಿ ಬರುವೆನು" ಎಂದು ತಾಯಿ

ವ್ಯಾಸಂಗವಿಧಾನ.

೨೩ನೇ ಪುಟದ ಶೇಷ.

೪. ಕಾರ್ಯಸಾಧನದಲ್ಲಿ ದಾಢ್ರ್ಯವಿರಬೇಕು.

ಹಿಮಾಲಯಪರ್ವತದಮೇಲೆ ಗಂಗಾಮೂಲದ ಸಮೀಪದಲ್ಲಿ ಬದರಿಕಾಶ್ರಮವೆಂಬ ಪುಣ್ಯಕ್ಷೇತ್ರದಲ್ಲಿ ಒಂದು ಪ್ರಸಿದ್ಧವಾದ ದೇವಾಲಯವಿರುವುದು. ಅಲ್ಲಿಗೆ ಹೋಗಬೇಕಾದರೆ ಅಯಾಸಕರವಾದ ದೀರ್ಘಪ್ರಯಾಣಮಾಡಬೇಕು. ಅನೇಕ ಯಾತ್ರಾರ್ಥಿಗಳು ಮಾರ್ಗವೈಷಮ್ಯದಿಂದ ಧೈರ್ಯಗೆಟ್ಟು ಭಗ್ನೋದ್ಯಮರಾಗುತ್ತಾರೆ. ವಿದ್ಯಾಮ್ಯಿ ದೇವತಾಲಯವು ಅದಕ್ಕಿಂತಲೂ ದುರ್ಗಮವಾದ ಉನ್ನತದೇಶದಲ್ಲಿರುವದೆಂದು ತಿಳಿಯಬೇಕು. ವಿದ್ಯಾರ್ಥಿಗಳಿಗೆ ಕಷ್ಟಗಳೊದಗೇ ಒದಗುತ್ತದೆ; ಆದರೂ ಎದೆಗುಂದದೆ ಅವುಗಳನ್ನು ಪರಿಹರಿಸಿಕೊಳ್ಳಬೇಕು. "ಅವಿರತಪ್ರಯತ್ನವು ಫಲಾಂತವಾಹುದು" ಎಂದು ದೃಢವಾಗಿ ನಂಬಿರಬೇಕು

೫. ಪ್ರತಿಯೊಂದು ಅಭ್ಯಾಸವೂ ಪೂರ್ಣವಾಗಿರಬೇಕು.

(ಅ) ಒಂದು ಕಾವ್ಯಭಾಗವನ್ನು ಕಂಠಪಾಠಮಾಡುವ ಒಬ್ಬ ಬಾಲಕನು ಅದನ್ನು ತಪ್ಪಿಲ್ಲದೆ ಹೇಳುವನೆಂದು ಅಭ್ಯಾಸಮಾಡಿದರೆ ಅವನು ಅದನ್ನು ಸ್ವಲ್ಪಕಾಲದಲ್ಲಿಯೇ ಮರೆತುಬಿಡುವನು.

(ಆ) ರೇಖಾಗಣಿತದ ಯಾವದಾದರೊಂದು ಪ್ರತಿಜ್ಞೆಯನ್ನು ಪೂರ್ವಾಪರ ಸಂದರ್ಭಗಳ ಸಮ್ಬನ್ಧವನ್ನು ತಿಳಿದುಕೊಳ್ಳದೆ ಅಭ್ಯಾಸಮಾಡಿದರೆ ಆ ಸಂಗತಿಯು ಸ್ಥಿರವಾಗಿ ಮನಸ್ಸಿನಲ್ಲಿ ನಿಲ್ಲಲಾರದು. ನಿಸ್ಸಂಶಯವಾಗಿಯೂ, ಸ್ಪಷ್ಟವಾಗಿಯೂ, ಕೂಲಂಕಷವಿಚಾರಮಾಡಿ ಅಭ್ಯಸ್ತವಾದ ಒಂದು ಪುಟವು ಅತುರದಿನ್ದ ಅಸ್ಪಷ್ಟವಾಗಿ ಅಭ್ಯಾಸಮಾಡಿದ ೧೦ ಪುಟಗಳಿಗಿಂತಲೂ ಹೆಚ್ಚು ಪ್ರಯೋಜನಕಾರಿಯಾಗುವುದು.

೬. ಕಾರ್ಯಸಿದ್ಧಿಗೆ ಸ್ವಪ್ರಯತ್ನವೇ ಮುಖ್ಯವಾದುದೆಂದು ತಿಳಿಯಬೇಕು.

ಭಾಷಾಗ್ರನ್ಥಗಳಲ್ಲಿನ ಕಠಿನ ವಾಕ್ಯಗಳ ಅರ್ಥವಿವರಣೆಯನ್ನೂ ಗಣಿತಪ್ರಶ್ನೆಗಳ ಉತ್ತರಗಳನ್ನೂ ಸಾಹಸಿಗಳಾದ ಸಹಪಾಠಿಗಳಿನ್ದ ಸ್ವಪ್ರಯತ್ನವಿಲ್ಲದೆ ತಿಳಿದುಕೊಳ್ಳಬೇಕೆಂಬುದು ಅಲಸರಾದ ವಿದ್ಯಾರ್ಥಿಗಳ ಸಾಮಾನ್ಯವಾದ ಪದ್ಧತಿಯಾಗಿದೆ. ಪರೀಕ್ಷಾಕಾಲದಲ್ಲಿ ಇಂತಹ ವಿದ್ಯಾರ್ಥಿಗಳು ಕೆಲವು ವೇಳೆ ಉತ್ತರವನ್ನು ಕೊಟ್ಟಾಗ್ಯೂ

ಕಾಲಕ್ರಮದಲ್ಲಿ ಇಂತಹ ಪದ್ಧತಿಯು ಬಹಳ ಕೇಡಿಗೆ ಕಾರಣವಾಗುವುದು. ರಾಮನಿಗೆ ಬದಲಾಗಿ ಭೀಮನು ಊಟಮಾಡಿದರೆ ರಾಮನು ಮಾಡತಕ್ಕ ವ್ಯಾಯಾಮವನ್ನು ಅವನಿಗೆ ಬದಲಾಗಿ ಭೀಮನೇ ಮಾಡಿದರೆ ರಾಮನಿಗುಂಟಾಗಬೇಕಾದ ಪ್ರಯೋಜನಗಳೆಲ್ಲ ಭೀಮನಿಗುಂಟಾಗುವುವು. ರಾಮನಿಗೆ ಶರೀರಪುಷ್ಟಿಯಾಗಲಿ ಶಕ್ತಿಯಾಗಲಿ ಬರಲಾರದು. ಇದರಂತೆಯೇ ವಿದ್ಯಾರ್ಥಿಗಳು ತಮ್ಮತಮ್ಮ ಮನಶ್ಶಕ್ತಿಗಳನ್ನು ಉಪಯೋಗಿಸದೆ ಸಹಪಾಠಿಗಳ ಸಹಾಯವನ್ನು ಕೋರುವುದು ಅವಿವೇಕಕಾರ್ಯವಾಗಿರುವುದು. ಇಂತಹ ಮಾರ್ಗದಲ್ಲಿ ಚಿರಕಾಲ ಸಂಚರಿಸುತ್ತಿರುವವನು ಕೊನೆಗೆ ಯಾವಕಾರ್ಯವನ್ನೂ ಇತರರ ಸಹಾಯವಿಲ್ಲದೆ ಸ್ವತಃ ಮಾಡಲು ಸಮರ್ಥನಾಗ-ವುದಿಲ್ಲ.

೩. ಓದಿದ ಸಂಗತಿಗಳನ್ನು ಪುನಃ ಪುನರಾವರ್ತನೆಯನ್ನು ಏಡಬೇಕು.

ಸಾಮಾನ್ಯವಾಗಿ ನಾವು ಒಂದು ಸಂಗತಿಯನ್ನು ಹೊಸದಾಗಿ ತಿಳಿದುಕೊಂಡ್ದರೆ ಅದು ನಾವು ಪೂರ್ವದಲ್ಲಿ ತಿಳಿದುಕೊಂಡಿದ್ದ ಸಂಗತಿಗಳ ವಿಸ್ಮೃತಿಗೆ ಸ್ವಲ್ಪಮಟ್ಟಿಗೆ ಕಾರಣನಾಗುವುದು. ಆದುದರಿಂದ ಮನಸ್ಸಿಗೆ ಹತ್ತಿದ ಸಂಗತಿಯನ್ನು ಮರೆಯದಂತೆ ಪುನಃ ಪುನರಾವರ್ತನೆಯಿಂದ ಸ್ಥಿರಪಡಿಸುವುದು. ಅತ್ಯಂತ ಅವಶ್ಯಕವಾಗಿದೆ.

ಈ ಕ್ರಮದಿಂದ ಸಮಸ್ತ ವಿಷಯಗಳಲ್ಲಿಯೂ ನಿಸ್ಸಂಶಯವಾದ ಜ್ಞಾನವು ಕ್ರಮೇಣ ಉಂಟಾಗಿ ಸ್ಥಿರವಾಗಿ ನಿಲ್ಲುವುದು. ಹೀಗೆ ಮಾಡದೆ ಒಂದಾವರ್ತಿ ಪರಿಷ್ಕಾರವಾಗಿ ತಿಳಿದ ಅಂಶವನ್ನು ಅಸಡ್ಡೆಮಾಡಿಬಿಡುವವನ ವಿಷಯಜ್ಞಾನವು ಕ್ರಮೇಣ ಮಲಿನವಾಗಿ ಇಬ್ಬನಿಯಲ್ಲಿ ನಿಂತಿರುವವನ ಸುತ್ತಮುತ್ತಲಿರುವ ವಸ್ತುಗಳ ಜ್ಞಾನದಂತೆ ಅಸ್ಪುಟವಾಗುವುದು.

೪ ವಿಷಯಾಭ್ಯಾಸದಲ್ಲಿ ಲೇಖನವು ವಿಶೇಷವಾಗಿರಲಿ.

ಅಭ್ಯಸನೀಯ ವಿಷಯಗಳ ಲೇಖನವು ವಿದ್ಯಾರ್ಥಿದಶಾದಲ್ಲೆಲ್ಲಾ ಬಹಳ ಪ್ರಯೋಜನಕಾರಿಯಾಗಿರುವುದು ಯಾವ ಪಾಠವನ್ನಾದರೂ, ಕರ್ಣಮಾರ್ಗದಿಂದಲೂ, ನೇತ್ರಮಾರ್ಗದಿಂದಲೂ, ಮನಸ್ಸಿನಲ್ಲಿ ಪ್ರವೇಶಿಸುವಂತೆ ಏಕಾಗ್ರಚಿತ್ತನಾಗಿ ಗಟ್ಟಿಯಾಗಿ ಓದಿ ತರುವಾಯ ಪುಸ್ತಕವನ್ನು ಅಜಿಗಿಟ್ಟು, ಅದನ್ನೆಲ್ಲಾ ಸಮಗ್ರವಾಗಿ ಬರೆಯಬೇಕು.

ಈ ಕ್ರಮದಲ್ಲಿ ನೇತ್ರಗಳನ್ನೂ, ಕರ್ಣಗಳನ್ನೂ, ತಮ್ಮ ತಮ್ಮ ವ್ಯಾಪಾರಗಳನ್ನು ನಡಿಸುವಂತೆ ಮಾಡುವುದಲ್ಲದೆ, ಮನಸ್ಸನ್ನು ಪ್ರತಿಯೊಂದಕ್ಷರ, ಪ್ರತಿ

ಯೊಂದು ಶಬ್ದ, ಪ್ರತಿಯೊಂದು ಧ್ವನಿ ಇವುಗಳನ್ನುಕ್ರಮವಾಗಿ ಆಲೋಚಿಸುವಂತೆ ಮಾಡುತ್ತದೆ. ಈ ಕ್ರಮವು ಮೊದಲು ವಿಶೇಷಕಾಲವನ್ನು ತಿಂದಾಗ್ಯೂ ಕಾರ್ಯಸಿದ್ಧಿಗೆ ಮುಖ್ಯಕಾರಣವಾಗುವುದು. ಒಂದುವಿಷಯದಲ್ಲಿ ಒಬ್ಬ ವಿದ್ಯಾರ್ಥಿಗೆ ಎಷ್ಟರಮಟ್ಟಿಗೆ ಪರಿಚಯವಿರುವದೆಂದು ತಿಳಿಯಬೇಕಾದರೆ ಲೇಖನವೇ ಮುಖ್ಯಸಾಧನವು. ಒಬ್ಬನು ಒಂದುವಿಷಯವನ್ನು ಕರತಲಾಮಲಕದಂತೆ ಪರಿಷ್ಕಾರವಾಗಿ ತಿಳಿದಿರುವನೆಂದು ಯೋಚಿಸಬಹುದು. ತಾನು ತಿಳಿದಿರುವ ಸಂಗತಿಯನ್ನೇ ಪತ್ರದ್ವಾರಾ ತಿಳಿಸಲು ಪ್ರಯತ್ನಿಸಿದಾಗ ವಿಶೇಷ ತಪ್ಪುಗಳನ್ನು ಮಾಡಬಹುದು. ಸಾಮಾನ್ಯವಾಗಿ ಸಕಲ ವಿದ್ಯಾನಿಲಯಗಳ ಪರೀಕ್ಷೆಗಳೆಲ್ಲಾ ಲಿಖಿತಮೂಲಕವಾಗಿಯೇ ನಡೆಯುವ್ದರಿಂದ ವಿಶೇಷವಾದ ಲೇಖನಾಭ್ಯಾಸವು ವಿದ್ಯಾರ್ಥಿಯ ಕಾರ್ಯಸಿದ್ಧಿಗೆ ಅತ್ಯವಶ್ಯಕವಾಗಿರುವ್ದು.

೯ ದೇವರ ಅನುಗ್ರಹವನ್ನು ಬೇಡು.

ಇದನ್ನು ಅನೇಕರು ಅಲಕ್ಷ್ಯಮಾಡುತ್ತಾರೆ. ಆದಾಗ್ಯೂ ವಿದ್ಯಾರ್ಥಿಯ ಕಾರ್ಯಸಿದ್ಧಿಗೆ ಮುಖ್ಯವಾದ ಕಾರಣಗಳಲ್ಲಿದೊಂದೆಂದು ಖಂಡಿತವಾಗಿ ತಿಳಿಯಬೇಕು. ಏಕೆಂದರೆ; ದೇವರ ಸಾಹಾಯ್ಯವಿಲ್ಲದೆ ಕೇವಲ ಮಾನುಷಪ್ರಯತ್ನದಿಂದ ಎಷ್ಟು ಅಲ್ಪಕಾರ್ಯವಾದರೂ ಸಿದ್ಧಿಸಲಾರದು. "ಕ್ರಮವಾದ ಅಭ್ಯಾಸವೆಂದರೆ, ಕ್ರಮವಾದ ದೇವತಾಪಾರ್ಥನೆ" ಎಂದು ಒಬ್ಬಾನೊಬ್ಬ ಪುರಾತನ ಗ್ರಂಥಕರ್ತನು ಹೇಳುತ್ತಾನೆ. ಆದುದರಿಂದಲೇ ಆಸ್ತಿಕ ಮತಾವಲಂಬಿಗಳೆಲ್ಲರೂ ದೇವತಾರಾಧನಪೂರಸ್ಸರವಾಗಿ ವಿದ್ಯಾರಂಭ ಮಾಡುವದಲ್ಲದೆ, ಯಾವ ಗ್ರಂಥವನ್ನು ಬರೆಯಬೇಕಾದರೂ ಆದಿಯಲ್ಲಿ ಮಂಗಳಾಚರಣೆಯೆಂಬ ದೇವತಾಪಾರ್ಥನೆಯನ್ನು ಮಾಡುತ್ತಾರೆ.

ಬಿ. ರಂಗರಾವ್,
ಹೆಡ್‌ಮಾಸ್ಟರ್, ಆಂಗ್ಲೊವರ್ನಾಕ್ಯುಲರ್ ಸ್ಕೂಲ್,
ಚಿಕ್ಕನಾಯಕನಹಳ್ಳಿ.

ಕಾವೇರೀ ನದಿ.

"ಕಾವೇರಿ ಧಾರಾಕಾಮಧೇನುಸೇವಿಸಪ್ರದು ಪ್ರಸ್ಥಲೇ..." ಇತ್ಯಾದಿ

ಅನೇಕ ಮಹಾನದಿಗಳಿಂತೆ ಈ ಕಾವೇರೀನದಿಯೂ ಪಶ್ಚಿಮ ಘಟ್ಟ ಸಹ್ಯಪರ್ವತವಾಗಿ ಉನ್ನತವಾದರೂ, ಬಯಕ್ಕಾಬರುಕ್ಕಾ ಗಾಯಿತ್ರಿ ಮೊದಲಾದ ಅನೇಕ ಉಪನದಿಗಳೊಡನೆ ಸೇರಿಕೊಂಡು ಒಂದೊಂದೆಡೆ ಮಹಾರಮ್ಯಸ್ಥಳವಾದ ಪ್ರವಾಹ ರೂಪವಾಗಿ ಹರಿದು, ಅಲ್ಲಲ್ಲಿ ದ್ವೀಪಗಳನ್ನು ಕಲ್ಪಿಸಿ, ತಟಾಕಗಳನ್ನು ಕುಂಟಿ, ಕೆಲವೆಡೆ ಮಹಾಜಲಪ್ರಪಾತವಾಗಿ ಭೂಮಿಯ ನಾನಾಕಾಶೆಗಳಾಗಿ ಒಡೆದು ಪುನಃ ಕಾಂತಿಪಥ ಯಸ್ಸ್ವಿಯಾದಿ ಕಡೆಗೆ ಸಮುದ್ರಪ್ರವಾಹವಾಗಿ ಸಂಗಮವಾಗಿ ಹೋಗುವುದು. ಉತ್ಪತ್ತಿಸ್ಥಾನದಿಂದ ಸಂಗಮಸ್ಥಾನದ ವರೆಗೂ ಈ ನದೀತೀರದಲ್ಲಿಯೂ ಉಪನದಿಗಳ ತೀರದಲ್ಲಿಯೂ ಅಲ್ಲಲ್ಲಿ ಕಟ್ಟೆಗಳನ್ನು ಕಟ್ಟಿ ತಿರುಗಿಸಿರಕ್ಕೆ ಅಸಂಖ್ಯಾತವಾದ ಕಾಲುವೆಗಳಿಂದ ಬಹು ತಾಲೂಕುಗಳಿಂದಲೂ ಫಲಶಾಲಿಗಳಾಗಿರುವ ಶಾಲಿವನಗಳನ್ನೂ ಬನಸಂಚಾರಿಗಳಾದ ಗಂಧವನಗಳನ್ನೂ ತೀರಪ್ರದೇಶಗಳಲ್ಲಿ ವಾಸಿಸುತ್ತಾ ಇದನ್ನು ಸೇವಿಸುತ್ತಿರುವವರಿಗೆ ಅನ್ನವಸನಾದಿಗಳಿಗಿರುತಕ್ಕ ಅನುಕೂಲ್ಯವನ್ನೂ ತೀರಸ್ಥಗಳಾದ ಪ್ರಸ್ತಸ್ತೋತ್ರಗಳಿಂದ ಮತ್ತು ವಾಸ್ತುಸಾರಸಾಧನಗಳನ್ನೂ ಪರೀಕ್ಷಿಸಿ ನೋಡಿದಲಾಗಿ, ಈ ದಕ್ಷಿಣದೇಶದ ನದಿಗಳಲ್ಲಿ ಇದೊಂದು ಗಣ್ಯನದಿಯೆಂದು ಹೇಳುವುದಕ್ಕೆ ಪಾತ್ರವಾಗಿ ನಮ್ಮ ಪ್ರಿಯನೂ ಸ್ವೀಯಪಲ್ಲಿ ಇದು ಪವಿತ್ರಪ್ರವಾಹವಾಗಿದೆಯೆಂದು ಒಪ್ಪಿಕೊಳ್ಳುವುದಕ್ಕೂ ಏನೂ ಸಂಶಯವಿಲ್ಲ. ಈ ವಿಷಯದ ಮಹಿಮೆಗೆ ಉದಾಹರಣವಾಗಿರುವುದರಿಂದಲೇ ಇದೊಂದು ಪ್ರೇಮನದಿಯೆಂದು ಭಾವಿಸಿ, ನಮ್ಮ್ಮೆಯ ಕಾವೇರೀ ಮಹಾತ್ಮ್ಯವೇ ಮೊದಲಾದ ಪುರಾಣಗಳನ್ನು ಬರೆದಿಟ್ಟಿರುವುದು ಅಶ್ಚರ್ಯಕರವಲ್ಲ.

ಪುರಾಣಕಥಿತವಾದ ಈ ನದಿಯ ಉತ್ಪತ್ತಿಕ್ರಮವೀರೀತಿಯಿಂದ :— ಪ್ರಮದ್ವರಾ ದೇವಿಯಾಗಿರುವಳು ಒಂದಾನೊಂದು ಕಾಲದಲ್ಲಿ ಲೋಕಕಲ್ಯಾಣಕ್ಕಾಗಿ ಕಡೆಗೋಲಾಗಿರುವ ಆದಿಶೇಷನ ಸಹಸ್ರ ಕಡೆಯುವ ಹಗ್ಗವನ್ನಾಗಿಯೂ ಮಾಡಿಕೊಂಡು ಪಾಲಾಜ್ಞೆಯನ್ನು ಮೇರೆಯಾಕ್ಕಲು ಕಾಮಧೇನು ಕಲ್ಪವೃಕ್ಷಾದಿಗಳೊಡನೆ ಅಮೃತವೂ ಉತ್ಪಾದಿತವಾಗಲು ಬಲಾಢ್ಯರಾದ ರಾಕ್ಷಸರು ಬಲಾತ್ಕಾರವಾಗಿ ಅಮೃತಕಲಶವನ್ನು ಪಹರಿಸುವರು. ಆಗ ಮೋಹಿನಿಯಾಗಿ ಪ್ರತ್ಯಕ್ಷಳಾಗಿ ಬಾಯಲ್ಲಿ ಅಕ್ಷಯಕಾಳು ಹಾಕಿಕೊಂಡು ವಿಷ್ಣುವಿನ ಬಳಿಗೆ ಬಂದು

ಅತನ ಪಾದಗಳನ್ನು ಗಟ್ಟಿಯಾಗಿ ಹಿಡಿದು ಶರಣವನ್ನೈದಲು, ಆ ದನುಜಾರಿ ಕರುಣಾ ರ್ದ್ರಹೃದಯನಾಗಿ ಅವರಿಗೆ ಅಭಯಪ್ರದಾನವನ್ನು ಮಾಡಿ ತನ್ನ ಮೊಯ್ಯನ್ನು ಕಳಹಿಸಿಕೊಟ್ಟನು ಆ ವಿಷ್ಣುಮೊಯ್ ಭುವನೈಕಮೋಹನಾಕಾರೆಯೂದ ಮೋಹಿನಿಯ ಅವತಾರವೆನ್ನು ತಾಳಿ ಬಂದು, ತನ್ನ ನಿರತಿಶಯಸೌಂದರ್ಯದಿಂದ ಅಸುರರನ್ನು ಮರುಳ್ಗೊಳಿಸಿ, ಅವರಿಂದ ಅಮೃತಕಲಶವನ್ನಿಳ್ದುಕೊಂಡು ದೇವತೆಗಳ ಅಧೀನಮಾಡಿ. ಬಳಿಕ ತಾನು ಕಾವೇರೀನದಿಯು ಉತ್ಪತ್ತಿಸ್ಥಾನದ ಬಳಿ ಇರುವ ಬ್ರಹ್ಮಗಿರಿಗೆ ಹೋಗಿ ನಿಲಸಿಕೊಂಡು, ಒಂದು ಗುಹಾರೂಪವೆನ್ನುಧರಿಸಿತು. ಮೊಯ್ ಅವತರಿಸಿದಾಗಲೆ ಲಕ್ಷ್ಮೀದೇವಿ ಸಾರ್ವತ್ಯಂಶಭೂತೆಯೂದ ಲೋಪಾಮುದ್ರೆಯೆಂಬ ದೇವಕನ್ಯೆಯನ್ನು ಕಳುಹಿಸಿಕೊಟ್ಟಳು. ಈಕೆಯನ್ನು ಬ್ರಹ್ಮನು ತನ್ನ ಮಗಳಂತೆ ಪೋಷಿಸುತ್ತಿದ್ದನು.

ಹೀಗಿರುವಲ್ಲಿ ಕವೇರನೆಂಬ ಮುನಿಶ್ರೇಷ್ಠನೊಬ್ಬನು ಬ್ರಹ್ಮಗಿರಿಗೆ ಹೋಗಿ ಮಕ್ಕಳನ್ನು ಬಯಸಿ ಬ್ರಹ್ಮನನ್ನು ಕುರಿತು ಘೋರವಾದ ತಪಸ್ಸನ್ನು ಮಾಡಲು ಭಕ್ತಾಭೀಷ್ಟನಾದ ಬ್ರಹ್ಮನು ಅತನ ತಪಸ್ಸಿಗೆ ಮೆಚ್ಚಿ ಲೋಪಾಮುದ್ರೆಯನ್ನು ಪುತ್ರಿಯಾಗಿ ಕರುಣಿಸಿ ಅಂತರ್ಧಾನನಾದನು ಇದರಿಂದಲೇ ಅವಗೆ ಕಾವೇರಿಯೆಂಬ ಹೆಸರಾಯಿತು. ಬಳಿಕ ಆಕೆ ನದೀರೂಪವನ್ನು ಪಡೆದು ಭೂಲೋಕಕ್ಕೆಲ್ಲ ಪೋಷ್ಯವನ್ನು ಕಲ್ಪಿಸಿ ಆ ಮೂಲಕವಾಗಿ ಪ್ರಾಪ್ತಿಸುವ ಪುಣ್ಯವನ್ನೆಲ್ಲ ತಂದೆಯೂದ ಕವೇರಮುನಿಗೆ ಕಲ್ಪಿಸಿಕೊಡಬೇಕೆಂದು ಮನಸಂದು, ತನ್ನಲ್ಲಿ ಸ್ನಾನಮಾಡಿದವರ ಪಾಪಗಳನ್ನೆಲ್ಲ ಪರಿಹಾರವಾಗುವಂತಹ ಶಕ್ತಿಯನ್ನು ತನಗುಂಟುಮಾಡಿಕೊಡಬೇಕೆಂದು ಬ್ರಹ್ಮನನ್ನು ಕುರಿತ ತಪಸ್ಸುಮಾಡಿದಳು. ಬ್ರಹ್ಮನೂ ಆಕೆಯ ಕೋರಿಕೆಯನ್ನು ಸಲ್ಲಿಸಿದನು.

ಇಂತಿರಲು ಅಗಸ್ತ್ಯಮಹರ್ಷಿ ಒಂದಾನೊಂದುದಿನ ತಪೋನಿರತೆಯಾದ ಲೋಪಾಮುದ್ರೆಯನ್ನು ಕಂಡು ಮೋಹಿತನಾಗಿ ತನ್ನನ್ನು ಮದುವೆಯಾಗಬೇಕೆಂದು ಆಕೆಯನ್ನು ಕೇಳಿದನು ಅದಕ್ಕೆ ಆಕೆ ತನ್ನೆ ಮನಸ್ಸಂಕಲ್ಪಕ್ಕೆ ಭಂಗಬಂತಲ್ಲಾ ಎಂದು ಚಿಂತಿಸಿದರೂ, ಭಯಶೋಕಭೀತೆಯಾಗಿ, ಅತನ ಮಾತಿಗೊಪ್ಪಿ—ಅದರೆ ನನ್ನೆಮ್ಮೆ ಪಕಾರಾಗಿನಿಯಾಗಿ ಬಿಟ್ಟಕಾಲದಲ್ಲಿ ನಿಮ್ಮನ್ನು ಬಿಟ್ಟಿಹೋಗುತ್ತೇನೆಂದು ಹೇಳಿದಳ ಬಳಿಕ ಒಂದಾನೊಂದುದಿನ ಅಗಸ್ತ್ಯನು ಆಕೆಯನ್ನು ತನ್ನೆ ಸಹೋದರದಾಳಿಯಲ್ಲಿ ಕಾಪ್ಪು ಶಿಷ್ಯನನ್ನು ಕಾವಲಿಟ್ಟು, ಕನಖೆಯೆಂಬ ನದಿಗೆ ಸ್ನಾನಕ್ಕೆ ಹೋದನು. ಆ

ಳಕೆ ತನ್ನ ಪೂರ್ತಿ ಸಂಕಲ್ಪಸಿದ್ಧಿಗೆ ಕಾಲವೊದಗಿದ್ದನ್ನು ಕಂಡು, ಗಕ್ಕನೆ ಆ ಸೋದರರ ಬಲ್ಲ ಮುಳುಗಿ ಒಡನೆ ನದೀರೂಪಿಣಿಯಾಗಿ ನಿರ್ಗಮಿಸಿದಳು. ಕೂಡಲೆ ಶಿಷ್ಯರು ಆಕೆ ಯುಮೊರ್ಗವನ್ನು ನಿರೋಧಿಸುವುದಕ್ಕೆ ಯತ್ನಿಸಲು, ಗುಪ್ತಗಾಮಿನಿಯೂಗಿ ಹೊರಟು ಪುನಃ ಭಾಗಮಂಡಲದಲ್ಲಿ ವೀಲಕ್ಕೆ ಉಪ್ಪರಿಸಿ ಮುಂದಕ್ಕೆ ಹರಿದಳು. ಇಷ್ಟುಹೊತ್ತಿಗೆ ಅಗಸ್ತ್ಯನು ಹಿಂತಿರುಗಿಬಂದು, ವಿದಿತವೃತ್ತಾಂತನಾಗಿ ಕಾವೇರಿಯನ್ನು ಹಿಂದಟ್ಟಿ, ತನ್ನ ಅಪರಾಧವನ್ನು ಮನ್ನಿಸಬೇಕೆಂದೂ, ಹಿಂತಿರುಗಿಬಂದು ತನ್ನನ್ನು ಅಗಲದಿರಬೇಕೆಂದೂ ಪ್ರಾರ್ಥಿಸಿದನು ಆಗ ಆಕೆ ತನ್ನ ಸಂಕಲ್ಪವನ್ನು ಬಿಡುವುದಕ್ಕಾಗಲಿ, ಅಗಸ್ತ್ಯನಿಗೆ ಖೇದವನ್ನುಂಟುಮಾಡುವುದಕ್ಕಾಗಲಿ ಇಷ್ಟವಿಲ್ಲದೆ, ತಾನೇ ಎರಡುರೂಪಗಳನ್ನು ಧರಿಸಿ, ಅರ್ಧಾಂಶದಿಂದ ಸ್ತ್ರೀರೂಪಿಣಿಯೂಗಿ ಅಗಸ್ತ್ಯನಬಳಿಯಲ್ಲಿ ನಿಂತು, ಉಳಿದರ್ಧಾಂಶದಿಂದ ನದೀರೂಪಿಣಿಯೂಗಿ ಗಮಿಸಿದಳು ಆಗ ಅಗಸ್ತ್ಯಮಹರ್ಷಿ ಪೂರ್ವಸಮುದ್ರಸಂಗಮವಾಗುವುದರೊಳಗೆ ಇಂತಹ ಕ್ಷೇತ್ರಗಳ ಮುಖಾಂತರವಾಗಿ ಯೇ ನೀನು ಪ್ರವಹಿಸಬೇಕೆಂದು ಆಕೆಗೆ ಕಟ್ಟುಮಾಡಿದನು.

ಈ ಕಾವೇರ್ಯುತ್ಪತ್ತಿಗೆ ಮೊದಲೇ ಸುಯಜ್ಞನೆಂಬ ಬ್ರಾಹ್ಮಣನೊಬ್ಬನು ಕಾವೇರೀಮೂಲದಬಳಿಯಲ್ಲಿರುವ ಥಲತ್ರೀಪುರದಲ್ಲಿ ವಿಷ್ಣುವನ್ನು ಕುರಿತು ತಪಸ್ಸು ಮಾಡಿದನು. ವಿಷ್ಣು ಪ್ರತ್ಯಕ್ಷನಾಗಿ ಏನುವರಬೇಕು ಎಂದು ಕೇಳಲು, ಆತನು ತನಗೆ ಮುಕ್ತಿಯೂಗಬೇಕೆಂದೂ ತನ್ನಿಂದ ಲೋಕಕ್ಕೊಂದುಪಕಾರವಾಗಬೇಕೆಂದೂ, ಬೇಡಿಕೊಂಡನು. ಆಗ ಆತನಿಗೆ ಸಜ್ಯೋತಿಯೆಂಬ ಪುತ್ರಿಯನ್ನು, ಕೊಟ್ಟು, ಆ ಪರೋಪಕಾರಿಣಿಯಿಂದಾಗುವ ಪುಣ್ಯವು ಆತನಿಗೆ ಸೇರುವುದೆಂದು ತಿಳಿಸಿ, ಆಕೆಯನ್ನು ಅಗ್ನಿಪರ್ವತಕ್ಕೆ ಕರೆದುಕೊಂಡುಹೋಗಿ ಅಲ್ಲಿರುವ ದೇವೇಂದ್ರಪರಿಚಾರಿಣಿಯೂದ ಕನಕೆಯೊಡನೆ ಬಿಡತಕ್ಕದ್ದೆಂದು ಆಜ್ಞಾಪಿಸಿದನು. ಆತನೂ ಆರೀತಿಯಲ್ಲಿಯೇ ನೆರವೇರಿಸಿ ತಪೋನಿರತನಾದನು. ಒಂದುದಿನ ದೇವೇಂದ್ರನು ಸಜ್ಯೋತಿಯನ್ನು ಕಂಡು ತನ್ನನ್ನು ಮದುವೆಯೂಗಬೇಕೆಂದು ಆಕೆಯನ್ನು ಕೇಳಿಕೊಂಡನು. ಅದಕ್ಕೆ ಆಕೆ ಅನಿವಾರ್ಯಸಂದರ್ಭದಿಂದ ಒಪ್ಪಿಕೊಂಡರೂ, ರಹಸ್ಯವಾಗಿ ತನ್ನ ಇಷ್ಟವನ್ನು ತನ್ನ ಸಖಿಗೆ ತಿಳಿಸಿದಳು. ಒಡನೆ ಇಬ್ಬರೂ ಮಾತನಾಡಿಕೊಂಡು ನದೀರೂಪವಾಗಿ ಅಲ್ಲಿಂದ ಹೊರಟರು. ಬಳಿಕ ವಂಚಕನಾದ ಇಂದ್ರನು ಕೋಪಿಸಿ ಸಜ್ಯೋತಿಗೆ " ನಿನ್ನ ಜಲರಾಶಿ ಇಂಗಿಹೋಗಲಿ " ಎಂದು ಶಾಪವನ್ನು ಕೊಟ್ಟನು. ಆಗ ಆಕೆ ಭಯಕಂಪಿತೆಯೂಗಿ

ಇಂದ್ರನನ್ನು ಕ್ಷಮಿಸಬೇಕೆಂದು ದೈನ್ಯದಿಂದ ಬೇಡಿಕೊಳ್ಳಲು, ಕರುಣಹುಟ್ಟಿ ಇಂದ್ರನು "ಕಾವೇರಿ ಹುಟ್ಟಿದಾಗ ನೀವಿಬ್ಬರೂ ಆಕೆಯೊಡನೆ ಸೇರಿ, ಆಕೆಯ ಜೊತೆಯಲ್ಲಿಯೇ ಸಮುದ್ರವನ್ನು ಸೇರಿ" ಎಂದು ವಿಶಾಪವನ್ನಿತ್ತನು ಸಶೇಷ.

ಕನ್ನಡಭಾಷೆ.

ಕಾಲ 3 ಗಂಟೆ) (ತರಗತಿ V.

I ಈ ಪದ್ಯಗಳ ಅರ್ಥವನ್ನು ವಾಕ್ಯರೂಪದಲ್ಲಿ ಬರೆಯಿರಿ ?

(1) ತರಣಿನಂದನಕೇಳುದನುಜೇ । ಶ್ವರನಸಚಿವನುತಾನುನೀತಿಯ । ನರುಹು ವೆನುನಿಷ್ಕಾರಣದೊಳಗ್ರಜನಘಾತಿಸಿದಾ । ನರನನೇಹವನೆಚ್ಚಿ ಬೆಕ್ಕನೆ । ಬಿರುತೆಪಗಯವ ನೆಂಬುದನುನೀ । ನರಿಯೆದಶಕಂಧರನಸಾರ್ವ್ರದುಬುದ್ಧಿನಿನಗೆಂದ ॥

(2) ಸರಸಿರುಹಸಂಭವನಮೆಚ್ಚಿಸಿ । ವರವಪಡೆಗುಮಹೇಶನದ್ರಿಯ । ಬರದಿನೆಗಪಿವ-ಹಾಯುಧವನಾರ್ಜಿಸಿದಿಶಾಧಿಪರ ॥ ಧುರದಿವಾರಿಸಿಪ್ರಷ್ಟೈಕವಕೋ ಡರಿಭಯಂಕರರಾಕ್ಷಸಾಧೀಶ್ವರನಮೈತ್ರಿಯುಬೆಳಿಸಿಬದುಕಲುಬಹುದುನೀನೆಂದ ॥

II ಈ ವಾಕ್ಯಗಳ ತಾತ್ಪರ್ಯವೇನು ? (1) ಆಕೆಯನೇತ್ರಗಳನ್ನು ನೋಡಿದರೆ ಭಾಗ್ಯದೇವತೆ ಅವುಗಳಲ್ಲಿ ಒಕ್ಕಲಿರುವಂತೆ ಕಾಣುವದು.

(2) ಎಲ್ಲಿಯೂ ಅತ್ತೆಯಿಲ್ಲದಸೊಸೆ ಉತ್ತಮಳು, ಸೊಸೆಯಿಲ್ಲದತ್ತೆ ಗುಣವಂತಳು.

III (1) ಈ ಶಬ್ದಗಳ ಅವಯವಾರ್ಥವೆನ್ನು ಹೇಳಿ ? ಪುರಾಕೃತಪುಣ್ಯವಿಭಾವರೀಚರ, ಮುತ್ತೈದೆ, ರಾಜಶೇಖರ, ಶಾಪ್ಯನಾದ, ಈಶ್ವರಾಂಶಸಂಭೂತ,

(2) ಈ ಶಬ್ದಗಳ ಅರ್ಥವನ್ನು ವಿವರಿಸಿಹೇಳಿ ? ಚಾಂದ್ರಮಾನ, ದಕ್ಷಿಣಾಯಣ, ನೋಂತವರು, ಪಂಚಪೂಜೆ,

(3) ವಿಧವೆ, ನಿಷ್ಕಾರಣ, ಪ್ರವಕ್ತರು, ಈ ಶಬ್ದಗಳಲ್ಲಿರುವ ಪ್ರತ್ಯಯಗಳ ಅರ್ಥವೇನು ?

(4) ಈ ಶಬ್ದಗಳ ಅರ್ಥವೆನ್ನು ಹೇಳಿ ? ಸಾಯಕ, ಧುರ, ಸಣಸು, ಮಿಹಿರ, ಪುಂಗವ, ಎರಗು, ಪ್ರೋತ, ಕಟಕ, ನೆಗಪು

V (I) ಕಾಕತಾಳನ್ಯಾಯ, ಗುಣಾಕ್ಷರನ್ಯಾಯ ಅಂದರೇನು ? ಇವು ನಿಮ್ಮ ಪರೀಕ್ಷಾಗ್ರಂಥದಲ್ಲಿ ಯಾವ ಸಂದರ್ಭದಲ್ಲಿ ಉಪಯೋಗಿಸಲ್ಪಟ್ಟಿವೆ ?

[2] ದಶಾವತಾರಗಳು ಯಾವವು? ಅವನ್ನೆಲ್ಲಾ ಬರೆಯಿರಿ?

[3] ಈ ಶಬ್ದಗಳಲ್ಲಿರುವ ಸಮಾಸಗಳ ಹೆಸರನ್ನು ಹೇಳಿ? ಲಂಕಾಪುರ, ಕೋಪಶಿಖಿ, ಮೈದೋರದೆ, ರವಿಶಶಿಮಂಡಲಗಳು, ಗಂಭೀರಾಂಬುಧಿ, ರಘುವಂಶ,

[4] ಈ ಸಮಾಸಶಬ್ದಗಳಲ್ಲಿರುವ ಸಂಧಿಯಹೆಸರೇನು? ತಜ್ಜ್ಞೇಷ, ಎಡನ್ನೈನೀತೋತ್ಸವ, ಪರ್ವತಾಗ್ರ,

[5] ಶಾರ್ದೂಲ, ಶುಕ, ನಳ, ಇವರು ಯಾರು?

II ನೇ ಭಾಗ

I (1) ಕನ್ನಡವಲ್ಲಿಮಾತ್ರ ಇರುವ ಅಕ್ಷರಗಳು ಯಾವವು?

(2) ಸಂಯುಕ್ತಾಕ್ಷರ-ಗುಣಿತಾಕ್ಷರ, ಪ್ರಕೃತಿ, ಪ್ರಾತಿಪದಿಕ, ಆಗಮ, ಆದೇಶ, ಸಂಖ್ಯಾವಾಚಕ, ಸಂಖ್ಯೆಯವಾಚಕ, ಇವುಗಳ ಅರ್ಥವ್ಯತ್ಯಾಸವೇನು?

(3) ಕಂಠತಾಲವ್ಯಗಳು, ಮೂರ್ಧನ್ಯಗಳು, ಇವು ಯಾವವು?

II (1) ಈಱು, ಆಱು, ಸದ್ವಂಶ, ಕತ್ರರ್ಥ, ವರ್ಷರ್ತು, ತಿರ್ಯಕ್ಪರೀಕ್ಷ,—ಇವುಗಳಲ್ಲಿ ಯಾವಸೂತ್ರಗಳಪ್ರಕಾರ ಸಂಧಿಯಾಗಿದೆ? ಸಂಧಿಕಾರ್ಯವೇನು?

(2) ಆ ಅಂಗತಿ. ಅವನೇ ಇವನು. ಇಲ್ಲಿ ಯಾವಸಂಧಿಕಾರ್ಯ ಬರಬೇಕಾಗಿತ್ತು? ಯಾಕಕ್ಕೆ ಬರಲಿಲ್ಲ.

(3) ವಾಚ್ಯಲಿಂಗ, ಸ್ತ್ರೀನಪುಂಸಕ, ನಾಲ್ಕುವಿಧವಾದ ಪ್ರಾತಿಪದಕಗಳು ಇವುಗಳಿಗೆ ಎರಡೆರಡು ಉದಾಹರಣೆಗನ್ನು ಕೊಡುವದು.

III (1) ಕಾರಕವೆಂದರೇನು? ಅದರ ಭೇದಗಳು ಯಾವವು?

(2) ಅಂದಿರ, ವರು, ಅವು, ಎಂಬ ಆಗಮಗಳು, ಎಂಥಶಬ್ದಗಳಿಗೆ ಯಾವಲಿಂಗದಲ್ಲಿ ಬರುವವು? ಉದಾಹರಣೆಯೊಡನೆ ಹೇಳುವದು.

IV (1) ಊರದೆಸೆಯಿಂದ, ಅದಕ್ಕೆ, ಮಗೂ, ಕಿರಿದರಲ್ಲಿ, ದೊರೆಗೆ, ಈರೂಪಗಳು ಹೇಗಾದವು? ಪ್ರಕೃತಿಪ್ರತ್ಯಯ ವಿಭಾಗಮಾಡಿ ವಿವರಿಸುವದು.

(2) 'ಏನು' ಎಂಬ ಶಬ್ದಕ್ಕೆ ಎಲ್ಲಾ ವಿಭಕ್ತಿಗಳಲ್ಲೂ ವಿಕವಚನರೂಪಗಳನ್ನು ಹೇಳಿ.

IIIನೇ ಭಾಗ.

1 ಮಳೆ ಬೀಳುವದರಿಂದ ಜನಗಳಿಗಾಗುವ ಪ್ರಯೋಜನವನ್ನು ಕುರಿತು 3 ಪುಟಗಳಿಗೆ ವಿಸ್ತರದೆ ಬರೆಯಿರಿ?

ಸಂಕ್ಷೇಪ ಉದ್ಭಿಜ್ಜಶಾಸ್ತ್ರ.

ಪ್ರಪಂಚದಲ್ಲಿರುವ ಸಮಸ್ತ ಚರಾಚರ ವಸ್ತುಗಳನ್ನು ಶಾಸ್ತ್ರಜ್ಞರು ಪ್ರಾಣಿಕೋಟಿಯೆಂತಲೂ, ಸಸ್ಯಲಿಧವಾ ಉದ್ಭಿಜ್ಜಶಾಸ್ತ್ರವೆಂತಲೂ, ಧಾತುಕೋಟಿಯೆಂತಲೂ, ಮೂರುಭಾಗಗಳಾಗಿ ವಿಂಗಡಿಸಿರುತ್ತಾರೆ. ಇವುಗಳಲ್ಲಿ ಮೊದಲನೆಯ ಎರಡು ಕೋಟಿಗಳಿಗೆ ಚೇತನವರ್ಗವೆಂದೂ, ಮೂರನೇದಕ್ಕೆ ಅಚೇತನವರ್ಗವೆಂದೂ ಹೇಳುತ್ತಾರೆ.

ಸಸ್ಯಗಳ ಪ್ರತ್ಯಂಗದ ಒಳಹೊರಭಾಗಗಳನ್ನು ಪರೀಕ್ಷಿಸಿ ಹೇಳುವದು ಉದ್ಭಿಜ್ಜಶಾಸ್ತ್ರವೆನಿಸುವದು.

ಗಿಡಗಳು ಪ್ರಾಣವ್ಯಕ್ತಿವುಗಳಾಗಿವೆ . ಪ್ರಾಣಿಗಳು ಯಾವಪ್ರಕಾರ ಪ್ರಾಣಿವರ್ಗವನ್ನುಂಟುಮಾಡುತ್ತವೋ ಹಾಗೆಯೇ ಗಿಡಗಳು ವನಸ್ಪತಿವರ್ಗವನ್ನುಂಟುಮಾಡುತ್ತವೆ. ಪ್ರಾಣಿಗಳ ಹಾಗೆ ಗಿಡಗಳಿಗೂ ಬಾಲ್ಯ, ಯೌವನ, ಮರಣ ಎಂಬ ಅವಸ್ಥೆಗಳು ಇರುತ್ತವೆ. ಅವುಗಳೂ ಆಹಾರ ತಿನ್ನುತ್ತವೆ, ಬೆಳೆಯುತ್ತವೆ. ಆದರೂ ಕೆಳಗೆ ಬರೆಯುವ ಕಾರಣಗಳಿಂದ ಗಿಡಗಳಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸಗಳು ವಿಶದವಾಗಿ ಗೊತ್ತಾಗುವವು.

೧ ಗಿಡಗಳು ತಮ್ಮ ಆಹಾರಗಳನ್ನು ಭೂಮಿಯಿಂದಲೂ, ಅವುಗಳ ಸುತ್ತಲೂ ಇರುವ ಗಾಳಿ, ನೀರಿನಿಂದಲೂ ಹೊಂದುತ್ತವೆ. ನಿರೇಂದ್ರಿಯ ಅಥವ ಧಾತುವಸ್ತುಗಳನ್ನು ಸೇಂದ್ರಿಯವಸ್ತುಗಳನ್ನಾಗಿಮಾಡುವ ಶಕ್ತಿ ಗಿಡಗಳಿಗೇನೇ ಇರುವದು. ಇದಕ್ಕೆ ವ್ಯತಿರಿಕ್ತವಾಗಿ ಪ್ರಾಣಿಗಳು ಸೇಂದ್ರಿಯ ಪದಾರ್ಥಗಳನ್ನು ತಿಂದು, ಅವುಗಳನ್ನು ನಿರೇಂದ್ರಿಯವಸ್ತುಗಳಾಗಿ ಮಾಡುತ್ತವೆ; ಅಂದರೆ ಗಿಡಗಳು ಸೇಂದ್ರಿಯ ಪದಾರ್ಥಗಳನ್ನುಂಟುಮಾಡುತ್ತವೆ. ಪ್ರಾಣಿಗಳು ಅವುಗಳನ್ನು ತಿನ್ನುತ್ತವೆ.

೨ ಗಿಡಗಳು ಸಾಧಾರಣವಾಗಿ ಭೂಮಿ, ನೀರು ಮುಂತಾದ ಆಸರೆಗಳಲ್ಲಿ ನಾಟಿಕೊಂಡಿರುತ್ತವೆ. ತಮಗೆ ಬೇಕಾದ ಆಹಾರಗಳನ್ನು ತಮ್ಮ ಹೊರಭಾಗಗಳಾದ ಎಲೆ, ಹೂಗಳಮೂಲಕ ಇದ್ದಲ್ಲೇ ಹೀರಿಕೊಳ್ಳುವ ಶಕ್ತಿಯುಂಟು ಆದರೆ ಪ್ರಾಣಿಗಳು ತಿಳುವಳಿಕೆ, ಚಲನೆಮುಂತಾದ ಶಕ್ತಿಗಳನ್ನುಂಟಾಗಿದ್ದು, ಗಿಡಗಳಿಂದುಂಟಾಗುವ ವಸ್ತುಗಳನ್ನು ತಮ್ಮ ಆಹಾರಕ್ಕೋಸ್ಕರ ಹುಡುಕಿಕೊಂಡು ತಿನ್ನಬೇಕು. ಗಿಡಗಳಿಗೆ

ಳುವಳಿಕೆ, ಸಂಚಾರವಿಲ್ಲದಿದ್ದಾಗ್ಯೂ ತಮ್ಮ ಆಹಾರಗಳನ್ನು ಬಹಳ ಸುಲಭವಾಗಿ ಕೊಂದುತ್ತವೆ. ಪ್ರಾಣಿಗಳಿಗೆ ಈ ಶಕ್ತಿಗಳಿದ್ದರೂ ತಮ್ಮ ಆಹಾರಗಳನ್ನು ಸಂಪಾದಿ ಸುವದು ಬಹಳ ಕಷ್ಟವಾಗಿರುವದು.

೩. ಗಿಡಗಳು ತಮ್ಮ ಆಹಾರಗಳನ್ನು ಜೀರ್ಣಿಸಿಕೊಳ್ಳುವಾಗ ತಮ್ಮ ಸುತ್ತಲೂ ಇರುವ ಗಾಳಿ. ನೀರಿನ ಅಂಗಾರ ದ್ರಾವಕದಮೂಲಕ ವಸ್ತುಗಳಾದ ಅಂಗಾರ ಪ್ರಾಣವಾಯುಗಳನ್ನು ಬೇರೆ ಬೇರೆ ಮಾಡುತ್ತವೆ ಹೀಗೆ ಬೇರೆಯಾದ ಅಂಗಾರವನ್ನು ತೆಗೆದುಕೊಂಡು, ನೀರಿನ ಮೂಲವಸ್ತುಗಳಾದ ಜಲಜನಕವಾಯು ಪ್ರಾಣವಾಯುಗ ಳೊಡನೆ ಸೇರಿ ಶರ್ಕರಪಿಷ್ಟಾದಿಗಳನ್ನುಂಟುಮಾಡುತ್ತವೆ ಉಳಿದ ಪ್ರಾಣವಾಯುವು ಗಾಳಿಯಲ್ಲೂ ನೀರಿನಲ್ಲೂ ಸೇರಿಹೋಗುವದು ಇದಕ್ಕೆ ವ್ಯತಿರಿಕ್ತವಾಗಿ ಪ್ರಾಣಿ ಗಳು ಉಸುರು ಎಳಕೊಳ್ಳುವಾಗ ಪ್ರಾಣವಾಯುವನ್ನು ತೆಗೆದುಕೊಂಡು, ಇದಕ್ಕೆ ಬದಲಾಗಿ ತಮ್ಮ ದೇಹದಲ್ಲುಂಟಾದ ಅಂಗಾರದ್ರಾವಕವನ್ನು ಉಸುರು ಬಿಡುವಾಗ ಹೊರಕ್ಕೆ ಕಳುಹಿಸುತ್ತವೆ. ಅಂದರೆ ಗಿಡಗಳು ಅಂಗಾರದ್ರಾವಕವನ್ನು ತೆಗೆದುಕೊಂಡು ಪ್ರಾಣವಾಯುವನ್ನು ಹೊರಪಡಿಸುತ್ತವೆ. ಮತ್ತು ಪ್ರಾಣಿಗಳು ಪ್ರಾಣವಾಯುವನ್ನು ತೆಗೆದುಕೊಂಡು ಅಂಗಾರದ್ರಾವಕವನ್ನು ಹೊರಪಡಿಸುತ್ತವೆ.

ಗಿಡಗಳಲ್ಲಿ ಭೂಮಿಯಮೇಲೆ ಬೆಳೆಯುತಕ್ಕವುಗಳಿಗೆ "ಭೂಜೀವಿಗಳೆಂದೂ" (ಉ. ಮಾವು, ಬಾಳೆ) ನೀರಲ್ಲಿ ಬೆಳೆಯತಕ್ಕವುಗಳಿಗೆ "ಜಲಜೀವಿಗಳೆಂದೂ" (ಉ. ತಾವರೆ, ಕಮಲ) ಗಿಡಗಳಮೇಲೆ ಬೆಳೆಯತಕ್ಕವುಗಳಿಗೆ "ಪರತಂತ್ರಜೀವಿಗ ಳೆಂದೂ" (ಉ. ಒದನಿಕೆ.) ಹೆಸರು.

ಗ್ರಂಥ ವಿಮರ್ಶೆ.

ಶ್ರೀ ರಾ॥ ಎಂ. ವೆಂಕಟಕೃಷ್ಣಯ್ಯನವರು ರಚಿಸಿರುವ ಧನಾರ್ಜನೆಯ ಕ್ರಮ ವೆಂಬ ಗ್ರಂಥವನ್ನು ಆದರದಿಂದ ನೋಡಲಾಯಿತು. ಮನುಷ್ಯನು ಪ್ರಪಂ ಚದಲ್ಲಿ ಉನ್ನತಸ್ಥಿತಿಗೆ ಬರತಕ್ಕ ಕ್ರಮವನ್ನು ಈ ಗ್ರಂಥವು ಬೋಧಿಸುತ್ತಿರುವದಲ್ಲದೆ ಕಿಕ್ಕವರು ದೊಡ್ಡವರೆನ್ನದೆ ಎಲ್ಲರೂ ನೋಡತಕ್ಕದ್ದಾಗಿರುವದು. ಎಲ್ಲರಿಗೂ ಅರ್ಥ

ವಾಗುವಂತೆ ಸಾಮಾನ್ಯವಾಗಿ ರೂಢಿಯಲ್ಲಿರುವ ಪದಗಳೇ ಉಪಯೋಗಿಸಲ್ಪಟ್ಟಿವೆ. ಈ ಗ್ರಂಥವನ್ನು ನೋಡಿದರೆ "ಸುಖಂಮಾನಂವಿನಾನಾನ್ಯತ್ರ ಪ್ರಯೋಜನಮಿಹೇಷ್ಯತೆ" ಎಂಬ ಸಿದ್ಧಾಂತವನ್ನನುಸರಿಸಿ ಬರೆದಂತೆ ಕಾಣುವದು. ಇಂಥಾ ಗ್ರಂಥವು ಕನ್ನಡದಲ್ಲಿ ವಿರಳವಾಗಿರುವದು, ಇದ್ದರೂ ಇಷ್ಟು ಸುಲಭವಾಗಿರುವಂತೆ ತೋರುವದಿಲ್ಲ. ಆದರೆ ಶುದ್ಧಾಶುದ್ಧ ಪತ್ರಿಕೆಯೊಂದಿದ್ದರೆ ಚನ್ನಾಗಿರುವದೆಂದು ತೋರುತ್ತದೆ. ಸಾಮಾನ್ಯವಾಗಿ ಈ ಗ್ರಂಥವನ್ನು ನೋಡಿದರೆ ಧನಾರ್ಜನೆಯ ಕ್ರಮವೊಂದಲ್ಲದೆ ಇತರ ನೀತಿವಿಷಯಗಳೂ ಹೇಳಿದಂತೆ ತೋರಬಹುದು. ಆದರೆ ಗ್ರಂಥವನ್ನೆಲ್ಲಾ ಪರಿಭಾವಿಸಿ ನೋಡಿ ಸಾರವನ್ನು ಗ್ರಹಿಸಿದಲ್ಲಿ ಈ ಭಾವನೆಯು ಹೋಗಬಹುದೆಂದು ತೋರುತ್ತದೆ.

ಗ್ರಂಥದ ಸಾರಾಂಶ:—

"ಈ ಲೋಕದಲ್ಲಿ ಮನುಷ್ಯನು ಸುಖವಾನಗಳಿರಡನ್ನು ಕೋರುವನಾದ್ದರಿಂದ ಅವುಗಳನ್ನು ಸಂಪಾದಿಸಲು ಅರ್ಹನಾಗಬೇಕಾದರೆ, ಬಿಕ್ಷವನ್ನಾದರೂ ಎತ್ತಿ ಜೀವಿಸುವನೆಂದು ತಾಯಿತಂದೆಗಳು ಮಗನಿಗೆ ಬಾಲ್ಯದಲ್ಲಿಯೇ ವಿವಾಹ ಮಾಡದೆ ಅವರಿಗೆ ವಿದ್ಯೆಯನ್ನು ಕಲಿಸಿ ಯಾವದಾದರೂ ಒಂದು ಒಳ್ಳೇ ಕಸಬಿನಿಂದ ಜೀವಿಸುವಂತೆ ಮಾಡಬೇಕು. ಹೀಗೆ ಶಿಕ್ಷಿತನಾದ ಮನುಷ್ಯನು ತನಗೆ ಸುಖಸಾಧಕನಾದ ದ್ರವ್ಯವು ಅದೃಷ್ಟದಿಂದಾಗುವದೆಂದು ಭಾವಿಸದೆ ಕಾಲವನ್ನು ವೃಥಾ ಕಳೆಯದಂತೆ ಪ್ರತಿಯೊಂದು ಕಾರ್ಯಕ್ಕೆ ಕಾಲ ನಿಬಂಧನೆ ಮಾಡಿಕೊಂಡು ಕೆಲಸವನ್ನು ಕಲಿತುಕೊಂಡು ತನಗೆ ಲಾಭಕರವಾದ ಸ್ಥಲದಲ್ಲಿದ್ದುಕೊಂಡು, ಸರಿಯಾದ ಸಮಯ ಒದಗಿದರೆ ತಮ್ಮ ತಮ್ಮ ಬುದ್ಧಿಗೂ ಶಕ್ತಿಗೂ ಸರಿಯಾದ ವೃತ್ತಿಗಾಗತಕ್ಕ ಪ್ರಯತ್ನಮಾಡಿ ಅತ್ಯಾಶಾಪರನಾಗದೆ ತನ್ನ ಪ್ರಯತ್ನಕ್ಕೆ ಭಂಗಬಾರದಹಾಗೆ ದತ್ತಾವಧಾನನಾಗಿದ್ದು ಒಂದು ವೇಳೆ ಭಂಗ ಬಂದರೆ ಪುನಃ ಪ್ರಯತ್ನಮಾಡುತ್ತಾ ತನ್ನ ಕಾರ್ಯಭಾರವನ್ನು ಮತ್ತೊಬ್ಬನಮೇಲೆ ಹಾಕದೆ ತಾನೇ ನೋಡುತ್ತಾ ಇತರರಿಂದ ಮೋಸಹೋಗದಿರುವಂತೆ ಲೋಕವ್ಯವಹಾರಜ್ಞನಾಗಿ ಹಿಡಿದ ಕೆಲಸವನ್ನು ಪೂರೈಸಬೇಕು. ಹೀಗೆ ಕಾರ್ಯವನ್ನು ಮಾಡುತಕ್ಕವನು ಇತರರನ್ನು ಉಚಿತವಾದ ಮರ್ಯಾದೆಯಿಂದ ನೋಡುತ್ತಾ ಎಲ್ಲಿರಲ್ಲಿಯೂ ಹಿತವಾಗಿ ಮಾತನಾಡುತ್ತಾ ಒಳ್ಳೇ ನಡತೆಯಲ್ಲಿದ್ದು ಅನೃತವನ್ನಾಡದೆ ಸತ್ಯವಂತನಿಗಿನಾ ನಂಬಿಕೆಯಾಗಿದ್ದಲ್ಲಿ ಸುಖಸಾಧಕವಾದ ಧನವು ಪ್ರಾಪ್ತವಾಗಿಯೂ ಬಗುಪಡಿಸು

ಹಿಂಗೆ ಧನಶಾಲಿಯಾವ ಮನುಷ್ಯನು ಧನನಾಶಕವಾದ ದ್ಯೂತ, ಮದ್ಯಪಾನ, ಅಗಮ್ಯಾಗಮನಾದಿಗಳಲ್ಲಿ ಪ್ರವರ್ತಿಸದೆ ಕುಟುಂಬಾಧಿಪತಿಯಾವರೆ ತಾನು ಸಾಹುಕಾರನೆಂದು ಭಾವಿಸದೆ ತನ್ನ ಶರೀರಾರೋಗ್ಯಕ್ಕಾಗಿ ದೇಹಶ್ರಮಪಡುತ್ತಾ, ನಮ್ಮವರಲ್ಲಿ ರೂಢಿಯಾಗಿರುವ ಪೂರ್ವಕರ್ಮ, ಅಪರಕರ್ಮ, ಭೂಮಣ ಮಂತಾದವುಗಳಲ್ಲಿ ಹೆಚ್ಚು ಖರ್ಚಿಗಾಗಿ ಸಾಲವಾಡಿ ದುಂದುಗಾರನಾಗದೆ ಯಾವಪದಾರ್ಥ ಬೇಕಾದರೂ ನಗದುಕೊಟ್ಟು ಆಯಾಕಾಲಕ್ಕೆ ಅವಶ್ಯಕವಾದುದನ್ನು ಕೊಂಡುಕೊಳ್ಳುತ್ತಾ ತನಗಿಷ್ಟವಾದರೂ ಪ್ರಕೃತೋಪಯುಕ್ತವಲ್ಲದ್ದಕ್ಕೆ ದ್ರವ್ಯ ವ್ಯಯಮಾಡದೆ, ಪ್ರಕೃತೋಪಯುಕ್ತವೆಲ್ಲದ್ದನ್ನು ಕೊಂಡುಕೊಳ್ಳುವಂತೆ ಮಾಡುವ ಷಾಪಿಗೂ, ಹರಾಜಿಗೂ ಹೋಗದೆ ತನ್ನ ಕಾರ್ಯಾನುಕೂಲಕ್ಕಾಗಿ ತಕ್ಕ ಭೃತ್ಯನನ್ನಿರಿಸಿಕೊಂಡು ಮಿತವ್ಯಯಮಾಡುತ್ತಾ ಆಗಾಗ್ಗೆ ಆದಾಯ ವ್ಯಯ ಶೋಧನೆಯನ್ನು ಮಾಡುತ್ತಿರಬೇಕು. ಹಾಗಿಲ್ಲದೆ ದುಂದುಗಾರನಾಗಿ ಸಾಲ ಮಾಡಿದಲ್ಲಿ ಅದರ ಬಡ್ಡಿ ಮುಂತಾದ್ದಕ್ಕಾಗಿ ಗೌರವನಾಶಕವಾದ ಅಪಮ್ರಾಮಾಣಿಕತ್ವ, ಅಪಮಾನಾದಿಗಳುಂಟಾಗಿ ದುಃಖರೂಪವಾದ ಸಂಸಾರತಾಪತ್ರಯವುಂಟಾಗುವದು ಹಾಗಿದ್ದೂ ಸಾಲವಾದರೆ ಆದಾಯ ವ್ಯಯ ಶೋಧನೆಯಿಲ್ಲದೆ. ಸಾಲಕ್ಕೂ ತಕ್ಕದ್ದನ್ನು ಏರ್ಪಡಿಸಿ ಋಣವಿಮುಕ್ತನಾಗಬೇಕು ಮತ್ತು ದೊಡ್ಡ ದೊಡ್ಡ ಕೆಲಸಗಳಲ್ಲಿ ತಮತ್ತಮಗೆ ಅನುಕೂಲರಾದ ಮಿತ್ರರ ಸಹಾಯ ಪಡೆದು ಸಾಲುಗಾರನಾಗಿದ್ದು ಧನವಂತನಾಗಿ ತನ್ನ ಕೈಲಾಗದವರಿಗೂ ಪರೋಪಕಾರ ಮಾಡುತ್ತಾ ಇಹಪರಗಳನ್ನು ಸಾಧಿಸಬೇಕು."

ಕಾ॥ ವರದಾಚಾರ್.

ಭಾಷಾ ವಿಚಾರ.

ಇದರ ಹಿಂದಿನ ಸಂಚಿಕೆಯಲ್ಲಿ, ಮಾ॥ ರಾ॥ ಕೆ. ಸುಬ್ರಹ್ಮಣ್ಯಶಾಸ್ತ್ರಿಗಳು ಹಳಗನ್ನಡ, ಹೊಸಗನ್ನಡ ಭಾಷೆಗಳ ವಿಷಯದಲ್ಲೂ, ಅವುಗಳ ಸಾಧುತ್ವ ವಿಷಯದಲ್ಲೂ, ಸಂಸ್ಕೃತ ವ್ಯಾಕರಣವನ್ನೇ ದೃಷ್ಟಾಂತವಾಗಿ ಹೇಳಿ ಕೆಲವು ಉದಾಹರಣೆಗಳನ್ನು ತೋರಿಸಿ ಚರ್ಚಿಸಿರುತ್ತಾರೆ. ಆದರೆ ಸಂಸ್ಕೃತ ಭಾಷೆಯಷ್ಟು ಕನ್ನಡವನ್ನು ನೀವೇ

ಧಿಸುವದಕ್ಕಾಗದು. ಸಂಸ್ಕೃತದಲ್ಲಿ, ಸೌರ, ಚಾಂದ್ರ, ದಾರ್ಗ, ಸಾರಸ್ವತ, ಕಾಲಾಪ, ಕೌಮಾರ, ಜೈನೇಂದ್ರ, ಶಾಕಟಾಯನ, ಪಾಣಿನೀಯ, ಎಂದು ನವವ್ಯಾಕರಣಗಳಿದ್ದರೂ ಒಂದರಲ್ಲಿ ಸಾಲದೆ ಇರುವ ವಿಷಯವನ್ನು ಮತ್ತೊಂದರಲ್ಲಿ ಸಂಗ್ರಹಿಸುವದಕ್ಕಾಗಿ ವ್ಯಾಕರಣಗಳನ್ನು ಬೇರೆಬೇರೆ ಮಾಡಿರುವದೇ ಹೊರತು ವ್ಯಾಕರಣಗಳಲ್ಲಿ ಪರಸ್ಪರ ದೋಷಾರೋಪಣೆಮಾಡುವದಕ್ಕೋಸ್ಕರ ಮಾಡಿಲ್ಲ. ಶಬ್ದನಿಷ್ಪತ್ತಿಯ ಮಾರ್ಗಮಾತ್ರ ಒಬ್ಬೊಬ್ಬರಿಗೆ ಬೇರೆಬೇರೆಯಾಗಿದ್ದರೂ, ಶಬ್ದಗಳು ಎಲ್ಲಾ ವೈಯಾಕರಣರಿಗೂ ಒಂದೇವಿಧವಾಗಿರುವವು.

ವರರುಚಿಯು ನವವ್ಯಾಕರಣಪ್ರವರ್ತಕರಲ್ಲಿ ಸೇರದಿದ್ದರೂ ಪಾಣಿನಿಯು ಅಳವಡಿಸಿಕೊಂಡ ಪ್ರತ್ಯಾಹಾರವು ಸ್ಪಷ್ಟವಾಗದೆ ಇದ್ದಕಡೆ ಸ್ಪಷ್ಟಪಡಿಸಿರುತ್ತಾನೆ. "ತುಲ್ಯಾಸ್ಯಪ್ರಯತ್ನಂ ಸವರ್ಣಂ" ಎಂಬ ಸೂತ್ರದಿಂದ ಋಕಾರ ೠಕಾರಗಳಿಗೆ ಸವರ್ಣ ಸಂಜ್ಞೆಯು ಬಾರದಿದ್ದರೂ ಲೋಕದಲ್ಲಿ ಋಕಾರಕ್ಕಿಂತ ಬೇರೆ ೠಕಾರವೇ ಇಲ್ಲ. ಯಾರಾದರೂ ಋಕಾರವನ್ನುಚ್ಚರಿಸಲು ಕರಣಪಾಟವವಿಲ್ಲದೆ ೠ ಎಂದುಚ್ಚರಿಸಿದ ವರ್ಣವನ್ನೇ ಅನುಕರಣಮಾಡಿ ಸೂತ್ರದಲ್ಲಿ ಪಾಣಿನಿಯು ಹೇಳಿರುವನು. ಆದ್ದರಿಂದಲೇ ಲೃಕಾರಾಂತ ಪದವಾಗಲಿ, ಲೃಕಾರಾದಿ ಪದವಾಗಲಿ, ಲೃಕಾರಮಧ್ಯಪದವಾಗಲಿ, ಲೋಕದಲ್ಲಿಲ್ಲ. ಲೃಕಾರವು ಋಕಾರದ ವ್ಯತ್ಯಸ್ತೋಚ್ಚಾರಣೆಯಿಂದುಂಟಾದುದರಿಂದ ಬೇರೆ ವರ್ಣವಲ್ಲವೆಂದು ಪಾಣಿನಿಯ ತಾತ್ಪರ್ಯ, ಆದ್ದರಿಂದಲೇ ಇವನ್ನು ಸವರ್ಣಸಂಜ್ಞಾಸೂತ್ರದಲ್ಲಿ ಸೇರಿಸಲಿಲ್ಲ. ಪಾಣಿನಿಯು ದ್ವಿತ್ವವನ್ನು ವಿಕಲ್ಪವೆಂದು ಸಾಮಾನ್ಯವಾಗಿ ಹೇಳಿರುವದರಿಂದ ಇತರರು ಹೇಳುವದಕ್ಕೆ ಸ್ವಲ್ಪವೂ ವಿರೋಧವಿಲ್ಲ.

ಮತ್ತು ಸಂಸ್ಕೃತಭಾಷೆಯಲ್ಲಿ ಸ್ಪುಟೋಚ್ಚಾರಣೆಯೂ, ಪ್ರಯೋಗವೂ ಇರುವದರಿಂದ ಎಲ್ಲಾ ಭಾಷೆಗೂ ಸಂಸ್ಕೃತ ಭಾಷೆಯೇ ಮಾತೃಭಾಷೆಯೆಂದು ಹೇಳಿಕೊಳ್ಳುತ್ತಾರೆ.

ಸಂಸ್ಕೃತದಲ್ಲಿ ಸ್ಪುಟೋಚ್ಚಾರಣೆಯಿರುವ ಮಾತ್ರದಿಂದ ಇದನ್ನು ಎಲ್ಲಾ ಭಾಷೆಗೂ ಮಾತೃಭಾಷೆಯೆಂದು ಹೇಳಿದವಕ್ಕಾಗುವದಿಲ್ಲ. ಹಾಗೆ ಇದು ಮಾತೃಭಾಷೆಯಾಗಿದ್ದರೆ ಭಾಷಾಂತರದಲ್ಲಿರುವ ಶಬ್ದಗಳೆಲ್ಲಾ ಇದರಿಂದಲೇ ಹುಟ್ಟಿರಬೇಕು. ಸಿಂದೂಸ್ತಾನಿ, ಮಹಾರಾಷ್ಟ್ರ, ಬಂಗಾಳಿ, ಉರ್ದು ಮೊದಲಾದ ಕೆಲವು ಭಾಷೆಗಳು ಮಾತ್ರ ಸಂಸ್ಕೃತದಿಂದ ಹುಟ್ಟಿರಬಹುದೆಂದು ಹೇಳಬಹುದಾಗಿದ್ದರೂ, ಕನ್ನಡ, ತೆಲಗು, ತಮಿಳು ಮೊದಲಾದ ಭಾಷೆಗಳಲ್ಲಿ ಸಂಸ್ಕೃತಸಂಬಂಧವಾವದೂ ಇಲ್ಲದೆ

ಎಷ್ಟೋ ಶಬ್ದಗಳಿವೆ. ಇನ್ನೂ ಈ ಭಾಷೆಗಳಲ್ಲಿ ದೇಶಾಂತರದವರ ಸಹವಾಸಾತಿಶಯದಿಂದ ಅನೇಕ ದೇಶಭಾಷೆಗಳು ಬೆರತಿರುವಂತೆ ಸಂಸ್ಕೃತಜ್ಞರ ಸಹವಾಸದಿಂದ ಸಂಸ್ಕೃತಶಬ್ದಗಳೂ ಕೆಲವು ಸೇರಿವೆ, ಎಂದು ಹೇಳಬಹುದು ಇದೂ ಅಲ್ಲದೆ ದೇಶಭೇದದಿಂದಲೂ, ಕಾಲಭೇದದಿಂದಲೂ, ಜಾತಿಭೇದದಿಂದಲೂ ಉಚ್ಚಾರಣೆಯಿಂದ ಸಂಸ್ಕೃತಶಬ್ದಗಳೇ ಕೆಲವು ವ್ಯತ್ಯಾಸಗಳನ್ನು ಹೊಂದಿ ಭಾಷೆಯಲ್ಲಿ ಸೇರಿವೆ. ಇಷ್ಟುಮಾತ್ರದಿಂದ ಸಂಸ್ಕೃತವೆ ಮೂತೃಭಾಷೆಯೆಂದು ಹೇಳುವದಕ್ಕಾಗುವದಿಲ್ಲ. ಮೂತೃಭಾಷೆಯೆಂದರೆ ಅದರಿಂದಲೇ ಹುಟ್ಟಿರಬೇಕು. ಈಗ ಕನ್ನಡ ಮೊದಲಾದ ಭಾಷೆಗಳು ಸಂಸ್ಕೃತದಿಂದಲೇ ಹುಟ್ಟಿವೆ ಎಂಬುವದಕ್ಕೆ ಸರಿಯೂದ ಸಾಧಕಗಳಾವವೂ ಇಲ್ಲ. ಯಾಯು ದೇಶದಲ್ಲಿ ಆಯಾಯು ಭಾಷೆಗಳು ಅನಾದಿಕಾಲದಿಂದ ಆಯಾಯು ಜನಗಳಲ್ಲಿ ನೆಲಗೊಂಡಿದ್ದು ಈಚಿಗೆ ದೇಶಾಂತರದವರ ಸಹವಾಸದಿಂದ ವ್ಯತ್ಯಾಸವನ್ನುಹೊಂದಿದೆಯೆಂದು ಹೇಳಬೇಕಾಗಿದೆ ಇನ್ನೂ ಹೇದ ಪುರಾಣಗಳಿಂದ ಸಂಸ್ಕೃತವು ಅನಾದಿಯೆಂದು ಹೇಳಬಹುದು. ಆದ್ದರಿಂದಲೇ ಇದನ್ನು ಪ್ರಾಚೀನರು ಗೀರ್ವಾಣಭಾಷೆಯೆಂದು ವ್ಯವಹರಿಸುತ್ತಿದ್ದರು ಈಚೆಗೆ ಪಾಣಿನ್ಯಾದಿ ಋಷಿಗಳು ಹುಟ್ಟಿ, ವ್ಯಾಕರಣವನ್ನು ಮಾಡಿದವೇಲೆ ಇದಕ್ಕೆ ಸಂಸ್ಕೃತವೆಂಬ ಹೆಸರು ಬಂತು; ಎಂದು ಕೆಲವು ಪಂಡಿತರು ಹೇಳುತ್ತಾರೆ. ಇಂಡ್ಯಾದಲ್ಲಿರುವ ಭಾಷೆಗಳಲ್ಲಿ ವ್ಯಾಕರಣ ಹುಟ್ಟಿದ್ದು ಮೊದಲು ಈ ಭಾಷೆಗೇ ಎಂದು ಹೇಳುತ್ತಾರೆ. ಈ ವ್ಯಾಕರಣವನ್ನು ನೋಡಿ ದೇಶಭಾಷಾವಿಚಾರದರಾದ ಕೆಲವರು ಈಗ ವ್ಯವಹರಿಸುತ್ತಿರುವ ಭಾಷೆಗಳಿಗೂ ಒಂದು ಕಟ್ಟು ಮಾಡಬೇಕೆಂಬ ಅಭಿಪ್ರಾಯದಿಂದ ವ್ಯಾಕರಣಗಳನ್ನು ಬರೆಯುವದಕ್ಕೆ ಪ್ರಾರಂಭಿಸಿದರು. ಆದರೂ ಸಂಸ್ಕೃತಭಾಷೆಯು ಈಗ ವ್ಯವಹಾರದಲ್ಲಿಲ್ಲದೆ ಕೇವಲ ಗ್ರಂಥಸ್ಥವಾಗಿರುವದರಿಂದ ವ್ಯತ್ಯಾಸವಾಗುವದಕ್ಕೆ ಮಾರ್ಗವಿಲ್ಲದೆ ಒಂದು ಕಟ್ಟಿಗೆ ಒಳಪಟ್ಟಿರುವಂತೆ, ದೇಶಭಾಷೆಗಳು ಪ್ರತಿಕ್ಷಣದಲ್ಲೂ ವ್ಯತ್ಯಾಸವನ್ನು ಹೊಂದುತ್ತಿರುವದರಿಂದ ವ್ಯಾಕರಣವನ್ನು ಬರೆದು ಭಾಷೆಗಳನ್ನು ಕಟ್ಟಿಗೆ ಒಳಪಡಿಸುವದು ಅಸಾಧ್ಯ. ಆದರೆ ವ್ಯಾಕರಣವನ್ನು ಮಾಡುವದು ತಪ್ಪೆಂದು ಅಭಿಪ್ರಾಯವಲ್ಲ. ಲೋಕದಲ್ಲಿ ಶಬ್ದಗಳು ಅನಂತವಾಗಿರುವದರಿಂದ ಪ್ರತಿಯೊಂದು ಶಬ್ದವನ್ನೂ ಸಾಧಿಸಿ ಮೊದಲೇ ತಿಳಿದುಕೊಳ್ಳುವದು ಬಾಲಕರಿಗೆ ಅಸಾಧ್ಯವಾದುದರಿಂದ ಸುಲಭವಾಗಿ ಎಲ್ಲಾ ಶಬ್ದಗಳನ್ನೂ ತಿಳಿದುಕೊಳ್ಳುವಂತೆ ಸಾಮಾನ್ಯವಿಶೇಷಾದಿ ಸೂತ್ರಗಳನ್ನು ಮಾಡಿ,

ಈ ಸೂತ್ರಗಳಿಗೆ ವಿಷಯವಾಗದೆ ಒಂದೊಂದು ಒಂದೊಂದು ಜಾತಿಯಾಗಿದ್ದರೆ ಗಣ ಪಾಠ ಮಾಡಿ, ವ್ಯಾಕರಣವನ್ನು ಬರೆದಿರುತ್ತಾರೆ ಆದರೂ ಈಗ ಪ್ರಯೋಗದಲ್ಲಿರುವ ಎಲ್ಲಾ ಶಬ್ದಗಳನ್ನೂ, ಮುಂದೆ ಹುಟ್ಟುವ ಎಲ್ಲಾ ಶಬ್ದಗಳನ್ನೂ, ನಾವು ಬರೆದಿರುವ ವ್ಯಾಕರಣದಿಂದಲೇ ಸಾಧಿಸಬೇಕೆಂದು ಯಾವ ವೈಕರಣರಿಗೂ ಆಗ್ರಹವಿಲ್ಲ ಭಾಷೆಗಳು ವ್ಯತ್ಯಾಸವನ್ನು ಹೊಂದುವಂತೆ ಆಗಾಗ್ಗೆ ವ್ಯಾಕರಣವನ್ನು ವ್ಯತ್ಯಾಸಪಡಿಸಬೇಕು.

ಆದರೆ ಸಂಸ್ಕೃತದಲ್ಲಿ ಹೇಳಿರುವಂತೆ ಮುಂದೆ ವ್ಯಾಕರಣ ಮಾಡತಕ್ಕವರು ಸು ಮಾರು ಈ ಜಾತಿಯಲ್ಲಿ ಬದಲಾಯಿಸಬಹುದೆಂದು ಅನೇಕ ಪ್ರಯೋಗಗಳನ್ನು ನೋಡಿ ಒಂದು ಲಕ್ಷಣವನ್ನು ಕಲ್ಪಿಸಿದರೆ ಒಳ್ಳೇದು.

ಈಗ ಕನ್ನಡಕ್ಕೆ ಅತ್ಯತ್ತಮವಾಗಿರುವ ಶಬ್ದಾನುಶಾಸನವೆಂಬ ವ್ಯಾಕರಣದಲ್ಲೂ, ಶಬ್ದಮಣಿದರ್ಪಣವಲ್ಲೂ, ಬಹುಳಂ, ವ್ಯವಸ್ಥಿತಭಾಷಾ, ಆಕೃತಿಗಣ, ಕರಂಭಾದಿ, ಎಲ್ಲಂ, ಇತ್ಯಾದಿ ಕೆಲವು ನಿಯಮಗಳಿಂದ ಈಗಿರುವ ಸೂತ್ರಗಳಿಗೆ ಅವಿಷಯವಾದ ಶಬ್ದಗಳನ್ನೂ ಸಾಧಿಸಬಹುದೆಂದು ಗ್ರಂಥಕಾರನು ತನ್ನ ವ್ಯಾಖ್ಯಾನದಲ್ಲಿ ಅಭಿಪ್ರಾಯವನ್ನು ತೋರಿಸಿರುವನು.

ಕನ್ನಡದಲ್ಲಿ ಹಳಗನ್ನಡ, ಹೊಸಗನ್ನಡವೆಂದು ಎರಡುವಿಧವಾದ ವ್ಯವಹಾರವಿದ್ದರೂ, ಇಲ್ಲಿಂದ ಹಿಂದಕ್ಕೆ ಇದ್ದದ್ದು ಹಳೇದೆಂತಲೂ, ಇಲ್ಲಿಂದೀಚೆಗೆ ಹೊಸದೆಂತಲೂ, ಕಾಲ ನಿಷ್ಕರ್ಷೆ ಮಾಡುವದಕ್ಕಾಗುವದಿಲ್ಲ. ನೀವು ಯಾವಕಾಲದ್ದು ಹಳಗನ್ನಡವೆನ್ನುತ್ತೀರೋ ಅದೇಕಾಲದ ಮಟ್ಟಿದೀ ಗ್ರಂಥಗಳಲ್ಲಿ ಈ ಹೊಸಗನ್ನಡ ಶಬ್ದಗಳೆಷ್ಟೋ ಸೇರಿವೆ. ಮತ್ತು ನಾಗವರ್ಮಕೃತ ಕಾದಂಬರೀಯಲ್ಲೂ ಅನೇಕಗಳಿವೆ.

ಆದುದರಿಂದ ಉಚ್ಚಾರಣಸೌಲಭ್ಯಕ್ಕಾಗಿ ಪ್ರತ್ಯಯಗಳನ್ನು ಮಾತ್ರ ವ್ಯತ್ಯಾಸ ಮಾಡಿ ಉಪಯೋಗಿಸುವದು ಹೊಸಗನ್ನಡವೆಂತಲೂ, ಸ್ವಲ್ಪವೂ ವ್ಯತ್ಯಾಸವಿಲ್ಲದೆ ಪ್ರಾಚೀನ ವ್ಯಾಕರಣಕ್ಕೆ ಸರಿಯಾಗಿ ಪ್ರಕೃತಿಪ್ರತ್ಯಯಗಳನ್ನು ಸೇರಿಸಿ ಪ್ರಯೋಗಿಸುವದು ಹಳಗನ್ನಡವೆಂತಲೂ ಹೇಳಬೇಕಾಗಿರುತ್ತೆ.

ವಿ ಕುಂಡಲಗಿರ್ಯಾಚಾರ್
ಸಂಸ್ಕೃತಪಂಡಿತ,
ಗೌ॥ ನಾರ್ಮಲ್‌ಸ್ಕೂಲ್
ಮೈಸೂರು.

ಹಾಡು.

ರಾಗಾ॥ ಹಂಗಲ್ ॥ (ಅರಳಿದಮಲ್ಲಿಗೆಪರಿಮಳಭರದಲಿ)

ಬಾಲರೆಬನ್ನಿರೊ । ಚೇಲವನಾಡುವ । ಲೀಲೆಯಿಂಸಃಖಿಸುವನಾವಿನ್ನು ॥ ಆಲಯ ವಾಸದಿ ಕಾಲವಳೆಯುವ । ಬಾಲನೆಕುನ್ನಿತಾನಹುದಿನ್ನೂ ॥ ಪ ॥ ಇಂದುನಾವೆಲ್ಲರು ಕಂದುಕವಾಡಲಾ । ಮಂದತನವುತಾನೆಲ್ಲಿಹುದೂ ॥ ಪೊಂದಿದಜಡತನಕುಂದಿತವಾಹುವುದೋದದಿಂದೈಸರಿತೋರುವದೂ ॥ ೧ ॥ ಪಾಟವವಾಗಲು ಓಟನೆಗತಕುಣಿದಾಟವವಿರಚಿಪ್ಪದೂ ॥ ಊಟವುಜೀರ್ಣಿಸಲಾಟವೊಂದಲ್ಲದೆ ಸಾಟಿಯೂವ್ಪುದದತೋರಿಂದೂ ॥ ೨ ॥ ಕಾಯಶಕ್ತಿನಿರುಪಾಯದಲಾಹುದು ವ್ಯಾಯಾಮವನೀವೂಡುವದೂ ॥ ಆಯಸವಾದರು ಪಾಯವುಬೇರಿದೆ ನಾಯುವಸೇವಿಪ್ಪುದಿನ್ನೊಂದೂ ॥ ೩ ॥ ಪದ್ಯವಕಲಿತಭವರ್ಧಿಪರ್ಗೈವುದು ಶ್ರದ್ಧೆಯಿಂದಂಗಸುಸಾಧಕವಂ ॥ ವರ್ಧಿಪುದದರಿಂದಧಿಕಸತ್ಕಾಂತಿಯುಪದ್ರತಾನೀಗುವದೂ ॥ ೪ ॥ ಚಿಂತಿಕೋಲುತಾಕಣ್ಣಮುಚ್ಚಾಲೆಯು ಹಂತಿಕೊಂಡಾಡುವನಾವಿನ್ನೂ ॥ ಪುಣ್ಯವಿಹೀನರು ಕಣ್ಣಲಿನೋಡರು ಕುಣಿದಾಟದ ಸುಖವನ್ನೂ ॥ ೫ ॥ ಮತ್ಸ್ಯಪುರೀಶನು ವೃತ್ಸುಕಗೊಳಿಸಿದ ಮತ್ಸರವಿಲ್ಲದೆ ಶುಭವೂದಾ ॥ ವತ್ಸರಿಗೆಲ್ಲ ಪ್ರೀತಾಸ್ಸಹಿಸಲೆನ್ನ ಶ್ರೀವತ್ಸಾಂಕನು ನೇಮಿಸಿದಂ ॥ ೬ ॥

ಸಮಾಚಾರಗಳು.

ದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಮೆ॥ ಹೆಚ್. ಜಿ. ಫಾಬಾ ಸಾಹೇಬರವರು ಗೌ ॥ ನಾರ್ಮಲ್‌ಸ್ಕೂಲಿನಲ್ಲಿ ವ್ಯವಸಾಯಬೋಧಕರಾಗಿದ್ದು ಗತಿಸಿಹೋದ ಮೂ॥ರಾ॥ಕೆ. ಶೇಷಾದ್ರಯ್ಯಂಗಾರ್ರಿಗೆ ಬದಲಾಗಿ ಮದ್ರಾಸ್ ಜಗ್ರಿಕಲ್ಚರ್ ಕಾಲೀಜಿನಲ್ಲಿ ಓದಿ ಪ್ಯಾಸ್‌ಮಾಡಿ ಈಚೆಗೆ ಬಿ. ಎ. ಪರೀಕ್ಷೆಯುಲ್ಲಿ ಒಂದುಭಾಗದಲ್ಲಿ ತೇರ್ಗಡೆಯನ್ನು ಹೊಂದಿರುವ ಕೆ. ನರಸಿಂಹಯ್ಯಂಗಾರ್ಯರನ್ನು ನಿಯಮಿಸಿರುತ್ತಾರೆ.

ವಿದ್ಯಾದಾಯಿನಿ.

ಭಾಗ ೫.] ಮೇ ೧೮೯೩. [ಸಂಚಿಕೆ ೫.

ಎಡಿಟರವರ ನೋಟ್ಸ್.

ಈಗ ಕೆಲವು ತಿಂಗಳಿಂದ ಉತ್ತರದೇಶದಲ್ಲಿ ಜನಗಳು ಕ್ಷಾಮದಿಂದ ಬಹಳ ನಾಗಿ ಶ್ರಮಪಡುತಲಿರುವುದು ನಮ್ಮ ನಾಚಕರೆಲ್ಲರಿಗೂ ತಿಳಿದಿರಬಹುದು. ಈ ಶ್ರಮವನ್ನು ಸಾಧ್ಯವಾದಮಟ್ಟಿಗೂ ಕಡಮೆಮಾಡುವುದಕ್ಕಾಗಿ ಈ ಇಂಡ್ಯಾದೇಶದಲ್ಲೂ, ಇಂಗ್ಲೆಂಡ್ ದೇಶದಲ್ಲೂ, ಇತರ ದೇಶಗಳಲ್ಲೂ ಸಹ ಜನಗಳು ಹಣವನ್ನು ಬಹಳವಾಗಿ ಕೊಟ್ಟಿದಾರೆ; ಈಗಲೂ ಕೊಡುತಿದಾರೆ. ಇಂಗ್ಲೆಂಡ್ ದೇಶದಲ್ಲಿ ಇದುವರೆಗೆ ಈ ಕ್ಷಾಮ ನಿವಾರಣೆಗಾಗಿ ಸುಮಾರು ೭೫ ಲಕ್ಷರೂಪಾಯಿ ಸೇರಿದೆ. ಇಂಗ್ಲೀಷಿನವರ ಔದಾರ್ಯವನ್ನು ತಿಳಿದಿರುವರಿಗೆ ಇದು ಆಶ್ಚರ್ಯಕರವಾಗಿರುವುದಿಲ್ಲ. ಇಲ್ಲಿ ಮುಖ್ಯವಾಗಿ ತಿಳಿಸಬೇಕಾದುದೇನೆಂದರೆ—ಈ ಸಮಯದಲ್ಲಿ ನಮ್ಮ ದೇಶದಲ್ಲಿರುವ ಸ್ಕೂಲುಗಳಲ್ಲಿ ಕೆಲವು ಸಾಹಾಯ್ಯವನ್ನು ಮಾಡಿವೆಯೆಂಬುದು. ಭೂತದಯೆಗೂ, ಪರೋಪಕಾರಕ್ಕೂ, ಔದಾರ್ಯಕ್ಕೂ ಆವಶ್ಯಕತೆಯನ್ನು ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ಇದರಿಂದ ಚೆನ್ನಾಗಿ ತಿಳಿಸಿದಂತಾಗುವುದು. ವಿದ್ಯಾರ್ಥಿಗಳು ಕೊಡುವುದು ಅಲ್ಪವಾದಾಗ್ಯೂ 'ಗಣಾದ್ಗೃಹೀತಾವರ್ಧಿತ' ಎಂಬಂತೆ ಒಟ್ಟಿನಲ್ಲಿ ಅದು ಜನಗಳನ್ನು ಸಂರಕ್ಷಿಸದಿರದು. ಆದುದರಿಂದ ಪ್ರತಿಯೊಂದು ಸ್ಕೂಲಿನಲ್ಲೂ ಉಪಾಧ್ಯಾಯರು ವಿದ್ಯಾರ್ಥಿಗಳಿಂದ ಇದಕ್ಕಾಗಿ ಸಾಹಾಯ್ಯಕೊಡಿಸಿ ತಾವೂ ಶಕ್ತ್ಯನುಸಾರ ಸಾಹಾಯ್ಯವನ್ನು ಮಾಡಬೇಕಾದುದು ಆವಶ್ಯಕವೆಂದು ತೋರುತ್ತೆ. ಪ್ರತಿಡಿಸ್ಟ್ರಿಕ್ಟಿನಲ್ಲೂ ಇದಕ್ಕಾಗಿ ಸೇರುವ ಹಣವನ್ನು ತೆಗೆದುಕೊಳ್ಳಲು ಮೈಸೂರು ಸರಕಾರದವರು ತಕ್ಕ ಏರ್ಪಾಡನ್ನು ಮಾಡಿರುವರು.

ಗುಣಾಕಾರ.

ಅಂಕಗಣಿತವನ್ನ ಬೋಧಿಸುವುದಕ್ಕೆ ಬಾಲಕರನ್ನು ಲೆಕ್ಕಾಚಾರಸ್ತರನ್ನಾಗಿ ಮಾಡುವುದುಮಾತ್ರವೆಂದು ಬಹಳಜನ ತಿಳಿದಿದಾರೆ. ಇದೇನೋ ಮುಖ್ಯವಾದ ಪ್ರಯೋಜನವೆಂಬುದು ಸರಿ, ಆದರೆ ಇದಕ್ಕೆ ಸಮನಾದ ಬೇರೆ ೨ಂದು ಪ್ರಯೋಜನವು ಅಂಕಗಣಿತವನ್ನು ಸರಿಯಾಗಿ ಬೋಧಿಸುವದರಿಂದ ಸಿದ್ಧವಾಗುವುದು. ಇದು ಬಾಲಕರಿಗಾಗುವ ಬುದ್ಧಿಸಂಸ್ಕಾರ. ವಾಡಿಕೆಯಾಗಿ ಈಗ ಪಾಠ ಹೇಳುವುದನ್ನು ತೋರಿಸುವುದಕ್ಕೆ ಒಂದು ಉದಾಹರಣೆಯನ್ನು ಹೇಳೋಣ,—ಯಾವದಾದರೊಂದು ಸಂಖ್ಯೆಯನ್ನು 234 ರಿಂದ ಗುಣಿಸಬೇಕೆಂದಿದ್ದರೆ ಉಪಾಧ್ಯಾಯರು 4 ರಿಂದ ಆ ಸಂಖ್ಯೆಯನ್ನು ಗುಣಿಸಿರೆಂದು ಬಾಲಕರಿಗೆ ಹೇಳಿ ಅನಂತರದಲ್ಲಿ 3 ರಿಂದ ಗುಣಿಸಿಸಿ ಎಡಗಡೆಗೆ ಒಂದು ಸ್ಥಾನ ಬಿಟ್ಟು ಬರೆಯುತ ಬರಬೇಕೆಂದು ಹೇಳುವರು. ಹೀಗೆ ವಿಧಿಯನ್ನು ತಿಳಿಸಿ ಸಾಕಾದಷ್ಟು ಲೆಕ್ಕಗಳನ್ನು ಅವರಿಂದ ಮಾಡಿಸಿದರೆ ಬಾಲಕರಿಗೆ ತಪ್ಪಿಲ್ಲದೆ ಗುಣಿಸುವ ಲೆಕ್ಕಗಳನ್ನು ಮಾಡುವದೇನೊ ಬರುವುದು. ಆದರೆ ಅಂಕಗಣಿತದಿಂದಾಗಬೇಕಾದ ಪ್ರಯೋಜನವಿಷ್ಟೇ ಅಲ್ಲ. ಬಾಲಕರ ಯೋಚಿಸುವ ಶಕ್ತಿಯನ್ನು ಹೆಚ್ಚಿಸಬೇಕು ಇದಕ್ಕಾಗಿ ಎತಕ್ಕೆ ಎತಕ್ಕೆ ಒಂದು ಸ್ಥಾನವನ್ನು ಬಿಟ್ಟು ಬರೆಯಬೇಕು. ಇಂಥ ಅಂಶಗಳಲ್ಲಿ ಕಾರಣವನ್ನು ಬಾಲಕರಿಗೆ ತಿಳಿಸುವುದರಿಂದ ಇದು ಸಿದ್ಧವಾಗುವುದು. ಅದನ್ನು ಅವರು ತಿಳಿಯಬೇಕಾದರೆ ಹೆಚ್ಚಾಗಿ ಯೋಚಿಸಬೇಕಾಗುವುದು. ಹಾಗೆ ಯೋಚಿಸುತಿದ್ದರೆ ಬುದ್ಧಿಶಕ್ತಿಯು ತಾನಾಗಿ ಅಭಿವೃದ್ಧಿಯಾಗುವುದು. ಅಂದರೆ ಅಂಕಗಣಿತ ಬೋಧನೆಯಿಂದ ಹುಡುಗರ ಬುದ್ಧಿಗೆ ಸಂಸ್ಕಾರವಾಗಬೇಕಾದರೆ ಉಪಾಧ್ಯಾಯರು ತಾವು ತಿಳಿಸುವ ಪ್ರತಿಯೊಂದು ವಿಧಿಗೂ ಕಾರಣವನ್ನು ತಿಳಿಸಬೇಕು. ಇದು ಸ್ವಲ್ಪ ಮಟ್ಟಿಗೆ ಉಪಾಧ್ಯಾಯರಿಗೂ ಹುಡುಗರಿಗೂ ಕಷ್ಟವಾದರೂ ಅದರಿಂದ ತಕ್ಕ ಪ್ರಯೋಜನವಿರುವುದರಿಂದ ಪ್ರತಿಯೊಬ್ಬರೂ ಹಾಗೆ ಮಾಡುವುದಕ್ಕೆ ಪ್ರಯತ್ನಪಡಬೇಕು. ಅಂಕಗಣಿತವನ್ನು ಈಕ್ರಮವಾಗಿ ಬೋಧಿಸುವುದಕ್ಕೆ ದೃಷ್ಟಾಂತವಾಗಿ ಗುಣಾಕಾರವನ್ನು ತೆಗೆದುಕೊಂಡು ಇಲ್ಲಿ ಬರೆಯುವೆವು. ಇದರಲ್ಲಿ 1, 2, 3 ಮುಂತಾದ ಸಂಖ್ಯೆಗಳಿಂದ ಗುಣಾಕಾರವನ್ನು ಆಯಾಕ್ರಮವಾಗಿ ಒಂದಾಗುತ್ತಲು ಇನ್ನೊಂದಂಶವನ್ನು ಬೋಧಿಸಬೇಕೆಂದು ತಿಳಿಯಬೇಕು.

ಸಂಕಲನವನ್ನು ಹೇಳಿಕೊಡುವಾಗ್ಗೆ ಇಂಥ ಲೆಕ್ಕಗಳನ್ನು ಬಾಲಕರಿಂದ ಮಾಡಿಸಿರಬೇಕು :—

7	9	13
7	9	13
7	9	13
21	9	13
	36	13
		65

ಇದರಜತೆಗೆ ವಾಡಿಕೆಯಾಗಿ ಒಂದು ವಸ್ತುವಿನ ಬೆಲೆಯು ತಿಳಿದರೆ 2, 3, 4 ವಸ್ತುಗಳ ಬೆಲೆಯನ್ನು ಶೀಘ್ರವಾಗಿ ಗೊತ್ತುಮಾಡಬೇಕಾಗುವುದೆಂಬುದಕ್ಕೆ ದೃಷ್ಟಾಂತಗಳನ್ನು ಕೊಡಬೇಕು. ಇದರಿಂದ ಹುಡುಗರಿಗೆ ಈವಿಧವಾದ ಲೆಕ್ಕಗಳನ್ನು ತಿಳಿದು ಕೊಳ್ಳಬೇಕೆಂದಾಗುವುದು. ಗುಣಾಕಾರವನ್ನು ತಿಳಿಯಬೇಕಾದರೆ ಹುಡುಗರಿಗೆ ಮಗ್ಗಿ ಮುಖ್ಯವಾಗಿ ಬರಬೇಕಾದುದರಿಂದ ಅದನ್ನು ಗಟ್ಟಿಮಾಡುವುದರಲ್ಲಿ ಅಭಿರುಚಿಯನ್ನು ಹೇಗಾದರೂ ಉಂಟುಮಾಡಬೇಕು.

1. ಮಗ್ಗಿ.

ಮೊದಲು ಮೇಲೆ ಹೇಳಿರುವಂಥ ಸಂಕಲನ ಲೆಕ್ಕಗಳನ್ನು ಬಾಲಕರಿಂದ ಮಾಡಿಸಬೇಕು. ಒಂದೇ ಅಂಕಿಯನ್ನು ಎಷ್ಟೆಷ್ಟುಸಲ ಸೇರಿಸಿದರೆ ಏನೇನು ಬರುವುದೆಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. ಬೇರೆಬೇರೆಯಾಗಿ ಬರೆದುಕೊಡುವುದಕ್ಕೆ ಬದಲಾಗಿ ಒಟ್ಟಿಗೆ ತಪ್ಪದೆ ಉತ್ತರ ಹೇಳುವುದೇ ಮಗ್ಗಿಯೆಂದು ತಿಳಿಸಬೇಕು. ಮಗ್ಗಿಯನ್ನು ಬಾಯಿಯಲ್ಲಿ ಹೇಳತಕ್ಕ ಕ್ರಮವನ್ನು ತಿಳಿಸಬೇಕು. ಪ್ರತಿಯೊಂದು ಮಗ್ಗಿಯನ್ನೂ ಹುಡುಗರಿಂದಲೇ ಕೂಡಿಸುವುದರಿಂದ ತಿಳಿಸಿ ಅನಂತರದಲ್ಲಿ ಅದನ್ನು ಗಟ್ಟಿಮಾಡುವಂತೆ ಮಾಡಬೇಕು ಇದರಿಂದ ಹುಡುಗರಿಗೆ ಮಗ್ಗಿಯ ಸ್ವರೂಪವು ಸ್ಪಷ್ಟವಾಗುವುದು ; ಈಗಿನಂತೆ ಕುರುಡುಪಾಠ ಮಾಡಿಸಿದಂತಾಗುವುದಿಲ್ಲ.

2. ಒಂದು ಅಂಕಿಯ ಸಂಖ್ಯೆಯಿಂದ ಗುಣಿಸುವುದು.

ಮಗ್ಗಿಗಳನ್ನೆಲ್ಲ ಬಾಲಕರು ಗಟ್ಟಿಮಾಡುವವರೆಗೂ ಇದನ್ನು ಹೇಳಿಕೊಡದೆ ಸಾವಕಾಶ ಮಾಡಬಾರದು. 4 ರ ಮಗ್ಗಿಯನ್ನು ಕಲಿಯುತಿರುವಾಗ 2, 3 ರಿಂದ

ಗುಣಿಸುವುದನ್ನು ಬೋಧಿಸಬಹುದು. ಅದಿಯಲ್ಲಿ ಮಗ್ಗಿಯನ್ನು ಹೇಳಿಕೊಡುವಾಗ ಮಾಡಿದಂತೆ ಮಾಡಬೇಕು ; ಏನೆಂದರೆ—

83	83×7
83	581
83	
83	
83	
83	
83	
581	

ಇವೆರಡು ಲೆಕ್ಕಗಳಲ್ಲು ನಾವು ಮಾಡುವುದು ಒಂದೇ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. ಕೂಡುವುದನ್ನು ಸಂಕ್ಷೇಪವಾಗಿ ಮಾಡುವುದೇ ಗುಣಾಕಾರವೆಂದು ಹೇಳಬೇಕು. ಕೆಲವು ಲೆಕ್ಕಗಳನ್ನು ಇವೆರಡುಕ್ರಮವಾಗಿಯೂ ಮಾಡಿಸಬೇಕು.

3. 10 ರಿಂದ ಗುಣಿಸುವುದು.

ಬೇರೆಬೇರೆ ದೃಷ್ಟಾಂತಗಳನ್ನು ಹೇಳಿ ಯಾವ ಸಂಖ್ಯೆಗಾಗಲಿ ಕೊನೆಯಲ್ಲಿ ಒಂದು ಸೊನ್ನೆಯನ್ನು ಸೇರಿಸಿದರೆ ಅದನ್ನು 10 ರಿಂದ ಗುಣಿಸಿದಂತಾಗುವುದೆಂಬುದನ್ನು ತಿಳಿಸಬೇಕು. ಅವರಿಂದ ಕೆಲವು ಲೆಕ್ಕಗಳನ್ನು ಮಾಡಿಸಬೇಕು.

4. ಅಪವರ್ತನಗಳಿಂದ ಗುಣಿಸುವುದು.

ಒಂದು ಸಂಖ್ಯೆಯಿಂದ ಗುಣಿಸುವುದಕ್ಕೆ ಬದಲಾಗಿ ಆ ಸಂಖ್ಯೆಯು ಅಪವರ್ತನಗಳಿಂದ ಬಂದಾಗುತ್ತಲೂ ಇನ್ನೊಂದರಿಂದ ಗುಣಿಸಬಹುದೆಂಬುದನ್ನು ದೃಷ್ಟಾಂತದಿಂದ ತಿಳಿಸಬೇಕು.

ಉದಾ. $22 \times 8 = 176$.

ಅಥವಾ $(22 \times 2,\ 44) \times 4 = 176$.

5. 100, 1000 ಇಂಥ ಸಂಖ್ಯೆಗಳಿಂದ ಗುಣಿಸುವುದು.

ಮೊದಲು 10 ರಿಂದ ಗುಣಿಸಿ ಬಂದ ಲಬ್ಧಕ್ಕೆ ಒಂದು ಸೊನ್ನೆಯನ್ನು ಸೇರಿಸಿದಂತೆ 100 ರಿಂದ ಗುಣಿಸಿದಂತಾಗುವುದು ಇದರಿಂದ ಇಂಥ ಅಂಶಗಳನ್ನು ಬಾಲಕರಿಗೆ ತಿಳಿಸಬೇಕು. ಇದರಿಂದ ಗುಣಕದಲ್ಲಿ 1 ರಮುಂದೆ ಎಷ್ಟು ಸೊನ್ನೆಗಳಿವೆಯೋ ಅಷ್ಟು ಸೊನ್ನೆಗಳನ್ನು ಗುಣ್ಯದ ಮುಂದೆ ಬರೆಯಬೇಕೆಂದು ತಿಳಿಯುವುದು.

6. 50, 700, 3000 ಇಂಥ ಸಂಖ್ಯೆಗಳಿಂದ ಗುಣಿಸುವುದು.

ಇದಕ್ಕಾಗಿ 5, 7, 3 ಇವುಗಳಿಂದ ಗುಣಿಸಿ ಗುಣಕಕ್ಕನುಸಾರವಾಗಿ ಸೊನ್ನೆಗಳನ್ನು ಸೇರಿಸಬೇಕೆಂದು ತಿಳಿಸಬೇಕು.

ಉದಾ. 4367×700

$4367 \times 7 = 30569$

$\therefore\ 4367 \times 700 = 3056900$

7. ಯಾವ ಸಂಖ್ಯೆಯಿಂದ ಗುಣಿಸಬೇಕೊ ಆ ಸಂಖ್ಯೆಯನ್ನು ಎರಡಾಗಿ ಖಂಡಿಸಿ ಎರಡರಿಂದಲೂ ಬೇರೆಬೇರೆಯಾಗಿ ಗುಣಿಸಿ ಬಂದ ಲಬ್ಧಗಳನ್ನು ಸೇರಿಸಿದರೆ ಆ ಸಂಖ್ಯೆಯಿಂದ ಒಟ್ಟಾಗಿ ಗುಣಿಸಿದಂತಾಗುವುದೆಂಬುದನ್ನು ದೃಷ್ಟಾಂತಗಳಿಂದ ತಿಳಿಸಬೇಕು.

ಉದಾ. $76 \times 7 = 532$

ಅಥವಾ $76 \times 4 = 304$

$76 \times 3 = 228$

532

8. ಎರಡು ಅಂಕಿಗಳ ಸಂಖ್ಯೆಗಳಿಂದ ಗುಣಿಸುವುದು.

ಇದನ್ನು ಮೇಲೆ ಹೇಳಿರುವ ಅಂಶಗಳನ್ನು ಉಪಯೋಗಿಸಿಕೊಂಡರೆ ಸುಲಭವಾಗಿ ತಿಳಿಸಬಹುದು.

ಉದಾ. 528×67

$67 = 60 + 7.$

$\therefore\ 528 \times 67 = 528 \times (60 + 7)$

528	528
7	60
3696	31680

3696
31680
35376

$\therefore\ 528 \times 67 = 35376.$

ಅನಂತರದಲ್ಲಿ ಇದನ್ನೇ ಈಕ್ರಮದಲ್ಲಿ ಹಲಗೆಯಮೇಲೆ ಬರೆದು ತೋರಿಸ ಬೇಕು

528	
67	
3696	$= 528 \times 7$
31680	$= 528 \times 60$
35376	$= 528 \times 67$

ಇದರಿಂದ ಎರಡು ಅಂಕಿಗ ಸಂಖ್ಯೆಯಿಂದ ಗುಣಿಸುವುದಕ್ಕೆ ವಿಧಿಯನ್ನು ಹುಡುಗರಿಂದಲೇ ಹೇಳಿಸಬಹುದು.

9. ಎಷ್ಟು ಅಂಕಿಗಳ ಸಂಖ್ಯೆಯಿಂದಾಗಲಿ ಗುಣಿಸುವುದು.

ಉದಾ. 825×573

$573 = 500 + 70 + 3$

825	825	825
3	70	500
2475	57750	412500

ಅಥವಾ 25

573	
2475	$= 825 \times 3$
57750	$= 825 \times 70$
412500	$= 825 \times 500$
472725	$= 825 \times 573$

ಎರಡನೇ ಮೂರನೇ ಪಜ್ಜಿಗಳ ಕೊನೆಯಲ್ಲಿ ಸೊನ್ನೆಗಳನ್ನು ಬರೆಯಬೇಕಾದ ಆವಶ್ಯಕವಿಲ್ಲವೆಂಬುದನ್ನು ಬಾಲಕರಿಗೆ ತೋರಿಸಬೇಕು. ಮೊದಲು ಕೆಲವು ಲೆಕ್ಕಗಳನ್ನು ಈಕ್ರಮವಾಗಿಯೇ ಮಾಡಿಸಬೇಕು. ಇದರಿಂದ ಗುಣಾಕಾರಸ್ವರೂಪವು ಬಾಲಕರಿಗೆ ಚೆನ್ನಾಗಿ ತಿಳಿಯುವುದು. ಎಡಕ್ಕೆ ಬಂದ ಸ್ಥಾನ ಬಿಟ್ಟು ಬರೆಯಬೇಕೆಂಬುದಕ್ಕೆ ಕಾರಣ ತಿಳಿಯುವುದು.

ಹೀಗೆಯೇ ಅಂಕಗಣಿತದ ಪ್ರತಿಯೊಂದುವಿಧಿಗೂ ಕಾರಣ ಗೊತ್ತಾಗುವಂತೆ ಬೋಧಿಸುತ್ತ ಬರಬೇಕು. ಇಲ್ಲದಿದ್ದರೆ ಅಂಕಗಣಿತದಿಂದ ಬಾಲಕರಿಗಾಗಬೇಕಾದ ತ್ರಿಯೋಜನವು ಸರಿಯಾಗಾಗದೆ ಹೋಗುವುದು.

ನಾರ್ಮಲ್ ಸ್ಕೂಲ್, ಮೈಸೂರು.

ಪಾಠಕ್ರಮ.

ಕಾಲ ಮೂರುಘಂಟೆ] [VII ನೇ ತರಗತಿ.

1. (1) ಅಂಕಗಣಿತದ ಬೋಧನೆಯಿಂದ ಆಗುವ ಪ್ರಯೋಜನಗಳು ಯಾವುವು? ಆ ಪ್ರಯೋಜನಗಳು ಸಿದ್ಧಿಸಬೇಕೆಂದರೆ ಅದನ್ನು ಹೇಗೆ ಬೋಧಿಸಬೇಕು?

(2) ಮನೋಗಣಿತವೆಂದರೇನು? ಅದನ್ನು ಬೋಧಿಸಬೇಕಾದ್ದು ಏಕೆ ಮತ್ತು ಹೇಗೆ?

2. (1) 8 ಎಂಬ ಸಂಖ್ಯೆಯನ್ನು ಮಕ್ಕಳಿಗೆ ಬೋಧಿಸುವುದಕ್ಕೆ ಅನುಕೂಲಿಸುವಂತೆ ಟಿಪ್ಪಣಿಯನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.

(2) ವ್ಯವಕಲನವನ್ನು ಬೋಧಿಸುವ ಕ್ರಮವನ್ನು ವಿವರಿಸಿ.

3. (a) ಮಗ್ಗಿಹೇಳುವಕ್ರಮ ಹೇಗೆ? (b) ಅಂಶಭೇದಗಳನ್ನು ಒಂದೇಸಂಖ್ಯೆಯಿಂದ ಗುಣಿಸಿದರೆ ಅಥವಾ ಭಾಗಿಸಿದರೆ ಭಿನ್ನರಾಶಿಯು ಬೆಲೆಯಲ್ಲಿ ವ್ಯತ್ಯಾಸ ಬರುವದಿಲ್ಲವೆಂಬುದನ್ನು ತಿಳಿಸುವುದು ಹೇಗೆ?

4. ದಿನಕ್ಕೆ 240 ಮೈಲಿ 5 ಫರ್ಲಾಂಗು ಸಾಗುವಂಥ ಯಾನವೊಂದು 15 ದಿನ 20 ಘಂಟೆ 40 ನಿಮಿಷಗಳಲ್ಲಿ ಎಷ್ಟುದೂರ ಹೋಗುವುದು? ಈ ಲೆಕ್ಕವನ್ನು ಹುಡುಗರಿಗೆ ಸರಿಯಾಗಿ ಬೋಧಿಸುವ ಕ್ರಮ ಹೇಗೆ? ನೀವು ಬೋಧಿಸಿದ ನಂತರ ಹಲಗೆಯ ಮೇಲೆ ಏನಿರುವುದು ಅದನ್ನು ಬರೆಯಿರಿ.

5. (1) ತ್ರೈರಾಶಿ ಲೆಕ್ಕಗಳನ್ನು ಬೋಧಿಸುವ ಕ್ರಮವೆಷ್ಟುವಿಧ? ಅವುಗಳ ಪರಸ್ಪರ ಗುಣದೋಷಗಳನ್ನೂ ತಿಳಿಸಿ.

(2) ಸರಳಬಡ್ಡಿಯಮೇಲೆ ಮೊದಲನೇದಿನದ ಪಾಠಕ್ಕೆ ಅನುಕೂಲಿಸುವಂತೆ ಟಿಪ್ಪಣಿಯನ್ನು ಸರಿಯಾದಕ್ರಮದಲ್ಲಿ ಬರೆಯಿರಿ.

6. (1) ನಾಲ್ಕನೇ ತರಗತಿಗೆ ಕನ್ನಡಪದ್ಯವನ್ನು ಬೋಧಿಸುವ ಕ್ರಮ ಹೇಗೆ? (2) ಎರಡನೇ ತರಗತಿಗೆ ಚರಿತ್ರೆಯನ್ನು ಬೋಧಿಸುವ ಕ್ರಮ ಹೇಗೆ? (3) ವ್ಯಾಕರಣ ಮತ್ತು ವಾಕ್ಯರಚನೆಯನ್ನು ಯಾವಕ್ಲಾಸಿನಲ್ಲಿ ಪ್ರಾರಂಭಿಸಬೇಕು? (4) ಕಿಂಡರ್‌ಗಾರ್ಟನ್ ಮತ್ತು ವಸ್ತುಪಾಠವನ್ನು ಯಾವಕ್ಲಾಸಿನವರೆಗೆ ಬೋಧಿಸಬೇಕು? (5) ನಾಲ್ಕನೇ ತರಗತಿಯಲ್ಲಿ ನಡೆಯಬೇಕಾದ ಅಂಕಗಣಿತ ಭಾಗಗಳು ಯಾವವು?

ಕಾವೇರೀನದಿ.

(೯೯ನೇ ಪುಟದ ಶೇಷ)

ಈಗ ಕಾವೇರೀ ನದಿ ಸಹ್ಯಾದ್ರಿಯ (ಪಶ್ಚಿಮಘಟ್ಟ) ಅರಗಿನಲ್ಲಿ ಬ್ರಹ್ಮಗಿರಿ, ಎಂಬ ಬೆಟ್ಟದಮೇಲೆ ತಲೆಕಾವೇರಿಯಲ್ಲಿ ಹುಟ್ಟುತ್ತದೆ. ಸವಿಾಪದಲ್ಲಿಯೇ ಕನಕೆ ಹುಟ್ಟಿ ಸ್ವಲ್ಪದೂರ ಹರಿದು ಬೆಟ್ಟದ ಅಡಿಯಲ್ಲಿ ಭಾಗಮಂಡಲವೆಂಬ ಗ್ರಾಮದಬಳಿ ಕಾವೇರಿಯೊಡನೆ ಐಕ್ಯವಾಗುತ್ತದೆ. ಪುರಾಣೋಕ್ತವಾದ ಸಜೊ್ಯೀತಿ ಕಣ್ಣಿಗೆ ಕಾಣುವದಿಲ್ಲ. ಬೆಟ್ಟದಮೇಲೂ ಕೆಳಗೂ ಪ್ರಸಿದ್ಧವಾದ ದೇವಸ್ಥಾನಗಳಿವೆ. ಪ್ರತಿಸಂವತ್ಸರವೂ ನೆರೆಹೊರೆಯ ದೇಶಗಳಿಂದ ಭಕ್ತರು ಅಸಂಖ್ಯಾತವಾಗಿ ಅಲ್ಲಿಗೆ ಯಾತ್ರೆಗೆ ಹೋಗಿಬರುವರು. ಪುರಾಣದಲ್ಲಿ ಹೇಳಿರುವಂತೆ ಈ ಭರತವರ್ಷದ ನದಿಗಳೆಲ್ಲೆಲ್ಲಾ ಕಾವೇರಿ ಉತ್ತಮೋತ್ತಮವಾದದು; ಜಗತ್ಪಾವನವಾದ ಗಂಗೆಯೂಕೂಡ ತನ್ನಲ್ಲಿ ಮುಳುಗಿ ಮುಕ್ತರಾದ ಪತಿತರ ಪಾಪಗಳನ್ನೆಲ್ಲ ಹೊತ್ತು, ಆ ಅಶುಚಿಯ ಹೊರೆಯನ್ನು ಕಳೆದು ಕೊಳ್ಳುವದಕ್ಕೋಸ್ಕರ ಸಂವತ್ಸರಕ್ಕೊಂದು ಬಾರಿ ತುಲಾಮಾಸದಲ್ಲಿ ಭೂಮ್ಯಂತರ್ಗರ್ಗವಾಗಿಯೇ ಗಮಿಸಿ, ಸ್ಪರ್ಶನವಾತ್ರದಿಂದ ಸರ್ವವನ್ನೂ ಪವಿತ್ರವಾಗಿ ಮಾಡುವ ನಿಸರ್ಗ ಸರ್ವಶುದ್ಧಿಯಾದ ಕಾವೇರೀಯೊಡನೆ ಸಂಗಮವಾಗುವಳು. ಈ ಸಂಕ್ರಮಣ ಕಾಲದಲ್ಲಿ ಸ್ನಾನವಮಾಡಿ ಮುಕ್ತರಾಗಬೇಕೆಂದು ಲಕ್ಷಾಂತರ ಜನರು ತಲಕಾವೇರಿಗೆ ಪ್ರತಿಸಂವತ್ಸರವೂ ಹೋಗಿ ಬರುವರು. ಈ ಜಾತ್ರೆ ಸುಮಾರು ಒಂದು ತಿಂಗಳು ನಡೆಯುವದು. ಈ ಕಾಲದಲ್ಲಿ ತಕ್ಕಮಟ್ಟಿಗೆ ಪ್ರಸನ್ನವಾಗಿರುವ ಆಕಾಶವನ್ನೂ, ಕುಯಲಿಗೆ ಸಿದ್ಧವಾಗಿ ಹೊಂಬಣ್ಣದಿಂದೆಸೆಯುತ್ತಿರುವ ಬತ್ತದ ಗದ್ದೆಗಳನ್ನೂ,

ಎಲ್ಲಿ ನೋಡಿದರೂ ಬಿಗುತು ಹಚ್ಚಿಗೆ ಶೋಭಿಸುವ ನವವೃಕ್ಷಗಳನ್ನೂ, ಗುಡ್ಡಗ
ಳನ್ನೂ, ಕೊಡಗಿನ ನಾನಾಭಾಗಗಳಿಂದಲೂ ಮಲಯಾಳ ತುಳುವ ಮೈಸೂರು ಮುಂ
ತಾದ ಪಾರ್ಶ್ವಗಳಿಂದಲೂ ಸೋಪತಿಯಾಗಿ ಅಸಂಖ್ಯಾತವಾಗಿ ಮೂಟೆಗಳನ್ನು
ಹೊತ್ತುಕೊಂಡು, ಕೋಲೂರಿಕೊಂಡು ಹೋಗುತ್ತಿರುವ ಆಬಾಲವೃದ್ಧಪರ್ಯಂತ
ಸ್ತ್ರೀ ಪುರುಷರನ್ನೂ, ತಲೆಕಾವೇರಿಯಲ್ಲಿ ನಡೆಯುವ ಮಹೋತ್ಸವವನ್ನೂ ನೋಡುವ
ದಕ್ಕೆ ಬಹು ರಮ್ಯವಾಗಿರುವದು. ತಲೆಕಾವೇರಿ ಬೆಟ್ಟದ ಬುಡದಲ್ಲಿರುವ ಸಣ್ಣದೊಂ
ದು ಗುಡ್ಡವನ್ನು ಹತ್ತುತ್ತಿಲೆ ಪರ್ವತಮಧ್ಯದಲ್ಲಿ ಅಗಲವಾಗಿ ಪ್ರವಹಿಸುತ್ತಿರುವ ನದೀ
ಪಾತ್ರದ ಅಗ್ರಭಾಗವು ದೃಕ್ಪಥವನ್ನೈದುವುದು. ಅಲ್ಲಿಯೇ ಕಾವೇರೀ ತೀರದಲ್ಲಿ
ಭಾಗಮಂಡಲದೇವಸ್ಥಾನದ ತಾಮ್ರಮಯವಾದ ಉಪರಿಭಾಗವು ಕಣ್ಣಿಗೆ ಬೀಳು
ವುದು. ಎಲ್ಲಿ ನೋಡಿದರೂ ಪಣ್ಯವೀಥಿಗಳೇ ತುಂಬಿಕೊಂಡು, ಅತ್ತಿತ್ತಲೆಡೆಯೂ
ಡುತ್ತಿರುವ ಜನಗಳ ಕಲಕಲಧ್ವನಿ ದೂರದಿಂದ ಕೇಳಬರುವ ಸಮುದ್ರಘೋಷವನ್ನೆನು
ಕರಿಸುತ್ತಿರುವುದು. ಅನೇಕರು ಪುಣ್ಯಕರವಾದ ನದಿಯಲ್ಲಿ ಸ್ನಾನಾಹ್ನಿಕಗಳನ್ನು ತೀರಿ
ಸಿಕೊಂಡು ದೇವಾಲಯಕ್ಕೆ ದೇವದರ್ಶನಾರ್ಥಿಗಳಾಗಿ ಹೋಗಿಬರುತ್ತಿರುವರು. ದಾ
ರಿಯಲ್ಲೆಲ್ಲ ಚಿಲ್ಲರೆ ವ್ಯಾಪಾರಿಗಳು ಒಂದೊಂದು ಕಂಬಳಿಯನ್ನೋ ಚಾಪೆಯನ್ನೋ
ಹಾಸಿಕೊಂಡು ಹೊತ್ತುತಂದ ಮೂಟೆಗಳನ್ನು ಬಿಚ್ಚಿಕೊಂಡು ಕುಳಿತಿರುವರು. ಪೀ
ತಾಂಬರಗಳನ್ನೂ ತುಲಸೀ ವನಮಾಲಿಕೆಗಳನ್ನೂ ಊರ್ಧ್ವಪುಂಡ್ರಗಳನ್ನೂ ಧರಿಸಿದ
ದಾಸಯ್ಯಗಳು ಶಂಖವನ್ನೂದುತ್ತಾ ಜಾಗಟೆಯನ್ನು ಬಡಿಯುತ್ತಾ, ಗೋವಿಂದ ಧ್ವ
ನಿಮಾಡುತ್ತಾ, ಪುಣ್ಯಾತ್ಮರು ಕೊಟ್ಟ ಕಾಸುಕವಡೆಗಳನ್ನು ಚೀಲಕ್ಕೆ ಸೇರಿಸುತ್ತಾ
ದೊಂಬಿಯಲ್ಲಿ ಒತ್ತಿಕೊಂಡು ನಡೆಯುತ್ತಿರುವರು. ಕ್ಷಣಕ್ಷಣಕ್ಕೆ ಪರ್ಸೆಯುಹನ ಹೆಚ್ಚಿ
ಬರುವುದು ಬೆಟ್ಟದ ನಾಲ್ಕುಕಡೆಗಳಿಂದಲೂ ಹೊಸಹೊಸದಾಗಿ ಜನರು ಬಂದು
ಸೇರುತ್ತಿರುವರು.

ಇಷ್ಟು ಹೊತ್ತಿಗೆ ಅನೇಕರು ನದೀಮೂಲವನ್ನು ಕುರಿತು ತೆರಳಿ ತಮಗೂ
ಮುಂದೆಬರತಕ್ಕ ತಮ್ಮ ಸ್ನೇಹಿತರಿಗೂ ರಾತ್ರಿಯ ಶೀತಭೀತಿಯನ್ನು ನಿವಾರಿಸಿಕೊ
ಳ್ಳುವದಕ್ಕೋಸ್ಕರ ಅಲ್ಲಲ್ಲಿ ನಾರಿಕೇಳ ಪರ್ಣಶಾಲೆಗಳನ್ನು ರಚಿಸುತ್ತಿರುವರು. ಈ ಜನ
ರು ಗುಂಪು ಗುಂಪಾಗಿ ಹತ್ತುತಾ ಕಷ್ಟ ನಿವಾರಣಾರ್ಥವಾಗಿ "ನಾರಾಯಣ, ಓ
ನಾರಾಯಣ" ಎಂದು ಕಿನಿಯೊಡೆವಂತೆ ಭಗವನ್ನಾಮಕೀರ್ತನವನ್ನು ಮಾಡುತಾ

ಮ್ಮ ಬೆನ್ನಿನಲ್ಲಿಯೇ ಬರುವ ಸೋಪತಿಯವರಿಗೆ ಎಚ್ಚರಿಸುತ್ತಲೆ ಅವರೂ ಅದೇರೀತಿ ನಗವನ್ನಾಮವನ್ನು ಚ್ಚರಿಸುತ್ತಾ ಹೊರಡುವರು. ಬೆಟ್ಟದಮೇಲಕ್ಕೆ ಹೋದರೆ ಅಲ್ಲಿ ನೀಮಕಲ್ಲು ಎಂಬುದೊಂದು ದೊಡ್ಡ ಅರೆಯಿರುತದು. ಜಾತ್ರೆಯಕಾಲದಲ್ಲಿ ಈ ಅರೆ ನೇಕ ಪಕೀರರಿಗೆ ಆಶ್ರಯವಾಗಿರುವುದು. ನದಿ ಉದ್ಭವವಾಗಿರುವ ಪ್ರದೇಶದ ಸುತ್ತಲೂ ಹಾಸುಗಲ್ಲುಗಳನ್ನು ಹಾಸಿ, ಮೇಲ್ಗಡೆ ದಿವ್ಯಶಿಲೆಗಳಿಂದ ಒಂದು ಮಂಟಪವನ್ನು ನಿರ್ಮಿಸಿರುವರು. ಇಲ್ಲಿ ಉದ್ಭವವಾದ ಸಲಿಲರಾಶಿ ಮುಂದೆಸಾಗಿ ಸುಮಾರು ೩೦ ಅಡಿ ಚದರವುಳ್ಳ ಮತ್ತೊಂದು ಸರೋವರಕ್ಕೆ ಬರುವುದು. ಇದರಲ್ಲಿ ನೀರು ಯಾವಾಗಲೂ ೨॥ ಅಡಿ ಆಳವಿದ್ದುಕೊಂಡು ಹೆಚ್ಚು ನೀರೆಲ್ಲ ಮುಂದಕ್ಕೆ ಹರಿವುದು. ಸನಿಯದಲ್ಲಿಯೇ ಒಂದು ಗಣಪತಿ ದೇವಸ್ಥಾನವೂ ಒಂದೆರಡು ಅರ್ಚಕರ ಮನೆಗಳೂ ಇವೆ.

ಮೌಹೂರ್ತಿಕರು ನಿಶ್ಚೈಸಿರುವಂತೆ, ರಾತ್ರಿಯಾಗಲಿ ಹಗಲಾಗಲಿ ಸೂರ್ಯನು ತುಲಾರಾಶಿಗೆ ಪ್ರವೇಶವಾಡುವ ಗಳಿಗೆಗೆ ಸರಿಯೂಗಿ, ತಮ್ಮ ತಮ್ಮ ಪಾಪಗಳನ್ನೆಲ್ಲ ಕಳೆದುಕೊಳ್ಳಬೇಕೆಂಬ ಉತ್ಸಾಹವುಳ್ಳವರೆಲ್ಲರೂ ಸರಸ್ಸಿಗಿಳಿದು ಸ್ನಾನಮಾಡಬೇಕು. ಆ ಮುಹೂರ್ತ ಬರುವುದರೊಳಗಾಗಿ ಲಕ್ಷಾಂತರ ಜನರು ಆತುರದಿಂದ ಕಾಲನಿರೀಕ್ಷಣೆ ಮಾಡುತ್ತಾ ಸುತ್ತಲೂ ಕುಳಿತಿರುವರು. ಕಾಲವೊದಗುತ್ತಲೆ ಅಲ್ಲಗಧ್ಯಕ್ಷತೆಯನ್ನು ಪಡೆದ ಆಚಾರ್ಯಬ್ರಾಹ್ಮಣನು (ಗಂಗಾಪುತ್ರನೆಂತಲೂ ಕರೆಯುವರು) ಧೂಪದೀಪ ನೈವೇದ್ಯ ನೀರಾಜನಾದಿಗಳನ್ನು ಸಮರ್ಪಿಸಿ ಸಂಜ್ಞೆಮಾಡುತ್ತಲೆ, ಹುಡುಗರು ಮುದುಕರು ಸ್ತ್ರೀಯರು ಪುರುಷರು ಸಕಲರೂ ದಡಬಡನೆ ಕೆಳಗಣ ಸರಸ್ಸಿಗೆ ನುಗ್ಗಿ ಬುಡುಕ್ ಬುಡುಕ್ಕೆಂದು ಮೂರುಬಾರಿ ಮುಳುಗಿ ಆಚಮನವಾಡಿ ಹಾಗೆಯೇ ಮೊದಲನೆಯ ಕೊಳದ ಬಳಿಗೆ ಬಂದು ಅಲ್ಲಿ ಕುಳಿತಿರುವ ಬ್ರಾಹ್ಮಣರಿಗೆ ಯಥಾಶಕ್ತ್ಯಾಯವಾಗಿ ದಕ್ಷಿಣೆಗಳನ್ನು ಕೊಡುವರು. ಆಗ ಅವರುಕೊಟ್ಟದ್ದನ್ನು ಸ್ವೀಕರಿಸಿ ಇವರ ತಲೆಯಮೇಲೆ ಪಾತ್ರೆಗಳಿಂದ ಉದ್ಭವವಾಗುವೆಡೆ ಇರುವ ನಿರ್ಮಲವಾದ ನೀರನ್ನು ತುಂಬಿಸುರಿಯುವರು. ಯಾತ್ರೆಗೆ ಹೋದವರು ಅಲ್ಲಿಂದ ಹಿಂತಿರುಗುವುದಕ್ಕೆ ಮೊದಲು ತಮ್ಮ ಬಂಧುಗಳಿಗಾಗಿಯೂ ಪೂಜಾರ್ಥವಾಗಿಯೂ ಓಟೆಯ ಕೊಳವೆಗಳಲ್ಲಿ ಕಾವೇರೀ ತೀರ್ಥವನ್ನು ತುಂಬಿಕೊಂಡು ಬರುವರು. ಇದಲ್ಲದೆ ಕಾವೇರ್ಯುದ್ಭವದಿನ ಕೂಡಿಗನವರೆಲ್ಲರೂ ತಮ್ಮತಮ್ಮ ಮನೆಗಳಲ್ಲಿ ಹಬ್ಬವನ್ನು ಮಾಡಿಕೊಂಡು ಸುಖಭೋಜನವನ್ನು ಮಾಡಿ ಸುಖಸಂಕಥಾಗೋಷ್ಠಿಯಲ್ಲಿ ಕಾಲವನ್ನು ಕಳೆಯುವರು.

ಕೊಡಗುದೇಶದಲ್ಲಿ ಕಾವೇರಿ ಬಹು ವಕ್ರಗಾಮಿನಿಯಾಗಿರುವಳು. ಆದರೆ ನಾಗಮಂಡಲದಿಂದ ಮುಂದಕ್ಕೆ, ಅಲ್ಲಲ್ಲಿ ಬಂಡೆಗಳಿರುವ ಪ್ರದೇಶಗಳಲ್ಲಿ ವಿನಹ ಮಿಕ್ಕೆ ಡೆಗಳಲ್ಲಿ ಪ್ರವಾಹವು ಶಾಂತವಾಗಿರುವದು. ಉನ್ನತವಾಗಿಯೂ ಕಡದಾಗಿಯೂ ಇರುವ ತೀರಪ್ರದೇಶಗಳು ಒಂದೊಂದುಕಡೆ ಜೇಡಿಮಣ್ಣಿನಿಂದಲೂ ಒಂದೊಂದುಕಡೆ ಮೃದುವಾದ ಮಣ್ಣಿನಿಂದಲೂ ಕೂಡಿ ನಾನಾವೃಕ್ಷಗುಲ್ಮಾದಿಗಳಿಗೆ ಎಡೆಯೂಗಿರುವುವು. ಈ ನದಿಯು ತಳದಲ್ಲಿ ಕೆಲವೆಡೆ ಮರಳೂ, ಕೆಲೆಡೆ ನೊರಜಕಲ್ಲೂ ಕೆಲವೆಡೆ ಬಂಡೆಗಳೂ ಸಿಕ್ಕುವುವು. ಇವುಗಳಲ್ಲಿ ಬಂಡೆಗಳೇ ಹೆಚ್ಚು. ಬಿಸಿಲಕಾಲದಲ್ಲಿ ನದಿಯನ್ನು ಬಹಳಕಡೆ ಹಾಯಬಹುದು ಹೀಗಿದ್ದರೂ, ಮೂಲವು ಸವಿಾಪದಲ್ಲಿಯೇ ಇದ್ದರೂ ಸಾಮಾನ್ಯವಾಗಿ ನದಿಯಲ್ಲಿ ಯಥೇಚ್ಛವಾಗಿ ನೀರಿದ್ದೇಇರುವದು.

ಮಳೆಗಾಲದಲ್ಲಿ ಪ್ರವಾಹದ ವೇಗವು ಮೃತ್ತಿಕೆಯಿಂದ ಕಲುಷವಾದ ನೀರು ಭೋರ್ಗರೆಯುತ್ತಾ ದಾರಿಯಲ್ಲಿ ಸಿಕ್ಕಿದ ಪೊದೆಗಳನ್ನೂ, ಮರಗಳನ್ನೂ ಕೊಚ್ಚಿಕೊಂಡು, ಒಂದೊಂದುಬಾರಿ ಸವಿಾಪದಲ್ಲಿರುವ ಗ್ರಾಮಗಳಿಗೆಲ್ಲ ಉಕ್ಕಿ ಹರಿವುದು. ಈ ಪ್ರವಾಹಕಾಲದಲ್ಲಿ ಫ್ರೇಜರ್ ಪೇಟೆಯ ಬಳಿಯಲ್ಲಿ ೨೦—೩೦ ಅಡಿಗಳ ಆಳವಿರುವದು. ಇಲ್ಲಿ ಸುಮಾರು ೫೧೬ ಅಡಿ ಉದ್ದವಾದ ಕಲ್ಲಿನ ಸೇತುವೆಯೊಂದಿದೆ

ಮಡಿಕೇರಿಗೂ ನಾಲ್ಕುನಾಡಿಗೂ ಮಧ್ಯದಲ್ಲಿರುವ ತಗ್ಗಿನಲ್ಲಿಳಿದು ಬರುತ್ತಾ ನದಿ ಸದ್ದಾಪ್ಪುರದ ಬಳಿಯಲ್ಲಿ ಫಕ್ಕನೆ ಉತ್ತರಕ್ಕೆ ತಿರುಗಿ ಪೂರ್ವಸೀಮಾಂತದಲ್ಲಿ ೨೫ ಮೈಲುಗಳವರೆಗೆ ಅನೇಕ ಉಪನದಿಗಳನ್ನು ಸ್ವೀಕರಿಸಿ ಹರಿವುದು. ಕಕಬೆ ಎಂಬ ಉಪನದಿ ತಡಿಯಂಡಮೊಳವೆಂಬ ಬೆಟ್ಟದಿಂದ ಹರಿದು ಪದಿನಾಲ್ಕುನಾಡನ್ನೂ ಕಡಿಯತ್ತಾ ನಾಡನ್ನೂ ವಿಭಾಗಿಸಿಕೊಂಡು ಪ್ರವಹಿಸುತ್ತಾ ಕಾವೇರಿಯೊಡನೆ ಸೇರುವುದು. ಹೀಗೆಯೇ ಬಿಶ್ವನಾಡಿನಲ್ಲಿ ಕಡನೂರು ನದಿಯೂ, ಎಡೆನಾಲ್ಕುನಾಡಿನಲ್ಲಿ ಕುಮ್ಮಹೊಳೆಯೂ ಬಂದು ಸೇರುವುವು ಮುಂದಕ್ಕೆ ಬರುತ್ತಾ ಮುಟ್ಟರಿ ಮುಟ್ಟವೆಂಬ ನದಿ ಮಡಿಕೇರಿಯ ದಕ್ಷಿಣಭಾಗದ ತಗ್ಗಿನಲ್ಲಿ ಸೇರುವ ನೀರನ್ನೂ ಚಿಕ್ಕಹೊಳೆ ಹೆಸರೂರು ನೊರೊಕ್ಕಲನಾಡಿನ ನೀರನ್ನೂ ತಂದು ಕಾವೇರಿಗೆ ಸುರಿವುವು. ಇದೇರೀತಿಯಲ್ಲಿ ಹಾರಂಗಿಯೂ, ಸೋಮವಾರಪೇಟೆಯಿಂದ ಕಕ್ಕೆತೊಳೆಯೂ, ಶಾಂತಳ್ಳಿಯಿಂದ ಚೋರನಹೊಳೆಯೂ, ಕೋಟೆಬೆಟ್ಟದಿಂದ ಮಟ್ಟಾಪ್ಪುರದ ಹೊಳೆಯೂ, ಹಟ್ಟಿಹೊಳೆಯೂ ಕೊಡಗಿನ ಉತ್ತರಭಾಗದ ಮೈದಾನದಲ್ಲಿ ಹರಿದುಬಂದು ಕಾವೇರಿಗೆ ಬೀಳುವುವು.

ಇವುಗಳಲ್ಲಿ ಅನೇಕ ನದಿಗಳು ಬಂಡೆಗಳ ಮೇಲೆ ಹರಿಯುತ್ತಾ ಅಲ್ಲಲ್ಲಿ ಜಲಪ್ರಪಾತಗಳಾಗಿ ಕಂಗೊಳಿಸುವುವು. ಮಡಿಕೇರಿಯ ಬಳಿಯಲ್ಲಿ ಜೆಸ್ಸಿ-ಫಾಲ್ ಎಂಬ ಪ್ರಪಾತವು ರಮ್ಯವಾಗಿರುವುದರಿಂದ ಬಹುಮಂದಿ ಅಲ್ಲಿಗೆ ವಿಹಾರಾರ್ಥವಾಗಿ ಹೋಗಿ ಬರುವರು. ಸಂಪಾಜಿಕಣಿವೆಯುಲ್ಲಿರುವ ಅನೇಕ ಕಾಫೀ ತೋಟಗಳಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಜಲಪಾತಗಳು ಮನೋಹರವಾಗಿವೆ.

ಕಾವೇರೀನದಿಯು ತಲೆಕಾವೇರಿಯಿಂದ ಪೂರ್ವದಿಕ್ಕಿಗೆ ಹರಿಯುತ್ತಾ ಸಿದ್ದಾಪುರದ ಬಳಿಯಲ್ಲಿ ಉತ್ತರಕ್ಕೆ ತಿರುಗಿ ಫ್ರೇಜರ್‌ಪೇಟೆಯ ಬಳಿಯಲ್ಲಿ ಮೈಸೂರಿನ ಎಲ್ಲೆಯನ್ನು ಮುಟ್ಟುವುದು. ಅಲ್ಲಿಂದ ಹಿಡಿದು ಕಣ್ಣಾಗಾಲವರೆಗೆ ೭೦ ಮೈಲುಗಳ ದೂರ ಕೊಡಗಿಗೂ ಮೈಸೂರಿಗೂ ಮಧ್ಯದಲ್ಲಿ ಸರಹದ್ದಾಗಿರುವುದು. ಅಲ್ಲಿಂದ ಮುಂದೆ ಉತ್ತರಕ್ಕೆ ಗವಿಸಿ ಹಾಸನ ಡಿಸ್ಟ್ರಿಕ್ಟಿಗೆ ಸೇರಿದ ಅಂಕಲಗೂಡು ತಾಲ್ಲೂಕಿನ ದಕ್ಷಿಣದಲ್ಲಿ ಕೆಲವು ಮೈಲು ಹರಿದು ಕೊಣನೂರಿನ ಬಳಿಯಲ್ಲಿ ಆಗ್ನೇಯಕ್ಕೆ ತಿರುಗಿ ಮುಂದೆ ಮೈಸೂರು ಡಿಸ್ಟ್ರಿಕ್ಟಿನಲ್ಲೆಲ್ಲ ಅದೇಮುಖವಾಗಿ ಹರಿವುದು. ಮೈಸೂರು ಡಿಸ್ಟ್ರಿಕ್ಟನ್ನು ಸಾಲಿಗ್ರಾಮದ ಬಳಿಯಲ್ಲಿ ಪ್ರವೇಶಿಸಿ ಕಿಷ್ಕಿಂಧವಾದುದೊಂದು ಕಣಿವೆಯಲ್ಲಿ ವೇಗವಾಗಿ ಹರಿದು, ಚುಂಚನಕಟ್ಟೆಯ ಬಳಿಯಲ್ಲಿ ೬೦-೭೦ ಅಡಿ ಕೆಳಕ್ಕೆ ಕುಪ್ಪಳಿಸುತ್ತದೆ. ಮುಂದೆ ಎಡತೊರೆಯಿಂದ (ತೊರೆ ಎಡಕ್ಕೆ ತಿರುಗುವ ಭಾಗ) ಸ್ವಲ್ಪ ಉತ್ತರಕ್ಕೆ ಬಗ್ಗಿಕೊಂಡು ಪುನಃ ಆಗ್ನೇಯಕ್ಕೇ ಹರಿಯುವಾಗ ತಿಪ್ಪೂರಿನ ಬಳಿಯಲ್ಲಿ ಉತ್ತರದಿಂದ ಹೇಮಾವತೀ ನದಿಯೂ, ಬೈರಾಪುರದ ಬಳಿಯಲ್ಲಿ ದಕ್ಷಿಣದಿಂದ ಲಕ್ಷ್ಮಣತೀರ್ಥವೂ ಬಂದು ಸಂಗಮವಾಗುತ್ತವೆ. ಇನ್ನೂ ಮುಂದಕ್ಕೆ ಬರುತ್ತಾ ಬಳಗೊಳದ ಬಳಿಯಲ್ಲಿ ಒಂದೆರಡು ಸಣ್ಣ ದ್ವೀಪಗಳೂ ಶ್ರೀರಂಗಪಟ್ಟಣದಲ್ಲಿ ದೊಡ್ಡದೊಂದು ದ್ವೀಪವೂ ಕಲ್ಪಿಸಲ್ಪಟ್ಟಿವೆ ಬಳಗೊಳಕ್ಕೆ ೧ ಮೈಲು ದೂರದಲ್ಲಿ ಬಲಮುರೀ ಕ್ಷೇತ್ರವಿದೆ. ಶ್ರೀರಂಗಪಟ್ಟಣದ ದ್ವೀಪವು ಉದ್ದದಲ್ಲಿ ೩ ಮೈಲೂ, ಅಗಲದಲ್ಲಿ ೧ ಮೈಲೂ ಇದೆ. ಇದಕ್ಕೆ ಈಶಾನ್ಯಭಾಗದಲ್ಲಿ ಕರೀಘಟ್ಟಕ್ಕೆ ಎದುರಾಗಿ ಲೋಕಪಾವನೀ ನದಿ ದ್ವೀಪವನ್ನು ಬಳಸಿರುವ ಕಾವೇರೀ ನದಿಯ ಉತ್ತರಶಾಖೆಗೆ ಬಂದು ಬೀಳುತ್ತದೆ ಮತ್ತೊಂದು ಶಾಖೆ ಪಶ್ಚಿಮವಾಗಿ ಹರಿದು ಪಶ್ಚಿಮವಾಹಿನಿಯೆಂಬ ಪುಣ್ಯಕ್ಷೇತ್ರವಾಗಿದೆ. ಎರಡು ಶಾಖೆಗಳೂ ಪುನಃ ಗಂಜಾಮ ಬಳಿಯಲ್ಲಿ ಸಂಗಮವಾಗುತ್ತವೆ. ಕಾವೇರಿ ತಿರುಮಕೂಡಲು ನರಸೀಪುರಕ್ಕೆ ಬರುತ್ತಲೆ ಅಲ್ಲಿ ಕಪಿಲಾನದಿ ದಕ್ಷಿಣದಿಂದ ಬಂದು ಸಂಗಮ

ವಾಗುವುದು. ಈರೀತಿಯಲ್ಲಿ ಅಡಿಗಡಿಗೆ ಉಪನದಿಗಳಿಂದ ವೃದ್ಧಿಹೊಂದಿದ ನದಿ ಮುಂದೆ ಪೂರ್ವಕ್ಕೂ ದಕ್ಷಿಣಕ್ಕೂ ಹರಿದು ಮುಡುಕುದೊರೆ ಹೆಮ್ಮಿಗೆಗಳ ಮಾರ್ಗವಾಗಿ ಪುರಾತನಪ್ರದೇಶವೂ ಪುಣ್ಯಸ್ಥಳವೂ ಎನ್ನಿಸಿಕೊಂಡು ಮರಳಿನ ರಾಶಿಗಳಿಂದ ಶೋಭಿಸುತ್ತಿರುವ ತಲಕಾಡಿಗೆ ಬಂದು, ಅಲ್ಲಿಂದ ಪೂರ್ವದಿಕ್ಕಿಗೆ ಗಮಿಸುತ್ತಿರುವಾಗ ಕುಕ್ಕೂರಿನ ಬಳಿಯಲ್ಲಿ ದಕ್ಷಿಣದಿಂದ ಹೊನ್ನು ಹೊಳೆ ಬಂದು ಸೇರುತ್ತದೆ. ಇಲ್ಲಿಂದ ಮುಂದೆ ಕಾವೇರಿ ಮೈಸೂರಿಗೂ ಕೊಯಮತ್ತೂರಿಗೂ ಮಧ್ಯದಲ್ಲಿ ೪೦ ಮೈಲುಗಳವರೆಗೆ ಎಲ್ಲೆಯಾಗಿದೆ. ತಲಕಾಡಿನಿಂದ ಶಿವನಸಮುದ್ರದವರೆಗೆ ನದಿ ಉತ್ತರಕ್ಕೆ ಹರಿಯುತ್ತದೆ. ಶಿವನಸಮುದ್ರದ ದ್ವೀಪದ ಬಳಿಯಲ್ಲಿ ನದಿ ೨ ಶಾಖೆಗಳಾಗಿ ಒಡೆದು ಪುಮ್ಮಾರು ೩ ಮೈಲು ಉದ್ದವೂ ೨ ಮೈಲು ಅಗಲವೂ ಇರುವ ಆ ದ್ವೀಪವನ್ನು ಆವರಿಸಿಕೊಂಡು, ಎರಡು ಶಾಖೆಗಳೂ ಪ್ರತ್ಯೇಕವಾಗಿ ಸುಮಾರು ೨೦೦ ಅಡಿ ಎತ್ತರದಿಂದ ಕೆಳಕ್ಕೆ ಧುಮುಕಿ ಎರಡು ದೊಡ್ಡ ಜಲಪ್ರಪಾತಗಳಾಗಿ, ಮೈಸೂರಿನಕಡೆ ಇರುವುದು ಗಗನಚುಕ್ಕಿ ಎಂದೂ, ಕೊಯಮತ್ತೂರಿನಕಡೆಗಿರುವುದು ಬರಚುಕ್ಕಿ ಎಂದೂ ಪ್ರಸಿದ್ಧವಾಗಿವೆ. ಬಳಿಕ ಎರಡು ಶಾಖೆಗಳೂ ಒಂದಾಗಿ ಪೂರ್ವಕ್ಕೆ ಹೊರಟು ಕಾಡಿನ ಮಾರ್ಗವಾಗಿ ಹರಿಯುತ್ತವೆ. ಇಲ್ಲಿ ಶಿಂಶಾನದಿಯೂ ಸ್ವಲ್ಪ ಮುಂದೆ ಅರ್ಕಾವತಿಯೂ ಉತ್ತರದಿಂದ ಬಂದು ಕಾವೇರೀಗೆ ಬೀಳುವವು. ಕೊಯಮತ್ತೂರು ಶಾಲ್ಯದ ಜಿಲ್ಲೆಗಳ ಎಲ್ಲೆಗಳು ಕೂಡುವ ಕಡೆಯಲ್ಲಿ ಕಾವೇರಿ ಮೈಸೂರು ಸಂಸ್ಥಾನವನ್ನು ಬಿಟ್ಟು ದಕ್ಷಿಣಕ್ಕೆ ಹರಿಯುತ್ತಾ ಆ ಜಿಲ್ಲೆಗಳಿಗೆ ಎಲ್ಲೆಯಾಗಿದ್ದುಕೊಂಡು ಭವಾನಿ ನಾಯಿಲ್ ಅಮರಾವತಿ ಮುಂತಾದ ಉಪನದಿಗಳನ್ನು ಸ್ವೀಕರಿಸುತ್ತದೆ. ಮುಂದೆ ತಿರುಚನಾಪಲ್ಲಿ ಡಿಸ್ಟ್ರಿಕ್ಟಿಗೆ ಪ್ರವೇಶಿಸಿ ಪೂರ್ವಾಭಿಮುಖವಾಗಿ ತಿರುಚನಾಪಲ್ಲಿ ಪಟ್ಟಣಕ್ಕೆ ಈಶಾನ್ಯದಲ್ಲಿ ೧೧ ಮೈಲು ದೂರದಲ್ಲಿ ಪುನಃ ಒಡೆದು ಎರಡು ಶಾಖೆಗಳಾಗುವುದು. ಉತ್ತರಶಾಖೆ ಕೊಲಿರೂನ್ ಅಥವಾ ಕೊಲ್ಲಡಂ ಎಂಬ ಹೆಸರಿನಿಂದ ಈಶಾನ್ಯಕ್ಕೆ ಪ್ರವಹಿಸಿ ಆ ಪಟ್ಟಣದ ಪೂರ್ವಕ್ಕೆ ೧೦ ಮೈಲು ದೂರದಲ್ಲಿ ತಂಜಾವೂರಲ್ಲಿ ಮುಖ್ಯಶಾಖೆಯೊಡನೆ ಸೇರಿಕೊಳ್ಳುತ್ತದೆ. ಎರಡೂ ಸೇರಿರುವಕಡೆ ನೀರೆಲ್ಲ ತಗ್ಗಿನಲ್ಲಿ ಹರಿಯುವ ಕೊಲಿರೂನಿಗೆ ನುಗ್ಗಿಬಿಡದೆ ಇರುವುದಕ್ಕೋಸ್ಕರ ೩ ನೆ ಶತಮಾನದಲ್ಲಿ ಚೋಳರಾಜರು ಒಂದು ದೊಡ್ಡ ಅಣೆಕಟ್ಟೆಯನ್ನು ಕಟ್ಟಿಸಿ ಎರಡನ್ನೂ ಪ್ರತ್ಯೇಕಿಸಿರುವರು. ಈ ಕಟ್ಟೆ ೧೦೯೦ ಅಡಿ ಉದ್ದವೂ ೪೦ ಅಡಿ ಅಗಲವೂ ೧೫—೧೯ ಅಡಿ ಮಂದವೂ ಇದೆ. ಮೇಲೆ ಹೇಳಿದ ಎರಡು

ಶಾಖೆಗಳಿಂದ ಆವೃತವಾದ ಪ್ರದೇಶದಲ್ಲಿಯೇ ಶ್ರೀರಂಗವೆಂಬ ಕ್ಷೇತ್ರವಿದೆ. ಇದು ೧೩ ಮೈಲು ಉದ್ದವೂ ೧। ಮೈಲು ಅಗಲವೂ ಇದೆ ತಂಜಾವೂರಿನಲ್ಲಿ ನದೀಶಾಖೆಗಳು ಬಲೆಯಂತೆ ಸುತ್ತಿಕೊಂಡು ಅಲ್ಲಿನ ಫಲಾತಿಶಯಕ್ಕೆ ಕಾರಣಭೂತವಾಗಿವೆ. ಇವುಗಳಲ್ಲಿ ಮುಖ್ಯಶಾಖೆಯಾದ ವೆನ್ನರ್ ಎಂಬುದು ಕೊಲಿರೂನ್‌ಶಾಖೆಗೆ ಸಂಗಮವಾಗುವ ಸ್ಥಾನಕ್ಕೆ ೭೦ ಮೈಲು ದಕ್ಷಿಣದಲ್ಲಿ ಸಮುದ್ರಸಂಗಮವಾಗುವುದು

ಕಾವೇರ್ಯುಪನದಿಗಳಲ್ಲಿ ಮುಖ್ಯನಾದವುಗಳ ವೃತ್ತಾಂತವೇನೆಂದರೆ :—

ಹೇಮಾವತಿ —ಇದು ವಸಾರ್ತ್ರ ತಾಲ್ಲೂಕಿನಲ್ಲಿ ಮೇಲುಬಂಗಾಡಿಯ ಬಳಿ ಜಾವಳಿಯಲ್ಲಿ ಹುಟ್ಟಿ, ದಕ್ಷಿಣಕ್ಕೆ ಹೊರಟು, ಬೂಂಗುಘಾಟಿನ ಬಳಿಯಲ್ಲಿ ಸೋಮಾವತಿಯೊಡನೆ ಸೇರಿಕೊಂಡು, ವಂಜರಾಬಾದ್ ತಾಲ್ಲೂಕಿನಲ್ಲಿ ಸಕಲೇಶಪುರವನ್ನು ದಾಟಿಬರುವಾಗ ಇದಕ್ಕೆ ಏಗೂರಿನ ಬಳಿಯಲ್ಲಿ ಏಗೂರುನದಿಯೂ, ಕೊಡಗಿನ ಸರಹದ್ದಿನಲ್ಲಿ ಕೇತೆ ಹಳ್ಳವೂ ಬಂದು ಬೀಳುತ್ತವೆ. ಅಲ್ಲಿಂದ ಪೂರ್ವಕ್ಕೆ ತಿರುಗಿ, ಸ್ವಲ್ಪದೂರ ಕೊಡಗಿನಲ್ಲಿ ಹರಿದು, ಪುನಃ ಮೈಸೂರನ್ನು ಪ್ರವೇಶಿಸಿ, ಗೊರೂರಿನ ಬಳಿಯಲ್ಲಿ ಯಗಚಿಯನ್ನು ಸ್ವೀಕರಿಸಿ, ಪೂರ್ವಾಭಿಮುಖವಾಗಿಯೇ ಹೊರಟು ಹೊಳೇನರಸೀಪುರವನ್ನು ದಾಟಿ ಗನ್ನೆಯಬಳಿಗೆ ಬರುತ್ತಲೆ ಅಲ್ಲಿಂದ ದಕ್ಷಿಣಕ್ಕೆ ತಿರುಗಿ, ಅತ್ತಿಕುಪ್ಪಾತಾಲ್ಲೂಕಿನಲ್ಲಿ ಹೊರಟು ತಿಪ್ಪೂರುಗಾ ಗ್ರಾಮದ ಬಳಿಯಲ್ಲಿ ಕಾವೇರಿಯಲ್ಲಿ ಸಂಗಮವಾಗುತ್ತದೆ ಯಗಚಿ (ಬದರೀ) ನದಿ ಬಾಬಾಬುಡನ್‌ಬೆಟ್ಟಗಳಲ್ಲಿ ಹುಟ್ಟಿ ದಕ್ಷಿಣಕ್ಕೆ ಹರಿದು ಪಶ್ಚಿಮದಿಂದ ಬರುವ ಬೆರಿಂಜಿ ಹಳ್ಳವನ್ನು ಸ್ವೀಕರಿಸಿ, ಬೇಲೂರುಮಾರ್ಗವಾಗಿ ಹರಿದು ಗೊರೂರಿನಬಳಿಹೇಮಾವತಿಗೆ ಬೀಳುವುದು

ಲಕ್ಷ್ಮಣತೀರ್ಥ :—ಇದು ಕೊಡಗುದೇಶದ ಬ್ರಹ್ಮಗಿರಿಗೆ ಸೇರಿದ ದವಸಿಬೆಟ್ಟದ ಮೂನಿಕಾಡು ಎಂಬ ಅರಣ್ಯದಲ್ಲಿ ಹುಟ್ಟಿ, ಕಕೊಟ್ಟ, ಕೆರೆಹೊಳೆಗಳೆಂಬ ಉಪನದಿಗಳೊಡನೆ ಕಿಗ್ಗಟ್‌ನಾಡನ್ನೆಲ್ಲ ವ್ಯಾಪಿಸಿಕೊಂಡು, ಮುಂದೆ ಒಂದು ಮಹಾಜಲಪ್ರಪಾತವಾಗಿ ಕ್ಷೇತ್ರವೆನಿಸಿಕೊಂಡು, ಮೈಸೂರುದೇಶವನ್ನು ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಚಿಕ್ಕಹೆಜ್ಜೂರು ಎಂಬ ಗ್ರಾಮಕ್ಕೆ ಎರಡುಮೈಲು ದಕ್ಷಿಣದಲ್ಲಿ ಪ್ರವೇಶಿಸಿ, ಹನಗೋಡು, ಹುಣಸೂರು, ಕಟ್ಟೆಮಳಲುವಾಡಿಗಳ ಮಾರ್ಗವಾಗಿ ಹರಿದು ಎಡತೊರೆ ತಾ

ಲೊಲ್ಲೋಕನ್ನು ಪ್ರವೇಶಿಸಿ ಸಾಗರಕಟ್ಟೆ ಎಂಬ ಗ್ರಾಮದ ಬಳಿಯಲ್ಲಿ ಕಾವೇರಿಯೊಡನೆ ಸಂಗಮವಾಗುತ್ತದೆ.

ಕಪಿಲಾನದಿ.—ಇದು ಉತ್ತರ ವೈನಾಡಿನಲ್ಲಿ ಪಶ್ಚಿಮಘಟ್ಟಗಳಲ್ಲಿ ಹುಟ್ಟಿ, ನೈರುತ್ಯ ದಿಕ್ಕಿನಿಂದ ಮೈಸೂರುದೇಶವನ್ನು ಹೆಗ್ಗಡದೇವನಕೋಟೆ ತಾಲೊಲ್ಲೋಕಿನಲ್ಲಿ ಪ್ರವೇಶಿಸಿ, ಕಾಕನಕೋಟೆಯ ಕಗ್ಗಾಡನ್ನು ದಾಟಿದಮೇಲೆ, ನಿಶಸ, ಮಗ್ಗಿಗಳ ಮಾರ್ಗವಾಗಿ ಪ್ರವಹಿಸಿ, ಸರಗೂರಿಗೂ ಮಟ್ಟಿಕೆರೆಗೂ ಸುತ್ತಿಕೊಂಡು ಬರುತ್ತದೆ. ಅಲ್ಲಿಂದ ಪೂರ್ವಕ್ಕೆ ತಿರುಗಿ ಭೃಗು ಕೌಂಡಿನ್ಯನದಿಗಳನ್ನು ಸ್ವೀಕರಿಸಿ, ತಾಯೂರನ್ನು ದಾಟಿದ ಮೇಲೆ ತಿರಮಕೂಡಲು ನರಸೀಪುರದಲ್ಲಿ ಕಾವೇರಿಯೊಡನೆ ಸಂಗಮವಾಗುತ್ತದೆ. ಭೃಗು (ನುಗು) ನದಿ ವೈನಾಡಿನಲ್ಲಿ ಹುಟ್ಟಿ ಹೆಗ್ಗಡದೇವನಕೋಟೆ ತಾಲೊಲ್ಲೋಕನ್ನು ಪ್ರವೇಶಿಸಿ ಉತ್ತರಕ್ಕೆ ಹರಿದು ಮೈಸೂರು ಮೊನಂದವಾಡಿದಾರಿಯಲ್ಲಿರುವ ಹಂಪಾಪುರವೆಂಬ ಗ್ರಾಮದಬಳಿ ಕಪಿಲಾನದಿಯೊಡನೆ ಸೇರಿಕೊಳ್ಳುತ್ತದೆ. ಕೌಂಡಿನ್ಯ (ಗುಂಡ್ಲು) ನದಿ ಯಾವರೋ, ಗೋಪಾಲಸ್ವಾಮಿಬೆಟ್ಟದ ಪೂರ್ವಭಾಗದ ಬೆಟ್ಟದ ನದಿಗಳಿಂದ ಹುಟ್ಟಿ, ಉತ್ತರಕ್ಕೆ ಹೊರಟು ಗುಂಡಲ್‌ಪೇಟೆಯ ತಾಲೊಲ್ಲೋಕಿನ ಮುಖಾಂತರವಾಗಿ ನಂಜನ ಗೂಡು ತಾಲೊಲ್ಲೋಕನ್ನು ಪ್ರವೇಶಿಸಿ, ನರಸಾಂಬುಧಿ ಎಂಬ ಕೆರೆಯನ್ನು ತುಂಬಿ, ಮುಂದೆ ಹೊರಟು ನಂಜನಗೂಡಿನಲ್ಲಿ ಕಪಿಲೆಯೊಡನೆ ಸಂಗಮವಾಗುತ್ತದೆ.

ಲೋಕಪಾವನಿ —ಇದು ನಾಗಮಂಗಲದ ಪಶ್ಚಿಮದಲ್ಲಿ ಹುಟ್ಟಿ ದಕ್ಷಿಣಮುಖವಾಗಿ ಫ್ರೆಂಚ್‌ರಾಕ್ಸ್‌ಬಳಿಯಲ್ಲಿ ಹರಿದು, ಮೋತೀತಲಾವ್‌ನಿಂದ ಬರುತ್ತಕ್ಕ ಪ್ರವಾಹ ದೊಡನೆ ಸೇರಿ, ಕರೀಘಟ್ಟಕ್ಕೆ ಎದುರಾಗಿ, ಶ್ರೀರಂಗಪಟ್ಟಣಕ್ಕೆ ಈಶಾನ್ಯದಲ್ಲಿ ಕಾವೇರಿ ಯೊಡನೆ ಸಂಗಮವಾಗುತ್ತದೆ.

ಶಿಂಶಾನದಿ (ಶಿಂಶುಸಾ, ಕದಂಬ, ಕಡಬಕೊಳ).—ಇದು ತುಮಕೂರು ಜಿಲ್ಲೆಯ ಕ್ಯಾತನಲ್ಲಿ ದೇವರಾಯದುರ್ಗಕ್ಕೆ ದಕ್ಷಿಣದಲ್ಲಿ ಹುಟ್ಟಿ, ನೈರುತ್ಯಕ್ಕೆ ತಿರುಗಿ, ಕಡಬ ತಾಲೊಲ್ಲೋ ಕಿನಲ್ಲಿ ಹೊರಟು ಕಡಬದ ಕೆರೆಯನ್ನು ತುಂಬಿ, ಅಲ್ಲಿಂದ ದಕ್ಷಿಣಕ್ಕೆ ಹರಿದು ಕಲ್ಲೂರಿನ ಬಳಿಯಲ್ಲಿ ತುರುವೇಕೆರೆಯ ತಟಾಕಕ್ಕೆ ಸೇರಿಕೊಂಡಿರುವ ನಾಗ ಎಂಬ ಉಪನದಿ ಯನ್ನೂ, ಮುಂದೆ ಕುಣಿಗಲುತಾಲೊಲ್ಲೋಕಿನಲ್ಲಿ ಕುಣಿಗಲಕೆರೆಯಿಂದ ಬರುವ ನಾಗಿನಿ ಎಂಬ ಪ್ರವಾಹವನ್ನೂ ಸ್ವೀಕರಿಸಿ, ಅಲ್ಲಿಂದ ಪೂರ್ವಕ್ಕೆ ತಿರುಗಿ ಹುಲಿಯೂರುದುರ್ಗದ ಪಶ್ಚಿಮಭಾಗದಲ್ಲಿರುವ ಬೆಟ್ಟಗಳ ಬಳಿಯಲ್ಲಿ ಹೊರಟು, ದಕ್ಷಿಣವಾಗಿ ಮದ್ದೂರು

ತಾಲೊ್ಲೀಕಿಗೆ ಪ್ರವೇಶಿಸಿ, ಮಳವಳ್ಳಿ ತಾಲೊ್ಲೀಕಿನಲ್ಲಿ ಸುತ್ತಿಕೊಂಡು, ಶಿವನಸಮುದ್ರ ದಿಂದ ಮುಂದೆ ಕೆಲವ್ರಮೈಲು ದೂರದಲ್ಲಿ ಕಾವೇರಿಯೊಡನೆ ಸಂಗಮವಾಗುತ್ತದೆ.

ಹೊನ್ನುಹೊಳೆ (ಸುವರ್ಣಾವತಿ) —ಇದು ಮೈಸೂರು ಡಿಸ್ಟ್ರಿಕ್ಟಿನ ಆಗ್ನೇಯದಲ್ಲಿರುವ ಪರ್ವತಗಳಲ್ಲಿ ಗಜ್ಜಲಹಟ್ಟಿ ಕಣಿವೆಯ ಬಳಿಯಲ್ಲಿ ಹುಟ್ಟಿ ಈಶಾನ್ಯದಿಕ್ಕಿಗೆ ತಿರುಗಿ ಚಾಮರಾಜನಗರತಾಲೊ್ಲೀಕನ್ನು ಪ್ರವೇಶಿಸಿ ರಾಮಸಮುದ್ರ ಅಲೂರುಗಳನ್ನು ಬಳಸಿಕೊಂಡು ಯಳಂದೂರು ಜಹಗೀರಿನಲ್ಲಿ ಪ್ರವಹಿಸಿ, ಕೊಯಮತ್ತೂರು ರಾಜ್ಯಕ್ಕೆ ನುಗ್ಗಿ ಕೊಳ್ಳೇಗಾಲಕ್ಕೆ ಪಶ್ಚಿಮದಲ್ಲಿ ಹೊರಟು ಕರ್ಕೂರಿಗೆ ಎದುರಾಗಿ ಕಾವೇರಿಯೊಡನೆ ಸಂಗಮವಾಗುತ್ತದೆ.

ಅರ್ಕಾವತಿ —ಇದು ನಂದೀದುರ್ಗಕ್ಕೆ ಪಶ್ಚಿಮದಲ್ಲಿ ಬ್ರಹ್ಮಗಿರಿಯಲ್ಲಿ ಹುಟ್ಟಿ, ದೊಡ್ಡಬಳ್ಳಾಪುರದ ತಾಲೊ್ಲೀಕನ್ನು ಪ್ರವೇಶಿಸಿ, ದೊಡ್ಡಬಳ್ಳಾಪುರ, ಕಾಕೋಳು, ಹೆಸರುಘಟ್ಟದ ಕೆರೆಗಳನ್ನು ಕಲ್ಪಿಸಿ, ನೆಲಮಂಗಲದ ತಾಲೊ್ಲೀಕಿಗೂ ಬೆಂಗಳೂರು ತಾಲೊ್ಲೀಕಿಗೂ ಮಧ್ಯದಲ್ಲಿ ಹೊರಟು ದಾಸಿಯಲ್ಲಿ ಕುಮುದ್ವತಿಯನ್ನು ಸ್ವೀಕರಿಸಿ, ಸಾವನದುರ್ಗಕ್ಕೆ ಪಶ್ಚಿಮದಲ್ಲಿ ಹೊರಟು ಮಾಗಡಿ ತಾಲೊ್ಲೀಕಿನಲ್ಲಿ ಪ್ರವಹಿಸುತ್ತದೆ. ಬಳಿಕ ಕೊ್ಲೀಸ್‌ಪೇಟೆ ತಾಲೊ್ಲೀಕಿನಲ್ಲಿರುವ ರಾಮಗಿರಿ ಶಿವನಗಿರಿಗಳ ಮಧ್ಯದಲ್ಲಿ ನುಗ್ಗಿ ಕೊ್ಲೀಸ್‌ಪೇಟೆಯಿಂದ ಮುಂದೆ ಕಾನಕಾನಹಳ್ಳಿ ತಾಲೊ್ಲೀಕಿಗೆ ಪ್ರವೇಶ ಮಾಡಿ, ಮಡುವನಿದುರ್ಗದ ಬಳಿಯಲ್ಲಿ ಸುವರ್ಣಮುಖಿಯೊಡಗೂಡಿದ ವೃಷಭಾವತಿಯನ್ನು ಸ್ವೀಕರಿಸಿ, ಅಲ್ಲಿಂದ ದಕ್ಷಿಣಕ್ಕೆ ಹೊರಟು ಕಾನಕಾನಹಳ್ಳಿಯನ್ನು ಬಲಕ್ಕೆ ಬಿಟ್ಟುಕೊಂಡು ಬೆಂಗಳೂರು ಡಿಸ್ಟ್ರಿಕ್ಟಿನ ದಕ್ಷಿಣ ಸರಹದ್ದಿನಲ್ಲಿ ಕಾವೇರಿಯೊಡನೆ ಸಂಗಮವಾಗುತ್ತದೆ.

ವಿವೇಕಾವಿವೇಕ ಫಲ.

ಕಲ್ಪಲತೆ = * ಕಲ್ಪವೃಕ್ಷದ ಬಳ್ಳಿ. ಗ್ರಹಕೃತ್ಯ = ಬಾಳು.
ಧೃತಿ = ಧೈರ್ಯ. ಮುಕ್ಕುರ = ಹಟ.

* ಕಲ್ಪವೃಕ್ಷವು—ಇದು ಸ್ವರ್ಗದಲ್ಲಿನ ಮಹಿಮೆಯುಳ್ಳ ಮರವಾಗಿದೆ. ಕೇಳಿದ್ದನ್ನೆಲ್ಲ ಕೊಡತಕ್ಕದ್ದೆಂದು ಪುರಾಣಪ್ರಸಿದ್ಧವಾಗಿದೆ.

ಶ್ಲೋ॥ ಕಿಂಕಿಂನಸಾಧಯತಿ ಕಲ್ಪಲತೇವ ವಿದ್ಯಾ ॥
ಅರ್ಥವು:—ಕಲ್ಪಲತೆಯಂತೆ ವಿದ್ಯೆಯು ಏನೇನು ಕೊಡುವದಿಲ್ಲ ?
(ಅಂದರೆ ಎಲ್ಲವನ್ನೂ ಕೊಡುವದೆಂದರ್ಥವು.)

ಧರ್ಮಾವರವೆಂಬ ಅಗ್ರಹಾರದಲ್ಲಿ ಜಾನಕಮ್ಮನೆಂಬಾಕೆಗೆ ಇಬ್ಬರು ಮಕ್ಕಳಿದ್ದರು. ಅಕಿಯು ಹಿರಿಯವಳಿಗೆ ಚನ್ನಾಗಿ ವಿದ್ಯವನ್ನು ಕಲಿಸಿ ಮೊದಲಿಂದಲೂ ನೀತಿಯನ್ನು ರುಹಿದಳು. ಕಿರಿಯವಳು ವಿದ್ಯವಿಲ್ಲದೆ ಹುಟ್ಟಿದಹಾಗೆಯೇ ಇದ್ದಳು. ಜಾನಕಮ್ಮನು ಮದುವೆಗೆ ಬಂದ ಮಕ್ಕಳನ್ನು ನೋಡಿ ಬಡವನಾದರೂ ಚಿಂತೆಯಿಲ್ಲವೆಂದು ವಿದ್ಯಾವಂ ತನಿಗೆ ಹಿರಿಯವಳನ್ನು ವಿದ್ಯವಿಲ್ಲದಿದ್ದರೂ ಚಿಂತೆಯಿಲ್ಲವೆಂದು ಹಣಗಾರನಿಗೆ ಕಿರಿಯವ ಳನ್ನೂ ಕೊಟ್ಟು ಮದುವೆಮಾಡಿದಳು ಅವರು ತಂತಮ್ಮ ಗಂಡಂದಿರಮನೆಗೆ ಹೋಗಿ ಗೃಹಕೃತ್ಯವನ್ನು ನಡಿಸುತ್ತಾ ಇದ್ದರು.

ಹಿರಿಯವಳು ವಿದ್ಯಾವತಿಯಾದ್ದರಿಂದ ಬಡತನವಾಗಲಿ ಬಲ್ಲದತನವಾಗಲಿ ಶಾಶ್ವತವಲ್ಲ, ಮತ್ತು ಗಂಡನು ವಿದ್ಯಾವಂತನಾಗಿರುವದರಿಂದ ಜೀವನಕ್ಕೆ ನಿಮ್ಮದಿ ಯೆಂದು ಧೃತಿಗೊಂಡು ಇದ್ದಳು. ಈಕೆಯು ಯಾವಾವಕಾಲಕ್ಕೆ ಏನೇನು ಮಾಡ ಬೇಕೋ ಅದನ್ನು ಮಾಡಿ ದಂಪತಿಗಳು ಕಿತ್ತಾಟವಾಡದೆ ಗಂಡನನ್ನು ಅನುಸರಿಸಿ ಇದ್ದಳು. ಇದರಿಂದ ನೆರೆಹೊರೆಯವರಲ್ಲಿಯೂ ಗುಣವಂತೆ ಅನ್ನಿಸಿಕೊಂಡಳು.

ಕಿರಿಯವಳಾದರೋ ಅವಿದ್ಯಾವತಿಯಾದ್ದರಿಂದ ಕಾಲಾನುಕಾಲಗಳರಿಯದೆ ತಾನು ಕೇಳಿದ್ದನ್ನು ಕೊಟ್ಟೇತೀರಬೇಕೆಂದು ಮುಕ್ಕುರವನ್ನು ಹಿಡಿದು ಅನ್ನನೀರನ್ನು ಬಿಟ್ಟು ಕೂಡುತ್ತಿದ್ದಳು. ಗಂಡನು ಮೊದಲೇ ತಾರತಮ್ಯವನರಿಯದವನು. ಇ ರಿಂದ ಅವನು ಮತ್ತಷ್ಟು ಬೇಸರಗೊಂಡು ಈಗ ತರಲು ಅನುಕೂಲವಿಲ್ಲವೆಂದು ಗದ ರುವನು. ಹುಡುಗಿಯು ನಿನಗೆ ಅನುಕೂಲವೋ ಇಲ್ಲವೋ ಅದೆಲ್ಲಾ ನಾನು ಬಲ್ಲೆನೆ ಎಂದು ವಿವಶವಾಗಿ ವಾತನಾಡುತ್ತಿದ್ದಳು ಅದರಿಂದ ಕ್ರಮೇಣ ದಂಪತಿಗಳಿಗೆ ವೈ ನಸ್ಸು ಹೊಂದದೆ ಸಂಸಾರವು ದಿನೇ ದಿನೇ ಕ್ಷೀಣಗತಿಗೆ ಬಂತು.

ಹಿರಿಯವಳ ಗಂಡನು ಮನೆಯಲ್ಲಿ ಅಣಿಮುತ್ತಿನಂಥ ಹೆಂಡತಿಯು ಮಾಡುವ ಉಪಚಾರದಿಂದ ಹಿಗ್ಗಿ ತನ್ನ ಕೆಲಸದಲ್ಲಿ ಮುಂದುವರಿದನು

ಆದ್ದರಿಂದ ವಿವೇಕವೇಸ್ತ್ರೀಯರಿಗೆ ಬೇಕಾದದ್ದು, ಅವಿವೇಕವು ವಿದ್ಯೆಯಿಂ

ಬರುವುದು. ವಿದ್ಯೆಯಿಲ್ಲದೆ ಕಿರಿಯವಳಹಾಗೆ ಇದ್ದರೆ ಮೂರ್ಖರಾಗಿ ಗತಿಗೆಟ್ಟು ಹೋಗು ವಿರಿ. ಹಿರಿಯವಳಹಾಗೆ ಓದಿ ವಿವೇಕಶಾಲಿಗಳಾದರೆ ಹುಟ್ಟಿದಮನೆಗೂ ಕೊಟ್ಟಮನೆಗೂ ಕೀರ್ತಿಯನ್ನು ತರುವಿರಿ.

ಪ್ರಶ್ನೆ—(೧) ಜಾನಕಮ್ಮನು ಮಕ್ಕಳನ್ನು ಯಾವರೀತಿ ಸಾಕಿದಳು.

(೨) ಈಕೆಯು ಮದುವೆಮಾಡಿದ್ದರಲ್ಲಿ ಯಾವತಾರತಮ್ಯವನ್ನು ಅನುಸರಿಸಿದಳು.

(೩) ಬಲ್ಲಿದರಲ್ಲಿಸೇರಿದ ಕಿರಿಯವಳಸಂಸಾರವು ಕ್ಷೀಣಸ್ಥಿತಿಗೆ ಬಂದಕಾರಣವೇನು?

(೪) ಈ ಇಬ್ಬರಲ್ಲಿ ಯಾರನ್ನು ಒಳ್ಳೇವಳೆಂದು ಅನ್ನುವಿರಿ? ಅದು ಏಕೆ?

ಭೂಮಿಯ ಆಕಾರ.

ನೀವು ವಾಸಿಸತಕ್ಕ ಈ ಪ್ರಪಂಚವು ಯಾವ ಆಕಾರವಾಗಿರುವದು? ತಟ್ಟೆಯಾಗಿದೆಯೋ? ಚೌಕವಾಗಿದೆಯೇ? ಅಥವಾ ಬೊಗ್ಗಿದೆಯೇ? ಗುಂಡಾಗಿದೆಯೇ? ಸುತ್ತಮುತ್ತಲೂ ನೋಡಿದರೆ ನಾವು ಬಿಟ್ಟಗುಡ್ಡಗಳ ಸೀಮೆಯಲ್ಲಿರುವಪಕ್ಷದಲ್ಲಿ ಸುತ್ತಲೂ ಬಿಟ್ಟಗಳು ಕಾಣುವವು. ಇಲ್ಲದೆ ಬೈಲುಸೀಮೆಯಲ್ಲಿರುವಪಕ್ಷದಲ್ಲಿ ವಿಸ್ತಾರವಾದ ಮೈದಾನದ ಮಧ್ಯಪ್ರದೇಶದಲ್ಲಿ ನಿಂತು ನೋಡಿದರೆ ತಟ್ಟೆಯಂತೆ ಕಾಣುವದು. ಹಡಗಿನಮೇಲೆ ಕೂತು ಸಮುದ್ರದಮೇಲೆ ಪ್ರಯಾಣಮಾಡುತ್ತಿರುವಾಗ ಕೂಡ ಇದೇ ಅಭಿಪ್ರಾಯ ಉಂಟಾಗುವದು. ಮತ್ತು ಬಹುದೂರ ಹೋದರೆ ಅದರ ಕೊನೆಯನ್ನು ಮುಟ್ಟುವವೆಂತ ತಿಳಿಯುವೆವು ಪ್ರಾಯಶಃ ಬಹುಜನರು ಭೂವಿಯು ತಟ್ಟೆಯಂತೆ ಇರುವವೆಂದು ತಿಳಿದಿರುವ್ದಾರೆ. ಪೂರ್ವೀಕರು ಇದೇ ನಿಜವೆಂದು ದೃಢವಾಗಿ ನಂಬಿದ್ದರು. ಆದರೂ ಭೂವಿಯು ತಟ್ಟೆಯಂತಿಲ್ಲ ಅದರ ದೂರಭಾಗವು ಒಂದೇ ಮಟ್ಟದಲ್ಲಿಲ್ಲದೆ ಡೊಂಕಾಗಿರುವದು. ಭೂವಿಯು ಕಿತ್ತಲೆಹಣ್ಣಿನಹಾಗೆ ಗುಂಡಗಿದೆ ಎಂಬುದನ್ನು ಕೆಳಗೆ ಹೇಳುವ ಈ ಸಂಗತಿಗಳಿಂದ ನಿರ್ಧರಿಸಬಹುದು.

೧ ವಿಸ್ತಾರವಾದ ಮೈದಾನದಲ್ಲಿ ನಿಂತು ಸುತ್ತಲೂ ನೋಡಿದಲ್ಲಿ ನಮ್ಮ ದೃಷ್ಟಿಯು ನಾಲ್ಕು ಐದುಮೈಲಿಗಳ ವರೆಗೂ ಹೋಗುವದು. ಇದಕ್ಕಿಂತಲೂ ದೂರದಲ್ಲಿರುವ ಪ್ರದೇಶಗಳನ್ನಾಗಲೀ ಅಲ್ಲಿನಮರಕಟ್ಟಡಗಳನ್ನಾಗಲೀ ನಾವು ನೋಡ

ಲಾರೆವು. ಆದರೆ ಅಲ್ಲಿಯೇ ಇರಬಹುದಾದ ಒಂದು ದೇವಸ್ಥಾನದ ಗೋಪುರವ
ನ್ನಾಗಲೀ ಒಂದು ದೊಡ್ಡ ಮರವನ್ನಾಗಲಿ ಹತ್ತಿ ನೋಡಿದರೆ ಮೊದಲು ನೋಡದೇ
ಇದ್ದ ಅನೇಕ ಪ್ರದೇಶಗಳೂ ಮತ್ತು ಅಲ್ಲಿರುವ ವಸ್ತುಗಳೂ ಕಾಣುವವು. ಈಗ ನಮಗೆ
ಕಾಣುವ ಪ್ರದೇಶವು ಮೊದಲಿನದಕ್ಕಿಂತಲೂ ಎಷ್ಟೋ ವಿಸ್ತಾರವಾಗಿರುವದು. ಸವಿಾ
ಪದಲ್ಲಿಯೇ ಇರುವ ಒಂದು ಗುಡ್ಡವನ್ನು ಹತ್ತಿ ಶಿಖರದಮೇಲೆ ನಿಂತು ನೋಡಿದರೆ
ಇನ್ನೂ ದೊಡ್ಡಪ್ರದೇಶವು ನಮಗೆ ಕಾಣುವದು. ಆದ್ದರಿಂದ ಮೇಲೆಮೇಲಕ್ಕೆ ಹೋದ
ಹಾಗೆಲ್ಲಾ ನಮ್ಮ ದೃಷ್ಟಿಗೆ ಬೀಳುವ ಪ್ರದೇಶದ ವಿಸ್ತಾರವು ಹೆಚ್ಚುತ್ತಹೆಚ್ಚುತ್ತ
ಬರುವದು. ಭೂಮಿಯು ತಟ್ಟೆಯಾಗಿದ್ದರೆ ಹೀಗಾಗುತ್ತಿತ್ತೆ? ಎಂದಿಗೂ ಇಂ
ಹಾಗಿದ್ದರೆ ಎಲ್ಲವೂ ಏಕಕಾಲದಲ್ಲಿಯೇ ಕಾಣಲೇಬೇಕಾಗಿತ್ತು.

೨ ಸಮುದ್ರತೀರದಲ್ಲಿ ನಿಂತು ದಡಕ್ಕೆ ಬರುತ್ತಿರುವ [illegible]
ಗನ್ನು ನೋಡೋಣ? ಮೊದಲು ಅದರ ಧ್ವಜಪತಗಳು ಕಾಣುವವು. ಆಮೇಲೆ ಅದರ
ಮಧ್ಯಭಾಗ. ಕಡೆಗೆ ಹತ್ತಿರಬಂದಾಗ ಹಡಗೆಲ್ಲಾ ಕಾಣುವದು. ತೀರದಿಂದ ಹೊರಟು
ಅನ್ಯದೇಶಕ್ಕೆ ಹೋಗುವ ಹಡಗನ್ನು ನೋಡುತ್ತಿದ್ದರೆ ಮೊದಲು ತಳಭಾಗವು ಕಾಣದೇ
ಹೋಗುವದು. ಇನ್ನೂ ಕೊಂಚದೂರಹೋದಮೇಲೆ ಮಧ್ಯಭಾಗವು ಕಾಣಿಸದು.
ಕೊನೆಗೆ ಹಡಗೆಲ್ಲಾ ಅದೃಶ್ಯವಾಗುವದು. ಭೂಮಿಯು ಚಪ್ಪಟೆಯಾಗಿದ್ದ ಪಕ್ಷದಲ್ಲಿ
ಹತ್ತರ ಬಂದರೂ ದೂರಹೋದರೂ ಹಡಗೆಲ್ಲಾ ಏಕಕಾಲದಲ್ಲಿ ಕಾಣುತ್ತಿತ್ತು.

೩ ಯಾವದಾದರೂ ದೇವಪಟ್ಟಣದಿಂದ ಹೊರಟು ಹಡಗಿನಮೇಲೆ ಕೂತು
ಒಂದೇಕಡೆಗೆ ಸಂಚರಿಸುತ್ತಿದ್ದರೆ ಕೊನೆಗೆ ನಾವು ಹೊರಟಸ್ಥಳಕ್ಕೇನೆ ಬಂದು ಸೇರು
ವೆವು. ಹೀಗೆ ಅನೇಕರು ಭೂಪ್ರದಕ್ಷಿಣೆಯನ್ನು ಮಾಡಿರುತ್ತಾರೆ. ಭೂಮಿಯು ಗು
ಡಾಗಿದೆ ಎಂಬುವದಕ್ಕೆ ಇದು ಬಹು ಒಳ್ಳೇ ದೃಷ್ಟಾಂತವಾಗಿದೆ.

೪ ಬಿಸಿಲಿನಲ್ಲಾಗಲೀ ದೀಪದಬೆಳಕಿನಲ್ಲಾಗಲಿ ಯ
ಪದಾರ್ಥವನ್ನಿಟ್ಟರೆ ಅದರಿಂದುಂಟಾದ ನೆರಳು ಆ ವಸ್ತುವಿನ ಹಾಗೆಯೇ ಇರುವದು.
ಕುರ್ಚಿಯನ್ನಿಟ್ಟರೆ ನೆರಳು ಕುರ್ಚಿಯಂತೆಯೇ ಇಗುವದು. ಕಿತ್ತಲೆಹಣ್ಣಿನ ನೆರಳು
ಕಿತ್ತಲೆಹಣ್ಣಿನ ಹಾಗೆಯೇ ಗುಂಡಾಗಿರುವದು. ಪ್ರತ್ಯಕ್ಷ ಸಕ್ಷೆಯನ್ನು ನೋಡಿ
ಅದರಿಂದ ಸೂಚಿಸಲ್ಪಟ್ಟ ವಸ್ತುವನ್ನು ಹಾಗೆ ಭಾವಿಸುತ್ತೇವೋ ಹಾಗೆಯೇ ನೆ
ಳನ್ನೂ ನೋಡಿ ಅದು ಯಾವ ವಸ್ತುವಿನಿಂದ ಉಂಟಾಗಿರಬಹುದೋ ಅದನ್ನು ಊಹಿ

ಬಹುದು ಸೂರ್ಯನ ಬೆಳಕಿನಲ್ಲಿ ಭೂಮಿ ಇರುವದರಿಂದ ಇದರ ನೆರಳನ್ನು ನೋಡಿ ಇದರ ಆಕಾರವನ್ನು ಗೊತ್ತುಮಾಡಬಹುದು. ಆದರೆ ಈ ನೆರಳು ಯಾವದಾದರೂ ಒಂದು ಪದಾರ್ಥದಮೇಲೆ ಬಿದ್ದಲ್ಲದೇ ಇದನ್ನು ನಾವು ನೋಡಲಿಕ್ಕಾಗುವದಿಲ್ಲ. ಇದು ಆಗಾಗ್ಯೆ ಚಂದ್ರನಮೇಲೆ ಬೀಳುವದು. ಇದರಿಂದಲೇ ಚಂದ್ರಗ್ರಹಣ ಉಂಟಾಗುವದು. ಹೀಗೆ ಬಿದ್ದಿರುವ ನೆರಳಿನ ಅಂಚು ಗುಂಡಾಗಿರುವದು. ಭೂಮಿಯನೆರಳು ಕಿತ್ತಲೇಹಣ್ಣಿನ ನೆರಳಿನ ಹಾಗೆ ಗುಂಡಗಿರುವದರಿಂದ ಭೂಮಿಯು ಕಿತ್ತಲೆಹಣ್ಣಿನ ಹಾಗೆ ಗುಂಡಗಿದೆಯೆಂದು ನಿರ್ಧರವಾಗುತ್ತದೆ.

ಭೂಮಿ ಗುಂಡಾಗಿದೆ ಎಂಬ ಅಂಶವು ಮೇಲೆಹೇಳಿದ ವಿಷಯಗಳಿಂದ ಸ್ಥಿರ ಪಟ್ಟರೂ ನಮಗೆ ಎಲ್ಲಿ ನೋಡಿದರೂ ಚಪ್ಪಟೆಯಾಗಿರುವದಕ್ಕೆ ಕಾರಣವೇನೆಂದು ಕೇಳ ಬಹುದು. ಭೂಮಿಯು ಅತಿದೊಡ್ಡದೆಂಬುವದನ್ನು ನಾವು ಜ್ಞಾಪಕದಲ್ಲಿಡಬೇಕು. ಇದರ ಹೊರಭಾಗವು ಹತ್ತೊಂಬತ್ತುಕೋಟಿಯು ಎಪ್ಪತ್ತುಲಕ್ಷ ಚದರಮೈಲಿಗಳ ವಿಸ್ತೀರ್ಣವುಳ್ಳದ್ದಾಗಿರುವದು. ಯಾವಕಾಲದಲ್ಲಾದರೂ ನಾವು ನೋಡತಕ್ಕ ಭಾಗವು ಕೆಲವು ಚದರಮೈಲಿಗಳ ಮಾತ್ರವಿರುವದು. ಮತ್ತು ಸುಮಾರು ಲಕ್ಷಪಾಲಿನಲ್ಲಿ ಒಂದಾಗಬಹುದು. ಇಷ್ಟು ಸ್ವಲ್ಪಭಾಗವು ನಮಗೆ ಕಾಣುವದರಿಂದ ಮತ್ತು ಅದು ತಟ್ಟೆಯಂತೆ ತೋರುವದರಿಂದ ನಾವು ಪ್ರಪಂಚವೆಲ್ಲವನ್ನು ತಟ್ಟೆಯಂತೆ ಭಾವಿಸುವೆವು. ಇದು ಹ್ಯಾಗೆ ತಾನೇ ಸರಿಯೂದೀತು?

ಭೂಮಿಯು ಹೊರಭಾಗದ ವಿಸ್ತೀರ್ಣವು ೧೯೭೦೦೦೦೦೦ ಚದರಮೈಲಿಗಳೆಂದು ಹೇಳಿದ್ದು ಸರಿಯುಷ್ಟೆ. ಅದರ ಪರಿಧಿಯು (ಸುತ್ತಳತೆಯು) ಸುಮಾರು ೨೫ ಸಾವಿರ ಮೈಲಿಗಳಾಗುವದು. ಅದರ ವ್ಯಾಸವು ಸುಮಾರು ೪೦೦೦ಮೈಲಿಗಳಿರುವದು. ಭೂಮಿಯೂ ಕಿತ್ತಲೇಹಣ್ಣಿನ ಹಾಗೆಯೇ ಮೇಲಾಭಾಗದಲ್ಲಿಯೂ ಕೆಳಭಾಗದಲ್ಲಿಯೂ ಕೊಂಚ ತಟ್ಟೆಯಾಗಿರುವದು. ಹೀಂಗೆ ತಟ್ಟೆಯಾಗಿರುವ ಪ್ರದೇಶಗಳನ್ನು ಧ್ರುವಗಳೆಂದು ಕರೆಯುತ್ತಾರೆ. ಮೇಲಿನದಕ್ಕೆ ಉತ್ತರಧ್ರುವವೆಂತಲೂ ಕೆಳಗಿನದಕ್ಕೆ ದಕ್ಷಿಣಧ್ರುವವೆಂತಲೂ ಅನ್ನುವರು.

ಬೀಳುಬಿಡುವದು ಮತ್ತು ಬೆಳೆಗಳ ಪರಿವರ್ತನೆ

ಸಸ್ಯಗಳು ತಮಗೆ ಬೇಕಾದ ಆಹಾರದಲ್ಲಿನ ನಿರವಯುವ ಭಾಗವನ್ನು ಭೂಮಿಯಿಂದ ಪಡೆಯುತ್ತವೆ. ಭೂಮಿಯುಲ್ಲಿರತಕ್ಕ ನಿರವಯುವ ಪದಾರ್ಥದಲ್ಲಿ ಎಲ್ಲೋ ಕೊಂಚ ಭಾಗ ಉಪಯೋಗಸ್ಥಿತಿಯುಲ್ಲಿರುತ್ತೆ. ಈ ಉಪಯೋಗಸ್ಥಿತಿಯುಲ್ಲಿರತಕ್ಕ ಭಾಗವೇ ಸಸ್ಯಗಳಿಗೆ ಆಹಾರವಾಗುತ್ತೆ. ಆದ್ದರಿಂದ ಒಂದು ಭೂಮಿಯುಲ್ಲಿ ಎಡೆಬಿಡದೆ ಪ್ರತಿವರ್ಷವೂ ಸೈರನ್ನು ತೆಗೆದುಕೊಂಡಲ್ಲಿ ಆ ಭೂಮಿಯಲ್ಲಿನ ಉಪಯೋಗಸ್ಥಿತಿಯಲ್ಲಿರುವ ಪದಾರ್ಥವು ಕ್ರಮೇಣ ಕಡಮೆಯಾಗುತ್ತ ಬಂದು ಸೈರು ಚನ್ನಾಗಿ ಆಗುವದಕ್ಕೆ ಅವಕಾಶವಿರುವದಿಲ್ಲ. ಆದರೆ ಭೂಮಿಯನ್ನು ವಾಯು ಮತ್ತು ಬಿಸಲು ಇವುಗಳ ಪ್ರಭಾವಕ್ಕೆ ಒಂದೆರಡು ವರ್ಷ ಬಿಟ್ಟಲ್ಲಿ ಅದರಲ್ಲಿನ ಅನುಪಯೋಗಸ್ಥಿತಿಯಲ್ಲಿರುವ ನಿರವಯುವ ಪದಾರ್ಥದಲ್ಲಿ ಒಂದು ಭಾಗವು ಉಪಯೋಗಸ್ಥಿತಿಯನ್ನು ಪಡೆದು ಭೂಮಿಯು ಪುನಃ ಫಲವತ್ತಾಗುತ್ತದೆ. ಹೀಗೆ ಫಲವತ್ತಾಗುವದು ಭೂಮಿಯುಲ್ಲಿ ಪ್ರವೇಶಿಸುವ ವಾಯುವಿನ ಪ್ರಭಾವದಿಂದಾದುದರಿಂದ ಈ ವಾಯು ಪ್ರವೇಶಕ್ಕೆ ಅನುಕೂಲವಾಡಿ ಜವಿಾನನ್ನು ಬೀಳುಬಿಡತಕ್ಕದ್ದು. ಆದರೆ ಚನ್ನಾಗಿ ಉಕ್ಕೇಹೊಡೆದುಬಿಡಬೇಕು. ಈ ರೀತಿಯಲ್ಲಿ ಬೆಳೆ ತೆಗೆಯದೆ ವಿಶ್ರಾಂತಿಗೊಸ್ಕರ ಜವಿಾನನ್ನು ಬಂಜರು ಬಿಡತಕ್ಕದ್ದಕ್ಕೆ ಬೀಳುಬಿಡುವದು ಎಂದು ಅನ್ನುತ್ತಾರೆ.

ಬೇರೆಬೇರೆಜಾತಿ ಸಸ್ಯಗಳಿಗೆ ಬೇರೆಬೇರೆ ಆಹಾರಗಳು ಹೆಚ್ಚಾಗಿ ಬೇಕಾಗುತ್ತವೆ. ಧಾನ್ಯದ ಪೈರಿಗೆ ಸಾರಜನಕವಾಯು ಮತ್ತು ಫಾಸ್‌ಫರ್ಸ್ ಹೆಚ್ಚಾಗಿ ಬೇಕಾಗುತ್ತದೆ. ಆದರೆ ದ್ವಿದಳಧಾನ್ಯದ ಪೈರಿಗೆ ಹೆಚ್ಚಾಗಿ ಸುಣ್ಣ ಬೇಕಾಗಿರುತ್ತದೆ. ಹೀಗಿರುವಲ್ಲಿ ಒಂದೇಜಾತಿ ಸೈರನ್ನು ಎಡೆಬಿಡದೆ ಅನೇಕ ಸಂವತ್ಸರಗಳವರೆಗೂ ಒಂದೇ ಜವಿಾನಿನಲ್ಲಿ ತೆಗೆದರೆ ಅದರಲ್ಲಿರುವ ಆ ಜಾತಿ ಪೈರಿಗೆ ಮುಖ್ಯವಾದ ಆಹಾರವು ಕಡಮೆಯಾಗುತ್ತಾ ಬರುತ್ತೆ. ಆದರೆ ಒಂದು ಸಂವತ್ಸರ ಒಂದು ಜಾತಿ ಪೈರನ್ನು ಬೆಳೆದು ಮತ್ತೊಂದು ಸಂವತ್ಸರ ಇನ್ನೊಂದು ಬೇರೆ ಜಾತಿಯ ಪೈರನ್ನು ಬೆಳೆದಲ್ಲಿ ಸಸ್ಯಾಹಾರವಸ್ತುಗಳಲ್ಲಿ ಒಂದೇ ವ್ಯಯವಾಗದೇ ಇರುವದಲ್ಲದೆ ಅನುಪಯೋಗಸ್ಥಿತಿಯಲ್ಲಿರುವ ಆಹಾರಗಳ ಅಂಶವು ಉಪಯೋಗಸ್ಥಿತಿಗೆ ಬಂದು ಒಂದು ಪೈರಿನಿಂದ ತೆಗಿಯಲ್ಪಟ್ಟ

ಆಹಾರದ ಅಂಶವು ಆ ಜಾತಿಸೈರು ಇನ್ನೊಂದುಸಾರಿ ಬಿತ್ತುವಷ್ಟರೊಳಗಾಗಿಯೇ ಭರ್ತಿಯಾಗುವದು. ಇದೇ ಬೆಳೆಗಳ ಪರಿವರ್ತನೆಯ ಉದ್ದೇಶವು.

ಒಂದುಕಾಲ ಮೇಲುಮಣ್ಣಿಗೂ ಇನ್ನೊಂದುಕಾಲ ಕೆಳಮಣ್ಣಿಗೂ ವಿಶ್ರಾಂತಿ ಶಿಕ್ಕುವಹಾಗೆ ನೀಲಿ, ಹತ್ತಿ, ಮೊದಲಾದ ಆಳಕ್ಕೆ ಬೇರುಬಿಡುವ ಪೈರನ್ನು ಮತ್ತು ರಾಗಿ ಮೊದಲಾದ ಮೇಲ್ಬಾಗದಲ್ಲಿಯೇ ಬೇರು ಹರಡಿಕೊಳ್ಳುವ ಪೈರನ್ನೂ ಸರ್ತಿಯಿಂದ ಬೆಳಸುವದರಲ್ಲಿ ಪರಿವರ್ತನೆಯ ಉದ್ದೇಶವು ಕೊಂಚ ಮಟ್ಟಿಗೆ ನೆರವೇರುತ್ತದೆ.

ಬೇರೆಬೇರೆ ಜಾತಿ ಸಸಿಗಳಲ್ಲಿ ಬೇರೆ ಜಾತಿ ಹುಳುಗಳು ಉತ್ಪನ್ನವಾಗಿ ಭೂಮಿಯಲ್ಲಿ ಜೀವಿಸುತ್ತದೆ. ಇವುಗಳು ಆಯಾಯಜಾತಿ ಸಸಿಗಳೇ ಆಹಾರವಾಗಿದ್ದಲ್ಲಿ ಮಾತ್ರ ಜೀವಿಸುತ್ತವೆ

ಇಲ್ಲವಾದರೆ ನಾಶಹೊಂದುತ್ತವೆ. ಇವುಗಳ ಜೀವನವು ಪೈರಿಗೆ ಹಾನಿಯನ್ನುಂಟುಮಾಡುವದರಿಂದ ಇವುಗಳ ನಾಶವು ಮುಖ್ಯವಾದದ್ದು, ಇದು ಬೆಳೆಗಳ ಪರಿವರ್ತನದಿಂದಾಗಬೇಕು.

ಯಾವಾಗ್ಯೂ ಭೂಮಿಯ ಸಾರವನ್ನು ಕಮ್ಮಿಮಾಡುವುದು ವಿಸಹ ಅದಕೆ ನಾವಸ್ಸೇನೂ ಕೊಡದ ಬೆಳೆಯನ್ನು ಪುನಃಪುನಃ ತೆಗೆದುಕೊಂಡಲ್ಲಿ ಭೂಮಿಯು ಬಹಳ ನಷ್ಟಹೊಂದುತ್ತದೆ. ಹಾಗಾಗದಂತೆ ನೆಲದ ಸಾರವನ್ನು ಕ್ಷೀಣಗೊಳಿಸದ ಪೈರು ಕ್ಷೀಣಗೊಳಿಸುವ ಪೈರನ್ನು ಬದಲಾಯಿಸತಕ್ಕದ್ದು.

ಹೀಗೆ ಬೆಳೆಗಳ ಬದಲಾವಣೆಗೆ ಮಾರ್ಗವಿಲ್ಲದಲ್ಲಿ ತಕ್ಕಷ್ಟು ಗೊಬ್ಬರ ಹಾಕಬೇಕು, ಚನ್ನಾಗಿ ಕಳೆ ಕೀಳಿಸಬೇಕು, ಮತ್ತು ಹುಳು ಬೀಳದಂತೆ ತಕ್ಕ ಜಾಗರೂಕತೆ ಇಟ್ಟರಬೇಕು. ಇದಕ್ಕೆ ಹೆಚ್ಚು ಖರ್ಚೂ ಶ್ರಮವೂ ಆಗುತ್ತೆ.

ಜೇನು ಕುರುಬರು.

ಇವರು ವಾಸಸ್ಥಾನಗಳಿಗೆ ಬಹಳ ದೂರವಾಗಿರುವ ದೊಡ್ಡ ಅಡವಿಗಳ ಮಧ್ಯ ಪ್ರದೇಶದಲ್ಲಿ ಅಲ್ಲಲ್ಲಿ ಚದರಿರುವ ಹಾಡಿಸ್ (Hádís) ಎಂಬ ಸಣ್ಣ ಸಣ್ಣ ಗುಡಿಸಲುಗಳಲ್ಲಿ ವಾಸಮಾಡುತ್ತಾರೆ. ಅವರ ನಡವಳಿಕೆಗಳೂ ಬಹಳ ಅನಾಗರೀಕವಾದದ್ದು. ಕಂಬಳಿ ಅಥವ ದಪ್ಪನೆ ಬಟ್ಟೆ ಮತ್ತು ತಲೆಬುರುಡೆಯಿಂದ ಮಾಡಲ್ಪಟ್ಟ ಟೋಪಿ,

ಇವೇ ಗಂಡಸರ ಉಡುಪು ಹೆಂಗಸರು ಉಟ್ಟುಕೊಳ್ಳುವ ಶೀರೆಯು ದಪ್ಪವಾಗಿಯೂ ಬೆಳ್ಳಗೂ ಇರುವ ಅರ್ಧ ಅಥವಾ ಒಂದು ರೂಪಾಯಿನ ಬಟ್ಟೆ, ಕವಿಗೆ ಒಂದು ಜೊತೆ ಹಿತ್ತಾಳೆವಾಲೆ, ಕೊರಳಿಗೆ ಕರಿಮಣಿ ಸರಗಳು, ಮುಂಗೈಗೆ ಗಾಜಿನ ಬಳೆಗಳು, ಇವೇ ಇವರು ವಾಡಿಕೆಯಾಗಿ ಹಾಕಿಕೊಳ್ಳುವ ಆಭರಣಗಳು. ಈ ಜನರು ತಮ್ಮ ಗುಡಿಸಲುಗಳ ಸವಿಾಪಕ್ಕೆ ಮಾದಿಗರನ್ನಾಗಲೀ ಮುಸಲ್ಮಾನರನ್ನಾಗಲೀ ಸೇರಿಸುವದಿಲ್ಲ; ಮತ್ತು ತಮ್ಮ ಮನೆಗಳಿಗಾಗಲಿ ಬೀದಿಗಳಿಗಾಗಲಿ ಜೋಡನ್ನು ತರಗೊಳಿಸುವದಿಲ್ಲ. ಅವರು ವೂಂಸಭಕ್ಷಣವಾಡುತ್ತಾರೆ. ವಕ್ಕಲಿಗರು, ಲಿಂಗಾಯಿತರು ಮತ್ತು ಇತರ ಉತ್ತಮ ಜಾತಿಯವರ ಕೈಲಿಯೂ ಉಂಟವಾಡುತ್ತಾರೆ. ಕಾಡಿನಲ್ಲಿ ದೊರುಕುವ ಬಿದರುಬೀಜ, ಮೃದುವಾಗಿರುವ ಬೇರುಗಳು ಇವೇ ಮೊದಲಾದವುಗಳಿಗೆ ಜೇನುತುಪ್ಪವನ್ನು ಸೇರಿಸಿ, ಅವನ್ನು ತಿಂದು ಜೀವಿಸುತ್ತಾರೆ. ಹಾಲು, ತುಪ್ಪ ಮೊದಲಾದವುಗಳಿಗಿಂತಲೂ, ಜೇನು ಹುಳುವುಗಳಿಂದ ಮೂಡಲ್ಪಟ್ಟ ಬಾಯಿಗೆ ರುಚಿಯಾದ ಪದಾರ್ಥಗಳನ್ನು ತಿನ್ನುವದರಲ್ಲಿ ಇವರು ಇಚ್ಛೈವುಳ್ಳವರಾಗಿರುತ್ತಾರೆ. ಕಾಡುಗಳಲ್ಲಿ ತೊಲೆಗಳನ್ನು ಕತ್ತರಿಸುವದು, ಮತ್ತೂ ಇನ್ನು ಇತರ ಅದೇ ವಿಧವಾದ ಒರಟು ಕೆಲಸಗಳನ್ನು ಮಾಡುವದು, ಇವೇ ಇವರ ಕಸುಬು. ಅದರೆ ಸ್ವಂತಭೂವಿಯಾಗಲಿ, ಸ್ವಂತಸಾಗುವಳಿಯಾಗಲಿ, ಸ್ವಂತ ದನಕರಗಳಾಗಲಿ ಇವರಿಗೆ ಇಲ್ಲ. ಕಾಡುಮೃಗಗಳು ಸಂಚರಿಸುವ ಹಾದಿಯನ್ನು ಕಂಡುಹಿಡಿಯುವದರಲ್ಲಿ ಬಹಳ ಸಮರ್ಥರು; ಮತ್ತು ಅವು ಆಕಸ್ಮಿಕವಾಗಿ ಅಟ್ಟಕೊಂಡುಬಂದರೆ ಅವಕ್ಕೆ ತಪ್ಪುದಾರಿಯನ್ನು ತೋರಿಸುವದರಲ್ಲಿ ಬಹಳ ಉಸಾಯವಂತರು. ಎಡುವಯಸ್ಸಿಗೆ ಮೇಲ್ಪಟ್ಟ ಅವರ ಮಕ್ಕಳು ಕಾಡಿನಲ್ಲಿ ಸ್ವೇಚ್ಛೆಯಾಗಿ ತಿರಗುತ್ತವೆ. ಅವರಲ್ಲಿಗೆ ಪ್ರಯಾಣೀಕರು ಎಂಥಾ ಅವೇಳೆಯಲ್ಲಿ ಹೋದರೂ ಆದರಿಸುತ್ತಾರಂತೆ. ಅವರು ಶೈವರು. ಅವರ ಗುರುಗಳು ಜಂಗಮರು, ಅವರು ಹೆಣ್ಣು ಕೊಟ್ಟು ತೆಗೆಯುವದಿಲ್ಲಾ. ಅವರ ಕುಲದವರಲ್ಲಿಯೇ. ನಿಶ್ಚಿತಾರ್ಥ ಮದುವೆಖರ್ಚುಗಳು ಸಾಧಾರಣವಾಗಿ ೩೦ ರೂ। ಗೆ ಮಿಾರುವದಿಲ್ಲ. ಈ ಖರ್ಚು ಗಂಡಿನಕಡೆಯವರದು.

ಅವರಲ್ಲಿ ವಿಧವಾವಿವಾಹಕ್ಕೆ ಆಕ್ಷೇಪಣೆ ಎನೂ ಇಲ್ಲ. ಬಹಿಷ್ಕೃತರಾದ ಕಾಲದಲ್ಲಿ ಹೆಂಗಸರನ್ನು ೭ ದಿವಸಗಳವರೆಗೂ ವಾಸವೊಡುವ ಗುಡಿಸಲೊಳಕ್ಕೆ ಸೇರಿಸುವದಿಲ್ಲ. ಮಕ್ಕಳು ಸತ್ತರೆ ಅವನ್ನು ಹೂಳುತ್ತಾರೆ. ಹೆಂಗಸರಾಗಲಿ ಗಂಡಸರಾಗಲಿ ದೊಡ್ಡವರಾಗಿರುವರು ಸತ್ತರೆ ಅವರನ್ನು ಸುಟ್ಟು ಬೂದಿಮಾಡುತ್ತಾರೆ. ಅವರಲ್ಲಿ ಯಾರಾ

ದರೂ ಸತ್ತರೆ ಬ್ರಾಹ್ಮಣೇತರರಗಳಲ್ಲಿ ಹ್ಯಾಗೊ ಅವರಲ್ಲಿಯೂ ಹಾಗೆಯೇ ೧೦ ದಿವಸ ಸೂತಕವುಂಟು. ಅವರಿಗೆ ಹಜಾಮರ ಅವಶ್ಯಕತೆಯೇ ಇಲ್ಲ, ಆ ಕೆಲಸವನ್ನು ತಾವ ಮಾಡಿಕೊಳ್ಳುತ್ತಾರೆ. ಈ ಪೂರ್ವಜನರಲ್ಲಿ ಇನ್ನೊಂದು ಆಶ್ಚರ್ಯಕರವಾದ ವಾಡಿಕೆ ಯುಂಟು. ಅದೇನೆಂದರೆ—ಹಳ್ಳಿ ಅಥವಾ ಹಾಡಿಗೆ (Hádí) ಸೇರಿದ ಕನ್ನಿಕೆಗಳ ರಾತ್ರಿಕಾಲದಲ್ಲಿ ತಮಗಾಗಿ ಅಲಾಯಿದ ಕಟ್ಟಲ್ಪಟ್ಟಿರುವ ಗುಡಸಲು ಅಥವಾ ಚಾವಡಿ ಯಲ್ಲಿ ಮಲಗುತ್ತಾರೆ ಪ್ರಾಯಸ್ಥರಾದ ಬ್ರಹ್ಮಚಾರಿಗಳು ಮತ್ತು ಹುಡುಗರ ಬೇರೆ ಕಟ್ಟಡದಲ್ಲಿ ಮಲಗುತ್ತಾರೆ. ಇವೆರಡೂ ಆ ಕುಲದ ಯಜಮಾನನ ವುಸ್ತುವಾರಿ ಯಲ್ಲಿರುತ್ತೆ. ಈ ಎರಡನೇ ಕಟ್ಟಡಕ್ಕೆ ಪುಂಡುಗರ್ (Pundugar)ಚಾವಡಿಯೆಂದ ಹೆಸರು. ಹಾದಿತಿರುಕರ ವಾಸಸ್ಥಳವೆಂದು ಆ ಪದಕ್ಕೆ ಅರ್ಥವು. ಈ ಜೇನುಕುರುಬರ ಮೈಸೂರು ಡಿಸ್ಟ್ರಿಕ್ಟಿನ ದಕ್ಷಿಣಪಶ್ಚಿಮದಿಕ್ಕುಗಳಲ್ಲಿರುತ್ತಾರೆ.

ಹಾಡುಗಳು.

ಬೇಡರೊ ಬಾಲರೆ ದುರ್ನಡತೆಗಳೀನುಡಿಯನು ಕೇಳದೊಡಾಡುವದು ॥ (ಇದರಹಾಗೆ

॥ಪ॥ ತರಳರೆ ಲಾಲಿಸಿ ಗುರುತರವಾಕ್ಯವ ನರುಹುವೆನಿಂದು ಸಂತೋಷದೊಳಂ॥
॥ಅ॥ ಪರಿಪರಿವಿದ್ಯವ ಕಲಿಯುಲು ಲೋಕದಿ ಕರೆವರು ನಿಮ್ಮನು ಸಭೆಯೊಳಗಂ॥

ವರಘಟ್ಟಾಸ್ತ್ರವನರಿಯಲುಬೇಡಿರಿ । ಕೊರತೆಯುದೇನಿಲ್ಲಿದರೊಳಗಂ ॥
ವರವೇದಾಂತವನರಿಯದೆ ಪೋದರು । ಅರಿವುದು ಭಾಷೆಯನೀವೀಗಂ ॥೧

ನುಡಿಯುವ ಭಾಷೆಯು ಲಕ್ಷಣವರಿಯಲು । ನುಡಿಗಳ ಸರಣಿ ತಾನತಿಛಂದಂ
ಅಡಿಗಡಿಗೆಲ್ಲರಮನವನು ಮೋಹಿಪ । ಪೊಡವಿವಿಚಾರಿತ್ರವ ಕಲಿಯೆಂದುಂ॥೨।

ಭೂಮಿಯುವಿವರವೆಸ್ರೋಮದಿತಿಳಿವುದು । ಕ್ಷೋಮತಾನಹುದೀಲೋಕದೊಳಂ।
ಸ್ರೋಮದಿ ಗಣಿತವಕಾಮಿಸಲದುತಾಂ ಭ್ರಮಿಸದುಮುಂದಕೆಲೆಮ್ಮದೊಳುಂ

ಪರವಾರ್ಥಂಗಳು ದೊರೆವ್ರದಿನ್ನಿದರಲಿ । ಸ್ಮರಿಸುತ ಬಾಲಕರು ಕಲಿರೆಲ್ಲಂ ।
ಗುರುತರವದವಿಯು ಹೊಂದಲಿದಲ್ಲವೆ ಅರಸಲುದಾರಿತಾಬೇರಿಲ್ಲಂ ॥ ೪ ॥

ಗುರುವರ ನರಹರಿ ಹರುಷದಿ ಲೋಕವ । ಪೊರೆಯಲುಕಾತುರಬಿಡು ತಿಂದು।
ನಿಜಚರಣಾಂಬುಜಭ್ರಮರನಾದೆನ್ನನು । ಪ್ರೇರಿಸಿ ನುಡಿಸಿದನಿದಸ್ತೋಂದಂ

ಯೊಡನೆ ಶಂಖಚೂಡನು ಹೊರಟುಹೋದನು.

ಇತ್ತ ಜೀಮೂತವಾಹನನು "ನನ್ನ ಇಷ್ಟಾರ್ಥ ಸಾಧನವದಕ್ಕೆ ವಧ್ಯಚಿಹ್ನ ವಿಲ್ಲವಲ್ಲಾ ಏನುಮಾಡಲಿ? ಎಲ್ಲಿ ಸಂಪಾದಿಸಲಿ?" ಎಂದು ಚಿಂತಿಸುತ್ತಿದ್ದನು. ಆಗ ಒಬ್ಬ ಭೃತ್ಯನು ಬಂದು, "ಆಯುಷ್ಮಂತನೆ, ನಿಮ್ಮ ಅತ್ತೆಯು ಈ ಮಂಗಳವಸ್ತ್ರವನ್ನು ಕೊಟ್ಟು ಕಳುಹಿಸಿರುವಳು. ಈದಿನ ನೀನು ಅವುಗಳನ್ನು ಅಗತ್ಯ ಧರಿಸಬೇಕಂತೆ ಎಂದು ಹೇಳಿ, ವಸ್ತ್ರಗಳನ್ನು ಕೊಟ್ಟು ಹೋದನು.

"ಈಗ ನಾನು ಕೃತಾರ್ಥನಾದೆನು" ಎಂದು ಅತಿ ಸಂತೋಷದಿಂದ ಆ ವಸ್ತ್ರಗಳನ್ನುಟ್ಟು, ದೂರದಲ್ಲಿ ಬಿಟ್ಟದಂತೆ ಅಲೆಗಳು ಸಮುದ್ರದಲ್ಲಿ ಎಳುವದನ್ನು ಕಂಡು ಗರುಡನು ಬಂದನೆಂದು ಓಡಿಹೋಗಿ ವಧ್ಯಶಿಲೆಯನ್ನು ಹತ್ತಿಕೊಂಡನು.

ಗರುಡನು ಹಾರಿಬಂದು ಯಥೇಷ್ಟವಾಗಿ ಭುಜಿಸುವೆನೆಂದು ಜೀಮೂತವಾಹನನನ್ನು ಕೊಕ್ಕಿನಿಂದ ಕಚ್ಚಿಕೊಂಡು ಮಲಯಶಿಖರವನ್ನು ಸೇರಿದನು. ಆಗ ದೇವದುಂದುಭಿಯು ಮೊಳಗಿತು. ಪುಷ್ಪವೃಷ್ಟಿಯು ಸುರಿಯಿತು.

ಅತ್ತ ವಿಶ್ವಾವಸುವು ಬಹಳ ಹೊತ್ತಾದಾಗ್ಯೂ ಅಳಿಯನು ಬರದೆ ಇರುವದನ್ನು ನೋಡಿ, ಗಾಬರಿಯಿಂದ ಒಬ್ಬ ಆಳನ್ನು ಅವನಿದ್ದೆಡೆಗೆ ಅಟ್ಟಿದನು. ಆಳು ಎಲ್ಲೆಲ್ಲಿ ಹುಡುಕಿಯೂ ಜೀಮೂತವಾಹನನನ್ನು ಕಾಣದೆ, ತಾಯಿಯಮನೆಗೆ ಒಂದು ವೇಳೆ ಹೋಗಿರಬಹುದೆಂದು ಅಲ್ಲಿಗೆ ಹೋಗಿ, ಜೀಮೂತಕೇತುವನ್ನು ವಿಚಾರಿಸಲು; ಅವನ ತಂದೆತಾಯಿಗಳು ನಡುಗಿಹೋಗಿ, "ಸಹಸ್ರಭಾನೂ ನಮ್ಮ ಪುತ್ರನನ್ನು ಸಲಹು" ಎಂದು ಹರಸಿ, 'ಎಷ್ಟು ಕಾಲಕ್ಕೆ ಪುತ್ರನನ್ನು ಕಾಣುತ್ತೇವೆಯೋ' ಎಂದು ತವಕಪಡುತ್ತಿದ್ದರು.

ತವಕಪಡುತ್ತಿರುವ ಹಾಗೆಯೇ ಆಕಾಶದಿಂದ ಏನೋ ಅವರ ಮುಂದೆ ತೊಪ್ಪನೆ ಬಿತ್ತು. ಅದನ್ನು ತಾಯಿಯು ತೆಗೆದುಕೊಂಡು "ಇದೇನು! ರತ್ನದಂತಿರುವದು. ನಮ್ಮ ಜೀಮೂತವಾಹನನ ಚೂಡಾರತ್ನವೋ?" ಎನ್ನುವಷ್ಟರೊಳಗೆ ಆ ಆಳು "ಎಂದಿಗೂ ಇರಲಾಗದು. ನೀವು ಹೀಗೆ ಗಾಬರಿಯಾಗುವದು ಸರಿಯಲ್ಲ. ಇದೇ ಮಾರ್ಗವಾಗಿ ನಾಗಗಳನ್ನು ಕಚ್ಚಿಕೊಂಡು ಗರುಡನು ಹೋಗುವದುಂಟು; ಹೀಗೆ ನಾಗಗಳ ಶಿರೋರತ್ನಗಳೂ ಬೀಳುವದುಂಟು" ಎಂದನು. "ನೀನು ಹೇಳುವದು

ಯುಕ್ತ. ಶೀಘ್ರವಾಗಿ ಹೋಗಿ ಜೀಮೂತವಾಹನನು ಬಂದಿದಾನೋ ನೋಡಿ ಕೊಂಡು ಬಾ '' ಎಂದು ಕೇಳಿ, ಅಳನ್ನು ಕಳುಹಿಸಿದನು.

ಅಳು ಹೋಗಲು, ಅದೇವಮಾರ್ಗವಾಗಿ ''ಹಾ! ತ್ರಿಭುವನೈಕ ಚೂಡಾ ವ.ಣೀ, ಹಾ ! ನಿಷ್ಕಾರಣಬಾಂಧವ ! ಹಾ ! ಪರಮಕಾರುಣಿಕಾ ! ಹಾ ! ಪರದುಃಖ ದುಃಖಿತಾ ! ಹಾ ! ಪರೋಪಕಾರತೃಣೀಕೃತದೇಹಾ ! ಎಲ್ಲಿ ಹೋದೆ ? ಪ್ರತಿವಚನ ವನ್ನು ಕೊಡು. ಅಯ್ಯೋ ! ನನ್ನಂಥಾ ಮಂದಭಾಗ್ಯನು ಯಾರು ? ಅಯ್ಯೋ ! ಪಾಪಿ, ಶಂಖಚೂಡ ! ಎಂಥಾ ದುಷ್ಕೃತ್ಯವನ್ನು ಮಾಡಿದೆ ! '' ಎಂದು ಅಳುತ್ತಾ, ತನ್ನನ್ನು ತಾನೇ ನಿಂದಿಸಿಕೊಳ್ಳುತ್ತಾ ಶಂಖಚೂಡನು ಬಂದನು.

''ಇದು ಇವನ ಚೂಡಾಮಣಿಯಾಗಿರಬಹುದು. ಇವನ್ನು ಮಾಂಸವೆಂದು ಯಾವ ದೋ ಒಂದು ಪಕ್ಷಿಯು ಕಚ್ಚಿಕೊಂಡು ಹೋಗಿರಬಹುದು'' ಎಂದು ಊಹಿಸಿ ಜೀಮೂ ತಕೇತುವು ಅಯ್ಯಾ, ನಿನ್ನ ಚೂಡಾಮಣಿಯು ಹೋಯಿತೆ?'' ಎಂದು ಕೇಳಿದನು.

''ನನ್ನದು ಮಾತ್ರವೇ ಅಲ್ಲ ತ್ರಿಭುವನಕ್ಕೂ ಚೂಡಾವ.ಣಿಯು'' ಎಂದನು.

''ಅದು ಹ್ಯಾಗೆ'' ಎಂದು ಕೇಳಿದನು.

ದುಃಖಭಾರೋಪರುದ್ಧಕಂಠನಾಗಿ ಸ್ಪಷ್ಟವಾಗಿ ಹೇಳಲಾರದೆ ಸುಮ್ಮನಿದ್ದ ಜೀಮೂತಕೇತುವಿನ ನಿರ್ಬಂಧದಿಂದ ತನ್ನ ಹೆಸರನ್ನೂ ಜಾತಿಯನ್ನೂ ತಾನು ಬಂದ ಉದ್ದೇಶ್ಯವನ್ನೂ ತಿಳಿಸಿ, ''ಅಯ್ಯಾ, ಕರುಣಾಳುವಾದ ಜೀಮೂತವಾಹನನೆಂಬ ಒಬ್ಬ ವಿದ್ಯಾಧರನು ನನ್ನನ್ನು ಉಳಿಸುವದಕ್ಕಾಗಿ, ತನ್ನ ಪ್ರಾಣವನ್ನು ಗರ.ಡನಿಗೆ ಕೊಟ್ಟ ನು'' ಎಂದು ಹೇಳಿದನು.

ಕೂಡಲೆ ''ಅಯ್ಯೋ ! '' ಎಂದೆಲ್ಲರೂ ಮೂರ್ಛಿಹೋದರು.

ಆಗ ಅಲ್ಲಿದ್ದ ಮಲಯವತಿಯು ''ಆ ಚೂಡಾರತ್ನವನ್ನಾದರೂ ಕರ.ಣಿಸಿ ; ಅದನ್ನು ಎದೆಯಲ್ಲಿಟ್ಟು ಅಗ್ನಿಪ್ರವೇಶಮಾಡುವೆನು'' ಎಂದು ಮಾವನ ಪಾದದಮೇಲೆ ಬಿದ್ದು ಹೊರಳಿದಳು.

''ನಮ್ಮ ನಿಶ್ಚಯವು ನಿನ್ನಂತೆಯೇ ಇರುವದು. ಯಾಕಮ್ಮಾ ! ಇಷ್ಟು ಅಗ್ನಿಶರಣಕ್ಕೆಹೋಗಿ ಅಗ್ನಿಯನ್ನು ತೆಗೆದುಕೊಂಡು ಬಾ'' ಎಂದನು.

ಶಂಖಚೂಡನು ಬಹಳ ದುಃಖದಿಂದ ''ಪೂಜ್ಯರೇ, ಯಾವದೂ ನಿಶ್ಚಯ

ವಿಲ್ಲದಿರುವಾಗ್ಯೆ ಹೀಗೆ ಸಾಹಸವಮಾಡುವದನುಚಿತ. ವಿಧಿಯ ವ್ಯಾಪಾರವು ಬಹಳ ವಿಚಿತ್ರವಾಗಿರುವದು. ಗರುಡನು ನಿಮ್ಮ ಪುತ್ರನೆನ್ನು ನಾಗನಲ್ಲವೆಂದು ತಿನ್ನದೆ ಒಂದುಮೇಳಿ ಜೀವದೊಂದಿಗೆ ಬಿಟ್ಟರೂ ಬಿಟ್ಟಾನು. ಯಾರು ಕಂಡವರು? ಇಗೋ! ರಕ್ತಧಾರೆಯು ಕಾಣಿಸುವದು ಇದೇ ಮಾರ್ಗದಿಂದ ಹೋಗಿ ನೋಡೋಣ. ಜೀಮೂತ ವಾಹನನು ಏನಾಗಿರುವನೋ ತಿಳಿಯದು.'' ಎಂದನು.

'' ನೀನು ಹೋಗುತ್ತಿರು. ಅಗ್ನಿಯನ್ನು ತೆಗೆದುಕೊಂಡು ನಾವೂ ನಿನ್ನ ಹಿಂದೆಯೇ ಬರುವೆವು.'' ಎಂದು ಹೇಳಿ ಜೀಮೂತಕೇತುವು ಅಗ್ನಿಶರಣವನ್ನುಹೊಕ್ಕನು.

ಇತ್ತ ಗರುಡನು ಸ್ವಲ್ಪ ತಿಂದು ಹಾಗೆಯೇ ನೋಡಿ, ವಿಸ್ಮಿತನಾಗಿ ಇದೇನು? ಕಚ್ಚಿದೆ ಉಳಿದಿರುವ ಭಾಗದಲ್ಲಿ ರೋಮಾಂಚವು ಕಾಣಿಸುವುದು? ತಿಂದಹಾಗೆಲ್ಲಾ ಈತನಲ್ಲಿ ಧೈರ್ಯವು ಹೆಚ್ಚುತ್ತಾ ಬರುವದು. ಹೀಗೆ ಯಾವಾಗಲೂ ನೋಡಿದ್ದಿಲ್ಲ. ಇವನು ಯಾರು ತಿಳಿಯುವೆನು.'' ಎಂದು ತಿನ್ನುವದನ್ನು ಬಿಟ್ಟು ಇದಿರಲ್ಲಿ ನಿಂತನು.

ಅಯ್ಯಾ, ಗರುತ್ಮಂತನೇ, ಇನ್ನೂ ನಾಡಿಗಳಲ್ಲಿ ರಕ್ತವು ಚಿಮುಕುತ್ತಿರುವದು. ಮೈಯಲ್ಲಿ ಮಾಂಸವು ಕಾಣುವದು. ನಿನಗೂ ತೃಪ್ತಿಯುಂಟಾದಂತೆ ಕಾಣುವದಿಲ್ಲ. ಯಾಕೆ ಭಕ್ಷಿಸದೆ ಸುಮ್ಮನೆ ಇರುತ್ತೀಯೆ?'' ಎಂದು ಜೀಮೂತವಾಹನನು ಕೇಳಲು, ಆಶ್ಚರ್ಯವು ನೂರ್ಮಡಿಯಾಗಿ, ಏನು ಮಾಡುವದಕ್ಕೂ ತಿಳಿಯದೆ. ಗರುಡನು ಕಂಗೆಟ್ಟು ಕೊಂಡನು.

ಈಹೊತ್ತಿಗೆ ಶಂಖಚೂಡನು ಬಂದು '' ಓ ತಾರ್ಕ್ಷ್ಯನೇ, ತಾರ್ಕ್ಷ್ಯನೇ, ಸಾಕುಸಾಕು ತಿನ್ನದಿರು. ನನ್ನನ್ನು ಭಕ್ಷಿಸು. ಈ ಮಹಾನುಭಾವನು ನಾಗನಲ್ಲ. ನಾನೀಗ ನಾಗನು; ವಾಸುಕಿಯಿಂದ ಕಳುಹಿಸಲ್ಪಟ್ಟೆನು. ಇಗೋ! ನೋಡು.'' ಎಂದು ಇದಿರಲ್ಲಿ ನಿಂತನು.

ಇಬ್ಬರಲ್ಲಿಯೂ ವಧ್ಯಚಿಹ್ನವಿದ್ದದ್ದರಿಂದ ಯಾರು ನಾಗನೋ ತಿಳಿಯದೇ ಗರುಡನು ಸ್ತಬ್ಧನಾಗಿರಲು, ಶಂಖಚೂಡನು ''ನನ್ನ ಎರಡು ನಾಲಗೆಗಳನ್ನು ನೋಡು. ಇಗೊ ನನ್ನ ತಲೆಯಮೇಲೆ ಗುರುತಿರುವದು. ನಾನೇ ನಾಗನು, ವಾಸುಕಿಯಿಂದ ಪ್ರೇಷಿತನಾದವನು'' ಎಂದು ನಾಲಗೆಗಳನ್ನೂ ಹೆಡೆಯನ್ನೂ ತೋರಿಸಿದನು.

ಗರುಡನು ''ನಾನು ಕೊಂದವನು ಯಾರು? ಎಂದು ಕೇಳಿದನು.

''ಪರಮಕಾರುಣಿಕನಾದ ಜೀಮೂತವಾಹನನು'' ಎಂದನು.

"ಆಹಾ! ಪರಮಕಾರುಣಿಕನನ್ನು ಕೊಂದು ಅಪಯಶಸ್ಸಿಂಬ ಪಂಕದಲ್ಲಿ ಮುಳುಗಿಹೋದೆನು. ಏನಾದರೂ ಮಾಡಿ ಈ ಪಾತಕವನ್ನು ಕಳೆಯಬೇಕು. ಬೆಂಕಿಯಲ್ಲಿ ಬಿದ್ದು ಪ್ರಾಣಬಿಡುವದೇ ಇದಕ್ಕೆ ಪ್ರಾಯಶ್ಚಿತ್ತವೆಂದು ತೋರುವದು. ಮತ್ತೆ ಬೇರೆ ಇಲ್ಲ" ಎಂದು ಅಗ್ನಿಗೋಸ್ಕರ ನಾಲ್ಕು ದಿಕ್ಕುಗಳನ್ನೂ ನೋಡಿ, ಜೀಮೂತವಾಹನನ ತಂದೆತಾಯಿಗಳು ಬರುತ್ತಿರುವದನ್ನು ಕಂಡು ಇವನ ತಂದೆತಾಯಿಗಳೇ ಇವರು ಎಂದು ತಿಳಿದು, ನಾಚಿಕೆಯಿಂದ ಅವರಿಗೆ ಮುಖತೋರಿಸಲಾರದೆ ಪ್ರಾಣವನ್ನು ಬಿಡುವದಕ್ಕಾಗಿ ಸವಿಾಪದಲ್ಲಿದ್ದ ಮಡುವಿಗೆ ಹೋಗಲುದ್ಯುಕ್ತನಾದ ಗರುಡನನ್ನು ಜೀಮೂತವಾಹನನು ಬಹಳವಾಗಿ ಹೇಳಿನಿಲ್ಲಿಸಿದನು.

ತಂದೆತಾಯಿಗಳಿಗೆ ನಮಸ್ಕಾರ ಮಾಡುವ ಪ್ರಯತ್ನದಲ್ಲೇ ಜೀಮೂತವಾಹನನು ಮೂರ್ಛೆಹೋದನು. ಗರುಡನು ರಕ್ಕೆಯಿಂದ ಬೀಸುತ್ತಿದ್ದು, ಅವನಿಗೆ ಜೈತನ್ಯಬರಲು, ಮೊಣಕಾಲೂರಿ, ಕೈಮುಗಿದು, ನಿನ್ನೀತನಾಗಿ ನಿಂತು, "ಅಯ್ಯಾ ಮಹಾತ್ಮನೇ, ಜೀಮೂತವಾಹನನೇ, ಈ ಪಾಪನಿವಾರಣಕ್ಕೆ ಒಂದು ಉಪಾಯವನ್ನುಪದೇಶಿಸು" ಎಂದು ಬೇಡಿಕೊಂಡನು.

ತಂದೆಯ ಅಪ್ಪಣೆಯ ಪ್ರಕಾರ ಉಪದೇಶಿಸಿದ್ದೇನೆಂದರೆ :—ಎಲೈ ನಾಗರಾಜನೇ, ಇನ್ನು ಮುಂದೆ ಪ್ರಾಣಿಹಿಂಸೆಯನ್ನು ಬಿಡು. ಪ್ರಾಣಿಗಳಲ್ಲಿ ದಯೆಯನ್ನು ತೋರಿಸು. ಸರ್ವಪ್ರಯತ್ನದಿಂದಲೂ ಪುಣ್ಯವನ್ನು ಸಂಪಾದಿಸು. ಸಕಲ ಪ್ರಾಣಿಗಳಿಗೂ ನಿನ್ನಲ್ಲಿ ಭಯ ಹೋಗುವಂತೆ ಮಾಡು. ನಿನ್ನ ಪಾಪದ ಕೊಳೆಯು ತೊಳೆಯಲ್ಪಡುವದು." ಎನ್ನಲು; ಮೊದಲು ಪ್ರಾಣಿಹಿಂಸೆ ಮಾಡುವದಿಲ್ಲವೆಂದು ಗರುಡನು ಪ್ರತಿಜ್ಞೆಮಾಡಿದನು.

ಸ್ವಭಾವಧೀರನಾದ ಜೀಮೂತವಾಹನನೂ ಕೂಡ ವೇದನೆಯನ್ನು ಸಹಿಸದೆ ಮೂರ್ಛಿತನಾದನು. ಕಣ್ಣುಗಳು ವಿಪಾಕವನ್ನು ಹೊಂದಿದವು ಆಗ ಎಲ್ಲರಲ್ಲಿಯೂ ಹಾಹಾಕಾರಹುಟ್ಟಿತು. ಜೀಮೂತವಾಹನನ ತಾಯಿಯು ಅಂತರಿಕ್ಷವನ್ನು ನೋಡಿ "ಎಲೈ ಲೋಕಪಾಲಕರಿರಾ! ನೀವಾದರೂ ನನ್ನ ಮಗನನ್ನು ಅಮೃತವರ್ಷದಿಂದ ಬದುಕಿಸಬಾರದೇ?" ಎಂದು ಮೊರೆಯಿಟ್ಟಳು. ಅಮೃತವೆಂಬ ಶಬ್ದವು ಕಿವಿಗೆ ಬೀಳಲು ಗರುಡನೆದ್ದು, ಇಂದ್ರನಿಂದ ಅಮೃತವರ್ಷವನ್ನು ಮಾಡಿಸಿ, ಇವನೇಮೊದಲಾಗಿ ಇಲ್ಲಿ ಸತ್ತುಬಿದ್ದಿರುವರನ್ನೆಲ್ಲಾ ಬದುಕಿಸುವೆನೆಂದು ಅತಿವೇಗದಿಂದ ಹಾರಿಹೋದನು

ವಿದ್ಯಾದಾಯಿನಿ

ಭಾಗ ೫.] ಜೂನ್ ೧೯೨೩. [ಸಂಚಿಕೆ ೬.

ಎಡಿಟರವರ ನೋಟ್ಸ್.

ದೊಡ್ಡದಾದ ಬದಲಾವಣೆ ಯಾವದೇ ಆಗಲಿ ಆಗಬೇಕಾದರೆ ಕಾಲವು ಹಿಮೆಯಿಂದಲೇ ಎಂದು ಹೇಳುವದುಂಟು. ಇದು ದಕ್ಷಿಣದೇಶವ ಈಗಿನ ಸ್ಥಿತಿಯಿಂದ ಸ್ಪಷ್ಟವಾಗುವುದು ಕನ್ನಡಭಾಷೆಯನ್ನು ಅಭಿವೃದ್ಧಿ ಮಾಡಬೇಕೆಂಬ ಉದ್ದೇಶದಿಂದ ಸರ್ಕಾರದವರೂ ಇತರರೂಸಹ ನಮ್ಮ ದೇಶದಲ್ಲಿ ಕೆಲವು ವರ್ಷಗಳಿಂದ ಪ್ರಯತ್ನಪಡುತಿರುವುದು ನಮ್ಮೆಲ್ಲರಿಗೂ ತಿಳಿದೇ ಇದೆ ದ್ರವಿಡಭಾಷೆಗಳೆಲ್ಲವನ್ನೂ ಅಭಿವೃದ್ಧಿಮಾಡುವುದು ಅವಶ್ಯಕವೆಂದು ತೋರಿ ಅದಕ್ಕಾಗಿ ತಕ್ಕ ಏರ್ಪಾಡನ್ನು ಮಾಡಬೇಕೆಂದು ವಿದ್ವತ್ಪಕ್ಷಪಾತಿಗಳು ಮದರಾಸಿನಲ್ಲಿ ಪ್ರಯತ್ನಪಡುತಿರುವುದನ್ನು ನಾವು ಈ ಪತ್ರಿಕೆಯಲ್ಲಿ ಸ್ವಲ್ಪ ದಿವಸಗಳಿಗೆ ಮುಂಚೆ ತಿಳಿಸಿದೆವು. ಇಂಥ ಉದ್ದೇಶವನ್ನಿಟ್ಟುಕೊಂಡು ಪ್ರಯತ್ನವು ಈಗ ನಮಗೆ ತಿಳಿಯಬಂದಿದೆ ಬಳ್ಳಾರಿಯಲ್ಲಿ ತೆಲುಗುಭಾಷೆಯ ಅಭಿವೃದ್ಧಿಯನ್ನುಕುರಿತು ಯೋಚಿಸುವುದಕ್ಕಾಗಿ ಪಂಡಿತರು ಸ್ವಲ್ಪ ದಿವಸಗಳಿಗೆ ಮುಂಚೆ ಒಂದು ಸಭೆಯನ್ನು ಮಾಡಿದ್ದರು. ಈ ದಕ್ಷಿಣದೇಶದ ಬೇರೆಬೇರೆ ಭಾಗಗಳಲ್ಲಿ ಏಕಕಾಲದಲ್ಲಯೇ ಹೀಗೆ ನಡೆಯುತಿರುವುದನ್ನು ನೋಡಿದರೆ ಇದಕೆ, ಕಾಲಮಹಿಮೆಯನ್ನಲ್ಲದೆ ಮತ್ತಾವದನ್ನು ಕಾರಣವನ್ನಾಗಿ ಹೇಳಬಹುದು ?

***

ನೂತನವಾದ ವಿದ್ಯಾಭ್ಯಾಸಕ್ರಮದಂತೆ ಸ್ಕೂಲುಗಳಲ್ಲಿ ವಸ್ತುಪಾಠಗಳನ್ನು ಹೇಳಬೇಕಾಗಿದೆ ಆದರೆ ಈ ವಸ್ತುಪಾಠಗಳ ಸ್ವರೂಪವನ್ನು ಕೆಲವರು ಉಪಾಧ್ಯಾಯರು ಸರಿಯಾಗಿ ತಿಳಿದಂತಿಲ್ಲ. ಕೆಲವು ಸ್ಕೂಲುಗಳಲ್ಲಿ ವಸ್ತುಪಾಠವೆಂದು ಉಪಾ

"ಆಹಾ! ಪರಮಕಾರುಣಿಕನನ್ನು ಕೊಂದು ಅಪಯಶಸ್ಸೆಂಬ ಪಂಕದಲ್ಲಿ ಮುಳುಗಿಹೋದೆನು ಏನಾದರೂ ಮಾಡಿ ಈ ಪಾತಕವನ್ನು ಕಳೆಯಬೇಕು. ಬೆಂಕಿಯಲ್ಲಿ ಬಿದ್ದು ಪ್ರಾಣಬಿಡುವದೇ ಇದಕ್ಕೆ ಪ್ರಾಯಶ್ಚಿತ್ತವೆಂದು ತೋರುವದು. ಮತ್ತೆ ಬೇರೆ ಇಲ್ಲ" ಎಂದು ಅಗ್ನಿಗೋಸ್ಕರ ನಾಲ್ಕು ದಿಕ್ಕುಗಳನ್ನೂ ನೋಡಿ, ಜೀಮೂತವಾಹನನ ತಂದೆತಾಯಿಗಳು ಬರುತ್ತಿರುವದನ್ನು ಕಂಡು ಇವನ ತಂದೆತಾಯಿಗಳೇ ಇವರು ಎಂದು ತಿಳಿದು, ನಾಚಿಕೆಯಿಂದ ಅವರಿಗೆ ಮುಖತೋರಿಸಲಾರದೆ ಪ್ರಾಣವನ್ನು ಬಿಡುವದಕ್ಕಾಗಿ ಸವಿಾಪದಲ್ಲಿದ್ದ ಮಡುವಿಗೆ ಹೋಗಲುದ್ಯುಕ್ತನಾದ ಗರುಡನನ್ನು ಜೀಮೂತವಾಹನನು ಬಹಳವಾಗಿ ಹೇಳಿನಿಲ್ಲಿಸಿದನು.

ತಂದೆತಾಯಿಗಳಿಗೆ ನಮಸ್ಕಾರ ಮಾಡುವ ಪ್ರಯತ್ನದಲ್ಲೇ ಜೀಮೂತವಾಹನನು ಮೂರ್ಛೆಹೋದನು. ಗರುಡನು ರಕ್ಕೆಯಿಂದ ಬೀಸುತ್ತಿದ್ದು, ಅವನಿಗೆ ಜೈತನ್ಯಬರಲು, ಮೊಣಕಾಲೂರಿ, ಕೈಮುಗಿದು, ನಿನೀತನಾಗಿ ನಿಂತು, "ಅಯ್ಯಾ ಮಹಾತ್ಮನೇ, ಜೀಮೂತವಾಹನನೇ, ಈ ಪಾಪನಿವಾರಣಕ್ಕೆ ಒಂದು ಉಪಾಯವನ್ನುಪದೇಶಿಸು." ಎಂದು ಬೇಡಿಕೊಂಡನು.

ತಂದೆಯ ಅಪ್ಪಣೆಯ ಪ್ರಕಾರ ಉಪದೇಶಿಸಿದ್ದೇನೆಂದರೆ :—ಎಲೈ ನಾಗಾಂತಕನೇ, ಇನ್ನು ಮುಂದೆ ಪ್ರಾಣಿಹಿಂಸೆಯನ್ನು ಬಿಡು. ಪ್ರಾಣಿಗಳಲ್ಲಿ ದಯೆಯನ್ನು ತೋರಿಸು. ಸರ್ವಪ್ರಯತ್ನದಿಂದಲೂ ಪುಣ್ಯವನ್ನು ಸಂಪಾದಿಸು. ಸಕಲ ಪ್ರಾಣಿಗಳಿಗೂ ನಿನ್ನಲ್ಲಿ ಭಯ ಹೋಗುವಂತೆ ಮಾಡು. ನಿನ್ನ ಪಾಪದ ಕೊಳೆಯು ತೊಳೆಯಲ್ಪಡುವದು." ಎನ್ನಲು; ಮೊದಲು ಪ್ರಾಣಿಹಿಂಸೆ ಮಾಡುವದಿಲ್ಲವೆಂದು ಗರುಡನು ಪ್ರತಿಜ್ಞೆ ಮಾಡಿದನು.

ಸ್ವಭಾವಧೀರನಾದ ಜೀಮೂತವಾಹನನೂ ಕೂಡ ವೇದನೆಯನ್ನು ಸಹಿಸದೆ ಮೂರ್ಛಿತನಾದನು. ಕಣ್ಣುಗಳು ವಿಪಾಕವನ್ನು ಹೊಂದಿದವು ಆಗ ಎಲ್ಲರಲ್ಲಿಯೂ ಹಾಹಾಕಾರಹುಟ್ಟಿತು. ಜೀಮೂತವಾಹನನ ತಾಯಿಯು ಅಂತರಿಕ್ಷವನ್ನು ನೋಡಿ "ಎಲೈ ಲೋಕಪಾಲಕರಿರಾ! ನೀವಾದರೂ ನನ್ನ ಮಗನನ್ನು ಅಮೃತವರ್ಷದಿಂದ ಬದುಕಿಸಬಾರದೇ?" ಎಂದು ಮೊರೆಯಿಟ್ಟಳು. ಅಮೃತವೆಂಬ ಶಬ್ದವು ಕಿವಿಗೆ ಬೀಳಲು ಗರುಡನೆದ್ದು, ಇಂದ್ರನಿಂದ ಅಮೃತವರ್ಷವನ್ನು ಮಾಡಿಸಿ, ಇವನೇಮೊದಲಾಗಿ ಇಲ್ಲಿ ಸತ್ತುಬಿದ್ದಿರುವರನ್ನೆಲ್ಲಾ ಬದುಕಿಸುವೆನೆಂದು ಅತಿವೇಗದಿಂದ ಹಾರಿಹೋದನು

ವಿದ್ಯಾದಾಯಿನಿ.

ಭಾಗ ೫೬.] ಜೂನ್ ೧೯೨೭. [ಸುಚಿಕೆ ೬.

ಎಡಿಟರವರ ನೋಟ್ಸ್.

ದೊಡ್ಡದಾದ ಬದಲಾವಣೆ ಯಾವದೇ ಆಗಲಿ ಆಗಬೇಕಾದರೆ ಕಾಲಮುಹಿಮೆಯಿಂದಲೇ ಎಂದು ಹೇಳುವದುಂಟು. ಇದು ದಕ್ಷಿಣದೇಶವ ಈಗಿನ ಸ್ಥಿತಿಯಿಂದ ಸ್ಪಷ್ಟವಾಗುವುದು ಕನ್ನಡಭಾಷೆಯನ್ನು ಅಭಿವೃದ್ಧಿ ಮಾಡಬೇಕೆಂಬ ಉದ್ದೇಶದಿಂದ ಸರ್ಕಾರದವರೂ ಇತರರೂಸಹ ನಮ್ಮ ದೇಶದಲ್ಲಿ ಕೆಲವು ವರ್ಷಗಳಿಂದ ಪ್ರಯತ್ನಪಡುತಿರುವುದು ನಮ್ಮೆಲ್ಲರಿಗೂ ತಿಳಿದೇ ಇದೆ ದ್ರವಿಡಭಾಷೆಗಳೆಲ್ಲವನ್ನೂ ಅಭಿವೃದ್ಧಿ ಮಾಡುವುದು ಅವಶ್ಯಕವೆಂದು ತೋರಿ ಅದಕ್ಕಾಗಿ ತಕ್ಕ ಏರ್ಪಾಡನ್ನು ಮಾಡಬೇಕೆಂದು ವಿದ್ಯಾಪಕ್ಷಪಾತಿಗಳು ಮದರಾಸಿನಲ್ಲಿ ಪ್ರಯತ್ನಪಡುತಿರುವುದನ್ನು ನಾವು ಈ ಪತ್ರಿಕೆಯಲ್ಲಿ ಸ್ವಲ್ಪ ದಿವಸಗಳಿಗೆ ಮುಂಚೆ ತಿಳಿಸಿದೆವು. ಇಂಥ ಉದ್ದೇಶವುಳ್ಳ ಜೇರೊಂದು ಪ್ರಯತ್ನವು ಈಗ ನಮಗೆ ತಿಳಿಯಬಂದಿದೆ ಬಳ್ಳಾರಿಯಲ್ಲಿ ತೆಲುಗುಭಾಷೆಯ ಅಭಿವೃದ್ಧಿಯನ್ನುಕುರಿತು ಯೋಚಿಸುವುದಕ್ಕಾಗಿ ಪಂಡಿತರು ಸ್ವಲ್ಪ ದಿವಸಗಳಿಗೆ ಮುಂಚೆ ಒಂದು ಸಭೆಯನ್ನು ಮಾಡಿದ್ದರು. ಈ ದಕ್ಷಿಣದೇಶದ ಬೇರೆಬೇರೆ ಭಾಗಗಳಲ್ಲಿ ಏಕಕಾಲದಲ್ಲಿಯೇ ಹೀಗೆ ನಡೆಯುತಿರುವುದನ್ನು ನೋಡಿದರೆ ಇದಕ್ಕೆ ಕಾಲಮುಹಿಮೆಯನ್ನಲ್ಲದೆ ಮತ್ತಾವ ಕಾರಣವನ್ನಾಗಿ ಹೇಳಬಹುದು?

***

ನೂತನವಾದ ವಿದ್ಯಾಭ್ಯಾಸಕ್ರಮದಂತೆ ಸ್ಕೂಲುಗಳಲ್ಲಿ ವಸ್ತುಪಾಠಗಳನ್ನು ಹೇಳಿಬೇಕಾಗಿದೆ ಆದರೆ ಈ ವಸ್ತುಪಾಠಗಳ ಸ್ವರೂಪವನ್ನು ಕಲವರು ಉಪಾಧ್ಯಾಯರು ಸರಿಯಾಗಿ ತಿಳಿದಂತಿಲ್ಲ. ಕೆಲವು ಸ್ಕೂಲುಗಳಲ್ಲಿ ವಸ್ತುಪಾಠವೆಂದು ಉಪಾ

ಾಧ್ಯಾಯರು ಯಾವದಾದರೊಂದು ವಸ್ತುವಿನ ವಿಷಯವಾಗಿ ಉಪನ್ಯಾಸ ಮಾಡುವರು. ಮಾತ್ರಕ್ಕೆ ವಸ್ತುಪಾಠವೆಂಬ ಹೆಸರು ಬರುವುದಿಲ್ಲ. ವಸ್ತುಪಾಠವೆಂದರೆ ವಸ್ತುವನ್ನು ತೋರಿಸಿ ಹೇಳತಕ್ಕ ಪಾಠ. ಹುಡುಗರಿಗೆ ವಿಷಯಜ್ಞಾನವುಂಟಾಗಬೇಕೆಂಬುದು ಮಾತ್ರವಲ್ಲದೆ ಪರೀಕ್ಷಣಶಕ್ತಿಯೂ ಅಭಿವೃದ್ಧಿಯಾಗಬೇಕೆಂಬುವುದು ಇದರ ಉದ್ದೇಶ. ಆದುದರಿಂದ ವಸ್ತುಗಳನ್ನು ತೋರಿಸಿ ಸಾಧ್ಯವಾದಮಟ್ಟಿಗೆ ಹುಡುಗರೇ ಅವನ್ನು ಪರೀಕ್ಷಿಸಿ ಅದರ ಸ್ವರೂಪವನ್ನು ಗೊತ್ತುಮಾಡುವಂತೆ ಮಾಡಬೇಕು. ವಿ.ಕ್ಕ ವಿಷಯಗಳನ್ನು ಉಪಾಧ್ಯಾಯನು ಹೇಳಿಕೊಡಬೇಕು. ವಸ್ತು ವನ್ನು ತೋರಿಸ ಕ್ಕದು ಸಾಧ್ಯವಲ್ಲದಾಗ ಆ ವಸ್ತುವಿನ ಪಠವನ್ನಾದರೂ ತೋರಿಸಬೇಕು.

***

ತಿರುವಾಂಕೂರ ಮಹಾರಾಜರವರ ಕಾಲೇಜಿನಲ್ಲಿ ವಿಮರ್ಶಾಸಾ ಪಂಡಿತರಾ ಗಿದ್ದ ಸುಂದರಂಪಿಳ್ಳೆ ಎಂಬುವರು ಕಳೆದ ಏಪ್ರಿಲ್ ೨೬ನೇ ತಾರೀಖಿನಲ್ಲಿ ಮೃತಿಯ ನ್ನು ಹೊಂದಿದರೆಂದು ತಿಳಿಸುವುದಕ್ಕೆ ಬಹಳ ವಿಷಾದಿಸುತ್ತೇವೆ. ಈ ಮಹನೀಯರು ನಾಸ್ತವವಾದ ವಿದ್ವಾನ್ಸಿಧಿಗಳಾಗಿದ್ದರು. ಇಂಗ್ಲೀಷ್‌ಭಾಷೆಯಲ್ಲಿ ಎಂ. ಎ. ಪರೀಕ್ಷೆಯನ್ನು ಕೊಟ್ಟಿದ್ದರು. ಮತ್ತು ತಮಿಳು ಭಾಷೆಯಲ್ಲಿ ಅದ್ಭುತಪಾಂಡಿತ್ಯವನ್ನು ಪಡೆದಿದ್ದರು. ಇವರಿಗೆ ಸಾಯುವಾಗ ಸುಮಾರು ೪೦ ವರ್ಷ ವಯಸ್ಸಾಗಿತ್ತು. ಬಿನ ಕಣತೆಯಿಂದ ದೇಹವನ್ನು ಬಿಟ್ಟರು. ಇವರು ತಮಿಳು ಭಾಷೆಯಲ್ಲಿ ಮನೋನ್ಮನೀಯಂ ಎಂಬ ನಾಟಕವನ್ನು ಬರೆದಿದಾರೆ. ಈ ಭಾಷೆಯಲ್ಲಿ ಅತ್ಯುತ್ಕೃಷ್ಟವಾದ ಗ್ರಂಥಗಳಿದ್ದರೂ ನಾಟಕಗಳು ವಿರಳವಾಗಿದ್ದವು. ಸುಂದರಂ ಪಿಳ್ಳೆಯವರು ಈ ನ್ಯೂನತೆಯನ್ನು ಹೋಗಲಾಡಿಸಿ ಇತರರಿಗೆ ಮಾರ್ಗದರ್ಶಿಗಳಾಗಿದ್ದರು. ಇದಲ್ಲದೆ ಪಾಶ್ಚಾತ್ಯ ವಿದ್ಯಾನ್ವೇಷಣದಿಂದ ತಿರುವಾಂಕೂರ ಚರಿತ್ರೆಯನ್ನು ಅವರಿಸಿಕೊಂಡಿದ್ದ ಅಂಧಕಾರವನ್ನು ಸ್ವಲ್ಪಮಟ್ಟಿಗೆ ಹೋಗಲಾಡಿಸಿ, ದಾರಿಕಾಣುವಂತೆ ಮಾಡಿದಾರೆ, ಇವರು ಯಾವಾಗಲೂ ವಿದ್ಯಾಕಾಲಕ್ಷೇಪದಲ್ಲಿಯೇ ನಿರತರಾಗಿದ್ದರು. ಇವರು ಪ್ರಾಣ ಬಿಡುವುದಕ್ಕೆ ಪೂರ್ವ ಸನ್ನಿಯಿಂದ ಜ್ಞಾನವಿಲ್ಲದಾಗಲೂ, ಪಾಶ್ಚಾತ್ಯನವಿನ್ಯಾನ್ವೇಷಣದಿಂದ ವಿಷಯವು ವಿಶದಪಡಬೇಕು, ಎಂಬ ಮಾತುಗಳನ್ನಾಡಿದರು ಈ ಮಾತುಗಳಿಂದ ಇವರ ಮನಸ್ಸಿನಲ್ಲಿ ವಿದ್ಯಾವಿಚಾರವೇ ಮುಂದಾಗಿತ್ತೆಂಬುವುದು ವ್ಯಕ್ತಪಡುತ್ತದೆ.

ಟಿಪ್ಪಣಿ.

ಅಂಕಗಣಿತ—(ಭಿನ್ನರಾಶಿಯ ಭಾಗಾಕಾರ)

III. ನೇ ತರಗತಿ.] ——— [ಕಾಲ 50 ನಿಮಿಷ.

ವಿಷಯ.	ಬೋಧನಕ್ರಮ—
1. ಅವತರಣಿಕೆ. (i) $32 \div 4 = 8$. ಇದಕ್ಕೆ ಮೂರುವಿಧವಾದ ಅರ್ಥವನ್ನು ಹೇಳಬಹುದು. (a) 32 ರಲ್ಲಿ ಎಷ್ಟು 4 ಇವೆ. (b) 4 ನ್ನು ಎಷ್ಟರಿಂದ ಗುಣಿಸಿದರೆ 32 ಬರುವುದು. (c) 32 ನ್ನು 4 ಭಾಗ ಮಾಡಿದರೆ ಒಂದೊಂದು ಭಾಗಕ್ಕೆ ಎಷ್ಟೆಷ್ಟು ಬರುವುದು ಈ ಮೂರು ಪ್ರಶ್ನೆಗಳಿಗೂ 8 ಎಂಬ ಉತ್ತರವೇ ಬರುವುದು ಭಾಗಾಕಾರ ಲೆಕ್ಕಕ್ಕೆ ಈ ವಿಧವಾದ ಅರ್ಥ.	ಈ ಅಂಶಗಳನ್ನು ಹಲಗೆಯ ಸಹಾಯದಿಂದ ಬಾಲಕರಿಗೆ ತಿಳಿಸಬೇಕು.
(ii) $\frac{2}{3}$ ಎಂಬುದು $\frac{1}{3}$ ರ ಎರಡರಷ್ಟು. (iii) $48 \div 6 = 8$ $48 \div 12 = 4$ ಅಂದರೆ $48 \div 12 = \frac{48 \div 6}{2}$	
2. ಭಿನ್ನರಾಶಿ ಭಾಗಾಕಾರ. (i) ಪೂರ್ಣಾಂಕವನ್ನು ಭಿನ್ನರಾಶಿಯಿಂದ ಭಾಗಿಸುವುದು. ಉದಾ: $4 \div \frac{1}{3}$ ಈ ಲೆಕ್ಕದ ಅರ್ಥ—4ರಲ್ಲಿ ಎಷ್ಟು $\frac{1}{3}$ ಇವೆ? 1 ರಲ್ಲಿ ಮೂರು $\frac{1}{3}$ ಇವೆ. $\therefore$ 4 ರಲ್ಲಿ, $4 \times 3 = 12$. $\therefore 4 \div \frac{1}{3} = 4 \times 3 = 12$. $\therefore 4 \div \frac{1}{3} = 4 \times = \frac{3}{2} 6$.	ಬಾಲಕರನ್ನು ಪ್ರಶ್ನೆಮಾಡಿ ಉತ್ತರಗಳನ್ನು ಹೇಳಿಸುತ್ತ ಹಲಗೆಯಮೇಲೆ ಇದನ್ನು ಮಾಡಬೇಕು. ಇಂಥ ಚಿಕ್ಕಲೆಕ್ಕಗಳಿರಡು ಮೂರನ್ನು ಅವರಿಂದ ಮಾಡಿಸಬೇಕು. ಇದನ್ನು ಬಾಲಕರಿಂದಲೇ ಹೊರಡಿಸಬೇಕು. ಇಂಥ ಲೆಕ್ಕಗಳಿಂದೆರಡನ್ನು ಅವರಿಂದ ಮಾಡಿಸಬೇಕು.

ಅಂದರೆ ಪೂರ್ಣಾಂಕವನ್ನು ಭಿನ್ನರಾಶಿಯಿಂದ ಭಾಗಿಸಬೇಕಾದರೆ ಭಿನ್ನರಾಶಿಯಾದ ಭಾಜಕವನ್ನು ತಲೆಕೆಳಗಾಗಿ ಮಾಡಿ ಗುಣಿಸಬೇಕು.

ಇದನ್ನು ಹುಡುಗರಿಂದಲೇ ಪ್ರಶ್ನೆ ಮಾಡಿ ಹೇಳಿಸಬೇಕು. ಹಲಿಗೆಯ ಮೇಲೆ ಬರೆಯಬೇಕು. ಪುನರಾವರ್ತನೆ ಮಾಡಬೇಕು.

(ii) ಭಿನ್ನರಾಶಿಯನ್ನು ಭಿನ್ನರಾಶಿಯಿಂದ ಭಾಗಿಸುವುದು.

ಉದಾ: $\frac{1}{2} \div \frac{1}{4}$

ಈ ಲೆಕ್ಕದ ಅರ್ಥ-$\frac{1}{4}$ನ್ನು ಎತರಿಂದ ಗುಣಿಸಿದರೆ $\frac{1}{2}$ ಬರುವುದು?

ಇದಕ್ಕೆ ಉತ್ತರ 2

ಬಾಲಕರನ್ನು ಪ್ರಶ್ನೆಮಾಡಿ ಉತ್ತರ ಹೇಳಿಸುತ್ತ ಇದನ್ನು ಹಲಿಗೆಯಮೇಲೆ ಬರೆಯಬೇಕು. ಎರಡುಮೂರು ಇಂಥ ಚಿಕ್ಕ ಲೆಕ್ಕಗಳನ್ನು ಅವರಿಂದ ಮಾಡಿಸಬೇಕು.

$$\therefore \frac{1}{2} \div \frac{1}{4} = 2 = \frac{1}{2} \times \frac{4}{1}$$

$$\frac{1}{2} \div \frac{1}{4} = \frac{1}{2} \times \frac{4}{1} = 2$$

$$\therefore \frac{1}{2} \div \frac{3}{4} = \frac{1}{2} \times \frac{4}{3} = \frac{2}{3}$$

$$\therefore \frac{5}{2} \div \frac{3}{4} = \frac{5}{2} \times \frac{4}{3} = \frac{10}{3}$$

ಹುಡುಗರನ್ನು ಪ್ರಶ್ನೆಮಾಡಿ ಈ ಉತ್ತರಗಳನ್ನು ಅವರಿಂದಲೇ ಹೇಳಿಸಬೇಕು ಇಂಥ ಚಿಕ್ಕ ಲೆಕ್ಕಗಳನ್ನು ಹುಡುಗರಿಂದ ಮಾಡಿಸಬೇಕು.

ಅಂದರೆ ಭಿನ್ನರಾಶಿಯನ್ನು ಭಿನ್ನರಾಶಿಯಿಂದ ಭಾಗಿಸಬೇಕಾದರೆ ಭಾಜಕವನ್ನು ತಲೆಕೆಳಗಾಗಿ ಮಾಡಿ ಗುಣಿಸಬೇಕು.

ಈ ವಿಧಿಯನ್ನು ಹುಡುಗರಿಂದಲೇ ಹೇಳಿಸಿ ಹಲಿಗೆಯಮೇಲೆ ಬರೆಯಬೇಕು. ಪುನರಾವರ್ತನೆ ಮಾಡಬೇಕು.

(iii) ಭಿನ್ನರಾಶಿಯನ್ನು ಪೂರ್ಣಾಂಕದಿಂದ ಭಾಗಿಸುವುದು—

ಉದಾ: $\frac{1}{3} \div 4$.

ಇದರರ್ಥ—$\frac{1}{3}$ನ್ನು 4 ಭಾಗ ಮಾಡಿದರೆ ಒಂದು ಭಾಗವೆಷ್ಟು?



ಈ ಆಕೃತಿಯಿಂದ ಬರುವ ಭಾಗವು $\frac{1}{12}$ ಎಂದು ಸ್ಪಷ್ಟವಾಗುವುದು.

ಈ ಆಕೃತಿಯನ್ನು ಹಲಗೆಯಮೇಲೆ ಬರೆದು ಹುಡುಗರಿಗೆ ಇದನ್ನು ತಿಳಿಸಬೇಕು.

ಇಂಥ ಲೆಕ್ಕಗಳೊಂದೆರಡನ್ನು ಮಾಡಿಸಬೇಕು.

$$\therefore \frac{1}{3} \div 4 = \frac{1}{3} \times \frac{1}{4} = \frac{1}{12}$$

$$\frac{1}{3} \div 4 = \frac{1}{3} \times \frac{1}{4} = \frac{1}{12}$$

ಇದನ್ನು ಹುಡುಗರಿಂದಲೇ ಹೇಳಿಸಬೇಕು

$$\therefore \frac{2}{3} \div 4 = \frac{2}{3} \times \frac{1}{4} = \frac{2}{12} = \frac{1}{6}$$

ಅಂದರೆ ಭಿನ್ನರಾಶಿಯನ್ನು ಪೂರ್ಣಾಂಕದಿಂದ ಭಾಗಿಸಬೇಕಾದರೆ ಭಾಜಕವನ್ನು ತಲೆಕೆಳಗಾಗಿ ಮಾಡಿ ಗುಣಿಸಬೇಕು.

ಆದುದರಿಂದ ಭಿನ್ನರಾಶಿ ಭಾಗಾಕಾರ ಮಾಡುವುದಕ್ಕೆ ಭಾಜಕವನ್ನು ತಲೆಕೆಳಗಾಗಿ ಮಾಡಿ ಭಾಜ್ಯವನ್ನು ಗುಣಿಸಬೇಕು.

ಹುಡುಗರಿಂದಲೇ ಹೇಳಿಸಿ ಹಲಗೆಯಮೇಲೆ ಬರೆಯಬೇಕು. ಪುನರಾವರ್ತನೆ ಮಾಡಬೇಕು.

ಇದನ್ನು ಹುಡುಗರಿಂದ ಹೇಳಿಸಿ ಹಲಗೆಯಮೇಲೆ ಬರೆಯಬೇಕು.

ಆನರಬಲ್ ರೆವರೆಂಡ್ ಡಾಕ್ಟರ್ ಮಿಲ್ಲರ್ ಎಂ. ಎ. ಎಲ್ ಎಲ್ ಡಿ ಡಿ. ಡಿ., ಸಿ. ಐ. ಇ. ರವರು.

ಮದರಾಸಿನಲ್ಲಿ ಕ್ರಿಶ್ಚಿಯನ್ ಕಾಲೇಜ್ ಎಂಬದಾಗಿ ಒಂದು ಪಾಠಶಾಲೆಯು ಇರುವುದು. ಇದು ಮಿಲ್ಲರ್ ಕಾಲೇಜ್ ಎಂಬದಾಗಿ ಪ್ರಸಿದ್ಧವಾಗಿ ಇದೆ. ದಕ್ಷಿಣ ಇಂಡಿಯಾದೇಶದಲ್ಲೆಲ್ಲಾ ಈ ಕಾಲೇಜು ಬಹಳ ಹೆಸರುವಾಸಿಯನ್ನು ಹೊಂದಿರುವುದು. ಈ ಪಾಠಶಾಲೆಯಲ್ಲಿ ಸುಮಾರು ೨,೦೦೦ ಜನ ವಿದ್ಯಾರ್ಥಿಗಳವರೆಗೂ ವಿದ್ಯಾಭ್ಯಾಸ ಮಾಡುತ್ತಾರೆ. ಈ ಪಾಠಶಾಲೆಯ ಖರ್ಚಿಗಾಗಿ ಸರಕಾರದವರು ವರ್ಷಕ್ಕೆ ಸುಮಾರು

೬೧,೦೦೦ ರೂಪಾಯಿಗಳನ್ನು ಕೊಡುತ್ತಾರೆ. ವಿದ್ಯಾರ್ಥಿಗಳು ಕೊಡತಕ್ಕ ದ್ರವ್ಯದ ಜೊಬಲಗು ೭೧,೦೦೦ ರೂಪಾಯಿಗಳಾಗುತ್ತದೆ. ಇಲ್ಲಿ ಪಾಠಕರು ೭೧ ಜನಗಳಿರುತ್ತಾರೆ. ಈ ಪಾಠಶಾಲೆಯಲ್ಲಿ ಬಿ. ಎ. ಪರೀಕ್ಷೆಯವರೆಗೂ ಏರ್ಪಾಡಿರುವದಲ್ಲದೆ ಎಂ. ಎ. ಪರೀಕ್ಷೆಗೆ ಓದತಕ್ಕ ವಿದ್ಯಾರ್ಥಿಗಳಿಗೂ ಸಹಾಯಭೂತವಾದ ಏರ್ಪಾಡುಗಳನ್ನು ಮಾಡಿದಾರೆ. ಲಕ್ಷಾಂತರ ರೂಪಾಯಿಗಳನ್ನು ಮುಟ್ಟಿಸಿ ಪಾಠಶಾಲೆಗೂ, ಪುಸ್ತಕಭಂಡಾರಕ್ಕೂ, ವಸ್ತುತತ್ವಗಳನ್ನು ತೋರಿಸತಕ್ಕ ಯಂತ್ರಶಾಲೆಗೂ, ಶಾರೀರಕ ಧರ್ಮಶಾಸ್ತ್ರವನ್ನು ಬೋಧಿಸುವದಕ್ಕೆ ಅವಶ್ಯಕವಾದ ಪದಾರ್ಥಗಳನ್ನು ಇಡುವುದಕ್ಕೂ, ಎಂ. ಎ. ಪರೀಕ್ಷೆಗೆ ಓದತಕ್ಕ ವಿದ್ಯಾರ್ಥಿಗಳಿಗೆ ಅನುಕೂಲವಾಗಿರುವ್ರದಕ್ಕೂ ಕಾಲೇಜಿನ ವಿದ್ಯಾರ್ಥಿಗಳೂ, ಪಾಠಕರೂ, ಸಭೆಮೊದಲಾದವುಗಳನ್ನು ಮಾಡಿಕೊಳ್ಳುವುದಕ್ಕೂ, ಬ್ರಾಹ್ಮಣರ ಮತ್ತು ಬ್ರಾಹ್ಮಣೇತರರ ವಾಸಕ್ಕೆ ಯೋಗ್ಯವಾದ 'ಸ್ಟೂಡೆಂಟ್ಸ್ ಹೋಂ' ಎಂಬ ಕಟ್ಟಡಗಳಿಗೂ, ಅನುಕೂಲವಾದ ಅನೇಕ ಬಂಗಲೆಗಳನ್ನು ಕಟ್ಟಿಸಿದಾರೆ. ಈ ಪಾಠಶಾಲೆಯಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಚಿತ್ತೈಕಾಗ್ರ್ಯಕ್ಕೂ ಆರೋಗ್ಯಭಾಗ್ಯಪ್ರಾಪ್ತಿಗೂ ಬೇಕಾದ ಏರ್ಪಾಡುಗಳೆಲ್ಲಾ ಬಹಳ ಸಮಗ್ರವಾಗಿ ಮಾಡಲ್ಪಟ್ಟಿವೆ ಅಲ್ಲಿನ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ವಿಷ್ಟು ಯೋಗಕ್ಷೇಮದ ಚಿಂತೆಯು ತಂದೆತಾಯಿಗಳು ತೆಗೆದುಕೊಳ್ಳತಕ್ಕ ಯೋಗಕ್ಷೇಮಚಿಂತೆಗೆ ನಿರ್ವಿಶೇಷವಾಗಿರುವ್ರದು. ಈ ಪಾಠಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಪಂಡಿತರಾಗಿ ಭಾರೀ ಉದ್ಯೋಗಗಳನ್ನು ಮಾಡುತ್ತಾ ಸಾವಿರಾರು ಜನಗಳು ಇರುವರು. ಈ ಪಾಠಶಾಲೆಯು ಇಷ್ಟು ಉತ್ಕೃಷ್ಟಸ್ಥಿತಿಗೆ ಬರುವುದಕ್ಕೆ ವಿಶೇಷ ಕಾರಣಭೂತರಾಗಿರತಕ್ಕ ಡಾಕ್ಟರ್ ವಿಲ್ಲರವರ ಚರಿತ್ರೆಯು ವಿದ್ಯಾರ್ಥಿಗಳಿಗೆ ಶ್ರೋತವ್ಯವಾಗಿರುವ್ರದು. ಇವರು ಸ್ಕಾಟ್ಲೆಂಡಿನಲ್ಲಿ ೧೮೩೮ ನೇ ಇಸವಿ ಜನವರಿ ೧೩ ನೇ ತಾರೀಕಿನಲ್ಲಿ ಜನಿಸಿದರು. ಇವರ ತಂದೆಯು ವರ್ತಕರಾಗಿಯೂ ಹಡಗಿನ ವ್ಯಾಪಾರ ಮಾಡತಕ್ಕವರಾಗಿಯೂ ಇದ್ದರು. ಇವರು ಪ್ರಥಮತಃ ತಮ್ಮ ಜನ್ಮಸ್ಥಾನವಾದ ಥರ್ಸ್ಸೋ ಎಂಬ ಪಟ್ಟಣದ ಒಂದು ಪಾಠಶಾಲೆಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಉಪಕ್ರಮಿಸಿದರು. ಕ್ರಮೇಣ ಅಬರ್ಡೀನ್ ಪಟ್ಟಣದ ಬೋರ್ಡಿಂಗ್ ಸ್ಕೂಲಿಗೆ ವಿದ್ಯಾಭ್ಯಾಸಾರ್ಥವಾಗಿ ಹೋದರು. ಆಗ ಇವರಿಗೆ ಹದಿನಾಲ್ಕು ವಯುಸ್ಸಾಗಿತ್ತು. ನಾಲ್ಕು ವರ್ಷದಲ್ಲಿ ಅಬರ್ಡೀನ್ ಕಾಲೇಜಿನಿಂದ ಎಂ. ಎ. ಪರೀಕ್ಷೆಗೆ ಹೋಗಿ ಅದರಲ್ಲಿ ತೇರ್ಗಡೆಯೂದರು. ಅಲ್ಲಿಂದ ವೇದಾಂತ ಕಾಲ

ಕ್ಷೇಪಾರ್ಥವಾಗಿ ಎಡಿಂಬರೋ ಕಾಲೇಜಿನಲ್ಲಿ ಪಾಠಕರಾಗಿದ್ದ ಸರ್. ವಿಲಿಯಂ ಹ್ಯಾಮಿಲ್ಟರವರಲ್ಲಿ ಶಿಕ್ಷಾಭ್ಯಾಸವನ್ನು ಮಾಡಬೇಕೆಂದು ಅಲ್ಲಿಗೆ ದಯಮಾಡಿಸಿದರು. ಕೆಲವು ದಿವಸಗಳಲ್ಲಿಯೇ ಸರ್ ವಿಲಿಯಂರವರು ಸ್ವರ್ಗಸ್ಥರಾದರು. ಆಗ ಡಾಕ್ಟರ್ ಮಿಲ್ಲರ್ ರವರ ಎಡಿಂಬರೋ ನ್ಯೂ ಕಾಲೇಜ್ ಎಂಬುವುದರಲ್ಲಿ ಕ್ರಿಸ್ತುಮತದ ವೇದಾಭ್ಯಾಸವನ್ನು ನಾಲ್ಕುವರ್ಷಗಳವರಿಗೂ ಮಾಡಿದರು. ೧೮೬೦ ರಲ್ಲಿ ಇವರು ಮದರಾಸಿಗೆ ಕಳುಹಿಸಲ್ಪಟ್ಟರು. ೧೮೩೨ ರಲ್ಲಿಯೇ ಮದರಾಸಿನಲ್ಲಿ ಜಾರ್ಜ್ ಆಂಡರ್ಸನ್ ಸಾಹೇಬರವರು ಈಗ ಅತ್ಯಂತ ಉನ್ನತಸ್ಥಿತಿಯಲ್ಲಿರತಕ್ಕ ಕ್ರಿಶ್ಚಿಯನ್ ಕಾಲೇಜ್ ಎಂಬುವದನ್ನು ಸ್ಥಾಪಿಸಿದ್ದರು. ೧೮೫೪ ನೇ ಇಸವಿಯಲ್ಲಿ ಇಂಡಿಯಾಗೌರ್ನಮೇಂಟಿನವರು ಇಂಗ್ಲೀಷ್ ವಿದ್ಯಾಭ್ಯಾಸಕ್ಕೆ ವಿಶೇಷ ಪ್ರೋತ್ಸಾಹವನ್ನು ಉಂಟುಮಾಡಬೇಕೆಂದು ಏರ್ಪಾಡು ಮಾಡಿದರು ಆಗ್ಗೆ ದಕ್ಷಿಣ ಇಂಡಿಯಾದಲ್ಲೆಲ್ಲಾ ಆಂಡರ್ಸನ್‌ರವರಿಂದ ಪ್ರತಿಷ್ಠಿಸಲ್ಪಟ್ಟದ್ದ ಈ ಪಾಠಶಾಲೆಯೇ ಇಂಗ್ಲೀಷು ವಿದ್ಯಾಭ್ಯಾಸಕ್ಕೆ ಮಾತೃಸ್ಥಾನವಾಗಿತ್ತು. ೧೮೫೭ ನೇ ಇಸವಿಯಲ್ಲಿ ಮದರಾಸು ಯೂನಿವರ್ಸಿಟಿಯು ಸ್ಥಾಪಿಸಲ್ಪಟ್ಟಿತು ೧೮೬೩ ನೇ ಇಸವಿಯಲ್ಲಿ ಯುನಿವರ್ಸಿಟಿಪಾಠಪ್ರವಚನಗಳ ಕ್ರಮವು ಕ್ರಮಪಡಿಸಲ್ಪಟ್ಟಿತು. ೧೮೬೩ ನೇ ಇಸವಿಯಲ್ಲಿ ಡಾಕ್ಟರ್ ಮಿಲ್ಲರ್ ಸಾಹೇಬರವರು ತಮ್ಮ ಪಾಠಶಾಲೆಯಿಂದ ಮೂರುಜನಗಳನ್ನು ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕಳುಹಿಸಿ ಪ್ಯಾಸು ಮಾಡಿಸಿದರು. ಮೂರನೇವರ್ಷ ಈ ಪರೀಕ್ಷೆಯಲ್ಲಿ ಆರುಜನಗಳು ತೇರ್ಗಡೆಯಾದರು. ೧೮೬೫ ನೇ ಇಸವಿಯಲ್ಲಿ ಎಫ್. ಎ, ಪರೀಕ್ಷೆಯ ತರಗತಿಯು ಈ ಪಾಠಶಾಲೆಯಲ್ಲಿ ಮಾಡಲ್ಪಟ್ಟಿತು. ೧೮೬೭ರಲ್ಲಿ ಬಿ. ಎ. ಪರೀಕ್ಷೆ ತರಗತಿಯು ಏರ್ಪಡಿಸಲ್ಪಟ್ಟಿತು. ಪ್ರಥಮತಃ ಮದರಾಸಿನಲ್ಲಿ ಅನೇಕ ಇಂಗ್ಲೀಷು ಪಾಠಶಾಲೆಗಳಿದ್ದವು. ಡಾಕ್ಟರ್ ಮಿಲ್ಲರವರ ಪಾಠಶಾಲೆಗಿಂತಲೂ ಇವುಗಳಲ್ಲಿ ಅನೇಕ ಪಾಠಶಾಲೆಗಳು ವಿಶೇಷ ವಿದ್ಯಾರ್ಥಿಗಳ ಸಂಖ್ಯೆಯುಳ್ಳದ್ದಾಗಿಯೂ ಪ್ರೋತ್ಸಾಹ ಉಳ್ಳವುಗಳಾಗಿಯೂ ಇದ್ದವು. ಆದರೆ ಡಾಕ್ಟರ್ ಮಿಲ್ಲರವರು ಯಾವಪಾಠಶಾಲೆಯಲ್ಲಿ ಪಾಠಪ್ರವಚನಗಳು ಚನ್ನಾಗಿ ನಡೆಯುತ್ತವೆಯೋ ವಿದ್ಯಾರ್ಥಿಗಳ ಯೋಗಕ್ಷೇಮಚಿಂತನೆಯು ಚನ್ನಾಗಿ ತೆಗೆದುಕೊಳ್ಳಲ್ಪಡುತ್ತದೆಯೋ ಅವುಗಳೇ ಪರಿಣಾಮದಲ್ಲಿ ಅತ್ಯುತ್ಕೃಷ್ಟಸ್ಥಿತಿಗೆ ಬರುವವು ಎಂಬ ನಂಬಿಕೆಯಿಂದ ಬಂದಷ್ಟುಜನ ವಿದ್ಯಾರ್ಥಿಗಳಲ್ಲಿ ತೃಪ್ತರಾಗಿದ್ದುಕೊಂಡು ಬಹಳ ಶ್ರದ್ಧೆಯಿಂದಲೂ ಉತ್ಸಾಹದಿಂದಲೂ ಪಾಠಪ್ರವಚನಗಳು ತಮ್ಮ

ಪಾಠಶಾಲೆಯಲ್ಲಿ ನಡೆಯುವಂತೆ ಏರ್ಪಾಡುಮಾಡುತ್ತಾ ಬಂದರು ಕ್ರಮಕ್ರಮವಾಗಿ ಡಾಕ್ಟರ್ ಮಿಲ್ಲರವರಂತೆ ಪಾಠಕ್ಕೇಳುವವರಲ್ಲಿ ಶಕ್ತರಾದವರು ಮತ್ತು ಶ್ರದ್ಧೆಯನ್ನು ಉತ್ಸಾಹವನ್ನು ಉಳ್ಳವರು ಮದರಾಸ್ ಪಟ್ಟಣದಲ್ಲಿ ಯಾರೂ ಇಲ್ಲವೆಂಬ ಪ್ರತ್ಯಯವು ಉಂಟಾಯಿತು. ಈ ಪ್ರತ್ಯಯವು ದಿನೇ ದಿನೇ ಹೆಚ್ಚುತ್ತಾ ಬಂತು. ಈ ಪಾಠಶಾಲೆಯ ವಿದ್ಯಾರ್ಥಿಗಳ ಪಾಂಡಿತ್ಯವು ಸರ್ವರಿಗೂ ವಿಸ್ಮಯವನ್ನು ಉಂಟುಮಾಡುತ್ತಾ ಬಂತು. ಕೂಡಲೆ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುವದಕ್ಕೆ ಉಪಕ್ರಮವಾಯಿತು. ಇವರ ಕಾಲೇಜು ಫಸ್ಟ್‌ಗ್ರೇಡ್ ಕಾಲೇಜಾಗಿ ಮಾಡಲ್ಪಟ್ಟ ವರ್ಷವೇ ಇವರು ಯೂನಿವರ್ಸಿಟ್ಟಿಗೆ ಸೆನೇಟ್‌ಗಳಾಗಿ ಮಾಡಲ್ಪಟ್ಟರು ಕ್ರಮಕ್ರಮವಾಗಿ ಇವರ ಕಾಲೇಜಿಗೆ ಫ್ರೀಚರ್ಚ್ ವಿಷ್ಕ್, ವೆಸ್ಲ್ಯಿಯ್ ವಿಷ್ಕ್ ಮೊದಲಾದ ಸಭೆಜದವರಿಂದ ವಿಶೇಷವಾಗಿ ದ್ರವ್ಯಸಹಾಯವಾಗುವದಕ್ಕೆ ಉಪಕ್ರಮವಾಯಿತು. ೧೮೩೨ನೇ ಇಸವಿಯಲ್ಲಿ ಇವರಕಾಲೇಜ್ ಕ್ಲಾಸುಗಳಲ್ಲಿಯೇ ವಿದ್ಯಾರ್ಥಿಗಳ ಸಂಖ್ಯೆಯು ನೂರೆಂಟರವರಿಗೂ ಇತ್ತು. ೧೮೩೯ರಲ್ಲಿ ಈ ಸಂಖ್ಯೆಯು ೨೦೫ ಆಯಿತು. ೧೮೯೫ರಲ್ಲಿ ಈ ವಿದ್ಯಾರ್ಥಿಗಳ ಸಂಖ್ಯೆಯು ೪೧೩ ಳಾಗಿ ಇತ್ತು. ಈಗ ಇನ್ನೂ ಒಹಳ ಹೆಚ್ಚಾಗಿ ಇವೆ. ಡಾಕ್ಟರ್ ಮಿಲ್ಲರ್ ಸಾಹೇಬರವರು ಕ್ರಿಸ್ತುಮತಕ್ಕೆ ಸೇರಿದವರು ಆದರೆ ಇವರಿಗೆ ತಮ್ಮ ಮತವೇ ನಿಜವಾದದ್ದು ವಿಕ್ಕಾದ ಮಾತುಗಳು ಸುಳ್ಳು ಎಂಬ ದುರಭಿಮಾನವು ಸ್ವಲ್ಪವೂ ಇಲ್ಲ ಹಿಂದೂಮತಸಿದ್ಧಾಂತಗಳನ್ನು ತಿಳಿದುಕೊಂಡು ಅದನು ನೋಡಿ ಬಹಳ ವಿಸ್ತರವಾಗಿ ಅದರ ಗುಣಕಥನಗಳನ್ನು ಮಾಡಿ ಡಾಕ್ಟರ್ ಮಿಲ್ಲರ್ ಸಾಹೇಬರವರು ಅನೇಕ ಪಾದ್ರಿಗಳ ನಿಂದೆಗೂ ಪಾತ್ರರಾಗಿದಾರೆ. ಇವರಿಗೆ ಈಗ ೫೯ ವರ್ಷಗಳಾಗಿವೆ. ಆದಾಗ್ಯೂ ಅವಿವಾಹಿತರಾಗಿದಾರೆ. ಇವರು ಈಗ ಕೆಲವು ವರ್ಷಗಳಿಗೆ ಮುಂಚೆ ವಿಲಾಯಿತಿಗೆ ಹೋಗಿ ಹಿಂದಕ್ಕೆ ಬಂದರು. ಆಕಾಲದಲ್ಲಿ ೭-೮ ವರ್ಷ ವಯಸ್ಸುಳ್ಳ ಒಬ್ಬ ವಿದ್ಯಾರ್ಥಿಯ ಯೋಗಕ್ಷೇಮವನ್ನು ಇವರು ವಿಚಾರಿಸುತ್ತಿದ್ದರು. ಆಗ ಆ ವಿದ್ಯಾರ್ಥಿಯು "ನೀವು ವಿಲಾಯಿತಿಗೆ ಹೋಗಿದ್ದರಲ್ಲಾ, ವಿವಾಹವನ್ನು ಮಾಡಿಕೊಂಡು ಕುಟುಂಬವನ್ನು ಕರೆದುಕೊಂಡು ಬಂದು ಇದೀರಾ" ಎಂಬದಾಗಿ ಕೇಳಿದನು. ಅದಕ್ಕೆ ಡಾಕ್ಟರ್ ಮಿಲ್ಲರ್‌ರವರು "ವಿವಾಹಮಾಡಿಕೊಂಡು ಬರಲಿಲ್ಲ. ವಿವಾಹದಿಂದ ಪ್ರಯೋಜನವೇನು" ಎಂದು ಹೇಳಿದರು. ಅದಕ್ಕೆ ಆ ಬಾಲನು "ಹಾಗಲ್ಲ ತಾವುಗಳು ವಿವಾಹವನ್ನು ಮಾಡಿಕೊಂಡು ಸ್ವತಂತ್ರರಾದರೆ ನಮ್ಮ

ಗೆಲ್ಲಾ ಬಹಳ ಸಂತೋಷ '' ಎಂದು ಹೇಳಿದನು. ಅದಕ್ಕೆ ಡಾಕ್ಟರು ಮಿಲ್ಲರ್‌ರವರು '' ನನಗೆ ಮಕ್ಕಳಿಗೇನು ಕಡಿಮೆ ಪಾಠಶಾಲೆಯಲ್ಲಿ ಓದತಕ್ಕ ನೀವೆಲ್ಲರೂ ಪಿತೃನಿರ್ವಿಶೇಷವಾಗಿ ನನ್ನನ್ನು ಕಾಣುವುದಿಲ್ಲವೆ? ನಿಮಿಗಿಂತ ಬೇರೇ ಮಕ್ಕಳು ನನಗೆ ಯಾತಕ್ಕೆ ಎಂಬದಾಗಿ ಹೇಳಿದರು. ಈ ರೀತಿಯಲ್ಲಿ ಹೇಳಿ ಸುಮಾರು ೧೫ ವರ್ಷಗಳಾಯಿತು. ಈ ಪ್ರತಿಜ್ಞೆಯನ್ನೇ ಪರಿಪಾಲನೆಮಾಡುತ್ತ ತಮ್ಮ ಕಾಲೇಜಿನಲ್ಲಿ ಓದತಕ್ಕ ವಿದ್ಯಾರ್ಥಿಗಳೇ ತಮಗೆ ಪುತ್ರಪ್ರಾಯರೆಂದು ಭಾವಿಸಿಕೊಂಡು ಪಾಠಶಾಲೆಯಲ್ಲಿ ಅವರ ವಿದ್ಯಾಭ್ಯಾಸಕ್ರಮವನ್ನು ಸರಿಯಾಗಿ ನಡೆಯುವಂತೆ ಮಾಡುತ್ತಾ ಪಾಠಗಳು ಮುಗಿದಕೂಡಲೆ ಅವರ ಆಟಪಾಟಗಳಿಗೂ ವ್ಯಾಯಾಮಗಳಿಗೂ ಅನ್ನಪಾನಗಳಿಗೂ ಚಿಂತನೆಗಳಿಗೂ ತಕ್ಕ ಏರ್ಪಾಡನ್ನು ಮಾಡುತ್ತಾ ಬಡವರಿಗೆ ಜೀವನಕ್ಕೂ ಸ್ಕೂಲ್ ಫೀಜುಗಳಿಗೂ ಮಾರ್ಗಮಾಡುತ್ತಾ ಪರೀಕ್ಷೆಯನ್ನು ಕೊಟ್ಟು ತೇರ್ಗಡೆಯಾದವರಿಗೆ ಸರಕಾರದ ಉದ್ಯೋಗಗಳನ್ನು ಕೊಡಿಸುತ್ತಾ ತಮ್ಮ ಸರ್ವಸ್ವವನ್ನು ವಿದ್ಯಾರ್ಥಿಗಳಿಗಾಗಿ ವಿನಿಯೋಗಿಸುತ್ತಾ ಸಂಸಾರಬಂಧನಗಳನ್ನು ಪರಿತ್ಯಾಗಮಾಡಿ ನಿಜವಾದ ವೈರಾಗ್ಯವನ್ನು ವಹಿಸಿ ಭೂತದಯೆಯೇ, ಅಜ್ಞಾನವಿಮೋಚಕವು; ಮುಖ್ಯವಾಗಿ ಮೋಕ್ಷಸಾಧಕವಾದದ್ದೆಂದು, ತಿಳಿದುಕೊಂಡು ತಮ್ಮ ಶಕ್ತಿಯನ್ನೂ, ಕಾಲವನ್ನೂ, ಸಂಪಾದನೆಯನ್ನೂ, ನಮ್ಮ ದಕ್ಷಿಣ ಇಂಡಿಯಾದೇಶದ ವಿದ್ಯಾರ್ಥಿಗಳಿಗೋಸ್ಕರ ನಿಸ್ಪೃಹತೆಯಿಂದ ವಿನಿಯೋಗಿಸುತ್ತಾ ಇರುವ ಡಾಕ್ಟರ್ ಮಿಲ್ಲರ್‌ರವರ ಚರಿತ್ರೆಯು ಯಾರಿಗೆ ತಾನೇ ಹೃದಯಂಗಮವಾಗದೇ ಇರುವುದು. ಮಹಾತ್ಮರಾದವರು ಒಂದು ದೇಶಕ್ಕೂ ಒಂದು ಕುಲಕ್ಕೂ ಸೇರಿರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಅನೇಕಸಹಸ್ರ ಮೈಲಿಗಳ ದೂರವಲ್ಲಿರತಕ್ಕ ಸ್ಕಾಟ್ಲೆಂಡಿನಲ್ಲಿ ಹುಟ್ಟಿ, ಅಲ್ಲಿ ವಿದ್ಯಾಭ್ಯಾಸವನ್ನು ಮಾಡಿ, ನಮ್ಮ ದೇಶದಲ್ಲಿ ಬಂದು ಕೆಲಸಮಾಡಿ ಲಕ್ಷಾಂತರ ದ್ರವ್ಯವನ್ನು ಆರ್ಜಿಸಿ ಅವುಗಳನ್ನೆಲ್ಲಾ ಯಾವ ಫಲಾಭಿಸಂಧಿಯನ್ನೂ ಇಟ್ಟುಕೊಳ್ಳದೆ ನಮ್ಮ ದೇಶೀಯರ ಅಭಿವೃದ್ಧಿಗೋಸ್ಕರ ವಿನಿಯೋಗಿಸುತ್ತಾ ಇರುವ ಡಾಕ್ಟರ್ ಮಿಲ್ಲರ್‌ರವರ ಗುಣಾತಿಶಯಗಳು ಬಹಳ ಆಶ್ಚರ್ಯವನ್ನು ಉಂಟುಮಾಡುತ್ತದೆ. ನಮ್ಮ ದೇಶದಲ್ಲಿ ಧನಿಕರಾಗಿಯೂ, ವಿದ್ಯಾವಂತರಾಗಿಯೂ, ಅನೇಕವಿದ್ಯಾವಿಶಾರದರಾಗಿಯೂ ಇರತಕ್ಕವರು ಎಷ್ಟೋ ಜನಗಳಿರುತ್ತಾರೆ. ಇವರುಗಳು ಡಾಕ್ಟರ್ ಮಿಲ್ಲರ್‌ರವರಂತೆ ಸೌಹಾರ್ದವುಳ್ಳವರಾಗಿಯೂ, ಭೂತದಯೆಯುಳ್ಳವರಾಗಿಯೂ, ವಿದ್ಯಾಭ್ಯಾಸಪ್ರೋತ್ಸಾಹೈಕಪರಾಯಣ

ರಾಗಿಯೂ ಆದರೆ ನಮ್ಮ ದೇಶವು ಬಹು ಜಾಗ್ರತೆಯಾಗಿ ಪಾಶ್ಚಾತ್ಯರ ದೇಶಗಳಂತೆ ವಿಶೇಷ ಉನ್ನತಸ್ಥಿತಿಗೆ ಬರುವುದರಲ್ಲಿ ಯಾವ ಸಂಶಯವೂ ಇಲ್ಲ.

ಶ್ರೀಮನ್ಮಹಾರಾಜ್ಞಿ ವಿಕ್ಟೋರಿಯಾರವರ ಚರಿತ್ರೆ.

ಶ್ರೀಮನ್ಮಹಾರಾಜ್ಞಿ ವಿಕ್ಟೋರಿಯಾರವರು ಬ್ರಿಟಿಷ್ ರಾಜ್ಯಕ್ಕೆ ಮಹಾ ರಾಣಿಯರಾಗಿರುವರು. ಈ ಬ್ರಿಟಿಷ್ ರಾಜ್ಯವು ಈ ಪ್ರಪಂಚದಲ್ಲಿರತಕ್ಕಂಥಾ ಎಲ್ಲಾ ರಾಜ್ಯಗಳಿಗಿಂತಲೂ, ವಿಸ್ತೀರ್ಣದಲ್ಲಿಯೂ ಜನಸಂಖ್ಯೆಯಲ್ಲಿಯೂ ಸಂಪತ್ತಿನಲ್ಲಿಯೂ ದೊಡ್ಡದಾದದ್ದು. ಈ ರಾಜ್ಯವು ೯ ಕೋಟಿ ಚದುರಮೈಲಿಗಳ ವಿಸ್ತೀರ್ಣವುಳ್ಳದ್ದು. ಈ ರಾಜ್ಯಗಳ ಜನಸಂಖ್ಯೆಯು ೩೮೫ ಕೋಟಿಗಳಾಗಿರುವದು. ನಮ್ಮ ಭರತಖಂ ಡಕ್ಕೆ ಶ್ರೀಮನ್ಮಹಾರಾಜ್ಞಿ ವಿಕ್ಟೋರಿಯಾರವರು ಚಕ್ರವರ್ತಿನಿಯರಾಗಿರುವರು ಇದ್ದರಿಂದ ಇವರ ಚರಿತ್ರೆಯು ನಮ್ಮಗಳಿಗೆ ಜ್ಞಾತವ್ಯವಾಗಿ ಇದೆ.

ವಿಕ್ಟೋರಿಯಾರವರು ೧೮೧೯ ನೇ ಇಸವಿ ಮೇ ೨೪ ನೇ ತಾರೀಖಿನ್ನ ಜನಿಸಿದರು. ಆಗ ಬ್ರಿಟಿಷ್‌ರಾಜ್ಯಕ್ಕೆ ಇವರ ದೊಡ್ಡಪ್ಪಂದಿರಾದ ನಾಲ್ಕನೇ ವಿಲಿಯಮ್‌ರವರು ಪ್ರಭುಗಳಾಗಿದ್ದರು ವಿಕ್ಟೋರಿಯಾರವರು ಜನಿಸಿದ ಕೆಲವು ದಿವಸಗಳೊಳಗಾಗಿ ಇವರ ತಂದೆಗಳು ಸ್ವರ್ಗಸ್ಥರಾದರು. ವಿಲಿಯಮ್‌ರವರಿಗೆ ಸಂತಾನವಿರಲಿಲ್ಲ. ಇವರನಂತರ ವಿಕ್ಟೋರಿಯಾರವರೇ ಸಂಸ್ಥಾನಾಧಿಪತ್ಯವನ್ನು ವಹಿಸಬೇಕೆಂದು ನಿಶ್ಚಯಿಸಿತ್ತು. ವಿಕ್ಟೋರಿಯಾರವರ ಮಾತೋಶ್ರೀಯವರು ಅಕಾಲದ ವಿಧವಾವಿಯೋಗವನ್ನು ಹೊಂದಿದಾಗ್ಯೂ ರಾಜ್ಯಭಾರಕ್ಕೆ ವಿಕ್ಟೋರಿಯಾರವರನ್ನು ಶಕ್ತರಾಗುವಂತೆ ಮಾಡುವದರಲ್ಲಿ ಸದಾ ನಿರತರಾಗಿದ್ದುಕೊಂಡು ಆ ವಿಯೋಗದುಃಖವನ್ನು ಕಡಮೆಮಾಡಿಕೊಳ್ಳುತ್ತಾ ಇದ್ದರು.

ವಿದ್ಯಾರ್ಥಿಗಳಿಗೆ ವಿದ್ಯವೂ ಒಳ್ಳೇ ಶೀಲಸ್ವಭಾವಗಳೂ ಉಂಟಾಗಬೇಕಾದರೆ ಅವರ ಸಹಪಾಠಿಗಳು ಪರಿಜನಗಳು ಇವೇ ಮೊದಲಾದ ಸಮಸ್ತ ಸಹವಾಸಗಳೂ ಒಳ್ಳೇ ಶೀಲಸ್ವಭಾವವುಳ್ಳವರಾಗಿ ಇರಬೇಕೆಂದು ಭಾವಿಸಿ, ವಿಕ್ಟೋರಿಯಾರವರ ಮಾತೋಶ್ರೀಯವರು ತಾವು ವಾಸವಾಗಿದ್ದ ಕೆನ್‌ಸಿಂಗ್‌ಟನ್ ಅರಮನೆಯಲ್ಲಿ ಇವ

ವಿದ್ಯಾಭ್ಯಾಸಕ್ಕೆ ಅತ್ಯಂತ ಸಮರ್ಪಕವಾದ ಏರ್ಪಾಡುಗಳನ್ನು ಮಾಡಿದರು. ಇದ
ಲ್ಲದೆ ತಾವೂ ವಿಕ್ಟೋರಿಯಾರವರ ಉಪಾಧ್ಯಾಯನಿಯರೂ ಅರಮನೆಯಲ್ಲಿದ್ದ ಪರಿಜ
ನರೂ ಸರ್ವರೂಕೂಡ ವಾಙ್ಮಯವುಳ್ಳವರಾಗಿಯೂ, ಸತ್ಯವಾದಿಗಳಾಗಿಯೂ,
ಪರಸ್ಪರ ಪ್ರೀತಿಯುಳ್ಳವರಾಗಿಯೂ, ಗೃಹಕೃತ್ಯಗಳನ್ನು ಅಥವಾ ಇತರ ವ್ಯಾಸಂ
ಗಗಳನ್ನು ಅಲಸಿಕೆ ಇಲ್ಲದೆ ಮಾಡತಕ್ಕವರಾಗಿಯೂ, ವಿನೀತರಾಗಿಯೂ, ಪ್ರತಿಷ್ಠೆ
ಇಲ್ಲದವರಾಗಿಯೂ, ಅಮೂಲ್ಯವಾದ ವಸ್ತ್ರಾಭರಣಗಳ ವಿಷಯದಲ್ಲಿ ಜುಗುಪ್ಸೆಯುಳ್ಳ
ವರಾಗಿಯೂ, ಓದುವದು ಬರೆಯುವದು ದಾನಧರ್ಮಗಳನ್ನು ಮಾಡುವದು ಇವೇ
ಮೊದಲಾದ ಕೆಲಸದಲ್ಲಿ ಶ್ರದ್ಧೆಯುಳ್ಳವರಾಗಿಯೂ, ನಿರ್ದುಷ್ಟವಾದ ಆಹಾರವಿಹಾರಗ
ಳಲ್ಲಿ ಮಾತ್ರ ಆಸಕ್ತಿಯುಳ್ಳವರಾಗಿಯೂ ಇರುತ್ತಿದ್ದರು. ವಿಕ್ಟೋರಿಯಾರವರು ಈ
ಕಟ್ಟಳೆಗಳಿಂದ ಇವರು ಹಾಕಿದ ನೇಲುಪಬ್ಬಿಗೆ ಅನುಸಾರವಾಗಿ ಇವರ ಸಚ್ಚರಿತ್ರೆ
ಗಳನ್ನೇ ಕಲಿತುಕೊಳ್ಳುತಿತ್ತು. ಇವರಂತೆಯೇ ಅಲಸ್ಯವಿಲ್ಲದೆ ಗೃಹಕೃತ್ಯಗಳಲ್ಲಿಯೂ
ವಿದ್ಯಾಭ್ಯಾಸದಲ್ಲಿಯೂ, ದಾನಧರ್ಮಗಳನ್ನು ಮಾಡುವುದರಲ್ಲಿಯೂ, ಪರೋಪಕಾರ
ಬುದ್ಧಿಯಲ್ಲಿಯೂ ತಮ್ಮ ಸೋದರೀಶ್ರೀಯವರಿಗಿಂತಲೂ ಹೆಚ್ಚಾದ ಶ್ರದ್ಧೆಯಿಂದ
ಗುಣಾತಿಶಯಗಳನ್ನು ಸಂಪಾದಿಸಿದರು. ಕ್ರಮಕ್ರಮವಾಗಿ ಇವರ ವಯಸ್ಸಿಗೂ
ಬುದ್ಧಿವಿಕಾಸಕ್ಕೂ ಅನುರೂಪವಾದ ವಿದ್ಯಾಭ್ಯಾಸನನ್ನು ಮಾಡಿಸುವುದಕ್ಕೆ ತಕ್ಕ ಕಟ್ಟ
ಳೆಗಳನ್ನು ಮಾಡಿದರು. ಕೆಲವು ವರ್ಷಗಳಲ್ಲಿ ವಿಕ್ಟೋರಿಯಾರವರು ವಿದ್ಯೆಯಲ್ಲಿ
ಯೂ ಸೌಶೀಲ್ಯಾದಿಗುಣಗಳಲ್ಲಿಯೂ ಒಳ್ಳೇ ಹೆಸರುವಾಸಿಯನ್ನು ಸಂಪಾದಿಸಿದರು.
ಇವರಿಗೆ ಚಿಕ್ಕವಯಸ್ಸಿನಲ್ಲಿಯೇ ಗುರುಹಿರಿಯರಲ್ಲಿ ಭಕ್ತಿಯೂ, ಸಖಿಯರಲ್ಲಿ ಪ್ರೀತಿ
ಯೂ, ಭೃತ್ಯರಲ್ಲಿ ಅಭಿಮಾನವೂ, ಸರ್ವಭೂತಗಳಲ್ಲಿ ದಯೆಯೂ ರೂಢಮೂಲವಾ
ಯಿತು.

೧೮೩೫ರಲ್ಲಿ ಕರ್ಫರ್ಮೇಷನ್ ಎಂಬ ಒಂದು ಕರ್ಮವನ್ನು ವಿಕ್ಟೋರಿಯಾ
ರವರು ಮಾಡಿದರು. ಈ ಕರ್ಮಾಚರಣೆಯ ವೇಳೆಯಲ್ಲಿ ವಿಲಿಯಮ್‌ರವರು, ಇವರ ಮೊ
ತ್ತೋಶ್ರೀಯವರು ಇವರೇಮೊದಲಾದ ಅನೇಕ ದೊಡ್ಡಮನುಷ್ಯರು ದಯಮಾಡಿಸಿದ್ದ
ರು. ಇವರುಗಳ ಮುಂದೆ ದೇವಸ್ಥಾನದಲ್ಲಿ " ಇದುಮೊದಲುಗೊಂಡು ನಾನು ಮರ
ಣಕ್ಕೆ ಸಮಸ್ತ ಕೆಲಸಗಳಲ್ಲಿಯೂ ಧರ್ಮವನ್ನು ಉಲ್ಲಂಘಿಸುವದಿಲ್ಲ " ಎಂದು ಪ್ರತಿ
ಜ್ಞೆಯನ್ನು ಮಾಡಿದರು. ಇವರಿಗೆ ಪ್ರತಿವಾರದಲ್ಲಿಯೂ ಸ್ವಂತಖರ್ಚಿಗಾಗಿ ಇವರ

ಮೂತೋಶ್ರೀಯವರು ಸ್ವಲ್ಪ ದ್ರವ್ಯವನ್ನು ಕೊಡುತ್ತಿದ್ದರು. ವಿಕ್ಟೋರಿಯಾ ವರು ಈ ದ್ರವ್ಯವನ್ನು ಭದ್ರವಾಗಿಟ್ಟುಕೊಂಡು ಬಡವರಾಗಿಯೂ ಒಳ್ಳೇ ಪಾತ್ರರಾಗಿಯೂ ಇರುವವರಿಗೆ ದಾನ ಕೊಡುವುದಕ್ಕೋಸ್ಕರ ಅದನ್ನು ಉಪಯೋಗಿಸುತ್ತಿದ್ದರು. ಅನೇಕ ಸ್ತ್ರೀಯರು ಬಹು ದ್ರವ್ಯವನ್ನು ಖರ್ಚುಮಾಡಿಸಿ ಅಮೂಲ್ಯವಾದ ಉಡಿಗೆ ತೊಡಿಗೆಗಳನ್ನು ಹಾಕಿಕೊಳ್ಳುತ್ತಾರೆ. ವಿಕ್ಟೋರಿಯಾರವರು "ನಾನು ಈ ರೀತಿಯುಲ್ಲಿ ಉಡಿಗೆತೊಡಿಗೆಗಳನ್ನು ಹಾಕಿಕ್ಕೊಂಡರೆ ನನ್ನನ್ನು ನೋಡಿ ನನ್ನ ಪ್ರಜೆಗಳಾದವರು ಇದೇರೀತಿಯುಲ್ಲಿ ಪ್ರವರ್ತಿಸಿ ನ್ಯಾಯವಾದ ಖರ್ಚಿಗೆ ದುಡ್ಡಿಲ್ಲದೆ ಕೆಟ್ಟು ಹೋಗಬಹುದು. ಆದ್ದರಿಂದ ನಾನು ಇಂಥಾ ಕೆಟ್ಟ ಮೇಲುಪಜ್ಜೆಯನ್ನು ಹಾಕದಿಲ್ಲವೆಂದು ಸಾವಶ್ಯವಾದ ಉಡಿಗೆಗಳನ್ನು ಹಾಕಿಕೊಂಡು ಕಾಲಕ್ಷೇಪವೂಡುತ್ತಿದ್ದರು. ಘನತೆಯನ್ನು ಹೊಂದಿದ ಅನೇಕ ಹೆಂಗಸರು ಅನೇಕವೇಳೆಗಳಲ್ಲಿ ಇವರನ್ನು ನೋಡಿ ಇದು ಯಾರೋ ಬಡಹೆಂಗಸೆಂದು ತಿಳಿದುಕೊಂಡು ಅವರ ಪದವಿಯೋಗ್ಯವಾದ ವಂದನಾದಿಗಳನ್ನು ಮಾಡುತ್ತಿರಲಿಲ್ಲ.

೧೮೩೧ ರಲ್ಲಿ ಪಾರ್ಲಿಮೆಂಟಿನವರು ಅವರ ವಿದ್ಯಾಭ್ಯಾಸಕ್ಕೋಸ್ಕರವಾಗಿ ತಕ್ಕ ನಿಯಮಗಳನ್ನು ಮಾಡಿಸಿ ಇದಕ್ಕಾಗಿ ಹತ್ತುಸಾವಿರ ಪೌನುಗಳನ್ನು ಕೊಡತ್ತಾ ಬಂದರು. ಇವರು, ಇಂಗ್ಲೀಷ್‌ಭಾಷೆಯಲ್ಲಿ ಪರಿಚಯವು ಚೆನ್ನಾಗಿ ಆದಮೇಲೆ ಫ್ರೆಂಚ್, ಜರ್ಮನ್, ಇಟಾಲಿಯನ್ ಭಾಷೆಗಳನ್ನು ಅಭ್ಯಾಸ ಮಾಡಿದರು. ಈ ಭಾಷೆಗಳಲ್ಲಿರತಕ್ಕ ರಾಜತಂತ್ರಗಳನ್ನು ಓದಿ ಅವುಗಳಲ್ಲಿ ಪಾಂಡಿತ್ಯವನ್ನು ಉಂಟುಮಾಡಿಕೊಂಡರು.

೧೮೩೭ನೇ ಇಸವಿ ಮೇ ೨೪ನೇ ತಾರೀಖಿನಲ್ಲಿ ಇವರಿಗೆ ಮೈನರ್ ಅವಸ್ಥೆಯು ಕಳೆಯಿತು. ಅದಿನ ನಡೆದ ವರ್ಧಂತಿಯು ಪರ್ಬಾರಿನಲ್ಲಿ ಸಂಸ್ಥಾನದ ದೊಡ್ಡಮನುಷ್ಯರು ದೇಶಾಂತರದಿಂದ ಬಂದಿದ್ದ ಅನೇಕರು ಅವರಿಗೆ ಮುಜರೆ ಮೊದಲಾದವುಗಳನ್ನು ಮಾಡಿ ಯುವರಾಜ್ಞಿಯರಿಗೆ ತೋರಿಸತಕ್ಕ ಮರ್ಯಾದೆಗಳನ್ನೆಲ್ಲಾ ಮಾಡಿದರು. ಇದೇ ಇಸವಿ ಜೂನ್ ೨೦ನೇ ತಾರೀಖಿನಲ್ಲಿ ಇವರ ದೊಡ್ಡಪ್ಪಂದಿರಾದ ನಾಲ್ಕನೆ ವಿಲಿಯಂರವರು ಸ್ವರ್ಗಸ್ಥರಾದರು. ಇವರಿಗೆ ಪಿತೃವಿಯೋಗವಾದಾಗ ಬಹಳ ಬಾಲ್ಯವಾಗಿದ್ದದ್ದರಿಂದ ಆ ವಿಯೋಗದ ದುಃಖವು ತೋರಿಬರಲಿಲ್ಲ. ಈಗ ಅವರಿಗೆ ಅನಿರ್ವಚನೀಯವಾದ ಶೋಕವು ಉಂಟಾಯಿತು. ವಿಲಿಯಂರವರು ಕಾಲಾಧೀನರಾದಕೂಡ

ರಾಜ್ಯಾಧಿಕಾರಿಗಳು ಇವರಿಗೆ ಪಟ್ಟಾಭಿಷೇಕವನ್ನು ಮಾಡುವುದಕ್ಕೆ ಸನ್ನಾಹಮಾಡಿದರು. ಸಾಮಾನ್ಯವಾದ ಜನರು ರಾಜ್ಯಲಾಭ ಉಂಟಾದರೆ ಸಂತೋಷಪಡುವರು. ಇವರಿಗೆ ಅಂಥಾ ಸಂತೋಷ ಉಂಟಾಗಲಿಲ್ಲ. "ಒಂದು ಕುಟುಂಬಕ್ಕೆ ಅಧಿಪತಿಯಾಗಿದ್ದು ಕೊಂಡು ಆ ಕುಟುಂಬಕ್ಕೆ ಸೇರಿದವರೆಲ್ಲಾ ಸೌಖ್ಯವಾಗಿರುವಂತೆ ಕುಟುಂಬಭರಣವನ್ನು ಮಾಡುವುದು ಬಹಳ ಕಷ್ಟವಾದದ್ದು. ಇಂಥಾದ್ದರಲ್ಲಿ ಕೋಟ್ಯಂತರ ಕುಟುಂಬಗ ಗಳುಳ್ಳ ಈ ರಾಜ್ಯಭಾರವನ್ನು ವಹಿಸಿ ಕೃತಕೃತ್ಯಳಾಗುವುದು ಬಹಳ ಕಷ್ಟ. ದೇವರ ಸಹಾಯದಿಂದಲೂ ನನ್ನ ಮಂತ್ರಿಗಳೇಮೊದಲಾದ ಪ್ರಜೆಗಳ ಸಹಾಯದಿಂದಲೂ ನಾನು ಈ ರಾಜ್ಯಭಾರವನ್ನು ವಹಿಸಿ ಕೃತಾರ್ಥಳಾಗಬೇಕು" ಎಂದುಕೊಂಡು ಬಹಳ ಸಂತಾಪಪಟ್ಟರು.

ಪಟ್ಟಾಭಿಷೇಕಮಹೋತ್ಸವವು ಸವಿಾಪವಾಯಿತು. ದೇಶದ ಮಂತ್ರಿಗಳೆ ಲ್ಲರೂ ಸೇರಿ ಸಭೆಯನ್ನು ಮಾಡಿದರು. ಈ ಸಭೆಯಲ್ಲಿ ಮಾಡತಕ್ಕ ಪ್ರತಿಜ್ಞೆಯನ್ನು ಮಾಡುವುದಕ್ಕೋಸ್ಕರ ವಿಕ್ಟೋರಿಯಾರವರು ಹೊರಡಬೇಕಾಯಿತು. ಆ ಸಮಯದಲ್ಲಿ ಆ ಮಹೋತ್ಸವಕ್ಕೆ ಉಚಿತವಾದ ಉಡಿಗೆತೊಡಿಗೆಗಳನ್ನು ಪರಿಜನರು ತಂದರು. ವಿ ಕ್ಟೋರಿಯಾರವರು ಅವುಗಳನ್ನೆಲ್ಲಾ ಹಿಂದಕ್ಕೆ ಕಳುಹಿಸಿ ತಾವು ನಿತ್ಯಗಟ್ಟಲೆ ಹಾಕಿಕೊ ಳ್ಳತಕ್ಕ ಉಡಿಗೆಗಳನ್ನು ಹಾಕಿಕೊಂಡು ಸಭೆಯನ್ನು ಪ್ರವೇಶಿಸಿದರು. ಕೂಡಲೆ ಮಂತ್ರಿ ಗಳೆಲ್ಲರೂ ಎದ್ದು ಇವರಿಗೆ ಮರ್ಯಾದೆಯನ್ನು ಮಾಡಿ ಅಲ್ಲಿ ಹಾಕಲ್ಪಟ್ಟಿದ್ದ ಭದ್ರಾ ಸನವನ್ನು ಅಲಂಕರಿಸಬೇಕೆಂದು ಪ್ರಾರ್ಥಿಸಿದರು. ವಿಕ್ಟೋರಿಯಾರವರು ಆ ಪೀಠ ವನ್ನಲಂಕರಿಸಿ ಮಾಡಿದ ಪ್ರತಿಜ್ಞೆ ಏನಂದರೆ :—

ನಮ್ಮ ದೊಡ್ಡಪ್ಪನವರು ಸ್ವರ್ಗಸ್ಥರಾದದ್ದರಿಂದ ಈ ದೇಶಕ್ಕೆ ಉಂಟಾದ ನಷ್ಟವು ಅಪರಿಮಿತವಾಗಿದೆ. ಈ ರಾಜ್ಯಭಾರವನ್ನು ಈಗ ನಾನು ವಹಿಸಬೇಕಾಗಿ ಬಂತು. ಇಷ್ಟು ಚಿಕ್ಕವಯಸ್ಸಿನಲ್ಲಿ ಈ ಭಯಂಕರವಾದ ರಾಜ್ಯಸ್ವಾತಂತ್ರ್ಯವನ್ನು ವಹಿಸುವುದಕ್ಕೆ ನಾನು ಅಸಮರ್ಥಳು. ದೇವರದಯೆಯಿಂದಲೂ ತಾವೇಮೊದಲಾದ ಪ್ರಜೆಗಳ ಸಹಾಯದಿಂದಲೂ ಈ ಭಾರವನ್ನು ನಾನು ವಹಿಸುತ್ತೇನೆ. ಜನರ ಹಕ್ಕುಬಾಧ್ಯತೆಮೊದಲಾದವುಗಳನ್ನು ಸಂರಕ್ಷಿಸತಕ್ಕ ವಿಷಯದಲ್ಲಿ ನಮ್ಮ ದೊಡ್ಡಪ್ಪನೇ ಮೊದಲಾದವರು ಮೇಲುಪಟ್ಟಿಯನ್ನು ಹಾಕಿದಾರೆ. ಈ ಮೇಲುಪಟ್ಟಿಗೆ ಅನುಸಾರ ವಾಗಿ ನಾನು ನಡೆದುಕೊಳ್ಳುತ್ತೇನೆ. ಬಾಲ್ಯದಾರಭ್ಯ ಈ ದೇಶದಲ್ಲಿದ್ದುಕೊಂಡು ಈ

ರಾಜ್ಯಭಾರಕ್ರಮವನ್ನು ತಿಳಿದುಕೊಂಡು ಪ್ರಜಾಸೇವೆಯೇ ಮುಖ್ಯಕರ್ತವ್ಯವೆಂದು ಅಭಿಪ್ರಾಯವನ್ನು ನಮ್ಮ ಮಾತೋಶ್ರೀಯವರಿಂದಲೂ, ಉಪಾಧ್ಯಾಯನಿಯರೇ ಮೊದಲಾದವರಿಂದಲೂ, ಕೇಳಿ ತಿಳಿದುಕೊಂಡಿದ್ದೇನೆ. ಈ ವಿಷಯವನ್ನು ಆಚರಿಸುವು ಕ್ಕೆ ಕಾಲವು ಒದಗಿತು ಈ ಸಂಸ್ಥಾನದಲ್ಲಿ ದುಷ್ಟನಿಗ್ರಹವನ್ನೂ ಶಿಷ್ಟಪರಿಪಾಲನೆ ಯನ್ನೂ ಮಾಡುವುದೇ ನನ್ನ ಕರ್ತವ್ಯವು. ಇದನ್ನು ಭಯಕ್ಕೂ ದಾಕ್ಷಿಣ್ಯಕ್ಕೂ ಒಳ ಪಡದೆ ಮಾಡುತ್ತೇನೆ ಈ ವಿಷಯದಲ್ಲಿ ನ್ಯೂನತೆಯಾಗದಂತೆ ತಕ್ಕ ವಿವೇಕವನ್ನೂ ಬುದ್ಧಿಯನ್ನೂ ಕೊಟ್ಟು ದೇವರು ಸಂರಕ್ಷಿಸುತ್ತಾನೆಂದು ನಂಬಿದ್ದೇನೆ.''

ಈರೀತಿಯಲ್ಲಿ ಪ್ರತಿಜ್ಞೆಯನ್ನುಮಾಡಿ ವಿಕ್ಟೋರಿಯಾರವರು ಪಟ್ಟಾಭಿಷಿಕ್ತ ರಾದರು. ರಾಜ್ಯಭಾರವನ್ನು ವಹಿಸಿದ ಕೂಡಲೆ ತಮ್ಮ ದೊಡ್ಡಪ್ಪಂದಿರ ಕುಟುಂಬ ದ ಮೊದಲಾದ ಸರ್ವರಿಗೂ ತಕ್ಕ ಅಯತಿಗಳನ್ನೂ ಮುರ್ಯಾದೆಗಳನ್ನೂ ಕಲ್ಪಿಸಿ ಅವರ ಪ್ರೀತಿಗೆ ಪಾತ್ರರಾದರು. ಬಾಲ್ಯದಾರಭ್ಯ ತಮ್ಮ ಸೇವೆಯನ್ನು ಮಾಡುತ್ತಿದ್ದ ಜನ ರಿಗೆಲ್ಲಾ ಗೌರವವಾದ ಅಧಿಕಾರಗಳನ್ನು ಕೊಟ್ಟು ಸವಿಾಪದಲ್ಲಿಟ್ಟುಕೊಂಡರು. ತಮ್ಮ ಮಾತೋಶ್ರೀಯವರು ಪತಿವಿಯೋಗವಾದದ್ದು ಮೊದಲುಗೊಂಡು ಅದುವರಿ ಗೂ ನಡೆದ ಗೃಹಕೃತ್ಯದ ಖರ್ಚಿಗಾಗಿ ಮಾಡಿಕೊಂಡಿದ್ದ ಸಾಲಗಳನ್ನು ತೀರಿಸಿ ಅವ ರಿಗೆ ತಕ್ಕ ಆಯತಿಯು ಬರುವಂತೆ ಉಪಾಯವನ್ನು ಕಲ್ಪಿಸಿದರು. ವಿಲಾಯತಿಯಲ್ಲಿ ರಾ ಜ್ಯಂಗಗಳು ನಾಲ್ಕು ಇರುತ್ತವೆ ಧೊರೆಯೇ ಮೊದಲನೇ ಅಂಗವು. ಬಹಳ ದೊಡ್ಡ ಮನುಷ್ಯರಾಗಿಯೂ, ಐಶ್ವರ್ಯವಂತರಾಗಿಯೂ ಇರತಕ್ಕ ಜನ ಹೌಸ್ ಅಫ್ ಲಾರ್ಡ್ಸ ಎಂಬ ಸಭೆಯು ಎರಡನೇ ಅಂಗವು. ಪ್ರಜೆಗಳ ಪ್ರತಿನಿಧಿಗಳ ಹೌಸ್ ಅಫ್‌ಕಾಮ ನ್ಸ್ ಸಭೆಯು ಮೂರನೇ ಅಂಗವು. ಅಧಿಕಾರಿಗಳು ಮಾಡಿದ ಒಳ್ಳೇ ಕೆಲಸಗಳನ್ನು ಕೊಂಡಾಡುತ್ತಾ ಅವರು ಮಾಡಿದ ಕೆಟ್ಟಕೆಲಸಗಳನ್ನು ಉದ್ಘಾಟಿಸುತ್ತಾ ಸಾಂಕುಶ ಪ್ರವರ್ತನೆಗೆ ಅವಕಾಶಮಾಡುತ್ತಾ ಇರುವ ವರ್ತಮಾನಪತ್ರಿಕೆಗಳು ನಾಲ್ಕನೇ ಅಂಗ ವು. ಮೇಲೆ ಹೇಳಿದ ಎರಡನೇ ಮೂರನೇ ಅಂಗಗಳನ್ನು ಪಾರ್ಲಮೆಂಟನ್ನುವರು. ಈ ಪಾರ್ಲಮೆಂಟಿನ ಮೆಂಬರುಗಳಲ್ಲಿ ಹೆಚ್ಚು ಜನಗಳ ಅಭಿಪ್ರಾಯಾನುಸಾರನಾಗಿ ರಾಜ್ಯಭಾರವು ನಡೆಯುವದು. ಈ ಮೆಂಬರುಗಳಲ್ಲಿ ಕನ್‌ಸರ್ವೆಟಿವ್ಸ್ ಲಿಬರಲ್ಸ್ ಎಂಬ ಎರಡು ಪಂಗಡಗಳು ಇವೆ. ಇವುಗಳಲ್ಲಿ ಪಾರ್ಲಮೆಂಟಿನಲ್ಲಿ ಹೆಚ್ಚು ಜನಗಳು ಉಳ್ಳ ಪಂಗಡದವರು ರಾಜ್ಯಭಾರಮಾಡುತ್ತಾ ಇರುವರು. ಕಡಮೆ ಸಂಖ್ಯೆಯುಳ್ಳವರು

ಇವರಿಗೆ ಪ್ರತಿಕಕ್ಷಿಗಳಾಗಿದ್ದುಕೊಂಡು ರಂಧ್ರಾನ್ವೇಷಣವನ್ನು ಮಾಡುತ್ತಾ ಇವರ ತಪ್ಪನ್ನು ಉದ್ಘಾಟಿಸುತ್ತಾ ಚತುರೋಪಾಯಗಳಿಂದಲೂ ಹೆಚ್ಚು ಜನಗಳನ್ನು ತಮ್ಮ ಕಡೆ ಮಾಡಿಕೊಂಡು ಅವರಿಗೆ ಅಧಿಕಾರಚ್ಯುತಿಯನ್ನು ಮಾಡಿ ತಾವು ಅಧಿಕಾರಕ್ಕೆ ಬರಬೇಕೆಂದು ಪ್ರಯತ್ನಮಾಡುವರು. ಧೊರೆಯು ಯಾರಿಗೆ ಪಾರ್ಲಮೆಂಟಿನಲ್ಲಿ ಹೆಚ್ಚಾಗಿ ಮೆಂಬರುಗಳಿರುತಾರೋ ಅವರ ಇಷ್ಟಾನುಸಾರವಾಗಿ ರಾಜ್ಯಭಾರ ಮಾಡಬೇಕು. ಈಗ ವಿಕ್ಟೋರಿಯಾರವರು ದವಲತ್ತಿಗೆ ಬಂದಿದ್ದರಿಂದ ಉಭಯ ಕಕ್ಷಿಯವರೂ "ಇವರು ತಮ್ಮ ಪ್ರತಿಕಕ್ಷಿಯಾದವರಕಡೆ ಸೇರಬಹುದೆಂಬದಾಗಿಯೂ, ಹೀಗೆ ಸೇರಿದಪಕ್ಷದಲ್ಲಿ ಅನೇಕ ಅನರ್ಥಗಳಿಗೆ ಕಾರಣವಾಗುವದೆಂಬದಾಗಿಯೂ" ಅನುಮಾನಪಡುವದಕ್ಕೆ ಪ್ರಾರಂಭ ಮಾಡಿದರು. ಕ್ರಮಕ್ರಮವಾಗಿ ವಿಕ್ಟೋರಿಯಾರವರು ನಿಸ್ಪೃಹರೆಂಬದಾಗಿಯೂ, ಯಾವಕಕ್ಷಿಯವರು ಹೆಚ್ಚು ಮಂದಿ ಪ್ರತಿನಿಧಿಗಳು ಅಧಿಕಾರಕ್ಕೆ ಕಳುಹಿಸುತ್ತಾರೋ ಅವರ ಉಪದೇಶಕ್ಕೆ ಅನುಸಾರವಾಗಿಯೂ, ಧರ್ಮಕ್ಕೆ ಚ್ಯುತಿ ಇಲ್ಲದೇಲೂ, ಇರುವಂತೆ ರಾಜ್ಯಭಾರ ಮಾಡುವದೇ ಇವರ ಮುಖ್ಯಸಂಕಲ್ಪವೆಂಬದಾಗಿ ವ್ಯಕ್ತವಾಯಿತು.

ಇವರು ಪಟ್ಟಾಭಿಷಿಕ್ತರಾದಕೂಡಲೆ ರಾಜ್ಯದ ಅಧಿಕಾರಿಗಳೊಡನೆ ರಾಜಕಾರ್ಯವಿಷಯವಾಗಿ ಆಗಾಗ್ಗೆ ಸಂಭಾಷಣೆಗಳನ್ನು ಮಾಡಬೇಕಾಗಿಬಂತು. ಈ ಸಂಭಾಷಣೆಗಳಿಂದ ಅನೇಕರಿಗೆ ಹೊಟ್ಟೆಕಿಚ್ಚು ಮೊದಲಾದವುಗಳು ಪ್ರಬಲವಾದುವು. ದುರ್ಮಾರ್ಗರಾದವರು ಮನಸ್ವಿ ಮಾತನಾಡುವದಕ್ಕೆ ಉಪಕ್ರಮಿಸಿದರು. ಎಲ್ಲೆಲ್ಲಿಯೂ ಅಪಾಯಕರನಾದ ಪಿತೂರಿಗಳು ಉಪಕ್ರಮವಾದವು. ಸ್ತ್ರೀಯರು ಯಾವಪದವಿಯಲ್ಲಿದ್ದಾಗ್ಯೂ ಅವಿವಾಹಿತರಾಗಿರುವ್ರದು ಬಹಳ ಅನರ್ಥಕಾರಿಯಾದದ್ದೆಂದು ಇವರಿಗೆ ಗೊತ್ತಾಯಿತು. ಬಾಲ್ಯದಿಂದಲೂ ಇವರಿಗೂ ಜರ್ಮನೀದೇಶದಲ್ಲಿದ್ದ ಸ್ಯಾಕ್ಸ್‌ಕೋಬರ್ಗ್ ಎಂಬ ಸಂಸ್ಥಾನಕ್ಕೆ ಅಧಿಪತಿಗಳಾದ ಪ್ರಿನ್ಸ್ ಆಲ್‌ಬರ್ಟ್‌ರವರಿಗೂ ಪರಿಚಯವೂ ಸ್ನೇಹವೂ ಇತ್ತು. ಪ್ರಿನ್ಸ್ ಆಲ್‌ಬರ್ಟ್‌ರವರು ರೂಪಿನಲ್ಲಿಯೂ ಯೌವನದಲ್ಲಿಯೂ ಸಕಲವಿದ್ಯಾವೈದುಷ್ಯದಲ್ಲಿಯೂ ಭೂತದಯೆಯೇಮೊದಲಾದ ಗುಣಾತಿಶಯಗಳಲ್ಲಿಯೂ ಇವರಿಗೆ ಅನುರೂಪರಾಗಿದ್ದರು. ಅವರನ್ನು ವಿವಾಹಮಾಡಿಕೊಳ್ಳುವದಕ್ಕೆ ಬೇಕಾದ ಸನ್ನಾಹಗಳನ್ನು ಮಾಡಿ ಈ ವಿಷಯವನ್ನು ತಮ್ಮ ಮಂತ್ರಿಶ್ರೇಷ್ಠರಿಗೆ ತಿಳಿಸಿದರು. ಆಗ ಮಂತ್ರಿಗಳೆಲ್ಲರೂ ಸೇರಿ ಸಭೆಯನ್ನು ಮಾಡಿದರು. ಆ ಸಭೆಯಲ್ಲಿ

ವಿಕ್ಟೋರಿಯಾರವರು ತಮ್ಮ ತಾತ್ಪರ್ಯವನ್ನು ತಿಳಿಸಲು ಅವರು ಅದಕ್ಕೆ ಸಮ್ಮತಿಸಿ
ರು. ಕೂಡಲೆ ಪಾರ್ಲಿಮೆಂಟ್ ಸಭೆಗಳನ್ನು ಸೇರಿಸಿ ಈ ಅರ್ಥವನ್ನು ಅವರಿಗೂ
ಳಿಸಿದರು. ಸರ್ವರೂ ಇದಕ್ಕೆ ಸಮ್ಮತಿಪಟ್ಟರು.

ಸ್ಯಾಕ್ಸ್‌ಕೋಬರ್ಗ್‌ಗೆ ವಿಲಾಯತಿನಿಂದ ರಾಯಭಾರಿಗಳು ಹೋಗಿ ಲಗ್ನ
ಪತ್ರಿಕೆಗಳನ್ನು ಎಲ್ಲರಿಗೂ ಕಳಿಸಿ ಪ್ರಿನ್ಸ್ ಅಲ್‌ಬರ್ಟ್‌ರವರನ್ನು ಅವರ ಬಂಧುವಿ
ವರ್ಗಗಳನ್ನು ಕರೆದುಕೊಂಡು ಬಂದರು. ೧೮೪೦ ನೇ ಇಸವಿ ಫೆಬ್ರವರಿ ೧೫
ನೇ ತಾರೀಖಿನಲ್ಲಿ ಇವರಿಗೆ ವಿವಾಹಮಹೋತ್ಸವವು ನಡೆಯಿತು. ಅದುಮೊದಲುಗೊಂ
ಡು ಆಲ್ಬರ್ಟ್‌ರು ಮತ್ತು ವಿಕ್ಟೋರಿಯಾರವರುಗಳು ಅನ್ಯಾದೃಶನಾದ ಪರಸ್ಪರ ಪ್ರೀ
ತಿಯಿಂದ ನಡೆದುಕೊಳ್ಳುತ್ತಾ ಬಂದರು. ಪ್ರಿನ್ಸ್ ಅಲ್‌ಬರ್ಟ್‌ರವರು ವಿಕ್ಟೋರಿಯಾ
ರವರಿಗೆ ಪತಿಗಳಾಗಿಯೂ, ಮಿತ್ರರಾಗಿಯೂ, ರಾಜ್ಯಭಾರವಿಷಯದಲ್ಲಿ ಸನ್ಮಾರ್ಗ
ರ್ಶಿಗಳಾಗಿಯೂ, ರಾಜಕಾರ್ಯನಿರ್ವಾಹ ವಿಷಯದಲ್ಲಿ ಕಾರ್ಯದರ್ಶಿಗಳಾಗಿಯೂ ಇದ್ದು
ಕೊಂಡು ವಿಕ್ಟೋರಿಯಾ ರಾಜ್ಯವೇ ಧರ್ಮರಾಜ್ಯವೆಂದು ದಿಗಂತವಿಶ್ರಾಂತನಾಗ
ವಂತೆ ಮಾಡಿದರು.

1 ವಿಕ್ಟೋರಿಯಾರವರಿಗೆ ೯ ಜನ ಮಕ್ಕಳು ಆದರು. ಅವರಲ್ಲಿ ಈಗ ೪
ಮಂದಿ ಇದಾರೆ. ಇವರಲ್ಲಿ ಹಿರಿಯವರು ಪ್ರಿನ್ಸೆಸ್ ವಿಕ್ಟೋರಿಯಾರವರು. ಇವರನ
ಜರ್ಮನಿ ಚಕ್ರವರ್ತಿಗಳಾದ ಫ್ರೆಡೆರಿಕ್ ರವರಿಗೆ ಕೊಟ್ಟತ್ತು. ಇವರೇ ಜರ್ಮನಿಗೆ ಈ
ಚಕ್ರವರ್ತಿಗಳಾಗಿರುವ ಫ್ರೆಡರಿಕ್ ವಿಲಿಯಾರವರ ಮಾತೋಶ್ರೀಯವರು.

2 ಆಲ್ಬರ್ಟ್ ಎಡ್ವರ್ಡ್‌ರವರು ಇವರೇ ಯುವರಾಜಪದವಿಯನ್ನು ಪ್ರಿನ್ಸೆಸ್
ಆಲ್ಬರೆಂಬ ಅಭಿಧಾನದಿಂದ ಅಲಂಕರಿಸುತ್ತಲಿದಾರೆ.

3 ಪ್ರಿನ್ಸ್‌ಆಫ್ ಫ್ರೆಡ್‌ರವರು. ಇವರು ಎಡಿಟರ್ ಬರಾಕ್ಕೂ ಸಾಕ್ಸ್ ಕೊ
ರ್ಬರ್ಗ್‌ಗೊಥಕ್ಕು ಡ್ಯೂಕರಾಗಿ ಇರುತ್ತಾರೆ.

4 ಪ್ರಿನ್ಸೆಸ್ ಹೆಲಿನಾರವರು. ಹೆನಾಲ್ಟ್ ಪ್ರಭುಗಳಿಗೆ ವಿವಾಹ
ವಾಗಿದಾರೆ.

5 ಪ್ರಿನ್ಸೆಸ್ ಲೂಯಿರವರು. ಮಾರ್ಕ್ವಿಸ್ ಆಫ್ ಲಾರನ್ನವರಿಗೆ ವಿವಾ
ಹಿತರಾಗಿದಾರೆ.

6 ಪ್ರಿನ್ಸ್ ಆರ್ಥರ್‌ರವರು. ಡ್ಯೂಕ್ ಆಫ್‌ಕಾನ್ನಾಟ್ ರೆಂಬ ಅಭಿಧಾ
ನದಿಂದ ಈದೇಶದಲ್ಲಿ ಸೈನ್ಯಾಧಿಪತಿಗಳಾಗಿ ಪಸಿದ್ಧರಾಗಿರುತ್ತಾರೆ.

7 ಪ್ರಿನ್ಸೆಸ್ ಬಿಯಾಟ್ರಿಸ್‌ರವರು ಇವರು ಜರಮನಿಯು ಹೆಸ್ ಸಂಸ್ಥಾನಾಧಿಪತಿಗಳಾದ ಪ್ರಿನ್ಸ್ ಹೆನ್ರಿಯವರಿಗೆ ವಿವಾಹಿತರಾಗಿದಾರೆ.

೧೮೬೧ ನೇ ಇಸವಿಯಲ್ಲಿ ವಿಕ್ಟೋರಿಯಾರವರ ಮೊತ್ತೋಶ್ರೀಯವರು ಸ್ವರ್ಗಸ್ಥರಾದರು. ಇವರ ಕ್ಲೇಶಗಳಿಗೆ ಇದೇ ಪ್ರಾರಂಭವಾಗಿ ಪರಿಣಮಿಸಿತು. ೧೮೬೧ ನೇ ಇಸವಿ ಡಿಸೆಂಬರು ೧೪ ನೇ ತಾರೀಖಿನಲ್ಲಿ ಇವರಿಗೆ ಪತಿವಿಯೋಗವಾಯಿತು. ೨೦ ವರ್ಷಗಳು ಇವರು ಪ್ರಿನ್ಸ್ ಆಲ್ಬರ್ಟರೊಡನೆ ಸಕಲ ಸಂಸಾರಸುಖವನ್ನು ಅನುಭವಿಸಿದರು. ಪ್ರಿನ್ಸ್ ಆಲ್ಬರ್ಟರವರಿಗೆ ಆದ ಅಕಾಲಮರಣದಿಂದ ಇವರಿಗೆ ಉಂಟಾದ ಸಂತಾಪವು ಅನಿವಾರ್ಯ್ಯನಾದದ್ದು. ಪತಿವಿಯೋಗವಾದ ಕಾಲದಲ್ಲಿ ಇವರಿಗೆ ಪ್ರಜ್ಞೆ ತಪ್ಪಿತು. ಮೂರನೇದಿವಸ ಪ್ರಜ್ಞೆ ಬಂದಕೂಡಲೆ " ಇನ್ನು ವಿಕ್ಟೋರಿಯಾ ಎಂಬದಾಗಿ ಹೆಸರನ್ನು ಹಿಡಿದು ನನ್ನನ್ನು ಕರೆಯುವರು ಯಾರು ? ನನ್ನಭಾಗಕ್ಕೆ ಪ್ರಪಂಚವೇ ತಮೋಮಯವಾಯಿತು. "ಎಂದು ಅಂದು ಪುನಃ ಮೋಹವನ್ನು ಹೊಂದಿದರು. ಮಂತ್ರಿವರರೇ ಮೊದಲಾದವರು ಕ್ರಮೇಣ ಅನೇಕವಿಧವಾಗಿ ಇವರಿಗೆ ದುಃಖೋಪಶಮನವನ್ನು ಮಾಡಿದರು. ಆ ಕಾಲದಲ್ಲಿ ಆಸ್ಥಾನ ಕವಿಗಳಾದ ಲಾರ್ಡ್ ಟೆನಿಸರ್ ರವರು ದುಃಖೋಪಶಮನಾರ್ಥವಾಗಿ ಬರೆದ ಲೇಖನವು ಪ್ರಜೆಗಳ ಅಭಿಪ್ರಾಯವನ್ನು ಸೂಚಿಸುತ್ತದೆ.

ಆಲ್ಬರ್ಟರು ತಮ್ಮಲ್ಲಿಯೂ, ಈ ಸಂಸ್ಥಾನದ ಪ್ರಜೆಗಳಲ್ಲಿಯೂ ಇಟ್ಟಿದ್ದ ಅನುರಾಗವೂ, ಪ್ರೀತಿಯೂ, ಪುರಾಣದ ಕಥೆಯಾಯಿತು. ಈ ವಿಶ್ವಾಸವನ್ನೂ ಪ್ರೀತಿಯನ್ನೂ ಸ್ಮರಿಸಿದಕೂಡಲೆ ಈ ಸಂಸ್ಥಾನಕ್ಕೆ ಉಂಟಾದ ನಷ್ಟವು ನಮ್ಮನ್ನು ದುಃಖಸಾಗರದಲ್ಲಿ ಮುಳುಗಿಸುತ್ತದೆ. ಆದರೆ ತಾವು ಪರ್ಯಾಲೋಚಿಸಿ ವೈರಾಗ್ಯವನ್ನು ತಂದುಕೊಳ್ಳಬೇಕು. ಪ್ರಿನ್ಸ್ ಆಲ್ಬರ್ಟರ ಪ್ರತಿನಿಧಿಗಳಾದ ನಿಮ್ಮ ಮಕ್ಕಳಮೇಲೆ ಅಕೃತ್ರಿಮವಾದ ರಾಜಭಕ್ತಿ ವಿಶ್ವಾಸಗಳಿಂದ ಪರಿಪೂರ್ಣರಾದ ತಮ್ಮ ಪ್ರಜೆಗಳಮೇಲಿನ ಅಭಿಮಾನವಿಟ್ಟು, ನೀವು ಲೋಕಾಂತರವನ್ನೈದಿ ಪತಿಯು ಪಾರ್ಶ್ವವನ್ನು ಸೇರುವವರಿಗೂ ಕುಟುಂಬಭರಣಾರ್ಥವಾಗಿಯೂ ಲೋಕಸಂರಕ್ಷಣಾರ್ಥವಾಗಿಯೂ ಈ ಮೋಸಕ್ಕೆ ಒಳಗಾಗದೆ ಸಕಲಪ್ರಜೆಗಳಿಗೂ ಸೌಖ್ಯ ಉಂಟಾಗುವಂತೆ ರಾಜತಂತ್ರಗಳನ್ನು ಮಾಡುವದರಲ್ಲಿ ನಿಮ್ಮ ಅಸಾರವಾದ ದುಃಖವನ್ನು ಮರೆಯಬೇಕು. ಕ್ರಮಕ್ರಮವಾಗಿ ವಿಕ್ಟೋರಿಯಾರವರು ಹಾಗೆಯೇ ಮಾಡಿದರು.

೧೮೩೨ ರಲ್ಲಿ ಡಿಲ್ಲಿಯಲ್ಲಿ ದರಬಾರಾಯಿತು. ಈ ದರಬಾರಿಗೆ ಇಂಡಿಯೂ ದೇಶದ ರಾಜರುಗಳೇವೊದಲಾದ ಎಲ್ಲಾ ದೊಡ್ಡಮನುಷ್ಯರು ಬಂದಿದ್ದರು. ಈ ದರ ಬಾರಿನಲ್ಲಿ ಇಂಡಿಯೂದೇಶದ ಚಕ್ರವರ್ತಿನಿಯರೆಂಬ ಬಿರುದನ್ನು ಜನಗಳ ಪಾರ್ಥನೆಗ ನುಸಾರವಾಗಿ ವಿಕ್ಟೋರಿಯೂರವರು ವಹಿಸಿದರು.

ಪತಿವಿಯೋಗವಾದದ್ದು ಮೊದಲು ಇವರ ಮಕ್ಕಳಾದ ಪ್ರಿನ್ಸೆಸ್ ಅಲಿಸ್ ಎಂಬುವರು ವಿಕ್ಟೋರಿಯೂರವರಿಗೂ ಮಂತ್ರಿಗಳಿಗೂ ರಾಜಕಾರ್ಯಗಳ ವಿಷಯದಲ್ಲಿ ಮಧ್ಯಸ್ಥಗಾರರಾಗಿದ್ದರು. ೧೮೭೮ ರಲ್ಲಿ ಇವರು ಸ್ವರ್ಗಸ್ಥರಾದರು. ಇದು ಶ್ರೀ ಮನ್ಮಹಾರಾಜ್ಞಿಯವರಿಗೆ ಬಹು ದುಸ್ಸಹವಾದ ದುಃಖವನ್ನು ಉಂಟುಮಾಡಿತು. ೧೮೭೪ ರಲ್ಲಿ ಇವರ ಸಾಕತಂದೆಗಳಾದ ಬೆಲ್ಜಿಯಂದೇಶದ ಧೊರೆಗಳಾದ ಪ್ರಿನ್ಸ್ ಲಿ ಯೋಪಾಲ್ಡ್‌ರವರು ಕಾಲಾಧೀನರಾದರು. ಇದಲ್ಲದೆ ಪುತ್ರನಿರ್ವಿಶೇಷವಾಗಿ ತಾವು ಸಾಕುತ್ತಿದ್ದ ಪ್ರಾಂಚ್‌ದೇಶದ ರಾಜಕುಮೂರರಾದ ಪ್ರಿನ್ಸ್ ಇಂಪೀರಿಯಲ್‌ರವರು ಸತ್ತರು. ಈಚೆಗೆ ಈ ಸಂಸ್ಥಾನಕ್ಕೆಕೂಡ ದಯಮೂಡಿಸಿದ್ದ ಪ್ರಿನ್ಸ್ ಆಫ್‌ವೇಲ್ಸ್‌ರ ನರ ಜ್ಯೇಷ್ಠಪುತ್ರರಾದ ಆಲ್ಬರ್ಟ್ ವಿಕ್ಟರವರು ಸ್ವರ್ಗಸ್ಥರಾದರು. ಇವುಗಳೆಲ್ಲಾ ಶ್ರೀಮನ್ಮಹಾರಾಜ್ಞಿಯವರಿಗೆ ಬಹಳ ಕ್ಲೇಶವನ್ನು ಉಂಟುಮಾಡಿದೆ ಹೀಗಿದ್ದಾಗ್ಯೂ ಕೋಕಪರಾಧೀನರಾಗಿ ಕಾಲಾ ಕಳೆಯುವದಕ್ಕಿಂತ ರಾಜಕಾರ್ಯಗಳಲ್ಲಿ ಈ ಶೋಕಗಳ ನ್ನು ಮರೆಯುವದು ಉತ್ತಮವೆಂದು ಯೂನಾಗ್ಯೂ ಶ್ರದ್ಧೆಯಿಂದ ಕೆಲಸಮಾಡುತ್ತಲಿ ರುವರೆ. ಇವರ ಧರ್ಮಬುದ್ಧಿಯು ಅನ್ಯಾದೃಶವಾದದ್ದು. ಅಪಕಾರ ಮಾಡಿದವರಿಗೆ ಉಪಕಾರವನ್ನು ಮಾಡುವದು ಪರಮಧರ್ಮವೆಂದು ಕ್ರಿಸ್ತರ ಸಿದ್ಧಾಂತವು ಹೇಳುವದು. ಆದರೆ ಕ್ರಿಸ್ತರ ಆಚರಣೆಯಲ್ಲಿ ಈವಿಧವಾದ ಉಪಕಾರವು ಕಾಣಬರುವದಿಲ್ಲ. ಶ್ರೀಮನ್ಮಹಾರಾಜ್ಞಿ ವಿಕ್ಟೋರಿಯೂರವರಲ್ಲಿಮಾತ್ರ ಈ ಗುಣಾತಿಶಯವು ಕಾಣಲಾಯಿತು. ಇವರನ್ನು ಕೊಲ್ಲಬೇಕೆಂಬ ಒಬ್ಬ ದುರಾತ್ಮನು ಪಿಸ್ತೂಲಿನಿಂದ ಹೊಡೆದನು ದೈವಾ ಧೀನದಿಂದ ಈ ಯೇಟು ಅವರಿಗೆ ತಪ್ಪಿತು. ಆತನಿಗೆ ಮರಣದಂಡನೆಯು ಪ್ರಾಪ್ತ ವಾಯಿತು ಆದರೆ ವಿಕ್ಟೋರಿಯೂತವರು ಅವನ ಅಪರಾಧವನ್ನು ಮನ್ನಿಸಿ ಆ ದಂಡನೆ ಯನ್ನು ತಪ್ಪಿಸಿದರು. ಇವರ ಸೌಜನ್ಯವನ್ನು ತೋರಿಸುವದಕ್ಕೆ ಇದಕ್ಕಿಂತಲೂ ಹೆಚ್ಚಾದ ಬೇರೇ ಯೂವ ವಿಷಯವೂ ಅವಶ್ಯಕವಿಲ್ಲ ಇವರ ಸಹನವೂ, ಕೋಪಗಳಿಗೆ ವಧೀನವಾಗದೇ ಇರುವಿಕೆಯೂ ಅಪಕಾರ ಮಾಡಿದವರಿಗೂ ಉಪಕಾರ ಮಾಡಬೇ

ಕೆಂಬ ಪ್ರಯತ್ನವೂ ಇವುಗಳೆಲ್ಲಾ ನಮ್ಮ ಪ್ರಭುಗಳಿಗೂ ಅಧಿಕಾರಿಗಳಿಗೂ ಒಳ್ಳೇ ಮೇಲುಪಜ್ಞೆಗಳಾಗಿ ಇರುತ್ತವೆ. ಇವುಗಳನ್ನು ಅನುಸರಿಸಿ ನಡೆದರೆ ನಮ್ಮ ಪ್ರಭುಗಳ ರಾಜ್ಯವು ವಿಕ್ಟೋರಿಯಾ ರಾಜ್ಯದಂತೆ ಧರ್ಮರಾಜ್ಯವಾಗಿ ಪರಿಣಮಿಸುವದರಲ್ಲಿ ಯಾವ ಸಂದೇಹವೂ ಇಲ್ಲ.

ತೆಂಗಿನಗಿಡ.

ತೆಂಗಿನಗಿಡಕ್ಕೆ ನಾರಿಕೇಳವೃಕ್ಷವೆಂದು ಹೆಸರು. ಇದು ರಂಧ್ರಗಳಮೂಲಕ ನೀರನ್ನು ಹೀರುವದರಿಂದ ಇದಕ್ಕೆ ಈ ಹೆಸರುಂಟಾಗಿದೆ. ತೆಂಗಿನ ವ್ಯವಸಾಯಕ್ಕೆ ಕೆಂಪುಮಣ್ಣು ಮರಳು ಮಿಶ್ರವಾಗಿ ಭೂಮಿಯಲ್ಲಿ ತಂಪುಗುಣವುಳ್ಳದ್ದಾಗಿ ಇರುವಂಥ ಭೂಮಿಯು ಉತ್ಕೃಷ್ಟವಾದದ್ದು. ಮೊದಲು ಇದರ ಸಸಿಗಳನ್ನು ಮಾಡುವದಕ್ಕೋಸ್ಕರ ಹಳೇದಾದ ಮತ್ತು ಎಳಸಾದ ತೆಂಗಿನ ಗಿಡಗಳ ತಳಲುಗಳನ್ನು ಬಿಟ್ಟು 25 ಅಥವ 30 ವರುಷದ ಮರಗಳಲ್ಲಿ ತಾನಾಗಿ ಉದುರಿದ ತಳಲುಗಳನ್ನು ಆರಿಸಿ ಇಡುವರು. ಹಾಗೆ ಆರಿಸಿದ ತಳಲುಗಳಲ್ಲಿ ಒಂದನ್ನು ಒಡೆದು ಅಗಲ ದಪ್ಪವಾಗಿ ಇದ್ದಲ್ಲಿ ಅಂಥ ಜಾತಿಯ ತಳಲುಗಳನ್ನು ಮನೆಯ ಹಿತ್ತಲುಗಳಲ್ಲಾಗಲಿ, ತೋಟಗಳಲ್ಲಾಗಲಿ, ನೆಲವನ್ನು ಚನ್ನಾಗಿ ಅಗೆದು ಮಟ್ಟುಹಾಕತಕ್ಕ ತಳಲುಗಳ ತೊಟ್ಟಿನ ಭಾಗವನ್ನು ಮೇಲ್ಮುಖವಾಗಿ ಮಾಡಿ ಒಂದಕ್ಕೊಂದು ತಗಲದಂತೆ ನೆಲದಲ್ಲಿ ಹೂತು ನೀರುಹಾಕುತ್ತಾ ಬರುವರು. ಮಣ್ಣು ಜಿಗುಟಾಗಿದ್ದಲ್ಲಿ ಮರಳನ್ನು ಹೆಚ್ಚಾಗಿ ಬೆರಸಿ ಒಟ್ಟುಗೂಡಿಸಿ ಹಾಕುವದುಂಟು. ಹೀಗೆ ಹಾಕಿದ ತಳಲುಗಳಲ್ಲಿನ ನೀರೆಲ್ಲಾ ಸಂಪೂರ್ಣವಾಗಿ ಇಂಗಿ ಹೋದಮೇಲೆ ಮೊಳಕೆ ಏಳುವದು. ಈ ಮೊಳಕೆಗೆ ದಸಿ ಎಂದು ಅನ್ನುವದೂ ಉಂಟು. ಅಂತು ಒಟ್ಟುಹಾಕಿದ 2–3 ತಿಂಗಳು ಒಳಗಾಗಿ ಎಲ್ಲಾ ತಳಲುಗಳಿಂದಲೂ ಮೊಳಕೆಗಳು ಮೇಲಕ್ಕೆ ಬರುವವು. ಮೊಳಕೆಗಳು ಹೊರಟನಂತರ ಒಂದು ಅಥವಾ ಎರಡು ವರುಷದವರಿಗೂ ಅದನ್ನು ಬಿಳಿಯಿಸಿ ಆಮೇಲೆ ತೆಂಗು ಹಾಕತಕ್ಕ ಭೂಮಿ

ತುಲ್ಲಿ ಹದಿನೈದು ಅಥವಾ ಇಪ್ಪತ್ತು ಗಜದಷ್ಟು ಸ್ಥಳವು ಒಂದು ಗಿಡದಿಂದ ಮತ್ತೊಂ
ದು ಗಿಡಕ್ಕೆ ಇರುವಂತೆ ಗುಂಡಿಗಳನ್ನು ತೋಡಿ ಅವುಗಳಲ್ಲಿ ಒಟ್ಟು ಹಾಕಿದ ಸಸಿಗ
ಳನ್ನು ತೆಗೆದುಕೊಂಡುಹೋಗಿ ಒಂದೊಂದಾಗಿ ನೆಡುವರು. ಸಸಿಗಳನ್ನು ನೆಟ್ಟ
೦ ತಿಂಗಳಮೇಲೆ ಮಳೆಗಾಲವು ಬರುವಹಾಗೆ ಇರುವದನ್ನು ನೋಡಿಕೊಂಡು ನೆಡು
ವದುತ್ತಮ. ತೆಂಗಿನ ಸಸಿಗಳನ್ನು ಹಾಕಿದಮೇಲೆ 8–9 ತಿಂಗಳುಗಳವರಿಗೂ
ಕ್ರಮವಾರದಂತೆ ನೀರು ಹಾಕುತ್ತಾ ಇರಬೇಕು. ಮಳೆಗಾಲಬಂದಲ್ಲಿ ತೆಂಗಿನ ಸಸಿ
ಗಳನ್ನು ನೆಟ್ಟರತಕ್ಕ ಗುಣಿಗಳಲ್ಲಿ ನೀರು ನಿಂತು ಕೊಳೆಯುವದಕ್ಕೆ ಅಸ್ಪದಕೊಡದಂತೆ
ನೋಡಿಕೊಳ್ಳುತ್ತಿರಬೇಕು. ಒಂದು ವರುಷದನಂತರ ತೆಂಗು ಹಾಕಿರತಕ್ಕ ಭೂಮಿ
ಯು ಮಧ್ಯಭಾಗವನ್ನು ಚನ್ನಾಗಿ ಉತ್ತು ಕಳೆ ಮೊದಲಾದವುಗಳನ್ನು ಕಿತ್ತು ನೋಡಿ
ಕೊಳ್ಳುತ್ತಿರಬೇಕು. ಗಿಡಗಳು ಪ್ರಬಲವಾಗುವದಕ್ಕೆ ಮುಂಚೆ ಸಸಿಗಳಾಗಿದ್ದಾಗ
ತೆಂಗಿನ ಸುಳಿಗಳಲ್ಲಿ ದುಂಬಿಗಳು ಸೇರಿ ಕೊರೆದು ಹಾಳುಮಾಡುವದುಂಟು. ಇದಕ್ಕಾ
ಗಿ ಮೊನುಚಾದ ಸಲಾಕೆಯನ್ನಿಟ್ಟುಕೊಂಡಿದ್ದು ಆಗಾಗ್ಗೆ ಸುಳಿಗಳನ್ನು ಶೋಧಿಸು
ವರು. ಮತ್ತೆ ಕೆಲವರು ಆಗಾಗ್ಗೆ ಸುಳಿಗಳಲ್ಲಿ ಸ್ವಲ್ಪ ಸ್ವಲ್ಪ ಮರಳನ್ನು ಬಿಟ್ಟು
ದುಂಬಿಗಳು ಕೊರೆಯುವದಕ್ಕೆ ಅವಕಾಶಕೊಡದಂತೆ ಮಾಡುವರು. ತೆಂಗಿನಗಿಡಗಳು
ನೆಟ್ಟ 7 ಅಥವಾ 10 ವರ್ಷಗಳಿಗೆ ಅಯಾಯ ಭೂಗುಣಕ್ಕೆ ತಕ್ಕಂತೆ ಫಲಕ್ಕೆ ಬರು
ವವು. ತೆಂಗಿನಗಿಡವು ಅಡಿಕೆ ಓಲೆ ಗಿಡಗಳಹಾಗೆ ಉದ್ದವಾಗಿ ಬೆಳೆಯುವದು. ಇದಕ್ಕೆ
ಕೊಂಬೆಗಳಿರುವದಿಲ್ಲ. ತುದಿಯಲ್ಲಿ ಅಂದರೆ ಮೇಲ್ಗಡೆ ಮಟ್ಟೆಗಳಿಂದ ಸೇರಿಕೊಂಡಿ
ರುವದು. ಈ ಮಟ್ಟೆಗಳು 20ರ ಲಾಗಾಯಿತು 40ರ ವರಿಗೂ ಇರುವವು. ಇವು
ಬೀಳದಹಾಗೆ ಒಂದಕ್ಕೊಂದು ಅವರ ಸೀರೆಗಳಿಂದ ಸಂಬಂಧಿಸಿಕೊಂಡಿರುವವು. ಚೆನ್ನಾ
ಗಿ ಬೆಳೆದ ಗಿಡವು ಬುಡದಿಂದ ಕೊನೆಯವರೆಗೆ 100 ಅಡಿಗಳಿಗೆ ಕಡಮೆಯಾಗದಹಾಗೆ
ಇರುವದು. ಇದರಲ್ಲಿ ಗರಿಗಳಿರುವ ಭಾಗಕ್ಕೆ ಮಟ್ಟೆ ಎಂತಲೂ, ಉಳಿದ ಭಾಗಕ್ಕೆ
ಗೊದಮಟ್ಟೆ ಎಂತಲೂ ಹೆಸರು. ಗರಿಗಳು ಮಟ್ಟೆಯು ಉಭಯಪಾರ್ಶ್ವಗಳಲ್ಲಿಯೂ
ಕತ್ತೆಯ್ಯಂತೆ ಸುಮಾರು 30ರ ವರಿಗೂ ಇರುವವು. ಇವುಗಳಲ್ಲಿ ಪ್ರತಿಯೊಂದು ಗರಿ
ಯೂ 3–4 ಅಡಿಗಳ ಉದ್ದವಾಗಿರುವದು. ಗೊದಮಟ್ಟೆಯು ಬುಡದಿಂದ ತುದಿಯ
ವರಿಗೂ 12 ಅಡಿ ಮೊದಲೊಂಡು 14 ಅಡಿಗಳವರಿಗೂ ಇರುವದು. ಮಟ್ಟೆಗಳು
ಪ್ರತಿಮರದಲ್ಲಿಯೂ ವರುಷಕ್ಕೆ 10–12 ವರಿಗೆ ಉದುರುವವು. ಪ್ರತಿಯೊಂದು ಗಿಡ

ದಲ್ಲಿಯೂ ಮೊದಲು ಹೊಂಬಾಳೆ ಬಿಡುವದು. ಆ ಹೊಂಬಾಳೆಯಲ್ಲಿ ಅಕ್ಕೀಕಾಳಿನ ಹಾಗೆ ಹೂವ್ವುಗಳಿರುವವು. ಆ ಹೂವ್ವುಗಳಲ್ಲಿ ಉದುರಿಹೋದದ್ದು ಹೋಗಿ ತಾ ನಿಂತದ್ದು ಕ್ರಮವಾಗಿ ಹೀಚಾಗುವವು. ಈ ಹೀಚುಗಳಿಗೆ ಕುರುಬಿಗಳೆಂದು ಕ ಸರು. ಕುರುಬಿಗಳು ದೊಡ್ಡದಾಗುತ್ತಾ ಬಂದಹಾಗೆಲ್ಲಾ ಕಾಯಿನ ಒಳಭಾಗದಲ್ಲ ನೀರು ಸೇರುತ್ತಾ ಬರುವದು ಕುರಬಿಗಳು ಬಲಿತು ದೊಗರುಗಾಯಾದಾಗ ಎಳನೀರ ಎಂಬದಾಗಿ ಅನ್ನಿಸಿಕೊಳ್ಳುತ್ತವೆ ಕಾಯಿ ಬಲಿತಮೇಲೆ ತೆಂಗಿನಕಾಯಿಯೆಂತಲೂ ಹಣ್ಣಾಗಿ ತಾನಾಗಿ ಉದುರಿದಮೇಲೆ ತಳಲೆಂತಲೂ ಹೆಸರು. ನೀರು ಇಂಗಿ ಒಣಗಿ ಹೋದದ್ದಕ್ಕೆ ಕೊಬ್ಬರಿ ಎಂದು ಹೆಸರು. ಕಾಯಿಯು ಕೊಬ್ಬರಿಯಾದಾಗ ತನ್ನ ಮಾಧುರ್ಯದ ಜೊತೆಗೆ ಅದರ ನೀರಿನ ಮಾಧುರ್ಯವನ್ನು ಸ್ವೀಕರಿಸಿ ವಿಶೇಷ ರುಚಿಯಾಗು ವದು. ತೆಂಗಿನಕಾಯಿಯಲ್ಲಿ ಹಿಟ್ಟುತೆಂಗು, ಹಾಲುತೆಂಗು, ನಾರುತೆಂಗು ಎಂಬದಾಗಿ ೩ ಭೇದಗಳನ್ನು ಹೇಳುವರು. ಹಿಟ್ಟುತೆಂಗು ಎಂಬುವದರಲ್ಲಿ ಕಾಯಿಯು ಮಂದವಾ ಗಿರುವುದು. ಹಾಲುತೆಂಗಿನ ಜಾತಿಯಲ್ಲಿ ಕಾಯಿಯು ಮಂದವಾಗಿರುವುದಲ್ಲದೆ ಹಾಲು ಹೆಚ್ಚಾಗಿ ಬರುವುದು. ನಾರುತೆಂಗಿನಲ್ಲಿ ಕಾಯಿಯು ತೆಳುವಾಗಿರುವುದು. ಕಾಯಿನಲ್ಲ ಕೆಂದೆಂಗಿನಕಾಯಿ, ಕರೀವಾಟೆಕಾಯಿ, ಬಿಳೀಜಾತಿಕಾಯಿ, ಎಂಬ ೩ ಪ್ರಭೇದಗಳು ಮೇಲೆಹೇಳಿದ ಮೂರು ವಿಧಗಳಲ್ಲೂ ಉಂಟು. ಸೋಗೆಗಳಲ್ಲಿ ಕಾಯಿಗಳನ್ನು ನೋಡಿದ ಒಡನೆಯೇ ಮೇಲಿನ ಸಿಪ್ಪೆಯು ಕೆಂಪು, ಹಸರುಬಣ್ಣದಿಂದ ಕೂಡಿರುವದನ್ನು ಕೆಂದೆಂಗು ಎಂದು ಹೇಳುವರು ಕಾಯಿಮೇಲಿನ ಸಿಪ್ಪೆಯು ಬಹಳ ಹಸುರಾಗಿಯೇ ಇದ್ದಲ್ಲಿ ಅದನ್ನು ಕರೀವಾಟೆಕಾಯಿ ಎಂಬದಾಗಿ ಹೇಳುವರು ಕಾಯಿಮೇಲಿನ ಸಿಪ್ಪೆಯು ಹಳದಿ ಹಸುರು ಸ್ವಲ್ಪ ಬಿಳುಪುಬಣ್ಣಯುಕ್ತವಾಗಿದ್ದರೆ ಅದನ್ನು ಬಿಳೀಜಾತಿ ಕಾಯಿ ಎಂಬದಾಗಿ ಹೇಳು ವರು. ಇದಲ್ಲದೆ ಇದರಲ್ಲಿ ಗಂಗಪಾಣಿ ಎಂಬ ಮತ್ತೊಂದು ಪ್ರಭೇದವೂ ಉಂಟು. ತೆಂಗಿನ ಗಿಡವು ಅದರ ಹೊರುವಿಗೆ ತಕ್ಕಂತೆ 8ರ ಲಾಗಾಯಿತು 15 ರ ವರಿವಿಗೆ ಗೊನೆ ಗಳನ್ನು ಬಿಡುವುದು. ದಪ್ಪಜಾತಿ ಕಾಯಿಗಳು ಬಿಡತಕ್ಕಂಥಾ ಗಿಡದಲ್ಲಿ ಪ್ರತಿಯೊಂದು ಗೊನೆಯಲ್ಲಿಯೂ 10ರ ಲಾಗಾಯಿತು 40 ರ ವರಿಗೂ ಕಾಯಿಗಳು ಇರುವವು ಸಣ್ಣ ಜಾತೀಕಾಯಿಗಳು ಬಿಡತಕ್ಕಂಥಾ ಗಿಡದಲ್ಲಿ ಪ್ರತಿಯೊಂದು ಗೊನೆಯಲ್ಲಿಯೂ 50 ರ ಲಾಗಾಯಿತು 80 ರ ವರಿಗೂ ಕಾಯಿಗಳು ಇರುವವು. ಇವುಗಳಲ್ಲಿ ದಪ್ಪಜಾತಿಯ ಕಾಯಿಗಳು ಬಿಡತಕ್ಕಂಥ ತೆಂಗಿನಗಿಡಗಳು ಲಾಭಕರವಾದವು. ತೆಂಗಿನಲ್ಲಿ ಕೆಂದೆಂಗು,

ಗಂಗಪಾಣಿ ಎಂಬುವುಗಳ ಎಳನೀರು ಉತ್ಕೃಷ್ಟವಾದವುಗಳು. ಎಳನೀರು ಬಹಳ ಸ್ವಾದುವಾದ ಪಾನವು. ಕಾಯಿಗಳಲ್ಲಿ ಕರೀ ಎತ್ತಿಕಾಯಿಯು ಉಪಯೋಗಕ್ಕೆ ಉತ್ಕೃಷ್ಟವಾದದ್ದು. ತೆಂಗಿನಕಾಯಿ ಮತ್ತು ಕೊಬ್ಬರಿಗಳಿಂದ ಮನುಷ್ಯರಿಗೆ ಅನೇಕ ವಿಧವಾದ ಪ್ರಯೋಜನಗಳಾಗುವವು. ತೆಂಗಿನಕಾಯಿಯನ್ನು ಕೊಬ್ಬರಿಯನ್ನು ತಿನ್ನುವುದಕ್ಕೂ ಪದಾರ್ಥಗಳಿಗೂ ಉಪಯೋಗಿಸುತ್ತಾರೆ. ತೆಂಗಿನಕಾಯಿನ ಹಾಲನ್ನು ತೆಗೆದು ಕುಡಿಯುವುದಕ್ಕೂ, ಅಭ್ಯಂಜನಾದಿಗಳಿಗೂ, ಪದಾರ್ಥಗಳಿಗೂ ಉಪಯೋಗಿಸುತ್ತಾರೆ. ಮತ್ತು ಈ ಹಾಲನ್ನು ಕಾಫಿ, ಟೆ, ಇವುಗಳಿಗೆ ಉಪಯೋಗಿಸುವದೂ ಉಂಟು. ತೆಂಗಿನ ಹಾಲನ್ನು ಕಾಯಿಸಿ ಎಣ್ಣೆಯನ್ನು ತೆಗೆಯುವದೂ ಉಂಟು. ಕೊಬ್ಬರಿಯನ್ನು ಗಾಣಕ್ಕೆ ಹಾಕಿ ಎಣ್ಣೆಯನ್ನು ತೆಗೆಯುತ್ತಾರೆ. ಈ ಎಣ್ಣೆಯನ್ನು ತುಪ್ಪದಂತೆ ಭೋಜನಾದಿಗಳಲ್ಲಿಯೂ, ಪದಾರ್ಥಗಳನ್ನು ಮಾಡುವುದರಲ್ಲಿಯೂ ಉಪಯೋಗಿಸುವದುಂಟು ಇದಲ್ಲದೆ ಇದನ್ನು ದೀಪಕ್ಕೂ ಅಭ್ಯಂಜನಕ್ಕೂ, ಸಾಬೋನು-ಮೋಂಬತ್ತಿ ಮೊದಲಾದವುಗಳನ್ನು ಮಾಡುವದಕ್ಕೂ, ಔಷಧಗಳಿಗೂ ಉಪಯೋಗಿಸುತ್ತಾರೆ. ತೆಂಗಿನಕಾಯಿ ಸಿಕ್ಕದಿದ್ದಾಗ ಕೊಬ್ಬರಿಯನ್ನು ನೀರಿನಲ್ಲಿ ನೆನೆಹಾಕಿ ಅದನ್ನು ತಿರಿವಿದರಿಂದ ಹಾಲನ್ನು ತೆಗೆದು ಅದನ್ನು ತೆಂಗಿನಕಾಯಿನ ಹಾಲಿನಂತೆ ಉಪಯೋಗಿಸುವದೂ ಉಂಟ. ತೆಂಗಿನ ಚಿಪ್ಪುಗಳನ್ನು ಬಟ್ಲು, ಹೂಜಿ, ಸೌಟು, (ಸೊಟಗ), ಪದಾರ್ಥಗಳನ್ನು ಹಾಕತಕ್ಕ ಬುರುಡೆ, ವಾದ್ಯವಿಶೇಷಗಳು, ಇವುಗಳಿಗೆ ಉಪಯೋಗಿಸುತ್ತಾರೆ. ಕಾಯಿಮೇಲಿನ ಹಸಿದಾದ ಮತ್ತು ಒಣಗಿದ ಮಟ್ಟೆಗಳನ್ನು ನೆನೆಹಾಕಿ ತಗರೆ (ಕದವೆ) ಯನ್ನು ಮಾಡಿ ಅದರಿಂದ ಹುರಿ, ಹಗ್ಗ, ನೆಲು, ಬಲೆ, ಗೋಣೀಪಟ್ಟೆ, ಗೋಣೀಚೀಲ, ಮೆತ್ತೆ, ದಿಂಬು, ಕೋಗಿರು, ಬಾಗಲಲ್ಲಿ ಕಾಲು ಒರಸಿಕೊಳ್ಳುವದಕ್ಕೋಸ್ಕರ ಹಾಕತಕ್ಕ ಪಟ್ಟೆ, ಬುರುಸ್, ಮೊದಲಾದ ಅನೇಕ ವಸ್ತುಗಳನ್ನು ಮಾಡುವುದಕ್ಕೆ ಉಪಯೋಗಿಸುತ್ತಾರೆ. ತೆಂಗಿನ ಮರದಿಂದ ಮನೆ, ಗುಡಿಸಲು, ಚಪ್ಪರ, ಮೊದಲಾದವುಗಳನ್ನು ಕಟ್ಟುತ್ತಾರೆ. ಮತ್ತು ಆ ಮರವನ್ನು ಕೊಯ್ದು ಪಟ್ಟೆಗಳನ್ನುಮಾಡಿ ಅವುಗಳನ್ನು ಬಾಗಿಲು, ನಿಲು, ಸರ, ತೀರು, ಕಿಟಕಿ, ಅಗುಳಿ, ಅಟ್ಟ ಇವೇ ಮೊದಲಾದವುಗಳಿಗೆ ಉಪಯೋಗಿಸುತ್ತಾರೆ. ಮತ್ತು ಅದರಿಂದ ಕೂತುಕೊಳ್ಳುವದಕ್ಕೂ ಮಲಗಿಕೊಳ್ಳುವದಕ್ಕೂ ಅನುಕೂಲವಾದ ಕಾಲುಮಣೆ, ಮಂಚ, ಮೊದಲಾದವುಗಳನ್ನು ಮಾಡುತ್ತಾರೆ. ಇದರ ಗರಿಗಳಿಂದ ಕುಕ್ಕೆ, ಮಂಕರಿ, ಸಂಬಳಿಗೆ, ಚಾಪೆ, ಬುಟ್ಟಿ

ಮೊದಲಾದವುಗಳನ್ನು ಮಾಡುತ್ತಾರೆ. ಇದರ ಮಟ್ಟೆಗಳನ್ನು ಹೆಣರು ಮನೆ, ಗುಡಿಸಲು, ಚಪ್ಪರ ಇವುಗಳ ಮೇಲ್ಛಾವಣಿಗಳಿಗೆ ಉಪಯೋಗಿಸುತ್ತಾರೆ. ಮತ್ತು ಇದರ ಮಟ್ಟೆಗಳಿಂದ ಗೊರಸೆಗಳನ್ನು ಹೆಣದು ಮಳೆಗಾಲದಲ್ಲಿ ಉಪಯೋಗಿಸುವದೂ ಉಂಟು ಇದರ ಗರಿಗಳಲ್ಲಿ ದಪ್ಪವಾದದ್ದನ್ನು ಕತ್ತರಿಸಿ ಓಲೆಯಂತೆ ಬರೆಯುವದಕ್ಕೂ ಉಪಯೋಗಿಸುವರು. ಇದರ ಗೊದಮಟ್ಟೆಗಳಿಂದ ಹುಟ್ಟುಗಳನ್ನು ಮಾಡಿ ದೋಣಿ ನಡಿಸುವದಕ್ಕೆ ಉಪಯೋಗಿಸುತ್ತಾರೆ. ತೆಂಗಿನ ಕಡ್ಡಿಗಳಿಂದ ಬರಲುಗಳನ್ನೂ ವಿಾನುಗಳನ್ನು ಹಿಡಿಯತಕ್ಕ ಕೊಡಬೆಗಳನ್ನೂ ಮಾಡುತ್ತಾರೆ ಇದಲ್ಲದೆ ಈ ಕಡ್ಡಿಗಳನ್ನು ಅಂಬಿನಂತೆಯೂ, ಲೇಖಣಿಯಂತೆಯೂ ಉಪಯೋಗಿಸುವದುಂಟು. ಈ ಮರದಿಂದ ದೋಣಿಗಳನ್ನು ಮಾಡಿ ನೀರು ಹಾಯಿಸುವದುಂಟು. ಇದರ ಗೊದಮಟ್ಟೆ ಸೀರೆ ಹೊಂಬಾಳೆಗೊನೆ ಬಿಡತಕ್ಕ ಮಟ್ಟೆ, ಇವುಗಳನ್ನು ಸೌದೆಗಾಗಿ ಉಪಯೋಗಿಸುವದುಂಟು. ಹೊಂಬಾಳೆ, ಮೊಟ್ಟೆಯ ಬುಡಭಾಗವನ್ನು ಕತ್ತರಿಸಿ ನೀರಿನಲ್ಲಿ ನೆನೆಹಾಕಿ ಕೊನೆಭಾಗವನ್ನು ಕುಟ್ಟಿ, ಬುರಸಿನಂತೆ ಮಾಡಿಕೊಂಡು ಅದರಿಂದ ಸುಣ್ಣವನು, ಹಚ್ಚು ವದೂ ಉಂಟು. ತೆಂಗಿನ ಹಸೀ ಹೊಂಬಾಳೆಯನ್ನು ಕುಟ್ಟಿ ರಸವನ್ನು ತೆಗೆದು ಔಷಧಿಗಳಿಗೂ ಉಪಯೋಗಿಸುವರು. ಈ ರಸವನ್ನು ಕಾಯಿಸಿ ಸಾರಾಯಿ ಮಾಡುವದೂ ಉಂಟು. ಈಚಲು, ಓಲೆ, ಬಗಿನಿ, ಮರಗಳಲ್ಲಿ ಇಳಿಸುವಂತೆ ಈ ಮರದಿಂದಲೂ ಹೆಂಡವನಿಳಿಸುವರು. ಈ ಹೆಂಡದಿಂದ ಈಚಲುಬೆಲ್ಲದಂತೆ ಬೆಲ್ಲವನ್ನು ಮಾಡುವದುಂಟು. ಮತ್ತು ಇದರ ಹೊಂಬಾಳೆಗಳನ್ನು ಹಿಂದುಗಳು ದೇವರಿಗೆ ಪೂಜೆಮಾಡುವದುಂಟು. ಗಟ್ಟದಕೆಳಗಿರತಕ್ಕ ಅನೇಕ ಕುಟುಂಬಿಗಳು ತಮ್ಮ ಮನೆಯ ಹತ್ತಾಲನಲ್ಲಿಯೇ ತೆಂಗಿನ ಗಿಡಗಳನ್ನು ಹಾಕಿಕೊಂಡು ಅವುಗಳಿಂದ ಕುಟುಂಬ ಭರಣವನ್ನು ಮಾಡುವರು. ಈ ದೇಶದಲ್ಲಿಯೂ ಅನೇಕರು ತೆಂಗಿನ ತೋಟವನ್ನು ಮಾಡಿಕೊಂಡು ಅದರಿಂದಲೇ ಜೀವಿಸುವರು. ತೆಂಗಿನ ಗಿಡವು ಸುಮಾರು 21 ಅಥವಾ 15 ವರುಷಗಳಿಗೆ ಒಂದು ಪುರುಷ ಪ್ರಮಾಣ ಬೆಳೆಯುವದು ತೆಂಗಿನಗಿಡಕ್ಕೆ ಆಯುಸ್ಸು ಗಳಿತವಾಗುತ್ತಾ ಬಂದಹಾಗೆಲ್ಲಾ ಫಲವು ಕಡಮೆಯಾಗುವದಲ್ಲದೆ ಕಾಯಿಗಳೂಕೂಡ ಸಣ್ಣದಾಗಿ ಬಿಡುವವು. ಹೀಗೆ ಈ ವೃಕ್ಷವು ಬಹುಕಾಲ ಇರತಕ್ಕದ್ದಾಗಿಯೂ ಮನುಷ್ಯರ ಜೀವನಕ್ಕೆ ವಿಶೇಷ ಸಹಾಯಕವಾಗಿಯೂ ಇರುವದರಿಂದ ಇದನ್ನು ಕಲ್ಪವೃಕ್ಷವೆಂದು ಹೇಳುವರು.

ಗಂಗಪಾಣಿ ಎಂಬುವ್ರಗಳ ಎಳನೀರು ಉತ್ಕೃಷ್ಟನಾದವುಗಳು. ಎಳನೀರು ಬಹಳ ಸ್ವಾದುವಾದ ಪಾನವು. ಕಾಯಿಗಳಲ್ಲಿ ಕರೀವಾಟಿಕಾಯಿಯು ಉಪಯೋಗಕ್ಕೆ ಉತ್ಕೃಷ್ಟವಾದದ್ದು. ತೆಂಗಿನಕಾಯಿ ಮತ್ತು ಕೊಬ್ಬರಿಗಳಿಂದ ಮನುಷ್ಯರಿಗೆ ಅನೇಕ ವಿಧನಾದ ಪ್ರಯೋಜನಗಳಾಗುವವು. ತೆಂಗಿನಕಾಯಿಯನ್ನು ಕೊಬ್ಬರಿಯನ್ನು ತಿನ್ನುವುದಕ್ಕೂ ಪದಾರ್ಥಗಳಿಗೂ ಉಪಯೋಗಿಸುತ್ತಾರೆ. ತೆಂಗಿನಕಾಯಿನ ಹಾಲನ್ನು ತೆಗೆದು ಕುಡಿಯುವುದಕ್ಕೂ, ಅಭ್ಯಂಜನಾದಿಗಳಿಗೂ, ಪದಾರ್ಥಗಳಿಗೂ ಉಪಯೋಗಿಸುತ್ತಾರೆ ಮತ್ತು ಈ ಹಾಲನ್ನು ಕಾಫಿ, ಟೆ, ಇವುಗಳಿಗೆ ಉಪಯೋಗಿಸುವದೂ ಉಂಟು. ತೆಂಗಿನ ಹಾಲನ್ನು ಕಾಯಿಸಿ ಎಣ್ಣೆಯನ್ನು ತೆಗೆಯುವದೂ ಉಂಟು. ಕೊಬ್ಬರಿಯನ್ನು ಗಾಣಕ್ಕೆ ಹಾಕಿ ಎಣ್ಣೆಯನ್ನು ತೆಗೆಯುತ್ತಾರೆ. ಈ ಎಣ್ಣೆಯನ್ನು ತುಪ್ಪದಂತೆ ಭೋಜನಾದಿಗಳಲ್ಲಿಯೂ, ಪದಾರ್ಥಗಳನ್ನು ಮಾಡುವುದರಲ್ಲಿಯೂ ಉಪಯೋಗಿಸುವದುಂಟು ಇದಲ್ಲದೆ ಇದನ್ನು ದೀಪಕ್ಕೂ ಅಭ್ಯಂಜನಕ್ಕೂ, ಸಾಬೋನು-ಮೋಂಬತ್ತಿ ಮೊದಲಾದವುಗಳನ್ನು ಮಾಡುವದಕ್ಕೂ, ಔಷಧಗಳಿಗೂ ಉಪಯೋಗಿಸುತ್ತಾರೆ. ತೆಂಗಿನಕಾಯಿ ಸಿಕ್ಕದಿದ್ದಾಗ ಕೊಬ್ಬರಿಯನ್ನು ನೀರಿನಲ್ಲಿ ನೆನೆಹಾಕಿ ಅದನ್ನು ತಿರಿವಿ ಅದರಿಂದ ಹಾಲನ್ನು ತೆಗೆದು ಅದನ್ನು ತೆಂಗಿನಕಾಯಿನ ಹಾಲಿನಂತೆ ಉಪಯೋಗಿಸುವದೂ ಉಂಟ. ತೆಂಗಿನ ಚಿಪ್ಪುಗಳನ್ನು ಬಟ್ಲು, ಹೂಜಿ, ಸೌಟು, (ಸೊಟಗ), ಪದಾರ್ಥಗಳನ್ನು ಹಾಕತಕ್ಕ ಬುರುಡೆ, ವಾದ್ಯವಿಶೇಷಗಳು, ಇವುಗಳಿಗೆ ಉಪಯೋಗಿಸುತ್ತಾರೆ. ಕಾಯಿಮೇಲಿನ ಹಸಿದಾದ ಮತ್ತು ಒಣಗಿದ ಮಟ್ಟೆಗಳನ್ನು ನೆನೆಹಾಕಿ ಚಗರೆ (ಕದವೆ) ಯನ್ನು ಮಾಡಿ ಅದರಿಂದ ಹುರಿ, ಹಗ್ಗ, ನೆಲು, ಬಲೆ, ಗೋಣೀಪಟ್ಟೆ, ಗೋಣೀಚೀಲ, ಮೆತ್ತೆ, ದಿಂಬು, ಕೋಗಿರು, ಬಾಗಲಲ್ಲಿ ಕಾಲು ಒರಸಿಕೊಳ್ಳುವದ ಕೊಕ್ಕೇಸ್ಕರ ಹಾಕತಕ್ಕ ಪಟ್ಟೆ, ಬುರುಸ್, ಮೊದಲಾದ ಅನೇಕ ವಸ್ತುಗಳನ್ನು ಮಾಡುವುದಕ್ಕೆ ಉಪಯೋಗಿಸುತ್ತಾರೆ. ತೆಂಗಿನ ಮರದಿಂದ ಮನೆ, ಗುಡಿಸಲು, ಚಪ್ಪರ, ಮೊದಲಾದವುಗಳನ್ನು ಕಟ್ಟುತ್ತಾರೆ. ಮತ್ತು ಆ ಮರವನ್ನು ಕೊಯ್ದು ಪಟ್ಟೆಗಳನ್ನುಮಾಡಿ ಅವುಗಳನ್ನು ಬಾಗಿಲು, ನಿಲು, ಸರ, ತೀರು, ಕಿಟಕಿ, ಅಗುಳಿ, ಅಟ್ಟ ಇವೇ ಮೊದಲಾದವುಗಳಿಗೆ ಉಪಯೋಗಿಸುತ್ತಾರೆ. ಮತ್ತು ಅದರಿಂದ ಕೂತುಕೊಳ್ಳುವದಕ್ಕೂ ಮಲಗಿಕೊಳ್ಳುವದಕ್ಕೂ ಅನುಕೂಲವಾದ ಕಾಲುಮಣೆ, ಮಂಚ, ಮೊದಲಾದವುಗಳನ್ನು ಮಾಡುತ್ತಾರೆ. ಇದರ ಗರಿಗಳಿಂದ ಕುಕ್ಕೆ, ಮುಂಕರಿ, ಸಂಬಳಿಗೆ, ಚಾಪೆ, ಬುಟ್ಟಿ

ಮೊದಲಾದವುಗಳನ್ನು ಮಾಡುತ್ತಾರೆ. ಇದರ ಮಟ್ಟೆಗಳನ್ನು ಹೆಣದು ಮನೆ, ಗುಡಿಸಲು, ಚಪ್ಪರ ಇವುಗಳ ಮೇಲ್ಛಾವಣಿಗಳಿಗೆ ಉಪಯೋಗಿಸುತ್ತಾರೆ. ಮತ್ತು ಇದರ ಮಟ್ಟೆಗಳಿಂದ ಗೊರಸೆಗಳನ್ನು ಹೆಣದು ಮಳೆಗಾಲದಲ್ಲಿ ಉಪಯೋಗಿಸುವದೂ ಉಂಟು. ಇದರ ಗರಿಗಳಲ್ಲಿ ದಪ್ಪವಾದದ್ದನ್ನು ಕತ್ತರಿಸಿ ಓಲೆಯಂತೆ ಬರೆಯುವದಕ್ಕೂ ಉಪಯೋಗಿಸುವರು. ಇದರ ಗೊದಮಟ್ಟೆಗಳಿಂದ ಹುಟ್ಟುಗಳನ್ನು ಮಾಡಿ ದೋಣಿ ನಡಿಸುವದಕ್ಕೆ ಉಪಯೋಗಿಸುತ್ತಾರೆ. ತೆಂಗಿನ ಕಡ್ಡಿಗಳಿಂದ ಬರಲುಗಳನ್ನೂ ವಿಾಣುಗಳನ್ನು ಹಿಡಿಯುತಕ್ಕ ಕೊಡಬಿಗಳನ್ನೂ ಮಾಡುತ್ತಾರೆ ಇದಲ್ಲದೆ ಈ ಕಡ್ಡಿಗಳನ್ನು ಅಂಬಿನಂತೆಯೂ, ಲೇಖಣಿಯಂತೆಯೂ ಉಪಯೋಗಿಸುವದುಂಟು. ಈ ಮರದಿಂದ ದೋಣಿಗಳನ್ನು ಮಾಡಿ ನೀರು ಹಾಯಿಸುವದುಂಟು. ಇದರ ಗೊದಮಟ್ಟೆ, ಸೀರೆ, ಹೊಂಬಾಳಿ, ಗೊನೆ ಬಿಡತಕ್ಕ ಮಟ್ಟೆ, ಇವುಗಳನ್ನು ಸಾದೆಗಾಗಿ ಉಪಯೋಗಿಸುವದುಂಟು. ಹೊಂಬಾಳೆ, ಮೊಟ್ಟೆಯ ಬುಡಭಾಗವನ್ನು ಕತ್ತರಿಸಿ ನೀರಿನಲ್ಲಿ ನೆನೆಹಾಕಿ ಕೊನೆಭಾಗವನ್ನು ಕುಟ್ಟಿ, ಬುರಸಿನಂತೆ ಮಾಡಿಕೊಂಡು ಅದರಿಂದ ಸುಣ್ಣವನ್ನು ಹಚ್ಚುವದೂ ಉಂಟು. ತೆಂಗಿನ ಹಸೀ ಹೊಂಬಾಳೆಯನ್ನು ಕುಟ್ಟಿ ರಸವನ್ನು ತೆಗೆದು ಔಷಧಿಗಳಿಗೂ ಉಪಯೋಗಿಸುವರು. ಈ ರಸವನ್ನು ಕಾಯಿಸಿ ಸಾರಾಯಿ ಮಾಡುವದೂ ಉಂಟು. ಈಚಲು, ಓಲೆ, ಬಗಿನಿ, ಮರಗಳಲ್ಲಿ ಇಳಿಸುವಂತೆ ಈ ಮರದಿಂದಲೂ ಹೆಂಡವನ್ನಿಳಿಸುವರು. ಈ ಹೆಂಡದಿಂದ ಈಚಲುಬೆಲ್ಲದಂತೆ ಬೆಲ್ಲವನ್ನು ಮಾಡುವದುಂಟು. ಮತ್ತು ಇದರ ಹೊಂಬಾಳಿಗಳನ್ನು ಹಿಂದುಗಳು ದೇವರಿಗೆ ಪೂಜೆಮಾಡುವದುಂಟು. ಗಟ್ಟದಕೆಳಗಿರತಕ್ಕ ಅನೇಕ ಕುಟುಂಬಿಗಳು ತಮ್ಮ ಮನೆಯ ಹಿತ್ತಲಿನಲ್ಲಿಯೇ ತೆಂಗಿನ ಗಿಡಗಳನ್ನು ಹಾಕಿಕೊಂಡು ಅವುಗಳಿಂದ ಕುಟುಂಬ ಭರಣವನ್ನು ಮಾಡುವರು. ಈ ದೇಶದಲ್ಲಿಯೂ ಅನೇಕರು ತೆಂಗಿನ ತೋಟವನ್ನು ಮಾಡಿಕೊಂಡು ಅದರಿಂದಲೇ ಜೀವಿಸುವರು. ತೆಂಗಿನ ಗಿಡವು ಸುಮಾರು 21 ಅಥವಾ 15 ವರುಷಗಳಿಗೆ ಒಂದು ಪುರುಷ ಪ್ರಮಾಣ ಬೆಳೆಯುವದು ತೆಂಗಿನಗಿಡಕ್ಕೆ ಆಯುಸ್ಸು ಗಳಿತವಾಗುತ್ತಾ ಬಂದಹಾಗೆಲ್ಲಾ ಫಲವು ಕಡಮೆಯಾಗುವದಲ್ಲದೆ ಕಾಯಿಗಳೂ ಕೂಡ ಸಣ್ಣದಾಗಿ ಬಿಡುವವು. ಹೀಗೆ ಈ ವೃಕ್ಷವು ಬಹುಕಾಲ ಇರತಕ್ಕದ್ದಾಗಿಯೂ ಮನುಷ್ಯರ ಜೀವನಕ್ಕೆ ವಿಶೇಷ ಸಹಾಯಕವಾಗಿಯೂ ಇರುವದರಿಂದ ಇದನ್ನು ಕಲ್ಪವೃಕ್ಷವೆಂದು ಹೇಳುವರು

ಸೋಲಿಗರು.

ಇವರೊಂದು ಗುಂಪಿನ ಹಳೆ ಕಾಡುಜನರು. ಮೈಸೂರು ಡಿಸ್ಟ್ರಿಕ್ಟ್‌ಗೆ ದಕ್ಷಿಣಪೂರ್ವಪ್ರದೇಶದಲ್ಲಿರುವ ಬಿಳಿಗಿರಿರಂಗನ ಬೆಟ್ಟದ ಅಡವಿಯಲ್ಲಿಯೂ, ಪಕ್ಕದ ಇಳಿ ಜಾರುಗಳಲ್ಲಿಯೂ ಇರುವ ಕಾಡಿನ ಮಧ್ಯಪ್ರದೇಶದಲ್ಲಿ ವಾಸಮಾಡುತ್ತಾರೆ. ಇವರ ಬಣ್ಣವು ಕಪ್ಪು. ಸಾಮಾನ್ಯರೂಪವುಳ್ಳವರು. ಮೂಗು ಸಾಧಾರಣವಾಗಿ ದಪ್ಪವಾಗಿರುತ್ತದೆ. ಹಣೆಯು ಸಂಕೋಚವಾದ ಅಗಲವುಳ್ಳದ್ದು. ಕೆನ್ನೆಯು ಚಿಕ್ಕದಾಗಿಯೂ, ಸುಗಳು ಕೂದಲುಳ್ಳದ್ದಾಗಿಯೂ ಇರುತ್ತೆ. ಗಂಡಸರಲ್ಲಿ ಅನೇಕರು ಜುಟ್ಟು ನ್ನಿಟ್ಟುಕೊಂಡಿರುತ್ತಾರೆ. ಆದರೆ ಕೆಲವರುಮಾತ್ರ ಕೂದಲನ್ನು ತೆಗಿಸಿಬಿಡುತ್ತಾರೆ. ಕಾಡುಗಳಲ್ಲಿ ಸಣ್ಣ ಸಣ್ಣ ಬೈಲುಪ್ರದೇಶಗಳನ್ನು ನೇಗಲಿನಿಂದ ಸಾಗುವಳಿ ಮಾಡುತ್ತಾರೆ. ಈತರಹ ನೆಲಗಳಿಗೆ ಕುಮ್ರಿ (Kumri) ಎಂದು ಹೆಸರು. ಬಿಳಿಗಿರಿರಂಗನಾಥಸ್ವಾಮಿಯೇ ಇವರ ಮುಖ್ಯದೇವರು. ಆದರೆ ಇವರ ಕುಲದೈವವಾದಂಥಾ ಕಾರಯ್ಯನನ್ನೂ (Karaiyya) ಪೂಜಿಸುತ್ತಾರೆ. ಇವರು ಬೆಳೆಯುವ ರಾಗಿಯೇ ಇವರ ಮುಖ್ಯಾಹಾರವು. ಇದರ ಜತೆಗೆ ಕಾಡಿನಲ್ಲಿ ಉತ್ಪತ್ತಿಯಾಗುವ ಪದಾರ್ಥಗಳನ್ನೂ ಸೇರಿಸಿಕೊಳ್ಳುತ್ತಾರೆ. ಸಾರಗ, ಚಿರತೆ, ಹಂದಿ, ಕುರಿ, ಮೇಕೆ ಇವುಗಳ ಮಾಂಸದಲ್ಲಿ ಇವರಿಗೆ ತುಂಬಾ ಅಭಿರುಚಿ. ಈಚೆಗೆ ಇವರಲ್ಲಿ ಕೆಲವರು ಸ್ವಂತ ನೆಲವನ್ನು ಸಂಪಾದಿಸಿಕೊಂಡಿರುತ್ತಾರೆ. ಜೇನುಕುರುಬರಂತೆ ಕಾಡುಮೃಗಗಳನ್ನು ಕಂಡುಹಿಡಿಯುವದರಲ್ಲಿ ಬಹಳ ಸಮರ್ಥರು. ಇವರಲ್ಲಿ ಸಾಧಾರಣವಾಗಿ ಮೂರುವಿಧವಾದ ಮದುವೆಗಳು ವಾಡಿಕೆಯಲ್ಲಿವೆ. ಐಶ್ವರ್ಯವಂತರಿಂದ ನಡಿಸಲ್ಪಡುವದೇ ಮೊದಲನೇವಿಧವು. ಅದು 12 ಬಿದರುಕೊಚಗಳುಳ್ಳ ಚಪ್ಪರದಲ್ಲಿ, ವಾದ್ಯ ಪೌತಣಗಳಿಂದಕೂಡಿ, 3 ದಿವಸಗಳವರೆಗೂ ಬಹಳ ಉತ್ಸಾಹದಿಂದ ನಡಿಯುತ್ತೆ. ಆದರೆ ಬಹಳವಾಗಿ ನಡಿಯುವದು ಎರಡನೇವಿಧವಾದ ಮದುವೆಯು. ಇದು ಕೂಡಿಕೊಳ್ಳುವಿಕೆಯುಳ್ಳ ನಾಗರಿಕವಾದ ಮಾರ್ಗವೆಂದು ಕಾಣುತ್ತೆ. ಬಡವರಿಂದ ನಡಿಸಲ್ಪಡತಕ್ಕದ್ದೇ 3 ನೇ ವಿಧವಾದ ಮದುವೆಯು. ಇದು ಹ್ಯಾಗಂದರೆ—ಗಂಡು ಹೆಣ್ಣು ಇಬ್ಬರೂ ದೂರವಾದ ಕಾಡಿಗೆ ಕದ್ದು ಹೊರಟುಹೋಗಿ, ತಮಗೆ ಒಂದೆರಡು ಮಕ್ಕಳಾದಮೇಲೆ ಹಿಂತಿರುಗಿ ಬರುತ್ತಾರೆ. ಹಳೆಗನ್ನಡಕ್ಕೆ ಅನುಬಂಧಿಯಾದ ಪೆಲೋ

ಯಿಸ್ (Palois) ಎಂಬ ಭಾಷೆಯನ್ನು ಮಾತಾಡುತ್ತಾರೆ.

ಲಂಬಾಣಿಗರು ಅಥವಾ ಸುಕಾಲಿಗರು—ಇವರಿಗೆ ಬ್ರಿಂಜರೆಂದೂ (Banjara) ಹೆಸರು. ಇವರನ್ನು ಇಂಡಿಯಾದೇಶದ ಜಿಪ್ಸಿಯರೊಂದಿಗೆ ಶೇರಿಸಬಹುದು. ಯುತ್ನಾಲಜಿ (Ethnology) ಎಂಬ ಮಾನುಷಶಾಸ್ತ್ರದಲ್ಲಿ ಇವರ ವಿಷಯವಾದ ಪ್ರಶ್ನೆಯು ಮನಸ್ಸಿಗೆ ಬಹಳ ಆನಂದವನ್ನುಂಟುಮಾಡುತ್ತದೆ. ಇವರಿರುವ ಸ್ಥಳಕ್ಕೆ ಸ.ಕಾಲೀರು, ಸುಕಾಲಿಗರು, ಬ್ರಿಂಜಾರಿಗಳೆಂದೂ ಹೆಸರು. ಈ ಜನಿಗಳಸಂಖ್ಯೆಯು 39137 ಎಂದು ತಿಳಿಯುತ್ತೆ. ಇವರು ಮೈಸೂರು ಸೀಮೆಯ ಎಲ್ಲಾ ಭಾಗಗಳಲ್ಲಿ ಇದ್ದರೂ, ಅನೇಕವಾಗಿ ಶಿವಮೊಗ್ಗ, ಕಡೂರ್, ಚಿತ್ರದುರ್ಗ ಈ ಡಿಸ್ಟ್ರಿಕ್ಟ್‌ಗಳಲ್ಲಿ ಗುಂಪುಗುಂಪಾಗಿರುತ್ತಾರೆ. ಇವರು ಬೆಳವಿಗೆಯುಳ್ಳವರಾಗಿಯೂ, ಬಿಳುಪುವರ್ಣವುಳ್ಳವರಾಗಿಯೂ ಇರುತ್ತಾರೆ. ಇವರು, ತಟ್ಟೆತಲೆಯುಳ್ಳವರಾಗಿಯೂ, ಬಲಿಷ್ಠರಾಗಿಯೂ ಇರುತ್ತಾರೆ. ಇವರ ಮುಖವು ಉದ್ದವಾಗಿಯೂ, ನೇತ್ರಗಳು ಬೂದು ಅಥವ ಕಪ್ಪುಬಣ್ಣವುಳ್ಳದ್ದಾಗಿಯೂ, ಕೂದಲು ದೇಸ್ಮೆಯಹಾಗೂ, ಮತ್ತು ಮೂಗು ನೆಟ್ಟಗೂ ಇರುತ್ತೆ. ಇವರ ಭಾಷೆಯಲ್ಲಿ ಮರಾಟಿ, ಹಿಂದ್ವಿ, ಇತ್ಯಾದಿ ಭಾಷೆಗಳೇ ವಿಶೇಷವಾಗಿ ವಿಶ್ರವಾಗಿದೆ. ಅದಕ್ಕೆ ಕುತ್ತಿನಿ (Kutni) ಎಂದು ಹೆಸರು. ಇವರ ಹೆಂಗಸರ ಉಡುಪು ಅಪೂರ್ವವಾದ ನಮೂನೆಯಾಗಿರುತ್ತೆ. ಪಾವಾಡೆಯು, ದಪ್ಪನಾಗಿಯೂ, ಒರಟಾಗಿಯೂ ಇರುವ ಬಟ್ಟೆಯಿಂದ ಮಾಡಲ್ಪಟ್ಟಿರುತ್ತೆ. ಇವರ ರವಿಕೆಯು ಲಾರ್ಟ್ (lartan) ನಮೂನೆಯು. ತಲೆಯಮೇಲೂ, ಶರೀರದ ಮೇಲುಭಾಗದಲ್ಲೂ ವಿಶೇಷಚಿತ್ರಮಯವಾದ ಒಂದು ವಸ್ತ್ರವನ್ನು ಹೊದೆಯುತ್ತಾರೆ. ತಲೆ ಕೂದಲನ್ನು ಕಪ್ಪೆಚಿಪ್ಪುಗಳಿಂದಲೂ, ಕಾಗಿಧಂಗಾರದಿಂದಲೂ ಅಲಂಕರಿಸಿ, ಸುರಳುಸುರಳಿಯಾಗಿ ಆಗಲಿ ಅಥವ ಜಡೆಹಾಕಿಕೊಂಡಾಗಲಿ, ಮುಖದ ಎರಡುಪಾರ್ಶ್ವದಲ್ಲಯೂ ಜೋಲುಬಿಡುತ್ತಾರೆ. ಅಲ್ಪವಾದ ಆಭರಣಗಳಿಂದಲೂ, ಎಲುಬು, ಹಿತ್ತಾಳೆ ಮತ್ತು ಇತರ ಬೆರಟು ಪದಾರ್ಥಗಳಿಂದ ಮಾಡಲ್ಪಟ್ಟ ಕೊಂಡಾರಗಳಿಂದಲೂ, ತಮ್ಮ ತೋಳು, ಕೈಗಳನ್ನು ತುಂಬಿಸುತ್ತಾರೆ.

ಬೆನ್ನಿನಿಂದ ಕಂಪುಳ್ಳಲ್ಲಿ, ಮೊಣಕಾಲುವರೆಗೂ ಬರುವ ಒಂದು ಬಿಳಿ ಜಡ್ಡಿಯು, ನಡುಕಟ್ಟಿನಿಂದ ಬಲಪಾರ್ಶ್ವದಲ್ಲಿ ಜೋಲುಬಿಟ್ಟಿರುವ ದೇಸ್ಮೆಯಧಾರವ ಕುಚ್ಚು, ನಡುವಿನಿಂದ ಮೇಲಕ್ಕೆ ಹೊದಿಕೆಯೇನೂ ಇರುವದಿಲ್ಲ. ಇವೇ ಗಂಡಸರ ಉಡುಪು. ಇವರು ಲೂಟಿಗೆ ಹೊರಡುವ ಸಂಚಾರಗಳಲ್ಲಿ, ತಾವು ಒಬ್ಬರೊಡನೆ ಒಬ್ಬರು ಕಲೆಯುವದಕ್ಕೆ ಅನುಕೂಲವಾಗಿರುವಹಾಗೆ, ಗುಂಪುಗುಂಪಾಗಿ ಚದರಿರುವ ತಂಡಾಸ್ (Thandas) ಎಂಬ ಗುಡಿಸಲುಗಳನ್ನು, ದಿಣ್ಣೆಗಳಲ್ಲಯೂ, ಹಳ್ಳಿಗಳಿಗೆ ದೂರವಾಗಿಯೂ ಕಟ್ಟಿಕೊಂಡು ಅವ್ವಗಳಲ್ಲಿ ವಾಸಮಾಡುತ್ತಾರೆ.

ವಿದ್ಯಾಭ್ಯಾಸವೆಂಬದನ್ನೇ ಇವರರಿಯರು. ಅನ್ನಪಾನಾದಿಗಳನ್ನು ಮಿತವಾಗಿ ಸೇವಿಸಲು ಅಭ್ಯಾಸವೇ ಇಲ್ಲದಿರುವ ಇವರ ನಡತೆಯು, ನ್ಯಾಯವಿರುದ್ಧವಾದ ಇವರ ಚರ್ಯೆಗಳನ್ನು ವೈದ್ಯಿಗೊಳಿಸುವದಲ್ಲದೆ, ಪ್ರೋತ್ಸಾಹಕಾರಿಯಾಗಿಯೂ ಇರುತ್ತೆ. ಸಂಚರಿಸುವದಕ್ಕಾಗದ ಕಾಡು ಗುಡ್ಡ ಪ್ರದೇಶಗಳಲ್ಲಿ, ಧಾನ್ಯಗಳನ್ನು ಮತ್ತು ಇತರ ಪದಾರ್ಥಗಳನ್ನು ಹೊರಿಯೆತ್ತುಗಳಮೇಲೆ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವದೇ ಇವರ ಸಹಜವಾದ ಕಸಬು. ಈಗ್ಯೂ ಇವರಲ್ಲಿ ಒಂದು ವಿನೋದವಾದ ಕಥೆಯನ್ನು ಹೇಳಿಕೊಳ್ಳುತ್ತಾರೆ. ತದನುಸಾರವಾಗಿ, ಮೈಸೂರು ಮಹಾರಾಷ್ಟ್ರ ದೇಶದ ಯುದ್ಧಗಳಲ್ಲಿ, ಇಂಗ್ಲೀಷಿನವರಿಗೂ, ಮತ್ತು ಅವರ ಕಡೆಯವರಿಗೂ, ಈ ಜನರು ಕುಂಬಾ ಸಹಾಯ ಮಾಡಿದರಂತೆ. ಅವರಲ್ಲಿ ದೊಡ್ಡನುಷ್ಯರಾದ ಕೆಲವರು, ಕ್ಷಣಿಸಲ್ಪಡಬಹುದಾದ ಜಂಭದೊಡನೆ, ತಾವು ಅಂಥಾ ಕಷ್ಟ ಸಮಯದಲ್ಲಿ ಬಹುದೂರ ದೇಶಗಳಿಗೆ ಹೊತ್ತ ಪದಾರ್ಥಗಳ ಪರಿಮಿತಿಯನ್ನೂ ಮತ್ತು ಅದಕ್ಕೆ ಪ್ರತಿಯಾಗಿ ತಾವು ಸಂಪಾದಿಸಿದ ಲೆಕ್ಕವಿಲ್ಲದ ಹಣವನ್ನೂ ನಿರೂಪಿಸುತ್ತಾರೆ. ಆದರೆ ಆಗಿನಿಂದೀಚೆಗೆ ಈ ಲಂಬಾಣಿಗರು ವಿಶೇಷವಾಗಿ ಕೆಟ್ಟುಹೋಗಿರುತ್ತಾರೆಂಬದೂ, ಅವರ ನಾಮೋಚ್ಚಾರಣಮಾತ್ರದಿಂದಲೇ, ಮೇಲೆಬಿದ್ದು ಹೊಡೆಯುವ ಅವರ ಸ್ವಭಾವವು ಲೋಕಪ್ರಸಿದ್ಧವಾಗಿರುತ್ತದೆ. ಅವರು ತಮ್ಮ ಪ್ರಾಣದ ಮೋಲಣ ಆಶೆಯನ್ನು ಬಿಟ್ಟು, ಇತರರ ಮೇಲೆ ಬಿದ್ದು ಹೊಡೆಯುತ್ತಾರೆ. ಸಾಧಾರಣ ಜನರಂತಿರದೆ, ಜನರಿಗೆ ಸಂಶಯವುಂಟಾಗುವಹಾಗೆ ಬೇರೆಯಾಗಿರುವದರಿಂದಲೂ ಮತ್ತು ಇವರ ಮಾತು ಇತರರಿಗೆ ತಿಳಿಯದೆಯಿರುವ್ದರಿಂದಲೂ, ಇವರು ಮಾಡುವ ಲೂಟಿ ಮುಂತಾದವ್ಯಗಳಲ್ಲಿ ಇವರಿಗೆ ಜಯವುಂಟಾಗುತ್ತದೆ.

ಇಂಡಿಯಾದೇಶದ ಇತರ ಪುರಾತನ ಜನಗಳಂತೆಯೇ, ಈ ಲಂಬಾಣಿಗರೂ ಸಹಾ, ತಮ್ಮ ಜನಾಂಗದ ಆದಿಯನ್ನು, ಚರಿತ್ರವು ಸ್ವಲ್ಪಮಟ್ಟಿಗೆ ತಿಳಿದಿದ್ದಕಾಲಕ್ಕೆ ಶೇರಿಸುವದಲ್ಲದೆ, ಅದನ್ನು ಅದ್ಭುತವಾದ ಒಂದು ಇತಿಹಾಸದಿಂದ ಆವರಿಸುತ್ತಾರೆ. ಆದರೆ ಇವರು ಮಾತಾಡುವ ಭಾಷೆಯ ಸ್ವಭಾವದಿಂದಲೂ, ಮತ್ತು ಇವರಲ್ಲಿ ಒಂದು ಶಾಖೆಯವರು ಈಗ್ಯೂ ಜನಿವಾರವನ್ನು ಹಾಕಿಕೊಳ್ಳುವದರಿಂದಲೂ, ಇವರು ಹೇಳುವ ಕಥೆಯು ಸ್ವಲ್ಪಮಟ್ಟಿಗೆ ಸ್ಥಿರಪಡಿಸಲ್ಪಡುತ್ತೆ. ಬೇಡ (Bhada) ಯೆಂಬವನಿಗೆ ಮೂಲ (Múla,) ಮೋಟ (Mota,) ನತಾಡ್ (Nathad,) ಜೋಗ್ದ (JoGda,) ಭೀವ್ದ (Bhínda,) ಎಂಬ 5 ಜನ ಗಂಡುಮಕ್ಕಳಿದ್ದರಂತೆ. ಆದರೆ ಈ ಬೇಡ ಎಂಬವನು ಯಾರೋ ಗೊತ್ತಿಲ್ಲ. ಮೂಲ (Múla) ಯೆಂಬವನ 3 ಗಂಡುಮಕ್ಕಳಲ್ಲಿ ಒಬ್ಬನಾದ ಚವಾಣ್ (Chavan) ಯೆಂಬವನಿಗೆ 6 ಮಂದಿ ಗಂಡುಮಕ್ಕಳು. ಈ ಆರುಮಂದಿಯೂ ಒಂದೊಂದು ಕುಲಕ್ಕೆ ಮೂಲಪುರುಷರಾದರು. ಬಹುಕಾಲದ ಹಿಂದೆ, ಉತ್ತರ ಇಂಡಿಯಾದಲ್ಲಿರುವ ಅಜಮೀರಿನಿಂದ

ಒಬ್ಬ ಬ್ರಾಹ್ಮಣನೂ, ಜೋತ್‌ಪೂರಿನಿಂದ ಒಬ್ಬ ಮರಾಟಿಯವನೂ, ಈ ಜನಗಳಿರುವ ಸ್ಥಳಕ್ಕೆ ಬಂದು, ಅವರೊಡನೆ ಸ್ನೇಹವನ್ನು ಬೆಳಿಸಿ, ಅಲ್ಲಿಯೇ ನೆಲಸಿದರು. ಮರಾಟಿಯವನು ಚವಾನ್ನಿನ (Chavan) ಸಹೋದರನಾದ ರೇಥೋಲ್ (Rathól) ಯೆಂಬವನೊಡನೆ ವಸಿಸುತ್ತಿದ್ದನು. ಬ್ರಾಹ್ಮಣನು ಚವಾಣ್ಕುಲದ ಒಂದು ಕನ್ಯೆಯನ್ನು ಮದುವೆಯಾದನು. ಅವನ ಸಂತತಿಯವರು ಚವಾನ್ನಿನ ಆರು ಕುಲಕ್ಕೆ ಒಂದು ಶಾಖೆಯಾದರು. ಈ ಕುಲದವರು ಈಗ್ಯೂ ಅವರವರ ಹಿರಿಯರ ಹೆಸರನ್ನಿಟ್ಟುಕೊಂಡಿರುತ್ತಾರೆ. ಮತ್ತು ತಾವು ಒಬ್ಬರಿಗೊಬ್ಬರಿಗೆ ಜಾತಿಯವರಾದ್ದರಿಂದ ಹೆಣ್ಣು ಕೊಟ್ಟು ತೆಗೆಯುವದು ಅವರಲ್ಲಿ ಕೆಲವರಲ್ಲಿ ನಿಷೇಧಿಸಕೂಡದು. ಆದರೆ ಅವರು ಬ್ರಾಹ್ಮಣನ ಸಂತತಿಯಲ್ಲಿ ಕೊಟ್ಟು ತೆಗೆಯುವದನ್ನಿಟ್ಟುಕೊಂಡಿರುತ್ತಾರೆ. ಈ ಬ್ರಾಹ್ಮಣಸಂತತಿಗೂ ಚವಾಣ್ಕುಲಕ್ಕೂ ವ್ಯತ್ಯಾಸ ತಿಳಿಯುವದಕ್ಕಾಗಿ, ಬ್ರಾಹ್ಮಣನ ಸಂತತಿಯವರಿಗೆ ವಾದಿತ್ಯರೆಂದು ಹೆಸರು. ವಾದಿತ್ಯಕುಲಕ್ಕೆ ಸೇರಿದವರು ಈಗ್ಯೂ ಜನಿವಾರವನ್ನು ಹಾಕಿಕೊಳ್ಳುತ್ತಾರೆ. ರೇಥೋಲ್ ಕುಟುಂಬಕ್ಕೆ ಸೇರಿದ ಮರಾಟಿಯವನು ಸಹಾ ತಾನು ಬಂದು ಕವಾದತ್ (Khamdat) ಯೆಂಬ ಹೊಸಕುಲವನ್ನುಂಟುಮಾಡಿ, ಅದನ್ನು ರೇಥೋಲಿನ ಆರು ಕುಲಕ್ಕೆ ಶಾಖೆಯನ್ನಾಗಿ ಮಾಡಿದನು. ರೇಥೋಲೀ ಕುಲದವರು ಕವಾದತ್ ಕುಲದವರಲ್ಲದೆಹೊರತು ಇತರರಲ್ಲಿ ಕೊಟ್ಟು ತೆಗೆಯುವದಿಲ್ಲ. ಲಂಬಾಣಿಗರ ಕುಲಕ್ಕೇನೆ ಕೆಟ್ಟ ಹೆಸರನ್ನು ತಂದಂಥಾ ಅನೇಕ ಡಕಾಯಿತರು ಈ ಕವಾದತ್ ವಂಶದಿಂದರಾದವರೇ ಯೆಂದು ಹೇಳಿಕೊಳ್ಳುತ್ತಾರೆ.

ಹನ್ನೊಂದನೆಯ ಪಾಠ

———:o:———

ಅಸ್ತೇಯ (ಕದಿಯದಿರುವದು)

ಕ್ಷೇತ್ರ = ಪ್ರಸಿದ್ಧವಾದಸ್ಥಳ. ಆಣಿವೊಡು = ಸಿದ್ಧಪಡಿಸು

ಮಡಗು = ಇಡು. ಒಡವೆ ಧನ = ಸೊತ್ತು.

ಶ್ಲೋ॥ ಮಾಗಲ್‌ಧಃಕಸ್ಯಸ್ವಿದ್ಧನಂ ॥

ಅರ್ಥವು:—

ಯಾರಧನವನ್ನಾದರೂ ಇಚ್ಛೈಸಬೇಡ.

ಸುಬ್ರಹ್ಮಣ್ಯವೆಂಬ ಕ್ಷೇತ್ರದಲ್ಲಿ ಸುಬ್ಬಮ್ಮನೆಂಬಾಕೆಯು ಇದ್ದಳು. ಆಕೆಗೆ ನೆರಮನೆ ನಾಗಮ್ಮನು ಕೇವಲ ಸ್ನೇಹಿತಳಾಗಿದ್ದಳು. ಒಂದಾನೊಂದುದಿನ ನಾಗ

ಮ್ಮನು ಸುಬ್ಬಮ್ಮನಮನೆಗೆ ಬಂದು—ಏನಮ್ಮ ಗೆಳತಿ. ಅಡಿಗೇ ಕೆಲಸ ಮುಗಿಸಿದ್ದೀಯೂ ಎಂದು ಕೇಳಿದಳು. ಸುಬ್ಬಮ್ಮನು ನಾನು ಇಲ್ಲಿನವರಿಗೂ ದೇವರಪೂಜೆಗೆ ಸಾಮಗ್ರಿಗಳನ್ನು ಅಣಿಮಾಡುವದರಲ್ಲೇ ಹೊತ್ತು ಹೋಯಿತು. ಪಡಸಾಲೆಯಲ್ಲಿ ಬೆತ್ತದ ಸಿಕ್ಕೆಯಲ್ಲಿ ಬೆಲ್ಲವನ್ನು ಇಟ್ಟಿರುವೆನು ; ಪುಡಿಮಾಡಿಕೋಬೇಕು. ಅವಕಾಶವೇ ಇಲ್ಲವಿವ್ಮಾ, ಅಂದಳು. ಅದಕ್ಕೆ ನಾಗಮ್ಮನು ನಾನು ಬಿಡಿಯೂಗಿರುವೆನು ; ಪುಡಿಮಾಡಿಕೊಡಲೇ ಅಂದಳು. ಕಪಟಬುದ್ಧಿಯರಿಯದ ಸುಬ್ಬಮ್ಮನು ಸಂತೋಷಿಸಿ ನೀನು ಪರೋಪಕಾರ ಬುದ್ಧಿಯುಳ್ಳವಳೆಂದು ಹೊಗಳಿ—ಮಾಡಿಕೊಡವ್ಮಾ ಅಂದಳು. ನಾಗಮ್ಮನು ಕತ್ತಲೆಯೊದಕಡೆ ಕೂತು ಪುಡಿಮಾಡಲಾರಂಭಿಸಿ ಒಂದು ಉಂಡೆಬೆಲ್ಲವನ್ನು ತಾಳೇಕಾಯಿಯಲ್ಲಿ ಸೆಕ್ಕಿಕೊಂಡು ಕಡಮೆಬೆಲ್ಲದ ಪುಡಿಯನ್ನು ಸುಬ್ಬಮ್ಮನಿಗೆ ಒಪ್ಪಿಸಿ ಮಾತನಾಡುತ್ತಾ ನಿಂತಳು.

ಹೀಗಿರಲಾಗಿ ತಾನು ಕತ್ತಲಲ್ಲಿ ಕದ್ದುಮಡಗಿಕೊಂಡಿದ್ದ ಬೆಲ್ಲದ ಜೊತೆಯಲ್ಲಿದ್ದ ಒಂದು ಗೊದ್ದವು ಪ್ರಯಾಸದಿಂದ ಹೊರಕ್ಕೆಬಂದು ಸೊಂಟವನ್ನು ಕಚ್ಚಿತು. ಕೂಡಲೆ ನಾಗಮ್ಮನು ಮಾತನಾಡುವದನ್ನು ನಿಲ್ಲಿಸಿ ಗೊದ್ದ ಕಡಿದ ಉರಿಯಿಂದ ಧಿಗ್ಗನೆ ಎದ್ದು ಬಿದ್ದು ಸುಬ್ಬಮ್ಮ ಏನೋಕಡಿಯಿತೆಂದು ಸೊಂಟವನ್ನು ತುರಿಸಿಕೊಂಡಳು. ಸಿಕ್ಕಿಸಿಕೊಳ್ಳಬೇಕೆಂಬ ಅವಸರದಿಂದ ಅತಂತ್ರವಾಗಿ ಇಟ್ಟುಕೊಂಡಿದ್ದ ಬೆಲ್ಲದ ಉಂಡೆಯು ಧೊಪ್ಪನೆ ಕೆಳಗೆಬಿತ್ತು. ಅದನ್ನು ನೋಡಿದಕೂಡಲೆ ಸುಬ್ಬಮ್ಮನು ಇದೆಲ್ಲಯ್ಯ ಬೆಲ್ಲಾ ಅಂದಳು. ನಾಗಮ್ಮನು ಉತ್ತರ ತೋಚದೆ ಜೋಲುಮೊಗ ಮಾಡಿದಳು. ನೋಡಿರಿ ನಾಗಮ್ಮನು ಸುಬ್ಬಮ್ಮನ ಸ್ವತ್ತನ್ನು ಅಪಹರಿಸತೊಡಗಿದ್ದರಿಂದ ಪಂಚಿಕೆಯನ್ನೂ ಮಾನವನ್ನೂ ಕಳಕೊಳ್ಳಬೇಕಾಯಿತು. ಆದ್ದರಿಂದ ಯಾವಕಾಲದಲ್ಲಿಯೂ ಪರರ ಒಡವೆಯನ್ನಪೇಕ್ಷಿಸಬಾರದು. ಒಂದುವೇಳೆ ಅಪೇಕ್ಷಿಸಿ ಅಪಹರಿಸಿದರೆ ಅದು ದಕ್ಕಿ ಬರಲಾರದು.

ಅಡಕೆ ಕದ್ದ ಮೂಸ ಆನೆಕೊಟ್ಟರೂ ಬಾರದು.

ಪ್ರಶ್ನೆ:—(೧) ಸುಬ್ಬಮ್ಮನು ಯಾವಕೆಲಸಕ್ಕೆ ಅವಕಾಶವಿಲ್ಲವೆಂದು ಹೇಳಿದಳು. ನಾಗಮ್ಮನು ಅದಕ್ಕೆ ಅಂದದ್ದೇನು. (೨) ನಾಗಮ್ಮನು ಸುಬ್ಬಮ್ಮನಿಗೆ ಮಾಡಿದ ಉಪಕಾರವೇನು. (೩) ಉಪಕಾರಸಾರ್ಥಕನಾಗದಂತೆ ಮಾಡಿದ ಕೆಟ್ಟಕೆಲಸವೇನು. (೪) ಅದು ಹೇಗೆ ಹೊರಬಿತ್ತು.

ವಿದ್ಯಾದಾಯಿನಿ.

ಭಾಗ ೫.] ಜುಲೈ ೧೯೦೭. [ಸಂಚಿಕೆ ೭.

ಜ್ಯೂಬಿಲಿಯದಿನ ಮೈಸೂರಿನಲ್ಲಿ ನಡೆದ ದರ್ಬಾರ್ ಕಾಲದಲ್ಲಿ ಸಭಾಧ್ಯಕ್ಷರಾದ ಡಿವಟಕವಿಖಾನರವರು ಸಭಿಕರನ್ನು ಕುರಿತು ಹೇಳಿದ ವಿಷಯಗಳು:-

ಸಭಿಕರಿಗೆ ವಿಜ್ಞಾಪಿಸುವದೇನಂದರೆ :— ದಯಾಳುಗಳಾದ ಇಂಡಿಯಾದೇಶದ ಚಕ್ರವರ್ತಿನಿಯವರ ಸುಖಪ್ರದವಾದ ಮತ್ತು ಧರ್ಮದಿಂದೊಡಗೂಡಿದ ಆಳಿಕೆಯು ಅರುವತ್ತನೇ ವರ್ಷವು ಪೂರ್ತಿಯಾದ ಈ ಮಹೋತ್ಸವದಲ್ಲಿ ನಮ್ಮ ಸಂಸ್ಥಾನದ ಶ್ರೀ ಮಹಾರಾಣಿಯವರಿಗೆ ಉಂಟಾಗಿ ಇರುವ ಸಂತೋಷವನ್ನೂ ಉಪಕಾರ ಸ್ಮರಣೆಯನ್ನೂ ತಮ್ಮಗಳಿಗೆ ಪ್ರಕಾಶಪಡಿಸಬೇಕೆಂದು ಸನ್ನಿಧಾನದ ಕೋರಿಕೆ ಪ್ರಕಾರ ನನಗೆ ಅಪ್ಪಣೆಯಾಗಿದೆ. ಇಂಡ್ಯಾ ಚಕ್ರವರ್ತಿನಿಯವರು ೧೮೫೮ನೇ ಇಸವಿ ಜೂನ್ ೨೦ನೇ ತಾರೀಖಿನಲ್ಲಿ ರಾಜ್ಯಾಧಿಕಾರವನ್ನು ವಹಿಸಿದ್ದರಿಂದ ಈ ಭೂಮಂಡಲದಲ್ಲೆಲ್ಲಾ ವಿಸ್ತರಿಸಿ ಇರುವ ಅವರ ರಾಷ್ಟ್ರದಮೇಲೆ ಇದುವರಿಗೆ ಅನ್ಯಾದೃಶವಾಗಿ ಅರುವತ್ತು ವರ್ಷಗಳ ಕಾಲ ಪ್ರಭುತ್ವವನ್ನು ಮಾಡಿದಂತಾಯಿತು. ಈ ಆಳಿಕೆಯು ಇಂಗ್ಲೀಷರ ಸಾಮ್ರಾಜ್ಯದ ಚರಿತ್ರೆಯಲ್ಲಿ ಅಸದೃಶವಾದ ಪ್ರಜಾಕ್ಷೇಮ ಚಿಂತನೆಯನ್ನೂ ಸಮೃದ್ಧಿಯನ್ನೂ ವೈಭವವನ್ನೂ ಒಳಗೊಂಡ ಆಳಿಕೆಗಳಲ್ಲಿ ಒಂದಾಗಿದೆ. ಅರುವತ್ತು ವರ್ಷಗಳ ಕಾಲದಲ್ಲಿ ಉಂಟಾದ ಜನರ ಶ್ರೇಯೋಭಿವೃದ್ಧಿಯು ಸಾರಭೂತವಾಗಿ ಕಾಲಾನುಗುಣವಾಗಿರುವದರಿಂದ ಹಿಂದೆ ಇಷ್ಟೇ ಕಾಲದಲ್ಲಿ ಇಂಥಾ ಮಹತ್ತಾದ ಮತ್ತು ಸ್ಥಿರವಾದ ಮತಾಸಗಳು ಯಾವಾಗಲಾದರೂ ನಡೆದಿವೆಯೋ ಎಂದು ನಿಶ್ಚೈಸುವದು ಸುಲಭಸಾಧ್ಯವಾಗಿಲ್ಲ. ಇಂಗ್ಲೀಷರಚರಿತ್ರೆ

ಮ್ಮನು ಸುಬ್ಬಮ್ಮನಮನೆಗೆ ಬಂದು—ಏನಮ್ಮ ಗೆಳತಿ. ಅಡಿಗೇ ಕೆಲಸ ಮುಗಿಸಿದ್ದೀಯೂ ಎಂದು ಕೇಳಿದಳು. ಸುಬ್ಬಮ್ಮನು ನಾನು ಇಲ್ಲಿನವರಿಗೂ ದೇವರಪೂಜೆಗೆ ಸಾಮಗ್ರಿಗಳನ್ನು ಅಣಿಮಾಡುವದರಲ್ಲೇ ಹೊತ್ತು ಹೋಯಿತು. ಪಡಸಾಲೆಯಲ್ಲಿ ಬೆತ್ತದ ಕುಕ್ಕೆಯಲ್ಲಿ ಬೆಲ್ಲವನ್ನು ಇಟ್ಟಿರುವೆನು ; ಪುಡಿಮಾಡಿಕೋಬೇಕು. ಅವಕಾಶವೇ ಇಲ್ಲವಮ್ಮಾ, ಅಂದಳು. ಅದಕ್ಕೆ ನಾಗಮ್ಮನು ನಾನು ಒಡಿಯೂಗಿರುವೆನು ; ಪುಡಿಮಾಡಿಕೊಡಲೇ ಅಂದಳು. ಕಪಟಬುದ್ಧಿಯರಿಯದ ಸುಬ್ಬಮ್ಮನು ಸಂತೋಷಿಸಿ ನೀನು ಪರೋಪಕಾರ ಬುದ್ಧಿಯುಳ್ಳವಳೆಂದು ಹೊಗಳಿ—ಮಾಡಿಕೊಡಮ್ಮಾ ಅಂದಳು. ನಾಗಮ್ಮನು ಕತ್ತಲೆಯೂದಕಡೆ ಕೂತು ಪುಡಿಮಾಡಲಾರಂಭಿಸಿ ಒಂದು ಉಂಡೆಬೆಲ್ಲವನ್ನು ಬಾಳೇಕಾಯಿಯಲ್ಲಿ ಸೆಕ್ಕಿಕೊಂಡು ಕಡಮೆಬೆಲ್ಲದ ಪುಡಿಯನ್ನು ಸುಬ್ಬಮ್ಮನಿಗೆ ಒಪ್ಪಿಸಿ ಮೂತನಾಡುತ್ತಾ ನಿಂತಳು.

ಇಗಿರಲಾಗಿ ತಾನು ಕತ್ತಲಲ್ಲಿ ಕದ್ದುಮಡಗಿಕೊಂಡಿದ್ದ ಬೆಲ್ಲದ ಜೊತೆಯಲ್ಲಿದ್ದ ಒಂದು ಗೊದ್ದವು ಪ್ರಯಾಸದಿಂದ ಹೊರಕ್ಕೆಬಂದು ಸೊಂಟವನ್ನು ಕಚ್ಚಿತು. ಕೂಡಲೆ ನಾಗಮ್ಮನು ಮೂತನಾಡುವದನ್ನು ನಿಲ್ಲಿಸಿ ಗೊದ್ದ ಕಡಿದ ಉರಿಯಿಂದ ಧಿಗ್ಗನೆ ಬೆಚ್ಚಿಬಿದ್ದು ಸುಬ್ಬಮ್ಮಾ ನಿನ್ನೋಕಡಿಯಿತೆಂದು ಸೊಂಟವನ್ನು ತುರಿಸಿಕೊಂಡಳು. ದಕ್ಕಿಸಿಕೊಳ್ಳಬೇಕೆಂಬ ಅವಸರದಿಂದ ಅತಂತ್ರನಾಗಿ ಇಟ್ಟುಕೊಂಡಿದ್ದ ಬೆಲ್ಲದ ಉಂಡೆಯು ಧೊಪ್ಪನೆ ಕೆಳಗೆಬಿತ್ತು. ಅದನ್ನು ನೋಡಿದಕೂಡಲೆ ಸುಬ್ಬಮ್ಮನು ಇದೆಲ್ಲಿಯದ್ದೇ ಬೆಲ್ಲಾ ಅಂದಳು. ನಾಗಮ್ಮನು ಉತ್ತರ ತೋಚದೆ ಜೋಲುಮೊಗ ಮಾಡಿದಳು. ನೋಡಿರಿ ನಾಗಮ್ಮನು ಸುಬ್ಬಮ್ಮನ ಸ್ವತ್ತನ್ನು ಅಪಹರಿಸತೊಡಗಿದ್ದರಿಂದ ನಂಬಿಕೆಯನ್ನೂ ಮಾನವನ್ನೂ ಕಳಕೊಳ್ಳಬೇಕಾಯಿತು. ಆದ್ದರಿಂದ ಯಾವಕಾಲದಲ್ಲಿಯೂ ಪರರ ಒಡವೆಯನ್ನಪೇಕ್ಷಿಸಬಾರದು. ಒಂದುವೇಳೆ ಅಪೇಕ್ಷಿಸಿ ಅಪಹರಿಸಿದರೆ ಅದು ದಕ್ಕಿ ಬರಲಾರದು.

ಅಡಕೆ ಕದ್ದ ಮಾನ ಅನೆಕೊಟ್ಟರೂ ಬಾರದು.

ಪ್ರಶ್ನೆ:—(೧) ಸುಬ್ಬಮ್ಮನು ಯಾವಕೆಲಸಕ್ಕೆ ಅವಕಾಶವಿಲ್ಲವೆಂದು ಹೇಳಿದ್ದಳು. ನಾಗಮ್ಮನು—ಅದಕ್ಕೆ ಅಂದದ್ದೇನು. (೨) ನಾಗಮ್ಮನು ಸುಬ್ಬಮ್ಮನಿಗೆ ಮಾಡಿದ ಉಪಕಾರವೇನು. (೩) ಉಪಕಾರಸಾರ್ಥಕನಾಗದಂತೆ ಮಾಡಿದ ಕೆಟ್ಟಕೆಲಸವೇನು. (೪) ಅದು ಹೇಗೆ ಹೊರಬಿತ್ತು.

ವಿದ್ಯಾದಾಯಿನಿ.

ಭಾಗ ೫.] ಜುಲೈ ೧೯೦೭. [ಸಂಚಿಕೆ ೭.

ಜ್ಯೂಬಿಲಿಯದಿನ ಮೈಸೂರಿನಲ್ಲಿ ನಡೆದ ದರ್ಬಾರ್ ಕಾಲದಲ್ಲಿ ಸಭಾಧ್ಯಕ್ಷರಾದ ಡಿವಟಿಕವಿಷಾಷನರವರು ಸಭಿಕರನ್ನು ಕುರಿತು ಹೇಳಿದ ವಿಷಯಗಳು:-

ಸಭಿಕರಿಗೆ ವಿಜ್ಞಾಪಿಸುವದೇನಂದರೆ :— ದಯಾಳುಗಳಾದ ಇಂಡಿಯಾದೇಶದ ಚಕ್ರವರ್ತಿನಿಯವರ ಸುಖಪ್ರದವಾದ ಮತ್ತು ಧರ್ಮದಿಂದೊಡಗೂಡಿದ ಆಳಿಕೆಯು ಅರುವತ್ತನೇ ವರ್ಷವು ಪೂರ್ತಿಯಾದ ಈ ಮಹೋತ್ಸವದಲ್ಲಿ ನಮ್ಮ ಸಂಸ್ಥಾನದ ಶ್ರೀ ಮಹಾರಾಣಿಯವರಿಗೆ ಉಂಟಾಗಿ ಇರುವ ಸಂತೋಷವನ್ನೂ ಉಪಕಾರ ಸ್ಮರಣೆಯನ್ನೂ ತಮ್ಮಗಳಿಗೆ ಪ್ರಕಾಶಪಡಿಸಬೇಕೆಂದು ಸನ್ನಿಧಾನದ ಕೋರಿಕೆ ಪ್ರಕಾರ ನನಗೆ ಅಪ್ಪಣೆಯಾಗಿದೆ. ಇಂಡ್ಯಾ ಚಕ್ರವರ್ತಿನಿಯವರು ೧೮೩೭ನೇ ಸಾಲಿನ ಜೂನ್ ೨೦ನೇ ತಾರೀಖಿನಲ್ಲಿ ರಾಜ್ಯಾಧಿಕಾರವನ್ನು ವಹಿಸಿದ್ದರಿಂದ, ಈ ಭೂಮಂಡಲದಲ್ಲೆಲ್ಲಾ ವಿಸ್ತರಿಸಿ ಇರುವ [illegible] ಮೇಲೆ ಇದುವರೆಗೆ ಅನ್ಯಾದೃಶವಾಗಿ ಅರುವತ್ತು ವರ್ಷಗಳ ಕಾಲ ಪ್ರಭುತ್ವವನ್ನು ಮಾಡಿದಂತಾಯಿತು. ಈ ಆಳಿಕೆಯು ಇಂಗ್ಲೀಷರ ಸಾಮ್ರಾಜ್ಯದ ಚರಿತ್ರೆಯಲ್ಲಿ ಅಸದೃಶವಾದ ಪ್ರಜಾಕ್ಷೇಮ ಚಿಂತನೆಯನ್ನೂ ಸಮೃದ್ಧಿಯನ್ನೂ ವೈಭವವನ್ನೂ ಒಳಗೊಂಡ ಆಳಿಕೆಗಳಲ್ಲಿ ಒಂದಾಗಿದೆ. ಅರುವತ್ತು ವರ್ಷಗಳ ಕಾಲದಲ್ಲಿ ಉಂಟಾದ ಜನರ ಶ್ರೇಯೋಭಿವೃದ್ಧಿಯು ಸಾರಭೂತವಾಗಿ ಕಾಲಾನುಗುಣವಾಗಿರುವದರಿಂದ ಹಿಂದೆ ಇಷ್ಟೇ ಕಾಲದಲ್ಲಿ ಇಂಥಾ ಮಹತ್ತಾದ ಮತ್ತು ಸ್ಥಿರವಾದ ವ್ಯತ್ಯಾಸಗಳು ಯಾವಾಗಲಾದರೂ ನಡೆದಿವೆಯೋ ಎಂದು ವಿಚಾರಿಸುವದು ಸುಲಭಸಾಧ್ಯವಾಗಿಲ್ಲ. ಇಂಗ್ಲೀಷರ ಚರಿತ್ರೆ

ಯಲ್ಲಿ ಅತಿ ಪ್ರಸಿದ್ಧಿಗೊಂಡಿರುವ ಎರಡು ಅಳಿಕೆಯಲ್ಲಿಯೂ ರಾಜ್ಯಭಾರವು ಸ್ತ್ರೀಯರಿಂದಲೇ ವಹಿಸಲ್ಪಟ್ಟಿತೆಂಬುವದು ಆಶ್ಚರ್ಯಕರವಾಗಿದೆ. ಆದರೂ ಚಕ್ರವರ್ತಿನಿ ವಿಕ್ಟೋರಿಯಾರವರ ಅಳಿಕೆಯು ಖ್ಯಾತಿಯನ್ನು ಪಡೆದ ಮಹಾರಾಜ್ಞಿ ಎಲಿಜಬೇತ್ ಯವರ ಅಳಿಕೆಗಿಂತಲೂ ಅನ್ಯೂನವಾದದ್ದೆಂದು ನಿಶ್ಶಂಕೆಯಿಂದ ಹೇಳಬಹುದು.

ಪ್ರಜಾವೃದ್ಧಿ ರಾಜ್ಯವಿಶಾಲತೆ ವಿದ್ಯಾಪ್ರಾಚುರ್ಯ ನಾಗರೀಕತೆಯಅಧಿಕ್ಯ ಸ್ತ್ರೀಯಾಳಿಗರ್ಹಾನುಸರಣೆ ಇವೇ, ಮಹಾರಾಜ್ಞಿ ವಿಕ್ಟೋರಿಯಾರವರ ಅಳಿಕೆಯನ್ನು ಪ್ರಸಿದ್ಧಿಗೊಳಿಸುವ ಉನ್ನತವಿಷಯಗಳಾಗಿವೆ. ಇಂಡಿಯಾ ದೇಶವು ಚಕ್ರವರ್ತಿನಿಯವರ ಸಾಕ್ಷಾತ್ ಮೇಲ್ವಿಚಾರಣೆಗೆ ಒಳಪಟ್ಟಾರಭ್ಯ ದೇಶಕ್ಕೆ ಬಹುಪ್ರಯೋಜನ ಉಂಟಾಗಿದೆ ಎಂದು ನಿರಾಕ್ಷೇಪವಾಗಿ ಹೇಳಬಹುದು.

೧೮೯೧ ನೇ ಇಸವಿಯಲ್ಲಿ ನಡೆದ ಖಾನೇಷುಮಾರಿಯಿಂದ ಪ್ರಜಾಸಂಖ್ಯೆಯು ಪ್ರತಿ ದಶವರ್ಷಕಾಲಗಳಲ್ಲಿ ಎಷ್ಟರಮಟ್ಟಿಗೆ ವೃದ್ಧಿಯಾಯಿತು, ಎಂಬುವದು ವ್ಯಕ್ತಪಟ್ಟಿದೆ. ವಿಕ್ಟೋರಿಯಾ ಚಕ್ರವರ್ತಿನಿಯವರ ಆಳ್ವಿಕೆಯಲ್ಲಿ ಇಂಗ್ಲೀಷರ ರಾಜ್ಯವು ಈ ಭೂಮಂಡಲದ ಎಲ್ಲಾಭಾಗದಲ್ಲಿಯೂ ಅಸಾಧಾರಣವಾದ ವಿಸ್ತಾರವನ್ನು ಹೊಂದಿದೆ, ಎಂಬುವ ವಿಷಯ ನಿರ್ದೇಶಿಸತಕ್ಕ ಆವಶ್ಯಕವೇ ಇರುವದಿಲ್ಲ. ಮತ್ತು ಈ ವಿಶಾಲವಾದ ರಾಜ್ಯದಲ್ಲಿ ಸೂರ್ಯನು ಅಸ್ತಂಗತನಾಗುವದಿಲ್ಲವೆಂಬ ಹೇಳಿಕೆಯು ನಿಜವೇ ಹೊರ್ತು ಅತಿಶಯೋಕ್ತಿಯಲ್ಲವೆಂದು ತಿಳಿಯಬೇಕಾಗಿದೆ. ಮನುಷ್ಯರು ಬಯಸುವ ಬುದ್ಧಿವಿಕಾಸ ಮತ್ತು ಸನ್ಮಾರ್ಗ ಇವುಗಳು ಲಭಿಸುವನಕ್ಕೆ ಅನುಕೂಲನಾಗಿ ಏರ್ಪಟ್ಟಿರುವ ಸ್ಕೂಲುಗಳಿಂದಲೂ ಕಾಲೇಜುಗಳಿಂದಲೂ ಪ್ರತಿವರ್ಷದಲ್ಲಿಯೂ ಯೂನಿವರ್ಸಿಟಿಗಳಿಂದ ನಡೆಯುವ ಸಾಹಿತ್ಯ ವೈದ್ಯ ಕಾನೂನ್ ಇಂಜನಿಯರಿಂಗ್ ಇವೇ ಮುಂತಾದ ಪರೀಕ್ಷೆಗಳಲ್ಲಿ ಪಾರಂಗತರಾಗುವ ಸೂರಾರು ಮಂದಿ ವಿದ್ಯಾವಂತರ ಸಂಖ್ಯೆಯಿಂದ ಈ ನಲವತ್ತುವರ್ಷಗಳಿಂದೀಚಿಗೆ ವಿದ್ಯೆಯು ಎಷ್ಟರಮಟ್ಟಿಗೆ ಪ್ರಾಚುರ್ಯವನ್ನು ಹೊಂದಿದೆ ಎಂಬುವದು ಸ್ಪಷ್ಟಪಡುತ್ತೆ. ಇಂಗ್ಲೀಷ್ ವಿದ್ಯಾಪ್ರಾಚುರ್ಯಕ್ಕೆ ಉಂಟಾಗಿರುವ ಪ್ರೋತ್ಸಾಹವು ಸಮಸ್ತರಿಗೂ ಒಂದೇಸಮನಾಗಿ ನ್ಯಾಯಪರಿಶೀಲನೆಯಾಗುವಂತೆ ಏರ್ಪಟ್ಟಿರುವ ನ್ಯಾಯಸ್ಥಾನಗಳು ನಾನಾಭೇದಗಳನ್ನು ಹೋಗಲಾಡಿಸಿ ಐಕಮತ್ಯವನ್ನು ಉಂಟುಮಾಡುವದಕ್ಕೆ ಕಾರಣಗಳಾಗಿವೆ. ಹೀಗೆ ನಮಗೆ ಪ್ರಯೋಜನವುಂಟಾಗಿದೆ, ಎಂಬುವದಕ್ಕೆ

ಈ ದೇಶದಲ್ಲಿ ಎಲ್ಲಾಕಡೆಯಲ್ಲಿಯೂ ಸ್ಥಾಪಿಸಲ್ಪಟ್ಟಿರುವ ಅನೇಕ ಸಂಘಗಳೂ, ಸರ್ಕಾರದವರು ಅನುಸರಿಸುವ ರಾಜಕೀಯ ಕ್ರಮಗಳಿಗೆ ಅಗಲಿ ಅವರು ಮಾಡುವ ಕೆಲಸಕ್ಕೆ ಅಗಲಿ ಬಹಿರಂಗವಾಗಿ ಸಮ್ಮತಿಸದೆ ಇರುವದಕ್ಕೂ ಅಥವಾ ಅವುಗಳನ್ನು ಕುರಿತು ವಿಚಾರಮಾಡುವದಕ್ಕೂ ವರ್ತಮಾನ ಪತ್ರಿಕೆಗಳು ಮುಂತಾದವುಗಳಿಗೆ ಇರುವ ಇಂಡಿಯಾದೇಶದ ಚರಿತ್ರೆಯಲ್ಲಿ ಅಶ್ರುತವಾಗಿರುವ ಸ್ವಾತಂತ್ರ್ಯವೂ ಪ್ರಸಾನ್ನತವಾಗಿವೆ.

ದ್ರವ್ಯಸಂಪಾದನೆಯಲ್ಲಾಗಲಿ ಬುದ್ಧಿವಿಕಾಸವನ್ನುಪಡೆಯುವದರಲ್ಲಿಯಾಗಲಿ ಸನ್ಮಾರ್ಗವರ್ತಿಗಳಾಗುವದರಲ್ಲಾಗಲಿ ಪ್ರಜೆಗಳಿಗೆ ಉಂಟಾಗಿರುವ ಸೌಕರ್ಯವು ಮತ್ತು ಉಚ್ಚಾವ್ಯವಸ್ಥಿತಿಯೂ ಅಮಿತವಾಗಿವೆ. ರೈಲ್ ಮತ್ತು ತಂತೀಟಪಾಲುಗಳು ಏರ್ಪಟ್ಟಿವೆ. ಇವುಗಳಿಂದ ಸ್ಥಳಾಂತರಗಳಿಗಿರುವ ದೂರವೇ ಕಾಣದಂತಾಗಿದೆ. ಇದಲ್ಲದೆ ಜನರ ಸೌಖ್ಯವು ಅನುಕೂಲವು ಹೆಚ್ಚಿದೆ. ರಸ್ತೆಗಳನ್ನು ಮಾಡಿರೋಣದರಿಂದಲೂ ಸೇತುವೆಗಳನ್ನು ಕಟ್ಟಿರೋಣದರಿಂದಲೂ ಜನರ ಸಂಚಾರಕ್ಕೆ ಸೌಲಭ್ಯ ಉಂಟಾಗಿರುವದಲ್ಲದೆ ವ್ಯಾಪಾರವೃದ್ಧಿಗೂ ಅವಕಾಶವಾಗಿದೆ. ಅನೇಕವಾಗಿಯೂ, ಅದ್ಭುತವಾಗಿಯೂ ನೀರಾವರಿ ಕಾಮಗಾರಿಗಳು ನಡೆದಿರೋಣದರಿಂದ ವ್ಯವಸಾಯದ ಭೂಮಿಯ ವಿಸ್ತೀರ್ಣವೂ ಆಹಾರ ಧಾನ್ಯದ ಸಂಗ್ರಹವೂ ಹೆಚ್ಚಿವೆ. ವ್ಯಾಧಿಗಳಿಗೆ ಚಿಕಿತ್ಸೆಮಾಡುವದಕ್ಕೂ, ಆರೋಗ್ಯವನ್ನು ವೃದ್ಧಿಪಡಿಸುವದಕ್ಕೂ ವೈದ್ಯಶಾಲೆಗಳು ಸ್ಥಾಪಿಸಲ್ಪಟ್ಟಿವೆ. ಜನರ ಅರ್ಥ ಮತ್ತು ಪ್ರಾಣಸಂರಕ್ಷಣೆಯು ಸಂಪೂರ್ಣವಾಗಿ ಆಗುತ್ತಲಿದೆ. ಇದೇಪ್ರಕಾರ ಪ್ರಜೆಗಳಿಗೆ ಸೌಖ್ಯವನ್ನುಂಟುಮಾಡುವ ಇನ್ನೂ ನಾನಾವಿಧವಾದ ಏರ್ಪಾಡುಗಳು ನಡೆದಿವೆ. ಈ ಪ್ರಕಾರ ಚಕ್ರವರ್ತಿನಿಯವರ ಆಳಿಕೆಯು ಪ್ರಜೆಗಳ ಸೌಖ್ಯವನ್ನು ವೃದ್ಧಿಪಡಿಸುವದಕ್ಕೋಸ್ಕರ ವಿಚಕ್ಷಣೆಯಿಂದಲೂ ದಯೆಯಿಂದಲೂ ಮಾಡಲ್ಪಟ್ಟ ಏರ್ಪಾಡುಗಳಿಂದ ಪ್ರಸಿದ್ಧವಾಗಿದೆ. ಮತ್ತು ಚಕ್ರವರ್ತಿನಿಯವರು ಅಲ್ಪ ಸ್ವಲ್ಪವೆಂದು ಉದಾಸೀನ ಮಾಡದೆ ಪ್ರಜೆಗಳ ಕ್ಷೇಮವನ್ನು ವೃದ್ಧಿಪಡಿಸುವದರಲ್ಲಿ ನಿರಂತರವಾದ ಕುತೂಹಲವುಳ್ಳವರಾಗಿದಾರೆ.

೧೭೯೯ ನೇ ಇಸವಿಯಲ್ಲಿ ಶ್ರೀರಂಗಪಟ್ಟಣವು ಇಂಗ್ಲೀಷರ ಕೈಸೇರಿದನಂತರ ಈಗಿನ ನಮ್ಮ ರಾಜವಂಶೀಯರನ್ನು ಮೈಸೂರು ಸಿಂಹಾಸನಾರೂಢರನ್ನಾಗಿ ಪುನಃ

ಪ್ರತಿಷ್ಠೆಮಾಡಿದ್ದರಿಂದಲೂ ಮುಂದೆ ಇದೇ ವಂಶೀಯರು ರಾಜ್ಯವನ್ನು ವಿಚ್ಛಿತ್ತಿಯಿಲ್ಲದೆ ವಹಿಸಿರುವ ಭಾಗದಲ್ಲಿ ಅಭಯವನ್ನು ಕೊಟ್ಟದ್ದರಿಂದಲೂ ಮೃತಿಯನ್ನು ಹೊಂದಿ ಖೇದಪಡಿಸಿದ ಚಾಮರಾಜೇಂದ್ರ ಒಡೆಯರ್ ಬಹದ್ದರವರ ಸ್ವೀಕಾರವನ್ನು ಅನುಮೋದಿಸಿದ್ದರಿಂದಲೂ ಐವತ್ತು ವರ್ಷಗಳಕಾಲ ಸಾಕ್ಷಾತ್ ಈ ರಾಜ್ಯದ ಅಡಳಿತಗಳನ್ನು ನಡಿಸಿ ಅತ್ಯುತ್ಕೃಷ್ಟವಾದ ಕಾರ್ಯನಿರ್ವಾಹಸ್ಥಿತಿಗೆ ತಂದು ನಿಲ್ಲಿಸಿ, ೧೮೮೧ ನೇ ಇಸವಿಯಲ್ಲಿ ರಾಜ್ಯಾಧಿಕಾರವನ್ನು ಹಿಂತಿರಿಗಿ ಕೊಟ್ಟದ್ದರಿಂದಲೂ ಚಕ್ರವರ್ತಿನಿಯವರು ಮತ್ತು ಅವರ ಗವರ್ನಮೆಂಟಿನವರು, ಸಾಮಾನ್ಯವಾಗಿ ಇಂಡಿಯಾದೇಶದ ಜನರೆಲ್ಲರಿಗೂ, ವಿಶೇಷವಾಗಿ ಮೈಸೂರು ಸಂಸ್ಥಾನದ ಪ್ರಜೆಗಳಿಗೂ ಎಂದಿಗೂ ಸ್ಮರಿಸಬೇಕಾದ ಮಹೋಪಕಾರವನ್ನು ಮಾಡಿದ್ದಾರೆ. ಅವರ ರಾಜ್ಯದಲ್ಲಿ ಜೀವಿಸುವ ಕೋಟ್ಯಂತರ ಪ್ರಜೆಗಳಲ್ಲಿ ಚಕ್ರವರ್ತಿನಿಯವರಿಗೆ ಇರುವ ಅನುರಾಗವು ಅಗಾಧವಾಗಿಯೂ ಅಪಾರವಾಗಿಯೂ ಇದೆ. ರಾಜ್ಯದಲ್ಲಿ ಎಲ್ಲಿ ವಾಸಮಾಡುವವರಾಗಲಿ ಯಾವಜಾತಿ ಮತಕ್ಕೆ ಸೇರಿದವರಾಗಲಿ ವ್ಯಥೆಪಡುತ್ತಲಿರುವ ತಮ್ಮ ಪ್ರಜೆಗಳಿಗೆ ಚಕ್ರವರ್ತಿನಿಯವರು ತೋರಿಸುವ ದಯೆಯಿಂದಲೂ ಮಾಡುವ ಉಪಕಾರದಿಂದಲೂ ಈ ಅನುರಾಗವು ವ್ಯಕ್ತವಾಗುತ್ತೆ. ಈ ವಿಷಯದಲ್ಲಿ ಇಂಡಿಯಾದೇಶದ ಕೆಲವು ಭಾಗಗಳಲ್ಲಿ ಹರಡಿಕೊಂಡಿರುವ ಕ್ಷಾಮ, ಮತ್ತು ಪ್ಲೇಗ್ ಎಂಬ ಉಪದ್ರವಗಳಿಂದ ಪೀಡಿತರಾದ ಜನರಲ್ಲಿ ಚಕ್ರವರ್ತಿನಿಯವರು ತೋರಿಸಿರುವ ದಯೆಯನ್ನು ದೃಷ್ಟಾಂತವಾಗಿ ತಿಳಿಸಿದರೆ ಸಾಕಾಗಿದೆ. ವಿಪತ್ತಿನಿಂದ ಪೀಡಿತರಾದ ಜನರ ವಿಷಯದಲ್ಲಿ ಚಕ್ರವರ್ತಿನಿಯವರು ತಮಗೆ ಇರುವ ಅನುರಾಗವನ್ನು ದೃಢೀಕರಿಸಿ ಪದೇಪದೇ ಮಾಡುವ ವಿಚಾರಣೆಗಳಿಂದಲೇ ಅನೇಕವೇಳೆ ನಾವು ಅವರ ಸ್ಮರಣೆಯಲ್ಲಿರುತ್ತೇವೆಂದು ಗೊತ್ತಾಗುತ್ತೆ. ಮೈಸೂರು ಸಂಸ್ಥಾನದಲ್ಲಿರುವ ಜನರು ಈ ಮಹೋತ್ಸವವನ್ನು ನಡಿಸುವದರಲ್ಲಿ ಅಪಾರ್ಥಿತವಾದ ಅತ್ಯುತ್ಸಾಹ ಸಂತೋಷಯುಕ್ತರಾಗಿ, ಈಗ್ಯೆ ಮೈಸೂರು ರಾಜವಂಶಸ್ಥರಿಗೂ ಅವರ ಪ್ರಜೆಗಳಿಗೂ ಇಂಡಿಯಾಚಕ್ರವರ್ತಿನಿಯವರಲ್ಲಿಯೂ ಅವರ ಅಧಿಪತ್ಯದಲ್ಲಿಯೂ ಇರುವ ಭಕ್ತಿ ವಿಶ್ವಾಸಗಳನ್ನು ಹೊರಪಡಿಸಿದ್ದು ಶ್ರೀಮನ್ಮಹಾರಾಣಿ ರೀಜಂಟರವರಿಗೆ ಬಹು ಸಮರ್ಪಕವಾದ ಅಂಶವಾಗಿದೆ. ಈಪ್ರಕಾರ ಸದ್ಗುಣಗಳಿಂದ ಕೂಡಿದ ಚಕ್ರವರ್ತಿನಿಯವರು ಇನ್ನೂ ಬಹುಕಾಲ ರಾಜ್ಯಾಧಿಕಾರವನ್ನು ಮಾಡುತ್ತಿರಬೇಕೆಂದು ಸಮಸ್ತರೂ ಹಾರೈಸಬೇಕು. ಮತ್ತು ಅವರು ಇನ್ನೂ ದೀರ್ಘಾಯುಸ್ಸುಳ್ಳವರಾಗಿರು

ವದಕ್ಕೂ ಇನ್ನೂ ಸುಖದಿಂದ ಸಾಮ್ರಾಜ್ಯವಂಗೈಯುವದಕ್ಕೂ ದೇವರಲ್ಲಿ ಕುತೂಹಲದಿಂದ ಸಾರ್ಥನೆಯನ್ನು ಮಾಡಬೇಕೆಂದು ಬೇಡುತ್ತೇನೆ.

ಪಿಪ್ಪಣಿ.

ತರಗತಿ IV.] [ಕಾಲ 45 ನಿಮಿಷ.

ಭೂಗೋಳ.

ಉಪಕರಣಗಳು:—ಏಷ್ಯಾಭೂಪಠ: ಕೊಡೆಗಾಗಿ ಬರೆದ ಆಫ್ಘಾನಸ್ಥಾನದ ಪಠ.

ವಿಷಯಗಳು.	ಬೋಧನಕ್ರಮ.
ಆಫ್ಘಾನಸ್ಥಾನ.	
1. ಸಾಮಾನ್ಯವಿಷಯ.	ಪ್ರಶ್ನೆಮಾಡಿ ಹುಡುಗರಿಂದ ಹೇಳಿಸುವದು.
ಇದು ಇರ್ತಾ ಪ್ರಸ್ಥಭೂಮಿಯ ಪೂರ್ವಭಾಗ.	ಹಿಂದೂಸ್ಥಾನವೆಂಬ ಶಬ್ದವನ್ನು ಜ್ಞಾಪಿಸಿ ಇದನ್ನು ಅವರಿಂದಲೇ ಹೇಳಿಸುವುದು. ಹಲಗೆಯಮೇಲೆ ಬರೆಯುವುದು.
ಆಫ್ಘಾನಸ್ಥಾನವೆಂದರೆ ಆಫ್ಘನರ ವಾಸಸ್ಥಳವೆಂದು ಅರ್ಥ.	
2. ಎಲ್ಲೆಗಳು, ಗಾತ್ರ, ಜನಸಂಖ್ಯೆ	ಭೂಪಠದ ಸಹಾಯದಿಂದ ಹೇಳಿಸಿ ಇಬ್ಬರು ಮೂವ್ವರಿಂದ ಆವೃತ್ತಿ ಮಾಡಿಸುವುದರಿಂದ ಮಂದಟ್ಟು ಮಾಡುವುದು. ಹಲಗೆಯಮೇಲೆ ಬರೆಯುವುದು.
(i) ಉತ್ತರ— ತುರ್ಕಿಸ್ಥಾನ ಮತ್ತು ಆಕ್ಸಸನದಿ.	
ಪೂರ್ವ—ಚೈನಾರಾಜ್ಯ, ಇಂಡಿಯಾ	
ದಕ್ಷಿಣ—ಬೆಲೂಚಿಸ್ಥಾನ.	
ಪಶ್ಚಿಮ—ಪರ್ಷಿಯಾ.	
(ii) ಸುಮಾರು 280,000 ಚದರಮೈಲಿ ಅಂದರೆ ಮೈಸೂರಿನ ಹತ್ತರಷ್ಟು.	ಭೂಪಠದಲ್ಲಿ ಮೈಸೂರು ಸಂಸ್ಥಾನಕ್ಕೆ ಹೋಲಿಸುವುದರಿಂದ ಅವರಿಂದಲೇ ಹೇಳಿಸುವುದು. ಹಲಗೆಯಮೇಲೆ ಬರೆಯುವುದು.
(iii) ಜನಸಂಖ್ಯೆ 50 ಲಕ್ಷ.	ಮೈಸೂರಿಗಿಂತ ಸ್ವಲ್ಪ ಹೆಚ್ಚೆಂದು ಹೇಳಿ ಜ್ಞಾಪಕ ನಿಲ್ಲುವಂತೆ ಮಾಡುವುದು. ಹಲಗೆಯಮೇಲೆ ಬರೆಯುವುದು.

3. ಭೂಸ್ವರೂಪ.
ಪರ್ವತಮಯವಾಗಿರುವುದು.

ಭೂಪಠವನ್ನು ತೋರಿಸಿ ಅವರಿಂದ ಹೇಳಿಸಿ $\frac{4}{5}$ನೇ ಭಾಗವು ಪರ್ವತಗಳಿಂದ ತುಂಬಿದೆಯೆಂದು ತಿಳಿಸುವುದು.

ಇವುಗಳೆಲ್ಲಿ ಮುಖ್ಯವಾದವುಗಳು.

ಹಿಂದೂಕುಷ್—ಇದರಿಂದ ಪಶ್ಚಿಮಕ್ಕೆಹೋಗುವ ಕೋಹಿಬಾಬಾ, ಸಫೆದ್ ಕೊ, ಸಿಯಾಕೊ.

ಸುಲಿಮಾ—ಇದರಲ್ಲಿ ತಕ್ತ್ಸುಲಿಮಾ ಎಂಬುದು ಉನ್ನತಶಿಖರ—$2\frac{1}{4}$ ಮೈಲಿ ಎತ್ತರ.

ಇವುಗಳನ್ನು ಭೂಪಠದಲ್ಲಿ ತೋರಿಸುವುದು. ಹಲಗೆಯಮೇಲೆ ಬರೆಯುವುದು. ಶಿಖರದ ಎತ್ತರವನ್ನು ಮಂದಟ್ಟುಮಾಡುವುದಕ್ಕಾಗಿ ಹಿಮವತ್ಪರ್ವತದ ಶಿಖರಕ್ಕೆ ಹೋಲಿಸಬೇಕು ಬೇರೆಯಾಗಿ ಬರೆದ ಭೂಪಠದಲ್ಲಿ ಇವುಗಳನ್ನು ಗುರ್ತು ಮಾಡಬೇಕು.

ಉತ್ತರದಲ್ಲಿ ಬಿದ್ದ ನೀರೆಲ್ಲ ಆಕ್ಸಸ್ ನದಿಗೂ, ಪೂರ್ವದಲ್ಲಿ ಬಿದ್ದುದು ಕಾಬೂಲ್ ನದಿಯ ಮೂಲಕ ಸಿಂಧೂನದಿಗೂ, ದಕ್ಷಿಣದ್ದು ಹೆಲ್‌ಮಂದ್ ನದಿಗೂ, ಮಧ್ಯದ್ದು ಹೀರಾಟ್ ಹೋಗುವುದು. ಇದರಿಂದ ದೇಶವನ್ನು ಈ ನಾಲ್ಕು ಭಾಗಗಳನ್ನಾಗಿ ವಿಂಗಡಿಸಬಹುದು.

ಆಯಾನದಿಗಳನ್ನು ಭೂಪಠದಲ್ಲಿ ತೋರಿಸಿ ಈ ವಿಷಯಗಳನ್ನು ತಿಳಿಸಬೇಕು. ನಾಲ್ಕುಭಾಗಗಳೆಂಬುದನ್ನು ಹಲಗೆಯಮೇಲೆ ಬರೆಯಬೇಕು. ಕಾಬೂಲ್ ನದಿಯು ಈ ದೇಶದಲ್ಲಿ ಮುಖ್ಯವಾದುದೆಂಬುದನ್ನು ಮಂದಟ್ಟುಮಾಡುವುದು.

ಪರ್ವತಗಳ ಮಧ್ಯದಲ್ಲಿ ಇಂಡಿಯಾಕ್ಕೆ ಬರುವ ದಾರಿಗಳಿವೆ. ಇವುಗಳಲ್ಲಿ ಮುಖ್ಯವಾದವು :

(i) ಖೈಬರ್‌ಪಾಸ್— ಪೇಷಾವರಿಂದ ಜಲಾಲಾಬಾದಿಗೆ.

(ii) ಕುರುಂಪಾಸ್—ಮಧ್ಯದಲ್ಲಿ

(iii) ಬೋರ್ಲ್‌ಪಾಸ್—ದಕ್ಷಿಣದಲ್ಲಿ.

ಇದನ್ನು ತಿಳಿಸುವದು— ಇಂಡಿಯಾಕ್ಕೆ ಸಮುದ್ರವನ್ನು ಬಿಟ್ಟರೆ ಇದೇ ದಾರಿಯೆಂದು ಅವರಿಂದಲೇ ಹೇಳಿಸಿ, ಇಂಗ್ಲೀಷಿನವರು ಇದಕ್ಕಾಗಿ ಆಫ್‌ಘಾನಸ್ಥಾನದ ವಿಷಯವಾಗಿ ಜಾಗರೂಕರಾಗಿದಾರೆಂದು ಹೇಳಿಸಬೇಕು.

ಮೂರು ದಾರಿಗಳನ್ನೂ ಪಠದಲ್ಲಿ ತೋರಿಸಬೇಕು. ಬೇರೆಯಾಗಿ ಬರೆದಿರುವ ಪಠದಲ್ಲಿ ಬರೆಯಬೇಕು. ಹಲಗೆಯನ್ನೂ ಉಪಯೋಗಿಸಬೇಕು.

4. ಹವಾ, ಬೆಳೆ.

ಬೇಸಿಗೆಯಲ್ಲಿ ವಿಶೇಷ ಶಖೆ, ಚಳಿಗಾಲದಲ್ಲಿ ವಿಶೇಷ ಚಳಿ, ಹಣ್ಣುಗಳು ಸ್ವಲ್ಪಮೆಟ್ಟಿಗೆ ಧಾನ್ಯಗಳು ಬೆಳೆಯುವುವು.

5. ಜನಗಳು.

ಒರಟೂ, ಒಳ್ಳೇವರು ಆದರೆ ಕೋಪಬಂದರೆ ಕ್ರೂರಕೃತ್ಯಗಳನ್ನು ಮಾಡುವರು.

ರೇಷ್ಮೆ, ಹಂಬಾನ, ಇಂಗು, ಹಣ್ಣುಗಳು ಇವುಗಳನ್ನು ಪರದೇಶಕ್ಕೆ ಕಳುಹಿಸುವರು. ವ್ಯವಸಾಯ ಕಡಮೆ—ಪಶುಪಾಲನೆ ಹೆಚ್ಚು—ವ್ಯಾಪಾರ ಕಡಮೆ.

6. ಪಟ್ಟಣಗಳು

ಹೀರಾಟ್, ಕಾಬೂಲ್, ಕಂದಹಾರ್ ಈ ಮೂರೇ ಮುಖ್ಯವಾದ ಪಟ್ಟಣಗಳು. ಜನಗಳು ಪಟ್ಟಣದಲ್ಲಿ ವಾಸಮಾಡುವುದು ಕಡಮೆ.

ರಾಜ್ಯಭಾರ ಚೆನ್ನಾಗಿಲ್ಲ.

ದೊಡ್ಡ ಪರ್ವತಗಳಿರುವುದನ್ನು ಜ್ಞಾಪಿಸಿ ಇದನ್ನು ಅವರಿಂದ ಹೊರಡಿಸಬೇಕು.

ತಿಳಿಸುವುದು.

ಹಲಗೆಯಮೇಲೆ ಬರೆಯುವುದು.

ಅರಬ್ಬಿಯವರೆಂದು ಈ ದೇಶಕ್ಕೆ ಬರುವವರನ್ನು ಜ್ಞಾಪಿಸಬೇಕು.

ಇದನ್ನು ತಿಳಿಸುವುದು.

ಹಲಗೆಯ ಮೇಲೆ ಬರೆಯುವುದು.

ಭೂಸ್ವರೂಪದಿಂದ ಹೇಳಿಸುವುದು.

ಭೂಪಠದಲ್ಲಿ ತೋರಿಸುವುದು. ಹಲಗೆಯ ಸಹಾಯದಿಂದ ಈ ಪಟ್ಟಣಗಳು

ಹೀರಾಟ್ ಕಾಬೂಲ್

ಂದಹಾರ್

ಹೀಗೆ ಇರುವುದೆಂದು ಹೇಳಿ ಜ್ಞಾಪಕನಿಲ್ಲುವಂತೆ ಮಾಡುವುದು—ಬೇರೆಯವಾಗಿರುವ ಭೂಪಠವನ್ನು ಪಯೋಗಿಸಬೇಕು.

ಹಲಗೆಯಮೇಲೆ ಬರೆಯಬೇಕು.

ಅನುಕೂಲವಿದ್ದರೂ ವ್ಯಾಪಾರ ಕಡಮೆಯಾದುದರಿಂದ ಎಂದು ಅವರಿಂದ ಹೇಳಿಸಬೇಕು.

ಪುನರಾವರ್ತನೆ ಮಾಡಿಸಬೇಕು.

ಆನರಬಲ್ ಮೆ॥ ಡಿ. ಡಂಕ್ಕ, ಎಂ. ಎ, ಡಿ. ಎಸ್. ಸಿ. ಎಲ್ ಎಲ್. ಡಿ, ರವರು.

ಆನರಬಲ್ ಡಂಕ್ಕರವರು ಮದರಾಸ್ ಅಧಿಪತ್ಯದ ವಿದ್ಯಾಭ್ಯಾಸದ ಇಲಾಖೆಗೆ ಡೈರೆಕ್ಟರಾಗಿರುವದಲ್ಲದೆ ಕಳೆದ ೩೭ ವರುಷಗಳಿಂದ ದಕ್ಷಿಣ ಇಂಡಿಯಾದಲ್ಲಿ

ವಿದ್ಯಾಭಿವೃದ್ಧಿಗೆ ಅನ್ಯಾದೃಶವಾದ ಪ್ರೋತ್ಸಾಹವನ್ನು ಉಂಟುಮಾಡುತ್ತಲಿರುವದರಿಂದ ಇವರ ಚರಿತ್ರೆಯು ವಿದ್ಯಾಭಿಮಾನಿಗಳಿಗೆಲ್ಲರಿಗೂ ಶ್ರೋತವ್ಯವಾಗಿರುವದು. ಆದುದರಿಂದ ಇವರ ವಿಷಯವನ್ನು ಸಂಗ್ರಹವಾಗಿ ತಿಳಿಸುತ್ತೇವೆ.

ಡಾಕ್ಟರ್ ಡಂಕರವರು ೧೮೩೯ ನೇ ಇಸವಿ ನವಂಬರ್ ೫ ನೇ ತಾರೀಖಿನಲ್ಲಿ ಸ್ಕಾಟ್ಲೆಂಡ್ ದೇಶದಲ್ಲಿರುವ ಅಬರ್ಡೀನ್ ಪಟ್ಟಣದಲ್ಲಿ ಜನಿಸಿದರು. ನಾಲ್ಕನೇ ವರುಷದಲ್ಲಿ ಇವರಿಗೆ ಮಾತೃವಿಯೋಗವಾಯಿತು. ಇವರಿಗೆ ೧೦ ವರುಷವಾದಕೂಡಲೇ ಇವರ ತಂದೆಗಳೂ ಕಾಲಾಧೀನರಾದರು. ಚಿಕ್ಕಂದಿನಿಂದ ಇವರಿಗೆ ಓದುವದರಲ್ಲಿಯೂ ಚಿತ್ರಬರೆಯುವದರಲ್ಲಿಯೂ ವಿಶೇಷ ಆಸಕ್ತಿಯು ಇರುತ್ತಿತ್ತು. ಇವರ ಸಹಪಾಠಿಗಳು ನಾನಾವಿಧವಾದ ಆಟಗಳಲ್ಲಿ ಆಸಕ್ತರಾಗಿರುವಾಗ ಇವರು ಹೊಸ ಹೊಸ ಪುಸ್ತಕಗಳನ್ನು ಓದುತ್ತಾ ಕಾವ್ಯಾಮೃತಸೇವನೆಯಲ್ಲಿ ಆಸಕ್ತರಾಗಿದ್ದರು. ಇವರ ಜ್ಞಾಪಕಶಕ್ತಿಯು ಅತ್ಯದ್ಭುತವಾಗಿದ್ದು. ನಾಲ್ಕನೇ ವಯಸ್ಸಿನಲ್ಲಿಯೇ ಇವರು ಅನೇಕ ಪದ್ಯಕಾವ್ಯಗಳನ್ನು ಕಂಠಪಾಠ ಮಾಡಿದ್ದರು. ಹತ್ತು ವರುಷ ತುಂಬುವದರೊಳಗಾಗಿ ಇವರಿಗೆ ಬರುತ್ತಿದ್ದಷ್ಟಿಗೆ ವಾಙ್ಮೋವಿಧೇಯವಾಗಿ ಗ್ರಂಥಗಳು ಇವರ ಸಹಪಾಠಿಗಳಿಗೆ ಯಾರಿಗೂ ಬರುತ್ತಿರಲಿಲ್ಲ. ೧೮೬೬ ನೇ ವರುಷದಲ್ಲಿ ಇವರು ಎಡಿಂಬರ್ಗೋ ಯೂನಿವರ್ಸಿಟಿ ಎಂ. ಎ. ಪರೀಕ್ಷೆಯನ್ನು ಕೊಟ್ಟರು. ಎಂ. ಎ. ಪರೀಕ್ಷೆಯನ್ನು ಕೊಟ್ಟವರು ತಾವು ಸಕಲವಿದ್ಯಾಪಾರಂಗತರೆಂದು ತಿಳಿದುಕೊಳ್ಳುವದುಂಟು. ಡಾಕ್ಟರ್ ಡಂಕರವರು ಹೀಗೆ ತಿಳಿದುಕೊಳ್ಳಲಿಲ್ಲ. ಎಂ. ಎ. ಪರೀಕ್ಷೆಯನ್ನು ಕೊಟ್ಟಕೂಡಲೇ ತಾವು ತಿಳಿದುಕೊಳ್ಳತಕ್ಕ ಅಂಶಗಳು ಅಖಂಡವಾಗಿವೆ ಎಂಬದಾಗಿಯೂ ತಿಳಿದುಕೊಳ್ಳತಕ್ಕ ಅಂಶಗಳಲ್ಲಿ ಒಂದು ಅಣುಮಾತ್ರವೂ ತಿಳಿಯದು ಎಂಬದಾಗಿಯೂ ತಾವು ಕೊಟ್ಟ ಪರೀಕ್ಷೆಯಿಂದ ಮುಂದೆ ಈರೀತಿಯಲ್ಲಿ ವ್ಯಾಸಂಗವಾಡಬೇಕೆಂಬ ಮಾರ್ಗ ಮಾತ್ರ ಗೊತ್ತಾಯಿತೆಂಬದಾಗಿಯೂ ತಿಳಿದುಕೊಂಡು ಆಗ ಕ್ರಮವಾಗಿ ವಿದ್ಯಾವ್ಯಾಸಂಗವನ್ನು ಮಾಡುವದಕ್ಕೆ ಉಪಕ್ರವಿಸಿದರು. ಗ್ರೀಕ್ ಭಾಷೆಯನ್ನು ವೇದಾಂತವನ್ನು ಕೆಲವು ವರುಷಗಳವರಿಗೂ ಅಭ್ಯಾಸ ಮಾಡಿದರು. ಅನಂತರ ಹೀಬ್ರೂಭಾಷೆ ಸೀರಿಯಾ ದೇಶದ ಭಾಷೆ ಈ ಭಾಷೆಗಳಲ್ಲಿ ಆಧ್ಯಾತ್ಮಿಕವಿಷಯವಾದ ಗ್ರಂಥಗಳು ಇವುಗಳನ್ನೆಲ್ಲಾ ಅಭ್ಯಾಸಮಾಡಿದರು. ೧೮೬೬ ನೇ ಇಸವಿಯಲ್ಲಿ ಪ್ರೊಫೆಸರ್ ಬ್ರೇಕ್ ಸಾಹೇಬರವರು

ಅಬರ್ಡೀನ್ ಕಾಲೇಜಿನಲ್ಲಿ ತರ್ಕ ವೇದಾಂತ ಮೊದಲಾದವುಗಳ ವಿಷಯದಲ್ಲಿ ಉಪನ್ಯಾಸ
ಗಳನ್ನು ಮಾಡುತ್ತಿದ್ದರು. ಅವರಲ್ಲಿ ಇವರು ಶಿಷ್ಯರಾಗಿ ಕೆಲವು ವರ್ಷಗಳಿದ್ದರು.
ಅನಂತರದಲ್ಲಿ ವಸ್ತು ಶಾಸ್ತ್ರ ಶಾರೀರಕಧರ್ಮಶಾಸ್ತ್ರ ಪ್ರಾಣಿಶಾಸ್ತ್ರಗಳನ್ನು
ಅಭ್ಯಾಸಮಾಡಿದರು. ಈ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಂಡು ಜರ್ಮ
ನೀದೇಶದಲ್ಲಿ ವಿದ್ಯಾಭ್ಯಾಸಮಾಡಬೇಕೆಂದು ಅಲ್ಲಿಗೆ ಹೋದರು. ಜರ್ಮನೀದೇಶಕ್ಕೆ ರಾ
ಜಧಾನಿಯೂದ ಬೆರ್ಲಿನ್ ಯೂನಿವರ್ಸಿಟಿಯಲ್ಲಿ ಉದ್ಭಿಜ್ಜ ಅಥವಾ ದೋಹಳಶಾಸ್ತ್ರವ
ನ್ನೂ ಮತ್ತು ವಸ್ತು ಶಾಸ್ತ್ರವನ್ನೂ ಪ್ರೊಫೆಸರ್ ಬಾಕ್ ಮತ್ತು ಪ್ರೊಫೆಸರ್ ಹಾಸ್ಕ್
ರವರಬಳಿಯಲ್ಲಿ ವ್ಯಾಸಂಗಮಾಡಿದರು. ಜರ್ಮನಿಯಲ್ಲಿ ತಮ್ಮ ಉದ್ದೇಶ್ಯದಂತೆ ವಿದ್ಯಾ
ಭ್ಯಾಸವನ್ನು ಮುಗಿಸಿಕೊಂಡು ವಿಲಾಯತಿಗೆ ದಯಮಾಡಲು ಪ್ರೊಫೆಸರ್ ಮ್ಯೂರ್ಸ್ಕರ
ವರ ಶಿಫಾರ್ಸ್‌ಮೇಲೆ ಮೆ॥ ಹರ್ಬರ್ಟ್‌ಸ್ಪೆನ್ಸರವರ ಪ್ರೈವೆಟ್ ಸೆಕ್ರಟೆರಿ ಕೆಲಸವು ಇವರಿಗೆ
ದೊರೆಯಿತು ಸಾಮಾನ್ಯರಾದ ಜನರಿಗೆ ಇದೊಂದು ದೊಡ್ಡಪದವಿಯಲ್ಲ. ಆದರೆ
ಡಾಕ್ಟರ್ ಡಂಕ್ಕರವರಿಗೆ ಇದು ಅನ್ಯಾದೃಶವಾದ ಭಾಗ್ಯವಾಗಿ ಪರಿಣಮಿಸಿತು.
ಈಗ ಭೂಮಂಡಲವನ್ನು ಅಲಂಕರಿಸತಕ್ಕ ವಿದ್ವಾಂಸರಲ್ಲಿ ಸಕಲಶಾಸ್ತ್ರ ವಿಶಾರದತ್ವ
ವನ್ನು ಸ್ಪೆನ್ಸರವರಂತೆ ಪಡೆದಿರತಕ್ಕವರು ಬಹಳ ಅಪೂರ್ವರಾಗಿರುತ್ತಾರೆ. ಇಂಥಾ
ವರ ಸಹವಾಸವು ಸೇವೆಯು ಸಿಕ್ಕುವದು ಬಹಳಕಷ್ಟ. ಡಾಕ್ಟರ್ ಡಂಕ್ಕರವರಿಗೆ
ಬರವರಿಗೆ ಈ ಮಹನೀಯರ ಸಹವಾಸವೂಮಾತ್ರವಲ್ಲದೆ ಅವರು ಬರೆಯತಕ್ಕ ಬೋ
ಕೋತ್ತರವಾದ ಗ್ರಂಥಗಳಿಗೆ ಸಹಾಯಭೂತರಾಗತಕ್ಕ ಅವಕಾಶವೂ ದೊರೆಯಿತು.
ಈಸೆಕ್ರಟೆರಿ ಕೆಲಸವನ್ನು ಪಡೆದಿದ್ದದರಿಂದ ಇವರು ಲಂಡನ್‌ಪಟ್ಟಣದಲ್ಲಿ ವಾಸಮಾಡುವ
ದಕ್ಕೆ ಅವಕಾಶವಾಯಿತು. ಅಲ್ಲಿ ತಾವು ಪೂರ್ವಭಾವಿಯೂಗಿಯೇ ಆರ್ಜಿಸಿದ್ದ ವಿದ್ಯೆ
ಯನ್ನು ವಿಶೇಷ ವೃದ್ಧಿಪಡಿಸಿಕೊಳ್ಳುವದಕ್ಕೆ ಅವರಿಗೆ ಅವಕಾಶಉಂಟಾಯಿತು.

೧೮೫೦ ನೇ ಇಸವಿಯಲ್ಲಿ ಡಾಕ್ಟರ್ ಡಂಕ್ಕ ಸಾಹೇಬರವರಿಗೆ ಮದರಾಸ್
ಪ್ರೆಸಿಡೆನ್ಸಿ ಕಾಲೆಜಿನಲ್ಲಿ ತರ್ಕವನ್ನೂ ಧರ್ಮಶಾಸ್ತ್ರವನ್ನೂ ಬೋಧಿಸತಕ್ಕ ಪ್ರೊಫೆಸರ್
ಪದವಿಯು ದೊರೆಯಿತು. ಈ ಪದವಿಗೆ ಪ್ರೊಫೆಸರ್‌ಬೋಡ್ಕ್ ಸಾಹೇಬರವರು ಇವರನ್ನು
ಶಿಫಾರಸ್ಮಾಡಿದರು. ೧೮೫೦ ನೇ ಇಸವಿ ಮೇ ೧೦ ನೇ ತಾರೀಕಿನಲ್ಲಿ ಡಾಕ್ಟರ್ ಡಂಕ್ಕ
ರವರು ಮದರಾಸಿಗೆ ದಯಮಾಡಿಸಿ ಪ್ರೆಸಿಡೆನ್ಸಿಕಾಲೇಜಿನಲ್ಲಿ ತರ್ಕ ಮತ್ತು ಧರ್ಮ
ಶಾಸ್ತ್ರಗಳನ್ನು ಬೋಧಿಸುವ ಲೆಕ್ಚರರಾದರು. ಇವರು ಬಂದಾಗ ಪಾಶ್ಚಾತ್ಯರು

ಧರ್ಮಶಾಸ್ತ್ರಗಳ ವಿಷಯದಲ್ಲಿ ಪಾಠಪ್ರವಚನಗಳಿಗೆ ತಕ್ಕಪುಸ್ತಕಗಳೂ ಸರಿಯೂದ ಏರ್ಪಾಡೂ ಇರಲಿಲ್ಲ. ಇವರು ಬಂದಮೇಲೆ ಈ ವಿಷಯದಲ್ಲಿ ಪ್ರೌಢನಾದ ಗ್ರಂಥಗಳು ಪರೀಕ್ಷೆಗಾಗಿ ನಿಯಮಿಸಲ್ಪಟ್ಟವು. ಇವರು ಲೆಕ್ಚರರಾದಕೂಡಲೆ ಧರ್ಮಶಾಸ್ತ್ರದ ಕಕ್ಷ್ಯೆದಲ್ಲಿ ಓದಬೇಕೆಂಬ ಅಭಿಪ್ರಾಯವುಳ್ಳ ವಿದ್ಯಾರ್ಥಿಗಳಸಂಖ್ಯೆಯು ಬಹಳವಾಗಿ ಹೆಚ್ಚಿತು. ೧೮೯೫ನೇ ಇಸವಿಯಲ್ಲಿ ಮದರಾಸ್ ಗೌರ್ನರವರಾದ ಸರ್. ಮೌಂಟ್ ಸ್ಟೂವರ್ಟ್ ಎಲ್ಫಿನ್‌ಸ್ಟನ್ ಗಾರ್ಡಿಪ್‌ರವರು ಪ್ರಸಿಡೆನ್ಸಿಕಾಲೇಜಿನ ವಿದ್ಯಾರ್ಥಿಗಳಿಗೆ ಬಹುಮಾನಕೊಡತಕ್ಕವೇಳೆಯಲ್ಲಿ ಧರ್ಮಶಾಸ್ತ್ರದ ತರಗತಿಯಲ್ಲಿ ಓದತಕ್ಕ ವರಸಂಖ್ಯೆಯು ಬಹಳ ಹೆಚ್ಚಾಗಿರುವದನ್ನುಕುರಿತು ಪ್ರಶಂಸೆ ಮಾಡತಕ್ಕ ವೇಳೆಯಲ್ಲಿ "ವಿದ್ಯಾರ್ಥಿಗಳು ಈ ಧರ್ಮಶಾಸ್ತ್ರದ ಕಕ್ಷ್ಯೆಯಲ್ಲಿ ವಿಶೇಷವಾಗಿ ಹೆಚ್ಚಿರುವದು ಏನೂಆಶ್ಚರ್ಯವಲ್ಲ. ಬ್ರಿಟಿಷ್‌ಪ್ರಪಂಚದಲ್ಲಿ ಅದ್ವಿತೀಯಪಂಡಿತರೆಂದು ಕೀರ್ತಿಯನ್ನು ಪಡೆದಿರತಕ್ಕ ಹರ್ಬರ್ಟ್‌ಸ್ಪೆನ್ಸರವರಲ್ಲಿಯೂ ಡಾಕ್ಟರ್ ಬೇರ್ಡರವರಲ್ಲಿಯೂ ಶಿಕ್ಷಣವನ್ನು ಮಾಡಿದ ಡಾಕ್ಟರ್ ಡಂಕ್ಕರವರ ಉಪನ್ಯಾಸವನ್ನು ಕೇಳುವದರಲ್ಲಿ ಇಂಥಾ ಶ್ರದ್ಧೆಯುಂಟಾಗುವದು ಏನುಆಶ್ಚರ್ಯ?" ಎಂದುಹೇಳಿದರು ೧೮೩೩ನೇ ಇಸವಿಯಲ್ಲಿ ಡಾಕ್ಟರ್ ಡಂಕ್ಕರವರು ಮದರಾಸ್ ಯೂನಿವರ್ಸಿಟಿಗೆ ಫೆಲೋಗಳಾಗಿ ನೇಮಿಸಲ್ಪಟ್ಟರು. ಡಾಕ್ಟರ್ ಡಂಕ್ಕರಸಾಹೇಬರವರು ಈ ದೇಶಕ್ಕೆ ಬಂದಮೇಲೂ ವಾಸ್ಯಸಂಗದ ವಿಷಯದಲ್ಲಿ ಉದಾಸೀನಮಾಡಲಿಲ್ಲ. ಇಲ್ಲಿಗೆ ಬಂದಕೂಡಲೆ ಈದೇಶ ಭಾಷೆಗಳಲ್ಲಿ ಯಾವದಾದರು ಒಂದರಲ್ಲಿ ಪರೀಕ್ಷೆಕೊಡಬೇಕೆಂಬ ನಿರ್ಬಂಧವು ಇವರಿಗೆಉಂಟಾಯಿತು. ದೇಶಭಾಷೆಗಳಲ್ಲಿ ಪರೀಕ್ಷೆ ಕೊಡುವದಕ್ಕಿಂತಲೂ ಈ ದೇಶಭಾಷೆಗಳಿಗೆಲ್ಲಾ ಮೊತೃಭಾಷೆಯೂದ ಸಂಸ್ಕೃತದಲ್ಲಿ ಪರೀಕ್ಷೆ ಕೊಡುವದರಿಂದ ಈ ಭಾಷಾಪರಿಚಯದಿಂದ ತಿಳಿದುಕೊಳ್ಳತಕ್ಕ ಶಾಸ್ತ್ರಾದಿಗಳನ್ನು ಅಭ್ಯಾಸಮಾಡುವದಕ್ಕೆ ಅವಕಾಶನಾಗುತ್ತದೆಂದು ಸಂಸ್ಕೃತವನ್ನೇ ಓದುವದಕ್ಕೆ ಉಪಕ್ರಮಿಸಿದರು. ೧೮೭೯ನೇ ಇಸವಿಯಲ್ಲಿ ಸಂಸ್ಕೃತದಲ್ಲಿ ಪರೀಕ್ಷೆಯನ್ನುಕೊಟ್ಟು ತೇರ್ಗಡೆಯಾದರು.

೧೮೭೫ನೇ ಇಸವಿಯಲ್ಲಿ ಇವರಿಗೆ ಮದರಾಸ್ ಯೂನಿವರ್ಸಿಟಿ ರಿಜಸ್ಟ್ರಾರ್ ಕೆಲಸವಾಯಿತು. ಮದರಾಸ್ ಯೂನಿವರ್ಸಿಟಿಗೆ ಫೆಲೊಗಳಾಗಿಯೂ ರಿಜಸ್ಟ್ರಾರಾಗಿಯೂ ಪ್ರೌಢವಿದ್ಯಾಭ್ಯಾಸದ ಪ್ರೋತ್ಸಾಹಕ್ಕಾಗಿ ಇವರು ಅನ್ಯಾದೃಶವಾದ ಸಹಾಯವನ್ನು ಮಾಡಿದಾರೆ. ಪ್ರಸಿಡೆನ್ಸಿ ಕಾಲೇಜಿನ ಪ್ರಿನ್ಸಿಪಲ್‌ರವರು

೧೮೮೨ನೇ ಇಸವಿಯಲ್ಲಿ ವಿಲಾಯತಿಗೆ ಹೊರಟುಹೋದರು. ಡಾಕ್ಟರ್ ಡಂಕರವರೇ ೧೮೮೪ನೇ ಇಸವಿಯವರಿಗೂ ಅವರ ಕೆಲಸವನ್ನು ನೋಡುತಿದ್ದರು. ಅನಂತರದಲ್ಲಿ ಅವರೇ ಪ್ರೆಸೀಡೆನ್ಸಿ ಕಾಲೇಜಿಗೆ ಪ್ರಿನ್ಸಿಪಲರಾಗಿ ನಿಯಮಿಸಲ್ಪಟ್ಟರು. ೧೮೮೯ನೇ ಇಸವಿಯಲ್ಲಿ ಇವರು ಸೀಮೆಗೆ ಹೋದರು. ಅಲ್ಲಿ ಎಡಿಂಬರೊ ಯೂನಿವರ್ಸಿಟಿಗೆ ಉಪನಿಷತ್ತುಗಳ ವಿಷಯದಲ್ಲಿ ಒಂದು ಗ್ರಂಥವನ್ನು ಬರೆದು ಆ ಯೂನಿವರ್ಸಿಟಿಗೆ ಒಪ್ಪಿಸಿದರು. ಯೂನಿವರ್ಸಿಟಿಯವರು ಇವರು ಒಪ್ಪಿಸಿದ ಗ್ರಂಥವನ್ನು ನೋಡಿ ಬಹಳ ಸಂತುಷ್ಟರಾಗಿ ಡಾಕ್ಟರಪ್‌ಸ್ಯೆಸ್ ಎಂಬ ಡಿಗ್ರಿಯನ್ನು ಇವರಿಗೆ ಕೊಟ್ಟರು. ಇವರು ಹಿಂದೂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕಾಗಿ ಮಾಡಿದ ಪ್ರೋತ್ಸಾಹಗಳಿಗಾಗಿ ೧೮೯೫ರಲ್ಲಿ ಅದೇ ಯೂನಿವರ್ಸಿಟಿಯವರು ಇವರಿಗೆ ಎಲ್ ಎಲ್. ಡಿ. ಡಿಗ್ರಿಯನ್ನು ಕೊಟ್ಟರು.

೧೮೮೫ನೇ ಇಸವಿ ಮೇ ತಿಂಗಳಲ್ಲಿ ಮದರಾಸ್ ಆಧಿಪತ್ಯಕ್ಕೆ ಪಬ್ಲಿಕ್ ಇನ್‌ಸ್ಟ್ರಕ್ಷನ್ ಡೈರೆಕ್ಟರಾಗಿದ್ದ ಮೆ॥ ಗ್ರಿಕ್‌ಸಾಹೇಬರವರು ರಜಾತೆಗೆದುಕೊಂಡರು ಆ ಲಾಗಾಯಿತು ೧೮೮೬ನೇ ಇಸವಿಯವರಿಗೂ ಆರು ವೇಳೆಗಳಲ್ಲಿ ಡಾಕ್ಟರ್ ಡಂಕರವರು ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರಗಳಾಗಿ ಇವರುಷ್ಟು ತಿಂಗಳು ಕಾಲ ಕೆಲಸವನ್ನು ಜರಿಗಿಸಿದರು. ೧೮೮೬ನೇ ಇಸವಿಯಲ್ಲಿ ಮೆ॥ ಗ್ರಿಕ್‌ಸಾಹೇಬರವರು ತಿರುವಾಂಕೂರು ಕೊಚ್ಚೀ ಸಂಸ್ಥಾನಗಳ ಬ್ರಿಟಿಷ್‌ರೆಸಿಡೆಂಟರಾಗಿ ನಿಯಮಿಸಲ್ಪಟ್ಟರು. ಆಗ ಡಾಕ್ಟರ್ ಡಂಕರ್‌ಸಾಹೇಬರವರಿಗೆ ಡೈರೆಕ್ಟರ್ ಕೆಲಸವು ಖಾಯಂ ಆಯಿತು. ಇವರು ಡೈರೆಕ್ಟರು ಕೆಲಸವನ್ನು ಬದಲಿಯಾಗಿ ನೋಡಿದ ಆರುಸಲವೂ ವಿದ್ಯಾಭ್ಯಾಸ ಇಲಾಖೆಯಲ್ಲಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಕಾರಿಯಾದ ಅನೇಕ ಹೊಸ ಯೋಜನೆಗಳನ್ನು ಮಾಡಿದರು. ಪ್ರಥಮತಃ ಬದಲಿಯಾಗಿ ನೋಡುತ್ತಿದ್ದಾಗ ಪ್ರತಿನಿಧಿಗಳಾದ ವಿದ್ವಾಂಸರನ್ನು ಸೇರಿಸಿ ಒಂದು ಕಮಿಟಿಯನ್ನು ಮಾಡಿ ಅವರೊಡನೆ ಯೋಚಿಸಿ ವಿದ್ಯಾಭ್ಯಾಸದ ಗ್ರಾಂಟಿನೇಡ್‌ಕೋಡನ್ನು ಕ್ರಮಪಡಿಸಿದರು. ಎರಡನೇಸೇ ಬದಲಿಯಾಗಿ ನೋಡುವಾಗ ನಾನಾವಿಧವಾದ ಶಿಲ್ಪವಿದ್ಯೆಗಳಿಗೆ ಪ್ರೋತ್ಸಾಹವನ್ನು ಕೊಡುವಂತತಕ್ಕ ಏರ್ಪಾಡುಗಳನ್ನು ಅನೇಕ ಶಿಲ್ಪವಿದ್ಯಾವಿಶಾರದರೊಡನೆ ಪರ್ಯಾಲೋಚಿಸಿ ಏರ್ಪಾಡನ್ನು ಮಾಡಿದರು. ಮೂರನೇವೇಳೆ ಪಾಠಶಾಲೆಗಳಲ್ಲಿ ಪಾಠವನ್ನು ಹೇಳುವದಕ್ಕೆ ತಕ್ಕ ಯೋಗ್ಯತೆಯುಳ್ಳ ಪಾಠಕರನ್ನು ತಯ್ಯಾರ್ಮಾಡುವದಕ್ಕೋಸ್ಕರ ಟ್

ರ್ಸ್‌ಕಾಲೆಜ್ಜ್ ಎಂಬುವದನ್ನು ಏರ್ಪಡಿಸಿದರು. ೧೯೧೯ನೇ ಇಸವಿಯಲ್ಲಿ ವಿದ್ಯಾಭ್ಯಾಸದ ಇಲಾಖೆಯ ರೂಲ್ಸ್‌ಗಳನ್ನು ಶೋಧಿಸಿ ಕ್ರಮಪಡಿಸುವದಕ್ಕೋಸ್ಕರ ಮದರಾಸ್ ಗೌರ್ನಮೆಂಟಿನವರು ಒಂದು ಕಮಿಟಿಯನ್ನು ಮಾಡಿದರು. ಇವರು ಆ ಕಮಿಟಿಯಲ್ಲಿ ಪ್ರೆಸಿಡೆಂಟರಾಗಿದ್ದುಕೊಂಡು ಇವರು ಏರ್ಪಡಿಸಿದ ರೂಲಿನಪ್ರಕಾರ ವಿದ್ಯಾಭ್ಯಾಸದ ಇಲಾಖೆಯ ಕೆಲಸಗಳೆಲ್ಲಾ ನಡೆಯುತ್ತಲಿವೆ ಸಾರಶಾಲೆಗಳಲ್ಲಿ ಓದತಕ್ಕ ವಿದ್ಯಾರ್ಥಿಗಳ ಸಂಬ್ಸಿಡಿ ದರಗಳ ವಿಷಯದಲ್ಲಿ ಮದರಾಸ್ ಗೌರ್ನಮೆಂಟಿನವರು ಕೆಲವು ರೂಲ್ಸ್‌ಗಳನ್ನು ಮಾಡಿಸಿದ್ದರು. ಆ ರೂಲ್ಸ್‌ಗಳ ಪ್ರಕಾರ ಸರ್ಕಾರಕ್ಕೆ ಸಂಬಂಧಪಡದೆ ಇರತಕ್ಕ ಪಾಠಶಾಲೆಗಳಿಗೆ ಕೆಲವು ನಿರ್ಬಂಧಗಳಿದ್ದವು ಸರ್ಕಾರದ ಸಹಾಯವನ್ನು ಹೊಂದದೇ ಇರತಕ್ಕ ಪಾಠಶಾಲೆಗಳ ವಿಷಯದಲ್ಲಿ ಸರ್ಕಾರದವರು ಫೀಜುವಗೈರೆ ವಿಷಯಗಳಲ್ಲಿ ನಿರ್ಬಂಧರೂಪವಾದ ರೂಲ್ಸ್‌ಗಳನ್ನು ಮಾಡುವದು ಸಮಂಜಸವಲ್ಲವೆಂದು ಡಾ॥ ಡಂಕ್ಯಸಾಹೇಬರವರು ಮದರಾಸ್ ಗೌರ್ನಮೆಂಟಿಗೆ ತಿಳಿಸಿ ಆ ನಿರ್ಬಂಧಗಳನ್ನು ತಪ್ಪಿಸಿದರು. ೧೯೧೦—೧೧ನೇ ಇಸವಿಗಳಲ್ಲಿ ವ್ಯವಸಾಯಸಂಬಂಧವಟ್ಟ ವಿದ್ಯಾಭ್ಯಾಸಕ್ಕೋಸ್ಕರ ನಿರ್ಪಡಿಸಲ್ಪಟ್ಟ ಅಗ್ರಿಕಲ್ಚರಲ್ ಕಾಲೆಜ್ಜಿನ ಪಾಠಪ್ರವಚನಗಳನ್ನು ಗೊತ್ತುಮಾಡುವದಕ್ಕೆ ಒಂದು ಕಮಿಟಿ ಏರ್ಪಡಿಸಲ್ಪಟ್ಟತ್ತು. ಇವರು ಈ ಕಮಿಟಿಗೆ ಪ್ರಸಿಡೆಂಟರಾಗಿದ್ದುಕೊಂಡು ಡಾಕ್ಟರ್ ಡಂಕ್ಯಸಾಹೇಬರವರು ಅಗ್ರಿಕಲ್‌ಚರಲ್ ಕಾಲೆಜ್ಜಿನ ಏರ್ಪಾಡುಗಳನ್ನು ಕ್ರಮಪಡಿಸಿದರು. ೧೯೧೧ನೇ ಇಸವಿಯಲ್ಲಿ ಟೀಚರ್ಸ್‌ಸರ್ಟಿಫಿಕೇಟ್ ಪರೀಕ್ಷೆಗಳಿಗೆ ಆವಶ್ಯಕವಾದ ರೂಲ್ಸ್‌ಗಳನ್ನು ಏರ್ಪಡಿಸಿ ವಿದ್ಯಾಭ್ಯಾಸದ ಕಾನೂನಿಗೆ ಸೇರಿಸಿದರು. ಶಿಲ್ಪವಿದ್ಯಾಭ್ಯಾಸದ ವಿಷಯದಲ್ಲಿ ಕೆಲವು ಬದುಲಾವಣೆಗಳು ಆವಶ್ಯಕವೆಂದು ತೋರಿದ್ದರಿಂದ ೧೯೧೬ನೇ ಇಸವಿಯಲ್ಲಿ ಡಾಕ್ಟರ್ ಡಂಕ್ಯಸಾಹೇಬರವರು ಬಹಳ ಕುಶಲರಾದ ಶಿಲ್ಪಿಗಳನ್ನು ಕರಸಿಕೊಂಡು ಆ ವಿದ್ಯಾಭ್ಯಾಸದ ಕ್ರಮವನ್ನು ಅವರ ತಾತ್ಪರ್ಯಗಳಿಗನುಸಾರವಾಗಿ ಏರ್ಪಾಡುಮಾಡಿದರು. ೧೯೧೩ನೇ ಇಸವಿಯಲ್ಲಿ ಪೂರ್ವದ ಮಿಡಲ್‌ಸ್ಕೂಲ್ ಪರೀಕ್ಷೆಯಲ್ಲಿ ಕೆಲವು ಬದುಲಾವಣೆಗಳನ್ನು ಯೂನಿವರ್ಸಿಟಿ ಪರೀಕ್ಷೆಗೆ ಹೋಗತಕ್ಕವರಿಗೆ ಅನುಕೂಲವಾಗಿರುವಂತೆ ಮಾಡಿ ಲೋವರ್ ಸೆಕಂಡರಿ ಪರೀಕ್ಷೆ ಎಂಬ ಅಭಿಧಾನದಿಂದ ಅಚರಣೆಗೆ ತಂದರು. ಅಪ್ಪರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿದ್ದ ಪಾಠಕ್ರಮಗಳನ್ನು ಅನೇಕ ವಿದ್ವಾಂಸರೊಡನೆ ಪರ್ಯಾಲೋಚಿಸಿ ಸರ್ವರಿಗೂ ಸಮರ್ಪಕನಾಗಿರುವಂತೆ ಬದುಲಾಯಿಸಿದರು. ಸರಾ ರದ

ಉದ್ಯೋಗಗಳನ್ನು ಪರೀಕ್ಷೆಕೊಟ್ಟವರಿಗೆ ವಿನಾ ಇತರರಿಗೆ ಕೊಡದೇ ಇರುವಂತೆ ರೂಲ್ಸು
ಗಳನ್ನು ಏರ್ಪಡಿಸಿದರು. ಗ್ರಾಮಾಂತರಗಳಲ್ಲಿ ಪಾಠಶಾಲೆಗಳಿಗೆ ವಿದ್ಯಾರ್ಥಿಗಳ ಅಭಿ
ವೃದ್ಧಿಗೆ ಅನುಸಾರವಾಗಿ ಕೊಡತಕ್ಕ ರಿಜಲ್ಟ್ ಗ್ರಾಂಟ್ ಏರ್ಪಾಡನ್ನು ಮಾಡಿಸಿದರು.
ಆರ್ಥಸ್ಥಿತಿಯಲ್ಲರತಕ್ಕ ಕನಿಷ್ಠ ವರ್ಣಾಶ್ರಮದವರಿಗೆ ಸುಲಭನಾಗಿ ವಿದ್ಯಾಭ್ಯಾಸವಾಗು
ವಂತೆ ಏರ್ಪಾಡುಗಳನ್ನು ಮಾಡಿದರು. ಹದಿನೈದುರೂಪಾಯಿ ಮೊದಲ್ಗೊಂಡು
ಇನ್ನೂರು ರೂಪಾಯಿಗಳವರಿಗೂ ಸಂಬಳವುಳ್ಳ ಜನಗಳು ವಿದ್ಯಾಭ್ಯಾಸದ ಇಲಾಖೆ
ಯಲ್ಲಿ ೫೦೦ ಮಂದಿಗಳುಮಾತ್ರವೇಕೆಂದು ಈಗ ಸರ್ಕಾರಕ್ಕೆ ಬರೆದಿದಾರೆ. ಇದು ಸ್ಯಾಂಕ್ಷನ್
ಆದ ಕೂಡಲೆ ವಿದ್ಯಾವಂತರಾದ ಅನೇಕರಿಗೆ ಜೀವಿಕೆಗಳುಂಟಾಗುವವು. ಮದರಾಸ್
ಅಧಿಪತ್ಯದ ಸಿವಿಲ್ ಸರ್ವೀಸ್ ಪರೀಕ್ಷೆಗೋಸ್ಕರ ಡಾಕ್ಟರ್ ಡಂಕ್ಕ ಸಾಹೇಬರವರು
ರೂಲ್ಸುಗಳನ್ನು ಏರ್ಪಡಿಸಿ ಗೌರ್ನಮೆಂಟಿನಿಂದ ಸ್ಯಾಂಕ್ಷನ್ ಮಾಡಿಸಿದಾರೆ. ತೆಲಗು
ವಿದ್ಯಾಭ್ಯಾಸದ ಪ್ರೋತ್ಸಾಹವನ್ನುಂಟುಮಾಡುವದಕ್ಕೂ ಯೋಗ್ಯರಾದ ತೆಲಗು
ಉಪಾಧ್ಯಕರನ್ನು ತಯಾರ್ಮಾಡುವದಕ್ಕೂ ರಾಜಮಹೇಂದ್ರದಲ್ಲಿ ಒಂದು ತೆಲಗು ಟ್ರೈನಿ
ಂಗ್‌ಕಾಲೆಜ್ಜನ್ನು ಸ್ಥಾಪಿಸಿದಾರೆ. ಕಲ್ಲೀಕೋಟೆಯಲ್ಲಿ ಆ ಪ್ರಾಂತ್ಯದ ವಿದ್ಯಾಭ್ಯಾ
ಸದ ಪ್ರೋತ್ಸಾಹಕ್ಕೋಸ್ಕರ ಇನ್ಸ್‌ಪೆಕ್ಟರ್ ಇಸವಿಯಲ್ಲಿ ಒಂದು ಅಪ್ಪರ್ ಸೆಕ್ಷಂಡರಿ
ಟ್ರೈನಿಂಗ್ ಸ್ಕೂಲನ್ನು ಏರ್ಪಡಿಸಿದರು. ಇದಲ್ಲದೆ ವಿದ್ಯಾವಿಹೀನರಾಗಿಯೂ ಕಲಹಾ
ಸಕ್ತರಾಗಿಯೂ ಆಗಾಗ್ಗೆ ಅನೇಕ ಅನರ್ಥಗಳಿಗೆ ಅಜ್ಞಾನವಶದಿಂದ ಕಾರಣಭೂತರಾ
ಗಿಯೂ ಇರುತ್ತಲಿರುವ ಮಾಪಿಳ್ಳೆಗಳ ವಿದ್ಯಾಭ್ಯಾಸಕ್ಕೋಸ್ಕರ ೧೮ ಮಾಪಿಳ್ಳೆ ಪಾಠ
ಶಾಲೆಗಳನ್ನು ಸ್ಥಾಪಿಸಿದರು. ೧೮೯೯ನೇ ಇಸವಿಯಲ್ಲಿ ಪಂಚಮರ ವಿದ್ಯಾಭ್ಯಾಸಕ್ಕೋಸ್ಕರ
ಮದರಾಸ್ ಪಟ್ಟಣದಲ್ಲಿ ಒಂದು ಪಾಠಶಾಲೆಯನ್ನು ಏರ್ಪಡಿಸಿದರು. ಈ ಪಾಠಶಾಲೆಗೆ
ಪಂಚಮರನ್ನೇ ಉಪಾಧ್ಯಕರನ್ನಾಗಿ ಏರ್ಪಡಿಸಿದರು. ಡಾಕ್ಟರ್ ಡಂಕ್ಕ ಸಾಹೇಬರವರು
ವಿದ್ಯಾಭ್ಯಾಸದ ಇಲಾಖೆಯಲ್ಲಿ ಇಂಗ್ಲಿಷ್ ಮತ್ತು ದೇಶಭಾಷೆಗಳ ಪ್ರೋತ್ಸಾಹಾರ್ಥ
ವಾಗಿಯೂ ಪ್ರೌಢವಿದ್ಯಾಭ್ಯಾಸದ ಅಭಿವೃದ್ಧಿಗಾಗಿಯೂ ಅನೇಕ ಏರ್ಪಾಡುಗಳನ್ನು
ಮಾಡಿದಾರೆ. ಗ್ರಂಥವಿಸ್ತಾರ ಭಯದಿಂದ ಅವುಗಳನ್ನು ಸಂಗ್ರಹವಾಗಿ ತಿಳಿಸಿದೇವೆ.
ಮದರಾಸ್ ಅಧಿಪತ್ಯದಲ್ಲಿ ಇವತ್ತಮಟ್ಟಿಗೆ ವಿದ್ಯಾಭಿಮಾನಿಗಳಾದವರು ಬಹಳ ವಿರಳ
ವಾಗಿರುತ್ತಾರೆ. ಇವರಿಗೆ ಆಯುರಾರೋಗ್ಯಗಳನ್ನು ಕೊಟ್ಟು ಇನ್ನೂ ಬಹುಕಾಲದ
ವರೆಗೂ ದಕ್ಷಿಣಹಿಂದೂಸ್ಥಾನಕ್ಕೆ ಇವರ ವೈದುಷ್ಯದಿಂದ ಇದೇವಿಧವಾದ ಅನೇಕ ಪ್ರ
ಯೋಜನಗಳೂ ಪ್ರೋತ್ಸಾಹಗಳೂ ಉಂಟಾಗುವದೆಂದು ನಾವು ಕೋರುತ್ತೇವೆ.

ಅದ್ಭುತವಾದ ಮಾರಕಾನೀ ಕಿರಣಗಳು.

ಕೆಲವು ದಿವಸಗಳ ಕೆಳಗೆ ಕಂಡುಹಿಡಿಯಲ್ಪಟ್ಟ ರಂಜ್ಞ್ ರೇಸ್ಸೆಂಬ ವಿದ್ಯುಚ್ಛಕ್ತಿಯ ಕಿರಣಗಳ ಸಹಾಯದಿಂದ ದೇಹದಲ್ಲಿರತಕ್ಕ ಪದಾರ್ಥಗಳೆಲ್ಲಾ ಸ್ಪಷ್ಟವಾಗಿ ಕಾಣುವವು ವೈದ್ಯರು ಇದರಿಂದ ಅನ್ಯಾದೃಶವಾದ ಪ್ರಯೋಜನವನ್ನು ಹೊಂದುತ್ತಲಿದಾರೆ. ಇದರ ಸಹಾಯದಿಂದ ಹುಚ್ಚರ ಮೆದುಳಿನಲ್ಲಿರತಕ್ಕ ವೈಪರೀತ್ಯಗಳನ್ನು ಕಂಡುಹಿಡಿದು ಸುಲಭವಾಗಿ ತಕ್ಕ ಪ್ರತಿಕ್ರಿಯೆಯನ್ನು ನೋಡಿ ಹುಚ್ಚನ್ನು ಬಿಡಸುತ್ತಲಿದಾರೆ. ಯಾವದಾದರೂ ಅಸಾಯದಿಂದ ಮೂಳೇ ಮೊದಲಾದವು ಮುರಿದುಹೋಗಿ ಹೀನಸ್ಥರಾಗಿದ್ದರೆ ಅಂಥಾವರಿಗೆ ಇದರ ಸಹಾಯದಿಂದ ಯಾವಮೂಳೆ ಯಾವಭಾಗದಲ್ಲಿ ಮುರಿದುಹೋಗಿದೆಯೋ ಅದನ್ನು ಪರಿಶೀಲಿಸಿ ಬೇಗಿಗೆ ತೊಂದರೆ ಇಲ್ಲದಂತೆ ಅವುಗಳನ್ನು ಕಟ್ಟಿ ಸುಲಭವಾಗಿ ವಾಸಿಮಾಡುತ್ತಲಿದಾರೆ. ಶರೀರದಲ್ಲಿ ಲೋಹಾದಿಗಳು ಅಂದರೆ ಮುಳ್ಳು ಸೂಜಿ ಮೊಳೆ ಗುಂಡು ಗಾಜಿನಚೂರು ಇವೇ ಮೊದಲಾದವು ಸೇರಿದ್ದಾಗ್ಯೂ ಅವುಗಳನ್ನು ಈ ಕಿರಣಗಳ ಸಹಾಯದಿಂದ ಗೊತ್ತುಮಾಡಿ ತೆಗೆದು ಗುಣಮಾಡುತ್ತಲಿದಾರೆ. ಪರೀಕ್ಷೆ ಮಾಡುವವರಲ್ಲೂ ಉಡುಪುಗಳನ್ನು ತೆಗೆಯದೇಲೇ ಶರೀರದಮೇಲೆ ಈ ಕಿರಣಗಳನ್ನು ಬೀಳುವಂತೆ ಮಾಡಿದಕೂಡಲೇ ಶರೀರದಲ್ಲಿರತಕ್ಕ ವ್ಯತ್ಯಾಸಗಳೆಲ್ಲವೂ ಸ್ಪಷ್ಟವಾಗಿ ಕಾಣುವವು. ಮೋಜಾಗಳನ್ನು ಹಾಕಿಕೊಂಡಿರುವ ಕಾಲುಗಳಮೇಲೆ ಕಿರಣಗಳನ್ನು ಬಿಟ್ಟಲ್ಲಿ ಕಾಲುಗಳಲ್ಲಿರತಕ್ಕ ಸಂದರ್ಭಗಳೆಲ್ಲಾ ಗೊತ್ತಾಗುತ್ತವೆ. ಇದೇರೀತಿಯಲ್ಲಿ ಬೀಗಾತೆಗೆಯದೇಲೆ ಮರದಪೆಟ್ಟಿಗೆಯಲ್ಲಿರತಕ್ಕ ಪದಾರ್ಥಗಳನ್ನೆಲ್ಲಾ ತಿಳಿದುಕೊಳ್ಳಬಹುದು. ಇದಕ್ಕೆ ಸಮಾನವಾದ ಅದ್ಭುತವು ಯಾವತ್ತೂ ಇಲ್ಲವೆಂದು ಪಾಶ್ಚಾತ್ಯರೆಲ್ಲರೂ ಆಶ್ಚರ್ಯಪಡುತ್ತಿದ್ದರು ಇದಕ್ಕಿಂತಲೂ ಅದ್ಭುತವಾದ ಒಂದು ಆಶ್ಚರ್ಯವು ಈಚಿಗೆ ಕಂಡುಹಿಡಿಯಲ್ಪಟ್ಟಿತು. ಕಳೆದ ಮಾರ್ಚಿ ತಿಂಗಳಿನಲ್ಲಿ ಆಂಗ್ಲೋ ಇಟಾಲಿಯನ್ನಾದ ಮಾರಕಾನಿ ಎಂಬ ಹೆಸರುಳ್ಳ ೨೨ ವರುಷ ವಯುಸ್ಸುಳ್ಳ ಒಬ್ಬ ವಿದ್ಯಾರ್ಥಿಯು ವಿದ್ಯುಚ್ಛಕ್ತಿಯ ಹರ್ಟ್ಸ್‌ರೇಸ್ಸೆಂಬತಕ್ಕ ಕಿರಣಗಳಿಂದ ಮಾಡತಕ್ಕ ಕೆಲಸಗಳನ್ನು ಪರೀಕ್ಷಿಸುತ್ತಿದ್ದನು. ಈ ವಿದ್ಯುಚ್ಛಕ್ತಿಯು ಕಿರಣಗಳನ್ನು ಯುದ್ಧಮಾಡತಕ್ಕ ವೇಳೆಯಲ್ಲಿ ಶತ್ರುಗಳ ಮರ್ಮಗಳನ್ನು ಭೇದಿಸಿ ಅವುಗಳ ಪೂರ್ವಾಪರಗಳನ್ನೂ

ಾವು ಮೂಡತಕ್ಕ ಪ್ರಯತ್ನಗಳನ್ನೂ ರಿಫ್ಲೆಕ್ಟರುಗಳಿಂದ ಹೊರಡತಕ್ಕ ಬೆಳಕುಗ
ಂದ ತಮ್ಮ ಕಡೆಯುವರಿಗೆ ತಿಳಿಸುವದುಂಟು. ಈರೀತಿಯಲ್ಲಿ ಮೂರಕಾನಿ ಎಂಬ
ನು ಒಂದು ಮೈದಾನದಲ್ಲಿ ನಿಂತುಕೊಂಡು ಕೆಲವು ಸಂಗತಿಗಳನ್ನು ಸವಿೂಪದಲ್ಲಿದ್ದ
ಂದು ಬೆಟ್ಟದ ಬಳಿಯಲ್ಲಿರತಕ್ಕ ತನ್ನ ಮಿತ್ರನೊಬ್ಬನಿಗೆ ತಿಳಿಸುತ್ತಿದ್ದನು. ಆ
ಬ್ಬದ ಗಾತ್ರವು ಮುಕ್ಕಾಲು ಮೈಲಿಯುಳ್ಳದ್ದಾಗಿತ್ತು. ಇಂಥಾದ್ದೆ ಒಂದು ಕೆಲ
ಕ್ಕಾಗಿ ಆ ಬೆಟ್ಟದ ಅಜೆಕಡೆ ಇದೇವಿಧವಾದ ರಿಫ್ಲೆಕ್ಟರನ್ನು ಕೊಟ್ಟು ಮತ್ತೊಬ್ಬ
ಸ್ನೇಹಿತನನ್ನು ನಿಲ್ಲಿಸಿದನು. ಮೂರಕಾನಿಯು ಬೆಟ್ಟದ ಅಜೆಭಾಗದಲ್ಲಿರುವವನಿಗ
ಳಿಸಿದ ಸವಾಚಾರವೆಲ್ಲಾ ಗೊತ್ತಾಯಿತು. ಈ ಸಂಗತಿಯನ್ನು ಅವನು ಪ್ರತಿ
ಸೂಗಿ ತಿಳಿಸಲು ಅತ್ಯಂತ ವಿಸ್ಮಿತನಾಗಿ ಈ ವಿದ್ಯುತ್ಕಿನ ಕಾಂತಿಯು ಮುಕ್ಕಾಲು
ಮೈಲಿಗಾತ್ರವುಳ್ಳ ಬೆಟ್ಟವನ್ನು ಕೂಡ ಭೇದಿಸಿಕೊಂಡು ನನ್ನ ಬಳಿಗೆ ಬಂದಿರಬೇಕೆಂದು
ಳಿದುಕೊಂಡನು. ಅನಂತರದಲ್ಲಿ ೫—೬ ಗೋಡೆಗಳ ಅಜೆಭಾಗದಲ್ಲಿ ಜನಗಳನ್ನು
ಲ್ಲಿಸಿ ಈ ವಿದ್ಯುತ್ತನ್ನುಪಯೋಗಿಸಿದನು. ಗೋಡೆಗಳಿಲ್ಲದಿದ್ದರೆ ಹ್ಯಾಗೋಹಾಗ
ವನು ನಡೆಸಿದ ಭಾವಗಳು ಅಜೆನಿಂತಿದ್ದವರಿಗೆ ಗೊತ್ತಾಯಿತು. ಹರ್ಟ್ಸ್‌ರೇಸ್ಸ್ಂ
ುವನು ಏರ್ಪಡಿಸಿರತಕ್ಕ ಕಿರಣಗಳು ಲೋಹವನ್ನೂ ನೀರನ್ನೂ ಭೇದಿಸಲಾರವು.
ೂರಕಾನಿ ಎಂಬುವನು ಏರ್ಪಡಿಸಿರುವ ಕಿರಣಗಳು ಭೇದಿಸದೇ ಇರತಕ್ಕ ವಸ್ತು
ುವೇ ಇಲ್ಲ. ಹರ್ಟ್ಸ್‌ರೇಸ್ಸ್ಂಬತಕ್ಕ ಕಿರಣಗಳನ್ನುತ್ಪತ್ತಿಮಾಡುವದಕ್ಕೆ ಎಷ್ಟು
ಚ್ಚವೂ ಶ್ರಮವೂ ಆಗುವದೋ ಮೂರಕಾನಿ ಕಿರಣಗಳನ್ನುತ್ಪಾದನೆ ಮಾಡುವ
ಕ್ಕೂ ಅಷ್ಟೇ ಆಗುವದು. ಮೂರಕಾನಿಯು ಸ್ಯಾಲಿಸ್ಬರಿಪ್ಲೇನಿಂಬ ಮೈದಾನದಲ್ಲಿ
ರಡುಮೈಲಿಗಳ ದೂರದಲ್ಲಿರತಕ್ಕ ಜನರಿಗೆ ವಾಯುಮಂಡಲದ ಮುಖಾಲಕವಾಗಿ ಈ
ರಣಗಳ ಸಹಾಯ ದಿಂದ ಸವಾಚಾರಗಳನ್ನೆಲ್ಲಾ ತಿಳಿಸಿದನು. ದೊಡ್ಡ ಯಂತ್ರ
ನ್ನು ನಿರ್ಮಿಸಿ ಅದನ್ನುಪಯೋಗಿಸಿದರೆ ಎಷ್ಟುಸಾವಿರ ಮೈಲಿಗಳವರಿಗೆಬೇಕಾದರೂ
ಂತೀ ಮೊದಲಾದವುಗಳು ಯಾವದೂ ಇಲ್ಲದೇನೆ ವಾಯುಮಂಡಲದಮಾರ್ಗವಾಗಿ
ಸವಾಚಾರಗಳನ್ನು ಕಳುಹಿಸಬಹುದೆಂದು ನಿಶ್ಚರ್ಷೆ ಮಾಡಿದಾನೆ. ಈಗ ಸದ್ಯಕ್ಕೆ
ಂ ಕುದುರೆಗಳ ಶಕ್ತಿಯುಳ್ಳ ಯಂತ್ರವನ್ನು ನಿರ್ಮಾಣ ಮಾಡಿ ಲಂಡ್ಸ್ ಪಟ್ಟಣಕ್ಕೂ
ಅಮೆರಿಕಾಖಂಡದಲ್ಲಿರುವ ನ್ಯೂಯೊರ್ಕ್ ಪಟ್ಟಣಕ್ಕೂ ಮೂರಕಾನಿ ಕಿರಣಗಳ ಸಹಾ
ುದಿಂದ ವರ್ತಮಾನವನ್ನು ಕಳುಹಿಸತಕ್ಕ ಏರ್ಪಾಡನ್ನು ಮಾಡಬೇಕೆಂಬ ಪರ್ಯ್ಯ

ಲೋಚನೆಯನ್ನು ಮಾಡುತ್ತಲಿದಾನೆ. ಇದುವರಿಗೂ ಒಂದು ಖಂಡದಿಂದ ಮತ್ತೊಂ
ದುಖಂಡಕ್ಕೆ ತಂತೀ ವರ್ತಮಾನವನ್ನು ಕಳುಹಿಸುವದಕ್ಕೋಸ್ಕರ ಸಮುದ್ರದಲ್ಲಿ
ತಂತಿಗಳನ್ನು ಹಾಕುವದಕ್ಕಾಗಿ ಅನೇಕ ಕೋಟಿ ದ್ರವ್ಯವನ್ನು ವೆಚ್ಚ ಮಾಡಿದಾರೆ.
ಹೀಗೆ ಮಾಡಿದಾಗ್ಯೂ ಆಗಾಗ್ಗೆ ದುರಸ್ತು ವಗೈರೆಗಳಿಗೆ ಬಹುದ್ರವ್ಯ ವ್ಯಯವಾ
ಬೇಕಾಗುತ್ತಿತ್ತು. ಈ ಏರ್ಪಾಡು ಕ್ರಮಪಟ್ಟಕೂಡಲೇ ತಂತೀ ವರ್ತಮಾನದ
ಏರ್ಪಾಡು ಬಿಡಲ್ಪಡುವದು. ಇದಲ್ಲದೆ ಈತನು ತಾನು ನಿರ್ಮಿಸಿದ ವಿದ್ಯುತ್ತಿನ
ಕಿರಣಗಳ ಬಲದಿಂದ ಮದ್ದಿನ ಮನೆ ಮದ್ದಿನ ಪೆಟ್ಟಿಗೆ ಮದ್ದನ್ನು, ಮಾಡುವ
ಮನೆ ಇವುಗಳಿಗೆ ಎಷ್ಟುದೂರದಿಂದಲಾದರೂ ಹತ್ತಿಕೊಂಡು ಉರಿದುಹೋಗುವಂ
ಮಾಡುತ್ತಾನೆ. ಹೀಗೆ ಮಾಡಬೇಕಾದರೆ ಈಗ ಆ ಮದ್ದು ಈರತಕ್ಕ ಸ್ಥಳಕ್ಕೆ ಒಂದ
ತಂತಿಯನ್ನು ಜೋಡಿಸಬೇಕು. ಆವೇಲೆ ಆ ತಂತಿಯು ವಿದ್ಯುಚ್ಛಕ್ತಿಯನ್ನು ವಹಿ
ಮದ್ದನ್ನು ಹತ್ತಿಸಿಬಿಡುತ್ತದೆ. ತಂತೀಯಿಲ್ಲದೇಲೆ ಮದ್ದನ್ನು ಹತ್ತಿಸುವದಕ್ಕೆ
ಸಾಧ್ಯವೇ ಅಲ್ಲವೇ ಎಂಬುವದನ್ನು ಪರೀಕ್ಷಿಸುತ್ತಲಿದಾನೆ. ಮದ್ದನ್ನೇ ಉಪಯೋ
ಗಿಸಿ ಯುದ್ಧವನ್ನು ಮಾಡತಕ್ಕೆ ಪಾಶ್ಚಾತ್ಯರೆಲ್ಲರೂ ಬಹಳ ಹೆದರುತ್ತಲಿದಾರೆ
ಏಕಂದರೆ ಮದ್ದನ್ನು ತೆಗೆದುಕೊಂಡು ಯುದ್ಧಕ್ಕೆ ಹೋಗತಕ್ಕವರಿಗೆ ಪ್ರತಿಕ್ಷ
ಗಳು ಆ ಮದ್ದೇ ಮೃತ್ಯುವಾಗಿ ಪರಿಣಮಿಸುವಂತೆ ಮಾಡುವದಕ್ಕೆ ಅವಕಾಶವುಂಟು
ಮಾಡಿತೆಂಬುವದೇ ಮುಖ್ಯಕಾರಣ. ಶತ್ರುಗಳ್ಯಾರಾದರೂ ಪಿತೂರಿಯಿಂದ ಮದ್ದಿ
ರುವ ಸ್ಥಳಕ್ಕೆ ರಹಸ್ಯದಿಂದ ಒಂದು ತಂತಿಯನ್ನು ಸೇರುವಂತೆ ಮಾಡಿ ಅಪಾಯ
ಉಂಟುಮಾಡಿಯಾರು ಎಂಬ ಕಳವಳವು ಬಹಳವಾಗಿ ಉಂಟಾಗಿದೆ. ಅದಲ್ಲದೆ
ಕಾರುಡರಿಗೆ ಈ ಕಿರಣಗಳ ಸಹಾಯದಿಂದ ಕಣ್ಣು ಕಾಣುವದಕ್ಕಾಗಿ ಮಾಡುವ ಪ್ರಯ
ತ್ನವು ಬಹುದೂರದವರಿಗೂ ಫಲಕಾರಿಯಾಗುತ್ತಾ ಬರುತ್ತಲಿದೆ. ಶಾಸ್ತ್ರಜ್ಞರು
ಮುಂದೆ ಇನ್ನೇನು ಅದ್ಭುತಗಳನ್ನು ಕಂಡುಹಿಡಿಯುವರೋ ತಿಳಿಯದು.

ಶಿವನಸಮುದ್ರವು.

ಶಿವನಸಮುದ್ರವೆಂಬ ದ್ವೀಪವು ಮೈಸೂರು ಸಂಸ್ಥಾನದ ತಲಕಾಡು ಕಾಲ್ವೆ
ಕಿಗೂ ಬ್ರಿಟಿಷ್ ರಾಜ್ಯದ ಕೊಯಮತ್ತೂರು ಡಿಸ್ಟ್ರಿಕ್ಟಿಗೂ ಮಧ್ಯದ ಎಲ್ಲೆಯ
ಲ್ಲಿದೆ. ಸೈಕತಪಬ್ಬಿಗಳಿಂದ ಅರ್ಧದಮಟ್ಟಿಗೆ ಮುಚ್ಚಿಹೋಗಿರುವ ತಲಕಾಡನು

ಉತ್ತರಿಸಿ ಕೆಲವು ಮೈಲುಗಳವರೆಗೆ ಪ್ರವಹಿಸಿದ ಬಳಿಕ ಕಾವೇರೀನದಿಯು ಉತ್ತರಾಭಿಮುಖವಾಗಿ ತಿರುಗಿ ಈ ದ್ವೀಪದ ದಕ್ಷಿಣದಕೊನೆಯಲ್ಲಿ ಎರಡುಶಾಖೆಗಳಾಗಿ ಒಡೆದುಅದನ್ನು ಆವರಿಸಿಕೊಂಡು ಎರಡೂ ಪ್ರತ್ಯೇಕವಾಗಿ ಎರಡು ಮಹಾಪ್ರಪಾತಗಳಾಗಿ ಸುಮಾರು ೨೦೦ ಅಡಿಗಳವರೆಗೆ ಕೆಳಕ್ಕೆ ಕುಪ್ಪಳಿಸಿ, ಪುನಃ ದ್ವೀಪದ ಈಶಾನ್ಯಭಾಗದಲ್ಲಿ ಒಂದಾಗಿ ಮುಂದಕ್ಕೆ ಹರಿಯುತ್ತದೆ ಪಶ್ಚಿಮಶಾಖೆಯು ಪ್ರಪಾತಕ್ಕೆ ಗಂಗನಚುಕ್ಕಿ ಅಥವಾ ಗಗನಚುಕ್ಕಿಯೆಂದೂ, ಪೂರ್ವಶಾಖೆಯದಕ್ಕೆ ಬರಚುಕ್ಕಿಯೆಂದೂ ಹೆಸರು. ಈ ದ್ವೀಪಕ್ಕೆ ಕನ್ನಡದಲ್ಲಿ ಹೆಗ್ಗುರವೆನ್ನುವರು, ಆದರೂ ಶಿವನಸಮುದ್ರವೆಂಬ ಸಂಸ್ಕೃತನಾಮಧೇಯವೇ ರೂಢನಾಗಿದೆ. ಇದು ವಿಸ್ತೀರ್ಣದಲ್ಲಿ ಸುಮಾರು ೩ ಮೈಲು ಉದ್ದವಾಗಿಯೂ ಮುಕ್ಕಾಲುಮೈಲಿನಿಂದ ೩ ಮೈಲುಗಳವರೆಗೆ ಅಗಲವಾಗಿಯೂ ಇದೆ ದಕ್ಷಿಣದ ಮೂಲೆಯಿಂದ ಉತ್ತರದಲ್ಲಿ ಸಂಗಮಸಾಂದನದವರೆಗೂ ನದ್ಯವತರಣವು ಸುಮಾರು ೩೧೦ ಅಡಿಗಳಾಗುತ್ತದೆ. ದಕ್ಷಿಣದಲ್ಲಿ ಎರಡುಶಾಖೆಗಳನ್ನೂ ದಾಟಿ ದ್ವೀಪವನ್ನು ಪ್ರವೇಶಿಸುವುದಕ್ಕೆ ಅನುಕೂಲವಾಗಿ ಎರಡು ಕಲ್ಲಿನಸೇತುವೆಗಳಿವೆ. ನದೀಸಾತ್ರದಲ್ಲಿ ಅಲ್ಲಲ್ಲಿ ಬಿದ್ದಿರುವ ಬಂಡೆಗಳುಮೇಲೂ ಶಿಲಾರಾಶಿಗಳಮೇಲೂ ತಳದಲ್ಲಿ ಜೌಕನಾಗಿಯೂ ಮೇಲೆ ದುಂಡಾಗಿಯೂ ಕಡಿದಿರುವ ನೂರಾರು ಕಲ್ಲಿನಕಂಬಗಳನ್ನು ಜೊತೆಜೊತೆಯಾಗಿ ಆರಾರು ಅಡಿಗಳ ದೂರಕ್ಕೆ ಕ್ರಮವರಿತು ನಿಲ್ಲಿಸಿ ಮೇಲೆ ಅಡ್ಡಡ್ಡಲಾಗಿ ಕಲ್ಲಿನ ತೊಲೆಗಳನ್ನು ಹಾಸಿ ಸೇತುವೆಯನ್ನು ಕಟ್ಟಿರುವರು. ಆದರೆ ತಳದಲ್ಲಿ ಕಲ್ಲಿನ ಗುಡ್ಡೆಗಳು ಉದ್ದಕ್ಕೂ ಒಂದೇಸಮನಾಗಿಲ್ಲದೆ ಅಲ್ಲೊಂದಿಲ್ಲೊಂದು ಬಿದ್ದಿರುವುದರಿಂದ ಕಂಬಗಳು ಅಡಿಯಲ್ಲಿ ಅಲುಗದೆ ಬಿಗುವಾಗಿ ನಿಂತಿರುವುದಕ್ಕೋಸ್ಕರ ಸ್ವಲ್ಪ ಅತ್ತಲೂ ಇತ್ತಲೂ ಅನುಕೂಲಿಸಿದಂತೆ ಕಂಬದಸಾಲನ್ನು ತಿರುಗಿಸಿಕೊಂಡಿರುವರು. ಈ ಕಾರಣದಿಂದ ಸೇತುವೆಯು ಈ ಕಾಲದ ಶಿಲ್ಪಶಾಸ್ತ್ರನಿಪುಣರಿಗೆ ಅಷ್ಟೊಂದು ಸಮರ್ಪಕವಾಗಿಲ್ಲದಿದ್ದರೂ ಅಲ್ಲಲ್ಲಿ ತಿರುವು ಮುರಿವುಗಳುಳ್ಳದ್ದಾಗಿ ನದಿಯೇ ವಕ್ರಗಾಮಿನಿಯಾಗಿರುವಾಗ ಶಾಸ್ತ್ರೀಕರಬಾರದೆಂಬ ಭಾವವನ್ನು ಸೂಚಿಸುತ್ತಿರುವುದೋ ಎಂಬಂತೆ ಸರ್ಪಗತಿಯನ್ನು ನುಸರಿಸುತ್ತಾ ಅದೊಂದು ಬಗೆಯ ಚಂದವನ್ನೊಂದಿರುವುದು. ಮೇಲಣಭಾಗದಲ್ಲಿ ಉದ್ದಕ್ಕೂ ಕಲ್ಲಿನಕೆಲಸದಲ್ಲಿ ಬಲವಾದ ಗೋಡೆಯನ್ನು ಹಾಕಿರುವರಾದುದರಿಂದ ಗಾಡಿಗಳೂ ಜನರೂ ತಿರುಗುವುದಕ್ಕೆ ಯಾವ ಅಪ್ಪೋಹವೂ ಇಲ್ಲದೆ ಅನುಕೂಲವಾಗಿರುವುದು.

ಸೇತುವೆಯನ್ನು ದಾಟಿ ಊರನ್ನು ಪ್ರವೇಶಮಾಡಿದರೆ ಎಲ್ಲೆಲ್ಲೂ ಹಾಳುಮನೆಗಳೇ ವಿಶೇಷವಾಗಿ ಕಣ್ಣಿಗೆಬೀಳುತ್ತವೆ. ದ್ವೀಪದ ಒಳಗೂ ಹೊರಗೂ ದಟ್ಟವಾಗಿ ಕಾಡುಬೆಳೆದುಕೊಂಡು ವಾಸಕ್ಕೆ ಅನಾರೋಗ್ಯಕರವಾಗಿದೆ. ಶಿವನಸಮುದ್ರದ ಜಹಗೀರ್‌ದಾರರು ಕಟ್ಟಿಸಿರುವ ಬಂಗಲೆಯೂ ಶಿವ ವಿಷ್ಣು ದೇವಾಲಯಗಳೂ ಇಲ್ಲಿ ಕಾಣಬರುವ ಬಲವಾದ ಕಟ್ಟಡಗಳಾಗಿವೆ. ಇಲ್ಲಿರುವ ರಂಗನಾಥವಿಗ್ರಹವು ಸುಂದರವಾಗಿದೆ.

ಗಗನಚುಕ್ಕಿ —ಈ ಪ್ರಪಾತವು ನದಿಯ ಪಶ್ಚಿಮಶಾಖೆಯಲ್ಲಿ ಬಂಗಲೆಗೆ ಸುಮಾರು ೩ ಮೈಲು ದೂರದಲ್ಲಿದೆ. ಇದರ ಬಳಿಯಲ್ಲಿ ಪೀರ್‌ವಲಿ ಎಂಬ ಒಬ್ಬಾನೊಬ್ಬ ಮಹಮ್ಮದ್‌ಋಷಿಯ ಗೋರಿಯೂ ಇದರ ಬಳಿಯಲ್ಲಿಯೇ ಒಂದು ಮಹಮ್ಮದ್‌ಋಷ್ಯಾಶ್ರಮವೂ ಇವೆ. ಪ್ರಪಾತದ ಬಳಿಗೆ ಹೋಗಬೇಕಾದರೆ ಗೋರಿಯಿರುವ ಬಳಿಯಿಂದ ಬಹಳ ಕಡಿದಾದ ಒಂದು ಕೊರಕಲನ್ನು ಇಳಿದು ಹೋಗಬೇಕು. ಈ ಬಳಿಯಲ್ಲಿ ನದೀಶಾಖೆಯು ಎರಡು ಉಪಶಾಖೆಗಳಾಗಿ ಒಡೆದು ಎಷ್ಟಿಕುರವೆಂಬುದೊಂದು ಸಣ್ಣದ್ವೀಪವನ್ನು ಕಲ್ಪಿಸಿರುವುದಲ್ಲದೆ, ವಿಭಕ್ತವಾದ ಪ್ರವಾಹಗಳೆರಡೂ ಎರಡು ಪಕ್ಕಗಳಲ್ಲಿ ಕಿವಿಯೇ ಕೇಳಬಾರದಷ್ಟು ಕಠೋರನಾದ ಘರಂಗಿಯ ಶಬ್ದದೊಡನೆ ಸ್ಥೂಲೋಪಲಗಳ ಮೇಲಕ್ಕೆ ಧುಮಿಕಿ ಕೆಳಗೆ ಘೂರ್ಣಾಯಮಾನವಾಗಿಯೂ ದುರ್ನಿರೀಕ್ಷ್ಯವಾಗಿಯೂ ಅಗಾಧವಾಗಿಯೂ ಇರುವ ಮಡುವಿನೊಳಗೆ ಬಿದ್ದು ಲೀನವಾಗುತ್ತವೆ. ಪ್ರವಾಹಬರುವ ರಭಸಾತಿಶಯದಿಂದಲೂ ನಿರವಧಿಕವಾಗಿಯೂ ಪ್ರಬಲ ಘುಳುಘುಳು ಧ್ವಾನದೊಡನೆಯೂ ಬರುವ ಜಲರಾಶಿಗಳ ಸಂಮರ್ದದಿಂದಲೂ ತುಂತುರುಗಳು ನಿರಂತರದಲ್ಲಿಯೂ ಮೇಲಕ್ಕೆ ಏಳುತ್ತಿರುತ್ತವೆ. ಈ ತುಷಾರಪಟಲವು ಕೆಲವು ವೇಳೆಗಳಲ್ಲಿ ಸತ್ಯಾಗಾಲಕ್ಕೆ ಕೂಡ ಕಾಣಬರುವುದು. ಪ್ರಾತಸ್ಸಾಯಂಕಾಲಗಳಲ್ಲಿ ಪ್ರಪಾತದ ಬಳಿ ನಿಂತು ನೋಡಿದರೆ, ಸೂರ್ಯಕಿರಣಗಳು ಆ ತುಷಾರ ಪಟಲದಮೇಲೆ ಬಿದ್ದು ಪೃಥಕ್ಕರಣವನ್ನೊಂದುವುದರಿಂದ ಸೂರ್ಯನಿರುವುದಕ್ಕೆ ಎದುರು ದಿಕ್ಕಿನಲ್ಲಿ ಎರಡು ಮೂರು ಇಂದ್ರಧನುಸ್ಸುಗಳು ಕಾಣಿಸಿಕೊಂಡು ಬಹು ರಮಣೀಯವಾಗಿರುವುವು.

ಬರಚುಕ್ಕಿ:—ಗಂಗನಚುಕ್ಕಿಯಿಂದ ಪೂರ್ವದಿಕ್ಕಿಗೆ ಒಂದುಮೈಲು ದೂರ ಹೋದರೆ ನದೀ ಪೂರ್ವಶಾಖೆಯಲ್ಲಿ ಬರಚುಕ್ಕಿ ಎಂಬ ಪ್ರಪಾತವಿದೆ. ಗಂಭೀರತೆಯಲ್ಲಿಯೂ ವೈಭವದಲ್ಲಿಯಾಗಿ ಹಾಯ್ದು ಬರುವ ರಭಸದಲ್ಲಿಯೂ ಗಂಗನಚುಕ್ಕಿಗೆ ಸಮಾನವಾದುದಲ್ಲವಾದರೂ, ಬರಚುಕ್ಕಿಯು ಅದಕ್ಕಿಂತ ಸುಲಭಗಮ್ಯವಾದುದರಿಂದ ಜನ

ರಿಗೆ ವಿಶೇಷಾನಂದದಾಯಕವಾಗಿದೆ. ಇಲ್ಲಿ ನೀರು ಬಹಳ ಅಗಲವಾಗಿ ಬೀಳುತ್ತದೆ. ಮಳೆಗಾಲದಲ್ಲಿ ಪ್ರಪಾತವು ಸುಮಾರು ಮುಕ್ಕಾಲುಮೈಲು ಅಗಲಕ್ಕೆ ಅವಿಚ್ಛಿನ್ನವಾಗಿ ರುತ್ತದೆ. ಬೇಸಿಗೆಯಲ್ಲಾದರೋ ಅನೇಕಭಾಗಗಳಾಗಿ ಒಡೆದು ನೋಡಲು ಸುಂದರವಾಗಿರುತ್ತದೆ. ಮಧ್ಯದಲ್ಲಿ ಕುದುರೆಯ ಲಾಳದ ಆಕಾರವಾಗಿ ಅಗಾಧವಾದ ಪ್ರದೇಶದಲ್ಲಿ ಮುಖ್ಯಪ್ರವಾಹವು ಹರಿದು ಮುಂದೆ ಒಂದು ಸಣ್ಣ ಕಾಲುವೆಯಾಗಿ ಹೊರಟು, ಅತಿ ರಭಸದೊಡನೆ ಪುನಃ ಮುಂದಕ್ಕೆ ಮೂವತ್ತಡಿ ಕೆಳಕ್ಕೆ ಧುಮಿಕಿ ಕೆಳಗೆ ವಿಸ್ತಾರವಾದ ಖಾತದೊಳಗೆ ಐಕ್ಯವಾಗುತ್ತದೆ.

ಶಿವನಸಮುದ್ರದ್ವೀಪದ ಪೂರ್ವಚರಿತ್ರೆಯೇನೋ ವಿಶೇಷವಾಗಿ ತಿಳಿಯದು. ಈಗಿರುವ ಪಟ್ಟಣವನ್ನು ೧೬ ನೆಯ ಶತಮಾನದ ಆದಿಭಾಗದಲ್ಲಿ ವಿಜಯನಗರದ ರಾಜನ ಸಂಬಂಧಿಯಾದ ಗಂಗರಾಜನೆಂಬಾತನು ಸ್ಥಾಪಿಸಿದಂತೆ ತೋರಿಬರುವುದು. ಈ ವಿಷಯದಲ್ಲಿ ಜನಜನಿತವಾಗಿ ಒಂದು ಕಥೆಯುಂಟು, ಏನೆಂದರೆ :—

" ನೂರಾರು ವರುಷಗಳಿಗೆ ಮುಂಚೆ ಒಬ್ಬಾನೊಬ್ಬ ರಾಜನು ಶಿವನಸಮುದ್ರದ್ವೀಪದ ಮೇಲೆ ಜಲಪ್ರಪಾತದ ಬಳಿಯಲ್ಲಿ ಒಂದು ಪಟ್ಟಣವನ್ನು ಕಟ್ಟಿಸಿ ತನ್ನ ರಾಜಧಾನಿಯನ್ನಾಗಿ ಮಾಡಿಕೊಳ್ಳಬೇಕೆಂದು ಬಯಸಿ, ಅಲ್ಲಿ ದೃಷ್ಟಿಗೆ ಗೋಚರವಿಲ್ಲದೆ ವಾಸಿಸುತ್ತಿರುವ ಭೂತದ ತೃಪ್ತ್ಯರ್ಥವಾಗಿ ಅನೇಕ ಬಲಿಪ್ರದಾನಗಳನ್ನು ಮಾಡಲು, ಕಡೆಗೆ ಆ ಭೂತವು ಸ್ವಪ್ನದಲ್ಲಿ ಪ್ರಸನ್ನವಾಗಿ ತಾನು ಯಾವಾಗ ಶಂಖಧ್ವನಿಯನ್ನು ಮಾಡುವೆನೋ ಆ ಮುಹೂರ್ತದಲ್ಲಿ ಪತ್ತನಪ್ರವೇಶವನ್ನು ಮಾಡುತಕ್ಕದ್ದೆಂದೂ ಆದಕ್ಕೆ ತಪ್ಪಿ ನಡೆದರೆ ಪಟ್ಟಣವು ನಾಶವಾಗುವುದೆಂದೂ ತಿಳಿಸಿತು. ಬಳಿಕ ರಾಜನು ಆ ಮಹೋತ್ಸವಕ್ಕೆ ಎಲ್ಲವನ್ನೂ ಅಣಿಮಾಡಿಕೊಂಡು ಸಮಯ ನಿರೀಕ್ಷಣೆಯನ್ನು ಮಾಡುತ್ತಿರಲು, ದುರ್ದೈವವಶದಿಂದ ಆ ಮಾರ್ಗವಾಗಿ ಹೋಗುತ್ತಿದ್ದ ಒಬ್ಬಾನೊಬ್ಬ ತಿರುಕನು ತನ್ನ ಶಂಖವನ್ನೂದುತ್ತಾ ಹೋದನು. ಇದೇ ಭೂತವು ಹೇಳಿದ್ದ ಸಂಕೇತವೆಂದು ಭ್ರಮಿಸಿ ರಾಜನು, ಆಕಾಲದಲ್ಲಿ ವಿಧ್ಯುಕ್ತವಾಗಿ ಪ್ರತಿಷ್ಠಾಪನೆ ಕರ್ಮವನ್ನು ನೆರವೇರಿಸಿದನು. ಕೂಡಲೆ ಸಕಾಲದಲ್ಲಿ ಭೂತಶಂಖಧ್ವನಿಯೂ ಕೇಳಿಸಿತು. ಒಡನೆ ರಾಜನು ಬೆಚ್ಚಬಿದ್ದು ಭೂತಕ್ಕೆ ಅನೇಕ ಬಲಿಗಳನ್ನು ಸಮರ್ಪಣೆಮಾಡಿ ಬಹುವಿಧವಾಗಿ ಆಜ್ಞೋಲ್ಲಂಘನೆಗೆ ಕ್ಷಮಾಪಣೆಯನ್ನು ಬೇಡಿಕೊಂಡನು. ಇದರಿಂದ ಭೂತಕ್ಕೆ ಸ್ವಲ್ಪ ಕನಿಕರಹುಟ್ಟಿ, ರಾಜನಿಗೆ ಪ್ರತ್ಯಕ್ಷವಾಗಿ ತನ್ನ ಶಾಪ ತಪ್ಪುತಕ್ಕದಲ್ಲವಾ

ದರೂ, ಆ ನಗರವು ಮೂರುಸಂತತಿವರೆಗೆವೊತ್ತ ಬಾಳಲೆಂದು ಕರುಣಿಸಿತು. ಆದು ದರಿಂದ ಗಂಗರಾಜನು ಅಲ್ಲಿ ಬಹು ವೈಭವಯುತನಾಗಿ ರಾಜ್ಯವನ್ನಾಳಿ ಧರ್ಮಾತ್ಮನೆಂಬ ಖ್ಯಾತಿಯುನ್ನುಪಡೆದು ಕಡೆಗೆ ಸ್ವರ್ಗಸೋಪಾನವನ್ನಡರಿದನು. ಬಳಿಕ ಆತನ ಮಗ ನಾದ ನಂದಿರಾಜನಿಗೆ ಪಟ್ಟವಾಯಿತು.

ಈ ರಾಜನೂ ಬಹು ಖ್ಯಾತಿಯನ್ನು ಪಡೆದು, ಬಹು ಸಾಹಸಕಾರ್ಯಗಳನ್ನು ಮಾಡಿ ಪರಾಕ್ರಮಶಾಲಿಯೆನ್ನಿಸಿಕೊಂಡನು. ಆದರೆ ಶಾಪವು ತಪ್ಪುವಬಗೆ ಹೇಗೆ? ಈತನು ಕಡೆಗೆ ರಾಜ್ಯವನ್ನು ತನ್ನ ಮಗನ ಅಧೀನಮಾಡಿ, ರಾಜಯೋಗ್ಯವಾದ ವಸ್ತ್ರ ಗಳನ್ನು ಧರಿಸಿ, ತನ್ನ ಪ್ರಿಯರತ್ನವಾದ ಉತ್ತಮಾಶ್ವವನ್ನು ಮಹೋತ್ಸವಕ್ಕೊಯ್ಯ ರಲೋ ಎಂಬಂತೆ ಹಲ್ಲಣಮುಂತಾದವುಗಳಿಂದ ಅಲಂಕರಿಸಿ, ಮೇಲೆ ಕುಳಿತು ಆ ಮಹಾ ಭಯಂಕರನಾದ ಪ್ರಪಾತದ ಬಳಿಗೆ ಹೊರಟನು. ಅಷ್ಟ್ಯಹೊತ್ತಿಗೆ ಸರ್ವಾಂಗಸುಂ ದರಿಯೆಂದು ಜಗದ್ವಿದಿತೆಯಾದ ಆತನ ಪತ್ನಿಯೂ ಬಂದು, ಪತಿಯಬಳಿಸಾರಿ, ಸತಿ ಯರಿಗೆ ಪತಿಮಾರ್ಗವನ್ನನುಸರಿಸುವುದಕ್ಕಿಂತಲೂ ಬೇರೇಗತಿ ಯಾವುದೆಂದು ದೀನಾ ಲಾಪಗಳಿಂದ ಅಂಗಲಾಚಿಕೊಂಡುದರಿಂದ, ಆಕೆಯ ಪ್ರಾರ್ಥನೆಯು ಸಾರ್ಥಕವೆಂದು ಒಗೆದು, ಆ ಆರ್ಯನು ಸುವರ್ಣವಸ್ತ್ರಾಭರಣ ಗಂಧಮಾಲ್ಯಾದಿಗಳಿಂದಲಂಕೃತೆಯಾದ ಭಾರ್ಯೆಯನ್ನು ಅಶ್ವದ ಮೇಲೆ ತನ್ನ ಹಿಂದುಗಡೆಯಲ್ಲಿ ಕುಳ್ಳಿರಿಸಿಕೊಂಡು, ಅದರ ಕಣ್ಣಿಗೆ ಗಟ್ಟಿಯಾಗಿ ಬಟ್ಟೆಯನ್ನು ಬಿಗಿದು, ಕಶಾಘಾತಗಳಿಂದ ಅದನ್ನು ಮಡುವಿನೊ ಳಕ್ಕೆ ಹಾರಿಸಿದನು. ಬಳಿಕ ಆ ಮೂವರೂ ಒಂದು ಕ್ಷಣಮಾತ್ರ ಆ ತುಷಾರಪಟಲ ಗಳಲ್ಲಿ ಮಿಂಚಿನಂತೆ ಭೇದೀಭ್ಯಮಾನವಾಗಿ ಕಾಣಿಸಿಕೊಂಡು, ಆ ತೊರೆಯತೆರೆಗಳಿಗೂ ಸುಳಿಗಳಿಗೂ ಬಲಿ. ವಿನಿರ್ಗಮರಾದರು.

ಬಳಿಕ ಈ ಧೀರೋದಾತ್ತನ ಮಗನಾದ ೩ ನೆಯ ಗಂಗರಾಜನು ರಾಜ್ಯ ಭಾರವನ್ನು ವಹಿಸಿ, ತನ್ನ ಧನುಸ್ಸನ್ನು ತಾನಲ್ಲದೆ ಮತ್ತೊಬ್ಬನಿಂದ ಬಗ್ಗಿಸಲಶಕ್ಯವೆಂ ಬಷ್ಟು ಬಾಹುಬಲಯುಕ್ತನಾಗಿ, ಪರಾಕ್ರಮದಿಂದ ಪಟ್ಟಣವನ್ನು ವಿಸ್ತರಿಸಿ ಬಹುಕಾ ಲವರೆಗೆ ವೈಭವಯುತನಾಗಿ ರಾಜ್ಯಪರಿಪಾಲನೆಯನ್ನು ಮಾಡುತ್ತಾ, ಭೂತಶಾಪವು ವಿಮೋಚನವಾಯಿತೇನೋ ಎಂಬ ಭ್ರಾಂತಿಯನ್ನುಂಟುಮಾಡಿದನು. ಆದರೆ ವಿಧಿ ಯಯಮವನ್ನು ವಿಚಾರಿಸಲು ಶಕ್ತರಾರಾರು? ಈ ರಾಜನು ತನ್ನ ಇಬ್ಬರು ಹೆಣ್ಣುಮಕ್ಕಳಲ್ಲಿ ಒಬ್ಬಳನ್ನು ಸತ್ಯಾಗಾಲಕ್ಕೆ ೧೦ ಮೈಲು ದೂರದಲ್ಲಿ ಈಗ ಹಾಳುಬಿದ್ದಿರುವ ಕಲಿಮಲೆ

ಯು ಪಾಳೆಯಗಾರನಿಗೂ, ಮತ್ತೊಬ್ಬಳನ್ನು ಮದ್ದೂರಿಗೆ ಪೂರ್ವದಲ್ಲಿ ೩ ಮೈಲಲ್ಲಿರುವ ನಾಗರಕೆರೆಯ ಪಾಳೆಯಗಾರನಿಗೂ ಕೊಟ್ಟು ಮದುವೆಮಾಡಿದನು. ಆದರೆ ಈ ಬಾಂಧವ್ಯವೇ ಈತನ ನಾಶಕ್ಕೆ ಮೂಲನಾಯಿತು. ಏಕೆಂದರೆ, ಆ ಇಬ್ಬರು ರಾಜಪುತ್ರಿಯರೂ ತಮ್ಮ ತಮ್ಮ ಪತಿಗಳೊಡನೆ ತಮ್ಮ ತಂದೆಯ ಐಶ್ವರ್ಯವನ್ನು ನಿರಂತರವೂ ಹೊಗಳುತ್ತಾ ಅವರನ್ನು ಗತಿಗೇಡಿಗಳೆಂದು ದೂಷಣೆಮಾಡುತ್ತಾ ಇದ್ದರು.

ಕಡೆಗೆ ಇಬ್ಬರು ಪಾಳೆಯಗಾರರೂ ಹೀಗೆ ತೇಜೋವಧೆಮಾಡುವ ರಾಜಪುತ್ರಿಯರಿಂದ ಮನಸ್ಸು ರೋಸಿದವರಾಗಿ, ಇಬ್ಬರೂ ಒಂದುಗೂಡಿ ತಮ್ಮ ಮಾವನ ಮಾನವನ್ನು ಮುರಿಯಬೇಕೆಂಬ ಮನೋನಿಶ್ಚಯದಿಂದ ಸಮಸ್ತ ಸೇನಾಪರಿವೃತರಾಗಿ ಶಿವಸಮುದ್ರಕ್ಕೆ ಮುತ್ತಿಗೆ ಹಾಕಿದರು. ಆದರೆ ಅಗಾಧವೂ ಭಯಂಕರವೂ ಆದ ಪ್ರವಾಹವನ್ನು ದಾಟಿ ದ್ವೀಪದೊಳಕ್ಕೆ ಪ್ರವೇಶಮಾಡುವುದು ಕಷ್ಟವಾದುದರಿಂದ ಇವರು ೪ ತಿಂಗಳವರೆಗೂ ಅವರ ಪ್ರಯತ್ನಗಳೆಲ್ಲ ನಿಷ್ಫಲಗಳಾದವು. ಬಳಿಕ ಅವರು ಗಂಗರಾಜನ ಮಂತ್ರಿಗೆ ಲಂಚವನ್ನು ಕೊಟ್ಟು ಅವನನ್ನು ಒಳಗುಮಾಡಿಕೊಳ್ಳಲು, ಈ ಸ್ವಾಮಿದ್ರೋಹಿ ಅವರಿಗೊಂದು ಸಂಕೇತಕಾಲವನ್ನು ಸೂಚಿಸಿ, ಆ ಸಮಯಕ್ಕೆ ಸರಿಯಾಗಿ ಹಾಯ್ಸಡುವಿನ ಬಳಿಯಿದ್ದ ಕಾವಲನ್ನೂ ತೆಗೆದು, ಶತ್ರುಪ್ರವೇಶಕ್ಕೆ ಅನುಕೂಲ್ಯವನ್ನು ಕಲ್ಪಿಸಿಕೊಟ್ಟು, ತಾನು ರಾಜನೊಡನೆ ಚತುರಂಗದ ಆಟವನ್ನಾಡುತ್ತ ಕಾಲಹರಣ ಮಾಡುತ್ತಿದ್ದನು. ಇಷ್ಟರಲ್ಲಿ ಶತ್ರುಸೈನ್ಯದ ಕೋಲಾಹಲವು ಕೇಳಬಂದುದರಿಂದ ರಾಜನು ಜಗ್ಗನೆದ್ದು ಅದೇನೆಂದು ವಿಚಾರಮಾಡಲು, ತನ್ನೊಡೆಯನನ್ನು ಜೀವವಂತನಾಗಿರುವಂತೆಯೇ ಹಗೆಯ ಕೈಗೆ ಸಿಕ್ಕಿಸಿಕೊಡಬೇಕೆಂಬಣಿಕೆಯುಳ್ಳ ಆ ಕಪಟ ಮಂತ್ರಿಯು ಆ ಶಬ್ದವು ಹೊರಗೆ ಹುಡುಗರಾಡುವ ಗದ್ದಲವೆಂದು ನುಡಿದನು. ಒಡನೆ ಆಯುಧಪಾಣಿಗಳಾದ ಶತ್ರುಭಟರು ತನ್ನ ಬಳಿಗೆ ಬರುವದನ್ನು ಕಂಡು ರಾಜನು ಒರೆಯಿಂದ ಖಡ್ಗವನ್ನು ಹಿರಿದು ಮೊದಲು ಅಂತಃಪುರಕ್ಕೆ ನುಗ್ಗಿ ತನ್ನ ಪತ್ನೀಪುತ್ರರನ್ನು ಕೊಂದು, ಬಳಿಕ ಶತ್ರುಗಳ ಮೇಲೆ ಕಾಣಿಸಿಕೊಂಡು ಅನೇಕರನ್ನು ನಿಗ್ರಹಿಸಿ ಕಡೆಗೆ ತಾನೂ ವೀರಸ್ವರ್ಗವನ್ನು ಸೂರೆಗೊಂಡನು. ಬಳಿಕ ಉಳಿಯಂದಿರಿಬ್ಬರೂ ತಮ್ಮಿಂದ ಮಿಂಚಿಹೋದ ಕಾರ್ಯಕ್ಕೆ ತಾವೇ ದುಃಖಿತರಾಗಿ ಗಗನಚುಕ್ಕಿಯ ಮಡುವಿಗೆ ಬಿದ್ದು ಪ್ರಾಣತ್ಯಾಗ ಮಾಡಿಕೊಂಡರು. ಒಡನೆಯೇ ಅವರ ಹೆಂಡರೂ ಇಷ್ಟು ಅನರ್ಥಕ್ಕೂ ತಾವೇ ಕಾರಣಭೂತರಲ್ಲವೇ ಎಂದು ಪ್ರಲಾಪಿಸಿ, ತಾವಿನ್ನು ಮುಂದೆ

ಜನ್ಮವನ್ನಿಟ್ಟುಕೊಂಡಿರಬಾರದೆಂದು ತಮ್ಮ ಗಂಡಂದಿರಂತೆ ತಾವೂ ಮಡುವಿಗೆ ಧುಮಿಕಿದರು. ಆಬಳಿಕ ಅಲ್ಲಿನ ನಿವಾಸಿಗಳೆಲ್ಲರೂ ತಮ್ಮತಮ್ಮ ಮರಮುಟ್ಟು ಬಟ್ಟೆಬರೆ ಹಣಕಾಸುಗಳನ್ನೆಲ್ಲ ಹೊತ್ತು ಪಟ್ಟಣವನ್ನು ಭೂತಾವಾಸಕ್ಕೆ ಬಿಟ್ಟುಕೊಟ್ಟು ಹೊರಕ್ಕೆ ನಡೆದರು. ಅಂದಿನಿಂದಲೂ ಆ ನಗರವು ತಲೆಯತ್ತದೆ, ಎಲ್ಲೆಲ್ಲೂ ಹಾಳುಬಿದ್ದು ಜ್ವರಾದ್ಯುಪದ್ರವಗಳಿಗೆ ಆವಾಸವಾಗಿದೆ.''

ಇದೀಗ ಶಿವನಸಮುದ್ರದ ಪುರಾಣವು. ಇದಲ್ಲದೆ ಚನ್ನಪಟ್ಟಣದ ಜಗದೇವರಾಯನೂ ತಲಕಾಡಿನ ಶ್ರೀರಂಗರಾಜನೂ ಈ ದ್ವೀಪವನ್ನು ಕೊಳ್ಳೇಮಾಡಿ ನಿವಾಸಿಗಳನ್ನೆಲ್ಲಾ ಹೊರಕ್ಕೆ ಅಟ್ಟಿದರು. ಕ್ರಿ. ಶ 1791 ನೆಯ ಸಂವತ್ಸರದಲ್ಲಿ ಇಂಗ್ಲಿಷರು ಲಾರ್ಡ್‌ಕಾರ್ನವಾಲಿಸ್ ಪ್ರಭುವಿನ ಕೈಕೆಳಗೆ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕುವುದಕ್ಕೆ ಬಂದಾಗ, ಟೀಪುವು ಬೆಂಗಳೂರಿಂದ ತನ್ನ ರಾಜಧಾನಿಗೆ ಬರುವವರೆಗೂ ಶತ್ರುಸೈನ್ಯಕ್ಕೆ ಆಹಾರಾದಿಗಳು ದೊರೆಯದಂತೆ ಮಾಡಿದ್ದಲ್ಲದೆ, ಶಿವನಸಮುದ್ರದ ಸುತ್ತಮುತ್ತಲಿರುವ ಪ್ರದೇಶದ ಜನಗಳನ್ನೂ ದನಕರುಗಳನ್ನೂ ದ್ವೀಪದೊಳಕ್ಕೆ ಅಟ್ಟಿದನು.

ಇದಾದನಂತರದಲ್ಲಿ ಎಲ್ಲಿನವರಲ್ಲಲ್ಲಿಗೆ ದಿಕ್ಕೆಟ್ಟು ಓಡಿಹೋದುದರಿಂದ, ದ್ವೀಪವು ನಿರ್ಜನವಾಗಿ ಗಿಡ ಬೆಳೆದು ದುಷ್ಟಮೃಗಗಳ ಆವಾಸಕ್ಕೆ ಅನುಕೂಲವಾಯಿತು. ದ್ವೀಪದೊಳಕ್ಕೆ ಹೋಗುವುದಕ್ಕೆ ಪೂರ್ವದಲ್ಲಿ ಬಂಡೆಗಳಮೇಲೆ ಬಂಡೆಗಳನ್ನು ನಿಲ್ಲಿಸಿ ಮಾಡಿದ್ದ ಒರಟು ಸೇತುವೆಕೂಡ ಅಲ್ಲಲ್ಲಿ ಶಿಥಿಲವಾಗಿ ದುಸ್ತರವಾಗಿತ್ತು. ಆಗ 1825 ರಲ್ಲಿ ಮೈಸೂರು ರೆಸಿಡೆಂಟರ ಕೈಕೆಳಗಿನ ಅಧಿಕಾರಿಗಳಾಗಿದ್ದ ರಾಮಸ್ವಾಮಿ ಮೊದಲಿಯಾರರೆಂಬವರು ಬಹುದ್ರವ್ಯವನ್ನು ಮುಟ್ಟಿಸಿ ಕಾವೇರೀಪ್ರವಾಹಕ್ಕೆ ಎರಡು ದಿವ್ಯವಾದ ಸೇತುವೆಗಳನ್ನು ಕಟ್ಟಿಸಿ, ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿ ''ಜನೋಪಕಾರ ಕಾಮಕರ್ತ'' ಎಂಬ ಬಿರುದನ್ನು ಪಡೆದರು. ಇದಲ್ಲದೆ ಇವರಿಗೆ ಬ್ರಿಟಿಷ್ ಸರ್ಕಾರಕ್ಕೆ ಸೇರಿದ ವರ್ಷಕ್ಕೆ 8000 ರೂಪಾಯಿನ ಆದಾಯವುಳ್ಳ 5 ಗ್ರಾಮಗಳನ್ನೂ ಮೈಸೂರಿಗೆ ಸೇರಿದ 9000 ರೂಪಾಯಿನ ಆದಾಯವುಳ್ಳ 7 ಗ್ರಾಮಗಳನ್ನೂ ಸೇರಿಸಿದ ಶಿವನಸಮುದ್ರದ ಜಹಗೀರು ಪ್ರಾಪ್ತವಾಯಿತು. ಅವ್ಯಾಜಕರುಣಾಶಾಲಿಗಳಾದ ಇಂತಹ ಮಹಾತ್ಮರಿಗೆಲ್ಲಾ ಲೋಕದಲ್ಲಿ ಖ್ಯಾತಿಬರುವುದೊಂದು ಸೋಜಿಗವಲ್ಲವು.

ಚಿಕ್ಕನಾಯ್ಕನಹಳ್ಳಿತಾಲ್ಲೂಕು ಕಂದಿಕೆರೆಸ್ಕೂಲ್.

ಜೂಲೈ ತಿಂಗಳು ತಾ॥ ೨೦ನೇ ಮಂಗಳವಾರ ಶ್ರೀಮನ್ಮಹಾರಾಣಿ ಇಂಡಿಯಾ ಚಕ್ರವರ್ತಿನಿ ವಿಕ್ಟೋರಿಯಾರವರ ಆಳಿಕೆಯ ೫೦ನೇ ವರುಷದ ಡೈಮಂಡ್ ಜೂಬಿಲಿ ಮಹೋತ್ಸವ ಸೂಚಕಾರ್ಥವಾಗಿ ಈ ಸ್ಕೂಲಿನಲ್ಲಿ ಒಂದು ಸಭೆ ಸೇರಿಸಲ್ಪಟ್ಟಿತ್ತು.

ಈ ಸಭಾಮಂದಿರವು ಕದಳೀಸ್ತಂಭಗಳಿಂದಲೂ ಪಲ್ಲವತೋರಣಗಳಿಂದಲೂ ಚಿತ್ರತರವಾದ ಮೇಲ್ಕಟ್ಟುಗಳಿಂದಲೂ, ಚಿತ್ರವಿಚಿತ್ರತೋರಣಗಳಿಂದಲೂ ಕನ್ನಡಿಗಡಿಯೂರ ಗುಳೂಪುಗಳಿಂದಲೂ ಮಹಾರಾಣಿ ಇಂಡಿಯೂ ಚಕ್ರವರ್ತಿನಿಯವರ ಶ್ರೀಮನ್ಮಹಾರಾಜ ಕೃಷ್ಣರಾಜರವರ ತಸ್ವೀರೆ ಮೊದಲಾದ ಚಿತ್ತರಪಟಗಳಿಂದಲೂ ಅತ್ಯಂತ ಶೋಭಾಯಮಾನವಾಗಿತ್ತು.

ಸಭಾಧ್ಯಕ್ಷರಿಗಾಗಿ ಅಲಂಕಾರದೊಡನೆ ಸಿದ್ಧಪಡಿಸಿದ್ದ ಪೀಠವನ್ನು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಡೆಪ್ಯುಟಿಇನ್ಸ್ಪೆಕ್ಟರ್ ಮಾ॥ ರಾ॥ ಘನವನ್ನು ಹೊಂದಿದ ಶಾಮರಾವು ಬಿ. ಎ. ಯವರು ಅಲಂಕರಿಸಿದರು.

ಕೂಡ್ಲೆ ಬಾಲಕರು ಗಣಪತಿಸ್ತುತಿ, ಶಾರದಾಸ್ತುತಿ, ಸಭಾವಂದನೆಯಹಾಡುಗಳನ್ನು ಹಾಡಿದರು. ಅನಂತರ ಸ್ಕೂಲ್‌ಮಾಸ್ಟರ್ ಹೆಚ್. ರಾಮಣ್ಣನವರು ವಿದ್ಯಾವಿಷಯವಾಗಿಯೂ ಈ ಸ್ಕೂಲಿನ ವಿಷಯವಾಗಿಯೂ ಇಂಡಿಯಾಚಕ್ರವರ್ತಿನಿಯವರ ಪರವಾಗಿಯೂ ಉಪನ್ಯಾಸವಾಡಿದರು.

ತರುವಾಯ ಸಮ್ಮತು ಶೇಕದಾರ್ ಮಾ॥ರಾ॥ ನರಸಿಂಗರಾಯರು ಜೂಬಿಲಿ ಮಹೋತ್ಸವದ ವಿಷಯವಾಗಿಯೂ ಸ್ಕೂಲ್‌ಮಜ್ಕೂರು ಲೋವರ್‌ಸೆಕೆಂಡರಿ ವಿದ್ಯಾರ್ಥಿ ಟಿ. ರಂಗಯ್ಯ ವಿದ್ಯಾರ್ಥಿಗಳ ಪರವಾಗಿ ತಮ್ಮ ಗುರುಗಳಲ್ಲಿರುವ ತಮ್ಮ ಆಸಕ್ತಿ ವಿಷಯವಾಗಿಯೂ ಉಪನ್ಯಾಸವಾಡಿದರು.

ಅನಂತರದಲ್ಲಿ ಸಭಾಧ್ಯಕ್ಷರಾದ ಶಾಮರಾವು ಬಿ. ಎ. ಯವರು ಎದ್ದುನಿಂತು ಉಪನ್ಯಾಸವಾಡಿದರು.—ಏನಂದರೆ,

ನಾನು ಈ ಸ್ಕೂಲ್ ಇನ್ಸ್ಪೆಕ್ಷನ್‌ಗಾಗಿ ಈ ಗ್ರಾಮಕ್ಕೆ ಬಂದೆನು. ನಿನ್ನೆಯ ದಿನ ಆ ಕೆಲಸ ನೆರವೇರಿಸಿದ್ದಾಯಿತು. ಈ ದಿವಸ ಡೈಮಂಡ್ ಜೂಬಿಲಿಮಹೋತ್ಸ

ವವನ್ನು ಸಂಭ್ರಮದೊಡನೆ ಆಗಮೊಡಬೇಕೆಂದು ಸಮ್ಮತು ಶೇಕದಾರ್ ಸ್ಕೂಲ್ ಮೆಂಬರುಗಳು ಈ ಗಾತ್ರಮದ ಮುಖಂಡರು ಬಹಳವಾಗಿ ಹೇಳಿದ್ದರಮೇಲೆ ಈದಿನ ಬೆಳಿಗ್ಗೆ ೭ಘಂಟೆಯಿಂದ ೧೧ಘಂಟೆವರಿಗೆ ವಿಶಾಲನಾದ ಕೆರೆಏಂಗಳದಬೈಲಿನಲ್ಲಿ ಬಾಲ ಕರುಗಳಿಂದ ವಿನೋದಕರವಾದ ಅಟಪಾಟ (ಸ್ಪೋರ್ಟ್ಸ್) ನಡಿಸಿದ್ದಾಯಿತು ಅದ ರಲ್ಲಿ ಜಯವಾದವರಿಗೆ ಫಲರೂಪವಾಗಿ ಈಗ ಬಹುಮೊನ ಕೊಡಬೇಕೆಂದುದ್ದೇಶಿಸಿರು ವೆನು. ಸ್ಕೂಲ್‌ಮೊಸ್ಟರ್ ಹೆಚ್ ರಾಮಣ್ಣನವರು ಓದಿದ ಲಕ್ಚರಿನಲ್ಲಿ ವಿದ್ಯಾ ಪ್ರೋತ್ಸಾಹದ ವಿಷಯದ ಉಪನ್ಯಾಸದಿಂದ ಅತಿ ಮೂಢರಿಗೂ ಕೂಡ ವಿದ್ಯಾಕಲಿ ಯಬೇಕೆಂಬ ಅತುರಹುಟ್ಟದೆ ಇರಲಾರದು. ಈ ಸ್ಕೂಲಿನ ರಿಪೋರ್ಟಿನಲ್ಲಿ ಸ್ಕೂಲಿನ ಪೂರ್ವ ಮತ್ತು ಈಗಿನಸ್ಥಿತಿ ನೋಡುವಲ್ಲಿ ಈ ಮೊಸ್ಟರ್ ಬಂದಮೇಲೆ ಉತ್ತಮಸ್ಥಿತಿಗೆ ಬಂತೆಂದು ದೃಢವಾಗಿ ಹೇಳಬಹುದು.

ಮು॥ರಾ॥ ನರಸಿಂಗರಾಯರು ಹೇಳಿದ ಉಪನ್ಯಾಸದಿಂದ ಇಂಡಿಯೂ ಚಕ್ರ ವರ್ತಿನಿಯವರ ಬಾಲ್ಯದಾರಭ್ಯ ಈಗಿನವರಿಗಿನ ಚರಿತ್ರೆಯೂ ಈ ಸ್ಕೂಲ್‌ಮೆಂಬರ್ ಹೊನ್ನಪ್ಪನವರು ಈ ಸ್ಕೂಲಿನ ಪುರೋವೃದ್ಧಿವಿಷಯದಲ್ಲಿಯೂ ಸ್ಕೂಲ್‌ಮಜೂರಿನ ಲೋವರ್‌ಸೆಕಂಡರಿಕ್ಲಾಸ್ ವಿದ್ಯಾರ್ಥಿ ಟಿ. ರಂಗಯ್ಯ ನೀತಿವಾಕ್ಯಪ್ರಧಾನವಾಗಿ ಯೂ ಉಪನ್ಯಾಸಮೊಡಿದ್ದು ಸಂತೋಷಕರವಾಗಿದೆ. ಈಗಿನ ಕಾಲದಲ್ಲಿ ಪೂರ್ವಕ್ಕಿಂ ತಲೂ ವಿದ್ಯಾಭ್ಯಾಸಕ್ಕೆ ಅನೇಕ ಸೌಲಭ್ಯಗಳಿರುವದ್ದರಿಂದ ಸಮಸ್ತರೂ ಆ ವಿಷಯ ದಲ್ಲಿ ತಮ್ಮತಮ್ಮ ಮಕ್ಕಳಿಗೆ ಅಕ್ಷರಾಭ್ಯಾಸಕ್ಕೆ ಪೂರ್ಣನಿಗಾಕೊಡಬೇಕು. ಮತ್ತು ಶರೀರಪುಷ್ಟಿಗಾಗಿ ಅಂಗಸಾಧನೆಯನ್ನು ಬಿಡದೆ ಸಾಧಿಸಲು ಏರ್ಪಡಿಸಬೇಕು. ಈ ಸ್ಕೂಲ್ ನಿನ್ನೆ ಪರೀಕ್ಷಿಸಿದ್ದರಲ್ಲಿ ಸಾಧಾರಣವಾಗಿ ಚನ್ನಾಗಿರುತ್ತೆ. ಲೋವರ್ ಸೆಕಿಂ ಡರಿಕ್ಲಾಸ್ ವಿದ್ಯಾರ್ಥಿಗಳ ಪೈಕಿ ಎಸ್. ವೆಂಕಟೇಶಯ್ಯ ಎಲ್ಲಾದರಲ್ಲಿಯೂ ಪ್ಯಾಸಾ ದದ್ದಲ್ಲದೆ ಗಣಿತದಲ್ಲಿ ಪ್ಯಾಸಾಗಬೇಕಾದ ಕ್ಲುಪ್ತನಂಬರಿಗಿಂತ ಹೆಚ್ಚು ಪಡೆದಿದ್ದಾನೆ. ಇನ್ನು ೪ ತಿಂಗಳು ಕಾಲದವರಿಗೆ ಚನ್ನಾಗಿ ವ್ಯಾಸಂಗಮೊಡಿದರೆ ೪ ಜನಗಳು ಪ್ಯಾಸಾ ಗಬಹುದು. ಇನ್ನೊಬ್ಬ ಅ! ಮೊಸ್ಟರ್, ಸರಿಯೂದ ಹೊಸಕಟ್ಟಡದ, ಈವಿಷಯದಲ್ಲಿ ಕೂಡ್ಲೆ ಯೋಚಿಸಲಾದೀತು. ಇಂಥಾ ಸಭೆಯನ್ನು ಈ ಊರಿನಲ್ಲಿ ಏರ್ಪಡಿಸಿದ್ದಕ್ಕಾಗಿ ನಾನು ಬಹಳ ಸಂತೋಷಪಡುತ್ತೇನೆ. ಈ ಜೂಬಿಲಿಯ ಮಹೋತ್ಸವಕ್ಕೆ ಕಾರಣ ಭೂತರಾದ ಶ್ರೀಮದಿಂಡಿಯಾಚಕ್ರವರ್ತಿನಿಯವರಿಗೂ ಇವರ ಕುಟುಂಬದ ಸರ್ವರಿಗೂ

ಮೈಸೂರು ನಮ್ಮ ಮಹಾರಾಣಿ ರೀಜಂಟರವರಿಗೂ ಶ್ರೀಮದಾ ಜಾಧಿರಾಜ ಕೃಷ್ಣ
ರಾಜ ಸಂವರ್ಮಭೌಮರಿಗೂ ಸಮಸ್ತಸನ್ಮಂಗಳಾ, ಇತೋಭ್ಯಧಿಕವಾಗಿ ನೆಲೆಗೊಳ್ಳಲಿ
ಎಂದು ಎಲ್ಲರೂ ದೇವರನ್ನು ಪ್ರಾರ್ಥಿಸಬೇಕಾಗಿದೆ.

ಈ ಪ್ರಕಾರವಾಗಿ ಹೇಳಿದ ನಂತರ ಸಂತೋಷಸೂಚಕಹಸ್ತತಾಡನೆಯು
ಸಂತೋಷದಿಂದ ತುಂಬಲ್ಪಟ್ಟಿತು. ನಂತರ ಸ್ಕೂಲ್‌ಮಾಸ್ಟರ್ ಹೆಚ್. ರಾಮಣ್ಣನ
ವರು ನೂತನವಾಗಿ ರಚಿಸಿದ್ದ ನಾಟಕರೂಪವಾದ ಹಾಡು ಇಂಡಿಯಾಚಕ್ರವರ್ತಿನಿಯ
ವರ ಪರವಾಗಿಯೂ ಶ್ರೀಕೃಷ್ಣರಾಜಸಾರ್ವಭೌಮರ ಪರವಾಗಿಯೂ ಸಭಾಧ್ಯಕ್ಷರ
ತರವಾಗಿಯೂ ಬಾಲಕರು ಹಾಡಿದ್ದಲ್ಲದೆ ಇನ್ನೂ ಕೆಲವು ಹಾಡುಗಳನ್ನು ಹಾಡಿದರು.
ಸಂಗೀತಗಾನವನ್ನೂ ಮಾಡಿದರು. ನಂತರ ಮಂಗಳವು ಹೇಳಲ್ಪಟ್ಟಿತು. ತರುವಾಯ
ಇಂಥ ಪ್ರಸ್ತಾವಮೊಲಿಕೆ ಸಕ್ಕರೆ ತಾಂಬೂಲವೂ ಸಹ ಎಲ್ಲರಿಗೂ ಹಂಚಲ್ಪಟ್ಟಿತು.
ಬಾಲಕರುಗಳಿಗೆ ಸಖ್ಖರೆ ಬಾಳೆಹಣ್ಣು ಹಂಚಿದ್ದಲ್ಲದೆ ಬೆಳಗಿನ ಆಟದಲ್ಲಿ ಜಯವನ್ನು
ತಂದಿದವರಿಗೆ ಪಾರಿತೋಷಕ ಕೊಡಲು ಆಗಲೆ ಚಂದಾವಸೂಲಾಗಿ ಅಧ್ಯಕ್ಷರವರೇ
ಕೊಟ್ಟರು. ಸಾಯಿಂಕಾಲ ೪॥ ಘಂಟೆ ಆಗಲು ಸರ್ವರೂ ಸಂತೋಷವನ್ನು ಸೂ
ಚಿಸುವ ಕೋಲಾಹಲಧ್ವನಿಯಿಂದ ಸಭೆಯನ್ನು ಬರಖಾಸ್ತುಮಾಡಿದರು.

ಶಾಮರಾವು ಬಿ. ಎಂ.

ಅಸಿಸ್ಟೆಂಟ್ ಡೆಪ್ಯುಟಿಇನ್‌ಸ್ಪೆಕ್ಟರ್

ತುಮಕೂರ್.

ಇನ್‌ಫೆಂಟ್ ಕ್ಲಾಸ್ ವಸ್ತುಪಾಠ

ಕಾಲ 3/4 ಗಂಟೆ :—

ಒತ್ತುವ ಕಾಗದದ ವಿಷಯ :—

ಈ ವಿಷಯದಲ್ಲಿ ಬಾಲಕರ ಪೂರ್ವಜ್ಞಾನ :—ಒತ್ತುವ ಕಾಗದವೆಂದು ತಿಳಿ
ಯುವುದು :—ಇದ್ದರಿಂದ ಅವರಿಗೆ ತಿಳಿಯದ ವಿಷಯವೆನ್ನು ಬೋಧಿಸಬೇಕು.

ಬೇಕಾದ ವಸ್ತು :—ಒತ್ತುವ ಕಾಗದ ವಿಧವಿಧವಾದದ್ದು.

ಮಾದರಿ :—ಗೋವಾ ಬಿಳೀಕಾಗದ ಮುಂತಾದ್ದು.

ವಿಷಯ.	ಕ್ರಮ :—
I. ಹೆಸರು :— ಒತ್ತುವಕಾಗದ ಅಥವಾ ಹಸೀಕಾಗದ.	ಮೊದಲು ಈ ಕಾಗದವನ್ನು ಬಾಲಕರಿಗೆ ತೋರಿಸದೆ ಪ್ರಶ್ನೆಗಳ ಮುಖಾಂತರವಾಗಿ ಬಾಲಕರಿಂದಲೇ ಇದರ ಹೆಸರನ್ನು ಹೊಂದಬೇಕು. ಹಾಗಿಲ್ಲದಿದ್ದರೆ ಕಾಗದವನ್ನು ತೋರಿಸಿ ಹೆಸರು ಹೇಳಿಸುವುದು.
II. ಭಾಗಗಳು :— (1) ಪಕ್ಕಗಳು :—	ಪ್ರಶ್ನೆಗಳ ಮೂಲಕ ಒತ್ತುವಕಾಗದಕ್ಕೆ ಎರಡು ಪಕ್ಕಗಳಿರುವವೆಂದು ಬಾಲಕರಿಂದಲೇ ಹೇಳಿಸುವುದು. ಅವುಗಳನ್ನು ತೋರಿಸುವಂತೆ ಹೇಳುವುದು.
(2) ಅಂಚುಗಳು :—	ಈ ಕಾಗದದ ಕೇಂದ್ರದಲ್ಲಿಯೇ ಅಗಲ ಅಥವಾ ಒಂದು ಅಂಚಿನಲ್ಲಿಯೇ ಅಗಲ ದಾರವಾಕೆ ಹಿಡಿದು ಬಾಲಕರಿಗೆಲ್ಲಾ ತೋರಿಸಿ ಪ್ರಶ್ನೆಗಳ ಮೂಲಕ ಅಂಚುಗಳನ್ನು ತಿಳಿಸುವುದು. ಅನಂತರ ಪ್ರತಿ ಒಂದು ಅಂಚನ್ನು ತೋರಿಸುವಂತೆಯೂ, ಅದು ಯಾವದಿಕ್ಕಿಗೆ ಇರುತ್ತದೆ ಎನ್ನುವದನ್ನು ಕೇಳುವುದು.
(3) ಕೋಣಗಳು ಅಥವಾ ಮೂಲೆಗಳು :—	ಮೇಲಿನರೀತಿ ಬಾಲಕರಿಂದಲೇ ಹೇಳಿಸಿ ತೋರಿಸುವುದು :—
III. ಉತ್ಪತ್ತಿ :—	ಒಣಹುಲ್ಲು ಮತ್ತು ಚಿಂದಿಬಟ್ಟೆ ಮುಂತಾದವುಗಳನ್ನು ನೆನೆಯಿಸಿ ಅದನ್ನು ಜಜ್ಜಿ ಮಾಡುತ್ತಾರೆಂದು ಹೇಳುವುದು.
IV. ವರ್ಣನ :— 1 ಚೌಕಸಾಕೃತಿ :— 2 ಒರಟು 3 ದಪ್ಪ- 4 ಹೀರುವ ಸ್ವಭಾವವುಳ್ಳದ್ದು.	ಕಾಗದಗಳು ಯಾವಾಗಲೂ ಚೌಕ ಸಾಕೃತಿಗಿಯಾಯೂ, ವರಟಾಗಿಯೂ, ಬಣ್ಣಗಳಿಂದ ಕೂಡಿದ್ದಾಗಿಯೂ, ನುಣುಪಾಗಿಯೂ, ಹೀರುವಸ್ವಭಾವವುಳ್ಳದ್ದಾಗಿಯೂ ಇರುತ್ತದೆಂದು ಹೇಳುವುದು.

V. ಬಣ್ಣಗಳು :—

1 ಬಿಳುಪು
2 ಕೆಂಪು
3 ಹಳದಿ
} ಮುಂತಾದವುಗಳು.

ವಿಧವಿಧ ಬಣ್ಣಗಳುಳ್ಳ ಕಾಗದಗಳನ್ನು ತೋರಿಸಿ ಬಣ್ಣಗಳ ಹೆಸರನ್ನು ಹೇಳಿಸುವುದು.

VI. ಹೋಲಿಕೆ.

ಗೋವಾಕಾಗದ—

ಒತ್ತುವಕಾಗದ. ಸಾಧಾರಣ ಕಾಗದ.

ಒರಟು. ನುಣುಪು.

ದಪ್ಪ. ತೆಳುವು.

ಹೀರುವ ಸ್ವಭಾವ. } ಜಾಗ್ರತೆ ಹೀರುವದಿಲ್ಲ.

ಸುಲಭವಾಗಿ ಹರಿಯತಕ್ಕದ್ದು. } ಹರಿಯುತಕ್ಕದ್ದು.

ಹೋಲಿಕೆ ವಸ್ತುಗಳನ್ನು ತೆಗೆದುಕೊಂಡು ಇವುಗಳನ್ನು ಹೇಳಿ ತೋರಿಸುವುದು.

ಬಿಳಿ
ಕೆಂಪು
ಹಳದಿ
} ಬಣ್ಣ { ಬಿಳಿ, ಕೆಂಪು. ಕಪ್ಪು, ನೀಲಿ ಮುಂತಾದ್ದು.

VII. ಉಪಯೋಗ :—

ಒತ್ತುವ ಕಾಗದವು ಬರೆದದ್ದನ್ನು ಒತ್ತುವದಕ್ಕೂ, ದ್ರವಪದಾರ್ಥಗಳನ್ನು ಶೋಧಿಸುವದಕ್ಕೂ, ಬಿಳೀಕಾಗದವು ಬರೆಯುವದಕ್ಕೂ, ಪದಾರ್ಥಗಳನ್ನು ಕಟ್ಟುವದಕ್ಕೂ ಉಪಯೋಗ :—

VIII ಪರೀಕ್ಷೆ :—

ಬೋಧಕನು ತಾನು ನೊದಲು ಬಾಲಕರಿಗೆ ಯಾವವಿಧವಾದ ವಸ್ತುವಿನ ವಿಷಯವನ್ನು ತಿಳಿಸುತ್ತಾನೋ ಅದನ್ನು ಪ್ರನಃ ಪ್ರಶ್ನೆಗಳಿಂದ ಪರೀಕ್ಷಿಸುವುದು.

ಸೂರಾ:—ಹೀಗೆಯೇ ಯಾವಕಾಗದ ವಿಷಯವಾಗಿಯಾವರೂ ಪಾಠಹೇಳುವುದು.

ಎ. ವೆಂಕಟಾಚಲಯ್ಯ,
ಸ್ಕೂಲ್ ಮಾಸ್ಟರ್, ಮಾಲೂರು.

ತೃಪ್ತಿ.

ಪ್ರಾಪ್ತಿ= ಲಾಭ ಸಹಪಾಠಿಗಳು= ಸಂಗಾತಿಯರು (ಜೊತೆಯಲ್ಲಿ ಓದುವವರು)
ಭಲಗಾತಿ= ಹಟವಾದಿ ದುರಾಶೆ= ಕೆಟ್ಟದಾದ ಅಪೇಕ್ಷೆ

ಶ್ಲೋ॥ ಯಸ್ಯಯಾವತ್ಪ್ರಾಪ್ತೇನೈವ । ಸ್ವೇನತುಷ್ಯತಿ ಬುದ್ಧಿಮಾ ॥

ಅರ್ಥವು॥ ಬುದ್ಧಿವಂತನಾದವನು ತನಗೆ ಎಷ್ಟು ಪ್ರಾಪ್ತವಾಗುವದೋ ಅಷ್ಟರಿಂದಲೇ ತೃಪ್ತನಾಗಿರುತ್ತಾನೆ.

ಶ್ರೀನಗರವೆಂಬ ಪಟ್ಟಣದಲ್ಲಿ ಸುಂದರಮ್ಮ ನೆಂಬ ಬಾಲೆಯು ಬಾಲಿಕಾಪಾಠಶಾಲೆಯಲ್ಲಿ ಓದುತ್ತಿದ್ದಳು. ಅಲ್ಲಿಗೆ ದೊರೆಸಾನಿಯವರು ಬಂದು ಈ ಹುಡುಗಿಯನ್ನು ನೋಡಿ ನಿನ್ನಹೆಸರೇನಮ್ಮಾ ಅಂದರು. ಸುಂದರಮ್ಮನೆಂದು ಹುಡುಗಿಯು ಹೇಳಿದಳು ನೀನು ಹಿಡದಿರುವ ಪುಸ್ತಕವು ಯಾವದೆನಲು ಸ್ತ್ರೀಧರ್ಮನೀತಿ ಎಂದಳು. ದೊರೆಸಾನಿಯವರು ಅದರಲ್ಲಿ ಸ್ವಲ್ಪ ಓದಮ್ಮಾ ಅಂದರು. ಸುಂದರಮ್ಮನು ನಾಚಿ ಮೊತನಾಡದೆ ಇದ್ದಳು. ಆಗ ಚನ್ನಾಗಿ ಓದಿದರೆ ಹೆಚ್ಚಾಗಿ ಮಿಠಾಯಿ ಕೊಡಿಸುವೆವೆಂದು ಹೇಳಲಾಗಿ ಸುಂದರಮ್ಮನು ಓದಿದಳು. ಎಲ್ಲರಪರೀಕ್ಷೆಯು ಮುಗಿದ ಬಳಿಕ ಮಿಠಾಯಿ ತರಿಸಿ ಸುಂದರಮ್ಮನಿಗೆ ಮಿಕ್ಕವರಿಗಿಂತಲೂ ಸ್ವಲ್ಪ ಹೆಚ್ಚಾಗಿಯೇ ಕೊಡುವದಕ್ಕೆ ಹೋದರು. ಬಾಯಿಮರೆಯದ ಮೊರ್ಖತನವುಳ್ಳ ಸುಂದರಮ್ಮನು ಎಷ್ಟು ಹೆಚ್ಚು ಕೊಡುವದಕ್ಕೆ ಹೋದಾಗ್ಯೂ ಒಪ್ಪಲಿಲ್ಲಂ ಈ ಸಂಗತಿ ದೊರೆಸಾನಿಯವರು ಯೋಚಿಸಿ ಸುಂದರಮ್ಮನ ಕೈಲಿ ಇದ್ದ ಮಿಠಾಯಿ ತುಂಡನ್ನು ಎರಡುಭಾಗವಾಡಿ ಹೆಚ್ಚಾದ್ದನ್ನು ತೆಗೆದುಕೋ ಅಂದರು. ಕೂಡಲೆ ಸುಂದರಮ್ಮನು ಬಂದು ತೆಗೆದುಕೊಂಡಳು. ಆತುಂಡು ಸುಂದರಮ್ಮ ಪೂರ್ತಿ ಹೆಚ್ಚೆಂತ ತೆಗೆದುಕೊಂಡಳಲ್ಲದೆ ಅದು ಮಿಕ್ಕವರಿಗೆ ಬಂದಷ್ಟಾದರೂ ಇರಲಿಲ್ಲ.

ಅದನ್ನು ಸಹಪಾಟಿಗಳು ನೋಡಿ ಇದೇನೇ ಭಲಗಾತಿ ಅಷ್ಟು ಮೊತನಾಡಿ ನಿನಗಿಷ್ಟೇನೆ ಅಂದು ಕೇಳಲು ಸುಂದರಮ್ಮನು ಹುಬ್ಬು ಗಂಟುಹಾಕಿಕೊಂಡಳು. ಉಪಾಧ್ಯಾಯರು ಇದನ್ನೆಲ್ಲಾ ನೋಡಿ ಬಾಲೆಯರೇ ತನ್ನಕೈಗೆ ಕೊಟ್ಟದ್ದಕ್ಕೆ ತೃಪ್ತಿಪಡದೆ ಹೋರೆಯಿಂದ ಬಹಳಕ್ಕೆ ದುರಾಶೆ ಪಟ್ಟಳು ಅದಕ್ಕೆ ಅವಳಿಗೆ ಸ್ವಲ್ಪ ಶಿಕ್ಷೆ. ದುರಾಶೆ ಪಟ್ಟರೆ ಹೆಚ್ಚು ಲಾಭ ದೊರಕಲಾರದು ಎಂದು ಬುದ್ಧಿವಾದ ಹೇಳಿದರು.

ಅತೀಆಶೆ ಗತೀಕೆಡಿಸಿತು.

ಪ್ರಶ್ನೆ–(೧) ದೊರೆಸಾನಿಯವರು ಸುಂದರಮ್ಮನನ್ನು ಏನೆಂದು ಕೇಳಿದರು. ಸುಂದರಮ್ಮನು ಏನೇನು ಹೇಳಿದಳು. (೨) ಅತೀಆಶೆ ಪಟ್ಟ ಸುಂದರಮ್ಮನಿಗೆ ತೃಪ್ತಿಪಡಿಸಲು ದೊರೆಸಾನಿಯವರು ಏನುಪಾಯಮಾಡಿದರು. (೩) ಸಹಪಾಠಿಗಳು ಸುಂದರಮ್ಮನ್ನು ಏನೆಂದು ಹಂಗಿಸಿದರು. (೪) ಈ ಪಾಠದಲ್ಲಿ ಉಪಾಧ್ಯಾಯರು ಬಾಲೆಯರಿಗೆ ಹೇಳಿದ ಬುದ್ಧಿವಾದವೇನು.

ವಿದ್ಯಾದಾಯಿನಿ.

ಭಾಗ ೫.] ಆಗಸ್ಟ್ ೧೯೨೭. [ಸಂಚಿಕೆ ೮.

ಆರೋಗ್ಯದೃಢಕಾಯತ್ವ.

ಇಂಡಿಯನ್ ಮೆಡಿಕಲ್ ಸರ್ವಿಸ್ ಎಂಬ [illegible] ಎಂ. ಡಿ. ಯವರು ಆರೋಗ್ಯದೃಢಕಾಯರಾಗಿರಬೇಕಾದರೆ ಜನರು ಯಾವರೀತಿಯಲ್ಲಿ ನಡೆದುಕೊಳ್ಳಬೇಕೋ ಆ ವಿಷಯದಲ್ಲಿ ತಮ್ಮ ತಾತ್ಪರ್ಯವನ್ನು ತಿಳಿಸಿದಾರೆ. ಇವರು ವಿಲಾಯತಿಗೆ ಹೋಗಿ ಅನೇಕ ವರುಷಗಳು ವೈದ್ಯಶಾಸ್ತ್ರವನ್ನು ಅಭ್ಯಾಸಮಾಡಿ ಎಂ. ಡಿ. ಎಲ್. ಆರ್, ಸಿ, ಎಸ್. ಎಲ್, ಆರ್, ಸಿ, ಪಿ. ಮೊದಲಾದ ಪರೀಕ್ಷೆಗಳನ್ನು ಕೊಟ್ಟು, ಅನನ್ಯದೃಶವಾದ ಪಾಂಡಿತ್ಯವನ್ನು ಸಂಪಾದಿಸಿದಾರೆ. ಇವರ ಅಭಿಪ್ರಾಯವು ಸರ್ವರಿಗೂ ಪರೀಕ್ಷಣೀಯವಾಗಿಯೂ ಅವಲಂಬನೀಯವಾಗಿಯೂ ಇರುತ್ತದೆ. ಆದುದರಿಂದ ಅದನ್ನು ಕನ್ನಡಿಗರ ತಿಳುವಳಿಕೆಗೋಸ್ಕರ ಬರೆಯಲ್ಪಟ್ಟಿದೆ.

ಶಾರೀರಕವ್ಯಾಪಾರಗಳು ಕ್ರಮವಾಗಿ ನಡೆದು ರೋಗಾದಿಗಳಿಗೆ ಅವಕಾಶವಿಲ್ಲದೆ ಇರುವ ಸ್ಥಿತಿಯೇ ಆರೋಗ್ಯವೆನ್ನಿಸಿಕೊಳ್ಳುವದು. ಶರೀರದ ವ್ಯಾಪಾರಗಳು ಕ್ರಮತಪ್ಪಿ ರೋಗಾದಿಗಳಿಗೆ ಅವಕಾಶ ಉಂಟಾಗತಕ್ಕ ಸ್ಥಿತಿಯೇ ಅನಾರೋಗ್ಯ ಅಥವಾ ರೋಗವೆನ್ನಿಸಿಕೊಳ್ಳುವದು. ಇದುವರಿಗೂ ರೋಗದ ನಿದಾನವು ಸಂಪೂರ್ಣವಾಗಿ ತಿಳಿಯಲ್ಪಟ್ಟಿರಲಿಲ್ಲ. ಅನೇಕ ವಿದ್ವಾಂಸರು ಅನೇಕ ದೇಶಗಳಲ್ಲಿ ನಾನಾವಿಧವಾದ ವ್ಯಾಧಿಗಳ ಮೂಲಕಾರಣವನ್ನು ಗೊತ್ತುಮಾಡಬೇಕೆಂದು ಪರೀಕ್ಷಿಸುತ್ತಲಿದಾರೆ. ಒಂದೊಂದು ವ್ಯಾಧಿಗೆ ಒಂದೊಂದು ಕಾರಣವನ್ನು ಬರೆದು ಇಟ್ಟಿದಾರೆ. ಅನೇಕರು ಮತ್ತೆ ಹೊಸಹೊಸ ಕಾರಣಗಳನ್ನು ಬರೆಯುತ್ತಲೂ ಇದಾರೆ. ಇವುಗಳೆಲ್ಲಾ ಮೂಲಕಾರಣಗಳು ಅಲ್ಲಾ, ಎಂಬದಾಗಿಯೂ ಇದಕ್ಕೆ ಪ್ರತ್ಯೇಕ ಕಾರಣಗಳುಂಟು

ಎಂಬದಾಗಿಯೂ ಈಗಿನ ವೈದ್ಯವಿದ್ಯಾವಿಶಾರದರಾದ ಪಂಡಿತರು ನಿಸ್ಸಂದೇಹವಾಗಿರು
ವಂತೆ ಪರೀಕ್ಷೆಗಳ ಮೂಲಕ ಸಿದ್ಧಾಂತವೂಡಿದಾರೆ. ಆ ಸಿದ್ಧಾಂತವಾವದೆಂದರೆ:—

ಪ್ರಪಂಚದಲ್ಲಿ ದೃಗ್ಗೋಚರವಾಗದೇ ಅಣುರೂಪವಾಗಿ ಕೋಟ್ಯಂತರ
ಪ್ರಾಣಿಗಳು ಇರುತ್ತವೆ ಸಣ್ಣ ಸಣ್ಣ ಪದಾರ್ಥಗಳನ್ನು ನೋಡುವದಕ್ಕೋಸ್ಕರ
ನಿರ್ಮಿಸಲ್ಪಟ್ಟಿರುವ ಮೈಕ್ರಸ್ಕೋಪೆಂಬ ದುರ್ಬೀನಿನ ಸಹಾಯದಿಂದ ಅವುಗಳನ್ನು
ಚೆನ್ನಾಗಿ ನೋಡಬಹುದು. ಆ ಪ್ರಾಣಿಗಳು ಉಚ್ಛ್ವಾಸ್ವಸಮೂಲಕ ತೆಗೆದುಕೊಳ್ಳುವ
ವಾಯುವಿನಲ್ಲಿಯೂ ಅನ್ನಪಾನಗಳಲ್ಲಿಯೂ ಸೇರಿಕೊಂಡು ನಮ್ಮ ಶರೀರವನ್ನು
ಪ್ರವೇಶಿಸುವವು. ನಮ್ಮ ರಕ್ತದಲ್ಲಿಯೂ ಕೂಡ ಅನೇಕ ಪ್ರಾಣಿಗಳು ಇರುವವು.
ನಮ್ಮ ಶರೀರಕ್ಕೆ ಸಂಬಂಧಪಟ್ಟ ಪ್ರಾಣಿಗಳಿಗೂ ಹೊರಗಿನಿಂದ ಶರೀರದೊಳಕ್ಕೆ
ಪ್ರವೇಶಿಸಿದ ಪ್ರಾಣಿಗಳಿಗೂ ಘೋರವಾದ ಯುದ್ಧವು ಉಪಕ್ರಮವಾಗುವದು. ಈ
ಯುದ್ಧದಲ್ಲಿ ನಮ್ಮ ಶರೀರದಲ್ಲಿರತಕ್ಕ ಪ್ರಾಣಿಗಳು ಜಯವನ್ನು ಹೊಂದಿದರೆ ಹೊರ
ಗಿನಿಂದ ಪ್ರವೇಶಿಸಿದ ಪ್ರಾಣಿಗಳೆಲ್ಲಾ ಪರಾಭವವನ್ನು ಹೊಂದಿ ಮೃತವಾಗುವವು
ಹೀಗಾಗುವಾಗ ನಮ್ಮ ರಕ್ತದಲ್ಲಿರುವ ಪ್ರಾಣಿಗಳ ಸಂಚಾರವು ಅತ್ಯಂತ ವೇಗವಾಗಿ
ಶಾಖಹುಟ್ಟಿ ಜ್ವರಾದಿಗಳು ತಲೆದೋರುವವು. ಹೊರಗಿನಿಂದ ಪ್ರವೇಶಿಸಿದ ಪ್ರಾಣಿ
ಗಳ ಶಕ್ತಿಯೇ ಹೆಚ್ಚಾದಪಕ್ಷದಲ್ಲಿ ನಮ್ಮ ಶರೀರದಲ್ಲಿರುವ ಪ್ರಾಣಿಗಳ ಶಕ್ತಿಯು ಕಡಿವೆ
ಯಾಗುವದು. ಕ್ರಮಕ್ರಮವಾಗಿ ಹೊರಗಿನಿಂದ ಪ್ರಾಣಿಗಳು ನಮ್ಮ ಶರೀರದ
ಲ್ಲಿರುವ ಪ್ರಾಣಿಗಳನ್ನು ಕೊಂದು ಶರೀರದಲ್ಲಿಯೇ ಸೇರಿಕೊಂಡು ತಾವು ಕೊಂದ
ಪ್ರಾಣಿಗಳನ್ನು ಭಕ್ಷಿಸುತ್ತ ವೃದ್ಧಿಯನ್ನೆಯ್ದುವದಲ್ಲದೆ ಅಲ್ಲಿಯೇ ಮರಿಗಳನ್ನು ಹಾಕಿ
ಕೊಂಡು ಶರೀರವೆಲ್ಲಾ ವ್ಯಾಪಿಸಿ ಮನುಷ್ಯನು ಸೇವಿಸುವವರಿಗೂ ದೇಹದಲ್ಲಿ
ರತಕ್ಕ ಸಾರಭೂತವಾದ ಪದಾರ್ಥಗಳನ್ನೆಲ್ಲಾ ತಿನ್ನುತ್ತಾಯಿರುವವು. ಆರೋ
ಗ್ಯಕ್ಕೆ ಪ್ರತಿಕೂಲವಾದ ಪ್ರಾಣಿಗಳು ಪ್ರಪಂಚದಲ್ಲೆಲ್ಲಾ ಅಸಂಖ್ಯಾತವಾಗಿ ಹ
ಡಿಕೊಂಡಿರುವದರಿಂದ ಅವುಗಳ ಸ್ವಭಾವವನ್ನೂ ಅವು ನಮ್ಮ ದೇಹದೊಳಕ್ಕೆ ಪ್ರವೇ
ಶಿಸತಕ್ಕ ವಿಧಾನವನ್ನೂ ಅವುಗಳು ವೃದ್ಧಿಯಾಗತಕ್ಕಕ್ರಮವನ್ನೂ ಅವುಗಳನ
ನಿಗ್ರಹಿಸುವದಕ್ಕೋಸ್ಕರ ನಾವು ಮಾಡಬೇಕಾದ ಉಪಾಯವನ್ನೂ ತಿಳಿದುಕೊಳ್ಳು
ವದು ನಮಗೆ ಅತ್ಯಾವಶ್ಯಕವಾದದ್ದು.

ಈಪ್ರಾಣಿಗಳು ಎಲ್ಲೆಲ್ಲಿಯೂ ಇರುತ್ತವೆ. ಇವುಗಳು ದೊಡ್ಡದೊಗ

ರಸ್ತೆಗಳಲ್ಲಿಯೂ ಕಟ್ಟಡಗಳಲ್ಲಿಯೂ ಮನೆಗಳಲ್ಲಿಯೂ ಗೋಡೆಗಳಮೇಲೂ ನೇ
ಗಳಮೇಲೂ ಗಾಡಿಗಳಲ್ಲಿಯೂ ರೈಲುಬಂಡಿಗಳಲ್ಲಿಯೂ ಮನುಷ್ಯಸಂಚಾರವಿರತಕ್ಕ
ಎಲ್ಲಾ ಪ್ರದೇಶಗಳಲ್ಲಿಯೂ ನಾವು ತೆಗೆದುಕೊಳ್ಳುವ ನಾಯುವಿನಲ್ಲಿಯೂ ನಮ್ಮ ಅನ್ನ
ಪಾನಗಳಲ್ಲಿಯೂ ಸೇರಿಕೊಂಡಿರುತ್ತವೆ. ಒಂದು ಚದುರಂಗುಲದಪ್ರದೇಶದಮ್ಮೆ
ರಲ್ಲಿ ೪೦ಕೋಟಿ ಪ್ರಾಣಿಗಳನ್ನು ಒಂದುವರಸೆಯೊಳಗಿ ಹರಡಬಹುದು. ನಮ್ಮ ಬಾಯಿ
ನಲ್ಲಿಯೂ ರೋಮಕೂಪಗಳೇ ಮೊದಲಾದ ಸರ್ವಾವಯವಗಳ ಸಂದುಗಳಲ್ಲಿಯೂ
ಇರತಕ್ಕ ಪ್ರಾಣಿಗಳ ಸಂಖ್ಯೆಯನ್ನು ಪರಿಗಣಿಸುವದೇ ಅಸಾಧ್ಯ. ಯೂವಕದಾಥ
ಗಳನ್ನಿಟ್ಟದ್ದಾಗ್ಯೂ ಅವುಗಳನ್ನು ಈ ಪ್ರಾಣಿಗಳು ಆಕ್ರಮಿಸುವವು. ಈ ಪ್ರಾಣ
ಗಳು ಹಾಲಿನಲ್ಲಿ ಸೇರಿ ಹುಳಿಯನ್ನುಂಟುಮಾಡುವವು. ದೋಸೇಹಿಟ್ಟು ಮೊದಲಾ
ದವುಗಳಲ್ಲಿ ಸೇರಿ ಉಕ್ಕುವಂತೆ ಮಾಡುವದಲ್ಲದೆ ಹುಳಿಯನ್ನುಂಟುಮಾಡುವವು. ಹೆಂಡ
ಮೊದಲಾದ ಮದ್ಯದ್ರವ್ಯಗಳಲ್ಲಿ ಸೇರಿ ನೊರೆಯನ್ನೂ ಹುಳಿಯನ್ನೂ ಉಂಟುಮಾಡ
ವವು. ನಮ್ಮ ಶರೀರವನ್ನು ಪ್ರವೇಶಿಸಿ ನಿಸ್ಸಾರವಾದ ಪದಾರ್ಥಗಳನ್ನು ತಾವೆ
ಸೇವಿಸುವದರಿಂದ ಶರೀರವನ್ನು ಶುದ್ಧಮಾಡುವದು. ಭೂಮಿಯಮೇಲೆ ಅನೇಕಪದಾ
ರ್ಥಗಳೊಡನೆ ಸೇರಿಕೊಂಡು ಗೊಬ್ಬರವಾಗಿ ಪರಿಣಮಿಸಿ ಭೂಮಿಯನ್ನು ವಿಶೇಷ
ಫಲವತ್ತಾಗುವಂತೆ ಮಾಡುವದು. ಈ ಪ್ರಾಣಿಗಳು ಜನರಿಗೆ ಉಪಕಾರಿಗಳಾಗಿಯೂ
ಕೆಲವುವೇಳೆ ಅಪಕಾರಿಗಳಾಗಿಯೂ ಇರುವವು ಸಾಮಾನ್ಯವಾಗಿ ಮನುಷ್ಯನಶರೀ
ರದೊಳಗೆ (ರಕ್ತ ಮಾಂಸ ಮೊದಲಾದವುಗಳಲ್ಲಿ) ಇರುವ ಪ್ರಾಣಿಗಳು ಬಲವಾಗಿಯೂ
ಹೊರಗಿನ ಪ್ರಾಣಿಗಳನ್ನು ನಿಗ್ರಹಿಸುವಷ್ಟು ಶಕ್ತಿಯುಳ್ಳದ್ದಾಗಿಯೂ ಇರುವವು
ಆದರೆ ಅನೇಕ ಜನರು ಆಹಾರವಿಹಾರಗಳಲ್ಲಿ ಆರೋಗ್ಯನಿಬಂಧನೆಗಳನ್ನುಲ್ಲಂಘಿಸಿ
ಉಚ್ಛೃಂಖಲವಾಗಿ ನಡೆದು ದೌರ್ಬಲ್ಯವನ್ನುಂಟುಮಾಡಿಕೊಳ್ಳುವರು. ಈ ದೌರ್ಬ
ಲ್ಯವೇ ನಮ್ಮ ಶರೀರದಲ್ಲಿರುವ ಪ್ರಾಣಿಗಳ ದೌರ್ಬಲ್ಯವು. ನಮ್ಮ ಶರೀರದ ಪ್ರಾಣ
ಗಳು ದುರ್ಬಲವಾದಾಗ ಹೊರಗಿನಿಂದ ಶರೀರವನ್ನು ಪ್ರವೇಶಿಸತಕ್ಕ ಪ್ರಾಣಿಗ
ಳನ್ನು ನಿಗ್ರಹಿಸುವದಕ್ಕೆ ಕೈಲಾಗದಂತೆ ಆಗುವವು. ಇವುಗಳಿಗೆ ಯುದ್ಧ ಉಂಟಾ
ಗುವದೇ ರೋಗವೆಂದು ಎನ್ನಿಸಿಕೊಳ್ಳುವವು. ಆಗಲೇ ನಮ್ಮ ಶರೀರದಲ್ಲಿರುವ ಪ್ರಾಣಿ
ಗಳಿಗೆ ವಿಶೇಷಶಕ್ತಿಯನ್ನೂ ಅವುಗಳಿಗೆ ಶತ್ರುಗಳಾದ ಪ್ರಾಣಿಗಳಿಗೆ ನಿಶ್ಶಕ್ತಿಯನ್ನೂ
ಉಂಟುಮಾಡತಕ್ಕ ಚಿಕಿತ್ಸಾಕ್ರಮಗಳನ್ನು ನಡೆಸುವರು. ಇದರಿಂದ ಶರೀರ

ಪ್ರಾಣಿಗೆ ದೌರ್ಬಲ್ಯ ತಪ್ಪಿ ಕ್ರಮೇಣ ಶಕ್ತಿ ಬಂದು ಶತ್ರುನಿಗ್ರಹವೂಡತಕ್ಕ ಸಾಮರ್ಥ್ಯವುಂಟಾಗುವದು. ಆಗ ಜನರಿಗೆ ಆರೋಗ್ಯವಾಯಿತೆಂದು ಹೇಳುತ್ತೇವೆ ನವ ಶರೀರದಲ್ಲಿ ಎಲ್ಲಿಯಾದರು ಸ್ವಲ್ಪ ಗಾಯವಾದರೆ ಪರಮಾಣುರೂಪವಾದ ಹೊರಗಿ ಪ್ರಾಣಿಗಳು ಕೂಡಲೆ ಆ ಸ್ಥಳವನ್ನು ಆಕ್ರಮಿಸಿ ಅಲ್ಲಿರತಕ್ಕ ನಮ್ಮ ದೇಹ ಪ್ರಾಣಿಗಳ ಜೊತೆಯಲ್ಲಿ ಯುದ್ಧವನ್ನುಪಕ್ರಮಿಸುವದು ಶರೀರದಲ್ಲಿರುವ ಪ್ರಾಣಿಗಳಿಂದ ಅವುಗಳಿಗೆ ಪರಾಜಯನಾದಪಕ್ಷದಲ್ಲಿ ಗಾಯವು ಬೇಗ ಮಾಯುವದು ಇಲ್ಲದಪಕ್ಷದಲ್ಲಿ (ಮನುಷ್ಯನ ಆರೋಗ್ಯವು ಸಮರ್ಪಕವಾಗಿಲ್ಲದೆ ದುರ್ಬಲನಾದ್ದಪಕ್ಷದಲ್ಲಿ) ಈ ಪ್ರಾಣಿಗಳು ಆ ಸ್ಥಳದಲ್ಲಿರತಕ್ಕ ದೇಹದ ಪ್ರಾಣಿಗಳನ್ನು ಕೊಲ್ಲುವವು. ಇದರಿಂದಲೇ ಆ ಸ್ಥಳವು ಕೀತುಕೊಂಡು ವ್ರಣವಾಗುವದು. ಸರಿಯಾ ಚಿಕಿತ್ಸೆಯನ್ನು ಮಾಡಿ ಅವುಗಳನ್ನು ಕೊಲ್ಲದಿದ್ದರೆ ಅವು ಕ್ರಮೇಣ ದೊಡ್ಡದೊಡ್ಡ ಹುಳುಗಳಾಗಿ ರಕ್ತದಲ್ಲಿರುವ ಇತರಪ್ರಾಣಿಗಳನ್ನು ಭಕ್ಷಿಸಿ ವೃದ್ಧಿಯಾಗುತ್ತಬವವು. ಗಾಯವಾದವರು ತಮ್ಮ ಗಾಯಕ್ಕೆ ಬಟ್ಟೆಯನ್ನು ಕಟ್ಟಿ ಮುಚ್ಚಿಕೊಂಡಿರುವರು. ಹೀಗಿದ್ದಾಗ್ಯೂ ಒಳಗೆ ಹುಳುಗಳು ಉತ್ಪತ್ತಿಯಾಗುವದು. ಆಹಾರಪಾಗಳೊಡನೆ ಶರೀರದೊಳಕ್ಕೆ ಹೋದ ಹುಳಗಳಲ್ಲಿ ಕೆಲವು ಅಲ್ಲಿ ತಮಗೆ ದೊರೆಯುವ ಆಹಾರವನ್ನು ತಿಂದು ವೃದ್ಧಿಯನ್ನೈದಿರುವವು. ಭೇದಿಗೆ ತೆಗೆದುಕೊಂಡಾಗ ಕೆಲವು ಹುಳುಗಳೆಂಬ ಸಣ್ಣ ಸಣ್ಣ ಹುಳುಗಳೂ ಜಂತುಹುಳುಗಳೂ ನಮ್ಮ ಶರೀರದಿಂದ ಈಚೆಗೆಬಂದು ಬೀಳುವವು. ಈ ವಿಷಯವನ್ನು ಕುರಿತು ಪರ್ಯಾಲೋಚಿಸಿದರೆ ಗಾಯಕ್ಕೇಆಗಲಿ ಶರೀರದೊಳಕ್ಕೇಆಗಲಿ ಯಾರಾದರು ಪ್ರಾಣಿಗಳನ್ನು ತಂದುಬಿಡುತ್ತಾರೆಯೇ, ಅಥವಾ ಯಾವಪ್ರಾಣಿಗಳಾದರೂ ತಂದುಬಿಡುತ್ತವೆಯೇ? ಯಾವದೂ ಇಲ್ಲ. ನಿಜಸ್ಥಿತಿಯನ್ನು ಪರ್ಯಾಲೋಚಿಸಿದರೆ ಆ ಸಣ್ಣ ಸಣ್ಣ ಅಣುರೂಪವಾದ ಪ್ರಾಣಿಗಳೇ ನಮ್ಮ ಶರೀರದಲ್ಲಿ ದುರ್ಬಲವಾಗಿ ಸತ್ತ್ವಗಳನ್ನು ಭಕ್ಷಿಸುತ್ತ ವೃದ್ಧಿಯನ್ನೈದಿ ಕಣ್ಣಿಗೆ ಕಾಣಿಸುವಷ್ಟು ಗಾತ್ರವಾಗಿ ಆಗುವವು. ಇದು ಹಾಗಿರಲಿ. ಜ್ವರಿಗೆ ಉಂಟಾಗತಕ್ಕ ಸಮಸ್ತರೋಗಗಳಿಗೂ ಈ ಪ್ರಾಣಿಗಳೇ ಮುಖ್ಯಕಾರಣಗಳು. ಜನಸ್ತೋಮವುಳ್ಳ ಸ್ಥಳಗಳಲ್ಲಿ ಇವು ವಿಶೇಷವಾಗಿರುವವು. ವಾಯುಸಂಚಾರಕೂ ಬಿಸಿಲಿಗೂ ಅವಕಾಶವಿಲ್ಲದೆ ಇರತಕ್ಕ ಸ್ಥಳಗಳಲ್ಲಿಯೂ ತಗ್ಗಾದಪ್ರದೇಶಗಳಲ್ಲಿಯು ಇವು ಬಹಳ ಹೆಚ್ಚಾಗಿರುತ್ತವೆ. ಸೂರ್ಯೋದಯಕಾಲದಲ್ಲಿ ಇವು ವಿರಳವಾಗಿರುತ್ತವೆ

ಮಧ್ಯಾಹ್ನದವೇಳೆಗೆ ಅಸಂಖ್ಯಾತಗಳಾಗಿ ಉತ್ಪನ್ನವಾಗಿ ಬಾಲ್ಯ ಯೌವನ ವಾರ್ಧ
ಕಾವಸ್ಥೆಗಳನ್ನು ಅನುಭವಿಸಿ ಸಂಧ್ಯಾಕಾಲಕ್ಕೆ ವಿಶೇಷವಾಗಿ ಲಯವಾಗುತ್ತವೆ.
ಇವು ಬೆಟ್ಟ ಗುಡ್ಡ ಮೈದಾನ ಮೊದಲಾದವುಗಳಲ್ಲಿರುವದಕ್ಕಿಂತ ಜನಸ್ತೋಮವಾದ
ಊರುಗಳು ಇರುವ ಪ್ರದೇಶಗಳಲ್ಲಿ ವಾಯುಮಂಡಲದಲ್ಲಿ ತಂಡೋಪತಂಡಗಳಾಗಿ
ಸೇರಿಕೊಂಡಿರುತ್ತವೆ. ಅದರಲ್ಲೂ ವಾಯುಸಂಚಾರವು ಬಿಸಿಲಿನ ಪ್ರಸರಣೆಯೂ ವಿಶೇ
ಷವಾಗಿಲ್ಲದೆ ಇರತಕ್ಕ ಮನೆಗಳಲ್ಲಿ ಇವು ಬಹಳ ಪ್ರಬಲವಾಗಿರುತ್ತವೆ. ಇದಲ್ಲದೆ ಜನರು
ವಿಶೇಷವಾಗಿ ಸೇರತಕ್ಕ ಕಟ್ಟಡಗಳಲ್ಲಿಯೂ ಮನೆಗಳಲ್ಲಿಯೂ ಇವು ಅತ್ಯಂತ ನಿಬಿಡ
ವಾಗಿರುತ್ತವೆ ಚಾಪೆ ಮೊದಲಾದವುಗಳನ್ನು ನಿರಂತರ ಹಾಸಿರುವ ಸ್ಥಳಗಳಲ್ಲಿ ಇವು
ವಿಶೇಷವಾಗಿರುವವು. ರೈಲ್ವೇಗಾಡಿಯಲ್ಲಿ ಒಂದು ಚದರಡಿಯಷ್ಟು ಸ್ಥಳದಲ್ಲಿ ಪರೀಕ್ಷೆ
ಯನ್ನು ಮಾಡಿ ನೋಡಲಾಗಿ ೩೦೫ ಪ್ರಾಣಿಗಳು ಸಿಕ್ಕಿದವು. ಅಂತೂ ಈ ಪ್ರಾಣಿ
ಗಳಲ್ಲಿ ನಾನಾವಿಧವಾದ ರೋಗಗಳನ್ನುತ್ಪತ್ತಿಮಾಡತಕ್ಕ ಶಕ್ತಿಯುಳ್ಳ ಪ್ರಾಣಿಗಳು
ಸೇರಿಕೊಂಡಿರುವವು. ಅವುಗಳಲ್ಲಿ ಕೆಲವು ಕ್ಷಯರೋಗ ಮತ್ತೆ ಕೆಲವು ಕಣ್ಣುಬೇನೆ
ಇನ್ನೂ ಕೆಲವು ವಾಂತಿಭೇದಿರೋಗ ಇವೇಮೊದಲಾದ ಸಾಂಕ್ರಾಮಿಕರೋಗಗಳನ್ನು
ತ್ಪಾದನೆಮಾಡತಕ್ಕವುಗಳೂಕೂಡ ಸೇರಿರುತ್ತವೆ. ಇವು ತಮಗೆ ಆಹಾರಸಿಕ್ಕುವಸ್ಥಳ
ಗಳಲ್ಲೆಲ್ಲಾ ವೃದ್ಧಿಯನ್ನೈದುವವು. ಬಚ್ಚಲು ಪಾಯಿಖಾನೆ ತಿಪ್ಪೇಗುಂಡಿ ಮೊದ
ಲಾದವುಗಳಲ್ಲಿ ಇವುಗಳಿಗೆ ಆಹಾರವು ವಿಶೇಷವಾಗಿ ಸಿಕ್ಕುವದರಿಂದ ಅಲ್ಲಿ ಇವು ವಿಶೇ
ಷವಾಗಿರುವವು. ಕೆಲವು ಪ್ರಾಣಿಗಳು ಚೆನ್ನಾಗಿ ತಿಂದು ಬೆಳೆದು ದೊಡ್ಡವಾಗಿ
ಬಚ್ಚಲು ಮತ್ತು ಪಾಯಿಖಾನೆಗಳಲ್ಲಿ ಓಡಾಡುವ ಹುಳುಗಳಾಗಿ ಪರಿಣಮಿಸುವವು.
ತಿಪ್ಪೆಗಳಲ್ಲಿ ಗೊಣ್ಣೆಹುಳು ಮೊದಲಾದ ದೊಡ್ಡದೊಡ್ಡ ಹುಳುಗಳು ಗೊಬರವನ್ನು
ತೆಗೆಯುವಕಾಲದಲ್ಲಿ ಕಾಣುವವು. ಆದ್ದರಿಂದ ಜನರು ಇವುಗಳಿಂದುಂಟಾಗುವ ತೊಂದ
ರೆಯನ್ನು ಪರಿಹಾರಮಾಡಿಕೊಂಡು ಆರೋಗದೃಢಕಾಯರಾಗಿ ಪೂರ್ಣಾಯುರ್ಭೋ
ಗವುಳ್ಳವರಾಗಬೇಕಾದರೆ ಆಹಾರವಿಹಾರಗಳನ್ನು ಅಕಾಲಗಳಲ್ಲಿ ಅಮಿತವಾಗಿ ಮಾಡದ
ಸಕಾಲಗಳಲ್ಲಿ ಮಿತವಾಗಿಯೂ ಕ್ಲುಪ್ತವಾಗಿಯೂ ಮಾಡುತ್ತಾ ಬರಬೇಕು. ಅಪಕ್ವ
ವಾದವುಗಳನ್ನಾಗಲಿ ಹಳಸಿದ ಅಥವಾ ಕೊಳೆತುಹೋದವುಗಳನ್ನಾಗಲಿ ತಾನೆ ಕೊ
ಳೆತು ಬುಸ್ಸುಹಿಡಿದವುಗಳನ್ನಾಗಲಿ ಸೇವಿಸಬಾರದು. ನಾತವಾಗಿಯೂ ಬೊಗ್ಗಡವಾ
ಗಿಯೂ ಇರುವ ನೀರನ್ನು ಬಿಟ್ಟು ಸ್ವಚ್ಛವಾಗಿಯೂ ಯಾವವಿಧವಾದ ವಾಸನೆ ಇಲ್ಲ

ದ್ದಾಗಿಯೂ ಇರುವ ನೀರನ್ನು ಕುಡಿಯಬೇಕು. ಮನೆಯಲ್ಲಿ ಮೇಲ್ಛಾವಣಿ ಗೋಡೆ ನೆಲ ಇವುಗಳನ್ನು ಆಗಾಗ್ಗೆ ಚೊಕ್ಕಟವಾಗಿ ಗುಡಿಸಬೇಕು, ಆಗಾಗ್ಗೆ ಗೋಡೆಗಳಿಗೆ ಸುಣ್ಣ ತೊಡೆಯುತ್ತಾ ನೆಲವನ್ನು ಸಾರಿಸುತ್ತಾ ಮಂದಲಿಗೆ ಜಂಬುಮಾನ ಮೊದಲಾದವುಗಳನ್ನು ನಿರಂತರ ಹಾಸದೆ ಆಗಾಗ್ಗೆ ಕೊಡವಿ ಆ ಸ್ಥಳವನ್ನು ಗುಡಿಸುತ್ತಾ ಇರಬೇಕು. ಮನೆಯು ಎಲ್ಲಾಭಾಗಗಳಲ್ಲಿಯೂ ವಾಯುಸಂಚಾರಕ್ಕೆ ಬೆಳಕು ಬಿಸಲುಗಳಪ್ರಸಾರಣೆಗೂ ಅವಕಾಶವಿರುವಂತೆ ಕಿಟಕಿ ಅಂಗಳ ನಿಲುಗಳನ್ನು ಇಡಬೇಕು. ಬಚ್ಚಲುಪ್ರದೇಶಗಳಲ್ಲಿ ದುರ್ಗಂಧ ಸೇರದಂತೆ ಚೊಕ್ಕಟವಾಗಿ ತೊಳೆಯುತ್ತಿರಬೇಕು. ಹಿತ್ತಿಲುಗಳಲ್ಲಿ ಸೊಪ್ಪುಸೆದೆಗಳು ಬೆಳೆದುಕೊಳ್ಳದಂತೆಯೂ ಕಸಗಳನ್ನು ಕುಪ್ಪೆಹಾಕದಂತೆಯೂ ನೋಡಿಕೊಳ್ಳಬೇಕು. ಪಾಯಿಖಾನೆ ಸ್ಥಳಗಳು ಕೆಡದಂತೆ ಇಡಬೇಕು. ಅಂಗಳವನ್ನು ಚೊಕ್ಕಟವಾಗಿಟ್ಟಿರಬೇಕು. ಶರೀರವನ್ನು ಸ್ನಾನಾದಿಗಳಿಂದ ನಿರ್ಮಲವಾಗಿಟ್ಟುಕೊಳ್ಳಬೇಕು. ನಿರ್ಮಲವಾದ ಉಡುಪುಗಳನ್ನು ಧರಿಸಬೇಕು. ಮದ್ಯ ಸಾರಾಯಿ ಮೊದಲಾದ ದುಷ್ಟವಾದ ಪಾನಗಳನ್ನು ಮಾಡಬಾರದು. ನಿದ್ದೇ ಕೆಡಬಾರದು. ಸೋಮಾರಿಯಾಗಿರದೆ ಸರ್ವಾವಯವಗಳಿಗೂ ಸರಿಯಾಗಿ ಸಾಧಕಗಳುಂಟಾಗುವಂತೆ ಕೆಲಸಗಳನ್ನು ಮಾಡುತ್ತಿರಬೇಕು. ಪ್ರತಿದಿನವೂ ತಪ್ಪದೆ ಬೈಲುಗಳಿಗೆ ಹೋಗಿ ಒಳ್ಳೇ ವಾಯುವನ್ನು ಸೇವಿಸಬೇಕು. ಹೀಗೆ ನಡೆದುಕೊಳ್ಳುವವರಿಗೆ ಶರೀರವು ಪುಷ್ಟಿಯಾಗಿರುವದು. ಶರೀರವು ದೃಢವಾಗಿಟ್ಟುಕೊಂಡಿದ್ದಲ್ಲಿ ಶರೀರದೊಳಗಿನ ಪ್ರಾಣಿಗಳು ತ್ರಾಣವಾಗಿದ್ದುಕೊಂಡು ಹೊರಗಿನಿಂದ ಬರುವ ಪ್ರಾಣಿಗಳನ್ನು ಸೋಲಿಸಿ ಕೊಲ್ಲುತ್ತಾ ಆರೋಗ್ಯವನ್ನುಂಟುಮಾಡುವವು ಹಾಗಿಲ್ಲದೆ ಆಹಾರ ವಿಹಾರಗಳಲ್ಲಿ ಅಮಿತವಾಗಿ ನಡೆಯುತ್ತಾ ನಿದ್ದೆಗೆಡುತ್ತಾ ಆರೋಗ್ಯಕ್ಕೆ ಸಾಧಕವಾದವುಗಳಲ್ಲಿ ಆಲಸ್ಯವಾಗಿರುತ್ತಾ ಇದ್ದಪಕ್ಷದಲ್ಲಿ ಶರೀರದಲ್ಲಿರುವ ಪ್ರಾಣಿಗಳಿಗೆ ದೌರ್ಬಲ್ಯ ಉಂಟಾಗುವದು. ಶರೀರದೊಳಕ್ಕೆ ಪ್ರವೇಶಿಸುವ ಪ್ರಾಣಿಗಳಿಗೆ ವಿಶೇಷ ಅವಕಾಶದೊರೆಯುವದರಿಂದ ರೋಗೋತ್ಪತ್ತಿಯಾಗುವದು. ಆದುದರಿಂದ ಜನಗಳು ಆರೋಗ್ಯವೃದ್ಧಿಕಾಯರಾಗಿರುವ ವಿಷಯದಲ್ಲಿ ಜಾಗರೂಕರಾಗಿರಬೇಕು. ಶರೀರದಲ್ಲಿರುವ ರಕ್ತವೊದಲಾದವುಗಳಲ್ಲಿ ಪ್ರಾಣಿಗಳಿವೆ ಎಂಬುವ ಸಂಗತಿಯು ಆಯುರ್ವೇದವೆಂಬ ವೈದ್ಯಗ್ರಂಥದಲ್ಲಿ ಶಾರೀರಸ್ಥಾನದಲ್ಲಿಯೂ ಚರಕವೆಂಬ ಗ್ರಂಥದಲ್ಲಿಯೂ ಹೇಳಿರುತ್ತಾರೆ.

ಕಿಂಡರಗಾರ್ಟನ್ ಹೇಳಿಕೊಡುವ ವಿಧಾನ.

ಸಾಮಾನ್ಯವಾಗಿ ಕಿಂಡರಗಾರ್ಟನ್‌ನನ್ನು ೯ ಕರಣಗಳಾಗಿ ಭಾಗಿಸಬಹುದು. ಇವುಗಳಲ್ಲಿ ಒಂದನೇ ಕರಣಕ್ಕೆ ಬೇಕಾದ ಸಾಮಗ್ರಿಗಳು—ಬಣ್ಣದ ಚೆಂಡುಗಳು ೬, ನಾನಾಬಣ್ಣದ ಹಣ್ಣು, ಕಾಗದ, ಬಟ್ಟೆ ಮುಂತಾದವು. ಬಟ್ಟೆಯಿಂದ ಕಟ್ಟಿದಚೆಂಡುಗಳು ಆರುವಿಭಬಣ್ಣಗಳುಳ್ಳದ್ದಾಗಿರಬೇಕು. ಈ ಬಣ್ಣಗಳಲ್ಲಿ ಮೂರು ಮುಖ್ಯಬಣ್ಣಗಳು, ಮೂರು ವಿಶ್ರಬಣ್ಣಗಳು. ಮುಖ್ಯಬಣ್ಣಗಳು (ಕೆಂಪು, ನೀಲಿ, ಹಳದಿ ವಿಶ್ರಬಣ್ಣಗಳು (ಎಲೆಹಸರು, ಕಿತ್ತಲೆಬಣ್ಣ, ಮಶೀಬಣ್ಣ ಅಥವಾ ವೈಲೆಟ್)

ಈ ಕರಣದಿಂದ ಬಾಲಕರಿಗೆ ತಿಳಿಯಪಡಿಸುವ ಮುಖ್ಯಾಂಶಗಳು: (೧) ಬಣ್ಣಗಳು (೨) ಮೃದು (೩) ಚಲನೆ, (೪) ೬ರ ವರಿಗಿನ ಸಂಖ್ಯಾಪಠನ.

ಕ್ರಮ.

ಉಪಾಧ್ಯಾಯನು, ತರಗತಿಯ ಬಾಲಕರನ್ನು ಸರಿಯಾಗಿ ಕೂರಿಸಿ, ಬಾಲಕರೆಲ್ಲರಿಗೂ ಕಾಣುವಂತೆ, ಎತ್ತರವಾದ ಮೇಜಿನಮೇಲೆ, ಮೇಲೆಹೇಳಿದ ಬಣ್ಣದ ಚೆಂಡುಗಳನ್ನು, ಅದಕ್ಕೋಸ್ಕರ ನಿರ್ಮಿಸಿದ ಕಡ್ಡಿಗೆ ತೂಗುಕಟ್ಟುವುದು. ಪ್ರಶ್ನೆಯಿಂದ ಮೊದಲು ಬಣ್ಣಗಳ ವಿಷಯವಾಗಿ ಬೋಧಿಸುವುದು. ಉಪಾಧ್ಯಾಯನು ಸಾಧ್ಯವಾದಮಟ್ಟಿಗೂ ಬಣ್ಣದ ಹಲ್ಲೆಗಳು, ಬಣ್ಣದ ಕಾಗದಗಳು, ಬಟ್ಟೆ, ಹಣ್ಣು, ಇವುಗಳನ್ನು ಉದಾಹರಿಸಿ ಬೋಧಿಸುವುದು, ಮೊದಲು ಮುಖ್ಯವಾದ ೩ ಬಣ್ಣಗಳ ಚಂಡುಗಳನ್ನು ಕುರಿತು ಹೇಳಬೇಕು. ಬಾಲಕರಿಂದ ಬಣ್ಣದ ಹೆಸರನ್ನು ಹೇಳಿಸುವುದು ಒಂದು ಬಣ್ಣದ ವಿಷಯವು ಜಿತವಾಗುವಂತೆ ಇದೇ ಬಣ್ಣದ ಹಣ್ಣು, ಕಾಗದ, ಮುಂತಾದುದನ್ನು ಉದಾಹರಿಸಬೇಕು. ಮುಖ್ಯ ಬಣ್ಣಗಳ ವಿಷಯವು ಬಾಲಕರ ಮನಸ್ಸಿನಲ್ಲಿ ಸ್ಥಿರವಾಯಿತೋ ಇಲ್ಲವೋ ಎಂಬುವದಕ್ಕೆ ತೂಗುಗಟ್ಟಿದ ಮುಖ್ಯ ಬಣ್ಣಗಳ ಮೂರು ಚಂಡುಗಳಲ್ಲಿ ಯಾವಬಣ್ಣದ ಹೆಸರನ್ನು ಹೇಳಿದರೂ ಬಾಲಕರು ಪರೀಕ್ಷಿಸುವದರಿಂದ ತೋರಿಸಿದಮೇಲೆ ಇವುಗಳಿಂದ ಹುಟ್ಟಿದ ವಿಶ್ರಬಣ್ಣಗಳನ್ನು ಇದೇರೀತಿಯಾಗಿ ಬೋಧಿಸುವದು.

(1) ಎಲೆಹಸರು—(ಅರಿಶಿನ, ನೀಲಿ,) ಇವು ಸೇರಿವೆ.

(2) ಕಿತ್ತಲೆ ಹಣ್ಣು—(ಕೆಂಪು, ಹಳದಿ) ಇವು ಸೇರಿವೆ.

(3) ವೈಲೆಟ್ (ಮಸಿ) (ಕೆಂಪು, ನೀಲಿ) ಇವು ಸೇರಿವೆ.

ಈ ವಿಷಯವನ್ನು ಬಣ್ಣದ ಹಲ್ಲೆಗಳಿಂದ ಪರೀಕ್ಷಿಸಿ ತೋರಿಸುವದು. ಮತ್ತು ಬಣ್ಣಗಳು ಯಾವಾಗಲೂ ವಸ್ತುವನ್ನು ಆಶ್ರೈಸಿರುವವೆಂದು ಹೇಳುವುದು. ಬಣ್ಣಗಳನ್ನು ತಿಳಿಸಿದಮೇಲೆ ಚಂಡುಗಳನ್ನು ಬಾಲಕರ ಕೈಯಲ್ಲಿ ಕೊಟ್ಟು, ಮೃದುವಾಗಿರುವವೆಂದು ಹೇಳಿಸುವುದು. ಉದಾಹರಣಾರ್ಥವಾಗಿ ಮೆತ್ತಗಿರುವ ಇನ್ನೂ ಅನೇಕ ವಸ್ತುಗಳನ್ನು ಹೇಳಿಸುವುದು. ಉಪಾಧ್ಯಾಯನು, ಬಾಲಕರೆಲ್ಲರಿಗೂ ಕಾಣುವಂತೆ ಒಂದು ಚಂಡಿಗೆ ಧಾರವನ್ನು ಕಟ್ಟಿ, ಧಾರದ ಕೊನೆಯನ್ನು ಹಿಡಿದುಕೊಂಡು, ಪ್ರಶ್ನೆ ಮಾಡುತ್ತಾ ಬಾಲಕರು ಸ್ವಭಾವವಾಗಿ ಆಡುವ, ಮಧ್ಯ, ಮೇಲೆ, ಕೆಳಗೆ, ಎಡ, ಬಲ, ಹಿಂದು, ಮುಂದು ಮುಂತಾದ ಶಬ್ದಗಳನ್ನು ಜಿತಪಡಿಸುವುದು. ಈ ಶಬ್ದಗಳು ಮಕ್ಕಳಿಗೆ ಸ್ವಭಾವವಾಗಿದ್ದಾಗ್ಯೂ, ಅವನ್ನು ಜಿತಪಡಿಸುವುದೇ ಉಪಾಧ್ಯಾಯನ ಉದ್ದೇಶವು.

ಹೀಗೆಯೇ ಕೈಯಲ್ಲಿನ ಧಾರಕ್ಕೆ ಕಟ್ಟಿದ ಚಂಡಿಗೆ ಕೆಲವುದೂರ ಚಲನೆ ಕೊಟ್ಟು ಚಂಡು ಹೇಗೆ ಹೋಯಿತೋ ಹಾಗೆ ಬಾಲಕರಿಂದ ಹಲಿಗೆಮೇಲೆ ಸುಣ್ಣದಿಂದ ಗೆರೆ ಹಾಕಿಸುವದು ಹೀಗೆ ಅಡ್ಡವಾಗಿಯೂ, ಉದ್ದ, ದುಂಡು ಈರೀತಿಯಾಗಿ ಗೆರೆಗಳನ್ನು ಹಾಕಿಸಿ, ಅವುಗಳ ಸಹಾಯದಿಂದ ವಸ್ತುವಿನ ಆಕಾರಗಳನ್ನು ತಿಳಿಸುವುದು. ಮತ್ತು ಚೌಕ, ಆಯ, ತ್ರಿಭುಜ ಇವುಗಳ ಹೆಸರನ್ನು ಉದಾಹರಣೆಯೊಡನೆ ಬೋಧಿಸುವುದು. ೧ ರಿಂದ ೬ ರವರಿಗೆ ಗಣಿತವನ್ನು ಅನುಲೋಮವಿಲೋಮವಾಗಿ ಹೇಳಿಸುವುದು. ಈ ಕರಣದಿಂದ ಇನ್ನೂ ಅನೇಕ ವಿಷಯಗಳನ್ನು ಬೋಧಿಸಬಹುದು. ಈ ವಿಷಯಗಳು ಬಾಲಕರ ಬುದ್ಧಿಯಲ್ಲಿ ನೆಲೆಗೊಂಡಮೇಲೆ ಎರಡನೆ ಕರಣವನ್ನು ಪ್ರಾರಂಭಿಸಬೇಕು.

2 ನೆ ಕರಣ.

ಈ ಕರಣಕ್ಕೆ ಬೇಕಾದ ಸಾಮಾನುಗಳು—(1) ಘನ, (2) ಸಿಲಿಂದರ (ಕೂಳವಿ) (3) ವೃತ್ತ, (ಇವು ಮರದ್ದು ಇರಬೇಕು)

ಈ ಕರಣದಿಂದ ತಿಳಿಸುವ ವಿಷಯಗಳು—ಕಠಿಣ, ಚೌಕ, ಕೊಳವಿ, ದುಂಡು ಅಂಚು, ಕೋಣ, ಚದರ ಮುಂತಾದವುಗಳನ್ನು ವಿವರಿಸುವುದು, ಮತ್ತು ಇವುಗಳ ಹೋಲಿಕೆ ವ್ಯತ್ಯಾಸಗಳನ್ನು ಸಹಾ ತಿಳಿಸುವುದು.

ಕ್ರಮ.

ಉಪಾಧ್ಯಾಯನು ಮೊದಲು ಘನವೆಂದರೆ ಅಗಲವು, ಉದ್ದವು, ಆಳವೂ ಉಳ್ಳ ವಸ್ತುವೆಂದೂ, ಅನೇಕ ವೃತ್ತಗಳಿಂದ ಕೂಡಿ, ಉದ್ದವಾಗಿ ೨ ಪಕ್ಕಗಳ ಮಾತ್ರ ಉಳ್ಳದ್ದಕ್ಕೆ ಕೊಳವಿಯೆಂದೂ, ಅಂಚುಗಳಿಲ್ಲದೆ ಮೇಲ್ಮೈಮಾತ್ರವಿರುವವಸ್ತುವಿಗೆ ಗುಂಡು ಎಂದೂ, ಬಾಲಕರಿಗೆ ತಿಳಿಸುವುದು. ಅನಂತರ ಒಂದು ಘನವನ್ನು ಬಾಲಕರಿಗೆ ತೋರಿಸಿ ಹ್ಯಾಗಿರುವದೆಂದರೆ—ಬಾಲಕರು ಚೌಕವಾಗಿರುವದೆಂದು ಹೇಳುವರು ಈ ಆಕಾರದ ವಸ್ತುಗಳನ್ನು ಹೇಳಿಸಿ, ಬಾಲಕರ ಕೈಯಲ್ಲಿ ಕೊಟ್ಟು ಅವರೇ ಪರೀಕ್ಷಿಸಿ, ಇದು ಕಠಿಣವಾಗಿದೆ, ಮರದಿಂದ ಮಾಡಿದ್ದು ಎಂದು ಹೇಳಿದೊಡನೆ ಬಾಲಕರಿಂದ ಘನದ ಆಕಾರವನ್ನು ಹಲಗೆಯಲ್ಲಿ ಬರೆಯಿಸುವದೇ ಅಗಲಿ, ಬರೇ ಮಾಡಿ ಮರದ ಘನಕ್ಕೂ ಹಲಗೆಯಮೇಲೆ ಬರೆದಿರುವ ಘನಕ್ಕೂ ತಾರತಮ್ಯವನ್ನು ಬಾಲಕರು ವಿಚಾರಮಾಡುವಂತೆ ಪ್ರೋತ್ಸಾಹಿಸುವುದು. ಅನಂತರ ಒಂದು ಘನಕ್ಕೆ ಆರು ಮೆಯ್ ಇರುವದೆಂದು ತಿಳಿಸಿ, ಒಂದು ಮೆಯ್ಯನ್ನು ಕುರಿತು ಪ್ರಶ್ನೆ ಕೇಳುತ್ತಾ, ಚದರ, ಅಂಚು, ಕೋಣ ಮುಂತಾದ ವಿಷಯಗಳನ್ನು ಬೋಧಿಸಿ, (ಸಿಲಿಂದರ್) ಕೊಳವಿಯನ್ನು ತೋರಿಸಿ, ಘನಕ್ಕೂ, ಕೊಳವಿಗೂ ಇರುವ ವ್ಯತ್ಯಾಸವನ್ನು ಬಾಲಕರಿಂದ ಹೇಳಿಸುವುದು. ಹೀಗೆ ವೃತ್ತಕ್ಕೂ, ಮೇಲಿನ ಎರಡು ವಸ್ತುಗಳಿಗೂ ಇರುವ ವ್ಯತ್ಯಾಸವನ್ನು ಉದಾಹರಣೆಯೊಡನೆ ತಿಳಿಸುವುದು.

೩ ನೆ ಕರಣ.

ಇದಕ್ಕೆ ಬೇಕಾದ ಸಾಮಾನುಗಳು—ಎರಡನೇ ಕರಣದಿಂದ ತಿಳಿದು ಒಂದು ಘನವನ್ನು ೮ ಸಮಭಾಗವಾಗಿ ಭಾಗಿಸಿ ಆ ತುಂಡುಗಳಿಂದ ಈ ಕರಣವನ್ನು ಮಾಡಿಸುವುದು. ಸಮಾನಾಕಾರವಾದ ೮ ಘನಗಳಿಂದ ಪೂರೈಸುವ ಕಟ್ಟಡಗಳನ್ನು ಮಾಡಿಸುವದರಿಂದ ಮಕ್ಕಳಲ್ಲಿ ಕೆಲಸ ಮಾಡುವ ಅಸಕ್ತಿ, ಗಮನ, ಸಂತೋಷ ಮುಂತಾದ ಗುಣಗಳನ್ನು ಹೆಚ್ಚಿಸಬಹುದು, ಈ ಗುಣಗಳು ವಿದ್ಯಾಭಿವೃದ್ಧಿಗೆ ಅತ್ಯವಶ್ಯಕಗಳಾದ್ದರಿಂದ, ಇವನ್ನು ಈ ಕರಣದ ಮೂಲಕವಾಗಿ ವೃದ್ಧಿಪಡಿಸಬಹುದು. ಕಟ್ಟಡಗಳನ್ನು ಇದಕ್ಕೋಸ್ಕರ ಚಿತ್ರಿಸಿದ ಪುಸ್ತಕವನ್ನು ನೋಡುವದು.

ಈ ಭಿನ್ನಭಾಗಗಳಿಂದ ಬಾಲಕರ ಗಣನಾಶಕ್ತಿಯನ್ನು ಪ್ರಬಲಪಡಿಸಬಹುದು. ಈ ಕರಣವನ್ನು ಹೇಳಿಕೊಡುವ ಉಪಾಧ್ಯಾಯನು ಒಂದು ಭಾಗವನ್ನು ಕೈ

ಯಲ್ಲಿ ತೆಗೆದುಕೊಂಡು ಬಾಲಕರು ನೋಡುವದಕ್ಕೆ ಅನುಕೂಲವಾಗಿ ಮೇಜಿನಮೇಲೆ ಇಟ್ಟು ಈ ಭಾಗದ ಆಕಾರವನ್ನು ಬಾಲಕರಿಂದ ಹಲಗೆಯಲ್ಲಿ ಬರಸುವದೇ ಆಗಲಿ, ಉಪಾಧ್ಯಾಯನೇ ಬರೆಯುವದೇ ಆಗಲಿ, ಮಾಡಬೇಕು. ಅನಂತರ ಇದೇಮೇರೆ ಎಂಟು ಭಾಗವನ್ನೂ ಇಟ್ಟು ಹಲಗೆಯಲ್ಲಿಯೂ ಬರೆದು, ಘನಗಳಿಂದ ಮಾಡಿದ ಕಟ್ಟಡಕ್ಕೂ ಹಲಗೆಯಮೇಲೆ ಬರೆದಿರುವ ಕಟ್ಟಡಕ್ಕೂ ಸಾಮ್ಯವನ್ನು ತಿಳಿಸಬೇಕು. ಹೀಗೆ ಬಾಲಕರಿಂದ ಹಲಿಗೆಯಲ್ಲಿರೇಖೆ ಮುಂತಾದವುಗಳನ್ನು ಬರೆಯಿಸುವದರಿಂದ, ಭೂಮಿಯ ಆಕಾರ (ಮ್ಯಾಪ್) ಭಾವಚಿತ್ರ ಮುಂತಾದವುಗಳನ್ನು ಬರೆಯಲು ಮುಂದೆ ಸಹಾಯವಾಗುವದು

4ನೇ ಕರಣ.

ಒಂದು ಘನವನ್ನು ೮ ಅಯಗಳಾಗಿ ಭಾಗಿಸಿರುವದೆಂದು ಬಾಲಕರಿಗೆ ತಿಳಿಸಿ ಅಯದ ವಿವರಣೆಯನ್ನು ಹೇಳಿಸುವದು. ಅಯದ ಆಕಾರವನ್ನು ಹಲಿಗೆಯಲ್ಲಿ ಬರೆದು ಇದಕ್ಕೆ ಸರಿಯಾದ ಕಾಗದ, ಬಟ್ಟೆಗಳನ್ನು ಉದಾಹರಿಸುವದು ಅಲ್ಲದೆ ಅಯವಾಗಿ ಕತ್ತರಿಸಿದ ಕಾಗದಕ್ಕೂ ಮರದ ಅಯಕ್ಕೂ ಇರುವ ತಾರತಮ್ಯವನ್ನು ತಿಳಿಸುವದು. ಮಣ್ಣಿನಿಂದ ಒಂದು ಘನವನ್ನು ಮಾಡಿಸಿ ಮರದ ಅಯಗಳನ್ನು ಜೋಡಿಸಿಟ್ಟು ಅದಕ್ಕೆ ಸರಿಯಾಗಿ ಮಣ್ಣಿನ ಘನದಲ್ಲಿ ಕಡ್ಡಿಯಿಂದ ಗುರುತುಮಾಡಿಸಿ ಬಾಲಕರಿಂದ ಕೊಯಿಸುವದು, ಹೀಗೆ ಮಾಡಿಸುವದರಿಂದ ಬಾಲಕರಿಗೆ ಸ್ಪಷ್ಟವಾಗಿ ತಿಳಿಯುವದು. ಇವುಗಳಿಂದ ನಾನಾವಿಧವಾದ ಆಕೃತಿಯನ್ನು ಮಾಡಿಸಿ ಅವುಗಳ ಹೆಸರುಗಳನ್ನು ಹೇಳಿಸುವದು, ಹೀಗೆ ಒಂದೊಂದೇ ಕರಣಗಳ ವಿಷಯವಾಗಿ ಬಾಲಕರು ತಿಳಿದುಕೊಳ್ಳುವವರಿಗೂ ಮತ್ತೆ ಮತ್ತೆ ಹೇಳಿ ಜಿತಪಡಿಸಬೇಕು.

5ನೇ ಕರಣ.

ಒಂದು ಘನವನ್ನು 27 ಸಮಭಾಗವಾಗಿ ಕತ್ತರಿಸುವದು. ಇವುಗಳಲ್ಲಿ ಕೆಲವನ್ನು ಅರ್ಧಗಳಾಗಿಯೂ ಮತ್ತೆ ಕೆಲವನ್ನು ಕಾಲುಭಾಗಗಳಾಗಿಯೂ ಮಾಡುವದು. ಇವುಗಳ ಸಂಖ್ಯೆ 21 ಪಟ್ಟು ಘನಗಳು, 6 ಅರ್ಧಗಳು 12 ಕಾಲುಘನಗಳು ಇವುಗಳ ಸಹಾಯದಿಂದ 4ನೇ ಕರಣದಂತೆಯೆ ಆಕೃತಿಯನ್ನು ರಚಿಸಿ ಬೋಧಿಸುವದು. ಈ ಕರಣವು ಬಾಲಕರು ಮುಂದೆ ಅಭ್ಯಾಸಮಾಡುವ ರೇಖಾಗಣಿತ ಪ್ರಥಮವಿಷಯಗಳಿಗೆ (ಕೋಣ, ರೇಖೆ, ಅಂಚು, ಪರಧಿ) ತುಂಬಾ ಸಹಾಯವಾಗುವದು.

6ನೇ ಕರಣ.

ಒಂದು ಘನವನ್ನು 27 ಆಯಗಳನ್ನಾಗಿ ಭಾಗಿಸುವದು. ಇವುಗಳಲ್ಲಿ 18 ಆಯಗಳು 12 ಅರ್ಧ ಆಯಗಳು 6 ಉದ್ದವಾಗಿ ಸೀಳಿದ ಕಂಬಗಳು, ಇದರ ಉಪಯೋಗವು 5ನೇ ಕರಣದಂತೆಯೆ. ಈ ಕರಣದವರಿಗೂ ಮೊದಲ ಘನವನ್ನು ಉಪಯೋಗಿಸಿ ಮುಂದಿನ ಕರಣಗಳಿಗೆ ಕಾಗದವನ್ನು ಉಪಯೋಗಿಸುವದು.

7ನೇ ಕರಣ.

ಚದರ ಕಾಗದಗಳ ಸಂಖ್ಯೆ 48, ಏಳನೇ ಕರಣಕ್ಕೆ ಸಹಾಯವಾಗಿರುವವು. ಇವುಗಳ ಪ್ರಮಾಣವು ಸಾಧಾರಣವಾಗಿ ಒಂದು ಅಂಗುಲ ಚದರವಿದ್ದು ಸಂಖ್ಯೆಗಿರುವದು. ಈ ಕಾಗದಗಳು ರೊಟ್ಟಿನದು, ಬಣ್ಣಹಾಕಿದ್ದು ಆದರೆ ಬಾಲಕರಿಗೆ ಆಕೃತಿ ಭೇದಗಳು ಸ್ಪುಟವಾಗಿ ತಿಳಿಯುವದು. ಈ ಕರಣವನ್ನು ಪ್ರಾರಂಭಿಸೇಕಾದರೆ ಹಿಂದೆ ತಿಳಿದುಬಂದ ಘನಕ್ಕೂ ಚದರಕ್ಕೂ ಇರುವ ವ್ಯತ್ಯಾಸವನ್ನು ತಿಳಿಸಿ ಪ್ರಾರಂಭಿಸಬೇಕು. ಇವುಗಳಿಂದ ಆಕೃತಿಗಳನ್ನು ರಚಿಸಬೇಕಾದರೆ ಬಾಲಕರಿಗೆ ಕಾಣುವಂತೆ ಸ್ವಲ್ಪ ಇಳಿಜಾರಾದ (ಡೆಸ್ಕಿನಂತಿರುವ) ಮೇಜನ್ನು ಉಪಯೋಗಿಸುವದು ಒಳ್ಳೆದು. ಆಕೃತಿಯು ನೀಟಾಗಿರುವಂತೆ ಮೊದಲು ಸುಣ್ಣದಿಂದ ಗುರುತುಮಾಡಿ ಆನಂತರ ಬಾಲಕರಿಂದ ಚದರ ಕಾಗದಗಳನ್ನು ಇಡಿಸಿ ಅದರಂತಿರುವ ಆಕೃತಿಯನ್ನು ಹಲಿಗೆಯಲ್ಲಿ ಬರೆಯಿಸುವದು.

8ನೇ ಕರಣ.

ಏಳನೇ ಕರಣವನ್ನು ಪ್ರಾರಂಭಿಸಿದಂತೆ 8ನೇ ಕರಣವನ್ನು ಪ್ರಾರಂಭಿಸಬೇಕು. ಈ ಕರಣಕ್ಕೆ ಬೇಕಾದ ಸಾಮಗ್ರಿಗಳು ಕಾಗದದ್ದು, ಅದಾಗ್ಯೂ ಉಪಾಧ್ಯಾಯನು ಇವುಗಳ ಪರಸ್ಪರ ವ್ಯತ್ಯಾಸಗಳನ್ನು ಅವಶ್ಯಕವಾಗಿ ಬಾಲಕರಿಗೆ ಮೊದಲು ತಿಳಿಸಿರಬೇಕು,

(1) ಸಮಕೋಣ ಸಮದ್ವಿಬಾಹುತ್ರಿಭುಜ, ಸಂಖ್ಯೆಯಲ್ಲಿ, 64

ಉದಾಹರಣೆ

(2) ಸಮಕೋಣ ವಿಷಮತ್ರಿಭುಜ, ... 64

ಉದಾಹರಣೆ.

(3) ಸಮತ್ರಿಭುಜ, ... 54

ಉದಾಹರಣೆ.

(4) ಗುರುಕೋಣ ಸಮದ್ವಿಬಾಹುತ್ರಿಭುಜ 54.

ಉದಾಹರಣೆ.



*

ಸಶೇಷ.

ಕೆ. ಸುಬ್ರಹ್ಮಣ್ಯಶಾಸ್ತ್ರಿ,
ಅಸಿಸ್ಟೆಂಟ್ ಮೂಸ್ಟರ್
ಗೌರ್ನಮೆಂಟ್ ಗರಲ್ ಸ್ಕೂಲ್
ಶಿವಮೊಗ್ಗಾ.

ಅಡಿಕೆ.

ಮುಖವನ್ನು ಪರಿಶುದ್ಧಿಮಾಡುವದರಿಂದ ಪ್ರಾಗೀಫಲವೆಂತ ಹೆಸರು. ಓಲೆ ತೆಂಗು ಅಡಿಕೆ ಈ ಜಾತಿ ಮರಗಳಿಗೆಲ್ಲಾ ಹಿಂತಾಳವೆಂದು ಹೆಸರು ಅಂದರೆ ಇವೆಲ್ಲಾ ಓಲೇಜಾತಿಗೆ ಸಂಬಂಧಪಟ್ಟದ್ದು. ಅಡಿಕೆವ್ಯವಸಾಯಕ್ಕೆ ಬೇಸಿಗೆಯಲ್ಲಿ ಭೂಮಿಯನ್ನು ಆಗೆದರೆ ಒಂದುಗಜ ಪ್ರಮಾಣದಲ್ಲಿ ನೀರು ಸಿಕ್ಕುವ ಹಾಗೆ ನೆಲವು ತಂಪಾಗಿರಬೇಕು ಈ ಬೆಳೆಗೆ ಕೆಮ್ಮಣ್ಣಿನ ಭೂಮಿಯು ಶುದ್ಧವಾದ ಎರೆಪ್ರದೇಶವು ಒಳ್ಳೆದಲ್ಲ. ಮರಳು ಮಿಶ್ರವಾದ ಕರೀ ಎರೆಭೂಮಿಯು ಈ ಬೆಳೆಗೆ ಅತ್ಯುತ್ಕೃಷ್ಟವಾದದ್ದು. ಇಂಥಾ ಭೂಮಿಯಲ್ಲಿ ಆದ ಅಡಿಕೆಯು ಮೃದುವಾಗಿರುವುದು. ಇತರ ಪ್ರದೇಶಗಳಲ್ಲಿ ಆದ ಅಡಿಕೆಯು ಬಿರಸೆಯಾಗಿರುವುದು. ಇದರ ವ್ಯವಸಾಯಗಾರರು ಎರೆದಲು ಸಸಿಗಳನ್ನು ಮಾಡುವುದು

* (ಟಿ) (1) ಚದರವನ್ನು ಕರ್ಣಹಿಡಿದು ಭಾಗಿಸಿದ್ದು.

(2) ಆಯುವನ್ನು ಕರ್ಣಹಿಡಿದು ಭಾಗಿಸಿದ್ದು.

(3) ಮೂರು ಬಾಹುಗಳು ಸಮವಾಗಿರುವದು.

(4) ಚದರದ ಕರ್ಣದ 2 ಕೊನೆಗಳನ್ನು ಸ್ವಲ್ಪ ಎಳೆದು ಆ ಭಾಗವನ್ನು ಕತ್ತರಿಸಿದರೆ ಈ ಆಕಾರವಾಗುವದು.

ಕ್ಕೋಸ್ಕರ ೩೦ ಅಥವಾ ೪೦ ವರುಷಗಳ ಮರಗಳಲ್ಲಿ ಉದುರಿದ ಕಾಯಿಗಳಲ್ಲಿ ದುಂ
ಡಾಗಿರುವದನ್ನು ನೋಡಿಕೊಂಡು ಆ ಮರದಲ್ಲಿ ಹಣ್ಣಾಗಿರುವ ಗೊನೆಯನ್ನು ಇಳಿಸಿ
ಕೊಂಡು ಅದರಲ್ಲಿ ಎಳಸಾದ ಕಾಯಿಗಳನ್ನು ಬೇರೆ ಇಟ್ಟು ಹಣ್ಣಾದ ಕಾಯಿಗಳನ್ನೆಲ್ಲಾ
ಲ್ಲಾ ಒಂದು ಕುಕ್ಕೆಯಲ್ಲಿ ಹಾಕಿ ೨೦ ಅಥವಾ ೨೫ ದಿವಸಗಳವರಿಗೂ ಮುಚ್ಚಿಟ್ಟ
ದ್ದರೆ ಮೇಲಣ ಸಿಪ್ಪೆಯೆಲ್ಲಾ ಸ್ವಲ್ಪ ಒಣಪಡಿಗೆ ಬಂದು ಕರಗುವ (ತಗ್ಗುವ) ಸ್ಥಿತಿಗೆ
ಬಂದಿರುತ್ತವೆ. ಒಟ್ಟುಹಾಕುವ ಸ್ಥಳವನ್ನು ಅಗೆದು ಒಗ್ಗುಹಾಕುವ ಅಡಿಕೆಗಳನ್ನೆಲ್ಲಾ
ಹರವಿ ಅದರಮೇಲೆ ಒಂದು ಅಂಗುಲ ಪ್ರಮಾಣ ಮಣ್ಣು ಹರವಿ ತೇವುವಾರದಂತೆ ನೀರು
ಹಾಕುತ್ತಾ ಇರಬೇಕು. ಬೀಜಕ್ಕಾಗಿ ಏರ್ಪಡಿಸುವ ಅಡಿಕೆಯು ಕಡೆಗಾಲವಾದ ಪುಷ್ಯ
ಬಹುಳ ಮಾಘಮಾಸ (ಜನವರಿ ಪಿಬ್ರವರಿ ತಿಂಗಳು) ಗಳಲ್ಲಿ ಅದಂಥಾದ್ದು ಅತ್ಯು
ತ್ಕೃಷ್ಟವಾದದ್ದು. ಅಡಿಕೆಗೊನೆಯಲ್ಲಿನ ಕಾಯಿಗಳು ಹಳದಿ ಕೆಂಪು ಮಿಶ್ರವಾದಬಣ್ಣ
ವಾಗಿದ್ದಲ್ಲಿ ಹಣ್ಣಾಗಿವೆ ಎಂದು ತಿಳಿದುಕೊಳ್ಳಬೇಕು ಒಟ್ಟುಹಾಕಿದ ಪಾತಿಗೆ ವಿಶೇಷ
ಬಿಸಿಲುಬೀಳದಂತೆಯೂ ನೋಡಿಕೊಳ್ಳಬೇಕು. ಮುಂಗಾರುಮಳೆ ಬೀಳುತ್ತಲೆ (ಏಪ್ರಿ
ಲ್ ಮೇ ತಿಂಗಳುಗಳಲ್ಲಿ ಒಂದೆರಡು ಮಳೆಗಳಾದ ಕೂಡಲೆ) ಅಂದರೆ ಎರಡೂವರೆ
ಮೂರು ತಿಂಗಳುಗಳಲ್ಲಿ ಮೊಳಕೆಯು ಹೊರಡುವದು. ಆ ಮೊಳಕೆಯಲ್ಲಿ ತೆಂಗಿನಸಸಿ
ಯಲ್ಲಿ ಹೊರಟಂತೆ ಮೊದಲು ಎರಡು ಎಲೆಗಳು ಹೊರಟಿರುತ್ತವೆ. ಮೊಳಕೆ ಹೊರಟ
ರುತ್ತವೆ. ಮೊಳಕೆ ಹೊರಟ ಎರಡುಮೂರು ತಿಂಗಳುಗಳಮೇಲೆ ಕೀರಸೂಪ್ಪುಬತ್ತು
ಪುವಕ್ಕೆ ಭೂಮಿಯನ್ನು ಅಗಿದು ಹಸನುಮಾಡುವಂತೆ ಬೇರೆ ಒಂದು ಕಡೆ ಅಗದು ಹಸ
ನುಮಾಡಿ ಸುಮಾರಾಗಿ ಗೊಬ್ಬರಕಾಕಿ ನೀರು ಮಟ್ಟವಾಗಿ ಪಾತಿಮಾಡಿದನಂತರ
ಒಂದು ಸಸಿಗೆ ಸುತ್ತಲೂ ಚೌಕವಾಗಿ ಒಂದೊಂದು ಅಡಿ ದೂರವಿರುವಂತೆ ಅಡಿಕೆ
ಸಸಿಗಳನ್ನು ನಾಟಿ ಶಾನೆ ಬಿಸಿಲು ತಗುಲುವಂತೆ ನೆರಳುಮಾಡಿ ತೇವುವಾರದಂತೆ
ನೀರು ಹಾಕುತ್ತಾ ಬರಬೇಕು. ನೀರು ಹಾಕುವ್ದರಲ್ಲಿ ಹೊಸ ಬೇರುಬಿಡುವವರೆಗೂ
ಹೆಚ್ಚಾಗಿ ನೀರು ಹಾಕಕೂಡದು .. ಎರಡು ವರುಷಗಳಾದಮೇಲೆ ಮುಳಗಲವು
ಮೂರುತಿಂಗಳು ಮುಂದಾಗಿರುವಂತೆ ನೋಡಿಕೊಂಡು ಜಲವಸತಿಯಾಗಿರುವದಲ್ಲದೆ
ತಂಪಾಗಿರುವುದಕ್ಕೆ ಅನುಕೂಲವಾದ ಮರ ಮೊದಲಾದವು ಸುತ್ತಲೂ ಇರುವ ಸ್ಥಳ
ದಲ್ಲಿ ಒಂದು ಗಿಡದಿಂದ ಮತ್ತೊಂದು ಗಿಡಕ್ಕೆ ಎರಡು ಗಜದಷ್ಟು ಅವಕಾಶವಿರುವಂತೆ
ಏರ್ಪಡಿಸಿಕೊಂಡು ಒಂದೂವರೆ ಅಥವಾ ಎರಡು ಅಡಿಗಳಷ್ಟು ಅಗಲ ಎರಡೂವರೆ

ಅಥವಾ ಮೂರು ಅಡಿಗಳಷ್ಟು ಆಳವಾಗಿ ಗುಣಿಗಳನ್ನು ತೋಡಿ ಅದರಲ್ಲಿ ಒಂದೊಂದ
ಸಸಿಯನ್ನು ಹಾಕಿ ಗುಳಿಯವೆರೆಲಿನ ಭಾಗದಲ್ಲಿ ಅರ್ಧಅಡಿ ಪಾತಿ ನಿಲ್ಲುವ ಹಾಗೆ ನಿ
ಡಿಕೊಂಡು ಸಸಿಯಕಡೆ ಉಬ್ಬಾಗಿರುವ ರೀತಿಯಲ್ಲಿ ಸಸಿಯ ಸುತ್ತಲೂ ಮಣ
ಹಾಕಿ ಗಟ್ಟಿನೆಪಮಾಡುವಂತೆ ಚೆನ್ನಾಗಿ ತುಳಿಯಬೇಕು. ಆದರೆ ಹೀಗೆ ಮಾಡುವುದರ
ಒಟ್ಟಿಗೆ ಗುಳಿಯಲ್ಲಿ ಮಣ್ಣು ತುಂಬಿ ಮೇಲುಗಡೆವಾತ್ರ ತುಳಿಯಕೂಡದು. ಮೊದ
ಒಂದು ವರಸೆ ಮಣ್ಣು ಹಾಕಿ ಚೆನ್ನಾಗಿ ತುಳಿದಮೇಲೆ ಮತ್ತೊಂದುವರಸೆ ಮಣ್ಣು ಹಾ
ತುಳಿಯಬೇಕು. ಹೀಗೆ ಮೂರುನಾಲ್ಕು ವರಸೆ ಹಾಕಿದಮೇಲೆ ತೇವವಾರದ
ನೀರನ್ನು ಹಾಕುತ್ತಲಿರಬೇಕು. ಹೀಗೆ ಮಾಡುವುದರಿಂದ ನೀರು ಅಡಿಕೆಮರದ ಬು
ವನ್ನು ಸೇರುವದಿಲ್ಲ. ಇಲ್ಲದಿದ್ದರೆ ನೀರು ಗುಳಿಯ ಮಧ್ಯಭಾಗವಾದ ಅಡಿಕೆಸಸಿ
ಬುಡಭಾಗದಲ್ಲಿ ನಿಲ್ಲುವುದು. ಆಗ ಸಸಿಯ ಬೇರುಗಳು ಕೊಳೆತು ಒಣಗುವುದ
ಸಸಿಗಳು ಹೊಸಬೇರನ್ನು ಬಿಟ್ಟಮೇಲೆ ನೀರುನಿಂತಾಗ್ಯೂ ಬಾಧಕವಾಗುವುದಿ
ತಂಪಿರುವುದಕ್ಕೆ ಅನುಕೂಲವಾದ ಮರ ಮೊದಲಾದವುಗಳು ಇಲ್ಲದ ಸ್ಥಳವಾದರೆ ಆ
ಥಾ ಕಡೆ ಬಾಳೆ ಹಾಕಿ ಅವು ಎದ್ದಮೇಲೆ ಅವುಗಳ ಮಧ್ಯೆ ಅಡಿಕೆ ಸಸಿಗಳನ್ನು ನೆ
ವರು. ಬಾಳೆಯ ತಂಪಿನಿಂದ ಅಡಿಕೇ ಸಸಿಗಳು ವೃದ್ಧಿಗೆ ಬರುವವು ಬಾಳೆ ಇ
ಸ್ಥಳದಲ್ಲಿ ಅಡಿಕೆ ಸಸಿಗಳನ್ನು ಹಾಕಿದ್ದರೆ ಸಸಿಗಳನ್ನು ಹಾಕಿದ ಆರೇಳು ತಿಂಗ
ಗಳಮೇಲೆ ಸುತ್ತಲೂ ಭೂಮಿಯನ್ನು ಸುವಾರಾಗಿ ಅಗಿದು ಮೆಕ್ಕಲು ಮಿಶ್ರವಾ
ಎರೇಮಣ್ಣನ್ನು ತಂದುಹಾಕಿ ನೀರು ಹಾಕುತ್ತಾ ಬರಬೇಕು. ಒಂದೆರಡುವರುಷ
ಮೇಲೆ ಚೆನ್ನಾಗಿ ಅಗತೆವಾಡಿ ಮೆಕ್ಕಲುಮಣ್ಣು ಗೊಬ್ಬರ ಇವುಗಳನ್ನು ಹಾಕಿ ನೀ
ಕಟ್ಟುತ್ತಾ ಬರಬೇಕು. ಬಾಳೆ ಇರುವ ಸ್ಥಳವಾದರೆ ಅದಕ್ಕೆ ಆಗುವ ವ್ಯವಸಾಯ
ಅಡಿಕೆಗೂ ಆದಂತೆ ಆಗುವುದು. ಅಡಿಕೆಯು ವೃದ್ಧಿಗೆ ಬಂದ ಹಾಗೆಲ್ಲಾ ಅಂ
ನಾಲ್ಕೈದು ವರುಷಗಳಿಗೆ ಬಾಳೆಯನ್ನು ತೆಗದುಬಿಡುವರು. ಅಡಿಕೆಯು ಒಟ್ಟು ಹ
ದ್ದು ಮೊದಲ್ಗೊಂಡು ಕ್ಷೇತ್ರ ಮತ್ತು ವ್ಯವಸಾಯಾನುಗುಣ್ಯವಾಗಿ ೪ ಅಥವಾ
ವರುಷಗಳಮೇಲೆ ಹಾಳೆಗಳು ಬೀಳುವುದಕ್ಕೆ ಉಪಕ್ರಮವಾಗುವವು ಆಮೇಲೆ ಎರ
ಮೂರು ವರುಷಗಳಲ್ಲಿ ಹುಸಿಫಲ ಬಿಡುವದು. ಇದು ಬಿಟ್ಟ ಎರಡುನೂರು ವರ
ಗಳಲ್ಲಿ ಪೂರ್ಣಫಲದಾಯಕವಾಗುವುದು. ಆಮೇಲೆ ಒಂದೆರಡು ವರುಷಗಳಿಗೆ ಸಂಪೂರ್ಣ
ಬಿಡುವುದು. ಅಡಿಕೆ ಫಲ ಚೆನ್ನಾಗಿ ಬಿಡಬೇಕಾದರೆ ಸಸಿಯು ಎದ್ದು ಮೈ

ಕ್ಕೊಂಡು ಹತ್ತು ಅಥವಾ ಹನ್ನೆರಡು ವರುಷಗಳ ಕಾಲ ಹಿಡಿಯುವುದು. ಅಡಿಕೆಗಿಡವ
ತೆಂಗು ಓಲೆಗಿಡಗಳ ಹಾಗೆ ಉದ್ದವಾಗಿ ಬೆಳೆಯುವುದು. ಇದಕ್ಕೆ ಕೊಂಬೆಗಳಿರುವ
ದಿಲ್ಲ. ಈ ಜಾತೀಮರದ ನೆಲಿನ ಭಾಗವು ಮಟ್ಟೆಗಳಿಂದ ಸೇರಿಕೊಂಡಿರುವುದು. ಆ
ಮಟ್ಟೆಗಳು ಬೀಳದ ಹಾಗೆ ಅದರದರ ಪಟ್ಟೆಗಳಿಂದ ಸಂಬಂಧಿಸಿಕೊಂಡಿರುವವು. ಒಂದ
ನುರದಲ್ಲಿ ಇಂಥಾ ಮೆಟ್ಟೆಗಳು ೪ರಲಾಗಾಯಿತು ೧೦ರವರೆಗೆ ಇರುವವು. ಚೆನ್ನಾಗಿ
ನೆಳೆದ ಗಿಡವು ಬುಡದಿಂದ ಕೊನೇವರೆಗೆ ೧೦೦ ಅಡಿಗಳ ವರೆಗೆ ಇರುವದು. ಗರಿಗಳ
ಯುವ ಭಾಗಕ್ಕೆ ಮಟ್ಟೆ ಎಂತಲೂ ಉಳಿದ ಭಾಗಕ್ಕೆ ಹಾಳೆ ಎಂತಲೂ ಹೆಸರು. ಗರಿ
ಗಳು ಮಟ್ಟೆಯ ಉಭಯಪಾರ್ಶ್ವಗಳಲ್ಲೂ ಕತ್ತಿಯಂತೆ ೧೦೦ರವರೆಗೆ ಇರುವವು
ಇವು ಮಟ್ಟೆಯ ಬುಡಭಾಗದಲ್ಲಿ ದೊಡ್ಡದಾಗಿಯೂ ಕೊನೆಕೊನೆಗೆ ಚಿಕ್ಕವಾಗಿಯೂ
ಇರುವವು. ದೊಡ್ಡಗರಿಯು ೩ ಅಡಿಗಳಷ್ಟು ಇರುವುದು. ಹಾಳೆಯಿಂದ ಮಟ್ಟೆಯ
ಕುದಿಯುವರೆಗೂ ೧೦ ಅಡಿಗಳವರೆಗೆ ಇರುವುದುಂಟು. ಗೊದಮಟ್ಟೆಗೆ ಪ್ರತಿಯಾಗಿರುವ
ಅಡಿಕೆಹಾಳೆಯು ೩ ಅಡಿಯುದ್ದ ೨ ಅಡಿಅಗಲದವರೆಗೆ ಇರುವುದು. ಅಡಿಕೆ ಮರದ
ನರುಷಕ್ಕೆ ತೆಂಗಿನಮರದಲ್ಲಿ ಬಿದ್ದಂತೆ ಏಳೇಳು ಹಾಳೆಗಳು ಬೀಳುವವು. ತೆಂಗಿನಮ
ದಲ್ಲಿ ಬಿಟ್ಟಂತೆ ಇದರಲ್ಲೂ ಮೊದಲು ಮರಕ್ಕೂ ಹಾಳೆಗೂ ಮಧ್ಯೆ ಹೊಂಬಾಳೆ ಹೊಮ
ಮ್ಮುವುದು. ಹೊಂಬಾಳೆಯು ದಪ್ಪವಾದ ಹಾಗೆಲ್ಲಾ ಹಾಳೆಯು ಬಿಚ್ಚಿಕೊಂಡು
ಕೊನೆಗೆ ಗುದುರುವವು. ತೆಂಗಿನಗಿಡದಲ್ಲಿ ಹೊಂಬಾಳೆಯಮೇಲೆ ಮೊಗವು ಇದ್ದಂ
ತಿದಕ್ಕೂ ಇರುವುದು. ಹೊಂಬಾಳೆಯು ಆ ಮೊಗವಿನಿಂದ ಕೆದರಿಕೊಂಡಮೇಲೆ ಹೂ
ಹಿಡಿಯುವುದು. ಫಲಕ್ಕೆ ಅನುಕೂಲವಾದ ಹೊಂಬಾಳೆಗಳು ಫಾಲ್ಗುಣಮಾಸ ಮೊ
ದಲ್ಕೊಂಡು ವೈಶಾಖಮಾಸದವರೆಗೆ. (ಪಿಬ್ರವರಿಯಿಂದ ಏಪ್ರಿಲ್‌ವರೆಗೆ) ಬಿಡುವವು
ಕ್ರಮವಾಗಿ ಹೀಚಾಗಿ ಬಲಿತದ್ದರಲ್ಲಿ ಕೆಲವು ಭಾದ್ರಪದಮಾಸಕ್ಕೇನೆ (ಸೆಪ್ಟಂಬರುತಿ
ಗಳಿಗೇನೆ) ಕುಯಲಿಗೆ ಸಿದ್ಧವಾಗುವವು. ಅಡಿಕೆಗೊನೆ ಬಿಡುವುದರಲ್ಲಿ ಒಂದು ಮೆ
ದಲ್ಲಿ ಒಂದರಲಾಗಾಯಿತು ಐದರವರೆಗೂ ಉತ್ಕೃಷ್ಟವಾದ ಬೆಳೆಯಲ್ಲಾಯಿತು ಎಲ್ಲಾ
ಏಳರವರೆಗೂ ಗೊನೆಗಳನ್ನು ಬಿಡುವವು. ಫಲವು ಹಿಡಿಯುವುದರಲ್ಲಿ ಕೆಳಗಣ ಗೊನೆ
ಯಲ್ಲಿ ಪೂರ್ಣಫಲ ಹಿಡಿಯುವದು. ಅದರಮೇಲೆ ಗಡೆ ಬಿಡುವ ಮೂರು ಗೊನೆಗಳಲ್ಲಿ
ಪ್ರತಿಯೊಂದು ಗೊನೆಯಲ್ಲಿಯೂ ಮೊದಲಿನ ಗೊನೆಗಿಂತ ಕಡಮೆಯಾಗಿ ಬಿಡುವವು.
ಮೇಲೆ ಇರುವ ೫ ನೇ ಅಥವಾ ೬ ನೇ ಗೊನೆಯಲ್ಲಿ ಕಾಯಿಯಿಲ್ಲದೇರೀತಿಯಾಗಿ ಕೆಲವು

ಕಾಯಿಗಳಿರುವವು. ವ್ಯವಸಾಯ ಮತ್ತು ಮರಗಳ ವಯಸ್ಸಿನಗನುಗುಣವಾಗಿ ಒಂದೇ ಮರದಲ್ಲಿ ೩೦೦ ವೊದಲ್ಗೊಂಡು ೩೦೦೦ ವರಿಗೂ ಕಾಯಿಗಳಾಗುವವು. ಹಳಗೈಯೂದ ಮರದಲ್ಲಿ ೫೦೦ ರವರಿಗೆ ಬಿಡುವವು. ಅಡಿಕೆ ಗೊನೆಗೆ ತಾರೆಂದು ಮತ್ತೊಂದು ಹೆಸರು ಉಂಟು. ಅಡಿಕೆ ಕಾಯಿಯ ತೊಟ್ಟಿನಭಾಗವು ತೆಂಗಿನತೊಟ್ಟಿನಹಾಗೆ ಕಣ್ಣಿನಿಂದ ಕೂಡಿರುವದು. ಕಾಯಿನ ಮೇಲಣಭಾಗಕ್ಕೂ ಒಳಗಣಭಾಗಕ್ಕೂ ಮಧ್ಯೆವಾದ ಗುಂಜು ಇರುವದು. ಅಡಿಕೆಕಾಯಿಯು ತೆಂಗಿನಕಾಯಿನ ಆಕಾರದಹಾಗೆ ಸಣ್ಣನಾಗಿರುವದು. ತೆಂಗಿನಕಾಯಿನ ಮಧ್ಯಭಾಗದಲ್ಲಿ ಕಾಯಿ ಇರುವದು. ಇದರ ಮಧ್ಯಭಾಗದಲ್ಲಿ ಅಡಿಕೆ ಇರುವದು. ಒಳ್ಳೆ ಅಡಿಕೆಗಳನ್ನು ಮೂಡತಕ್ಕವರು ಗೊನೆಯಲ್ಲರುವ ಕಾಯಿಗಳಲ್ಲಿ ಒಂದೆರಡನ್ನು ಕಿತ್ತು ಸುಲಿದು ಒಳಗಿರುವ ಅಡಿಕೆಯು ಹದವಾಗಿದ್ದಲ್ಲಿ ಅಂಥಾ ಗೊನೆಯನ್ನು ಇಳಿಸಿಕೊಳ್ಳುವರು. ಹಣ್ಣಿಗೆ ಬಂದಮೇಲೆ ಕುಯಿದು ಅಡಿಕೆಯನ್ನು ಮೂಡಿದರೆ ವಿಶೇಷ ಗೋಟು ವಿಶ್ರಾನಾಗಿ ಆಗುವದು. ಅಡಿಕೆ ಫಲವು ಕುಯಿಲಿಗೆ ಬಂದೊಡನೆಯೇ ಅಡಿಕೆ ಕೊಯುತಕ್ಕವನು ಕಾಲಿಗೆ ಗುದಿಯನ್ನು ಹಾಕಿಕೊಂಡು ಕುಡ್ಲು ಕೊಕ್ಕೆಯ ಮುಕ್ಕಾಲುಭಾಗಕ್ಕೆ ಒಂದು ಸಣಬಿನ ಹಗ್ಗವನ್ನು ಕಟ್ಟಿ ಹೆಗಲಿಗೆ ತಗುಲಿಹಾಕಿಕೊಂಡು ಸುತ್ತಲೂ ೪ ಅಥವಾ ೫ ಮರಗಳ ಗೊನೆಗಳನ್ನು ಕುಯ್ಯುವದಕ್ಕೆ ಅನುಕೂಲನಾಗಿ ಮಧ್ಯದಲ್ಲಿರುವ ಮರವನ್ನು ನೋಡಿಕೊಂಡು ಮುಕ್ಕಾಲುಭಾಗ ಹತ್ತಿ ಎಡದ ತೋಳುನಿಂದ ಮರವನ್ನು ತಬ್ಬಿಕೊಂಡು ಕುಡ್ಲು ಕೊಕ್ಕೆಯನ್ನು ಕೈಯಲ್ಲಿ ಹಿಡಿದುಕೊಂಡು ಈಡಾದ ಕಾಯಿಗಳು ಬಿಟ್ಟಿರುವ ಗೊನೆಯನ್ನು ನೋಡಿ ಕೊಯ್ಯುವನು. ಆಮೇಲೆ ಪಾರ್ಶ್ವದಲ್ಲಿರುವ ಮರಕ್ಕೆ ನೆಗದಾಗಲಿ ಅಥವಾ ಕೊಕ್ಕೆಯಿಂದ ಎಳೆದು ಹಿಡಿದುಕೊಂಡಾಗಲಿ ಗೊನೆಗಳನ್ನು ಕೊಯುವನು. ಹಾಗೆಯೇ ಕುಡ್ಲುಕೊಕ್ಕೆಯಿಂದ ಕೊಯುವದೂ ಉಂಟು. ಹೀಗೆ ತಾನು ಹತ್ತಿದ ಮರದಸುತ್ತಲೂ ಸಾಧ್ಯವಾಗಬಹುದಾದ ಮರಗಳನ್ನೇ ಕುಯಿದಮೇಲೆ ಇದೇರೀತಿ ಮತ್ತೊಂದುಕಡೆ ಹತ್ತಿ ಕೊಯುವನು. ಕೆಲವುಕಡೆ ಏಣಿಗಳನ್ನು ಹಾಕಿಕೊಂಡು ಅದರಮೇಲೆ ನಿಂತು ಕೊಯ್ಯುವರು. ಒಂದೊಂದು ದೇಶದಲ್ಲಿ ಅಡಿಕೆಯನ್ನು ಕೊಯತಕ್ಕ ಕ್ರಮವು ಒಂದೊಂದುವಿಧವಾಗಿರುವದು. ಕಾಯಿಗಳನ್ನು ಕುಯದಮೇಲೆ ಅಡಿಕೇಕಾಯಿಗಳನ್ನು ಸುಲಿಯುವ ಇಳಿಗೇಮಣೆಯಲ್ಲಿ ಅವ್ವುಗಳನ್ನು ಸುಲಿದು ಬೇಯಿಸಿ, ಅನಂತರ ಬಟ್ಟುಅಡಿಕೆಗಳನ್ನು ಮೂಡುವಂಥಾದ್ದನ್ನು ದುಂಡುದುಂಡಾಗಿ ಹೆಚ್ಚಿ ಒಣಗಿಸುವರು.

ಜಜ್ಜು ಅಡಿಕೆ ಮಾಡುವಂಥಾದ್ದನ್ನು ಸ್ವಲ್ಪ ಜಜ್ಜಿ ಒಣಗಿಸುವರು. ಗಂಟಿಕಿ ಅಡಿಕೆ ಮಾಡುವುದಕ್ಕೆ ಅನುಕೂಲವಾದದ್ದನ್ನು ಹಾಗೆಯೇ ಒಣಗಿಸುವರು. ಲವಂಗಚೂರು, ನಾಲ್ಕು ಭಾಗ, ಸಣ್ಣಚೂರು, ಇವೇ ಮೊದಲಾದವುಗಳನ್ನು ಮಾಡುವುದಕ್ಕೆ ಅನುಕೂಲವಾದ ವುಗಳನ್ನು ಉದ್ದುದ್ದವಾಗಿ ಹೆಚ್ಚಿ ಒಣಗಿಹಾಕುವರು. ಕೆಲವರು ಹಸೀ ಅಡಿಕೆಯನ್ನೇ ತಾವು ಮಾಡತಕ್ಕ ಅಡಿಕೆತರಹಾಕ್ಕೆ ಅನುಕೂಲವಾಗಿ ಹೆಚ್ಚಿ ಅನಂತರ ಬೆಯಿಸಿ ಒಣಗಿಸುವರು. ಅಡಿಕೆಯು ಒಣಗಿದನಂತರ ಅವನ್ನು ಗುಡಾಣಗಳಲ್ಲಿ ತುಂಬಿಡುವರು. ವಿಶೇಷವಾಗಿ ಬರತಕ್ಕವರು ಪೆಟ್ಟಿಕಟ್ಟಿ ತುಂಬಿಡುವರು. ಕೆಲವರು ಸಿಪ್ಪೆಸಹಿತ ಬೆಯಿಸಿ ಒಣಗಿಸಿಡುವರು. ಅಂಥಾ ಅಡಿಕೆಯನ್ನು ಹಾಕಿಕೊಳ್ಳುವಾಗ ಸಿಪ್ಪೆಯನ್ನು ಸುಲಿದು ಉಪಯೋಗಿಸುವರು. ಇದು ನೋಟಕ್ಕೆ ಚೆನ್ನಾಗಿ ಕಾಣುವುದಲ್ಲ. ಕಲವು ಪ್ರಾಂತ್ಯದಲ್ಲಿ ಅಡಿಕೆಯನ್ನು ಬೆಯಿಸಿದ ನಂತರ ಅದು ಸ್ವಲ್ಪ ಬಿಳೀಜಾತ್ಯವಾಗಿರುವುದು. ಆದ್ದರಿಂದ ಅದಕ್ಕೆ ಬಣ್ಣಾ ಕಟ್ಟುವರು. ಬಣ್ಣಾ ಕಟ್ಟತಕ್ಕವರು ಮೊದಲು ಬೆಯಿಸಿದ ಅಡಿಕೇವಗರನ್ನು ಮತ್ತೊಂದುಸಲ ಅಡಿಕೆಯನ್ನು ಬೆಯಿಸುವಾಗ ಅದಕ್ಕೆ ಹಾಕಿ ಬೆಯಿಸಿ ವಗರನ್ನು ಬಸಿದುಕೊಳ್ಳುವರು. ಹೀಗೆ ಎರಡುಮೂರುಸಲ ಬೆಯಿಸುವುದಕ್ಕೆ ಉಪಯೋಗಿಸಿದರೆ ಆ ವಗರು ಮಂದವಾಗಿ ಆಗುವದು. ಇದಕ್ಕೆ ಅಡಿಕೆ ಹಾಲೆಂದು ಹೆಸರು. ಕೆಲವುಕಡೆ ಇದಕ್ಕೆ ಕಾಚು ವಿಳ್ಳೇಗೆಲೆಗಷ್ಟು ಸುಣ್ಣ ಅಷ್ಟಕಷ್ಟು ಹಾಕಿ ಹದವಾಗಿ ಕಾಸಿ ಇಟ್ಟುಕೊಂಡು ಅನಂತರ ಒಣಗಿಸಿಟ್ಟುಕೊಂಡಿದ್ದ ಅಡಿಕೆಯಲ್ಲಿ ಸ್ವಲ್ಪಸ್ವಲ್ಪ ರಾಶಿಯಾಗಿ ಸುರಿದುಕೊಂಡು ಅದಕ್ಕೆ ಒಬ್ಬನು ರಂಗನ್ನು ತುಂಬಿಕೊಂಡು ಸಣ್ಣನಾಗಿ ಅದರಮೇಲೆ ಬಿಡುತ್ತಾ ಬರುವನು. ಮತ್ತೊಬ್ಬನು ಅಡಿಕೆಗೆಲ್ಲಾ ಆ ರಂಗು ಸೇರುವಂತೆ ನೊಗಚಿವೊಗಚಿ ಕಲಸುತ್ತಾ ಬರುವನು. ಹೀಗೆ ರಂಗು ಹಾಕಿದ ನಂತರ ಒಂದುದಿವಸ ಒಣಗಿಸಿ ತೆಗೆದಿಡುವರು. ಚೆನ್ನಾಗಿ ಬೆಳೆದ ಗಿಡದಲ್ಲಿ ತೂಕದ ಏಳುಸೇರು ಬಾಗಾಯಿತು ಒಂಬತ್ತುಸೇರಿನವರೆಗೆ ಆಗುವುದು. ಅಡಿಕೇಮರವು ಫಲಕ್ಕೆ ಬಂದಮೇಲೆ ಎಂಬತ್ತು ಅಥವಾ ತೊಂಬತ್ತುವರುಷಗಳವರೆಗೆ ಸಂಪೂರ್ಣ ಫಲವನ್ನು ಕೊಡುವುದು. ಅನಂತರ ಫಲವು ಕಡಿಮೆಯಾಗುತ್ತಾ ಬರುವುದು. ಅಡಿಕೆ ಮರದಿಂದ ವರುಷಕ್ಕೆ ಏಳೇಳುಹಾಳೆಗಳು ಬೀಳುವವೆಂದು ಗೊತ್ತಿದೆಯಷ್ಟೆ. ಅಡಿಕೇ ಮರದ ಸುತ್ತಲೂ ಇರುವ ಗುರುತುಗಳನ್ನು ಎಣಿಸಿ ಏಳರಿಂದ ಭಾಗಿಸಿ ಅದಕ್ಕೆ ಏಳನ್ನು ಸೇರಿಸಿದಲ್ಲಿ ಆ ಮರಕ್ಕೆ ಇಷ್ಟುವರುಷಗಳಾಗಿವೆ ಎಂಬುವುದನ್ನು ಗೊತ್ತುಮಾಡಿ

ಕೊಳ್ಳಬಹುದು. ಇದರ ಹೊಂಬಾಳೆಗಳನ್ನು ಹಿಂದುಗಳು ದೇವರಿಗೆ ಪೂಜೆಮಾಡುವರು. ಇದರ ಹಾಳೆಗಳನ್ನು ಸೋಗೆಯಿಂದ ಕತ್ತರಿಸಿಕೊಂಡು ಹಾಳೆಯಹಿಂಭಾಗದಲ್ಲಿರುವ ಸಿಪ್ಪೆಯನ್ನು ಸುಲಿದು ಅದನ್ನು ಊಟಕ್ಕೆ ಉಪಯೋಗಿಸುವರು. ಇದು ಪರಸ್ಥಳಗಳಿಗೆ ಹೋಗುವಾಗ ಬುತ್ತಿಯನ್ನು ಕಟ್ಟಿಕೊಂಡು ಹೋಗುವದಕ್ಕೆ ಬಹಳ ಅನುಕೂಲವಾಗಿರುವದು. ಇದರಲ್ಲಿ ಪಂಚಾಮೃತ, ಹೆಳಿಯನ್ನು, ಇವೇಮೊದಲಾದವುಗಳನ್ನು ಕಲಸುವರು. ಬಾಣಂತೀರು ಗುಡ್ಲು ಮನೆಯಲ್ಲಿರುವಾಗ ಊಟಕ್ಕೆ ಇದನ್ನು ಉಪಯೋಗಿಸುವರು. ಪರಸ್ಥಳಗಳಿಗೆ ವಿಳ್ಳೆದೆಲೆ ಹಲಸಿನತೊಳೆ ಫಲಾಹಾರದಸಾವಾನು ಬೆಣ್ಣೆ ಇವೇ ಮೊದಲಾದವುಗಳನ್ನು ಕಟ್ಟಿಕೊಂಡು ಹೋಗುವುದಕ್ಕೆ ಇವು ಬಹಳ ಅನುಕೂಲವಾಗಿರುವುವು. ಅಡಿಕೆಸೋಗೆಗಳನ್ನು ಬಿಗಿದುಕಟ್ಟಿ ಕಸಬರಲಿನಂತೆಮಾಡಿ ಮನೆ ಗುಡಿಸುವುದಕ್ಕೆ ಉಪಯೋಗಿಸುವರು. ಇದರ ಸೋಗೆಗಳನ್ನು ಗುಡಿಸಿಲುಗಳ ಮತ್ತು ಮನೆಗಳ ಮೇಲುಗಡೆ ಹೊದ್ದಿಕೆಗೆ ಉಪಯೋಗಿಸುತ್ತಾರೆ; ಮತ್ತು ವಿಳ್ಳೇದೆಲೆ ಕಟ್ಟನ್ನು ಕಟ್ಟುವುದಕ್ಕೆ ಉಪಯೋಗಿಸುತ್ತಾರೆ. ಇನ್ನು ಕೆಲವು ಕಡೆ ಸೋಗೆಗಳಲ್ಲಿ ಮೆತ್ತಿಗೆ ಇರುವುದನ್ನು ದನಗಳ ಮೇವಿಗೆ ಉಪಯೋಗಿಸುವದೂ ಉಂಟು. ಇದರ ಗರಿಗಳಲ್ಲಿರುವ ಕಡ್ಡಿಯು ತೆಂಗಿನಕಡ್ಡಿಯಷ್ಟು ಗಟ್ಟಿಯಾಗಿಲ್ಲದಿರುವುದರಿಂದ ಅದರಹಾಗೆ ಉಪಯೋಗಕ್ಕೆ ಬರುವುದಿಲ್ಲ. ಅಡಿಕೆಮರಗಳನ್ನು ಮನೆಗಳಿಗೂ ಗುಡಿಸಿಲುಗಳಿಗೂ ಚಪ್ಪರಗಳಿಗೂ ಉಪಯೋಗಿಸುತ್ತಾರೆ. ಇದರ ದಬ್ಬೆಗಳನ್ನು ಮನೆಯ ಮೇಲ್ಛಾವಣಿಗೂ ಅಟ್ಟಗಳಿಗೂ ಇನ್ನೂ ಇತರ ಕೆಲಸಗಳಿಗೂ ಉಪಯೋಗಿಸುವರು. ಅಡಿಕೆಮರದ ಬುಡದಲ್ಲಿ ವಿಳ್ಳೇದೆಲೆ ಹಂಬನ್ನು ಹಾಕಿ ಆ ಮರಕ್ಕೆ ಹಬ್ಬಿಸಿದಲ್ಲಿ ವಿಶೇಷ ಲಾಭವಾಗುವುದು. ವಿಳ್ಳೇದೆಲೆಹಂಬಿಗೆ ಆದ ವ್ಯವಸಾಯವು ಅಡಿಕೆಮರಕ್ಕೂ ಆದಂತೆ ಆಗುವುದು. ಇದರಬಳ್ಳಿ ಎಲೆಗಳು ಮರವನ್ನು ಸುತ್ತಿಕೊಂಡಿರುವುದರಿಂದ ಅದಕ್ಕೆ ತಂಪು ಹಾಗೂ ಬೆಚ್ಚಗಿ ವಿಶೇಷ ಫಲಕ್ಕೆ ಅವಕಾಶವಾಗುವುದು. ಅಡಿಕೆಮರಕ್ಕೆ ಯಾವದೊಂದು ಬಾಧಕವೂ ಬಾರದಿದ್ದರೆ ೨೦೦ ವರುಷಗಳವರಿಗೆ ಫಲವನ್ನು ಕೊಡುವದು. ಆದ್ದರಿಂದ ಇದನ್ನು ತೆಂಗಿನಗಿಡದಂತೆ ಕಲ್ಪವೃಕ್ಷವೆಂದು ಕರೆಯುವರು. ಅನೇಕರು ಅಡಿಕೆತೋಟದ ವ್ಯವಸಾಯವನ್ನೇ ಮುಖ್ಯವಾಗಿಟ್ಟುಕೊಂಡು ಅದರಿಂದ ಕುಟುಂಬಧರ್ಮವನ್ನು ನಡಾಯಿಸುತ್ತಿರುವರು

ರಾಯಬಹದೂರ್ ಸಾಧುಶೇಷಯ್ಯನವರು.

ಈ ಭರತಖಂಡದಲ್ಲಿ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೋಸ್ಕರ ತಮ್ಮ ಬುದ್ಧಿಯನ್ನೂ ಶಕ್ತಿಯನ್ನೂ ಆಯುಸ್ಸನ್ನೂ ವಿನಿಯೋಗಿಸಿ ತಾವು ಮಾಡಿದ ಶ್ರಮಕ್ಕೆ ತಮ್ಮಲ್ಲಿ ಓದಿದ ವಿದ್ಯಾರ್ಥಿಗಳು ಅಭಿವೃದ್ಧಿಗೆ ಬರುವುದೇ ಅತ್ಯಂತ ಶ್ರೇಷ್ಠವಾದ ಫಲವೆಂದು ಭಾವಿಸಿ, ಸದಾ ಅಧ್ಯಾಪನಪಾರಾಯಣಚಿತ್ತರಾಗಿರತಕ್ಕ ಮಹನೀಯರು ವಿರಳೀಕರಿರುತ್ತಾರೆ. ರಾಯಬಹದೂರ್ ಸಾಧುಶೇಷಯ್ಯನವರು ದಕ್ಷಿಣದೇಶವಾದ ಮದರಾಸ್ ಆಧಿಪತ್ಯದಲ್ಲಿ ವಿದ್ಯಾಭ್ಯಾಸದ ಇಲಾಖೆಯನ್ನು ಸೇರಿ ೩೯ ವರುಷಗಳು ಅವಿಚ್ಛಿನ್ನವಾಗಿ ವಿದ್ಯಾರ್ಥಿಗಳ ಕ್ಷೇಮಚಿಂತೆಯಲ್ಲಿಯೆ ನಿರತರಾಗಿದ್ದರು. ವಿದ್ಯಾರ್ಥಿಗಳಿಗೆ ಅಜ್ಞಾನವೆಂಬ ತಮಸ್ಸನ್ನು ಹೋಗಲಾಡಿಸುವುದರಲ್ಲಿ ಐಹಿಕಾಮುಷ್ಮಿಕಗಳಿಗೆ ಸಾಧಕಗಳಾದ ಜ್ಞಾನಾರ್ಜನೆಯ ವಿಷಯಗಳನ್ನು ಬೋಧಿಸುವುದರಲ್ಲಿ ಬದ್ಧಾದರರಾಗಿದ್ದ ಇವರ ಚರಿತ್ರೆಯು ಶ್ರೋತವ್ಯವಾದದ್ದು. ಮಾ॥ ಸಾಧುಶೇಷಯ್ಯನವರು ೧೮೬೧ನೇ ಇಸವಿಯಲ್ಲಿ ಕಡಲೂರಿನಲ್ಲಿ ಜನಿಸಿದರು. ಇವರ ಅಜ್ಜಂದಿರು ಆ ಪಟ್ಟಣದಲ್ಲಿದ್ದ ಈಸ್ಟ್‌ಇಂಡಿಯಾ ಕಂಪೆನಿಯಲ್ಲಿ ಗುಮಾಸ್ತರಾಗಿದ್ದರು. ಆ ಕಾಲದಲ್ಲಿ ಜನರಿಗೆ ಇಂಗ್ಲಿಷ್ ಪರಿಚಯವು ಬಹಳ ಅಪೂರ್ವವಾಗಿರುತ್ತಿತ್ತು. ಆದಾಗ್ಯೂ ಇವರು ಇಂಗ್ಲಿಷ್ ಭಾಷಾ ಪರಿಚಯವುಳ್ಳವರಾಗಿದ್ದರು. ಕೆಲವು ದಿವಸಗಳಲ್ಲಿ ಇವರಿಗೆ ತಂಜಾವೂರಿನಲ್ಲಿ ಇಂಗ್ಲಿಷ್ ರೈಟರ್ ಕೆಲಸವಾಯಿತು. ಅಲ್ಲಿ ಅಧಿಕಾರಿಗಳಾಗಿದ್ದ ಮೆ॥ ಆರ್ಥರ್ ಬ್ರೂಕ್ಸ್‌ಹೇಬರವರು ಇವರ ಪೊಮ್ಮಕ್ಕಳಾದ ಶೇಷಯ್ಯನವರಿಗೆ ಮುರೆಸ್ಪೆಲ್ಲಿಂಗ ಬುಕ್ಕೆಂಬ ಇಂಗ್ಲಿಷ್ ಬಾಲಬೋಧೆಯ ಪುಸ್ತಕವನ್ನು ಬಹುಮಾನವಾಗಿ ಕೊಟ್ಟರು. ಮಾ॥ ಶೇಷಯ್ಯನವರಿಗೆ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಮಾಡುವುದಕ್ಕೆ ಇದು ಪ್ರೋತ್ಸಾಹಕವಾಗಿ ಪರಿಣಮಿಸಿತು. ಇವರು ತಮ್ಮ ಜನ್ಮಭೂಮಿಯಾದ ಕಡಲೂರಿನಲ್ಲಿ ಪ್ರಥಮತಃ ತೆಲಗುಭಾಷೆಯನ್ನು ಅಭ್ಯಾಸಮಾಡಿದರು. ಇವರ ತೆಲಗು ಉಪಾಧ್ಯಾಯನು ಬಹಳ ವಿದ್ವತ್ತುಳ್ಳವನಾಗಿಯೂ ಒಳ್ಳೆಯ ವೇದಾಂತಿಯಾಗಿಯೂ ಇದ್ದನು. ಆತನ ಶಿಕ್ಷೆಯಿಂದಲೂ ಸಹವಾಸದಿಂದಲೂ ಮಾ॥ ಶೇಷಯ್ಯನವರು ಪ್ರಥಮತಃ ತೆಲಗುನಲ್ಲಿಯೂ ಕ್ರಮೇಣ ಸಂಸ್ಕೃತ ತಮಳು ಮೊದಲಾದವುಗಳಲ್ಲಿಯೂ ಪ್ರಬಲವಾದ ಪಾಂಡಿತ್ಯವನ್ನು ಸಂಪಾದಿಸಿದರು. ಆಗ ಮುಹಮ್ಮದೀಯ ಭಾಷೆಯನ್ನೂ ಕೂಡ ಬಹ

ಪ್ರಬಲದೆಸೆಯಲ್ಲಿದ್ದ್ದರಿಂದ ಸರ್ಕಾರದ ಕಾಗದಪತ್ರಗಳೆಲ್ಲಾ ಮಹರಾಷ್ಟ್ರಭಾಷೆಯಲ್ಲೇ ಇಡಲ್ಪಡುತ್ತಿತ್ತು. ಆದ್ದರಿಂದ ಇವರು ಆ ಭಾಷೆಯಲ್ಲಿಯೂ ಪಾಂಡಿತ್ಯವನ್ನು ಸಂಪಾದಿಸಿದರು. ಈ ಮಧ್ಯದಲ್ಲಿ ಇಂಗ್ಲಿಷ್ ಭಾಷಾಭ್ಯಾಸವನ್ನು ಮಾಡುತ್ತಿದ್ದರು. ೧೮೫೬ನೇ ಇಸವಿಯಲ್ಲಿ ಇವರು ಕಡಲೂರುಜಿಲ್ಲಾ ಸ್ಕೂಲಿಗೆ ಸೇರಿದರು. ಇಲ್ಲಿಗೆ ಸೇರಿದ ಎರಡುವರುಷಗಳೊಳಗಾಗಿ ಓದಿದ ಪುಸ್ತಕಗಳಿಗೆ ಅರ್ಥವನ್ನು ತಿಳಿದುಕೊಳ್ಳುವ ತಕ್ಕ ಶಕ್ತಿಯನ್ನು ಸಂಪಾದಿಸಿಕೊಂಡರು. ಅದು ಮೊದಲೊಂಡು ವಿಶೇಷ ಶ್ರದ್ಧೆಯಿಂದ ಅನೇಕ ಇಂಗ್ಲಿಷ್ ಗ್ರಂಥಗಳನ್ನು ಓದಿ ಬಹಳ ಸಮರ್ಥರೆಂದು ಹೆಸರುವಾಸಿಯನ್ನು ಪಡೆದದ್ದು ಮಾತ್ರವಲ್ಲದೆ ಗಣಿತಶಾಸ್ತ್ರದಲ್ಲಿ ಪಾಂಡಿತ್ಯವನ್ನು ಸಂಪಾದಿಸಿದರು. ಈಗ್ಗೆ ಕೆಲವು ದಿವಸಗಳಿಗೆ ಮುಂಚೆ ಸರ್. ಪಿಲಿಪ್‌ಹರ್ಟಿಸ್‌ರವರಿಂದ ಇವರಿಗೆ ಬರೆಯಲ್ಪಟ್ಟ ಒಂದು ಲೇಖನವು ಇವರ ಯೋಗ್ಯತೆಯನ್ನು ಪ್ರದರ್ಶನಮಾಡುತ್ತದೆ. ಸರ್. ಪಿಲಿಪ್‌ರವರು ವಿಲಾಯತಿಯಿಂದ ಬರೆದಿರುವ್ರದೇನಂದೆರೆ,—" ನಾನು ೧೮೫೯ರಲ್ಲಿ ನಿಮ್ಮ ತರಗತಿಯನ್ನು ನೋಡುವುದಕ್ಕೆ ಬಂದಾಗ ನಿಮ್ಮ ಚಟುವಟಿಕೆಯನ್ನೂ ಬುದ್ಧಿಕೌಶಲ್ಯವನ್ನೂ ನೋಡಿದ್ದರಲ್ಲಿ ಉತ್ತರೋತ್ತರ ನೀವು ಅತ್ಯುತ್ತಮವಾದ ದೆಸೆಗೆ ಬರಬಹುದೆಂದು ನಾನು ಯೋಚಿಸಿದ್ದೆನು. ನನ್ನ ನಿರೀಕ್ಷಣೆಯು ವ್ಯರ್ಥವಾಗಲಿಲ್ಲ. ನೀವು ಅತ್ಯಂತ ಘನತೆಯನ್ನು ಹೊಂದಿದ ಪದವಿಯನ್ನು ಇದುವರಿಗೂ ಅಲಂಕರಿಸಿದ್ದಿರಿ, ಈಗ ನೀವು ರಿಟೈರಾಗುವ್ರದನ್ನು ಕೇಳಿ ನಾನು ಬಹಳ ವ್ಯಸನಾಕ್ರಾಂತನಾಗಿದ್ದೇನೆ" ಎಂದು. ಈ ಲೇಖನದಿಂದಲೇ ಬಹಳ ಪ್ರಸಿದ್ಧರಾದ ಸರದಾರರ ಗೌರವಕ್ಕೂ ಇವರು ಪಾತ್ರರಾಗಿದ್ದ್ದು ಗೊತ್ತಾಗುತ್ತದೆ. ಅದು ಹಾಗಿರಲಿ, ೧೮೫೯ನೇ ಇಸವಿಯಲ್ಲಿ ಪಬ್ಲಿಕ್‌ಇನ್‌ಸ್ಟ್ರಕ್ಷನ್ ಡೈರೆಕ್ಟರಗಳಾದ ಸರ್. ಎ. ಅರ್ಬತ್ನಾಟರವರು ಇವರ ವಿದ್ವತ್ತ್ವನ್ನು ನೋಡಿ ಬಹಳ ಸಂತುಷ್ಟರಾಗಿ ಇವರಿಗೆ ಸ್ಕಾಲರ್‌ಷಿಪ್ಪನ್ನು ಕೊಟ್ಟು ಮದರಾಸ್ ಪ್ರೆಸಿಡೆನ್ಸಿಕಾಲೇಜಿಗೆ ಹೋಗುವುದಕ್ಕೆ ತಕ್ಕ ಏರ್ಪಾಡನ್ನು ಮಾಡಿದರು. ಆದರೆ ಆಗ ಮದರಾಸಿಗೆ ಪ್ರಯಾಣಮಾಡುವುದಕ್ಕೆ ದುರ್ನಿವಾರವಾದ ಪ್ರತಿಬಂಧಕಗಳು ಬಂದದ್ದರಿಂದ ಅವರು ಕಡಲೂರಿನಲ್ಲಿಯೇ ಒಂದು ಸ್ಕೂಲ್‌ಮಾಸ್ಟರ್ ಕೆಲಸವನ್ನು ಒಪ್ಪಿಕೊಂಡರು. ಸ್ವಶಕ್ತಿಯಿಂದಲೂ ಸರ್. ಟಿ. ಮಾಧವರಾಯರು ಮತ್ತು ಗೋಪಾಲರಾಯರು ಮೊದಲಾದವರು ಹಾಕಿದ್ದ ಮೆಟ್ಟಿಲುಪಜ್ಜೆಗಳಿಂದಲೂ ಇವರು ಅಸಹಾಯರಾಗಿ ವಿದ್ಯಾಭ್ಯಾಸವನ್ನು ಮಾಡುತ್ತಾ ಇದ್ದು ೧೮೬೦ನೇ ಇಸವಿಯಲ್ಲಿ

ಮಿಟ್ರಿಕ್ಯುಲೇಷನ್ ಪರೀಕ್ಷೆಯನ್ನು ಒಂದನೇ ತರಗತಿಯಲ್ಲಿ ಕೊಟ್ಟರು. ೧೮೬೮ನೇ ಇಸವಿಯಲ್ಲಿ ಎಫ್. ಎ. ಪರೀಕ್ಷೆಯು ಏರ್ಪಾಡಾಯಿತು. ಅದೇವರುಷ ಆ ಪರೀಕ್ಷೆಗೂ ಹೋಗಿ ತೇರ್ಗಡೆಯಾದರು. ೧೮೬೯ನೇ ಇಸವಿಯಲ್ಲಿ ಇವರಿಗೆ ಕುಂಭಕೋಣಕ್ಕೆ ವರ್ಗವಾಯಿತು. ಆಗ ಕುಂಭಕೋಣದ ಕಾಲೇಜಿಗೆ ನಮ್ಮ ಲೇಟ್‌ಮಹಾರಾಜರವರಿಗೆ ಟ್ಯೂಟರಾಗಿದ್ದ ಮಿ|| ಪೋರ್ಟರ್ ಎಂ ಏ ಯವರು ಅಧ್ಯಕ್ಷರಾಗಿದ್ದರು. ಈ ವರ್ಗದ ವಿಷಯದಲ್ಲಿ ಮ|| ಶೇಷಯ್ಯನವರು ಹೇಳಿರತಕ್ಕದ್ದು ಬಹಳ ಹೃದಯಂಗಮವಾಗಿದೆ. ಅದೇನೆಂದರೆ–" ಮಿ|| ಪೋರ್ಟರ್‌ಸಾಹೇಬರವರು ಅದ್ವಿತೀಯರಾದ ಬೋಧಕರು. ಇಂಥಾ ಮಹನೀಯರ ತಾಬೇದಾರಿಯು ನನಗೆ ಸಿಕ್ಕಿದ್ದು ನನ್ನ ಪುಣ್ಯಪರಿಪಾಕವೆಂದು ನಾನು ಭಾವಿಸಿದೇನೆ. ವಿದ್ವತ್ತಿನಲ್ಲಿಯೂ ಗುಣಾತಿಶಯಗಳಲ್ಲಿಯೂ ಇಂಥಾ ಮಹಾತ್ಮರನ್ನು ನಾನು ನೋಡಿಯೇ ಇಲ್ಲ. ಇವರ ಶಾಸ್ತ್ರಪರಿಚಯವು ಇವರ ವಿದ್ವತ್ತಿಗೆ ಸಮಾನವಾಗಿತ್ತು. ಕೆಲಸಮಾಡುವುದರಲ್ಲಿ ಇವರು ಹೊಂದಿದ್ದ ಶ್ರದ್ಧೆಯೂ ವಿದ್ಯಾರ್ಥಿಗಳ ವಿಷಯದಲ್ಲಿ ಇವರಿಗೆ ನಿಸರ್ಗವಾಗಿದ್ದ ಪ್ರೀತಿಯೂ ಔದಾರ್ಯವೂ ಅನನ್ಯಸಾಧಾರಣವಾಗಿತ್ತು. ತಾಬೇದಾರರ ವಿಷಯದಲ್ಲಿ ಇವರು ತೋರಿಸುತ್ತಿದ್ದ ದಯೆಯು ಎಲ್ಲರನ್ನೂ ಇವರಂತೆಯೇ ಶ್ರದ್ಧೆಯುಳ್ಳವರನ್ನಾಗಿ ಮಾಡುತ್ತಿತ್ತು. ನಾನು ಅನೇಕ ವರುಷಗಳವರಿಗೂ ಇವರ ತಾಬೇದಾರಿಯನ್ನು ಮಾಡಿದೆನು. ಹೀಗೆ ತಾಬೇದಾರಿ ಮಾಡುತ್ತಿದ್ದ ಕಾಲವೇ ನನಗೆ ಶುಕ್ರಮಹಾದಶೆಕಾಲವೆಂದು ನಾನು ಭಾವಿಸಿದ್ದೆನು. ಗುರುವಿನಂತೆ ಶಿಷ್ಯನೆಂಬ ಗಾದೆಯು ಲೋಕದಲ್ಲಿ ಅಚರಣೆಯಲ್ಲಿರುವುದಷ್ಟೆ. ಅದಕ್ಕೆ ಮ|| ಶೇಷಯ್ಯನವರೇ ದೃಷ್ಟಾಂತವಾಗಿ ಪರಿಣಮಿಸಿದರು.

೧೮೬೯ನೇ ಇಸವಿಯಲ್ಲಿ ಕುಂಭಕೋಣದ ಕಾಲೇಜಿನಿಂದ ಬಿ. ಎ. ಪರೀಕ್ಷೆಗೆ ಪ್ರಥಮತಃ ವಿದ್ಯಾರ್ಥಿಗಳು ಕಳುಹಿಸಲ್ಪಟ್ಟರು. ಅದೇವರುಷ ಮ|| ಸಾಧುಶೇಷಯ್ಯನವರು ಪ್ರೈವೇಟ್ಟಾಗಿ ಬಿ. ಎ ಪರೀಕ್ಷೆಗೆ ಹೋಗಿ ಪರೀಕ್ಷೆಯನ್ನು ಕೊಟ್ಟರು. ಈ ಪರೀಕ್ಷೆಯನ್ನು ಕೊಟ್ಟಮೇಲೆ ೧೭ ವರುಷಗಳು ಅವಿಚ್ಛಿನ್ನವಾಗಿ ಅನೇಕ ಪಾಠಶಾಲೆಗಳಲ್ಲಿ ಮಿಹನತ್ತನ್ನು ಮಾಡಿ ಅಸಾಧಾರಣವಾದ ಕೀರ್ತಿಯನ್ನು ಸಂಪಾದಿಸಿದರು. ಮತ್ತು ಮದರಾಸ್ ಯೂನಿವರ್ಸಿಟಿಗೆ ಫೆಲೋಗಳಾಗಿ ನಿಯಮಿಸಲ್ಪಟ್ಟರು. ಈಗ ನಾಲ್ಕುವರುಷಗಳ ಮುಂಚೆ ಗೌರ್ನಮೆಂಟಿನವರು ಇವರ ಪಾಂಡಿತ್ಯವನ್ನು ನೋಡಿ ಸಂತುಷ್ಟರಾಗಿ ರಾಯಬಹದೂರ್ ಎಂಬ ಬಿರುದನ್ನು ಕೊಟ್ಟರು. ಇವರ

ಕಲ್ಲೀಕೋಟೆ ಮತ್ತು ಬಳ್ಳಾರಿ ಕಾಲೇಜುಗಳಲ್ಲಿಯೂ ಮದರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೂ ಬಹಳ ಮೆಹನತ್ತನ್ನು ಮಾಡಿದರು. ಈಗ ಟೀಚರಸ್ ಕಾಲೆಜ್‌ಗಿರುತಕ್ಕ ಮದರಾಸ್ ನಾರ್ಮಲ್‌ಸ್ಕೂಲಿಗೆ ಅಧ್ಯಕ್ಷರಾಗಿದ್ದರು. ಅರುಸಲ ಸ್ಕೂಲುಗಳ ಇನ್‌ಸ್ಪೆಕ್ಟರಾಗಿ ಮದರಾಸ್ ಅಧಿಪತ್ಯದ ಅನೇಕ ಪಾಠಶಾಲೆಗಳನ್ನು ಉನ್ನತಸ್ಥಿತಿಗೆ ಬರುವಂತೆ ಮಾಡಿದರು. ಕಳೆದ ೭—೮ ವರುಷಗಳಿಂದ ಕುಂಭಕೋಣದ ಕಾಲೇಜಿನಲ್ಲಿ ಕೆಲಸವಮಾಡಿದ್ದಲ್ಲದೆ ಈಚೆಗೆ ಆ ಕಾಲೇಜಿಗೆ ಪ್ರಿನ್ಸಿಪಲ್‌ರಾಗಿಯೂ ನಿಯಮಿಸಲ್ಪಟ್ಟಿದ್ದರು. ಸರ್ವಿಸ್ ರೂಲ್‌ಗಳಪ್ರಕಾರ ಕೆಲಸದಿಂದ ರಿಟ್ಯೈರಾಗತಕ್ಕ ವಯಸ್ಸಾದದ್ದರಿಂದ ಇವರು ರಿಟ್ಯೈರ್ಮೂಡಲ್ಪಟ್ಟು ಇದಾರೆ.

ಇವರು ಕೆಲಸಕ್ಕೆ ಸೇರಿದ್ದು ಮೊದಲ್ಗೊಂಡು ರಿಟ್ಯೈರಾಗುವವರಿಗೆ ೩೨ ವರುಷಗಳಲ್ಲಿಯೂ ಕೆಲಸವನ್ನು ಶ್ರದ್ಧೆಯಿಂದ ಮಾಡುವುದು ಕೆಲಸವನ್ನು ಸಮರ್ಪಕವಾಗಿ ಮಾಡುವುದಕ್ಕೆ ತಕ್ಕಯೋಗ್ಯತೆಯನ್ನು ಸಂಪಾದಿಸುವುದಕ್ಕೋಸ್ಕರ ವ್ಯಾಸಂಗಮಾಡುವುದು ಇವೆರಡರಲ್ಲಿಯೇ ವಿಶೇಷ ನಿರತರಾಗಿದ್ದರು. ಇವರು ಮೇಲಣ ಅಧಿಕಾರಿಗಳನ್ನು ಆಶ್ರಯಿಸುತ್ತಿರಲಿಲ್ಲ. ಆಶ್ರಯಾಬಲದಿಂದ ಬದುಕಬೇಕೆಂಬ ಅಪೇಕ್ಷೆಯೂ ಇವರಿಗೆ ಇರಲಿಲ್ಲ. ಇವರಿಗೆ ಆದ ದೊಡ್ಡ ಅಧಿಕಾರಗಳೆಲ್ಲಾ ಇವರ ವಿದ್ಯಾಬಲದಿಂದ ಅಪೇಕ್ಷಿತವಾಗಿ ಬಂದಿರುತ್ತವೆ. ಅನೇಕ ಪಾಠಶಾಲೆಗಳಲ್ಲಿ ಅನೇಕ ಉಪಾಧ್ಯಾಯರು ಒಂದೊಂದು ವಿಷಯದಲ್ಲಿ ಸಮರ್ಥರಾಗಿರುತ್ತಾರೆ. ಇವರು ಗಣಿತಶಾಸ್ತ್ರ ಚರಿತ್ರೆ ಇಂಗ್ಲಿಷ್‌ಕಾವ್ಯ ಮೊದಲಾದವುಗಳಲ್ಲಿಯೂ ಸಂಸ್ಕೃತ ತೆಲಗು ತಮಿಳುಗಳಲ್ಲಿಯೂ ಬೋಧಕರಾಗಿದ್ದರು. ಸಂಸ್ಕೃತ ಮತ್ತು ಇಂಗ್ಲಿಷ್‌ಕಾವ್ಯಗಳಲ್ಲಿಯೂ ಅಲಂಕಾರಗಳಲ್ಲಿಯೂ ಸವೂನವಾದ ಭಾಗಗಳನ್ನು ತೆಗೆದು ವಿದ್ಯಾರ್ಥಿಗಳಿಗೆ ಬೋಧಿಸುತಕ್ಕ ಸಾಮರ್ಥ್ಯವು ಇವರಂತೆ ಹೊಂದಿರತಕ್ಕವರೇ ಅಪೂರ್ವ? ಇಂಗ್ಲಿಷ್ ಸಂಸ್ಕೃತ ಮೊದಲಾದ ಭಾಷೆಗಳಲ್ಲಿ ಅತ್ಯಂತ ಪ್ರಸಿದ್ಧರಾದ ಮಹಾಕವಿಗಳ ಗ್ರಂಥಗಳು ಇವರಂಗಕರತಲಾಮಲಕವಾಗುವಂತೆ ಬಹಳ ಸ್ವಲ್ಪ ಜನಗಳಿಗೆ ಇರುವುದು ಸಾಮಾನ್ಯವಾದ ಪಾಠಕರಿಗೂ ಇವರಿಗೂ ಒಂದು ವೈಲಕ್ಷಣ್ಯವುಂಟು. ಅನೇಕ ಉಪಾಧ್ಯಾಯರು ಪಾಠಶಾಲೆಯಲ್ಲಿ ತಾವು ಹೇಳತಕ್ಕ ಪಾಠವನ್ನು ಸರಿಯಾಗಿ ಹೇಳಿಬಿಟ್ಟರೆ ತಮ್ಮ ಕೆಲಸ ಮುಗಿಯಿತೆಂದು ತಿಳಿದುಕೊಂಡಿರುವರು. ಆದರೆ ಮಾ॥ ಶೇಷಯ್ಯನವರು ಪಾಠಶಾಲೆಯಲ್ಲಿ ಪಾಠಕರಾಗಿರುವುದಲ್ಲದೆ ಪಾಠಶಾಲೆಯಿಂದ ಹೊರಗೆ ವಿದ್ಯಾ

ರ್ಥಿಗಳಿಗೆ ಸ್ನೇಹಿತರಾಗಿಯೂ ಹಿತಚಿಂತಕರಾಗಿಯೂ ಸಹಾಯಕರಾಗಿಯೂ ಇದ್ದರು. ಎಲ್ಲಾ ವಿದ್ಯಾಭ್ಯಾಸದ ಏರ್ಪಾಡುಗಳಲ್ಲಿಯೂ ಎಲ್ಲಾ ಪಠಶಾಲೆಗಳ ಪರೋಕ್ಷವೃದ್ಧಿಯ ವಿಷಯದಲ್ಲಿಯೂ ಇವರು ಬಹಳವಾಗಿ ಪ್ರೋತ್ಸಾಹಮಾಡುತ್ತಲಿದಾರೆ. ಈಗ ಇರತಕ್ಕ ಕುಂಭಕೋಣದ ಟರ್ಷ್ ಹೈಸ್ಕೂಲಿನ ವೃದ್ಧಿಗೆ ಇವರ ಪ್ರೋತ್ಸಾಹವು ಮುಖ್ಯವಾದದ್ದಾಗಿದೆ.

ಇವರು ಪ್ರಥಮತಃ ಬ್ರಹ್ಮಸಮಾಜದ ಸಿದ್ಧಾಂತಗಳನ್ನು ಓದಿ ಅದರಲ್ಲಿ ಬಹಳ ಶ್ರದ್ಧೆಯುಳ್ಳವರಾಗಿ ಇದ್ದದ್ದಲ್ಲದೆ ನಮ್ಮ ಸಮಯಾಚಾರಗಳಲ್ಲಿ ಉಂಟಾಗಿರತಕ್ಕ ನ್ಯೂನತೆಯಿಂದ ನಮ್ಮ ದೇಶದಲ್ಲುಂಟಾಗುತ್ತಲಿರುವ ಅನರ್ಥಗಳನ್ನು ನೋಡಿ ಬಹಳ ವಿಷಾದಿಸುತ್ತಿದ್ದರು. ವಿತಂತುಗಳ ವಿವಾಹ ನಿಷೇಧವು ಯುಕ್ತಿಯುಕ್ತವಾದ ಪಕ್ಷದಲ್ಲಿ ವಿಧುರರಿಗೂ ವಿವಾಹನಿಷೇಧವೆಂಬಲ್ಲಿಯೂ [illegible] ಪುರುಷರಿಬ್ಬರಿಗೂ ತಪ್ಪಬೇಕೆಂಬದಾಗಿಯೂ ನಮ್ಮ ಭರತಖಂಡವು ಉತ್ಕೃಷ್ಟಸ್ಥಿತಿಗೆ ಬರಬೇಕಾದರೆ ನಮ್ಮ ಪೂರ್ವದ ಮಹರ್ಷಿಗಳಂತೆ ಈಗಿನ ವಿದ್ವಾಂಸರು ಕೂಡ ದುರ್ಭಿಮಾನಗಳನ್ನು ಬಿಟ್ಟು ವೇದಶಾಸ್ತ್ರಗಳ ತತ್ವವನ್ನೂ ಧರ್ಮಸೂಕ್ಷ್ಮಗಳನ್ನೂ ಅವಲಂಬಿಸಿ ಯುಕ್ತಿಯುಕ್ತವಾಗಿರುವಂತೆ ಸಮಯಾಚಾರಸಂಸ್ಕಾರಗಳನ್ನು ಮಾಡಬೇಕೆಂಬದಾಗಿಯೂ ದೇಶದ ಕ್ಷೇಮಚಿಂತನೆಯು ಸಮಾಜದಲ್ಲಿ [illegible] ಮಾಡುವುದಕ್ಕೆ ಬದಲಾಗಿ ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ತವ್ಯವನ್ನು ಶ್ರದ್ಧೆಯಿಂದ ಮಾಡುತ್ತಾ ಬರಬೇಕೆಂಬದಾಗಿಯೂ ಹೇಳಿ ಇದಾರೆ. ಇವರು ಕೆಲಸದಿಂದ ನಿವೃತ್ತರಾದಾಗ್ಯೂ ಸ್ವತಂತ್ರರಾಗಿ ನಮ್ಮ ಭರತಖಂಡದ ವಿದ್ಯಾಭಿವೃದ್ಧಿಗೆ ಯೋಗ್ಯವಾದ ಏರ್ಪಾಡುಗಳನ್ನು ಮಾಡುತ್ತಾ ದೇಶಹಿತಾಚರಣೆಯಲ್ಲಿಯೇ ಆದರವುಳ್ಳವರಾಗಿರುತ್ತಾರೆ.

ಇವರು ಹಾಕಿರತಕ್ಕ ಮೇಲುಪಬ್ಬಿಯು ಸರ್ವರೂ ಆಚರಿಸುವುದಕ್ಕೆ ಮಾರ್ಗವನ್ನು ಸೂಚಿಸುತ್ತದೆ.

ಗೌರ್ನಮೆಂಟ್ ನಾರ್ಮಲ್‌ಸ್ಕೂಲ್ ಮೈಸೂರು.

ಬಾಲಕರು ಶಾಲೆಯಲ್ಲಿ ಕಳೆಯುವ ವಯಸ್ಸನ್ನು ಎಷ್ಟುಹೊತ್ತಾದರೂ ಎಂಗಡಿಸಬಹುದು ? ಮತ್ತು ಯಾವಯಾವ ವಯಸ್ಸಿನಲ್ಲಿ ಯಾವಯಾವ ಶಕ್ತಿಗಳು ಅವರಲ್ಲಿ ಅಧಿ

ಕನಾಗಿ ತೋರುವವು? ಈ ಶಕ್ತಿಗಳು ಅಭಿವೃದ್ಧಿಯನ್ನೈದುವ ಹಾಗೆ ಯಾವಯೂವ ವಯಸ್ಸಿನಲ್ಲಿ ಯೂವಯೂವ ವಿದ್ಯಾಭ್ಯಾಸವನ್ನು ಮೂಡಿಸಬೇಕು? ಇದನ್ನು ವಿಸ್ತಾರವಾಗಿ ತಿಳಿಸಿ?

2 a ಇಂಡಕ್ಟೀವ್, ಡಿಡಕ್ಟೀವ್, ಪದ್ಧತಿಗಳೆಂದರೇನು? ಇವುಗಳನ್ನು ಶಾಲೆಯಲ್ಲಿ ಯೂವ ಕಾಲದಲ್ಲಿ ಎಷ್ಟರಮಟ್ಟಿಗೆ ಅನುಸರಿಸಬಹುದು.

b "ಒಂದು ನೇತ್ರವು ಎರಡು ಶ್ರೋತ್ರಗಳಿಗೆ ಸಮೆ" ಈ ತತ್ವದ ಅರ್ಥವು ಶಾಲೆಯಲ್ಲಿ ಯೂವರೀತಿಯಲ್ಲಿ ಆಚರಣೆಗೆ ತರಲ್ಪಟ್ಟಿದೆ ಆದರೆ ಕ್ರಮೇಣ ಈ ಆಚರಣೆಯಲ್ಲಿ ಯೂತಕ್ಕೆ ಭೇದಉಂಟಾಗುವುದು.

3 ಆಸೆಯೂತನುಕೊಟ್ಟು ಭಾಷೆತಪ್ಪುವಹೊಲೆಯ। ಲೇಸುವುಪಕಾರಗಳ ಮೂಡದವಹೊಲೆಯ। ಹುಸಿಯುಬಗಳುವ ಒಬ್ಬಹುಚ್ಚಹೊಲೆಯ॥ ಇದರ ತಾತ್ಪರ್ಯಗ್ರಹಣವಾಯಿತೆಂಬುದನ್ನು ತಿಳಿಯುವುದಕ್ಕೆ ಕೇಳಬಹುದಾದ ಕೆಲವು ಪ್ರಶ್ನೆಗಳನ್ನು ಬರೆಯಿರಿ? ಈ ಪದ್ಯವನ್ನು ಬೋಧಿಸಿದ ನಂತರ ಹಲಿಗೆಯಮೇಲೇನಿರುವುದು?

4 a ಭೂಗೋಳಪಾಠದಿಂದಾಗುವ ಪ್ರಯೋಜನಗಳೇನು? ಇವು ಸರಿಯೂಗಿ ನೆರವೇರಬೇಕಾದರೆ ಉಪಾಧ್ಯಾಯರಲ್ಲಿ ಯೂವ ಗುಣಗಳಿರಬೇಕು? ಮತ್ತು ಇದನ್ನು ಅವರು ಯೂವ ರೀತಿಯಲ್ಲಿ ಬೋಧಿಸಬೇಕು?

b ಮೈಸೂರುದೇಶದ ಸಾಮಾನ್ಯ ವಿಷಯಗಳನ್ನು ಬಾಲಕರಿಗೆ ತಿಳಿಸುವ ಕ್ರಮವನ್ನು ಸಕ್ಷೇಪತಃ ತಿಳಿಸಿ.

c ಋತುಗಳ ವಿಷಯವನ್ನು ೩ನೇ ತರಗತಿಯ ಬಾಲಕರಿಗೆ ಬೋಧಿಸುವದಕ್ಕಾಗಿ ಒಂದು ಟಿಪ್ಪಣಿಯನ್ನು ಬರೆಯಿರಿ.

5 ರೂಪಾಯಿಗೆ 10 ಸೇರು ಅಕ್ಕಿ ಅದಾಗ್ಯೆ 15 ಜನಗಳಿಗೆ 14 ದಿವಸಗಳಿಗೆ $10\frac{1}{2}$ ರೂಪಾಯಿಗಳ ಅಕ್ಕಿ ಬೇಕು. 13 ಜನಗಳಿಗೆ 4 ದಿವಸಕ್ಕೆ 2 ರೂಪಾಯಿನ ಅಕ್ಕಿ ಸಾಕಾಗಬೇಕಾದರೆ ರೂಪಾಯಿಗೆ ಎಷ್ಟುಸೇರು ಅಕ್ಕಿ ಕೊರಬೇಕು? ಇದನ್ನು ಬಾಲಕರಿಗೆ ಯಾವರೀತಿಯಲ್ಲಿ ಬೋಧಿಸುವಿರಿ. ಬೋಧಿಸಿದನಂತರ ಹಲಿಗೆಯಮೇಲೇನಿರುವುದು?

6 a ಪೇಳಾಪತ್ರವನ್ನು ಕಲ್ಪಿಸುವದರಲ್ಲಿ ಯೂವ ತತ್ವಗಳನ್ನನುಸರಿಸಿರಬೇಕು?

b ಪ್ರೈಮೆರಿಸ್ಕೂಲು 3ನೇ ತರಗತಿಗೆ ಒಂದು ವೇಳಾಪತ್ರವನ್ನು ಕಲ್ಪಿಸಿ? ಇದರಲ್ಲಿ ನಮೂದಿಸಬೇಕಾದ ಇತರ ವಿಷಯಗಳನ್ನು ತಿಳಿಸಿ.

7 a ಒಂದು ಪ್ರೈಮೆರಿಸ್ಕೂಲಿನಲ್ಲಿ 5 ತರಗತಿಗಳಿವೆ, 150 ಹುಡುಗರಿರುತ್ತಾರೆ. ಇದಕ್ಕೆ ಬೇಕಾಗುವ ಕಟ್ಟಡದ ನಮೂನೆಯನ್ನು ಬರೆಯಿರಿ? ಇದರಲ್ಲಿ ದಿಕ್ಕುಗಳನ್ನು ತೋರಿಸಿ?

b ಪ್ರೈಮೆರಿಸ್ಕೂಲಿಗೆ ಬೇಕಾದ ಪಾಠೋಪಕರಣಗಳೇನು?

8 a ಸ್ಕೂಲಿನಲ್ಲಿ ರಿಜಿಸ್ಟ್ರುಗಳನ್ನು ಯಾತಕ್ಕೆ ಇಡಬೇಕು? ಮತ್ತು ಯಾವ ಯಾವ ರಿಜಿಸ್ಟರುಗಳು ಅತ್ಯವಶ್ಯಕಗಳು?

b ಒಂದು ಸ್ಕೂಲಿನ 3ನೇ ತರಗತಿಯಲ್ಲಿ ಏಪ್ರೆಲ್ ತಿಂಗಳ ಆದಿಯಲ್ಲಿ 13 ಹುಡುಗರು ಇರುತ್ತಾರೆ? ಮೊದಲನೇ ತಾ॥ ಸೋಮವಾರ; 8ನೇ ಸೋಮವಾರ ಒಬ್ಬನು ಸೇರುತ್ತಾನೆ; 15ನೇ ಸೋಮವಾರ ಒಬ್ಬನು ಬಿಡುವನು, 22ನೇ ಸೋಮವಾರ ಮತ್ತೊಬ್ಬನು ಸೇರುವನು, 10ನೇ ಬುಧವಾರ ಯುಗಾದಿಹಬ್ಬಕ್ಕಾಗಿ ರಜಾ ಶನಿವಾರ ರಜಾ; ಶನಿವಾರ ಅರ್ಧದಿವಸ, ಒಬ್ಬನು 2ನೇ ತಾ॥ ಮಧ್ಯಾಹ್ನ ಅಯಿಲೆರಜಾ ತೆಗೆದುಕೊಳ್ಳುತ್ತಾನೆ. ಇನ್ನೊಬ್ಬನು 11,12ನೇ ತಾ॥ ಗಳಲ್ಲಿ ಸೈರ್ ತಾಜರು. 26ನೇ ಶುಕ್ರವಾರದಿಂದ 1 ತಿಂಗಳ ಬೇಸಿಗೆರಜಾ ಪ್ರಾರಂಭವಾಗುವದು. ತಿಂಗಳಿನ ಸರಾಸರಿ ಹಾಜರಿ, ಹಾಜರಿ ಸರಾಸರಿ, ಮತ್ತು ಸರಾಸರಿ ರಿಜಿಸ್ಟರು ಸಂಖ್ಯೆಯನ್ನು ಕಂಡುಹಿಡಿಯಿರಿ?

ಗ್ರಂಥವಿಮರ್ಶೆ.

ಮೆ॥ ರಾ॥ ಎಂ. ಬಿ. ರಾಮರಾಯರು ಬರೆದಿರುವ ಚಾರುಶೀಲೆಚರಿತ್ರೆ ಎಂಬ ಗ್ರಂಥವನ್ನು ಆಮೂಲಾಗ್ರವಾಗಿ ಆದರದಿಂದ ಓದಿನೋಡಿದೆವು. ಈ ಗ್ರಂಥವು ಪತಿವ್ರತೆಯರ ಸದ್ವೃತ್ತಿಗಳನ್ನೂ, ಅಚಂಚಲಪತಿಭಕ್ತಿಯನ್ನೂ ಬೋಧಿಸುವದಲ್ಲದೆ ಸಹಜಗುಣಗಳೂ, ಅನುರಾಗವೂ, ಬಾಲ್ಯದಿಂದಭ್ಯಸಿಸಿದ ನಡತೆಗಳೂ, ಎಂದಿಗೂ ವ್ಯತ್ಯಸ್ತಗಳಾಗುವದಿಲ್ಲವೆಂಬಂಶಗಳನ್ನು ವಾಚಕರಿಗೆ ಚೆನ್ನಾಗಿ ಬೋಧಿಸು

ವದು. ಮತ್ತು ಗ್ರಂಥವು ಎಲ್ಲರಿಗೂ ಸುಬೋಧವಾಗುವಂತೆ ಈಗಿನ ವ್ಯವಹಾರದಲ್ಲಿ ರುವ ಲಲಿತಪದಸರಣಿಗಳಿಂದಲೆ ಪದ್ಯಗಳನ್ನೂ ವಾಕ್ಯಗಳನ್ನೂ ಆಡುವವರ ಅನುಕೂ ಲಕ್ಕಾಗಿ ಸಂದರ್ಭಕ್ಕನುಗುಣವಾದ ಕೆಲವು ಹಾಡುಗಳನ್ನೂ ಸೇರಿಸಿ ಮಾಡಿರುವದ ರಿಂದ ವಾಚಕರ ಮನಸ್ಸಿಗೆ ಸಂತೋಷವನ್ನು ಕೊಡದೆ ಇರಲಾರದು. ಆದರೆ ಇಲ್ಲಿ ಕೆಲವು ಕನ್ನಡಶಬ್ದಗಳೂ, ಸಂಸ್ಕೃತಶಬ್ದಗಳೂ ವ್ಯಾಕರಣವಿರುದ್ಧಗಳೆನ್ನು ಪ್ರಯೋಗಜ್ಞಾ ತುರಿಯನ್ನರಿಯದೆ ಶಂಕಿಸಬಹುದು. ಪ್ರಯೋಗಜ್ಞರು ಕೇವಲ ಶಾಸ್ತ್ರವನ್ನೇ ಮು ಖ್ಯವಾಗೆಣಿಸಿ ಕವಿಯನ್ನೂ ವ್ಯವಹಾರವನ್ನೂ ವಿಚಾರಕೂಡದು. ಮತ್ತು ಇಲ್ಲಿ ಅಂಥಾ ಶಬ್ದಗಳು ಸ್ವಲ್ಪವಾಗಿಯೇ ದೊರೆಯುವದರಿಂದ ಶುದ್ಧಾಶುದ್ಧ ಪತ್ರಿಕೆಯಲ್ಲಿ ಸೇರಿಸಿದ ರೂ ಸೇರಿಸಬಹುದು.

ಈ ಗ್ರಂಥಕರ್ತೃಗಳು ಇದಕ್ಕೆ ಚಾರುಶೀಲೆಚರಿತ್ರೆಯೆಂದು ಹೆಸರನ್ನಿಟ್ಟರು ತ್ತಾರೆ ಇದಕ್ಕಿದೇ ಹೆಸರನ್ನಿಡುವದರಲ್ಲಿ ಅಂಥಾ ಪ್ರಬಲಕಾರಣಗಳಾವುವೂ ದೊರೆ ಯುವದಿಲ್ಲ. ಮತ್ತು ನಮ್ಮ ಪ್ರಾಚೀನಮಹಾಕವಿಗಳ ಮತಕ್ಕೆ ವಿರುದ್ಧವಾಗಿರುವು ದು. ಹೇಗೆಂದರೆ—ಯಾವ ಗ್ರಂಥದಲ್ಲಿ ಉಪಕ್ರಮೋಪಸಂಹಾರಗಳಲ್ಲಿ ಯಾರವಿಷಯವು ಮುಖ್ಯವಾಗಿ ಹೇಳಲ್ಪಡುತ್ತದೋ ಆ ಗ್ರಂಥಕ್ಕೆ ಅವರ ಹೆಸರನ್ನು ಇಡಬೇಕು. ಈಗ ಈಗ್ರಂಥದಲ್ಲಿ ಮೊದಲು ಚಾರುಕೀರ್ತಿಯ ಮಗಳಾದ ಚಾರುಶೀಲೆಯ ವಿಷಯವನ್ನು ಪ್ರಾರಂಭಿಸಿ ನಾಲ್ಕನೆಯ ಅಂಕದಲ್ಲಯೇ ಅವಳ ಮರಣವನ್ನು ಹೇಳಿ ಮುಂದೆ ಅವಳ ಮಗಳಾದ ಮದನಮಂಜರಿ, ಸೌಂದರ್ಯರತ್ನಾಕರ ಇವರ ವೃತ್ತಾಂತವನ್ನು ಹೇಳಿ ಮಧ್ಯದಲ್ಲಿ ಚಾರುಶೀಲೆಯ ಪತಿ ಮದನಸುಂದರನ ವಿಷಯವನ್ನು ಸ್ವಲ್ಪ ಸೂಚಿಸಿ ಕೊನೆಗೆ ಸೌಂದರ್ಯರತ್ನಾಕರನ ಸ್ನೇಹಿತಳಾದ ಚಿತ್ರವಲ್ಲರಿಯ ವಿವಾಹವನ್ನು ಹೇಳಿ ಗ್ರಂಥವನ್ನು ಮುಗಿಸಿರುತ್ತಾರೆ. ಯೋಚಿಸಲು ಚಾರುಶೀಲೆಯು, ಮದನಮಂಜರಿಯು ಚಿತ್ರವಲ್ಲರಿಯು ಗುಣದಲ್ಲಿ ಸಮರೆಂದು ತೋರುತ್ತದೆ, ಕಷ್ಟವನ್ನನುಭವಿಸಿದ್ದರಲ್ಲಿ ಚಾ ರುಶೀಲೆ ಮದನಮಂಜರಿಯರಿಬ್ಬರೂ ಸಮರೆಂದು ಹೇಳಿಬೇಕಾಗಿದೆ. ಆದ್ದರಿಂದ ಇದಕ್ಕೆ ಇಬ್ಬರ ಹೆಸರು. ಪ್ರಾಚೀನಸರಣಿಯನ್ನತಿಕ್ರಮಿಸಿದರೆ ಈವಿನಾದವು ತಲೆದೋರುವದು. ಆದಾಗ್ಯೂ ಚಾರುಶೀಲೆಯ ಸಂಬಂಧಿಗಳ ವೃತ್ತಾಂತದಿಂದ ಅವಳ ಸ್ಮರಣೆಯು ಬರು ತ್ತಿದ್ದರಿಂದ ಇದು ದೋಷವೆಲ್ಲವೆಂದು ಸಮಾಧಾನನಾಡಿಕೊಳ್ಳಬೇಕೆಂದು ತೋರುತ್ತೆ.

ಗ್ರಂಥದ ಸಾರಾಂಶ:—ಕಳಿಂಗದೇಶದಲ್ಲಿ ಚಾರುಕೀರ್ತಿಯೆಂಬೊಬ್ಬ ಶ್ರೀಮಂ

ತನಿದ್ದನು. ಅವನಿಗೆ ಚಾರುಶೀಲೆ ಎಂಬೊಬ್ಬಳೇ ಮಗಳು. ಅವಳು ಹುಟ್ಟಿದಾಗಲೇ ತಾಯಿಯನ್ನು ಕಳೆದುಕೊಂಡಿದ್ದರಿಂದಲೂ, ತಂದೆಗೆ ಬೇರೆ ಯಾವಮಕ್ಕಳೂ ಇಲ್ಲದಿದ್ದುದರಿಂದಲೂ, ತಂದೆಯಿಂದಲೇ ಪೋಷಿತಳಾಗಿ ಸಕಲ ವಿದ್ಯೆಗಳನ್ನೂ ಕಲಿತು ಗಂಡುಮಕ್ಕಳಂತೆ ತಂದೆಯನ್ನು ಸಂತೋಷಪಡಿಸುತ್ತಿದ್ದಳು. ಹೀಗೆ ಕೆಲವುಕಾಲದ ಮೇಲೆ ಯೌವ್ವನವು ಬರಲು, ತಂದೆಯು ನೋಡಿ ಇನ್ನು ವಿವಾಹವಿಲ್ಲದೆ ಮಗಳನ್ನು ಈರೀತಿ ಮನೆಯಲ್ಲಿಟ್ಟುಕೊಂಡಿರುವದುಚಿತವಲ್ಲವೆಂದು " ಮೊದಲಿಂದಲೂ ತನ್ನ ಭಾವ ಮೈದುನನಾದ ವಿರೋಚನನಿಗೆ ಮಗಳನ್ನು ಮದುವೆ ಮಾಡಿಕೊಟ್ಟು ತನ್ನ ಆಸ್ತಿಯನ್ನೂ ಅವನಿಗೆ ಕೊಡಬೇಕೆಂದು ಯೋಚಿಸಿ, ಇವರಿಗೆ ಪರಸ್ಪರಾನುರಾಗ ಹುಟ್ಟಲೆಂದು ಅವನನ್ನು ಮನೆಯಲ್ಲೇ ಇಟ್ಟುಕೊಂಡು ಮಗಳಿಗೆ ಆಗಾಗ್ಗೆ ಇವನನ್ನೇ ವರಿಸೆಂದು " ಬೋಧಿಸುತ್ತಲೂ ಇದ್ದನು. ಆದರೂ ಇವಳು ಅವನನ್ನು ಒಪ್ಪದಿರಲು, ತಂದೆಯು ಯತ್ನವಿಲ್ಲದೆ ದೇಶಾಂತರದಿಂದಲೂ ಅನೇಕ ಸುಂದರರ ಭಾವಚಿತ್ರಗಳನ್ನು ತರಿಸಿ ತೋರಿಸಿದರೂ ಅವರಲ್ಲಿ ಯಾರನ್ನೂ ವರಿಸದೆ ನಿರಮನೆಯಲ್ಲಿದ್ದ ಚಾರಣೋರನಾಗಿ ದರಿದ್ರಶಿಖಾಮಣಿಯೆಂದು ಬಿರುದನ್ನು ಹೊಂದಿದ್ದ ಮದನಸುಂದರನನ್ನು ವರಿಸಿದಳು. ತಂದೆಯು ಅತಿ ಖಿನ್ನನಾಗಿ ತನ್ನ ಆಸ್ತಿಯನ್ನೆಲ್ಲಾ ಬಿಟ್ಟು ಅರಣ್ಯಕ್ಕೆ ಹೋದನು. ಆಮೇಲೆ ಚಾರುಶೀಲೆಯು ತನ್ನ ಇಷ್ಟಮಿತ್ರನೊಡನೆ ಕೂಡಿ ಸಂಸಾರ ಸುಖವನ್ನನುಭವಿಸುತ್ತಿರಲು, ಒಂದುದಿನ ನಿಶೆಯಲ್ಲಿ ಮದನಸುಂದರನ ಬಾಲ್ಯಸ್ನೇಹಿತರಾದ ಮೂರುಮಂದಿ ಕಳ್ಳರು ಬಂದು ಸನ್ನೆಮಾಡಿದ್ದನ್ನು ಮದನಸುಂದರನು ತಿಳಿದು ಹೆಂಡತಿಯು ಮಾತನ್ನೂ ಕೇಳದೆ ಉಸಾಯದಿಂದ ಹೊರಗೆಹೋಗಿ ಕಳ್ಳರೊಂದಿಗೆ ಅದೇವೂರಲ್ಲೊಬ್ಬ ಸಾಹುಕಾರನ ಮನೆಗೆ ಕನ್ನವನ್ನಿಕ್ಕಿ ತಾನೊಬ್ಬನೇ ಬಳಗೆ ನುಗ್ಗಿ, ಯಜಮಾನನ ಕೈಗೆ ಸಿಕ್ಕಿ ರಾಜಾಸ್ಥಾನದಿಂದ ೦೪ ವರ್ಷಗಳ ದ್ವೀಪಾಂತರವಾಸರೂಪವಾದ ಶಿಕ್ಷೆಯನ್ನು ಹೊಂದಿದನು.

ಇತ್ತ ಚಾರುಶೀಲೆಯು ಈ ಸಮಾಚಾರವನ್ನು ತಿಳಿದು ದುಃಖಪಟ್ಟು, ಪತಿಯ ಬಂಧಮೋಚನಕ್ಕಾಗಿ ಆಸ್ತಿಯನ್ನೆಲ್ಲಾ ವೆಚ್ಚಮಾಡಿ ಹೋರಾಡಿದರೂ ಪ್ರಯತ್ನವೆಲ್ಲಾ ವ್ಯರ್ಥವಾಗಲು, ಅನ್ನವಸ್ತ್ರಾದಿಗಳಿಲ್ಲದೆ ತಿರಪತಿನ್ನುತ್ತಾ ೩ ವರ್ಷದ ತನ್ನ ಹೆಣ್ಣು ಮಗುವನ್ನು ಸಾಕುವದಕ್ಕೂ ಗತಿಯಿಲ್ಲದೆ, ಮುಂದಾದರೂ ಪತಿ ಮುಖದರ್ಶನವಾದೀತೆಂಬಾಶೆಯಿಂದ ದೇಶಾಂತರದಲ್ಲಾದರೂ ಜೀವಿಸೋಣವೆಂದು ಕಾಲ್ನಡೆಯಲ್ಲಿ ಪ್ರ

ಯಾಣವಾಡುತ್ತ ಒಂದರಣ್ಯದಲ್ಲಿ ಬಹುಬಳಲಿ ಮರದಡಿಯಲ್ಲಿ ಕುಳಿತು ಅಳುತ್ತಿದ್ದಳು.

ಅಲ್ಲಿ ಯಾರೋ ದಾರಿಯಲ್ಲಿ ಹೋಗುತ್ತಿದ್ದ ದಂಪತಿಗಳು ಈಯಳುವಿನ ಶಬ್ದವನ್ನು ಕೇಳಿ ಹತ್ತಿರಕ್ಕೆ ಬಂದು ವಿಚಾರಿಸಿ ಕನಿಕರಪಟ್ಟು ಅವಳಿಗೆ ತಮ್ಮಲ್ಲಿದ್ದ ೫೦೦ ವರಹಗಳನ್ನು ಉಚಿತನಾಗಿ ಕೊಟ್ಟು ಹೋದರು. ಚಾರುಶೀಲೆಯು ಆ ಹಣವನ್ನು ಸ್ವಲ್ಪವೂ ಖರ್ಚುಮಾಡದೆ ಅಲ್ಲಲ್ಲಿ ಬಿಕ್ಷವನ್ನೆತ್ತಿ ಮಗುವನ್ನು ರಕ್ಷಿಸಿ ತಾನು ಕಾಲಕ್ಷೇಪಮಾಡುತ್ತಾ "ವಂಗದೇಶದ ರಾಜನಮಗಳೂ ಇವಳಂತೆ ತಂದೆಯಾಜ್ಞೆಯನ್ನಾದರಿಸದೆಯೂ, ತಾನು ಮನಸ್ಸಿನಲ್ಲಿ ವರಿಸಿದ ಪುರುಷನನ್ನು ಹೇಳದೆಯೂ ಇದ್ದದ್ದರಿಂದ ಅವಳ ತಂದೆಯು ಕೊರಗಿ ಮೃತನಾದನು. ಆದ್ದರಿಂದ ಅವಳು ಯೋಗಿನಿಯಾಗಿ ಆಶ್ರಮದಲ್ಲಿ ವಾಸವಾಡುತ್ತಿರಲು[11] ಅವಳನ್ನು ಕಂಡು ತನ್ನ ವೃತ್ತಾಂತವನ್ನೆಲ್ಲ ಹೇಳಿ ಅವಳಿಂದಲೂ ೫೦೦ ವರಹಗಳನ್ನು ತೆಗೆದುಕೊಂಡು ತನ್ನ ಹೆಣ್ಣುಮಗುವನ್ನು ನಾನು ಬರುವವರೆಗೂ ಸಾಕೆಂದು ಅವಳ ವಶಕ್ಕೆ ಕೊಟ್ಟು, ಹಡಗನ್ನು ಏರಿ ಸಿಂಹಳದ್ವೀಪಕ್ಕೆ ಹೋಗಿ ಕಾರಾಗಾರದ ಅಧ್ಯಕ್ಷನನ್ನು ಕಂಡು ತಮ್ಮೂರಿನ ಬಂದೀಖಾನೆಯಲ್ಲಾದರೂ ತನ್ನ ಪತಿಯನ್ನಿಡಿಸುವಂತೆ ಮಾಡಿಸಬೇಕೆಂದು ಅವನಿಗೆ ತಂದಿದ್ದನ್ನೆಲ್ಲಾ ಲಂಚಗೊಟ್ಟು ಅವನಿಂದಲೂ ವಂಚಿತಳಾಗಿ ೧೪ ವರ್ಷಗಳೂ ಅಲ್ಲೆ ವಾಸವಾಡುತ್ತಿದ್ದು ವಾಯಿದೆಯು ಕಳೆದನಂತರ ಪತಿಬಿಡುಗಡೆಯನ್ನು ಕೇಳಿ ಹುಡುಕುವದಕ್ಕೆ ಅಂಗಡಿ ಬೀದಿಯಲ್ಲಿ ಹೋಗುತ್ತಿರುವಾಗ ತನ್ನ ಪತಿಯು ಸ್ವದೇಶಕ್ಕೆ ಹೋಗಲುವಮಾನವಟ್ಟು ಇಲ್ಲೆ ವ್ಯಾಪಾರದಿಂದ ಜೀವಿಸೋಣವೆಂದು ಸ್ವಲ್ಪ ಬಂಡವಾಳವನ್ನು ಸಂಪಾದಿಸಿ ಚಿಲ್ರೆ ವ್ಯಾಪಾರಮಾಡುತ್ತಿರುವದನ್ನು ಕಂಡು ಅತ್ಯಾನಂದದಿಂದ ಪತಿಯಕಾಲಿಗೆರಗಿದಳು. ಆ ಮದನಸುಂದರನು ಮೊದಲು ಇವಳ ಗುರ್ತುಗೊತ್ತಾಗದೆ ಸ್ವಲ್ಪಹೊತ್ತಿನ ಮೇಲೆ ಇವಳೆ ಚಾರುಶೀಲೆಯೆಂದು ತಿಳಿದು ನನ್ನ ದುರ್ವೃತ್ತಿಗೆ ಇವಳೇನಾದರೂ ಎನ್ನು ವಳೆಂಬ ಭಯದಿಂದ ಅವಳನ್ನು ತಿರಸ್ಕರಿಸಿ ಓಡಿಹೋದನು.

ಚಾರುಶೀಲೆಯು ಪುನಃ ಪತಿಯನ್ನು ಕಾಣದೆ ವ್ಯಸನಾಕ್ರಾಂತಳಾಗಿ ಮಗಳ ಏಳಿಗೆಯನ್ನು ಕೇಳಿ ಅವಳ ಮುಖವನ್ನಾದರೂ ನೋಡಿ ಪ್ರಾಣಬಿಡೋಣವೆಂದು ಮಗಳಿದ್ದೂರಿಗೆ ಬಂದು ತನ್ನ ವೃತ್ತಾಂತವನ್ನೆಲ್ಲ ಅವಳಿಗೆ ತಿಳಿಸಿ ನಿನ್ನ ತಂದೆಯೇನಾದರೂ ಇಲ್ಲಿಗೆ ಬಂದರೆ ಅವನಿಗೆ ನನ್ನ ಸಮಾಚಾರವೆನ್ನು ಹೇಳೆಂದು ಪ್ರಾಣಬಿಟ್ಟಳು.

(ಸಶೇಷ.)

ವಿದ್ಯಾದಾಯಿನಿ

ಭಾಗ ೫.] ಸೆಪ್ಟಂಬರ್ ೧೯೯೭. [ಸಂಚಿಕೆ ೯.

ಎಡಿಟರವರ ನೋಟ್ಸ್

ವಿಕ್ಟೋರಿಯಾ ಮಹಾರಾಜ್ಞೀಯವರು ಇದುವರೆಗೆ ೬೦ ವರ್ಷಕಾಲ ರಾಜ್ಯವನ್ನು ಆಳಿದಾರೆಂಬುದು ಈಚೆಗೆ ನಡೆದ ಜೂಬಿಲಿಮಹೋತ್ಸವದಿಂದ ಎಲ್ಲರಿಗೂ ತಿಳಿದಿದೆ. ಇಂಗ್ಲೆಂಡ್ ದೇಶದಲ್ಲಿ ವಿದ್ಯಾಭ್ಯಾಸವು ಈ ೬೦ ವರ್ಷಗಳಲ್ಲಿ ಎಷ್ಟುಮಟ್ಟಿಗೆ ಅಭಿವೃದ್ಧಿಯಾಗಿದೆಯೆಂದು ಈಗ ನೋಡಿಸುವುದು ಉಚಿತವಾಗದ. ಒಂದು ನಿಮ್ನಪ್ಪವಾದ ವಯಸ್ಸಿನ ಹುಡುಗರೆಲ್ಲ ಯಾವದಾದರೂ ಒಂದು ಸ್ಕೂಲಿನಲಿ ವಿದ್ಯಾಭ್ಯಾಸ ಮಾಡಲೇಬೇಕೆಂದು ಈ ಕಾಲದಲ್ಲಿ ನಿರ್ಣಯವಾಯಿತು. ಈ ನಿಯಮವು ಕ್ರಮವಾಗಿ ನಡೆಯುವುದಕ್ಕಾಗಿ ಬಾಲವಿದ್ಯಾಭ್ಯಾಸಮಾಡುವವರು ಪಾಠಶಾಲೆಗಳಿಗೆ ಫೀಯನ್ನು ಕೊಡುವ ಅವಶ್ಯಕತೆಯನ್ನು ತಪ್ಪಿಸಬೇಕಾಯಿತು. ಈ ಕಾರಣಗಳಿಂದ ಈ ೬೦ ವರ್ಷಗಳಿಗೆ ಹಿಂದೆ ಇದ್ದುದಕ್ಕಿಂತಲೂ ಈಗ ವಿದ್ಯಾಭ್ಯಾಸ ಮಾಡುವ ಬಾಲಕರ ಸಂಖ್ಯೆಯು ಎಳರಷ್ಟು ಹೆಚ್ಚಾಗಿದೆ. ಮಹಾರಾಜ್ಞೀಯವರು ಸಿಂಹಾಸನಕ್ಕೆ ಬಂದಾಗ ವಿದ್ಯಾಭ್ಯಾಸವು ೬೦ ವರ್ಷಗಳಲ್ಲಿ ಇಷ್ಟುಮಟ್ಟಿಗೆ ಅಭಿವೃದ್ಧಿಯಾಗುವುದೆಂದು ಹೇಳಿದ್ದರೆ ಆಗಿನವರು ಯಾರೂ ನಂಬುತಿರುಲಿಲ್ಲವೆಂದು ಹೇಳಬಹುದು. ಆದರೂ ಆ ದೇಶದಜನರು ವಿದ್ಯಾಭ್ಯಾಸದ ಅಭಿವೃದ್ಧಿಗೆ ಸರಿಯಾಗಿ ಪ್ರಯತ್ನಮಾಡಿದುದರಿಂದ ಈ ರೀತಿಯಲ್ಲಿ ಅಭಿವೃದ್ಧಿಯು ಸಿದ್ಧವಾಯಿತು. ನಮ್ಮದೇಶದವರೂ ಇವರಂತೆ ತದಾಯತ್ತಮನಸ್ಕರಾಗಿ ಪ್ರಯತ್ನ ಮಾಡಿದರೆ, ಇನ್ನು ೬೦ ವರ್ಷಗಳಲ್ಲಿ ಇಷ್ಟುಮಟ್ಟಿನ ಅಭಿವೃದ್ಧಿಯಾಗುವುದೆಂದು ಹೇಳುವುದಕ್ಕಾಗದಿದ್ದರೂ ಈಗಿನವರಿಗೆ ಆಶ್ಚರ್ಯವನ್ನುಂಟುಮಾಡುವಷ್ಟು ಅಭಿವೃದ್ಧಿಯಾಗುವುದೆಂಬುದರಲ್ಲಿ ಸಂಶಯವಿಲ್ಲ. ಮನಃಪೂರ್ವಕವಾಗಿ ಕೆಲಸ ಮಾಡುವು

ಯಾಣವಾಡುತ್ತ ಒಂದರಣ್ಯದಲ್ಲಿ ಬಹುಬಳಲಿ ಮರದಡಿಯಲ್ಲಿ ಕುಳಿತು ಅಳುತ್ತಿದ್ದಳು.

ಆಲ್ಲಿ ಯಾರೋ ದಾರಿಯಲ್ಲಿ ಹೋಗುತ್ತಿದ್ದ ದಂಪತಿಗಳು ಈಯಳುವಿನ ಶಬ್ದವನ್ನು ಕೇಳಿ ಹತ್ತಿರಕ್ಕೆ ಬಂದು ವಿಚಾರಿಸಿ ಕನಿಕರಪಟ್ಟು ಅವಳಿಗೆ ತಮ್ಮಲ್ಲಿದ್ದ ೫೦೦ ವರಹಗಳನ್ನು ಉಚಿತನಾಗಿ ಕೊಟ್ಟು ಹೋದರು. ಚಾರುಶೀಲೆಯು ಆ ಹಣವನ್ನು ಸ್ವಲ್ಪವೂ ಖರ್ಚುಮಾಡದೆ ಅಲ್ಲಲ್ಲಿ ಭಿಕ್ಷವನ್ನೆತ್ತಿ ಮಗುವನ್ನು ರಕ್ಷಿಸಿ ತಾನು ಕಾಲಕ್ಷೇಪಮಾಡುತ್ತಾ "ವಂಗದೇಶದ ರಾಜನಮಗಳೂ ಇವಳಂತೆ ತಂದೆಯಾಜ್ಞೆಯನ್ನಾದರಿಸದೆಯೂ, ತಾನು ಮನಸ್ಸಿನಲ್ಲಿ ವರಿಸಿದ ಪುರುಷನನ್ನು ಹೇಳದೆಯೂ ಇದ್ದದ್ದರಿಂದ ಅವಳ ತಂದೆಯು ಕೊರಗಿ ಮೃತನಾದನು ಆದ್ದರಿಂದ ಅವಳು ಯೋಗಿನಿಯಾಗಿ ಆಶ್ರಮದಲ್ಲಿ ವಾಸಮಾಡುತ್ತಿರಲು" ಅವಳನ್ನು ಕಂಡು ತನ್ನ ವೃತ್ತಾಂತವನ್ನೆಲ್ಲ ಹೇಳಿ ಅವಳಿಂದಲೂ ೫೦೦ ವರಹಗಳನ್ನು ತೆಗೆದುಕೊಂಡು ತನ್ನ ಹೆಣ್ಣುಮಗುವನ್ನು ನಾನು ಬರುವವರೆಗೂ ಸಾಕೆಂದು ಅವಳ ವಶಕ್ಕೆ ಕೊಟ್ಟು, ಹಡಗನ್ನು ಏರಿ ಸಿಂಹಳದ್ವೀಪಕ್ಕೆ ಹೋಗಿ ಕಾರಾಗಾರದ ಅಧ್ಯಕ್ಷನನ್ನು ಕಂಡು ತಮ್ಮೂರಿನ ಬಂದೀಖಾನೆಯಲ್ಲಾದರೂ ತನ್ನ ಪತಿಯನ್ನಿಡಿಸುವಂತೆ ಮಾಡಿಸಬೇಕೆಂದು ಅವನಿಗೆ ತಂದಿದ್ದನ್ನೆಲ್ಲಾ ಲಂಚಗೊಟ್ಟು ಅವನಿಂದಲೂ ವಂಚಿತಳಾಗಿ ೧೪ ವರ್ಷಗಳೂ ಅಲ್ಲೆ ವಾಸಮಾಡುತ್ತಿದ್ದು ನಾಯಿದೆಯು ಕಳೆದನಂತರ ಪತಿಯಬಿಡುಗಡೆಯನ್ನು ಕೇಳಿ ಹುಡುಕುವದಕ್ಕೆ ಅಂಗಡಿ ಬೀದಿಯಲ್ಲಿ ಹೋಗುತ್ತಿರುವಾಗ ತನ್ನ ಪತಿಯು ಸ್ವದೇಶಕ್ಕೆ ಹೋಗಲವಮಾನಪಟ್ಟು ಇಲ್ಲಿ ವ್ಯಾಪಾರದಿಂದ ಜೀವಿಸೋಣವೆಂದು ಸ್ವಲ್ಪ ಬಂಡವಾಳವನ್ನು ಸಂಪಾದಿಸಿ ಚಿಲ್ರೆ ವ್ಯಾಪಾರಮಾಡುತ್ತಿರುವದನ್ನು ಕಂಡು ಅತ್ಯಾನಂದದಿಂದ ಪತಿಯಕಾಲಿಗೆರಗಿದಳು. ಆ ಮದನಸುಂದರನು ಮೊದಲು ಇವಳ ಗುರ್ತುಗೊತ್ತಾಗದೆ ಸ್ವಲ್ಪಹೊತ್ತಿನ ಮೇಲೆ ಇವಳೆ ಚಾರುಶೀಲೆಯೆಂದು ತಿಳಿದು ನನ್ನ ದುರ್ವೃತ್ತಿಗೆ ಇವಳೇನಾದರೂ ಎನ್ನು [illegible] ಭಯದಿಂದ ಅವಳನ್ನು ತಿರಸ್ಕರಿಸಿ ಓಡಿಹೋದನು.

ಚಾರುಶೀಲೆಯು ಪುನಃ ಪತಿಯನ್ನು ಕಾಣದೆ ವ್ಯಸನಾಕ್ರಾಂತಳಾಗಿ ಮಗಳ ಏಳಿಗೆಯನ್ನು ಕೇಳಿ ಅವಳ ಮುಖವನ್ನಾದರೂ ನೋಡಿ ಪ್ರಾಣಬಿಡೋಣವೆಂದು ಮಗಳಿದ್ದಲ್ಲಿಗೆ ಬಂದು ತನ್ನ ವೃತ್ತಾಂತವನ್ನೆಲ್ಲ ಅವಳಿಗೆ ತಿಳಿಸಿ ನಿನ್ನ ತಂದೆಯೇನಾದರೂ ಇಲ್ಲಿಗೆ ಬಂದರೆ ಅವನಿಗೆ ನನ್ನ ಸಮಾಚಾರವನ್ನು ಹೇಳೆಂದು ಪ್ರಾಣಬಿಟ್ಟಳು.

(ಸಶೇಷ.)

ವಿದ್ಯಾದಾಯಿನಿ

ಭಾಗ ೫.] ಸೆಪ್ಟಂಬರ್ ೧೯೦೭. [ಸಂಚಿಕೆ ೯.

ಎಡಿಟರವರ ನೋಟ್ಸ್.

ವಿಕ್ಟೋರಿಯಾ ಮಹಾರಾಜ್ಞೀಯವರು ಇದುವರೆಗೆ ೬೦ನೆಯ ವರ್ಷಕಾಲ ರಾಜ್ಯವನ್ನು ಆಳಿದಾರೆಂಬುದು ಈಚೆಗೆ ನಡೆದ ಜೂಬಿಲಿಮಹೋತ್ಸವದಿಂದ ಎಲ್ಲರಿಗೂ ತಿಳಿದಿದೆ. ಇಂಗ್ಲೆಂಡ್ ದೇಶದಲ್ಲಿ ವಿದ್ಯಾಭ್ಯಾಸವು ಈ ೬೦ ವರ್ಷಗಳಲ್ಲಿ ಎಷ್ಟುಮಟ್ಟಿಗೆ ಅಭಿವೃದ್ಧಿಯಾಗಿದೆಯೆಂದು ಈಗ ನೋಡಿಸುವುದು ಉಚಿತವಾಗಿದೆ. ಒಂದು ನಿಮ್ನಪ್ರಮಾಣವಾದ ವಯಸ್ಸಿನ ಹುಡುಗರೆಲ್ಲ ಯಾವದಾದರೂ ಒಂದು ಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡಲೇಬೇಕೆಂದು ಈ ಕಾಲದಲ್ಲಿ ನಿರ್ಣಯವಾಯಿತು. ಈ ನಿಯಮವು ಕ್ಲುಪ್ತವಾಗಿ ನಡೆಯುವುದಕ್ಕಾಗಿ ಬಾಲವಿದ್ಯಾಭ್ಯಾಸಮಾಡುವವರು ಪಾಠಶಾಲೆಗಳಿಗೆ ಫೀಯನ್ನು ಕೊಡುವ ಅವಶ್ಯಕತೆಯನ್ನು ತಪ್ಪಿಸಬೇಕಾಯಿತು. ಈ ಕಾರಣಗಳಿಂದ ಈ ೬೦ ವರ್ಷಗಳಿಗೆ ಹಿಂದೆ ಇದ್ದುದಕ್ಕಿಂತಲೂ ಈಗ ವಿದ್ಯಾಭ್ಯಾಸ ಮಾಡುವ ಬಾಲಕರ ಸಂಖ್ಯೆಯು ಎಳರಷ್ಟು ಹೆಚ್ಚಾಗಿದೆ. ಮಹಾರಾಜ್ಞೀಯವರು ಸಿಂಹಾಸನಕ್ಕೆ ಬಂದಾಗ ವಿದ್ಯಾಭ್ಯಾಸವು ೬೦ ವರ್ಷಗಳಲ್ಲಿ ಇಷ್ಟುಮಟ್ಟಿಗೆ ಅಭಿವೃದ್ಧಿಯಾಗುವುದೆಂದು ಹೇಳಿದ್ದರೆ ಆಗಿನವರು ಯಾರೂ ನಂಬುತಿರುಲಿಲ್ಲವೆಂದು ಹೇಳಬಹುದು. ಆದರೂ ಆ ದೇಶದಜನರು ವಿದ್ಯಾಭ್ಯಾಸದ ಅಭಿವೃದ್ಧಿಗೆ ಸರಿಯಾಗಿ ಪ್ರಯತ್ನಮಾಡಿದುದರಿಂದ ಈ ಅಭಿವೃದ್ಧಿಯು ಸಿದ್ಧವಾಯಿತು ನಮ್ಮದೇಶದವರೂ ಇವರಂತೆ ತದಾಯತ್ತಮನಸ್ಕರಾಗಿ ಪ್ರಯತ್ನ ಮಾಡಿದರೆ ಇನ್ನು ೬೦ ವರ್ಷಗಳಲ್ಲಿ ಇಷ್ಟುಮಟ್ಟಿನ ಅಭಿವೃದ್ಧಿಯಾಗುವುದೆಂದು ಹೇಳುವುದಕ್ಕಾಗದಿದ್ದರೂ ಈಗಿನವರಿಗೆ ಆಶ್ಚರ್ಯವನ್ನುಂಟುಮಾಡುವಷ್ಟು ಅಭಿವೃದ್ಧಿಯಾಗುವುದೆಂಬುದರಲ್ಲಿ ಸಂಶಯವಿಲ್ಲ ಮನಃಪೂರ್ವಕವಾಗಿ ಕೆಲಸ ಮಾಡುವು

ದರಿಂದ ಬಹಳ ಅಲ್ಪಕಾಲದಲ್ಲೆ ವಿಶೇಷ ಪ್ರಯೋಜನವು ಕಾಣಬರುವುದೆಂಬುದಕ್ಕೆ ಇಂಥ ನಿದರ್ಶನಗಳಿಂದ ನಂಬಿ ವಿದ್ಯಾಭ್ಯಾಸ ಕೆಲಸದಲ್ಲಿ ಉದ್ಯುಕ್ತರಾಗಿರುವವರೆಲ್ಲರೂ ಕ್ರಮವಾಗಿ ಕೆಲಸ ಮಾಡಬೇಕೆಂಬುದು ಮುಖ್ಯವಾಗಿ ಇಲ್ಲಿ ತಿಳಿಸಬೇಕಾದುದು.

***

ಈಸಲದ ದೇಶೀಯ ಪರೀಕ್ಷೆಗಳಿಗೆ ಹೋಗುವವರೆಲ್ಲರೂ ಈ ತಿಂಗಳು ಹುಟ್ಟುವುದಕ್ಕೆ ಮುಂಚಿತವಾಗಿಯೇ ತಮ್ಮ ಅಪ್ಲಿಕೇಷನ್‌ಗಳನ್ನು ಕಳುಹಿಸಿರಬೇಕು. ಸಮಯದಲ್ಲಿ ಮುಖ್ಯೋಪಾಧ್ಯಾಯರಲ್ಲಿ ಅನೇಕರಿಗೆ ಬರುವ ತೊಂದರೆಯೊಂದು ರಿಗೂ ತಿಳಿದಿರಬಹುದು. ಪಾಠಶಾಲೆಯು ಪರೀಕ್ಷೆಗಳಿಂದ ಅರ್ಹನಲ್ಲವೆಂದು ತಿಳಿ ಬಂದ ವಿದ್ಯಾರ್ಥಿಯನ್ನು ಪರೀಕ್ಷೆಗೆ ಕಳುಹಿಸಕೂಡದು. ಈ ನಿಯಮವನ್ನನುಸರಿಸುವುದರಲ್ಲಿ ತೊಂದರೆ ಬರುವುದಕ್ಕೆ ಕಾರಣವೂ ಇಲ್ಲ. ಆದರೂ ವಿದ್ಯಾರ್ಥಿಗಳು ಅಥವ ಅವರ ತಂದೆತಾಯಿಗಳು ತಮ್ಮ 'ಪ್ರಾರ್ಥನೆ' ಗಳಿಂದ ಮುಖ್ಯೋಪಾಧ್ಯಾಯರ ತೊಂದರೆಯನ್ನುಂಟುಮಾಡುವರು. ಹುಡುಗರ ಅರ್ಹತೆಯ ವಿಷಯದಲ್ಲಿ ಅವರ ತಂತಾಯಿಗಳಿಗಿಂತಲೂ ಅವರ ಉಪಾಧ್ಯಾಯರಿಗೆ ಹೆಚ್ಚಾಗಿ ಗೊತ್ತಿರುವುದೆಂಬುನಿಸ್ಸಂಶಯವಾಗಿದೆ. ಒಂಬತ್ತು ತಿಂಗಳು ಓದದವರು ಮೂರು ತಿಂಗಳಲ್ಲಿ ಓದಿ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಅಪರೂಪವೆಂಬುದೂ ನಿಶ್ಚಯ. ಈ ಅಂಶಗಳು ಬಹುಕರಿಗೆ ತಿಳಿಯದೆಂದು ಹೇಳಬಹುದು. ಅವರ ತಂದೆತಾಯಿಗಳಿಗೂ ತಿಳಿದಿಲ್ಲವೆಂಬುದು ಆಶ್ಚರ್ಯಕರವಾಗಿದೆ. ಉಪಾಧ್ಯಾಯನ ಉದ್ದೇಶವು ಕ್ರಮವಾಗಿ ನೆರವೇರಬೇಕಾದರೆ ವಿದ್ಯಾರ್ಥಿಗಳ ತಂದೆತಾಯಿಗಳ ಸಾಹಾಯ್ಯ ಅವಶ್ಯಕವೆಂಬುದಕ್ಕೆ ಇದು ಒಂದು ದೃಷ್ಟಾಂತ.

ವಸ್ತುಪಾಠ.

ವಸ್ತುಪಾಠವೆಂದರೆ ವಸ್ತುಗಳನ್ನು ತೋರಿಸಿ ಅವುಗಳ ವಿಷಯವಾಗಿ ಪಾಠ ಹೇಳುವುದು. ವಸ್ತುಗಳನ್ನು ತೋರಿಸುವುದಕ್ಕಾಗದ ಸಂದರ್ಭಗಳಲ್ಲಿ ಆ ವಸ್ತುಗಳ ಮೊದಲಿಗಳನ್ನಾಗಲೀ ಅಥವಾ ಪಠಗಳನ್ನಾಗಲಿ ತೋರಿಸಿ ಪಾಠ ಹೇಳಬಹುದು.

ವಿ ಚಿಕ್ಕ ತರಗತಿಗಳಲ್ಲಿ ವಸ್ತುಗಳನ್ನೇ ತೋರಿಸಬೇಕಾದುದು ಅವಶ್ಯಕ. ಹೀಗೆ
ಸ್ಥೂಲವಸ್ತುಗಳನ್ನು ತೋರಿಸುವುದರಿಂದ ಬಾಲಕರಲ್ಲಿ ಒಂದುವಿಧವಾದ ಕೌತುಕವು
ಗುವುದು. ಇದರಿಂದ ಪಾಠದಲ್ಲಿ ಅವರಿಗೆ ಆದರ ಹುಟ್ಟುವುದು. ಬರುತ್ತ ಬರು
ಂದರೆ ದೊಡ್ಡ ತರಗತಿಗಳಲ್ಲಿ ಸ್ಥೂಲವಸ್ತುಗಳಿಗೆ ಬದಲಾಗಿ ವಸ್ತುಗಳ ಮಾದರಿಗಳ
ನ್ನು, ಪಠಗಳನ್ನೂ ಉಪಯೋಗಿಸುತ್ತ ಬರಬೇಕು. ಕೊನೆಯಲ್ಲಿ ಉಪಾಧ್ಯಾಯನು
ಲಿಗೆಯ ಮೇಲೆ ಬರೆದ ಚಿತ್ರವೇ ಸಾಕಾಗುವಂತಾಗುವುದು.

ವಸ್ತುಪಾಠದಿಂದ ಬಾಲಕರಿಗೆ ನಾಲ್ಕುವಿಧವಾದ ಪ್ರಯೋಜನವುಂಟು—

೧ ಪದಾರ್ಥಸ್ವರೂಪವು ಹುಡುಗರಿಗೆ ತಿಳಿಯುವುದರಿಂದ ಅವರಿಗೆ ವಿಷಯಜ್ಞಾ
ವುಂಟಾಗುವುದು.

೨ ತಾವಾಗಿ ಪರೀಕ್ಷಿಸಿ ಪದಾರ್ಥಸ್ವರೂಪವನ್ನು ಕಂಡುಹಿಡಿಯುವುದರಿಂದ ಬಾ
ಕರ ಅವಧಾನಶಕ್ತಿ, ಊಹಾಶಕ್ತಿ, ಮುಂತಾದ ಬುದ್ಧಿಶಕ್ತಿಗಳು ಅಭಿವೃದ್ಧಿಯಾ
ವುದು.

೩ ಪದಾರ್ಥಗಳ ಗುಣಗಳನ್ನು ತಿಳಿಯಪಡಿಸುವುದಕ್ಕೆ ತಕ್ಕ ಮಾತುಗಳು ಬೇಕಾ
ದರಿಂದ ಬಾಲಕರಿಗೆ ಭಾಷೆಯು ಸ್ವಲ್ಪಮಟ್ಟಿಗೆ ಬರುವುದು.

೪ ವಿಧವಿಧವಾದ ವಸ್ತುಗಳ ವಿಷಯವಾಗಿ ಪಾಠ ಹೇಳುವುದರಿಂದ ಬಾಲಕರಿಗೆ
ಮುಂದೆ ತಮ್ಮ ವಿದ್ಯಾಭ್ಯಾಸಕ್ಕೆ ಬೇಕಾದ ಅಂಶಗಳಲ್ಲಿ ಕೆಲವು ಸ್ವಲ್ಪಮಟ್ಟಿಗೆ ತಿಳಿ
ಂತಾಗುವುದು.

ತಮ್ಮಷ್ಟಿಗೆ ತಾವೆ ಆಟವಾಡುತಿರುವ ಮಕ್ಕಳು ಆಟದ ಸಾಮಾನುಗಳನ್ನು
ರೀಕ್ಷಿಸುವುದು ಎಲ್ಲರಿಗೂ ತಿಳಿದಿರಬಹುದು. ಸ್ವಾಭಾವಿಕನಾಗಿ ಮಕ್ಕಳು ಪದಾ
ರ್ಥಗಳ ಸ್ವರೂಪವನ್ನು ಈ ಮಾರ್ಗವಾಗಿಯೇ ಸ್ವಲ್ಪಮಟ್ಟಿಗೆ ತಾವಾಗಿ ತಿಳಿದುಕೊ
ಳ್ಳುವರು. ಸ್ಥೂಲವಸ್ತುಗಳ ಮೂಲಕ ಸೂಕ್ಷ್ಮವಸ್ತುಗಳನ್ನು ತಿಳಿಸಬೇಕೆಂಬ ವಿದ್ಯಾ
ಭ್ಯಾಸಕ್ರಮದ ಸಾಧಾರಣ ನಿಯಮವು ಈ ಸ್ವಭಾವಕ್ಕನುಗುಣವಾದುದು. ವಸ್ತು
ಪಾಠವನ್ನು ಆದಿಯಲ್ಲಿ ಏರ್ಪಡಿಸಿದವರೂ ಈ ಸ್ವಭಾವವನ್ನು ನೋಡಿಯೇ ಮಾ
ಡಿರುವರು.

ಸುಲಭವಾಗಿ ಮಾತಾಡುವದನ್ನು ತಿಳಿದುಕೊಳ್ಳುವುದೂ ತಾವೇ ಮಾತಾಡ
ುವುದೂ ಮಕ್ಕಳಿಗೆ ಬಂದೊಡನೆಯೇ ವಸ್ತುಪಾಠವನ್ನಾರಂಭಿಸಬೇಕು. ಕಿಂಡರ್‌ಗಾರ್ಟ

ಲ್ಲಿ ಉಪಯೋಗಿಸುವ ಪದಾರ್ಥಗಳ ಆಕೃತಿ ಬಣ್ಣ ಮುಂತಾದ ವಿಷಯಗಳನ್ನು ತಿಳಿ
ಯುವುದೇ ವಸ್ತುಪಾಠದ ಮೊದಲೆಂದು ಹೇಳಬಹುದು. ಅನಂತರದಲ್ಲಿ ಕ್ರಮವಾಗಿ
ಸ್ತುಪಾಠಗಳನ್ನು ಹೇಳುತ್ತಬರಬೇಕು. ಹುಡುಗರು ಭೌತಿಕಶಾಸ್ತ್ರ, ಪ್ರಾಣಿ
ಶಾಸ್ತ್ರ, ಮುಂತಾದ ಶಾಸ್ತ್ರಗಳನ್ನು ಓದುವುದಕ್ಕಾರಂಭಿಸುವವರೆಗೂ ವಸ್ತುಪಾಠ
ಗಳನ್ನು ಬೋಧಿಸುತ್ತಿರಬೇಕು.

ವಸ್ತುಪಾಠಕ್ಕೆ ತಕ್ಕ ಪದಾರ್ಥಗಳು :—

೧ ಮನೆಯಲ್ಲಿ ಅಥವಾ ಪಾಠಶಾಲೆಯಲ್ಲಿರುವಂಥ ಬಾಲಕರಿಗೆ ಬಳಕೆಯಲ್ಲಿರುವ
ವಸ್ತುಗಳು,

೨ ಸಾಮಾನ್ಯಜೀವರಾಶಿಗಳು, ಅವುಗಳಿಂದುಂಟಾಗುವ ಹಾಲು, ಮೊಸರು
ಉಣ್ಣೆ, ತುಪ್ಪುಟ, ಮುಂತಾದವುಗಳು.

೩ ನಾಡಿಕೆಯಲ್ಲಿರುವ ಪಶ್ಯಾದಿಗಳು, ಪಕ್ಷಿಗಳು.

೪ ಬಳಕೆಯಲ್ಲಿರುವ ಲೋಹಗಳು.

೫ ಮಳೆ, ಹಿಮ, ಮುಂತಾದ ವಿಷಯಗಳು.

೬ ಮನುಷ್ಯನ ದೇಹದಲ್ಲಿರುವ ಅವಯವಗಳು

ಇವುಗಳಲ್ಲಿ ಮೊದಲು ಬಾಲಕರಿಗೆ ಬಳಕೆಯಲ್ಲಿರುವ ಮತ್ತು ಸುಲಭವಾದ ವಸ್ತು
ಗಳನ್ನು ತೆಗೆದುಕೊಂಡು ಬೋಧಿಸಬೇಕು. ಅನಂತರದಲ್ಲಿ ಕ್ರಮವಾಗಿ ಇತರ ವಸ್ತು
ಗಳನ್ನು ಕೊಡಬೇಕು.

ವಸ್ತುಪಾಠವನ್ನು ಬೋಧಿಸತಕ್ಕ ಕ್ರಮ—

೧ ಬಾಲಕರಿಗೆ ಬೋಧಿಸಬೇಕಾದ ವಿಷಯವನ್ನು ಕುರಿತು ಉಪಾಧ್ಯಾಯನು
ಚೆನ್ನಾಗಿ ಯೋಚಿಸಿ ಬೇಕಾದ ಉಪಕರಣಗಳನ್ನು ಸಿದ್ಧಪಡಿಸಿಕೊಳ್ಳಬೇಕು.

೨ ವಸ್ತುವನ್ನು ಬಾಲಕರಿಗೆ ತೋರಿಸಿ ಅವರಿಗೆ ತೋರುವ ಅಂಶಗಳನ್ನು ಪ್ರಶ್ನೆ
ಮೂಡಿ ಹೇಳಿಸಬೇಕು.

೩ ಅವರಿಗೆ ತೋರದಿರುವ ಅಂಶಗಳು ತೋರುವಂತೆ ಪ್ರಶ್ನೆ ಮೂಡಬೇಕು.

೪ ಇವುಗಳಲ್ಲಿ ಅವತ್ತಿನ ಪಾಠಕ್ಕೆ ಉಪಯೋಗಿಸುವ ಅಂಶಗಳನ್ನು ಅವೃತ್ತಿ
ಮೂಡಿಸಿ ಹುಡುಗರಿಗೆ ಮಂದಟ್ಟಾಗುವಂತೆ ಮೂಡಬೇಕು.

೫ ಹೇಳತಕ್ಕ ಅಂಶಗಳೇನಾದರೂ ಇದ್ದರೆ ಅವುಗಳನ್ನು ಅನಂತರದಲ್ಲಿ ತಿಳಿಸುವುದ

೬ ಪುನರಾವರ್ತನೆ ಮಾಡುವುದು.

ಬಹಳ ಅಂಶಗಳನ್ನು ಬೋಧಿಸಲು ಪ್ರಯತ್ನಪಡಬಾರದು. ಓದುವುದಕ್ಕೆ ಬರುವ ಹುಡುಗರ ತರಗತಿಗಳಲ್ಲಿ ಕಪ್ಪುಹಲಿಗೆಯ ಮೇಲೆ ಮುಖ್ಯಾಂಶಗಳನ್ನು ಬರೆಯಬೇಕು. ವಸ್ತುಪಾಠದಲ್ಲಿ ಪರೀಕ್ಷಣಶಕ್ತಿಯನ್ನು ಮುಖ್ಯವಾಗಿ ಅಭಿವೃದ್ಧಿಪಡಿಸಬೇಕಾದುದರಿಂದ ಉಪಾಧ್ಯಾಯನು ತಾನಾಗಿ ವಿಷಯಗಳನ್ನೆಲ್ಲಾ ಬಾಲಕರಿಗೆ ಹೇಳಿಕೊಡಬಾರದು. ಪ್ರಶ್ನೆಗಳ ಸಹಾಯದಿಂದ ಪದಾರ್ಥದ ಗುಣಗಳನ್ನು ತಾವೇ ಕಂಡು ಹಿಡಿಯುವಂತೆ ಮಾಡಬೇಕು. ಪ್ರತಿಯೊಂದಂಶವನ್ನೂ ಹೀಗೆ ಹುಡುಗರಿಂದ ಹೇಳಿಸುವುದಕ್ಕಾಗುವುದಿಲ್ಲವಾದುದರಿಂದ ಉಪಾಧ್ಯಾಯನು ಇವುಗಳಲ್ಲಿ ಕೆಲವನ್ನು ಹೇಳಿಕೊಡಬೇಕಾಗುವುದು. ಆದರೆ ಹೀಗೆ ಹೇಳಿಕೊಡುವ ಅಂಶಗಳು ಕೂಡಿದಷ್ಟು ಬೇಗೂ ಕಡಮೆಯಾಗುವಂತೆ ನೋಡಿಕೊಳ್ಳಬೇಕು.

ಹಾರುವದು ಮತ್ತು ಈಜುವದು.

ರಾಮನು ಆಕಾಶದಲ್ಲಿ ಹಾರಾಡುತ್ತಿದ್ದ ಕೆಲವು ಕಪೋತಪಕ್ಷಿಗಳನ್ನು ನೋಡಿ "ನನಗೂ ಹಾರುವದಕ್ಕೆ ಬರಬಾರದೇ! ಅಷ್ಟು ಮೇಲಕ್ಕೆ ಹೋಗಿ ಅಂತರಿಕ್ಷದಲ್ಲಿ ಅಷ್ಟು ವೇಗದಿಂದ ಹೋದರೆ ಎಷ್ಟು ಚೆನ್ನಾಗಿರುತ್ತೆಯೋ!" ಎಂದು ಅಂದುಕೊಂಡನು.

ಈ ಮಾತನ್ನು ಕೇಳಿದ ಅವನ ತಂದೆಯು, "ಕಪೋತಗಳಿಗೆ ಹಾರುವದರಿಂದ ಆನಂದವೇನೋ ಆಗುತ್ತೆ; ಆದರೆ ನಾವು ಬೇರೆ ವಿಧಗಳಿಂದ ಆನಂದವನ್ನು ಪಡೆಯಬಹುದು. ನಮ್ಮ ಕೈವಿಂರಿದ ವಿಷಯಗಳನ್ನು ಕಾಮಿಸುವುದರಿಂದ ಫಲವಿಲ್ಲ," ಎಂದು ಹೇಳಿದನು.

ರಾಮು—ಆದರೆ, ಮನುಷ್ಯರು ಹಾರುವದನ್ನು ಎಂದಿಗೂ ಕಲಿತುಕೊಳ್ಳಲಾರರೆ?

ತಂದೆ—ಕಲಿತುಕೊಳ್ಳಲಾರರೆಂದು ನಾನು ತಿಳಿಯುತ್ತೇನೆ; ಯಾತಕ್ಕೆಂದರೆ ಹಾರುವದಕ್ಕೆ ಸಹಕಾರಿಯೂದ ಕರಣಗಳನ್ನು ಮನುಷ್ಯರಿಗೆ ದೇವರು ಕೊಟ್ಟಿಲ್ಲ.

ರಾಮು—ಹಾಗಾದರೆ ಕೃತಕವಾದ ರೆಕ್ಕೆಗಳನ್ನು ಮಾಡಿಕೊಳ್ಳಬಾರದೆ?

ರಾಮು--ಹೌದು.

ತಂದೆ—ಹಾಗಾದರೆ, ನಿನಗೂ ಅವನಿಗೂ ಉಂಟಾಗಿರುವ ವ್ಯತ್ಯಾಸವನ್ನು ತಿಳಿದುಕೊ, ದೋಣಿಯಲ್ಲಿ ಕುಳಿತು ನದೀ ದಾಟುತ್ತಿರುವಾಗ ಆಳವಾದ ಪ್ರದೇಶದಲ್ಲಿ ಕಾರಣಾಂತರದಿಂದ ದೋಣಿಯು ಮಗಚಿಕೊಳ್ಳುತ್ತೆಂದು ಭಾವಿಸೋಣ. ಆಗ ನೀನು ಕಬ್ಬಿಣದ ಗುಂಡಿನಂತೆ ನೀರಿನಲ್ಲಿ ಮುಳುಗಿ ಮೇಲಕ್ಕೆ ಏಳುವ ಸಂಭವವೇ ಇಲ್ಲದೆ ಪ್ರಾಣವನ್ನು ಕಳೆದುಕೊಳ್ಳುತ್ತೀಯೆ, ಕೃಷ್ಣನಾದರೋ, ಬೆಂಡಿನಂತೆ ಮೇಲಕ್ಕೆದ್ದು ನಿರಾಯಾಸವಾಗಿ ಈಜಿಕೊಂಡು ದಡವನ್ನು ಸೇರುವನು. ನಿಮ್ಮ ಇಬ್ಬರನ್ನು ಮದಿಸಿದ ಗೂಳಿಯೊಂದು ಅಟ್ಟಿಸಿಕೊಂಡು ಬರುತ್ತೆಂದು ಇಟ್ಟುಕೊಳ್ಳೋಣ; ಹಪ್ಪಿಸಿಕೊಂಡು ಓಡಿಹೋಗುವಾಗ ಮುಂದೆ ಒಂದು ನದಿ ಸಿಕ್ಕುತ್ತೆ. ಕೃಷ್ಣನು ಧೈರ್ಯವಾಗಿ ನದಿಯಲ್ಲಿ ಧುಮುಕಿ ಈಜಿಕೊಂಡು ಆಚೆ ದಡವನ್ನು ಸೇರುತ್ತಾನೆ. ನೀನು ಧುಮುಕಿದರೆ ಮುಳುಗಿಹೋಗುತ್ತೀಯೆ; ಧುಮುಕದಿದ್ದರೆ ಗೂಳಿಯು ಎತ್ತಿಹಾಕುತ್ತೆ. ಇಂಥಾ ಇಕ್ಕಟ್ಟಿನಲ್ಲಿ ಈಜುಬರುವದರಿಂದ ಕೃಷ್ಣನಿಗೆ ಎಷ್ಟು ಅನುಕೂಲವಾಯಿತು. ಅವನಿಗಿರುವಂತೆ ನಿನಗೂ ಅವಯವಗಳಿವೆ. ಈ ವ್ಯತ್ಯಾಸ ಹ್ಯಾಗೆ ಉಂಟಾಯಿತು? ಹೇಳು.

ರಾಮು—ಅವನಿಗೆ ಈಜನ್ನು ಕಲಿಸಿದಿಲ್ಲ, ನನಗೆ ಕಲಿಸಿಲ್ಲ.

ತಂದೆ—ನಿಜ. ಇದು ಹುಡುಗರು ಸ್ನಾನಮಾಡುವಾಗ ತಾವೇ ಒಬ್ಬರಿಗೊಬ್ಬರು ಹೇಳಿಕೊಡಬಹುದಾದ ವಿದ್ಯೆಯಾಗಿದೆ. ಆದರೂ ಇಷ್ಟು ಉಪಯುಕ್ತವಾದ ಮತ್ತು ಹಿತವಾದ ಸಾಧಕವನ್ನು ಏಕೆ ತಿರಸ್ಕಾರಮಾಡುತ್ತಾರೆಯೋ ನನಗೆ ಆಶ್ಚರ್ಯವಾಗಿದೆ. ರೋಮ್ಯ ಜನರಲ್ಲಿ ವಜ್ರಶುಂಠನೆಂದು ಹೇಳಬೇಕಾದರೆ 'ಅವನಿಗೆ ಓದುವುದಕ್ಕೆ ಬರುವದಿಲ್ಲ. ಈಜುವದಕ್ಕೆಕೂಡ ಬರುವದಿಲ್ಲ,' ಎಂದು ಗಾದೆ ಹೇಳುತ್ತಿದ್ದರು. ಪ್ರಸಿದ್ಧನಾದ ಸೀಜರನು ಎಲಕ್ಜಾಂಡ್ರಿಯ ಪಟ್ಟಣದ ಬಳಿ ಸಮುದ್ರದಲ್ಲಿ ಧುಮುಕಿ ಒಂದು ಕೈಯಲ್ಲಿ ತನ್ನ ವ್ಯಾಖ್ಯಾನ ಪುಸ್ತಕವನ್ನು ಹಿಡಿದುಕೊಂಡು ಮತ್ತೊಂದುಕೈಯಿಂದ ಈಜಿಕೊಂಡು ಹೋದ್ದರಿಂದ ಪ್ರಾಣವುಳಿಸಿಕೊಂಡನೆಂಬ ಸಂಗತಿಯನ್ನು ನೀನು ಕೇಳಿರಬಹುದು.

ರಾಮು—ಈಜಬೇಕೆಂದು ನನಗೆ ಬಹುಕುತೂಹಲವಿದೆ, ಮತ್ತು ಅನೇಕವೇಳೆ ಪ್ರಯತ್ನಮಾಡಿದೇನೆ, ಆದರೆ ನೀರಿನೊಳಗೆ ತಲೆ ಮುಳುಗುವದ್ದರಿಂದ ಹೆದರಿ ಬಿಟ್ಟಿದೇನೆ.

ತಂದೆ—ಹಾಗಾದರೆ ನೀನು ಈಜು ಕಲಿತುಕೊಳ್ಳದೇ ಇರುವದು ಅಂಜಿಕೆಯಿಂ

ರಾಮು—ಇತರ ಪ್ರಾಣಿಗಳಂತೆ ಮನುಷ್ಯನಿಗೆ ಈಜುವುದು ಸಹಜವಾಗಿದೆಯೆ ಅನ್ನುಗಳ ಮರಿಗಳಿಲ್ಲ ನೀರಿಗೆ ಬಿದ್ದೊಡನೆಯೇ ಈಜುತ್ತವೆಂದು ಕೇಳಿದ್ದೇನೆ.

ತಂದೆ—ಹೌದು ; ಅವುಗಳಿಗೆ ಅಂಜಿಕೆಯಿಲ್ಲ. ನೀರು ತಣ್ಣಗಿರುವದರಿಂದ ಕೆ ವುಕಡೆ ಹುಡುಗರು ನೀರಿನಲ್ಲಿಳಿಯುವದಕ್ಕೆ ಹಿಂದೆಗೆದು ಈಜುವದನ್ನು ಕಲಿಯದಿಹೋ ಗುತ್ತಾರೆ. ಆದರೆ ಉಷ್ಣಪ್ರದೇಶಗಳಲ್ಲಿ ತಣ್ಣೀರ ಸ್ನಾನವು ಹಿತವಾಗಿರುತ್ತೆ. ಇಂಥ ಕಡೆಗಳಲ್ಲಿ ಸಣ್ಣ ಹುಡುಗರು ಚಿಕ್ಕಂದಿನಲ್ಲಿಯೇ ನೀರಿನಲ್ಲಿ ಧೈರ್ಯದಿಂದಿಳಿದು ಈಜು ದರಿಂದ ಅವರಿಗೆ ಈಜುವುದು ಸ್ವಭಾವದಂತೆ ಕಾಣುತ್ತೆ.

ರಾಮು—ನಾನು ಹ್ಯಾಗಾದರೂಮಾಡಿ ಕಲಿಯಬೇಕು ; ಕೃಷ್ಣನಸಂಗಡ ನದಿ ಹೋಗಿ ಅಭ್ಯಾಸ ಮಾಡುತ್ತೇನೆ.

ತಂದೆ--ಆದರೆ ಸರಿಯೂದ ಸ್ಥಳ ನೋಡಿ ಪ್ರಾರಂಭಿಸು. ಹರಿಯಂತೆ ಅ ಧಿಕ ಜಾಗರೂಕತೆಯು ಉಪಯೋಗವಿಲ್ಲ.

ರಾಮು--ಅವನು ಏನು ಮಾಡಿದ ?

ತಂದೆ--ಒಂದು ದೊಡ್ಡದಾದ ಮೇಜಿನಮೇಲೆ ಮುಕಾಡೆಯೂಗಿ ಮಲಗಿಕೊಂ ಮುಂದೆ ಒಂದು ಅರಕನೆಚಿಟ್ಟಯಲ್ಲಿ ನೀರು ತುಂಬಿ ಅದರೊಳಗೆ ಒಂದು ಕಪ್ಪೆ ಬಿಟ್ ಆ ಕಪ್ಪೆಯು ಕಾಲುಗಳನ್ನು ಅಡಿಸುವುದು ನೋಡಿಕೊಂಡು ಅದೇಪ್ರಕಾರ ತನ್ನ ಕಾಲುಗಳನ್ನು ಅಲ್ಲಾಡಿಸುತ್ತಿದ್ದ.

ರಾಮು--ಹೀಗೆಮಾಡಿ ಕಲಿತುಕೊಂಡನೋ ?

ತಂದೆ--ಒಣಗಿದ ನೆಲದಮೇಲೆ ಈಜುವುದಕ್ಕೆ ಕಲಿತುಕೊಂಡ, ಆದರೆ ನೀರಿನ ಳಿಯುವದಕ್ಕೆ ಮಾತ್ರ ಹೆದರಿಕೊಳ್ಳುತ್ತಿದ್ದ.

ರಾಮು--ಹಾಗಾದರೆ ಬೆಂಡು ಕಟ್ಟಕೊಂಡು ಈಜಲಿ, ಅಥವಾ ಬುರುಡೆ ಕ ಕೊಂಡು ಈಜಲಿ.

ತಂದೆ--ಎರಡೂಬೇಡ. ನಿನ್ನ ಸ್ವಶಕ್ತಿಯಿಂದಲೇ ಈಜುವುದು ಕಲಿತುಕೊ ಹೀಗೆ ಮಾಡುವುದರಿಂದ ಇತರವಿಷಯದಲ್ಲಿಯೂ ಪ್ರಯೋಜನವಾಗುತ್ತೆ. ಬೆ ನ್ನಾಗಲೀ ಬುರುಡೆಯನ್ನಾಗಲೀ ಕಟ್ಟಿಕೊಂಡು ಈಜುವುದು ಬರದಿದ್ದ ಅರ್ಥವನ ನೋಡಿಕೊಂಡು ಅರ್ಥವನ್ನು ಹೇಳಿದಂತೆ ಆಗುವುದು. ಮೊದಲು ಸ್ವಲ್ಪ ಸುಲ ವಾಗಿ ಕಾಣುವುದು, ಆದರೆ ಸಂಶಕ್ತಿಯನ್ನೇ ನಂಬಿ ಕಲಿತದ್ದು ಪ್ರಯೋಜನವಿರುವದ

ಮೆ॥ ಜೆ. ವ್ಯಾಟ್‌ಸಾಮಿರ್ಡ ಪ್ರೋಪ್‌ರವರು.

ಲೋಕದಲ್ಲಿ ಎರಡು ವಿಧವಾದ ಕತ್ತಲೆಗಳುಂಟು. ಚರ್ಮಚಕ್ಷುಸ್ಸಿಗೆ ವಿಷಯವಾದ ಕತ್ತಲೆಯೊಂದು; ಜ್ಞಾನಚಕ್ಷುಸ್ಸಿಗೆ ವಿಷಯವಾದ ಕತ್ತಲೆಯೊಂದು. ಚರ್ಮಚಕ್ಷುಸ್ಸಿನ ಕತ್ತಲೆಯನ್ನು ಸೂರ್ಯನ ಪ್ರಕಾಶವು ಹೋಗಲಾಡಿಸುವುದು. ಜ್ಞಾನಚಕ್ಷುಸ್ಸಿನ ಕತ್ತಲೆಯನ್ನು ಸರ್ವತೋಮುಖವಾಗಿ ಪ್ರಸರಿಸುವ ದುರಭಿಮಾನದಿಂದ ಪ್ರಕಾಶವಿಷ್ಟವಾಗದೆ ಇರತಕ್ಕ ವಿದ್ಯಾಸಾಚಾರ್ಯವು ಹೋಗಲಾಡಿಸುವುದು. ಮನಸ್ಸಿಗೆ ವಿಷಯವಾದ ಅಂಧಕಾರವನ್ನು ಹೋಗಲಾಡಿಸುವುದರಲ್ಲಿ ಬದ್ಧಕಂಕಣರಾಗಿ ಅನೇಕ ಮಹನೀಯರು ಅತ್ಯಂತ ಶ್ರದ್ಧೆಯಿಂದ ವಿದ್ಯೆಯ ಬೆಳಕನ್ನು ದಿಗಂತವ್ಯಾಪ್ತವಾಗುವಂತೆ ಮಾಡುತ್ತಲಿದಾರೆ. ಅಂಥಾವರಲ್ಲಿ ಬರ್ಮಾದೇಶದ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರಾದ ಮೆ॥ ಜೆ. ವ್ಯಾಟ್‌ಸಾಮಿರ್ಡ ಪ್ರೋಪ್‌ರವರು ಒಬ್ಬರಾಗಿರುತ್ತಾರೆ. ಇವರು 1850ನೇ ಇಸವಿ ಜನವರಿ 3ನೇ ತಾರೀಕಿನಲ್ಲಿ ವಿಲಾಯತಿಯಲ್ಲಿರತಕ್ಕ ಪ್ಲಿಮತ್ತೆಂಬ ಪಟ್ಟಣದಲ್ಲಿ ಜನಿಸಿದರು. ಇವರ ತಂದೆಗಳು ಡಾಕ್ಟರ್ ಚಿ. ಯು. ಪ್ರೋಪ್‌ರವರು. ಇವರು ಕ್ರಿಸ್ತಮತ ಪ್ರಚಾರಕರಾಗಿಯೂ ವಿದ್ಯಾಭ್ಯಾಸ ಮಾಡಿಸತಕ್ಕವರಾಗಿಯೂ ಬಹಳ ಹೆಸರುವಾಸಿಯನ್ನು ಪಡೆದ ತಮಿಳುಭಾಷೆಯ ವೈಯಾಕರಣರಾಗಿಯೂ ಈ ದಕ್ಷಿಣದೇಶದಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದರು. ಇವರು ಉದಕಮಂಡಲದಲ್ಲಿ ಸ್ಥಾಪಿಸಿದ್ದ ಪಾಠಶಾಲೆಯಲ್ಲಿ ವ್ಯಾಟ್‌ಸಾಮಿರ್ಡ ಪ್ರೋಪ್‌ರವರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದರು. ಈ ಪಾಠಶಾಲೆಯು ದಕ್ಷಿಣ ಇಂಡಿಯಾದಲ್ಲೆಲ್ಲಾ ಬಹಳ ಪ್ರಸಿದ್ಧಿಯನ್ನು ಹೊಂದಿತ್ತು. ಪ್ರಾಯಿಕವಾಗಿ ಯೂರೋಪಿಯರ್ಯರು ಇಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಪಾಂಡಿತ್ಯವನ್ನು ಪಡೆದು ದೊಡ್ಡ ದೊಡ್ಡ ಅಧಿಕಾರಗಳಿಗೆ ನಿಯಮಿಸಲ್ಪಡುತ್ತಿದ್ದರು. ಮೆ॥ ಪ್ರೋಪ್‌ರವರು ಈ ಪಾಠಶಾಲೆಯಲ್ಲಿ ಬಹಳ ಶ್ರಮಪಟ್ಟು ವಿದ್ಯಾಭ್ಯಾಸವನ್ನು ಮಾಡಿ ಇಂಗ್ಲಿಷ್ ಕಾವ್ಯಗಳನ್ನು ಅಲಂಕಾರಾಂತವಾಗಿ ಅಭ್ಯಾಸಮಾಡಿದರು. 1861ನೇ ಇಸವಿಯಲ್ಲಿ ಇವರು ಮದರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು 1863 ರಲ್ಲಿ ಎಫ್. ಎ. ಪರೀಕ್ಷೆಯನ್ನೂ ಕೊಟ್ಟರು. ಡಿಗ್ರಿ ಪರೀಕ್ಷೆಯನ್ನು ಕೊಡುವದಕ್ಕೋಸ್ಕರ ಇವರು ವಿಲಾ

ಯಿತಿಗೆ ಕಳುಹಿಸಲ್ಪಟ್ಟರು. ಇವರು ಅಲ್ಲಿ ಕೆಲವು ದಿವಸ ಸರ್. ರೋಪರ್ ಲೆತ್ತ್ ಬ್ರಿಜ್ಜ್ ರವರ ಶಿಷ್ಯರಾಗಿದ್ದರು 1868ನೇ ಇಸವಿಯಲ್ಲಿ ಕೇಂಬ್ರಿಜ್‌ಗೆ ಸಂಬಂಧ ಪಟ್ಟ ಟ್ರಿನಿಟಿಹಾಲ್‌ನಲ್ಲಿ ವ್ಯಾಸಂಗವಮಾಡುವದಕ್ಕೆ ಉಪಕ್ರಮಿಸಿದರು. ಅಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಇಂಡ್ಯಾದೇಶಕ್ಕೆ ಬಂದು ಮೈಸೂರು ದೇಶದಲ್ಲಿರುವ ಬೆಂಗಳೂರು ಹೈಸ್ಕೂಲಿನಲ್ಲಿ ಹೆಡ್ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟರು. ಕೆಲವು ದಿವಸಗಳಲ್ಲಿ ಆ ಸ್ಕೂಲಿಗೆ ಪ್ರಿನ್ಸಿಪಲ್‌ರಾಗಿ ನಿಯಮಿಸಲ್ಪಟ್ಟರು. ಅನಂತರ ಮೈಸೂರು ಮಹಾರಾಜರವರ ಕಾಲೀಜಿಗೆ ಪ್ರಿನ್ಸಿಪಲ್‌ರಾದರು. ಇವರ ಕಾಲದಲ್ಲಿ ಈ ಕಾಲೀಜ್ ಅತ್ಯಂತ ಅಭಿವೃದ್ಧಿಗೆ ಬಂತು. ವಿದ್ಯಾರ್ಥಿಗಳಿಗೆ ನ್ಯಾಯಾಮರೂಪವಾದ ಆಟಪಾಟಗಳಿಲ್ಲದಿದ್ದರೆ ಬುದ್ಧಿಯು ಮಂದವಾಗಿ ಜಡತ್ವವು ಅವರಿಸಿಕೊಳ್ಳುವದೆಂದು ಮನಸ್ಸಿಗೆ ಉಲ್ಲಾಸವನ್ನೂ ದೇಹಕ್ಕೆ ಶಕ್ತಿಯನ್ನೂ ಉಂಟುಮಾಡತಕ್ಕ ಕ್ರಿಕೆಟ್ಟೆಂಬ ಚಂಡಿನ ಆಟ ಮೊದಲಾದವುಗಳಿಗೆ ಈ ಪಟ್ಟಣದಲ್ಲ ಅನ್ಯಾದೃಶವಾದ ಪ್ರೋತ್ಸಾಹವನ್ನುಂಟುಮಾಡಿದವರೇ ಇವರು. ಇವರು ಬೆಂಗಳೂರಿನಲ್ಲಿದ್ದಾಗ ವಿದ್ಯಾವ್ಯಾಸಂಗದಲ್ಲಿಯೂ ಆಟಪಾಟಗಳ ವಿಷಯದಲ್ಲಿಯೂ ಆ ಪಟ್ಟಣದಲ್ಲದ್ದ ಸ್ಕೂಲ್‌ಗಳಿಗೆ ಪರಸ್ಪರ ಸ್ಪರ್ಧೆಯುಂಟಾಗುವಂತೆ-ಮೂಡಿ ಆಗಾಗ್ಗೆ ಸ್ಪೋರ್ಟ್‌ಗಳನ್ನು ಮಾಡಿಸುತ್ತಾಬಂದರು. ಅಂದರೆ ಆಟಗಳನ್ನು ಏರ್ಪಡಿಸಿ ಅದರಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಕೊಡುವದರಿಂದ ವ್ಯಾಯಾಮ ಪ್ರೋತ್ಸಾಹವನ್ನುಂಟುಮಾಡತಕ್ಕ ಏರ್ಪಾತನ್ನು ಮಾಡುವದು. ವಿದ್ಯಾರ್ಥಿಗಳು ಒಂದು ಪಾಠಶಾಲೆಯನ್ನು ಬಿಟ್ಟು ಇನ್ನೊಂದು ಪಾಠಶಾಲೆಗೆ ಮನಸ್ಸು ಹೋಗುತ್ತಿದ್ದರು. ಇದರಿಂದ ವಿದ್ಯಾರ್ಥಿಗಳ ಅಭಿವೃದ್ಧಿಗೆ ನ್ಯೂನತೆಯುಂಟಾಗುತಲಿತ್ತು. ಈ ನ್ಯೂನತೆಯನ್ನು ತಪ್ಪಿಸುವದಕ್ಕೋಸ್ಕರ ಒಂದು ಪಾಠಶಾಲೆಯಿಂದ ಇನ್ನೊಂದು ಪಾಠಶಾಲೆಗೆ ಹೋಗುವದಕ್ಕೆ ಲೀವಿಂಗ್ ಸರಟಿಫ್‌ಕೇಟ್ ಮೊದಲಾದ ಏರ್ಪಾಡುಗಳನ್ನು ಆಚರಣೆಗೆ ಬರುವಂತೆ ಮಾಡಿದರು. ಇವರಿಗೆ ಕೆಲವು ದಿವಸಗಳಲ್ಲಿ ಬಂಗಾಳಾಧಿಪತ್ಯದಲ್ಲಿರುವ ಢಕ್ಕಾ ಪಟ್ಟಣದ ಪಾಠಶಾಲಾಧ್ಯಕ್ಷತ್ವವು ದೊರೆಯಿತು. ಆ ಪಾಠಶಾಲೆಯನ್ನು ಅತ್ಯಂತ ವೃದ್ಧಿಗೆ ತಂದು ಇಂಡ್ಯಾ ಗೌರ್ನಮೆಂಟಿನವರ ನೋಟೀಸಿಗೆ ಬಂದರು. 1874ನೇ ಇಸವಿಯಲ್ಲಿ ಬದೋದಾ ದೇಶದ ಇಂಗ್ಲಿಷ್ ವಿದ್ಯಾಭ್ಯಾಸದ ಸೂಪರಿಂಟೆಂಡೆಂಟ್ ಕೆಲಸವೂ ಅಲ್ಲಿನ ಹೈಸ್ಕೂಲಿನ ಪ್ರಿನ್ಸಿಪಲ್ ಕೆಲಸವೂ ನಿಯಾಮಕವಾಯಿತು. ಆಗ ಈ ಪದವಿಗೆ ಮಿ॥ ಪೋಸ್

ರವರಿಗಿಂತಲೂ ಹೆಚ್ಚಾದ ಶಕ್ತಿಯುಳ್ಳವರು ಸಿಕ್ಕುವದಿಲ್ಲವೆಂದು ಇವರನ್ನು ಆ ಕೆಲಸಕ್ಕೆ ನಿಯಮಿಸಿದರು. ಇವರು ಎಡು ಮೂರು ವರುಷಗಳೊಳಗಾಗಿ ಬರ್ಮಾದೇಶದ ವಿದ್ಯಾಭ್ಯಾಸದ ಇಲಾಖೆಯನ್ನು ಅತ್ಯಂತ ಸಮರ್ಪಕವಾದ ಸ್ಥಿತಿಗೆ ತಂದರು. ಇವರ ಮಹನತ್ತನ್ನು ಬಂಗಾಳಾ ಗೌರ್ನಮೆಂಟಿನವರು ಮೆಚ್ಚಿ ಇಂಡ್ಯಾದೇಶದ ರಾಜಧಾನಿಯಾದ ಕಲ್ಕತ್ತಾ ಪ್ರೆಸಿಡೆನ್ಸಿ ಕಾಲೇಜಿಗೆ ಪ್ರೊಫೇಸರಾಗಿ ನಿಯಮಿಸಲ್ಪಟ್ಟರು. 1877ನೇ ಇಸವಿಯಲ್ಲಿ ಥಕ್ಕಾದಲ್ಲಿ ಇದ್ದ ಸ್ಕೂಲ್ ಕಾಲೇಜಾಗಿ ಮಾಡಲ್ಪಟ್ಟತ್ತು. ಆ ಕಾಲಿಜಿಗೆ ಇವರನ್ನೇ ಪ್ರಿನ್ಸಿಪಲ್‌ರನ್ನಾಗಿ ನಿಯಮಿಸಿದರು. ಈ ಕಾಲಿಜಿಗೆ ಸೇರಿದಹಾಗೆ ಒಬ್ಬ ನವಾಬನು ಒಂದು ಮದರಸನ್ನು (ಹಿಂಧೂಸ್ತಾನಿ ಪಾಠಶಾಲೆ) ಸ್ಥಾಪಿಸಿದನು. ಇವುಗಳಿಗೆ ಸೇರಿದಹಾಗೆ ಒಬ್ಬ ಜವಿರ್ದಾರನು ಮೆ॥ ಪ್ರೋಪ್‌ರವರ ಉಪದೇಶದಿಂದ ರಾಜಚಂದ್ರಹೋಸ್ಟಲ್ ಎಂಬ ವಿದ್ಯಾರ್ಥಿಗಳ ವಾಸ ಭೋಜನಗಳಿಗೆ ಅನುಕೂಲವಾದ ಒಂದು ಕಟ್ಟಡವನ್ನು ಕಟ್ಟಿಸಿದನು. ಥಕ್ಕಾದಲ್ಲಿ ಪ್ರಿನ್ಸಿಪಲ್‌ರಾಗಿರತಕ್ಕ ಕಾಲದಲ್ಲಿ ಮೆ॥ ಪ್ರೋಪ್ ರವರು ಹಿಂದ್ವಿ ಉರದು ಮೊದಲಾದ ಭಾಷೆಗಳನ್ನು ವ್ಯಾಸಂಗ ಮಾಡಿ ಆರು ವರುಷಗಳೊಳಗಾಗಿ ಪಾಂಡಿತ್ಯವನ್ನು ಸಂಪಾದಿಸಿದರು. ಆಮೇಲೆ ಬೀಹಾರ್ ಇಲಾಖೆ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್... ನಿಯಮಿಸಲ್ಪಟ್ಟರು. ಈ ಕೆಲಸದಲ್ಲಿ ೫ವರುಷಗಳವರೆಗೂ ಇವರು ಬಹಳ ಮಹನತ್ತನ್ನು ಮಾಡಿದರು. ತರುವಾಯ ಇಂಡಿಯೂ ಗೌರ್ನಮೆಂಟಿನವರು ಬರ್ಮಾದೇಶದ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರನ್ನಾಗಿ ನಿಯಮಿಸಿದರು. ಕೆಲವು ವರುಷಗಳು ಬ್ರಿಟಿಷ್ ಬರ್ಮಾದಲ್ಲಿ ವಿದ್ಯಾಭ್ಯಾಸದ ಇಲಾಖೆಯ ಮೇಲುವಿಚಾರಣೆಯನ್ನು ಮಾಡುತ್ತ ಅತ್ಯಂತ ಪ್ರೋತ್ಸಾಹಕಾರಿಗಳಾಗಿದ್ದರು. ಅಪ್ಪರ್ ಬರ್ಮಾ ರಾಜ್ಯವು ಈ ದೇಶಕ್ಕೆ ಸೇರಿದಮೇಲೆ ಇವರ ಮಹನತ್ತೂ ಜವಾಬ್ದಾರಿಯೂ ಹೆಚ್ಚಾಗಿ ಟೀಕಾಯಿತು. ಲೋವರ್ ಬರ್ಮಾದಲ್ಲಿ ವಿದ್ಯಾಭ್ಯಾಸದ ಮೇಲ್ವಿಚಾರಣೆಗೋಸ್ಕರ ಎಡ್ಯುಕೇಷನಲ್ ಸಿಂಡಿಕೇಟೆಂಬ ಒಂದು ಸಭೆಯು ಏರ್ಪಡಿಸಲ್ಪಟ್ಟಿತು. ಅಪ್ಪರ್ ಬರ್ಮಾದ ವಿಚಾರಣೆಯನ್ನು ಮೆ॥ ಪ್ರೋಪ್ ರವರು ವಹಿಸಿ ನಾರ್ಮಲ್ ಸ್ಕೂಲ್‌ಗಳನ್ನು ಸ್ಥಾಪಿಸಿ ದೇಶಭಾಷೆಯಲ್ಲಿ ಉಪಾಧ್ಯಾಯರನ್ನು ತಯಾರ್ಮಾಡಿಕೊಂಡು ಪಾಠಶಾಲೆಗಳನ್ನು ನಿರ್ಮಿಸಿ ಪಾಠಗಳಿಗೆ ಯೋಗ್ಯವಾದ ಪುಸ್ತಕಗಳನ್ನು ಬರಸಿ ಅಲ್ಲಿನ ಪ್ರಜೆಗಳಿಗೆ ವಿದ್ಯಾಭ್ಯಾಸವನ್ನು ಮಾಡಿಸುತ್ತಾ ಬಂದರು. ಈಗ ಇವರು ಮಾಡಿರತಕ್ಕ ಮಹನತ್ತು ಬರ್ಮಾದೇಶದಲ್ಲಿ ಅನೇಕ ಪಾಠಶಾಲಗಳು ರೂಪ

ನಾಗಿ ಮೂರ್ತೀಭವಿಸಿದೆ. ಆ ದೇಶಭಾಷೆಯಲ್ಲಿ ಪರೀಕ್ಷೆ ಮೊದಲಾದವುಗಳೆಲ್ಲಾ ಏರ್ಪಡಿಸಲ್ಪಟ್ಟಿವೆ. ಅನೇಕರು ಪರೀಕ್ಷೆಗಳನ್ನು ಕೊಟ್ಟು ಪಾಠಕರಾಗಿಯೂ ಸರ್ಕಾರದ ನೌಕರರಾಗಿಯೂ ನಿಯುಮಿಸಲ್ಪಟ್ಟಿದಾರೆ. ಇವರು ಬರ್ಮಾ ದೇಶಕ್ಕೆ ಹೋಗುವದಕ್ಕೆ ಮೊದಲು ಅಲ್ಲಿನ ಜನರು ನಿರಕ್ಷರಕುಕ್ಷಿಗಳಾಗಿಯೂ ಅನೇಕ ದುರಭಿಮಾನ ಪ್ರತಿನಿವಿಷ್ಟರಾಗಿಯೂ ಲೋಕವ್ಯವಹಾರ ವಿಚಕ್ಷಣೆ ಇಲ್ಲದವರಾಗಿಯೂ ಇದ್ದರು. ಈಗ ಅನೇಕ ಲಕ್ಷಜನರು ಇವರ ವಿದ್ಯಾಭ್ಯಾಸದ ಏರ್ಪಾಡಿನಿಂದ ವಿದ್ಯಾವಂತರಾಗಿಯೂ ವಿಚಾರಪರರಾಗಿಯೂ ಆಗುತ್ತಲಿದಾರೆ. ಬರ್ಮಾದೇಶಕ್ಕೆ ಒಂದು ಯೂನಿವರ್ಸಿಟಿಯನ್ನು ಮಾಡಿಸಬೇಕೆಂದು ಇವರು ಪ್ರಯತ್ನಮಾಡಿದರು. ಆದರೆ ಇಂಡಿಯಾ ಗೌರ್ನಮೆಂಟಿನವರು ಇನ್ನೂ ಕೆಲವು ದಿವಸಗಳು ನಿರೀಕ್ಷಿಸಿ ಅನಂತರ ಈ ಕೆಲಸವನ್ನು ಮಾಡಬಹುದೆಂದು ತಾತ್ಪರ್ಯಪಟ್ಟು ಇದಾರೆ. ಬರ್ಮಾದೇಶದ ಭಾಷೆಯಾದ ಪಾಳೀ ಭಾಷೆಯು ಪೂರ್ವಕಾಲದಲ್ಲಿ ಅತ್ಯಂತವಾಗಿ ಸಂಸ್ಕರಿಸಲ್ಪಟ್ಟ ಭಾಷೆಯಾಗಿತ್ತು. ಈ ಭಾಷೆಯಲ್ಲಿ ಬೌದ್ಧಮತಕ್ಕೆ ಸಂಬಂಧಪಟ್ಟ ವೇದಾಂತ ಗ್ರಂಥಗಳು ಅನೇಕವಾಗಿರುತ್ತವೆ. ಇತರ ಎಲ್ಲಾ ವಿಷಯಗಳಲ್ಲೂ ಕೂಡ ಈ ಭಾಷಾಗ್ರಂಥಗಳು ಸಂಸ್ಕೃತದಲ್ಲಿರತಕ್ಕ ಗ್ರಂಥಗಳಿಗೆ ಸಮವಾದವುಗಳೆಂದು ಹೆಸರುವಾಸಿಯನ್ನು ಪಡೆದು ಇವೆ. ಆದರೆ ಈ ಗ್ರಂಥಗಳೆಲ್ಲಾ ಅವಲೋಕನಮಾಡತಕ್ಕವರಿಲ್ಲದೆ ಶೈಥಿಲ್ಯವನ್ನು ಹೊಂದುತ್ತಲಿವೆ. ಆವುಗಳನ್ನೆಲ್ಲಾ ಜೀರ್ಣೋದ್ಧಾರ ಮಾಡಬೇಕೆಂದು ಇಂಡಿಯಾ ಗೌರ್ನಮೆಂಟಿಗೆ ಬರೆದು ಅಲ್ಲಿಂದ ಸ್ಯಾಂಗ್ಷನ್ ಪಡೆದು ಈ ಭಾಷೆಯಲ್ಲಿ ಪರೀಕ್ಷೆ ಕೊಟ್ಟವರಿಗೆ ಬಹುಮಾನಾದಿಗಳನ್ನು ಏರ್ಪಡಿಸಿದರು. 1895ನೇ ಇಸವಿಯಲ್ಲಿ ಈ ವಿಧವಾದ ಮೊದಲನೇ ಪರೀಕ್ಷೆಯು ನಡೆಯಿತು. ಅನೇಕ ಸನ್ಯಾಸಿಗಳು ಗೃಹಸ್ಥರು ಈ ಪರೀಕ್ಷೆಗೆ ಬಂದಿದ್ದರು. ಇದಲ್ಲದೆ 25 ಜನ ಸ್ತ್ರೀಯರು ಈ ಪರೀಕ್ಷೆಗೆ ಬಂದಿದ್ದರು. ಇನ್ನು ಕೆಲವು ದಿವಸಗಳೊಳಗಾಗಿ ಈ ಪಾಳೀ ಭಾಷೆಗೆ ಉಂಟಾಗಿದ್ದ ನ್ಯೂನತೆಯು ಸಂಪೂರ್ಣವಾಗಿ ಹೋಗುವದಲ್ಲದೆ ಗೆಜ್ಜಲು ಪಾಲಾಗುತ್ತಿದ್ದ ಉತ್ತಮ ಗ್ರಂಥಗಳೆಲ್ಲಾ ಮುದ್ರಿಸಲ್ಪಟ್ಟು ಪ್ರಚಾರವಾಗುವದರಲ್ಲಿ ಯಾವ ಸಂದೇಹವೂ ತೋರುವದಿಲ್ಲ ಮಿ॥ ಫೋಪ್ ರವರು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವನ್ನುಂಟುಮಾಡಿದ್ದಲ್ಲದೆ ಕಸಬುಗಳನ್ನೂ ಕೂಡ ಅಭಿವೃದ್ಧಿಗೆ ತರಬೇಕೆಂದು ಒಂದು ಇಂಜನೀರಿಂಗ್ ಪಾಠಶಾಲೆಯನ್ನು ಸ್ಥಾಪಿಸಿದರು. ಈಚಿಗೆ ಒಂದು ವೈದ್ಯ ವಿದ್ಯಾಭ್ಯಾಸದ ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸುತ

ಲಿದಾರೆ. ಇವರು ಪಾಠಕರ ಸಭೆಯನ್ನು ಏರ್ಪಡಿಸಿ ಅವರು ಆಗಾಗ್ಗೆ ಸೇರಿ ವಿದ್ಯಾಭ್ಯಾಸದ ಏರ್ಪಾಡುಗಳ ನ್ಯೂನತೆಯನ್ನು ಚರ್ಚಿಸಿ ಅವುಗಳ ಪರಿಹಾರೋಪಾಯುಗಳನ್ನು ಮೊಡುವಂತೆ ಏರ್ಪಾಡು ಮಾಡಿದಾರೆ ಕಳೆದ 10 ವರುಷಗಳಿಂದ ಬರ್ಮಾದೇಶದಲ್ಲಿ ವಿದ್ಯಾಭ್ಯಾಸದ ಇಲಾಖೆಯು ಅಭಿವೃದ್ಧಿಗೆ ಬಂದಷ್ಟು ಇನ್ನಾವ ಇಲಾಖೆಯೂ ಅಭಿವೃದ್ಧಿಗೆ ಬಂದಿಲ್ಲ ಈ ಅಭಿವೃದ್ಧಿಯು ಸಂಪೂರ್ಣವಾಗಿ ಮಿ॥ ವ್ಯಾಕ್‌ಸಾಮಿರಕ್ ಪೋಪ್ ರವರ ಮೆಹನತ್ತಿಗೂ ಸಾಹಸಕ್ಕೂ ಶಕ್ತಿಗೂ ವೈದುಷ್ಯಕ್ಕೂ ಆರೋಪಣೀಯವಾಗಿರುತ್ತದೆ. ಬರಶ್ಮ ದೇಶಕ್ಕೆ ಇವರು ಡೈರೆಕ್ಟರಾಗಿ ದಯಮಾಡಿಸಿ 10 ವರುಷಗಳಾದವು. ಆಕಾಲ ಒಂದು ಸ್ಕೂಲೂ ಇರಲಿಲ್ಲ. ಈಗ ಬರ್ಮಾದೇಶದಲ್ಲಿ 14371 ಪಾಠಶಾಲೆಗಳಲ್ಲಿ ಪಾಠಪ್ರವಚನಗಳು ನಡೆಯುತ್ತಲಿವೆ. ಒಂದೊಂದು ಪಾಠಶಾಲೆಯಲ್ಲಿ ನೂರಾರುಮಂದಿ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಲಿದಾರೆ. ಅನೇಕ ಪಾಠಕರು ಪಾಠ ಹೇಳುವ ವೃತ್ತಿಯಿಂದ ಜೀವಿಸುತ್ತಲೂ ವಿದ್ಯಾಭಿವೃದ್ಧಿಯನ್ನು ಮಾಡುತ್ತಲೂ ಇದಾರೆ. ಲೋಕದಲ್ಲಿ ಮರ ಹುಟ್ಟಿ ಮರ ಬಿದ್ದಂತೆ ಅನೇಕರು ಹುಟ್ಟಿ ಸಾಯುವರು. ಮಿ॥ ಪೋಪ್‌ರವರಂತೆ ತಮ್ಮ ಬುದ್ಧಿಯನ್ನೂ ಶಕ್ತಿಯನ್ನೂ ಸದ್ವಿನಿಯೋಗಮಾಡತಕ್ಕವರ ಜನ್ಮವು ಸಾರ್ಥಕವಾದದ್ದು.

ಬರವಣಿಗೆ.

ಈಗಿನ ಬರಹಗಳಲ್ಲಿ ಜನರು ಬಹಳವಾಗಿ ತಪ್ಪುಗಳನ್ನು ಮಾಡುತ್ತಿರುವರು ಹೀಗೆ ಆಗಲು ಬಾಲವಿದ್ಯಾಭ್ಯಾಸದಲ್ಲಿ ಉಕ್ತಲೇಖನ ಕ್ರಮವು ನೆಟ್ಟಗಿಲ್ಲದೆ ಹೋದುದೇ ಮುಖ್ಯಕಾರಣವಾಗಿ ತೋರುವುದು. ಸ್ಕೂಲುಗಳಲ್ಲಿ ವಿದ್ಯಾರ್ಥಿಗಳು ಬರೆಯುವಾಗ ಇವುಗಳನ್ನು ತಿದ್ದಿದಲ್ಲಿ ಅವರು ದೊಡ್ಡವರಾದಮೇಲೆಯೂ ತಪ್ಪಿಲ್ಲದೆ ಬರೆಯಬಹುದು. ಇವು ಸಾಮಾನ್ಯವಾಗಿ ದೋಷದವುಗಳಲ್ಲವೆಂದು ಬಹುಮಂದಿ ಅಲಕ್ಷ್ಯಮಾಡುತ್ತಾರೆ. ಮಕ್ಕಳ ತರಗತಿಯಿಂದಲೂ ಇಂಥಾ ತಪ್ಪುಗಳು ಬೀಳದಂತೆ

ಬರೆಯುವ ವಿಷಯದಲ್ಲಿ ಬೋಧಕರು ತಿದ್ದಬಹುದಾದ ಕೆಲವು ಸೂಚನೆಗಳು ಇದರಡಿ ಕೊಡಲ್ಪಟ್ಟಿವೆ. ಇದರ ಪ್ರಯೋಜನವು ಅನುಭವದಿಂದ ತಿಳಿಯುವುದು.

ಸೂಚನೆ.	ಈಗಿನ ಬರಹದ ಪದ್ಧತಿ.	ಶುದ್ಧವಾದ ಕ್ರಮ.
1 ಪದಮಧ್ಯದಲ್ಲಿ ಯಾಗಲಿ, ಪದಾಂತದಲ್ಲಿಯಾಗಲಿ ಬರುವ ಇ, ಉ, ಎ, ಒ ಇವುಗಳನ್ನು ಸ್ವರರೂಪದಲ್ಲಿ ಬರೆಯುವರು. ಹೀಗೆ ಬರೆಯುಬಾರದು.	ನಾಇ ಬೇಉ	ನಾಯಿ ಬೇವುಇತ್ಯಾದಿ
2 ಪದದ ಆದಿಯಲ್ಲಿ ಬರುವ ಇ, ಉ, ಎ, ಒ ವರ್ಣಗಳನ್ನು ವ್ಯಂಜನರೂಪದಲ್ಲಿ ಬರೆಯುವರು. ಇದು ತಪ್ಪು.	ಯಿವನು ವೂಟ ಯೇರಿ ವೋಣಿ	ಇವನು ಊಟ ಏರಿ ಓಣಿ ಇತ್ಯಾದಿ
3 ಕೆಲವರು ಸ್ವರಾಕ್ಷರಗಳಿಗೆ ಕಾಗುಣಿತರೂಪವನ್ನು ಕೊಟ್ಟು ಬರೆಯುವರು. ಇವು ಸರಿಯಾದುವಲ್ಲ ಅ, ಆ, ಈ, ಊ, ಋ, ಐ, ಔ.	ಅೃದು ಅೌವ	ಐದು ಔವ ಇತ್ಯಾದಿ
4 ವ್ಯಂಜನಗಳಿಗೆ ಅನೇಕ ಸ್ವರಗಳನ್ನು ಸೇರಿಸಿ ಕಾಗುಣಿತರೂಪ ಮಾಡುವರು, ಮ್ಯೂ (ಮ್+ಉ+ಋ)	ಗ್ಯೃಹ ಮ್ಯೃತ	ಗೃಹ ಮೃತಇತ್ಯಾದಿ
5 ಲ–ಳ, ನ–ಣ, ಅ–ಹ, ಇ–ಹಿ, ಉ–ಹು. ಶ–ಷ–ಸ ಇವುಗಳ ಉಚ್ಚಾರಭೇದವನರಿಯದೆ ಒಂದಕ್ಕೆ ಪ್ರತಿಯಾಗಿ ಮತ್ತೊಂದನ್ನು ಬರೆಯಬಾರದು.	ಹಿದು ಮಇ ಶರ	ಇದು ಮಹಿ ಸರ ಇತ್ಯಾದಿ
6 ಅಲ್ಪಪ್ರಾಣಾಕ್ಷರಗಳಿಗೆ ಮಹಾಪ್ರಾಣವನ್ನೂ ಮಹಾಪ್ರಾಣಕ್ಕೆ ಅಲ್ಪಪ್ರಾಣವನ್ನೂ ಬರೆಯಬಾರದು.	ಥನ ಮಟ	ದನ ಮಠ ಇತ್ಯಾದಿ
7 ದ್ವಿತ್ವವಾಗಿರುವ ಣ, ನ, ಮ, ಇವುಗಳಿಗೆ ಹಿಂದೆ ಅನುಸ್ವಾರವನ್ನುಪಯೋಗಿಸುವದು ಅನಾವಶ್ಯಕ.	ಅಂಣ್ಣ ಸಂನ್ನಿ ತಂಮ್ಮ	ಅಣ್ಣ ಸನ್ನಿ ತಮ್ಮ ಇತ್ಯಾದಿ
8 ಅನುಸ್ವಾರದಮುಂದೆ ಇರುವ ವ್ಯಂಜನಕ್ಕೆ ದ್ವಿತ್ವವನ್ನು ಕೊಡುವರು. ಕೆಲವುಮೇಳೆ ಅನುಸ್ವಾರವನ್ನು ಲೋಪಿಸುವರು ಇವೆರಡೂ ತಕ್ಕುವಲ್ಲ.	ಬಂದ್ದು ಮಚ್ಚ	ಬಂದು ಮಂಚ ಮುಂತಾದ್ದು
9 ಶಬ್ದದ ಆದಿಯಲ್ಲಿ ಸಜಾತೀಯ ದ್ವಿತ್ವವಿರುವುದಿಲ್ಲ. ಬರಹದಲ್ಲಿ ಹೆಚ್ಚಾಗಿ ಉಪಯೋಗಿಸುವರು. ಇದು ತಿದ್ದಲ್ಪಡತಕ್ಕದ್ದು.	ತ್ತಂದೆ ನ್ನಮ್ಮ	ತಂದೆ ನಮ್ಮ ಮುಂತಾದ್ದು

10 ಸ್ವರಸಹಿತವಾದ ವ್ಯಂಜನಗಳೆರಡರ ಮಧ್ಯ
ರವನ್ನು ಲೋಪಿಸಿ ದ್ವಿತ್ವವೂಡಿ ಬರೆಯುವ ರೂಢಿ
ಚ್ಚು. ಇದು ಸರಿಯಲ್ಲ.

11 ಒ, ಹೊ, ಇವುಗಳಿಗೆ ಬದಲಾಗಿ ವಕಾರವ
ನ್ನೂ, ಎ, ಹೆ ಇವುಗಳಿಗೆ ಪ್ರತಿಯಾಗಿ ಯ ಕಾರವನ್ನೂ
ಉಪಯೋಗಿಸುವ ಪದ್ಧತಿ ಚೆನ್ನಾಗಿಲ್ಲ.

12 ಸಂಯುಕ್ತಾಕ್ಷರಗಳಲ್ಲಿ ಕೆಳಗೆ ಬರೆಯುವ ವ್ಯಂ
ಜನಕ್ಕೆ ಕಾಗುಣಿತ ರೂಪವನ್ನು ಕೊಡುತ್ತಿರುವರು. ಇದ
ನ್ನು ತಿದ್ದಬೇಕಾಗಿದೆ.

13 ಸಾಮಾನ್ಯವಾಗಿ ಕಾಗುಣಿತ ರೂಪಗಳಲ್ಲಿ ದೀ
ರ್ಘಗಳನ್ನು ಲೋಪಿಸುವರು. ಅರ್ಥಭೇದ ತೋರುವ
ದಿಂದ ಹೀಗೆ ಬರೆಯಬಾರದು.

14 ಅರ್ಧರೇಫವನ್ನು ವ್ಯಂಜನದ ಮುಂದುಗಡೆ
ಯಲ್ಲಿ ಕೊಡದೆ ಹಿಂದೆ ಬರೆಯುತ್ತಾರೆ. ಇದು ಅನುಚಿತ.

15 ದ್ವಿತ್ವಗಳಲ್ಲಿ ಳ ಕಾರಕ್ಕೆ ಲ ಕಾರವನ್ನೂ, ಣ
ಕಾರಕ್ಕೆ ನ ಕಾರವನ್ನೂ ಉಪಯೋಗಿಸುವರು. ಇದು
ಸರಿಯಲ್ಲ.

ಅಗ್ಸ	ಅಗಸ
ಮೆಣ್ಸು	ಮೆಣಸು
	ಇತ್ಯಾದಿ
ವಕ್ಕಲು	ಒಕ್ಕಲು
ವಸದು	ಹೊಸದು
ಯಮ್ಮೆ	ಎಮ್ಮೆ
ಯಣ	ಹೆಣ ಇತ್ಯಾದಿ
ಇಷ್ಟು	ಇಷ್ಟೂ
ಉಪ್ಪು	ಉಪ್ಪೂ
	ಇತ್ಯಾದಿ
ದೊಣಿ	ತೋಣಿ
ಬಿಟೆ	ಬೀಟೆ
ಮುರು	ಮೂರು
	ಇತ್ಯಾದಿ
ರ್ಗ..	ವರ್ಗ
ರ್ಣ	ವರ್ಣ ಇತ್ಯಾದಿ
ಕಳ್ಳ	ಕಳ್ಳ
ಬಣ್ಣ	ಬಣ್ಣ
	ಇತ್ಯಾದಿ

ವಿದ್ಯಾರ್ಥಿಗಳ ಮತ್ತು ಇತರರ ಬರಹಗಳಲ್ಲಿ ತೋರುವ ಸಾಮಾನ್ಯವಾದ ದೋಷಗಳನ್ನು ನೋಡಿ ಈ ಸೂಚನೆಗಳನ್ನು ಬರೆದಿದ್ದೇನೆ. ಇನ್ನೂ ಹೆಚ್ಚಾದ ಕೊರತೆಗಳಿರಬಹುದು. ಅವುಗಳನ್ನು ಪ್ರಕಟಿಸಿ, ತಪ್ಪುಗಳನ್ನು ತಿದ್ದಲು ಅನುಕೂಲ ಪಡಿಸುವುದು ಹಾಸ್ಯಾಸ್ಪದವಲ್ಲವಷ್ಟೆ?

ಕೆ. ರಾಮಸ್ವಾಮಿಯ್ಯಂಗಾರ್.

ಆರ್ಯವೈದ್ಯಶಾಸ್ತ್ರ

ಆರ್ಯ ವೈದ್ಯಶಾಸ್ತ್ರದ ವಿಷಯವಾಗಿ ಗಾಂಧಾರ್ ದೇಶದ ಠಾಕೂರ್ ಸಾಹೇಬ
ಸರ್, ಭಗವತ್‌ಸಿಂಗ್‌ಜಿಯವರು ಬರೆದ ಉಪನ್ಯಾಸವು ತುಂಬಾ ಪ್ರಸಿದ್ಧಗಳಂ